ಮರಾಟಿ ಸಮುದಾಯಗಳ ತೌಲನಿಕ ಅಧ್ಯಯನ

ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್ ಡಿ(ಸಮಾಜಶಾಸ್ತ್ರ) ಪದವಿಗಾಗಿ ಸಲ್ಲಿಸಿದ ಮಹಾಪ್ರಬಂಧ



ಸಂಶೋಧನ ವಿದ್ಯಾರ್ಥಿ
ರಾಮಚಂದ್ರ

ಮಾರ್ಗದರ್ಶಕರು
ಪ್ರೊ ಗಂಗಾಧರ ದೈವಜ್ಞ
ಪ್ರಾಧ್ಯಾಪಕರು

ಸಹ ಮಾರ್ಗದರ್ಶಕರು
ಡಾ. ಪೂರ್ವಾಚಾರ್ ಎಂ
ಸಹ ಪ್ರಾಧ್ಯಾಪಕರು

ಬುಡಕಟ್ಟು ಅಧ್ಯಯನ ವಿಭಾಗ
ಸಮಾಜ ವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ, [illegible]

ಮರಾಟಿ ಸಮುದಾಯಗಳ ತೌಲನಿಕ ಅಧ್ಯಯನ

ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್ ಡಿ(ಸಮಾಜಶಾಸ್ತ್ರ) ಪದವಿಗಾಗಿ ಸಲ್ಲಿಸಿದ
ಮಹಾಪ್ರಬಂಧ

ಸಂಶೋಧನ ವಿದ್ಯಾರ್ಥಿ

ರಾಮಚಂದ್ರ

ಮಾರ್ಗದರ್ಶಕರು

ಪ್ರೊ ಗಂಗಾಧರ ದೈವಜ್ಞ

ಪ್ರಾಧ್ಯಾಪಕರು

ಸಹ ಮಾರ್ಗದರ್ಶಕರು

ಡಾ. ಪೂರ್ವಾಚಾರ್ ಎಂ

ಸಹ ಪ್ರಾಧ್ಯಾಪಕರು

ಬುಡಕಟ್ಟು ಅಧ್ಯಯನ ವಿಭಾಗ

ಸಮಾಜ ವಿಜ್ಞಾನಗಳ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ – ೫೮೩ ೨೭೬

೨೦೨೧

ಸಂಶೋಧಕರ ಪ್ರಮಾಣ ಪತ್ರ

"ಮರಾಟ ಸಮುದಾಯಗಳ ತೌಲನಿಕ ಅಧ್ಯಯನ" ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು **ಪ್ರೊ ಗಂಗಾಧರ ದೈವಜ್ಞ** ಅವರ ಮಾರ್ಗದರ್ಶನದಲ್ಲಿ ಹಾಗೂ **ಡಾ ಪೂರ್ವಾಚಾರ್** ಎಂ ಅವರ ಸಹ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ ಪಿಎಚ್ ಡಿ(ಸಮಾಜಶಾಸ್ತ್ರ) ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯದ ಸಮಾಜ ವಿಜ್ಞಾನಗಳ ನಿಕಾಯದ ಬುಡಕಟ್ಟು ಅಧ್ಯಯನ ವಿಭಾಗಕ್ಕೆ ಸಲ್ಲಿಸಲಾಗಿದೆ. ಪ್ರಸ್ತುತ ಮಹಾಪ್ರಬಂಧವು ಮೂಲವಾಗಿದ್ದು, ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಈ ಮೂಲಕ ಪ್ರಮಾಣೀಕರಿಸಲಾಗಿದೆ.

ದಿನಾಂಕ:

ಸ್ಥಳ : ವಿದ್ಯಾರಣ್ಯ

ರಾಮಚಂದ್ರ
ಸಂಶೋಧನ ವಿದ್ಯಾರ್ಥಿ
ಬುಡಕಟ್ಟು ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ – ೫೮೩ ೨೭೬

ಸಹ ಮಾರ್ಗದರ್ಶಕರ ದೃಢೀಕರಣ ಪತ್ರ

ರಾಮಚಂದ್ರ ಇವರು **"ಮರಾಟ ಸಮುದಾಯಗಳ ತೌಲನಿಕ ಅಧ್ಯಯನ"** ಎಂಬ ಶೀರ್ಷಿಕೆ ಮಹಾಪ್ರಬಂಧವನ್ನು ನನ್ನ ಸಹ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ ಪಿ ಎಚ್ ಡಿ.(ಸಮಾಜಶಾಸ್ತ್ರ) ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯದ ಸಮಾಜ ವಿಜ್ಞಾನಗಳ ನಿಕಾಯದ ಬುಡಕಟ್ಟು ಅಧ್ಯಯನ ವಿಭಾಗಕ್ಕೆ ಸಲ್ಲಿಸಿದ್ದಾರೆ. ಪ್ರಸ್ತುತ ಮಹಾಪ್ರಬಂಧವನ್ನು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ದಿನಾಂಕ: 28·12·2020
ಸ್ಥಳ : ವಿದ್ಯಾರಣ್ಯ

ಡಾ. ಪೂರ್ವಾಚಾರ್ ಎಂ
ಸಹ ಪ್ರಾಧ್ಯಾಪಕರು/ಮುಖ್ಯಸ್ಥರು
ಸಮಾಜಶಾಸ್ತ್ರ ಅಧ್ಯಯನ ವಿಭಾಗ
ಸಹ್ಯಾದ್ರಿ ಕಲಾ ಕಾಲೇಜು,
ಕುವೆಂಪು ವಿಶ್ವವಿದ್ಯಾಲಯ, ಶಿವಮೊಗ್ಗ

Dr. M. PURVACHAR
M.A., Ph.D., PGDE, PGDPSW, PGDHRM, M.A.(Eng), MSW, MBA (HR)
Head and Research Guide
Dept. of Sociology
Sahyadri Arts College, Kuvempu University,
Shimoga, Karnataka State - 577 203.

ಮಾರ್ಗದರ್ಶಕರ ದೃಢೀಕರಣ ಪತ್ರ

ರಾಮಚಂದ್ರ ಇವರು **"ಮರಾಟ ಸಮುದಾಯಗಳ ತೌಲನಿಕ ಅಧ್ಯಯನ"** ಎಂಬ ಶೀರ್ಷಿಕೆ ಮಹಾಪ್ರಬಂಧವನ್ನು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ ಪಿಎಚ್ ಡಿ(ಸಮಾಜಶಾಸ್ತ್ರ) ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯದ ಸಮಾಜ ವಿಜ್ಞಾನಗಳ ನಿಕಾಯದ ಬುಡಕಟ್ಟು ಅಧ್ಯಯನ ವಿಭಾಗಕ್ಕೆ ಸಲ್ಲಿಸಿದ್ದಾರೆ. ಪ್ರಸ್ತುತ ಮಹಾಪ್ರಬಂಧವನ್ನು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ದಿನಾಂಕ:

ಸ್ಥಳ : ವಿದ್ಯಾರಣ್ಯ

ಪ್ರೊ ಗಂಗಾಧರ ದೈವಜ್ಞ
ಪ್ರಾಧ್ಯಾಪಕರು
ಬುಡಕಟ್ಟು ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ - ೫೮೩ ೨೭೬

Kannada University, Hampi
Akshara Central Library
Anti-Plagiarism Cell
Certificate of Plagiarism Check Report

Marati Samudayagala Thoulanika Adhayana

(Comparative Studies of Marati Communities)

By

Ramachandra

Reg.No. 160112020207 25.11.2016

Research Guide	Research Co-Guide
Prof. Gangadhar Daivadnya	**Dr. Purvachar M**
Department of Tribal Studies	Head and Research Guide
Kannada University, Hampi	Dept of Sociology
	Sahyadri Arts College, Kuvempu Universtiy, Shimoga

Urkund Analysis Result

Analyzed document : **ಅಧ್ಯಾಯ–123.docx (D91193878)**

Submitted : **1/7/2021 7:15:00 AM**

Submitted by : **Shankaragouda S G**

Submitter email : **shankargoudas.mailbox@gmail.com**

Similarity : **3%**

Analysis address : **shankargoudas.mailbox.kanuni@analysis.urkund.com**

Seal and authorized sign

ಪರಿವಿಡಿ

೧. ಕೋಷ್ಟಕಗಳು

ಅಧ್ಯಾಯ: ಒಂದು.....

ಪ್ರವೇಶ

೧.೧. ಪ್ರಸ್ತಾವನೆ
೧.೨. ಅಧ್ಯಯನದ ಉದ್ದೇಶಗಳು
೧.೩. ಅಧ್ಯಯನದ ವ್ಯಾಪ್ತಿ
೧.೪. ಅಧ್ಯಯನದ ಮಹತ್ವ
೧.೫. ಅಧ್ಯಯನದ ವಿಧಾನಗಳು
೧.೬. ಅಧ್ಯಯನದ ಸ್ವರೂಪ
೧.೭. ಇಲ್ಲಿಯವರೆಗೆ ನಡೆದ ಅಧ್ಯಯನಗಳ ಸಮೀಕ್ಷೆ

ಅಧ್ಯಾಯ : ಒಂದು
ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ಮಹತ್ವ

೧.೧. ಪ್ರಸ್ತಾವನೆ

ಭಾರತವು ಅನೇಕ ಬುಡಕಟ್ಟು ಸಮುದಾಯಗಳನ್ನು ಹೊಂದಿದೆ. ೨೦೦೧ರ ಜನಗಣತಿಯ ಪ್ರಕಾರ ಭಾರತದಲ್ಲಿ ಒಟ್ಟು ಜನಸಂಖ್ಯೆಯ ಶೇಕಡಾ ೮.೨ ರಷ್ಟು ಬುಡಕಟ್ಟು ಸಮುದಾಯಕ್ಕೆ ಸೇರಿದವರು. ಕರ್ನಾಟಕದ ಜನಸಂಖ್ಯೆಯಯಲ್ಲಿ ಶೇಕಡಾ ೫.೧೭ರಷ್ಟು ಬುಡಕಟ್ಟು ಸಂಖ್ಯೆ ಹೊಂದಿದೆ. ರಾಜ್ಯದಲ್ಲಿ ಅಧಿಕೃತವಾಗಿ ಐವತ್ತು ಬುಡಕಟ್ಟು ಸಮುದಾಯಗಳಿವೆ. ಈ ವರದಿಯು ಬಹುಶಃ ಬ್ರಿಟಿಷರ ಕಾಲದಿಂದ ಹರಿದು ಬಂದ ಮಾಹಿತಿಗಳ ಆಧಾರದಲ್ಲಿಯೇ ಐವತ್ತು ಬುಡಕಟ್ಟು ಸಮುದಾಯಗಳ ಪಟ್ಟಿಯನ್ನು ಸಿದ್ಧಪಡಿಸಲಾಗಿದೆ ಎಂಬುದಾಗಿ ತಜ್ಞರ ಅಭಿಪ್ರಾಯವಾಗಿದೆ.

ಸ್ವತಂತ್ರ ಭಾರತದ ನಂತರದಲ್ಲಿ ನಮ್ಮ ನೆಲದ ಸಾಮಾಜಿಕ, ಆರ್ಥಿಕ ಸ್ಥಿತಿಗತಿಗಳ ಮಾನದಂಡಗಳ ಆಧಾರದಲ್ಲಿ ಪರಿಪೂರ್ಣವಾದ, ವೈಜ್ಞಾನಿಕವಾದ ಹಾಗೂ ಸಮಗ್ರವಾದ ಸಮೀಕ್ಷೆ ನಡೆದಿಲ್ಲ. ಈ ಕೊರತೆಯಿಂದಾಗಿ ಅರ್ಹತೆ ಹೊಂದಿದ ಹಲವಾರು ಬುಡಕಟ್ಟುಗಳು ಸರ್ಕಾರ ಪಟ್ಟಿಯಲ್ಲಿ ಇಲ್ಲಿಯವರೆಗೆ ಸೇರಿಲ್ಲ. ಸರಕಾರ ಪ್ರಕಟಿಸಿರುವ ಬುಡಕಟ್ಟು ಸಮುದಾಯಗಳ ಹೆಸರುಗಳು ಪುನರಾರ್ವನೆಗೊಂಡಿರುವುದು ಕೂಡ ಕಂಡುಬರುತ್ತದೆ,

ಕರ್ನಾಟಕದ ಪಶ್ಚಿಮ ಘಟ್ಟದ ಅರಣ್ಯಗಳು ಹಾಗೂ ಕರಾವಳಿಯ ವೈವಿಧ್ಯಮಯ ಭೂಪ್ರದೇಶದ ಜಿಲ್ಲೆಗಳಲ್ಲಿ ಕಂಡು ಬರುವ ಅನೇಕ ಬುಡಕಟ್ಟುಗಳು ತಮ್ಮದೇ ಆದ ಜೀವನ ಪದ್ಧತಿಯಲ್ಲಿ ಬದುಕು ಸಾಗಿಸುತ್ತಿದ್ದಾರೆ. ಬುಡಕಟ್ಟು ಸಮುದಾಯಗಳಲ್ಲಿಯೇ ಅನಾದಿಕಾಲದಿಂದ ಗುಡ್ಡಕಾಡು, ಪರ್ವತಗಳಲ್ಲಿ ವಾಸವಿದ್ದ ಮೂಲನಿವಾಸಿಗಳಾದ ಕೊರಗ ಹಾಗೂ ಜೇನುಕುರುಬ (Primitive Tribes)ರಿದ್ದಾರೆ. ಹಲವಾರು ಕಾರಣಗಳಿಂದ ಬೇರೆ ಬೇರೆ ಪ್ರದೇಶಗಳಿಂದ, ಇತಿಹಾಸದ ಬೇರೆ ಬೇರೆ ಕಾಲಘಟ್ಟದಲ್ಲಿ ಹಂತಹಂತವಾಗಿ ವಲಸೆ ಬಂದು ನೆಲೆನಿಂತ ಸಮುದಾಯಗಳು ಇಲ್ಲಿವೆ. ತಮ್ಮ ಬದುಕು ನಿರ್ವಹಣೆಗಾಗಿ ಆಹಾರ ಸಂಗ್ರಹಣೆ, ಪಶುಪಾಲನೆ, ಬೇಟೆ, ಹೈನುಗಾರಿಕೆ, ಕೂಲಿ, ಕರಕುಶಲತೆ, ಬೇಸಾಯ ಮುಖ್ಯವಾಗಿ ಕುಮೇರಿ(ಕುಂಬ್ರಿ) ಕೃಷಿ ಇತ್ಯಾದಿ ಮಾರ್ಗಗಳನ್ನು ಆಯ್ಕೆ ಮಾಡಿರುವುದು ಕಂಡು ಬರುತ್ತದೆ. ಇಂತಹ ಶ್ರಮ ಸಂಸ್ಕೃತಿಯನ್ನು ಅನುಸರಿಸಿಕೊಂಡು ಬಂದಿರುವ ಬುಡಕಟ್ಟು ಸಮುದಾಯಗಳ "ಮರಾಟಿ" ಸಮುದಾಯಗಳು ಒಂದು.

ಶ್ರೇಣಿಕೃತ ಸಾಮಾಜಿಕ ರಚನೆಯುಳ್ಳ ಹಾಗೂ ವರ್ಣವ್ಯವಸ್ಥೆಗೆ ಒಳಪಟ್ಟ ನಾಗರಿಕರೂ, ಸುಶಿಕ್ಷಿತರೂ ಎಂದು ಕರೆಯಲ್ಪಡುವ ಅನೇಕ ನಗರ ಪ್ರದೇಶದಲ್ಲಿ ತಮ್ಮ ವೃತ್ತಿಯೊಂದಿಗೆ ಜೀವನ

ಮುಂದುವರಿಸಿಕೊಂಡಿದ್ದರೆ, ಇನ್ನೊಂದೆಡೆಗೆ ನಾಗರಿಕ ಸೌಲಭ್ಯಗಳಿಂದ ದೂರ ಉಳಿದು ಗುಡ್ಡ ಬೆಟ್ಟಗಳ ಅಂಚುಗಳಲ್ಲಿ ನೆಲೆಸಿರುವ ಮರಾಟಿಗರು ಯಾವಾಗ, ಯಾವ ಕಾರಣದಿಂದ, ಇಲ್ಲಿಗೆ, ಯಾಕೆ ಬಂದರು ಎಂಬುದಕ್ಕೆ ನಿಖರವಾಗಿ ಉತ್ತರ ತಿಳಿದಿಲ್ಲ. ಅವರು ಕರಾವಳಿ ಜಿಲ್ಲೆಗಳಾದ ದಕ್ಷಿಣ ಕನ್ನಡ, ಉಡುಪಿ, ಕಾರವಾರ ಹಾಗೂ ಮಲೆನಾಡು ಪ್ರದೇಶದಲ್ಲಿ ನೆಲೆಸಿದ್ದಕ್ಕೆ ಅವರದ್ದೇಯಾದ ಐತಿಹ್ಯ ವಿವರಣೆಗಳಿವೆ.

ಮಹಾರಾಷ್ಟ್ರದ ಶಿವಾಜಿ ಸೈನಿಕರು, ಕೃಷಿಯ ವಂಶಸ್ಥರು ತಾವೆಂದು ಹೆಮ್ಮೆಪಟ್ಟುಕೊಳ್ಳುತ್ತಾರೆ. ಶಿವಾಜಿಯ ಸೈನ್ಯದ ಮೇಲೆ ಮುಸ್ಲಿಂಮರ ದಾಳಿಯಿಂದ, ಪ್ರಕೃತಿ ವಿಕೋಪಗಳಿಂದ, ಅಸಹಾಯಕರಾಗಿ ಗೋವಾ ಹಾಗೂ ಕರ್ನಾಟಕದ ಕಾಡುಮೇಡುಗಳ ಮೂಲಕ ಬಂದು ನೆಲೆಸಿರುವುದಾಗಿ ತಿಳಿಸುತ್ತಾರೆ. ಕಾಲಾಂತರದಲ್ಲಿ ಆಧುನಿಕತೆ, ಮೇಲ್ವರ್ಗದ ಜನರ ಮುಖ್ಯವಾಗಿ ದ್ವಿಜರ ಸಂಸ್ಕೃತಿಯ ಪ್ರಭಾವ, ಪಾಶ್ಚಿಮಾತ್ಯಕರಣ, ಜಾಗತೀಕರಣ, ಪ್ರಕ್ರಿಯೆಗಳ ಪ್ರಭಾವಕ್ಕೆ ಸಿಲುಕಿ ಸ್ಥಿತ್ಯಂತರಗೊಂಡು ಭಿನ್ನ ಭಿನ್ನ ಸಂಸ್ಕೃತಿಯನ್ನು ಮೈಗೂಡಿಸಿಕೊಂಡಿರುವುದು ಗಮನಕ್ಕೆ ಬರುತ್ತದೆ, ಅಲ್ಲದೆ ವಲಸೆ ಬಂದಿರುವ ಮರಾಟಿ ಬುಡಕಟ್ಟು ಸಮುದಾಯಗಳು ಸ್ಥಳೀಯ ಜೀವನ ಪದ್ಧತಿಗಳ ಪ್ರಭಾವಕ್ಕೆ ಒಳಗಾಗಿರುತ್ತವೆ,

"೨೦೦೧ರ ಜನಗಣತಿ ಪ್ರಕಾರ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪರಿಶಿಷ್ಟ ಪಂಗಡದ ಜನಸಂಖ್ಯೆ ಕೊರಗ, ಮಲೆಕುಡಿಯ ಮತ್ತು ಮರಾಟಿ ಸಮುದಾಯವನ್ನು ಒಳಗೊಂಡಂತೆ ಒಟ್ಟು ೬೯೩೬ ಆಗಿರುತ್ತದೆ. ೨೦೧೧ರ ಜನಸಂಖ್ಯೆಯಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪರಿಶಿಷ್ಟ ಪಂಗಡದ ಜನಸಂಖ್ಯೆ ಪುರುಷರು ೪೦೯೬೧, ಮಹಿಳೆಯರು ೪೧೩೦೭, ಒಟ್ಟು ೮೨೨೬೮ ಆಗಿರುತ್ತದೆ". (ಆಧಾರ: ಜನಗಣತಿ೨೦೦೧ ಮತ್ತು ೨೦೧೧ ಪುಟ ೨೭೬-೨೭೭) ೨೦೧೧ರ ಜನಸಂಖ್ಯೆಯ ಪ್ರಕಾರ ಉಡುಪಿ ಜಿಲ್ಲೆಯಲ್ಲಿ ಪರಿಶಿಷ್ಟ ಪಂಗಡದ ಪುರುಷರು ೨೬೨೨೮ ಮಹಿಳೆಯರು ೨೬೬೬೭ ಒಟ್ಟು ೫೨೮೯೭

ಪ್ರಸ್ತುತ ಮರಾಟಿ ಸಮುದಾಯಗಳ ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ, ಧಾರ್ಮಿಕ ಸ್ಥಿತಿಗತಿಗಳನ್ನು ಅರ್ಥೈಸುವ ಸಲುವಾಗಿ ಹಾಗೂ ಅವುಗಳಲ್ಲಿ ಉಂಟಾಗಿರುವ ಬದಲಾವಣೆಗಳ ತಿಳಿಯುವ ಸಲುವಾಗಿ ಈ ವಿಷಯವನ್ನು ಆಯ್ಕೆಗೊಳಿಸಲಾಗಿದೆ.

ಕೊಡಗು ಜಿಲ್ಲೆಯಲ್ಲಿ ನೆಲೆ ಕಂಡುಕೊಂಡಿರುವ ಮರಾಠಾ ಸಮುದಾಯವನ್ನು ಭಾರತ ಸರ್ಕಾರದ ಪ.ಜಾ ಮತ್ತು ಪ.ಪಂ (ತಿದ್ದುಪಡಿ) ಆದೇಶ ಸಂಖ್ಯೆ ೨೪೪೭೭ ಎ:ನವದೆಹಲಿ ದಿನಾಂಕ ೨೯-೧೦-೧೯೫೬ ರಂದು ಮರಾಠಾ ಸಮುದಾಯದವರನ್ನು ಪರಿಶಿಷ್ಟ ಪಂಗಡದ ಪಟ್ಟಿಯಲ್ಲಿ ಸೇರಿಸಿತು.

ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ವಾಸಿಸುತ್ತಿರುವ ಮರಾಟಿ ಸಮುದಾಯವನ್ನು ಭಾರತ ಸರ್ಕಾರ ೨೯-೧೦-೧೯೫೬ರ ಪ.ಜಾ, ಪ.ಪಂ ಅಧಿಸೂಚನೆಯಲ್ಲಿ ಪರಿಶಿಷ್ಟ ಪಂಗಡಕ್ಕೆ ಸೇರಿಸಿತು. ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ಮರಾಟಿಗಳು ಸರ್ಕಾರದ ಈ ಸೌಲಭ್ಯವನ್ನು ಪಡೆದುಕೊಳ್ಳುತ್ತಿದ್ದಾರೆ.

ಮರಾಟಿ ಮತ್ತು ಮರಾಟಿ ನಾಯ್ಕ ಎರಡೂ ಸಮುದಾಯಗಳು ಮರಾಟಿ ಮೂಲದ ಸಮುದಾಯಗಳು. ಇದರಲ್ಲಿ ಒಂದು ಸಮುದಾಯ ಮರಾಟಿ ನಾಯ್ಕ ಮತ್ತೊಂದು ಮರಾಟಿ ಎಂದು ಗುರುತಿಸಿಕೊಂಡಿದೆ. ಈ ಎರಡೂ ಸಮುದಾಯಗಳಲ್ಲಿಯ ವೀರರು ಮಹಾರಾಷ್ಟ್ರದಲ್ಲಿ

ಶಿವಾಜಿ ಮಹಾರಾಜನ ಕಾಲದಲ್ಲಿ ಸೈನಿಕರಾಗಿ ಸೇವೆ ಸಲ್ಲಿಸುತ್ತಿದ್ದರು ಎಂದು ಹೇಳಿಕೊಳ್ಳುತ್ತಾರೆ. ಆದರೆ ಒಂದು 'ಮರಾಟಿ' ಸಮುದಾಯವೆಂದು ಗುರುತಿಸಿಕೊಂಡರೆ ಇನ್ನೊಂದು 'ಮರಾಟಿ ನಾಯ್ಕ' ಎಂದು ಗುರುತಿಸಿಕೊಂಡಿದೆ. ನಾಯಕ, ನಾಯ್ಕ ಎಂಬ ಅಡ್ಡ ಹೆಸರು ಆಡಳಿತ ವೃತ್ತಿ ಸೂಚಕವಾದ ಹೆಸರಾಗಿರಬಹುದು. ನಾಯಕ, ನಾಯ್ಕ ಈ ಪದಕ್ಕೆ ಮುಖಂಡ, ಮುಂದಾಳು ಎಂಬ ಅರ್ಥಗಳುಂಟು. ನಾಯ್ಕ ಎಂಬುದು ಒಂದು ಗ್ರಾಮದ ಅಥವಾ ಒಂದು ಸಮುದಾಯದ ಮುಖಂಡರಾಗಿ ಆಡಳಿತ ಅಥವಾ ಸಮುದಾಯದ ಜವಾಬ್ದಾರಿ ನಿರ್ವಹಿಸಿರುವ ಸಾಧ್ಯತೆಗಳಿವೆ.

ಮರಾಟಿ ಸಮುದಾಯಗಳ ಭಾಷೆ ಕೊಂಕಣಿ ಮಿಶ್ರಿತ ಮರಾಠಿ. ಅನೇಕ ಕಾರಣಗಳಿಂದ ಕರ್ನಾಟಕಕ್ಕೆ ವಲಸೆ ಬಂದ ಇವರನ್ನು ಸ್ಥಳೀಯರು ಅವರು ಮಾತನಾಡುತ್ತಿರುವ ಭಾಷೆಯ ಮೂಲಕವೇ ಅವರನ್ನು ಮರಾಟಿ (ಮರಾಠಿ)ಗರು ಎಂದು ಕರೆದಿರುವ ಸಾಧ್ಯತೆಗಳನ್ನು ತಳ್ಳಿಹಾಕುವಂತಿಲ್ಲ.

ಮರಾಟಿಗರೆಲ್ಲ ಒಂದೇ ಕಾಲಕ್ಕೆ ಕರ್ನಾಟಕಕ್ಕೆ ವಲಸೆ ಬಂದವರಲ್ಲ ಹಂತ ಹಂತವಾಗಿ ವಲಸೆ ಬಂದಿರುವ ಸಾಧ್ಯತೆ ಇದೆ. ಒಂದು ಗುಂಪಿನ ನಾಯಕತ್ವ ವಹಿಸಿಕೊಂಡು ಬಂದ ತಂಡದ ಗುಂಪನ್ನು ಮರಾಟಿ ನಾಯ್ಕ ತಂಡದ ಗುಂಪು ಎಂದು ಸ್ಥಳೀಯರು ಗುರುತಿಸಿರಬಹುದು. ಅದೇ ಪರಂಪರೆ ಮುಂದುವರೆದು 'ಮರಾಟಿ ನಾಯ್ಕ' ಎಂಬುದು ಶಾಶ್ವತವಾಗಿ ಉಳಿದಿರಬಹುದು.

೧.೨. ಅಧ್ಯಯನದ ಉದ್ದೇಶಗಳು

ಪ್ರಸ್ತುತ ಅಧ್ಯಯನವು ಕರಾವಳಿ ಕರ್ನಾಟಕದ ಉಡುಪಿ ಜಿಲ್ಲೆಯ ಮರಾಟಿ ಸಮುದಾಯಗಳಾದ ಮರಾಟಿ ಮತ್ತು ಮರಾಟಿ ನಾಯ್ಕ ಸಮುದಾಯಗಳ ಸಾಮಾಜಿಕ ಸಾಂಸ್ಕೃತಿಕ, ಆರ್ಥಿಕ, ಶೈಕ್ಷಣಿಕ ಸ್ಥಿತಿಗತಿಗಳ ವಿಶ್ಲೇಷಣೆ ಹಾಗೂ ಮುಖ್ಯವಾಗಿ ಎರಡು ಸಮುದಾಯಗಳ ತೌಲನಿಕತೆಯ ಅಧ್ಯಯನವಾಗಿದೆ.

ಪ್ರಸ್ತುತ ಅಧ್ಯಯನವು ಅಂತರ್‌ಶಿಸ್ತೀಯ ಅಂಶಗಳನ್ನು ಈ ಅಧ್ಯಯನದಲ್ಲಿ ಗಣನೆಗೆ ತೆಗೆದುಕೊಳ್ಳಲಾಗಿದೆ. ಕರಾವಳಿ ಕರ್ನಾಟಕದ ಜಿಲ್ಲೆಗಳಾದ ಉತ್ತರ ಕನ್ನಡ, ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಯ ಮರಾಟಿ ಸಮುದಾಯಗಳಾದ ಮರಾಟಿ, ಮರಾಟಿ ನಾಯ್ಕ, ಕುಡುಬಿ, ಕುಣುಬಿ, ಕಾಳೆಕುಣುಬಿ, ಕುಂಬ್ರಿ ಮರಾಟಿ, ಆರ್ಯ ಯಾನೆ ಮರಾಟಿ, ಕ್ಷತ್ರಿಯ ಮರಾಟಿ ಸಮುದಾಯಗಳು ಕಂಡು ಬರುತ್ತವೆ. ಈ ಪ್ರಬಂಧದಲ್ಲಿ ಉಡುಪಿ ಜಿಲ್ಲೆಯಲ್ಲಿ ವಾಸಿಸುತ್ತಿರುವ ಮರಾಟಿ ಮತ್ತು ಮರಾಟಿ ನಾಯ್ಕ ಸಮುದಾಯಗಳ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಸ್ಥಿತಿಗತಿಗಳ ತೌಲನಿಕ ಅಧ್ಯಯನ ಮಾಡುವ ಉದ್ದೇಶಗಳನ್ನು ಹೊಂದಿದೆ.

೧. ಅಧ್ಯಯನಕ್ಕೆ ಆಯ್ಕೆಯಾಗಿರುವ ಮರಾಟಿ ಸಮುದಾಯಗಳಾದ ಮರಾಟಿ, ಮರಾಟಿ ನಾಯ್ಕ ಸಮುದಾಯಗಳ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಮತ್ತು ಧಾರ್ಮಿಕ ಸ್ಥಿತಿಗತಿಗಳನ್ನು ತುಲಾನಾತ್ಮಕವಾಗಿ ಅಧ್ಯಯನ ಮಾಡುವುದು.

೨. ಉಡುಪಿ ಜಿಲ್ಲೆಯಲ್ಲಿರುವ ಮರಾಟಿ ಮತ್ತು ಮರಾಟಿ ನಾಯ್ಕ ಸಮುದಾಯದ ಜೀವನಾವರ್ತಕ ಆಚರಣೆಗಳಲ್ಲಿರುವ ಹಾಗೂ ಅವರ ಆರ್ಥಿಕ ಧಾರ್ಮಿಕ, ಶೈಕ್ಷಣಿಕ ಚಟುವಟಿಕೆಗಳಲ್ಲಿರುವ ಸಾಮ್ಯ-ವೈಶಮ್ಯಗಳನ್ನು ತೌಲನಿಕವಾಗಿ ಅಧ್ಯಯನ ಮಾಡುವುದು.

೩. ಈ ಎರಡು ಸಮುದಾಯಗಳ ಧಾರ್ಮಿಕ ಮತ್ತು ಸಾಂಸ್ಕೃತಿಕ ಆಚರಣೆಗಳನ್ನು ತೌಲನಿಕವಾಗಿ ಅಧ್ಯಯನ ಮಾಡುವುದು

೪. ಈ ಎರಡು ಸಮುದಾಯಗಳಲ್ಲಿರುವ ವಿವಿಧ ಸಾಮಾಜಿಕ ಸಂಸ್ಥೆಗಳಲ್ಲಿ ಬದಲಾವಣೆಗೆ ಉಂಟಾಗಿರುವ ಕಾರಣಗಳನ್ನು ಅಧ್ಯಯನ ಮಾಡುವುದು.

೧.೩. ಅಧ್ಯಯನದ ವ್ಯಾಪ್ತಿ

ಪ್ರಸ್ತುತ ಸಂಶೋಧನೆ ಉಡುಪಿ ಜಿಲ್ಲೆಯಲ್ಲಿ ನೆಲೆ ಕಂಡುಕೊಂಡಿರುವ ಮರಾಟಿ ಮತ್ತು ಮರಾಟಿ ನಾಯ್ಕ ಸಮುದಾಯವನ್ನು ಅನುಲಕ್ಷಿಸಿ ಅಧ್ಯಯನ ಕೈಗೊಳ್ಳಲಾಗಿದೆ. ಈ ಎರಡು ಸಮುದಾಯದಲ್ಲಿ ಬದಲಾಗುತ್ತಿರುವ ಸಾಮಾಜಿಕ ಆರ್ಥಿಕ, ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಸ್ಥಿತಿಗಳನ್ನು ತೌಲನಿಕವಾಗಿ ಅಧ್ಯಯನ ಮಾಡಲಾಗಿದೆ. ಮರಾಟಿ ನಾಯ್ಕರು ಉಡುಪಿ ಜಿಲ್ಲೆಯ ಮೂರು ತಾಲೂಕಿನಲ್ಲಿ ಸಾಂದ್ರವಾಗಿ ನೆಲೆಸಿರುತ್ತಾರೆ. ಮರಾಟಿಗರು ಮಾತ್ರ ಉಡುಪಿ ಜಿಲ್ಲೆಯ ಕಾರ್ಕಳ ತಾಲೂಕಿನ ಹಿರಿಯಂಗಡಿ, ಸಾಣೂರು, ಬೆಳುವಾಯಿ, ಬೆಳ್ಮಣ್ಣು ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ತಾಲೂಕಿನ ಮುಲ್ಕಿ ಹೋಬಳಿಯ ಕವತ್ತಾರು, ಏಳತ್ತೂರು, ಅತಿಕಾರಿಬೆಟ್ಟು, ತಾಳಿಪ್ಪಾಡಿ, ಕರ್ನಿರೆ ಗ್ರಾಮಗಳಲ್ಲಿ ಮಾತ್ರ ವಾಸಿಸುತ್ತಿರುವುದನ್ನು ಕ್ಷೇತ್ರಕಾರ್ಯದ ಮೂಲಕ ಕಂಡುಕೊಂಡಿರುತ್ತೇನೆ.

ಈ ಅಧ್ಯಯನಕ್ಕಾಗಿ ಉಡುಪಿ ಜಿಲ್ಲೆಯಲ್ಲಿ ಮೂರು ತಾಲೂಕುಗಳಾದ ಕುಂದಾಪುರ, ಉಡುಪಿ ಮತ್ತು ಕಾರ್ಕಳ ತಾಲೂಕುಗಳನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಪ್ರತಿ ತಾಲೂಕು ವ್ಯಾಪ್ತಿಯಲ್ಲಿ ತಲಾ ಐವತ್ತು ಮರಾಟಿ ನಾಯ್ಕರ ಕುಟುಂಬಗಳನ್ನು ಆಯ್ಕೆ ಮಾಡಲಾಗಿದ್ದು, ಒಟ್ಟು ೧೫೦ ಕುಟುಂಬಗಳನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಆಯ್ಕೆ ಮಾಡುವ ಸಂದರ್ಭದಲ್ಲಿ ಸಂಪೂರ್ಣವಾಗಿ ಗ್ರಾಮೀಣ ಸ್ವರೂಪ, ಗುಡ್ಡಕಾಡು, ಪರ್ವತದ ಅಂಚಿನಲ್ಲಿ ವಾಸವಿರುವ ಕುಟುಂಬಗಳನ್ನು ಹೆಚ್ಚಾಗಿ ಆಯ್ಕೆ ಮಾಡಲಾಗಿದೆ. ಅಲ್ಲದೆ ಪ್ರತಿ ಗ್ರಾಮದಲ್ಲಿ ವಾಸವಿರುವ ಮರಾಟಿ ನಾಯ್ಕರ ಒಟ್ಟು ಕುಟುಂಬಗಳ ಆಧಾರದ ಹಿನ್ನೆಲೆಯಲ್ಲಿ ಮನೆಗಳನ್ನು ಆಯ್ಕೆ ಮಾಡಿರುತ್ತೇನೆ.

ಮರಾಟಿ ನಾಯ್ಕ ಸಮುದಾಯದ ಅಧ್ಯಯನಕ್ಕಾಗಿ ಉಡುಪಿ ಜಿಲ್ಲೆಯ ಉಡುಪಿ ತಾಲೂಕಿನ ಕೊಕ್ಕರ್ಣೆ ಗ್ರಾಮದಿಂದ ೦೧ ಕುಟುಂಬವನ್ನು, ಆರೂರು ಗ್ರಾಮದಿಂದ ೦೭ ಕುಟುಂಬಗಳನ್ನು ಚಾಂತಾರು ೦೬, ನೀಲಾವರ ೦೮, ಕಳತ್ತೂರು ೦೬, ಚೇರ್ಕಾಡಿ ಗ್ರಾಮದಿಂದ ೦೫, ಅಂಜಾರುನಿಂದ ೦೫, ಬೆಳ್ಳಂಪಳ್ಳಿಯಿಂದ ೦೨, ಪರ್ಕಳದಿಂದ ೦೧ ಪೆಣಂಕಿಲ ೦೪, ಬೊಮ್ಮರಬೆಟ್ಟು ೦೩ ಮತ್ತು ಪೆರ್ಡೂರುನಿಂದ ೨ ಕುಟುಂಬವನ್ನು ಒಟ್ಟು ೫೦ ಕುಟುಂಬಗಳನ್ನು ಆಯ್ಕೆ ಮಾಡಿಕೊಳ್ಳಲಾಗಿದೆ.

ಕುಂದಾಪುರ ತಾಲೂಕಿನ ಅಮಾಸೆಬೈಲು ಗ್ರಾಮದಿಂದ ೧೦ ಕುಟುಂಬಗಳನ್ನು, ಜಡ್ಕಲ್‌ನಿಂದ ೦೬, ಸಿದ್ಧಾಪುರದಿಂದ ೦೪, ಕೊಲ್ಲೂರುನಿಂದ ೦೩, ಕುಂದಾಪುರ ೦೨, ಮಡಾಮಕ್ಕಿಯಿಂದ ೦೬, ಕಳ್ಳುಂಜೆಯಿಂದ ೧೨ ಮತ್ತು ಶಂಕರನಾರಾಯಣ ಗ್ರಾಮದಿಂದ ೦೭ ಕುಟುಂಬಗಳನ್ನು ಒಟ್ಟು ಕುಂದಾಪುರ ತಾಲೂಕಿನಾದ್ಯಾಂತ ೦೮ ಗ್ರಾಮಗಳಿಂದ ೫೦ ಕುಟುಂಬಗಳನ್ನು ಅಧ್ಯಯನಕ್ಕಾಗಿ ಆಯ್ಕೆ ಮಾಡಿಕೊಳ್ಳಲಾಗಿದೆ. ಕಾರ್ಕಳ ತಾಲೂಕಿನ ಚಾರಾ ಗ್ರಾಮದಿಂದ ೦೭ ಕುಟುಂಬಗಳನ್ನು, ನಡ್ಪಾಲ್‌ನಿಂದ ೦೫, ಹೊಸೂರಿನಿಂದ ೦೫, ಶಿವಪುರದಿಂದ ೦೭, ಕಕ್ಕುಂಜೆ ೦೪ ಕುಟುಂಬಗಳನ್ನು, ಕಡ್ತಲದಿಂದ ೦೫, ಎಳ್ಳಾರೆ ೦೪, ಮುದ್ರಾಡಿ ೦೫, ವರಂಗದಿಂದ ೦೫, ಮುನಿಯಾಲ ಗ್ರಾಮದಿಂದ ೦೩ ಕುಟುಂಬಗಳನ್ನು ಒಟ್ಟು ಕಾರ್ಕಳ ತಾಲೂಕಿನ ಹತ್ತು ಗ್ರಾಮಗಳಿಂದ ೫೦ ಕುಟುಂಬಗಳನ್ನು

ಅಧ್ಯಯನಕ್ಕಾಗಿ ಆಯ್ಕೆ ಮಾಡಿಕೊಳ್ಳಲಾಗಿದೆ. ಉಡುಪಿ ಜಿಲ್ಲೆಯಿಂದ ಒಟ್ಟು ೩೦ ಗ್ರಾಮಗಳಿಂದ ೧೫೦ ಕುಟುಂಬಗಳನ್ನು ಅಧ್ಯಯನಕ್ಕಾಗಿ ಆಯ್ಕೆ ಮಾಡಿಕೊಂಡಿರುವೆನು.

ಮರಾಟಿ ಸಮುದಾಯದವರು ಮುಖ್ಯವಾಗಿ ಉಡುಪಿ ಜಿಲ್ಲೆಯ ಕಾರ್ಕಳ ತಾಲೂಕಿನ ಕೆಲವೇ ಕೆಲವು ಗ್ರಾಮಗಳಲ್ಲಿ ಮಾತ್ರ ವಾಸವಿರುವುದು ಕ್ಷೇತ್ರಕಾರ್ಯ ಮೂಲಕ ತಿಳಿದು ಬರುತ್ತದೆ. ಮಂಗಳೂರು ತಾಲೂಕಿನ ಮುಲ್ಕಿ ಹೋಬಳಿಯ ಕವತ್ತಾರು, ಏಳತ್ತೂರು, ತಾಳಿಪ್ಪಾಡಿ, ಕರ್ನಿರೆ, ಮತ್ತು ಮೂಡಬಿದರೆಯ ಹತ್ತಿರ ಸಾಣೂರು, ಅತ್ತೂರು, ನಿಟ್ಟೆ, ಜೋಡುಕಟ್ಟೆ, ಮಿಯ್ಯಾರ್ ಇವುಗಳಲ್ಲಿ ಮಾತ್ರ ಕಂಡುಬರುತ್ತಾರೆ. ಉಡುಪಿ ಜಿಲ್ಲೆಯಲ್ಲಿ ಕ್ಷತ್ರೀಯ ಮರಾಟಿ ಮತ್ತು ಆರ್ಯ ಯಾನೆ ಮರಾಟಿ ಸಮುದಾಯದವರು ಕಂಡು ಬರುತ್ತಾರೆ. ಇವರ ಸಂಸ್ಕೃತಿ ಜೀವನ ಕ್ರಮಗಳಲ್ಲಿ ಸಾಮ್ಯತೆಯಿದ್ದರೂ ಅನೇಕ ವರ್ಷಗಳಿಂದ ವೈವಾಹಿಕ ಸಂಬಂಧಗಳು ನಡೆಯುತ್ತಿಲ್ಲ. ಆದ್ದರಿಂದ ಅವರು ತಮ್ಮನ್ನು ಪ್ರತ್ಯೇಕವಾಗಿ ಗುರುತಿಸಿಕೊಂಡಿದ್ದಾರೆ. ಇತ್ತೀಚಿನ ದಿನಗಳಲ್ಲಿ ಶಿಕ್ಷಣ, ಆಧುನೀಕರಣ, ನಗರೀಕರಣದ ಪ್ರಭಾವಗಳಿಂದ ಪರಸ್ಪರ ವೈವಾಹಿಕ ಸಂಬಂಧಗಳು ನಡೆಸುತ್ತಿರುವುದು ಕಂಡುಬರುತ್ತದೆ. ಸಂಶೋಧನೆಗಾಗಿ ಇವರು ವಾಸವಿರುವ ಕಾರ್ಕಳ ತಾಲೂಕಿನ ಹಿರಿಯಂಗಡಿ, ಸಾಣೂರು, ಬೆಳುವಾಯಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಮುಲ್ಕಿ ಹೋಬಳಿಯನ್ನು ಮಾತ್ರ ಈ ಅಧ್ಯಯನಕ್ಕೆ ಆಯ್ಕೆ ಮಾಡಿಕೊಳ್ಳಲಾಗಿದೆ.

ಮರಾಟಿ ಸಮುದಾಯದವರು ಕಾರ್ಕಳ ತಾಲೂಕಿನಲ್ಲಿ ಹದಿನೈದು/ಹದಿನಾರು ಗ್ರಾಮಗಳಲ್ಲಿ ಮಾತ್ರ ವಾಸವಿವಿದ್ದು, ಅವುಗಳಲ್ಲಿ ಹದಿಮೂರು ಗ್ರಾಮಗಳಲ್ಲಿ ವಾಸವಿರುವ ಮರಾಟಿ ಸಮುದಾಯದ ೧೫೦ ಕುಟುಂಬಗಳನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಕಾರ್ಕಳದ ಇಂದಿರಾನಗರದಿಂದ ೩೧ ಕುಟುಂಬಗಳು, ಹಿರಿಯಂಗಡಿಯಿಂದ ೨೯ ಕುಟುಂಬಗಳನ್ನು ಕುಂಟಲಪಾಡಿಯಿಂದ ೨೧, ಮಿಯ್ಯಾರ್ ೧೯, ಸಾಣೂರು ೧೮, ಪೆರುವಾಜೆ ೦೯, ಕಾರ್ಕಳ ಕಾಳಿಕಾಂಬ ದೇವಸ್ಥಾನ ವಾರ್ಡುನಿಂದ ೦೬, ಗಾಂಧಿ–ಮೈದಾನ ಭಾಗದಿಂದ ೦೫, ಆನೆಕೆರೆಯಿಂದ ೦೪, ಜೋಡುಕಟ್ಟೆ ಗ್ರಾಮದಿಂದ ೦೩, ಹುಡ್ಕೋ ಕಾಲೋನಿಯಿಂದ ೦೨, ಬಜಗೋಳಿ ಗ್ರಾಮದಿಂದ ೦೧ ಹಾಗೂ ಅತ್ತೂರು ಗ್ರಾಮ ೦೧ ಕುಟುಂಬಗಳನ್ನು ಆಯ್ಕೆ ಮಾಡಲಾಗಿದ್ದು, ಒಟ್ಟು ಕಾರ್ಕಳ ತಾಲೂಕಿನಿಂದ ೧೫೦ ಕುಟುಂಬಗಳನ್ನು ಅಧ್ಯಯನಕೋಸ್ಕರ ಆಯ್ಕೆ ಮಾಡಲಾಗಿದೆ.

ಮರಾಟಿ ಸಮುದಾಯದವರ ತಿಳುವಳಿಕೆದಾರರು ತಿಳಿಸಿದ ಪ್ರಕಾರ ಆ ಸಮುದಾಯದವರ ಜನಸಂಖ್ಯೆ ಒಟ್ಟು ಒಂದು ಸಾವಿರದೊಳಗೆ ಈ ಪ್ರದೇಶದಲ್ಲಿ ವಾಸವಿದ್ದಾರೆ ಮತ್ತು ಮಂಗಳೂರು ತಾಲೂಕಿನ ಮುಲ್ಕಿ ಹೋಬಳಿಯಲ್ಲಿ ಒಟ್ಟು ಮೂವತ್ಮೂರು ಮನೆಗಳಿವೆ ಎಂಬ ಮಾಹಿತಿ ದೊರೆಯುತ್ತದೆ.

೧.೪. ಅಧ್ಯಯನದ ಮಹತ್ವ

ಮರಾಟಿ ಮತ್ತು ಮರಾಟಿ ನಾಯ್ಕ ಈ ಎರಡು ಸಮುದಾಯದವರಲ್ಲಿ ವೈವಿಧ್ಯಮಯವಾದ ಧಾರ್ಮಿಕ ಆಚರಣೆಗಳಿವೆ. ಮಾತ್ರ ಶಕ್ತಿಯಾರಾಧನೆಯ ಪ್ರತೀಕವಾದ ಮಹಾಮ್ಮಾಯಿ ಆರಾಧನೆ ಮತ್ತು ಗೊಂಧೋಳು ಪೂಜೆ, ಭೈರವಾರಾಧನೆ, ಹೋಳಿಹಬ್ಬ ಮುಂತಾದ ಆಚರಣೆಗಳನ್ನು ಹೊಂದಿದ್ದಾರೆ. ಕಾರ್ಕಳದಲ್ಲಿ ವಾಸವಿರುವ ಮರಾಟಿಗರನ್ನು ಇತರ ಜಾತಿಯ ಸಮುದಾಯದವರು ಕನ್ನಕೇರು, ಅರೇರು ಆರ್ಯ ಮರಾಟಿಗರು ಎಂದು ಕರೆಯುವರು. ಇವರು ಮಹಾರಾಷ್ಟ್ರ ಮತ್ತು ಗೋವಾದಿಂದ ರಾಜಕೀಯ, ಆರ್ಥಿಕ, ಧಾರ್ಮಿಕ, ಮತಾಂತರ, ಪ್ರಕೃತಿ ವಿಕೋಪ ಮುಂತಾದ ಕಾರಣಗಳಿಂದ

ತಮ್ಮ ಮೂಲ ನೆಲವನ್ನು ಬಿಟ್ಟು ಕರಾವಳಿ ಕರ್ನಾಟಕ ಮತ್ತು ಮಲೆನಾಡು ಪ್ರದೇಶಕ್ಕೆ ವಲಸೆ ಬಂದಿದ್ದಾರೆ. ಇಂದು ಈ ಎರಡು ಸಮುದಾಯಗಳ ಅಚರಣೆ, ಸಂಪ್ರದಾಯಗಳಲ್ಲಿ ಅನೇಕ ಬದಲಾವಣೆಗಳಾಗಿವೆ. ಆದ್ದರಿಂದ ಈ ಅಧ್ಯಯನದಲ್ಲಿ ಅವರ ಪರಂಪರಾನುಗತವಾದ ಸಾಮಾಜಿಕ, ಧಾರ್ಮಿಕ ಹಾಗೂ ಸಾಂಸ್ಕೃತಿಕ ಸ್ಥಿತಿಗತಿಗಳ ಜೊತೆಗೆ ಅವರ ಆರ್ಥಿಕ ಮತ್ತು ಶೈಕ್ಷಣಿಕ ಸ್ಥಿತಿಗಳನ್ನು ಅಧ್ಯಯನ ಮಾಡುವುದಾಗಿದೆ. ಜೊತೆಗೆ ಅವರಲ್ಲಿ ಉಂಟಾದ ಬದಲಾವಣೆಗಳನ್ನು ಗುರುತಿಸುವ ಮತ್ತು ಅದರ ಮಹತ್ವವನ್ನು ಮುಂದಿನ ಪೀಳಿಗೆಗೆ ತಿಳಿಸಿಕೊಡುವ ಪ್ರಯತ್ನ ಮಾಡಲಾಗಿದೆ.

ಆರ್ಥಿಕವಾಗಿ ಮರಾಟಿ ನಾಯ್ಕರು ಮತ್ತು ಮರಾಟಿಗರು ಮೇಲ್ನೋಟಕ್ಕೆ ಶ್ರೀಮಂತರು. ಮರಾಟಿಗರಲ್ಲಿ ಮೀಸಲಾತಿ ಸೌಲಭ್ಯವನ್ನು ಕೆಲವೇ ಜನರು ಪಡೆದುಕೊಂಡಿರುವುದು ಕಂಡು ಬರುತ್ತದೆ. ಇಂದಿಗೂ ಬಹುತೇಕ ಎರಡು ಮರಾಟಿ ಸಮುದಾಯದವರು ಕಾಡಂಚಿನಲ್ಲಿ, ಬೆಟ್ಟಗಳಂಚಿನಲ್ಲಿ, ತೀರಾ ಗ್ರಾಮಾಂತರ ಪ್ರದೇಶಗಳಲ್ಲಿ ವಾಸವಿರುವುದರಿಂದ ಅವರು ತಮ್ಮ ಜೀವನೋಪಾಯಕ್ಕಾಗಿ ಲಾಭದಾಯಕವಲ್ಲದ ಕುಮೇರಿ ಕೃಷಿ, ನೆಲೆನಿಂತ ಕೃಷಿ, ಕೃಷಿಕೂಲಿ ಕಾರ್ಮಿಕ, ಖಾಸಗಿ ಕಂಪನಿಗಳಲ್ಲಿ ನೌಕರಿ ಮುಂತಾದ ವೃತ್ತಿಗಳನ್ನು ಅವಲಂಬಿಸಿಕೊಂಡಿರುವರು. ಅಲ್ಲದೆ ಭೂ–ಮಸೂದೆಯ ಮರಾಟಿ ನಾಯ್ಕ ಮತ್ತು ಮರಾಟಿ ಸಮುದಾಯದವರ ಆರ್ಥಿಕತೆಯ ಮೇಲೆ ಪ್ರಮುಖ ಪರಿಣಾಮ ಬೀರಿರಬಹುದೆಂಬ ಅಂಶವನ್ನು ತಿಳಿದುಕೊಳ್ಳುವ ಪ್ರಯತ್ನ ಮಾಡಲಾಗಿದೆ. ಈ ದೃಷ್ಟಿಯಲ್ಲಿ ಆರ್ಥಿಕತೆಯ ನೈಜ ಸ್ಥಿತಿಯನ್ನು ತಿಳಿಯುವ ದೃಷ್ಟಿಯಿಂದಲೂ ಈ ಅಧ್ಯಯನ ಮಹತ್ವ ಪಡೆದುಕೊಂಡಿರುತ್ತದೆ.

ಇನ್ನೊಂದು ಪ್ರಮುಖ ಅಂಶವೆಂದರೆ, ಮರಾಟಿ ನಾಯ್ಕ ಸಮುದಾಯದಲ್ಲಿರುವ ವಿವಾಹ ಸಂದರ್ಭದಲ್ಲಿ ಆಚರಿಸುತ್ತಿರುವ ನವಗ್ರಹಪೂಜೆ(ಗೃಹ ಅಥವ ಗೆರೆ–ಪೂಜೆ) ಮತ್ತು ಎರಡು ಸಮುದಾಯದಲ್ಲಿ ಆಚರಿಸುವ 'ತೆರಪದ್ಧತಿ' ಇಂದು ಇದು ಸಾಂಕೇತಿಕವಾಗುತ್ತಿದೆ. ಬದಲಾಗಿ ಇತರೆ ಸಮುದಾಯದವರ ಸಂಸ್ಕೃತಿಯ ಪ್ರಭಾವ, ನಗರೀಕರಣ, ಆಧುನಿಕ ಶಿಕ್ಷಣ, ಜೀವನ ಶೈಲಿಯಲ್ಲಿ ಆಗಿರುವ ಬದಲಾವಣೆಗಳಿಂದಾಗಿ 'ವರದಕ್ಷಿಣೆ' ತೆಗೆದುಕೊಳ್ಳುವುದನ್ನು ಈ ಎರಡು ಸಮುದಾಯದಲ್ಲಿ ಕಾಣುತ್ತೇವೆ. ಇಂದು ಕೆಲವರು ಪ್ರತಿಷ್ಠೆಗಾಗಿ ಹೆಚ್ಚು ವರದಕ್ಷಿಣೆ ಕೊಟ್ಟರೆ, ಇಲ್ಲದವರೂ ಸಾಲಸೋಲ ಮಾಡಿ ವರದಕ್ಷಿಣೆ ಕೊಟ್ಟು ಮದುವೆ ಮಾಡುತ್ತಾರೆ. ಕಾನೂನಿನ ದೃಷ್ಟಿಯಿಂದ ವರದಕ್ಷಿಣೆ ಕೊಡುವುದು, ಪಡೆಯುವುದು ಅಪರಾಧವಾಗಿದ್ದರೂ ಇಂದು ಕಾನೂನಿನ ಮರೆಯಲ್ಲಿ ರಾಜಾರೋಷವಾಗಿ ನಡೆಯುತ್ತಿದೆ. ಕಾನೂನಿಂದ ತಪ್ಪಿಸಿಕೊಳ್ಳಲು ವಿವಿಧ ವಿಧಾನಗಳಿಂದ ವರದಕ್ಷಿಣೆ ನೀಡುತ್ತಿರುವುದು ಅಧ್ಯಯನದ ಸಂದರ್ಭದಲ್ಲಿ ಕಂಡುಬಂದಿದೆ.

ಮರಾಟಿ ನಾಯ್ಕ ಮತ್ತು ಮರಾಟಿ ಸಮುದಾಯಗಳೆರಡರಲ್ಲೂ ಶಿಕ್ಷಣ ಬದಲಾವಣೆಯನ್ನು ತರುವುದರಲ್ಲಿ ಪ್ರಮುಖ ಪಾತ್ರ ವಹಿಸಿದೆ ಎಂದು ಹೇಳಬಹುದು. ತಂದೆ ತಾಯಿಗಳಿಬ್ಬರೂ ಅನಕ್ಷರಸ್ಥರಾಗಿದ್ದರೂ ಮಕ್ಕಳನ್ನು ವಿದ್ಯಾವಂತರನ್ನಾಗಿ ಮಾಡುವ ಪ್ರಯತ್ನ ಇವರಲ್ಲಿ ಕಂಡು ಬರುತ್ತದೆ. ಆರ್ಥಿಕವಾಗಿ ಸ್ಥಿತಿವಂತರಾದವರು ತಮ್ಮ ಮಕ್ಕಳನ್ನು ವೃತ್ತಿ–ಶಿಕ್ಷಣಕ್ಕೆ ಕಳುಹಿಸಿದರೆ ಆರ್ಥಿಕವಾಗಿ ಹಿಂದುಳಿದವರು ಸಾಮಾನ್ಯ ಶಿಕ್ಷಣ ನೀಡುವುದನ್ನು ಗಮನಿಸಬಹುದು. ತಮ್ಮ ಮಕ್ಕಳನ್ನು ದೂರದ ನಗರ ಪ್ರದೇಶಕ್ಕೆ ಕಳುಹಿಸಿ ಶಿಕ್ಷಣ ನೀಡಬೇಕೆಂಬ ಆಶೆ ಇದ್ದರೂ ಆರ್ಥಿಕವಾಗಿ ದುರ್ಬಲರಾದದ್ದರಿಂದ ಅದು ಸಾಧ್ಯವಾಗುತ್ತಿಲ್ಲ. ಬೇರೆ ಬೇರೆ ರಾಜ್ಯಗಳಿಂದ, ದೇಶಗಳಿಂದ ಶಿಕ್ಷಣ ಪಡೆಯಲು ಈ ಪ್ರದೇಶಕ್ಕೆ ಅನೇಕ ವಿದ್ಯಾರ್ಥಿಗಳು ಆಗಮಿಸುತ್ತಾರೆ. ಅವರಿಂದ ಆಕರ್ಷಿತರಾದ ಮರಾಟಿ ಸಮುದಾಯದ

ವಿದ್ಯಾರ್ಥಿಗಳು ಅವರ ಜೀವನ ಶೈಲಿ, ವಿಧಾನಗಳನ್ನು ಅಳವಡಿಸಿಕೊಳ್ಳಲು ಪ್ರಾರಂಭಿಸಿದ ಮೇಲೆ ಮರಾಟಿಗರಲ್ಲಿ ಅನೇಕ ಬದಲಾವಣೆಗಳಾಗತೊಡಗಿವೆ.

ಮರಾಟಿ, ಕುಂಬ್ರಿ ಮರಾಟಿ, ಮರಾಟಿ ನಾಯ್ಕ, ಕುಡುಬಿ, ಕುಣಬಿ, ಆರ್ಯ ಮರಾಠಿ, ಕೊಡಗಿನ ಮರಾಠರು, ಗೋವಾ ಕುಡುಬಿಯರು, ನಾಡ ಕುಡುಬಿಯರು, ಅರೆಕುಡುಬಿಯರು ಮತ್ತು ಜೋಗಿ ಕುಡುಬಿಯರು ಇವರು ಮಹಾರಾಷ್ಟ್ರದಿಂದ ಗೋವಾ ಮೂಲಕ ಕರ್ನಾಟಕದ ಕರಾವಳಿ ಮತ್ತು ಮಲೆನಾಡಿಗೆ ವಲಸೆ ಬಂದಿರುವ ಸಾಧ್ಯತೆಗಳನ್ನು ಅಲ್ಲಗಳೆಯುವಂತಿಲ್ಲ. ಸಾಮಾನ್ಯವಾಗಿ ಇವರು ಶಿವಾಜಿ ಮಹಾರಾಜನ ಮತ್ತು ಪೇಶ್ವೆಯರ ಆಳ್ವಿಕೆಯಲ್ಲಿ ಸೈನಿಕರಾಗಿ ಕಾರ್ಯನಿರ್ವಹಿಸಿ ಪೋರ್ಚುಗಿಸರ, ಬ್ರಿಟಿಷರ ಮತ್ತು ಮುಸ್ಲಿಂರ ದಬ್ಬಾಳಿಕೆಯಿಂದ, ಬಲಾತ್ಕಾರದ ಮತಾಂತರದ ಭೀತಿಯಿಂದ ತಪ್ಪಿಸಿಕೊಳ್ಳಲು ಕರ್ನಾಟಕಕ್ಕೆ ವಲಸೆ ಬಂದಿರುವ ಸಾಧ್ಯತೆಗಳು ಹೆಚ್ಚಾಗಿವೆ. ಈ ಎಲ್ಲಾ ಸಮುದಾಯಗಳು ಒಂದೇ ಮೂಲದವರಿರಬಹುದು. ಪ್ರಾದೇಶಿಕವಾಗಿ ಇವರನ್ನು ಬೇರೆ ಬೇರೆ ಹೆಸರುಗಳಿಂದ ಸ್ಥಳೀಯರು ಗುರುತಿಸಿರುವ ಸಾಧ್ಯತೆಗಳುಂಟು. ಇವರ ಕುಲ, ಬಳಿ, ಆಚರಣೆ, ಸಂಪ್ರದಾಯಗಳನ್ನು ಸೂಕ್ಷ್ಮವಾಗಿ ಗಮನಿಸಿದಾಗ ಇವರೆಲ್ಲರು ಒಂದೇ ಮೂಲದಿಂದ ಬಂದು ಕರ್ನಾಟಕದಲ್ಲಿ ಹಂಚಿಹೋಗಿದ್ದಾರೆ ಎಂದು ಹೇಳಬಹುದು. ಈ ಪ್ರಬಂಧದಲ್ಲಿ ಮರಾಟಿ ಮತ್ತು ಮರಾಟಿ ನಾಯ್ಕ ಒಂದೇ ಮೂಲದವರು ಎಂದು ಕಂಡುಕೊಳ್ಳಲು ಇದೊಂದು ಮಹತ್ವದ ಅಧ್ಯಯನವಾಗಿದೆ.

೧.೫. ಅಧ್ಯಯನದ ವಿಧಾನಗಳು

ಈ ಪ್ರಬಂಧದ ಅಧ್ಯಯನದ ವ್ಯಾಪ್ತಿಯು ಉಡುಪಿ ಜಿಲ್ಲೆಯ ಕಾರ್ಕಳ, ಉಡುಪಿ ಹಾಗೂ ಕುಂದಾಪುರ ತಾಲೂಕಿನಲ್ಲಿರುವ ಮರಾಟಿ ಹಾಗೂ ಮರಾಟಿ ನಾಯ್ಕ ಸಮುದಾಯಗಳನ್ನು ಒಳಗೊಂಡಿವೆ. ಈ ತಾಲೂಕುಗಳಿಂದ ಮರಾಟಿ ನಾಯ್ಕರಿಗೆ ಸಂಬಂಧಿಸಿದಂತೆ ಪ್ರತಿ ತಾಲೂಕಿನಲ್ಲಿ ತಲಾ ೫೦ ಕುಟುಂಬಗಳನ್ನು ಅಧ್ಯಯನಕ್ಕೆ ಆಯ್ಕೆ ಮಾಡಿಕೊಳ್ಳಲಾಗಿದೆ. ಒಟ್ಟು ಉಡುಪಿ ಜಿಲ್ಲೆಯಲ್ಲಿ ೧೫೦ ಕುಟುಂಬಗಳ ತಿಳುವಳಿಕೆದಾರರನ್ನು ಉದ್ದೇಶಿತ (Purposive) ನಮೂನೆ ಮಾದರಿ ವಿಧಾನದಿಂದ (Simple Random Sample) ಆಯ್ಕೆ ಮಾಡಲಾಗಿದ್ದು, ತಿಳುವಳಿಕೆದಾರರನ್ನು ವೈಯಕ್ತಿಕವಾಗಿ ಸಂದರ್ಶಿಸಿ ಮಾಹಿತಿಯನ್ನು ಸಂಗ್ರಹಿಸಲಾಗಿದೆ.

ಅದೇ ರೀತಿ ಮರಾಟಿ ಸಮುದಾಯದ ಉಡುಪಿ ಜಿಲ್ಲೆಯ ಕಾರ್ಕಳ ತಾಲೂಕಿನಲ್ಲಿ ಮಾತ್ರ ಇವರು ವಾಸಿಸುತ್ತಿದ್ದು, ಮರಾಟಿಗರ ೧೫೦ ಕುಟುಂಬಗಳನ್ನು ಆಯ್ಕೆ ಮಾಡಿಕೊಂಡು ಮರಾಟಿ ನಾಯ್ಕರಿಗೆ ನೀಡಿದ ಪ್ರಶ್ನಾವಳಿಯ ಮಾದರಿ ಮೂಲಕ ವೈಯಕ್ತಿಕವಾಗಿ ಸಂದರ್ಶಿಸಿ ಮಾಹಿತಿ ಸಂಗ್ರಹಿಸಲಾಗಿದೆ.

ಕ್ಷೇತ್ರಕಾರ್ಯದಿಂದ ತಿಳಿದುಬಂದ ಮಾಹಿತಿಯನ್ನು ಮುಖ್ಯವಾಗಿಟ್ಟುಕೊಂಡು ಈ ಅಧ್ಯಯನವನ್ನು ಪೂರೈಸಲು ಪ್ರಯತ್ನಿಸಿದ್ದೇನೆ. ಮರಾಟಿ ಮತ್ತು ಮರಾಟಿ ನಾಯ್ಕ ಸಮುದಾಯಗಳ ಹಿರಿಯ ಮತ್ತು ಕಿರಿಯ ತಿಳುವಳಿಕೆದಾರರಿಂದ ಅವರ ಜೀವನ ವಿಧಾನವನ್ನು ಅರಿಯಲು, ಸಂದರ್ಶನದ ಮೂಲಕ ಮಾಹಿತಿ ಸಂಗ್ರಹಿಸಿ, ಅವರಿಂದ ಸಂಗ್ರಹಿಸಿದ ಮಾಹಿತಿಯನ್ನು ವಿಶ್ಲೇಷಣೆಗೆ ಒಳಪಡಿಸಲಾಗಿದೆ. ನಗರ ಜನಜೀವನದ ಆಕರ್ಷಣೆಯ ಹೊರತಾಗಿಯೂ ಮರಾಟಿ ಸಮುದಾಯಗಳು ಎದುರಿಸುತ್ತಿರುವ ಸವಾಲು, ಸಾಧ್ಯತೆಗಳನ್ನು ಕುರಿತು ಚರ್ಚಿಸುವ ಪ್ರಯತ್ನ ಮಾಡಲಾಗಿದೆ.

ಈ ಅಧ್ಯಯನಕ್ಕೆ ಪೂರಕವಾಗಿ ಪ್ರಾಥಮಿಕ ಹಾಗೂ ಅನುಷಂಗಿಕ ಆಕರಗಳಲ್ಲಿನ ಉಪಯುಕ್ತ ಮಾಹಿತಿಯನ್ನು ಸಂಗ್ರಹಿಸಿ ಇಲ್ಲಿ ಬಳಸಿಕೊಳ್ಳಲಾಗಿದೆ. ಕ್ಷೇತ್ರಕಾರ್ಯ ಆಧಾರಿತ ಅಧ್ಯಯನವಾದ್ದರಿಂದ ಮರಾಟಿ ಸಮುದಾಯಗಳ ಜೀವನಾವರ್ತಕ, ವಾರ್ಷಿಕಾವರ್ತನ ಆಚರಣೆಗಳು, ಆರ್ಥಿಕ, ಸಾಮಾಜಿಕ, ಶೈಕ್ಷಣಿಕ, ರಾಜಕೀಯ ಹಾಗೂ ಕುಲ, ಬಳಿ, ಬೆಡಗುಗಳ ಕುರಿತಾದ ಅವರ ಜೀವನ ವಿಧಾನಗಳಿಗೆ ಸಂಬಂಧಿಸಿದ ಸಮಗ್ರ ಮಾಹಿತಿಗಳನ್ನು ಪಡೆಯಲು ಕ್ಷೇತ್ರಕಾರ್ಯ ಮಾಡಲಾಗಿದೆ. ಮರಾಟಿ ಮತ್ತು ಮರಾಟಿ ನಾಯ್ಕ ಸಮುದಾಯಗಳಲ್ಲಿ ಪ್ರಚಲಿತವಿರುವ ಕಥೆ, ಕಾವ್ಯ, ಹಾಡು, ಗಾದೆ, ಒಗಟುಗಳನ್ನು ಸಂಗ್ರಹಿಸಿ ಅಧ್ಯಯನಕ್ಕೆ ಒಳಪಡಿಸಲಾಗಿದೆ. ಒಟ್ಟಾರೆಯಾಗಿ ಈ ಅಧ್ಯಯನ ಕ್ಷೇತ್ರಕಾರ್ಯದ ಮಾಹಿತಿಯನ್ನು ಕೇಂದ್ರಿಕರಿಸಿಕೊಂಡು ಈ ಪ್ರಬಂಧವನ್ನು ಸಿದ್ದಪಡಿಸಲಾಗಿದೆ.

೧.೫.೧. ಪ್ರಶ್ನಾವಳಿ ವಿಧಾನ

ಮರಾಟಿ ಮತ್ತು ಮರಾಟಿ ನಾಯ್ಕ ಸಮುದಾಯಗಳ ತೌಲನಿಕ ಅಧ್ಯಯನ ಕರಾವಳಿ ಕರ್ನಾಟಕದ ಉಡುಪಿ ಜಿಲ್ಲೆಯ ಮರಾಟಿ ನಾಯ್ಕ ಮತ್ತು ಮರಾಟಿ ಸಮುದಾಯವನ್ನು ಗಮನದಲ್ಲಿಟ್ಟುಕೊಂಡು ಈ ಅಧ್ಯಯನ ಮಾಡುವುದಕ್ಕಾಗಿ ಮಾರ್ಗದರ್ಶಕರ ಹಾಗೂ ವಿಷಯ ಪರಿಣಿತರೊಂದಿಗೆ ಚರ್ಚಿಸಿ ಸುಧೀರ್ಘವಾದ ಪ್ರಶ್ನಾವಳಿಯನ್ನು ಸಿದ್ಧಪಡಿಸಿಕೊಂಡು, ಕ್ಷೇತ್ರಕಾರ್ಯದಲ್ಲಿ ಪ್ರಶ್ನಾವಳಿಯನ್ನು ಬಳಸಿಕೊಂಡು ಮಾಹಿತಿಯನ್ನು ಸಂಗ್ರಹಿಸಿ, ಪ್ರಬಂಧದಲ್ಲಿ ವಿಶ್ಲೇಷಣೆ ಮಾಡಲಾಗಿದೆ. ಕ್ಷೇತ್ರಕಾರ್ಯಕ್ಕೆ ಸಿದ್ಧಪಡಿಸಿದ ಪ್ರಶ್ನಾವಳಿಯನ್ನು ಅನುಬಂಧದಲ್ಲಿ ನೀಡಲಾಗಿದೆ.

೧.೫.೨. ಸಂದರ್ಶನ ವಿಧಾನ

ಮರಾಟಿ ಮತ್ತು ಮರಾಟಿ ನಾಯ್ಕ ಸಮುದಾಯಗಳ ತೌಲನಿಕ ಅಧ್ಯಾಯನ ಎಂಬ ಈ ಅಧ್ಯಯನಕ್ಕೆ ಪ್ರಶ್ನಾವಳಿ ಸಿದ್ದಪಡಿಸಿಕೊಂಡು, ಈ ಎರಡೂ ಸಮುದಾಯಗಳ ತಿಳುವಳಿಕೆದಾರರ ಹತ್ತಿರ ಹೋಗಿ ಅವರನ್ನು ಸಂದರ್ಶನ ಮಾಡುವ ಮೂಲಕ ವಿಷಯುಗಳನ್ನು ಧ್ವನಿ ಸುರುಳಿಯಲ್ಲಿ ದಾಖಲಿಸಿಕೊಳ್ಳಲಾಯಿತು. ಈ ಅಧ್ಯಯನಕ್ಕೆ ಸಂಬಂಧಿಸಿದ ಮಾಹಿತಿಗಳನ್ನು ಮರಾಟಿ ಹಾಗೂ ಮರಾಟಿನಾಯ್ಕ ಸಮುದಾಯಗಳ ಪರಿಸರದಲ್ಲಿ ವಾಸಿಸುತ್ತಿರುವ ಇತರೆ ಸಮುದಾಯಗಳ ಹಿರಿಯ ಮತ್ತು ಕಿರಿಯ ತಿಳುವಳಿಕೆದಾರರಿಂದ ಮಾಹಿತಿ ಸಂಗ್ರಹಿಸಲಾಗಿದೆ. ಈ ಸಮುದಾಯಗಳಲ್ಲಿ ಹುದುಗಿರುವ ಅವರ ಜೀವನ ಕ್ರಮ ಮತ್ತು ಅನುಭವದ ಸಂಪತ್ತನ್ನು ಅಲ್ಲಿನ ಪ್ರಮುಖ ಹಿರಿಯರು ಹಾಗೂ ತಜ್ಞರಿಂದ ಮಾಹಿತಿಗಳನ್ನು ಪಡೆಯಲು ಸಂದರ್ಶನವು ಬಹಳ ಸಹಕಾರಿಯಾಯಿತು. ಅವರು ನೀಡಿದ ಮಾಹಿತಿಗಳು, ಅಭಿಪ್ರಾಯಗಳು ಬಹಳ ಉಪಯುಕ್ತವಾಗಿವೆ. ಇದರಿಂದ ಮರಾಟಿ ಮತ್ತು ಮರಾಟಿ ನಾಯ್ಕ ಸಮುದಾಯಗಳ ಜೀವನಾವರ್ತಕ ಹಾಗೂ ವಾರ್ಷಿಕಾವರ್ತನ ಆಚರಣೆಗಳಲ್ಲಿ ಅವರ ತಿಳುವಳಿಕೆಗಳನ್ನು ತೌಲನಿಕವಾಗಿ ಅಧ್ಯಯನ ಮಾಡುವುದರ ಜೊತೆಗೆ ಅವರು ಅನುಭವಿಸುತ್ತಿರುವ ಸಮಸ್ಯೆಗಳನ್ನು ಗ್ರಹಿಸಿ ಪ್ರಬಂಧದಲ್ಲಿ ವಿಶ್ಲೇಷಣೆ ಮಾಡಲಾಗಿದೆ.

೧.೫.೩. ಅವಲೋಕನ ವಿಧಾನ

ಮರಾಟಿ ಮತ್ತು ಮರಾಟಿ ನಾಯ್ಕ ಸಮುದಾಯಗಳು ಆಚರಿಸುತ್ತಿರುವ ವಾರ್ಷಿಕಾವರ್ತನ ಮತ್ತು ಜೀವನಾವರ್ತಕ ಆಚರಣೆಗಳು, ಕೃಷಿ ಚಟುವಟಿಕೆ ಹಾಗೂ ಆಹಾರ ಸಿದ್ಧಪಡಿಸುವ ವಿಧಾನಗಳು. ಧಾರ್ಮಿಕ ಆಚರಣೆಗಳಾದ ಗೋಂದೊಳು ಪೂಜೆ, ನಾಗಾರಾಧನೆ, ಇತ್ಯಾದಿ ವಿಷಯಗಳಿಗೆ

ಸಂಬಂಧಿಸಿದಂತೆ ಅವರೊಂದಿಗಿದ್ದು ಸೂಕ್ಷ್ಮವಾಗಿ ಗಮನಿಸಿ, ಟಿಪ್ಪಣಿ ಮಾಡಿಕೊಂಡು, ಕೆಲ ಗೊಂದಲಗಳಿಗೆ ಅವರೊಂದಿಗೆ ಚರ್ಚಿಸಿ ಪರಿಹಾರ ಕಂಡುಕೊಳ್ಳಲಾಯಿತು. ವಿಶೇಷವಾಗಿ ಅವರ ಹುಟ್ಟಿನಿಂದ ಸಾಯುವವರೆಗಿನ ಪ್ರತಿಯೊಂದು ಆಚರಣೆಗಳನ್ನು ಹಾಗೂ ಅವರ ಪಾರಂಪರಿಕ ಕೃಷಿಗೆ ಸಂಬಂಧಿಸಿದ ಚಟುವಟಿಕೆಗಳನ್ನು ವೀಕ್ಷಿಸಿ ಮಾಹಿತಿ ಸಂಗ್ರಹಿಸಿ, ಅದನ್ನು ಪ್ರಬಂಧದಲ್ಲಿ ವಿಶ್ಲೇಷಿಸಲಾಗಿದೆ.

೧.೫.೪. ಸಹಭಾಗಿತ್ವ ವಿಧಾನ

ಮರಾಟಿ ಸಮುದಾಯಗಳ ಜನನ ಸಂದರ್ಭದ ಆಚರಣೆಗಳು, ಋತುಮತಿ ಸಂದರ್ಭ, ಮದುವೆ ನಿಶ್ಚಯ, ಮದುವೆ ಆಚರಣೆ, ಸಾವು ಹಾಗೂ ಸಾವಿನ ನಂತರದ ಆಚರಣೆಗಳಲ್ಲಿ ಕೃಷಿ, ಹಾಗೂ ಕೃಷಿಗೆ ಸಂಬಂಧಿಸಿದ ಆಚರಣೆಗಳಲ್ಲಿ, ಧಾರ್ಮಿಕ ಹಾಗೂ ವಿವಿಧ ಉತ್ಸವಗಳಲ್ಲಿ ಭಾಗವಹಿಸಿ ಪ್ರಬಂಧಕ್ಕೆ ಬೇಕಾದ ಮಾಹಿತಿಯನ್ನು ಸಂಗ್ರಹಿಸಿ ಪ್ರಬಂಧದಲ್ಲಿ ವಿಶ್ಲೇಷಣೆ ಮಾಡಲಾಗಿದೆ.

೧.೫.೫. ಗುಂಪು ಚರ್ಚೆ

ಮರಾಟಿ ಸಮುದಾಯಗಳ ಹಿರಿಯ ಮತ್ತು ಕಿರಿಯ ತಿಳುವಳಿಕೆದಾರರನ್ನು ಕೂಡಿಸಿ ಅವರೊಂದಿಗೆ ಸುದೀರ್ಘವಾಗಿ ಚರ್ಚಿಸಿಲಾಯಿತು. ೨೫ ವರ್ಷಗಳ ಹಿಂದಿನ ಮತ್ತು ಇಂದಿನ ತಿಳುವಳಿಕೆಗಳಲ್ಲಿ ಹೇಗೆ ಬದಲಾವಣೆಯಾಗಿದೆ ಎಂಬುದನ್ನು ಕುರಿತು ಮಾಹಿತಿ ಪಡೆಯಲಾಯಿತು. ಕೃಷಿ, ಕುಂಬ್ರಿ ಬೇಸಾಯ, ವಿವಿಧ ಆಚರಣೆಗಳಲ್ಲಾದ ಬದಲಾವಣೆಗಳನ್ನು ಒಟ್ಟಾರೆಯಾಗಿ ಮರಾಟಿ ಸಮುದಾಯಗಳ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ, ರಾಜಕೀಯ, ಸಮಸ್ಯೆ ಹಾಗೂ ಅವರು ಎದುರಿಸುತ್ತಿರುವ ಸವಾಲುಗಳ ಮಾಹಿತಿಯನ್ನು ಸಾಮೂಹಿಕವಾಗಿ ಹಾಗೂ ಕೆಲವೊಮ್ಮೆ ವ್ಯಕ್ತಿಗತವಾಗಿ ಸಂಗ್ರಹಿಸಿ ಚರ್ಚಿಸುವ ಮೂಲಕ ವಿಷಯ ಸಂಗ್ರಹಣೆ ಮಾಡಿ ಪ್ರಬಂಧದಲ್ಲಿ ವಿಶ್ಲೇಷಿಸಲಾಗಿದೆ.

೧.೫.೬. ವ್ಯಕ್ತಿ ಅಧ್ಯಯನ (ಏಕ ವಿಷಯ ಅಧ್ಯಯನ)

ಮರಾಟಿ ಮತ್ತು ಮರಾಟಿ ನಾಯ್ಕ ಸಮುದಾಯಗಳು ಆಧುನೀಕರಣದ ನಡುವೆಯು ತನ್ನ ಪಾರಂಪರಿಕ ಆಚರಣೆ ಸಂಪ್ರದಾಯಗಳನ್ನು ಇನ್ನೂ ಜೀವಂತವಾಗಿ ಉಳಿಸಿಕೊಂಡಿವೆ. ಅವರ ಆಚರಣೆ ಸಂಪ್ರದಾಯಗಳು ನಶಿಸಿ ಹೋಗದಂತೆ ಮುಂದಿನ ತಲೆಮಾರಿನವರಿಗೆ ಹಸ್ತಾಂತರ ಮಾಡಲು ಸಮಗ್ರ ಅಧ್ಯಯನದ ಅವಶ್ಯಕತೆಯ ಹಿನ್ನೆಲೆಯಲ್ಲಿ ಮರಾಟಿ ಸಮುದಾಯ ೧೫೦ ಜನರನ್ನು ಹಾಗೂ ಮರಾಟಿ ನಾಯ್ಕ ಸಮುದಾಯದ ೧೫೦ ಜನರನ್ನು ವ್ಯಕ್ತಿ ಅಧ್ಯಯನಕ್ಕೆ ಒಳಪಡಿಸಿ ಮಾಹಿತಿ ಸಂಗ್ರಹಿಸಿ ವಿಶ್ಲೇಷಣೆ ಮಾಡಲಾಗಿದೆ.

೧.೫.೭. ಪ್ರಾಥಮಿಕ ಮಾಹಿತಿಯ ಮೂಲಗಳು:

ಮರಾಟಿ ಹಾಗೂ ಮರಾಟಿ ನಾಯ್ಕ ಸಮುದಾಯಗಳ ಜೀವನಕ್ರಮ ಧಾರ್ಮಿಕ, ಸಾಂಸ್ಕೃತಿಕ ಅಂಶಗಳನ್ನು ವಿಶ್ಲೇಷಿಸಲು ಸಮೀಕ್ಷೆ ವಿಧಾನವನ್ನು ಅಧ್ಯಯನಕ್ಕೆ ಪೂರಕವಾಗಿ ಉಪಯೋಗಿಸಲಾಗಿದೆ. ಈ ಎರಡೂ ಸಮುದಾಯಗಳ ಭೌಗೋಳಿಕ ನೆಲೆಯನ್ನು ಗುರುತಿಸಿಕೊಳ್ಳುವಲ್ಲಿ ಕ್ಷೇತ್ರಕಾರ್ಯ ಅವಶ್ಯವಾಗಿದ್ದು, ಈ ಕ್ರಮವನ್ನು ಉಪಯೋಗಿಸಲಾಗಿದೆ. ಅವರ ಆಚಾರ, ವಿಚಾರ, ಸಾಮಾಜಿಕ, ಆರ್ಥಿಕ, ಶೈಕ್ಷಣಿಕ, ಸಾಂಸ್ಕೃತಿಕ ಜೀವನದ ಸ್ಥಿತಿಗತಿಗಳನ್ನು ತಿಳಿದುಕೊಳ್ಳಲು ಮತ್ತು ಅಭಿವೃದ್ಧಿ ಪೂರಕವಾದ ಸಲಹೆ ಸೂಚನೆಗಳನ್ನು ಪಡೆಯಲು ಕ್ಷೇತ್ರಕಾರ್ಯವು ತುಂಬಾ ಸಹಕಾರಿಯಾಗಿದೆ.

ವಸ್ತು ವಿಷಯಕ್ಕೆ ಸಂಬಂಧಿಸಿದಂತೆ ಅವಲೋಕನ ಮತ್ತು ಸಹಭಾಗಿತ್ವ ವಿಧಾನವನ್ನು ಅಳವಡಿಸಿಕೊಂಡು ಸಮುದಾಯದ ಜನರೊಂದಿಗೆ ಬೆರೆತು ಅವರ ವಾಸ್ತವ್ಯದ ನೆಲೆಗಳಲ್ಲಿ ಸಮುದಾಯದ ಸದಸ್ಯರನ್ನು, ಮುಖಂಡರನ್ನು ಕುಟುಂಬದ ಯಜಮಾನರನ್ನು ಪ್ರಶ್ನಾವಳಿಯ ಮೂಲಕ ಸಂದರ್ಶನ ನಡೆಸಿ ಮಾಹಿತಿಯನ್ನು ಸಂಗ್ರಹಿಸಿಕೊಂಡಿದ್ದೇನೆ. ಸಂಗ್ರಹಿಸಿದ ಮಾಹಿತಿಯನ್ನು ವಿಶ್ಲೇಷಿಸಿ ವಿವರಣೆಯ ಆಧಾರದ ಮೇಲೆ ಕೋಷ್ಟಕಗಳನ್ನು ರಚಿಸಲಾಗಿದೆ. ಮಾಹಿತಿಗಳ ಸಂಗ್ರಹಣೆ, ಪಟ್ಟಿಕರಣ ಮತ್ತು ವಿಶ್ಲೇಷಣೆ ಈಗಾಗಲೇ ತಿಳಿಸಿರುವಂತೆ ಕ್ಷೇತ್ರಕಾರ್ಯ ಮತ್ತಿತರ ಪ್ರಾಥಮಿಕ ಮೂಲಗಳಿಂದ ಮಾಹಿತಿಗಳನ್ನು ಸಂಗ್ರಹಿಸಿ, ಸಂಗ್ರಹಿಸಿದ ಮಾಹಿತಿಗಳನ್ನು ಪಟ್ಟಿ ಮಾಡುವಿಕೆ, ಸೂಚೀಕರಣ ಮತ್ತು ಅಗತ್ಯತೆಗೆ ತಕ್ಕಂತೆ ಸಂಖ್ಯಾಶಾಸ್ತ್ರೀಯ ವಿಧಾನದ ಬಳಕೆಯ ಮೂಲಕ ಸಂಶೋಧನಾ ಮಾಹಿತಿಯನ್ನು ಸಮಾಜಶಾಸ್ತ್ರೀಯ ಚೌಕಟ್ಟಿನಲ್ಲಿ ವರದಿ ತಯಾರಿಸಿರುವೆನು.

೧.೫.೮. ಅನುಷಂಗಿಕ (Secondary Sources of data) ಮಾಹಿತಿಗಳ ಮೂಲ:

ಅಧ್ಯಯನಕ್ಕೆ ಸಂಬಂಧಿತ ಹಾಗೂ ಪೂರಕವಾದ ಮಾಹಿತಿಗಳನ್ನು ಸರಕಾರಿ ಇಲಾಖಾ ದಾಖಲೆಗಳು, ಸಂಖ್ಯಾಶಾಸ್ತ್ರೀಯ ದಾಖಲೆಗಳು, ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಇಲಾಖೆಗಳ ಆಯೋಗಗಳ ವರದಿ, ಪತ್ರಿಕೆಗಳು, ನಿಯತಕಾಲಿಕೆಗಳು, ಮರಾಟಿ ನಾಯ್ಕ, ಮರಾಟಿ ಮತ್ತು ಆರ್ಯ ಮರಾಟಿ, ಕುಡುಬಿ ಸಮುದಾಯದ ಸಂಘ-ಸಂಸ್ಥೆಗಳು ಹೊರಡಿಸಿರುವ ಸಂಚಿಕೆಗಳು, ಶಬ್ದಕೋಶಗಳು, ವಿಶ್ವಕೋಶಗಳು, ಗ್ಯಾಜೆಟಿಯರ್ಸ್‌ಗಳು (Gazetteer) ಲೇಖನಗಳು ಇನ್ನು ಮುಂತಾದವುಗಳ ಮೂಲಕ ಮಾಹಿತಿಯನ್ನು ಸಂಗ್ರಹಿಸಲಾಗಿದೆ. ಉಡುಪಿ ಜಿಲ್ಲೆಯ ಒಟ್ಟು ೩ ತಾಲೂಕುಗಳಿಂದ ಒಟ್ಟು ೩೦೦ ಮಾಹಿತಿದಾರರುಗಳಾದ ಕುಟುಂಬದ ಮುಖ್ಯಸ್ಥರನ್ನು ಪ್ರಾಥಮಿಕ ಮಾಹಿತಿಗಳ ಮೂಲಗಳಿಂದ ಸಂದರ್ಶನ ಅನುಸೂಚಿಯ (Interview Schedule) ಮೂಲಕ ಮಾಹಿತಿಗಳನ್ನು ಸಂಗ್ರಹಿಸಲಾಗಿದೆ.

ಮರಾಟಿಗರ ಬಳಿಗಳ ತಾತ್ವಿಕತೆಯ ಬಗ್ಗೆ ಉಡುಪಿ ಜಿಲ್ಲೆಯ ಮರಾಟಿ ನಾಯ್ಕರ ೧೫೦ ಕುಟುಂಬಗಳನ್ನು ಕುಡುಬಿ ಸಮುದಾಯದಲ್ಲಿ ೧೫೦ ಕುಟುಂಬಗಳನ್ನು ಮತ್ತು ಕಾರ್ಕಳ ತಾಲೂಕಿನ ಕೆಲವೇ ಕೆಲವು ಗ್ರಾಮಗಳಲ್ಲಿ ವಾಸ್ತವ್ಯವಿರುವ ೧೫೦ ಕುಟುಂಬಗಳ ಅಧ್ಯಯನಕ್ಕೆ ಒಳಪಡಿಸಿ 'ಬಳಿ'ಗಳ ಬಗ್ಗೆ ಮಾತ್ರ ಮಾಹಿತಿಗಳನ್ನು ಸಂಗ್ರಹಿಸಲಾಗಿದೆ.

೧.೫.೯. ಅಧ್ಯಯನದ ಮಾದರಿ ನಮೂನೆ

ಮರಾಟಿ ಸಮುದಾಯದ ಒಟ್ಟು ೧೫೦ ಹಾಗೂ ಮರಾಟಿ ನಾಯ್ಕ ಸಮುದಾಯದ ೧೫೦ ಕುಟುಂಬಗಳ ತಿಳುವಳಿಕೆದಾರರಿಂದ ವಿಷಯ ಸಂಗ್ರಹಿಸಲಾಗಿದೆ. ಈ ತಿಳುವಳಿಕೆದಾರರಲ್ಲಿ ಮರಾಟಿ ಸಮುದಾಯದ ೧೫೦ ಕುಟುಂಬಗಳಲ್ಲಿ ೩೯ ಜನ ಮಹಿಳೆಯರು ಹಾಗೂ ೧೧೧ ಜನ ಪುರುಷರು ಸೇರಿದ್ದಾರೆ. ಇದರಲ್ಲಿ ಮರಾಟಿ ಸಮುದಾಯದ ೨೫ ರಿಂದ ೩೫ ವಯಸ್ಸಿನವರು ೦೭ ಕುಟುಂಬಗಳು, ೩೬ ರಿಂದ ೪೫ ವರ್ಷ ವಯಸ್ಸಿನವರು ೩೧ ಕುಟುಂಬಗಳು, ೪೬ ರಿಂದ ೫೫ ವಯಸ್ಸಿನವರು ೪೬ ಕುಟುಂಬಗಳು, ೫೬ ರಿಂದ ೬೫ ವಯಸ್ಸಿನವರು ೪೭ ಕುಟುಂಬಗಳು ಹಾಗೂ ೬೬ ವಯಸ್ಸಿನ ಮೇಲಿನ ೨೪ ಕುಟುಂಬಗಳಿಂದ ಮಾಹಿತಿ ಸಂಗ್ರಹಣೆಗಾಗಿ ಆಯ್ಕೆಮಾಡಿಕೊಳ್ಳಲಾಗಿದೆ. ಅದೇ ರೀತಿ ಮರಾಟಿ ನಾಯ್ಕ ಸಮುದಾಯದ ಒಟ್ಟು ೧೫೦ ಕುಟುಂಬಗಳಲ್ಲಿ ೨೩ ಮಹಿಳೆಯರು ಹಾಗೂ ೧೨೭ ಕುಟುಂಬಗಳ ಪುರುಷರನ್ನು ಈ ಅಧ್ಯಯನಕ್ಕೆ ತಿಳುವಳಿಕೆದಾರರನ್ನಾಗಿ ಆಯ್ಕೆಮಾಡಿಕೊಳ್ಳಲಾಗಿದೆ. ಇದರಲ್ಲಿ ೨೫ ರಿಂದ ೩೫ ವಯಸ್ಸಿನವರು ೧೦ ಕುಟುಂಬಗಳು, ೩೬ ರಿಂದ ೪೫ವರ್ಷ ವಯಸ್ಸಿನವರು

೩೩ ಕುಟುಂಬಗಳು, ೪೬ ರಿಂದ ೫೫ ವಯಸ್ಸಿನವರು ೫೧ ಕುಟುಂಬಗಳು, ೫೬ ರಿಂದ ೬೫ ವಯಸ್ಸಿನವರು ೩೮ ಕುಟುಂಬಗಳು ಹಾಗೂ ೬೬ ವಯಸ್ಸಿನ ಮೇಲಿನ ೧೮ ಕುಟುಂಬಗಳನ್ನು ಆಯ್ಕೆಮಾಡಿಕೊಂಡು ಅವರಿಂದ ಮಾಹಿತಿಯನ್ನು ಸಂಗ್ರಹಿಸಲಾಗಿದೆ.

ಅಧ್ಯಯನಕ್ಕೊಳಪಟ್ಟ ತಿಳುವಳಿಕೆದಾರರ ವಯೋಮಾನದ ವಿವರ

ಯಾವುದೇ ಒಂದು ಸಮುದಾಯದ ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಸ್ಥಾನಮಾನಗಳನ್ನು ವ್ಯಕ್ತಿಗತ ಅಂತರಗಳನ್ನು ಅರ್ಥಮಾಡಿಕೊಳ್ಳಲು ವಯಸ್ಸು ಒಂದು ಕೀಲಿಕೈ ಇದ್ದಂತೆ. ವ್ಯಕ್ತಿಯ ದೈಹಿಕ ಹಾಗೂ ಮಾನಸಿಕ ಪರಿಪಕ್ವತೆಗೊಳ್ಳಲು ಅವರ ಜೈವಿಕ ಅಂಶಗಳು ಬಹಳ ಪ್ರಮುಖವಾಗಿರುತ್ತವೆ. ಮಾನವಶಾಸ್ತ್ರ ಮತ್ತು ಸಮಾಜಶಾಸ್ತ್ರೀಯವಾಗಿ ವಯೋಮಾನವು ಅವರ ಕುಟುಂಬ, ರಕ್ತಸಂಬಂಧ, ಮಾನವ ಸಂಬಂಧ, ಸ್ಥಾನಮಾನ ಮತ್ತಿತ್ತರ ಅಂಶಗಳನ್ನು ನಿರ್ಧರಿಸುವಂತಾಗಿದೆ. ಸಮಾಜದಲ್ಲಿ ವಯಸ್ಸನ್ನು ಆಧರಿಸಿ ಅಧಿಕಾರ, ಗೌರವ ಹಕ್ಕುಗಳನ್ನು ಹಾಗೂ ಅಂತಸ್ತುಗಳನ್ನು ನಿರ್ಧರಿಸುತ್ತಾರೆ. ಈ ಅಧ್ಯಯನದಲ್ಲಿಯೂ ಸಹ ತಿಳುವಳಿಕೆದಾರರ ವಯೋಮಾನವನ್ನು ಗಮನದಲ್ಲಿಟ್ಟುಕೊಂಡು ಅವರಿಂದ ಮಾಹಿತಿಯನ್ನು ವರೆಗೆ ಹಚ್ಚಿ ವಿಶ್ಲೇಷಣೆ ಮಾಡಲಾಗಿದೆ.

ಈ ವಯೋಮಾನಕ್ಕೆ ಸಂಬಂಧಿಸಿದಂತೆ ಕುಂದಾಪುರ, ಉಡುಪಿ, ಕಾರ್ಕಳ ತಾಲೂಕುಗಳ ೧೫೦ ಮರಾಟಿ ನಾಯ್ಕ ಸಮುದಾಯದ ಕುಟುಂಬಗಳನ್ನು ಸಮೀಕ್ಷೆಗೊಳಪಡಿಸಿದಾಗ ೧೦ (ಶೇಕಡಾ ೬.೬೭%) ರಷ್ಟು ಜನಸಂಖ್ಯೆ ೨೫ ರಿಂದ ೩೫ ವಯೋಮಾನದ ಗುಂಪಲ್ಲಿ ಇದ್ದಾರೆ. ೩೬ ರಿಂದ ೪೫ ವಯೋಮಾನದ ಒಟ್ಟು ೩೩(೨೨%) ರಷ್ಟು ಜನಸಂಖ್ಯೆಯನ್ನು ಕಾಣಬಹುದಾಗಿದೆ. ಅದೇ ರೀತಿ ೫೧(೩೪%) ರಷ್ಟು ೪೬ ರಿಂದ ೫೫ ವಯೋಮಾನದ ಜನಸಂಖ್ಯೆ ಕಂಡರೆ ೫೬ ರಿಂದ ೬೫ ವಯೋಮಾನದ ಗುಂಪಿನ ಜನರನ್ನು ೩೮ (೨೫.೩೩%) ರಷ್ಟು ಇರುವುದು ಕಂಡುಬಂದಿದೆ. ಉಳಿದ ೧೮(೧೨%) ರಷ್ಟು ಜನಸಂಖ್ಯೆಯು ೬೬ ವಯೋಮಾನಕ್ಕಿಂತ ಮೇಲ್ಪಟ್ಟವರನ್ನು ಪ್ರತಿನಿಧಿಸಿರುವುದು ಕಂಡುಬಂದಿದೆ.

ವಯೋಮಾನದ ವಿಷಯಕ್ಕೆ ಸಂಬಂಧಿಸಿದಂತೆ ಕಾರ್ಕಳ ತಾಲೂಕಿನ ವ್ಯಾಪ್ತಿಯಲ್ಲಿ ಬರುವ ೧೫೦ ಮರಾಟಿ ಕುಟುಂಬಗಳ ಸಮೀಕ್ಷೆ ಮಾಡಿದಾಗ ೦೨ (ಶೇಕಡಾ ೦೧.೩೩%) ಜನಸಂಖ್ಯೆಯು ೨೫ ರಿಂದ ೩೫ ವಯೋಮಾನದ ಗುಂಪಿಗೆ ಸೇರಿರುವುದು ಕಂಡುಬಂದಿದೆ. ೩೧ (ಶೇಕಡಾ ೨೦.೬೭%) ರಷ್ಟು ಜನಸಂಖ್ಯೆಯು ೩೬ ರಿಂದ ೪೫ ವಯೋಮಾನಕ್ಕೆ ಸೇರಿರುವುದು ಕಂಡು ಬರುತ್ತದೆ. ಅದರಂತೆ ೪೬ (ಶೇಕಡಾ ೩೦.೬೭%) ರಷ್ಟು ಜನರು ೪೬ ರಿಂದ ೫೫ ವಯೋಮಾನಕ್ಕೆ ಸೇರಿರುವ ಬಗ್ಗೆ ತಿಳಿದರೆ ೪೭ (ಶೇಕಡಾ ೩೧.೩೩%) ರಷ್ಟು ಜನಸಂಖ್ಯೆಯು ೫೬ ರಿಂದ ೬೫ ವಯೋಮಾನವನ್ನು ಹೊಂದಿದೆ ಎಂಬುದಾಗಿ ಕಂಡುಬಂದಿದೆ. ಉಳಿದ ೨೪ (೧೬%) ರಷ್ಟು ಜನಸಂಖ್ಯೆಯು ೬೬ ವಯಸ್ಸು ಮೇಲ್ಪಟ್ಟ ವಯೋಮಾನಕ್ಕೆ ಸೇರಿರುವವರು ಎಂಬುದು ತಿಳಿಯುತ್ತದೆ.

ಸಮೀಕ್ಷೆಗೊಳಪಟ್ಟ ತಿಳುವಳಿಕೆದಾರರ ಲಿಂಗವಾರು ವಿವರ

ಇಂಗ್ಲೀಷ್ ಪದ 'ಸೆಕ್ಸ್' ಎಂಬ ಪದಕ್ಕೆ ಸರಿಸಮಾನವಾದ ಪದ ಕನ್ನಡದಲ್ಲಿ 'ಲಿಂಗ'.ಆದರೆ ಸಮಾಜಶಾಸ್ತ್ರ ವಿಷಯಕ್ಕೆ ಬಂದಾಗ ಆಧುನೀಕರು ತಮ್ಮ ಸಂಭಾಷಣೆಗಳಲ್ಲಿ 'ಜೈವಿಕ ಲಿಂಗ' ಮತ್ತು 'ಸಾಮಾಜಿಕ ಲಿಂಗ' ಎಂಬ ಎರಡು ಪದವನ್ನು ಹೆಚ್ಚು ಕಡಿಮೆ ಒಂದೇ ಅರ್ಥದಲ್ಲಿ ಬಳಸುವುದು ಕಂಡುಬರುತ್ತದೆ. ಜೈವಿಕ ಲಿಂಗ ಎಂಬುವುದು ಹೆಣ್ಣು ಗಂಡುಗಳ ಜೈವಿಕ ವ್ಯತ್ಯಾಸವಾಗಿರುವುದು

ಅಥವಾ ಜೈವಿಕ ಲಿಂಗ ಎಂಬುದು ಸ್ತ್ರೀ–ಪುರುಷರಲ್ಲಿ ವ್ಯತ್ಯಾಸ ಕಲ್ಪಿಸುವ ಒಂದೇ ಜೈವಿಕ ಅಂಶವಾಗಿದೆ. ಪ್ರಸ್ತುತ ಅಧ್ಯಯನ / ಸಮೀಕ್ಷೆಗೊಳಪಟ್ಟ ಮರಾಟಿ ನಾಯ್ಕ ೧೫೦ ಕುಟುಂಬಗಳು ಮತ್ತು ಮರಾಟಿ ಸಮುದಾಯದ ೧೫೦ ಕುಟುಂಬಗಳು ಒಟ್ಟು ೩೦೦ ಕುಟುಂಬಗಳ ತಿಳುವಳಿಕೆದಾರರನ್ನು ಆಯ್ಕೆಮಾಡಿಕೊಳ್ಳಲಾಗಿದೆ.

ಅಧ್ಯಯನಕ್ಕೊಳಪಟ್ಟ ಮರಾಟಿ ನಾಯ್ಕ ಮತ್ತು ಮರಾಟಿ ಕುಟುಂಬದ ತಿಳುವಳಿಕೆದಾರರ ಲಿಂಗವಾರು ಹಂಚಿಕೆಯಲ್ಲಿ ಒಟ್ಟು ಬಹುಪಾಲು ೧೫೦ ಮರಾಟಿ ನಾಯ್ಕ ಕುಟುಂಬಗಳು ಕುಂದಾಪುರ, ಉಡುಪಿ ಮತ್ತು ಕಾರ್ಕಳ ಪ್ರದೇಶದಲ್ಲಿ ಇವೆ. ಮರಾಟಿ ನಾಯ್ಕ ಕುಂದಾಪುರ ತಾಲೂಕಿನಲ್ಲಿ ಒಟ್ಟು ೫೦ ತಿಳುವಳಿಕೆದಾರರ ಲಿಂಗವಾರು ಹಂಚಿಕೆಯಾಗಿದೆ. ಅದರಲ್ಲಿ ೪೨ ಗಂಡಸರು ಮತ್ತು ೦೮ ಹೆಂಗಸರು. ಉಡುಪಿ ತಾಲೂಕಿನಲ್ಲಿ ೩೯ ಗಂಡಸರು ಮತ್ತು ೧೧ ಹೆಂಗಸರು ಹಾಗೂ ಒಟ್ಟು ೫೦ ತಿಳುವಳಿಕೆದಾರರ ಲಿಂಗವಾರು ಹಂಚಿಕೆಯಾಗಿದೆ. ಮರಾಟಿ ನಾಯ್ಕ ಕಾರ್ಕಳ ತಾಲೂಕಿನಲ್ಲಿ ಒಟ್ಟು ೫೦ ತಿಳುವಳಿಕೆದಾರರ ಲಿಂಗವಾರು ಹಂಚಿಕೆಯಾಗಿದೆ. ಅದರಲ್ಲಿ ೪೬ ಗಂಡಸರು ಮತ್ತು ೦೪ ಹೆಂಗಸರು ಎಂದು ಸಮೀಕ್ಷೆಯಿಂದ ತಿಳಿದು ಬರುತ್ತದೆ. ಮರಾಟಿ ನಾಯ್ಕರ ೧೫೦ ಕುಟುಂಬಗಳಲ್ಲಿ, ಕುಂದಾಪುರ, ಉಡುಪಿ ಹಾಗೂ ಕಾರ್ಕಳ ತಾಲೂಕಿನಲ್ಲಿ ಒಟ್ಟು ಗಂಡಸರು ೧೨೭ ಹಾಗೂ ಹೆಂಗಸರು ೨೩ ಎಂದು ಪ್ರಾಥಮಿಕ ಮಾಹಿತಿಗಳ ಆಧಾರದಲ್ಲಿ ರಚಿತವಾಗಿದೆ. ಶೇಕಡವಾರು ತಿಳಿಸುದಾದರೆ ಒಟ್ಟು ಶೇಕಡ ೧೦೦%ರಲ್ಲಿ ೮೪.೬೭% ಶೇಕಡವಾರು ಗಂಡಸರು ಮತ್ತು ೧೫.೩೩% ಶೇಕಡವಾರು ಹೆಂಗಸರು.

ಮರಾಟಿ ಕುಟುಂಬಗಳ ತಿಳುವಳಿಕೆದಾರರ ಲಿಂಗವಾರು ಹಂಚಿಕೆ, ಗಂಡಸರು ೧೧೧ ಹಾಗೂ ಹೆಂಗಸರು ೩೯ ಒಟ್ಟು ೧೫೦ ತಿಳುವಳಿಕೆದಾರರ ಲಿಂಗವಾರು. ಮರಾಟಿ ಕುಟುಂಬಗಳ ಗಂಡಸರ ಶೇಕಡವಾರು ೭೪% ಮತ್ತು ಹೆಂಗಸರ ಶೇಕಡವಾರು ೨೬% ಹಾಗೂ ಒಟ್ಟು ಶೇಕಡವಾರು ೧೦೦% ಎಂದು ಪ್ರಾಥಮಿಕ ಮಾಹಿತಿಗಳ ಆಧಾರದಲ್ಲಿ ರಚಿತವಾದ ಪಟ್ಟಿಯಲ್ಲಿ ಕಂಡು ಬಂದಿದೆ.

ಅಧ್ಯಯನಕ್ಕೊಳಪಡಿಸಿದ ತಿಳುವಳಿಕೆದಾರರ ವೃತ್ತಿ ಮತ್ತು ಕಸುಬುಗಳ ವಿವರ

ವೃತ್ತಿಯು ಒಂದು ಸಮುದಾಯದ ಆರ್ಥಿಕತೆಯನ್ನು ನಿರ್ಧರಿಸುವಲ್ಲಿ ಮಹತ್ವದ ಪಾತ್ರ ವಹಿಸುತ್ತದೆ. ಇದು ಸಾಮಾಜಿಕ ಬದಲಾವಣೆಗಳಲ್ಲಿ, ಸಾಮಾಜಿಕ ಅಂತಸ್ತನ್ನು ಗುರುತಿಸುವಲ್ಲಿ ಸಹಕಾರಿಯಾಗುತ್ತದೆ. ಮರಾಟಿ ನಾಯ್ಕ ಮತ್ತು ಮರಾಟಿ ಸಮುದಾಯದವರ ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಬದಲಾವಣೆಗಳನ್ನು ತಿಳಿಸಲು ವೃತ್ತಿಯು ಬಹಳ ಪ್ರಾಮುಖ್ಯತೆಯನ್ನು ಪಡೆದಿದೆ.

ಯಾವುದೇ ಒಂದು ವೃತ್ತಿ ಒಂದೇ ರೂಪದಲ್ಲಿ ನಿರಂತರವಾಗಿ ಮುಂದುವರಿಯಲು ಸಾಧ್ಯವಿಲ್ಲ. ಕಾಲಕಾಲಕ್ಕೆ ಅನೇಕ ಬದಲಾವಣೆಗೆ ಒಳಗಾಗುತ್ತಲೇ ಇರುತ್ತದೆ. ಆರಂಭದಲ್ಲಿ ಮರಾಟಿಗರು ಸೈನಿಕ ವೃತ್ತಿಯಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದರು ಎಂಬುದಾಗಿ ಎರಡು ಸಮುದಾಯದ ತಿಳುವಳಿಕೆದಾರರು ಕ್ಷೇತ್ರ ಕಾರ್ಯ ಸಂದರ್ಭದಲ್ಲಿ ತಿಳಿಸಿರುವರು. ಮರಾಟಿ ನಾಯ್ಕ ಮತ್ತು ಮರಾಟಿಗರು ಬೇಟೆ, ಪಶುಪಾಲನೆ, ಕುಮೇರಿ(ಕುಂಬ್ರಿ) ಕೃಷಿ ಇತ್ಯಾದಿ ಕಸುಬುಗಳನ್ನು ಮುಂದುವರೆಸಿಕೊಂಡು ಬಂದ ಸಮುದಾಯ. ಇಂದು ಕಾಲದ ಸೆಳೆತಕ್ಕೆ ಸಿಕ್ಕು ಪಾರಂಪರಿಕ ಕಸುಬುಗಳನ್ನು ಮುಂದುವರಿಸಲಾಗದೆ ಪರ್ಯಾಯ ಮಾರ್ಗಗಳನ್ನು ಕಂಡುಕೊಂಡಿದ್ದಾರೆ.

ಅಧ್ಯಯನಕ್ಕೊಳಪಡಿಸಿದ ತಿಳುವಳಿಕೆದಾರರ ವೃತ್ತಿ ಹಾಗೂ ಕಸುಬುವಾರು ಹಂಚಿಕೆಯ ವಿವರಗಳನ್ನು ಗಮನಿಸಿದಾಗ ಕುಂದಾಪುರ, ಉಡುಪಿ, ಕಾರ್ಕಳ ತಾಲೂಕುಗಳ ವ್ಯಾಪ್ತಿಯಲ್ಲಿ ಬರುವ ೧೫೦

ಮರಾಟಿ ನಾಯ್ಕ ಕುಟುಂಬಗಳಲ್ಲಿ ೬೩ (೪೨%) ರಷ್ಟು ಜನರು ಕೂಲಿ ಮಾಡುತ್ತಿರುವುದು ಕಂಡು ಬಂದಿದೆ. ಡ್ರೈವರ್ ವೃತ್ತಿಯನ್ನು ಮಾಡುತ್ತಿರುವ ೧೧ (೦೭.೩೩%) ರಷ್ಟು ಕಾಣಬಹುದಾಗಿದೆ. ಅದೇ ರೀತಿಯಾಗಿ ಗೇರುಬೀಜ ಕಾರ್ಖಾನೆಗೆ ೧೦ (೬.೬೭%) ರಷ್ಟು, ಸರಕಾರಿ ಗುಮಾಸ್ತ ವೃತ್ತಿಗೆ ೦೪ (೨.೬೭%) ರಷ್ಟು, ಖಾಸಗಿ ಕಂಪನಿ ವೃತ್ತಿಗೆ ೧೨ (೮.೦೦%) ರಷ್ಟು, ಬೀಡಿ ಕಟ್ಟುವ ವೃತ್ತಿಯ ೦೨ (೧.೩೩%) ರಷ್ಟು, ಕೃಷಿ ವೃತ್ತಿಯ ೧೨ (೮%)ರಷ್ಟು, ಗೃಹಿಣಿ/ಗ್ರಹಸ್ಥರು ೧೭ (೧೧.೩೩%) ರಷ್ಟು, ಟೈಲರಿಂಗ್ ವೃತ್ತಿಯ ೦೨ (೧.೩೩%) ರಷ್ಟು, ವ್ಯಾಪಾರಿ ವೃತ್ತಿಯ ೦೭ (೪.೬೭%) ರಷ್ಟು, ಶಿಕ್ಷಕ ವೃತ್ತಿಯ ೦೪ (೨.೬೭%)ರಷ್ಟು, ಕಲಾವಿದ ವೃತ್ತಿ (ಯಕ್ಷಗಾನ)ಯ ೧ (೦.೬೭%)ರಷ್ಟು, ಇಂಜಿನಿಯರಿಂಗ್ ವೃತ್ತಿಯ ೦೧ (೦.೬೭%)ರಷ್ಟು, ಬ್ಯಾಂಕಿಂಗ್ ವೃತ್ತಿಯ ೦೩ (೨%)ರಷ್ಟು ವೈದ್ಯಕೀಯ/ಪ್ಯಾರ ಮೆಡಿಕಲ್ ವೃತ್ತಿಯ ೦೧ (೦.೬೬%)ರಷ್ಟು ಕುಟುಂಬಗಳ ಜನರು ಇರುವುದು ಕಂಡುಬಂದಿದೆ. ಅದೇ ರೀತಿ ಸ್ನಾತಕೋತ್ತರ, ಪಿ.ಎಚ್.ಡಿ., ನಿವೃತ್ತ ನೌಕರ ಹಾಗೂ ರಾಜಕೀಯ ಕ್ಷೇತ್ರಗಳಲ್ಲಿ ಯಾವುದೇ ಕುಟುಂಬಗಳು ಭಾಗವಹಿಸಿಲ್ಲ ಮತ್ತು ಯಾವುದೇ ಕುಟುಂಬ ತನ್ನ ಮೂಲ ವೃತ್ತಿಯನ್ನು ಮಾಡುತ್ತಿಲ್ಲವೆಂಬುದು ಕಂಡುಬಂದಿದೆ.

ಕಾರ್ಕಳ ತಾಲೂಕಿನ ೧೫೦ ಮರಾಟಿ ಕುಟುಂಬಗಳಲ್ಲಿ ಕಂಡು ಬರುವ ವೃತ್ತಿ ವಿಷಯಕ್ಕೆ ಸಂಬಂಧಿಸಿದಂತೆ ನೋಡುದಾದರೆ ಕೂಲಿಯ ೫೫ (೩೬.೬೭%) ರಷ್ಟು, ಡ್ರೈವರ್‌ಗಳು ೧೩ (೮.೬೭%) ರಷ್ಟು ಗೇರುಬೀಜ ಕಾರ್ಖಾನೆಯಲ್ಲಿ ೦೫ (೩.೩೩%) ರಷ್ಟು, ಸರ್ಕಾರಿ ಗುಮಾಸ್ತ ವೃತ್ತಿಯಲ್ಲಿ ೦೫ (೩.೩೩%) ರಷ್ಟು, ಖಾಸಗಿ ಕಂಪನಿಯಲ್ಲಿ ೧೫ (೧೦%) ರಷ್ಟು, ಜನರು ತಮ್ಮ ವೃತ್ತಿ ಮತ್ತು ಕಸುಬುಗಳನ್ನು ಮಾಡಿದರೆ, ಬೀಡಿ ಕಟ್ಟುವ ೩ (೨%) ರಷ್ಟು ಕೃಷಿಯ ೩ (೨%) ರಷ್ಟು, ಗೃಹಿಣಿ/ಗೃಹಸ್ಥರಾಗಿ ೩೬ (೨೪%)ರಷ್ಟು, ಟೈಲರಿಂಗ್ ೦೧ (೦.೬೭%) ರಷ್ಟು, ವ್ಯಾಪಾರಿಗಳಾಗಿ ೦೮ (೫.೩೩%) ರಷ್ಟು ಮತ್ತು ಶಿಕ್ಷಕರಾಗಿ ೩ (೨%)ರಷ್ಟು, ಕುಟುಂಬಗಳು ವಿವಿಧ ಕಸುಬುಗಳನ್ನು ಮಾಡುತ್ತಿರುವುದು ಕಂಡುಬಂದಿದೆ. ಉಳಿದಂತೆ ಕಲಾವಿದ (ಯಕ್ಷಗಾನ), ಇಂಜಿನಿಯರ್ಸ್, ಬ್ಯಾಂಕಿನ ನೌಕರ, ವೈದ್ಯಕೀಯ/ಪ್ಯಾರ ಮೆಡಿಕಲ್ ವೃತ್ತಿಯಲ್ಲಿನ ಜನಸಂಖ್ಯೆ ಕಂಡುಬಂದಿಲ್ಲ. ಸ್ನಾತಕೋತ್ತರದ/ಪಿ.ಎಚ್‌ಡಿ. ಪದವಿ ಪಡೆದ ೦೧ (೦.೬೭%) ರಷ್ಟು, ನಿವೃತ್ತು ನೌಕರ ೦೧ (೦.೬೭%) ರಷ್ಟು, ರಾಜಕೀಯ ಕ್ಷೇತ್ರ ವೃತ್ತಿಯ ೦೧ (೦.೬೬%) ರಷ್ಟು ಜನರು ತಮ್ಮ ವೃತ್ತಿಯನ್ನು ಮಾಡುತ್ತಿರುವುದು ಕಾಣಬಹುದಾಗಿದೆ.

ಅಧ್ಯಯನಕ್ಕೊಳಪಡಿಸಿದ ತಿಳುವಳಿಕೆದಾರರ ಶೈಕ್ಷಣಿಕ ವಿವರ

ಶಿಕ್ಷಣವು ಇಡೀ ಸಮಾಜವನ್ನು ನಿರ್ಮಿಸುವ, ಬದಲಾಯಿಸುವ ಮತ್ತು ಅಭಿವೃದ್ಧಿಯ ಪಥದತ್ತ ಕೊಂಡೊಯ್ಯುವ ರಾಜಮಾರ್ಗ. ಒಂದು ರಾಷ್ಟ್ರವು ಸರ್ವಾಂಗೀಣ ಉನ್ನತಿಯನ್ನು ಹೊಂದಬೇಕಾದರೆ ಶಿಕ್ಷಣದ ಬೆಳವಣಿಗೆ ಅತೀ ಮುಖ್ಯವಾಗಿರುತ್ತದೆ. ಶಿಕ್ಷಣವು ವ್ಯಕ್ತಿಯ ವ್ಯಕಿತ್ವದ ನಿರ್ಮಾಣಕ್ಕೆ ಎಷ್ಟು ಮುಖ್ಯವೋ, ಸಮಾಜದ ಸ್ಥಿರತೆಗೆ, ಭದ್ರತೆಗೆ, ನಿರಂತರತೆಗೆ, ಏಕ್ಯಮತ್ಯದ, ಸಾಮರಸ್ಯದ ಸ್ಥಾಪನೆಗೆ ಅಷ್ಟೇ ಅಗತ್ಯ. ಸಮಾಜವು ಸಮಗ್ರ ಅಭಿವೃದ್ಧಿ ಹೊಂದಬೇಕಾದರೆ ಶಿಕ್ಷಣ ಕ್ಷೇತ್ರವು ಬದಲಾಗುತ್ತಿರುವ ಸಮಾಜದ ಅಗತ್ಯತೆಗಳಿಗೆ ಪೂರಕವಾಗಿರಬೇಕು. ಏಕೆಂದರೆ ಎಲ್ಲಾ ರೀತಿಯ ಸಾಮಾಜಿಕ ಅನಿಷ್ಟ ಹಾಗೂ ಸಮಸ್ಯೆಗಳಿಗೆ ಕೇಂದ್ರ ಬಿಂದು ಮಾನವನ ಅಜ್ಞಾನ. ಇಂತಹ ಅಜ್ಞಾನವನ್ನು ಹೋಗಲಾಡಿಸಬೇಕಾದರೆ ಶಿಕ್ಷಣವು ಅಗತ್ಯವಾಗಿದೆ.

ಅಧ್ಯಯನದ ಸಮೀಕ್ಷೆಯ ಪ್ರಕಾರ ಮರಾಟಿ ನಾಯ್ಕ ಹಾಗೂ ಮರಾಟಿಗ ತಿಳುವಳಿಕೆದಾರರ ಶೈಕ್ಷಣಿಕ ತಿಳುವಳಿಕೆದಾರರ ಸಂಖ್ಯೆ ತಲಾ ೧೫೦ ಆಗಿರುತ್ತದೆ. ಮರಾಟಿ ನಾಯ್ಕ ಹಾಗೂ ಮರಾಟಿಗಳ ಶೈಕ್ಷಣಿಕ ಮಟ್ಟವನ್ನು ೧೦ ವಿಧಗಳಾಗಿ ವಿಂಗಡಿಸಲಾಗಿದೆ. ಎರಡು ಸಮುದಾಯಗಳಲ್ಲಿ ತಲಾ ೧೫೦ ಕುಟುಂಬಗಳ ಸಮೀಕ್ಷೆ ಮಾಡಿದ್ದು, ಅದರಲ್ಲಿ ಶೇಕಡವಾರು ಮಾಹಿತಿಯನ್ನು ತೆಗೆಯಲಾಗಿದೆ.

ಮರಾಟಿ ನಾಯ್ಕ ಸಮುದಾಯದಲ್ಲಿ ಅನಕ್ಷರತೆವುಳ್ಳ ತಿಳುವಳಿಕೆದಾರರ ಸಂಖ್ಯೆ ೧೭ ಆಗಿದ್ದು, ಶೇಕಡವಾರು ೧೧.೩೩ ಆಗಿದೆ. ಹಾಗೆ ಪ್ರಾಥಮಿಕ ಶಿಕ್ಷಣ ಪಡೆದ ತಿಳುವಳಿಕೆದಾರರ ಸಂಖ್ಯೆ ೭೩ ಆಗಿದ್ದು, ಶೇಕಡವಾರು ೪೮.೬೭% ಆಗಿದೆ. ಪ್ರೌಢಶಾಲಾ ಶಿಕ್ಷಣ ಪಡೆದ ತಿಳುವಳಿಕೆದಾರರ ಸಂಖ್ಯೆ ೨೯ ಆಗಿದ್ದು, ಶೇಕಡವಾರು ೧೯.೩೩% ಹೊಂದಿದೆ. ಅದೇ ರೀತಿ ಪದವಿ ಪೂರ್ವ ತಿಳುವಳಿಕೆದಾರರ ಸಂಖ್ಯೆ ೧೬ ಆಗಿದ್ದು, ಶೇಕಡವಾರು ೧೦.೬೭% ಆಗಿದೆ. ಪದವಿ ಶಿಕ್ಷಣ ಪಡೆದ ತಿಳುವಳಿಕೆದಾರರ ಸಂಖ್ಯೆ ೭ ಆಗಿದ್ದು, ಶೇಕಡವಾರು ಮಾಹಿತಿ ೦೪.೬೭% ಡಿಪ್ಲೋಮಾ / ವೃತ್ತಿಶಿಕ್ಷಣ ಪಡೆದಿರುವ ತಿಳುವಳಿಕೆದಾರರ ಸಂಖ್ಯೆ ೫, ಶೇಕಡವಾರು ಮಾಹಿತಿ ೦೩.೩೩% ಆಗಿದೆ. ವೈದ್ಯಕೀಯ ಹಾಗೂ ಇಂಜಿನಿಯರಿಂಗ್ ಶೈಕ್ಷಣಿಕ ಮಟ್ಟ ಮರಾಟಿ ನಾಯ್ಕ ಸಮುದಾಯದಲ್ಲಿ ಯಾವುದೇ ತಿಳುವಳಿಕೆದಾರರ ಸಂಖ್ಯೆ ಇರುವುದಿಲ್ಲ. ಸ್ನಾತಕೋತ್ತರ ಮಾಹಿತಿದಾರರ ಸಂಖ್ಯೆ ೨ ಆಗಿದ್ದು ಶೇಕಡವಾರು ಮಾಹಿತಿ ೦೧.೩೩% ಆಗಿದೆ. ಅದರಂತೆ ಶಿಕ್ಷಕ ಶಿಕ್ಷಣ ಪದವಿ ಪಡೆದಿರುವ ತಿಳುವಳಿಕೆದಾರರ ಸಂಖ್ಯೆ ೧ ಆಗಿದ್ದು, ಶೇಕಡವಾರು ೦.೬೭% ಲಭ್ಯವಿರುತ್ತದೆ.

ಮರಾಟಿ ಸಮುದಾಯದಲ್ಲಿ ಅನಕ್ಷರತೆ ತಿಳುವಳಿಕೆದಾರರ ಸಂಖ್ಯೆ ೧೩ ಆಗಿದ್ದು, ಶೇಕಡವಾರು ೦೮.೬೭% ಆಗಿವೆ. ಹಾಗೆ ಪ್ರಾಥಮಿಕ ತಿಳುವಳಿಕೆದಾರರ ಸಂಖ್ಯೆ ೬೭ ಆಗಿದ್ದು, ಶೇಕಡವಾರು ೪೪.೬೭%, ಪ್ರೌಢಶಾಲಾ ತಿಳುವಳಿಕೆದಾರರ ಸಂಖ್ಯೆ ೩೬ ಆಗಿದ್ದು, ಶೇಕಡವಾರು ೨೪%, ಪದವಿ ಪೂರ್ವ ತಿಳುವಳಿಕೆದಾರರ ಸಂಖ್ಯೆ ೧೭ ಆಗಿದ್ದು, ಶೇಕಡವಾರು ೧೧.೩೩% ಆಗಿದೆ. ಪದವಿ ತಿಳುವಳಿಕೆದಾರರ ಸಂಖ್ಯೆ ೮ ಆಗಿದ್ದು, ಶೇಕಡವಾರು ೦೫.೩೩% ಆಗಿದೆ. ಡಿಪ್ಲೋಮಾ / ವೃತ್ತಿಶಿಕ್ಷಣ ತಿಳುವಳಿಕೆದಾರರ ಸಂಖ್ಯೆ ೪ ಆಗಿದ್ದು, ಶೇಕಡವಾರು ೦೨.೬೭% ಆಗಿದೆ. ಮರಾಟಿ ಸಮುದಾಯದ ವೈದ್ಯಕೀಯ ಶಿಕ್ಷಣ ಮಟ್ಟದ ಯಾವುದೇ ಮಾಹಿತಿಯು ಲಭ್ಯವಿರುದಿಲ್ಲ. ಇಂಜಿನಿಯರಿಂಗ್ ಪದವಿದರರ ಸಂಖ್ಯೆ ೧ ಆಗಿದ್ದು, ಶೇಕಡವಾರು ೦.೬೭% ಆಗಿದೆ. ಸ್ನಾತಕೋತ್ತರ ಮಾಹಿತಿದಾರರ ಸಂಖ್ಯೆ ೧ ಆಗಿದ್ದು, ಶೇಕಡವಾರು ೦.೬೬% ಆಗಿದೆ. ಶಿಕ್ಷಕ ತಿಳುವಳಿಕೆದಾರರ ಸಂಖ್ಯೆ ೩ ಆಗಿದ್ದು, ಶೇಕಡವಾರು ೦೨.೦೦% ಆಗಿದೆ.

೧.೬. ಅಧ್ಯಯನದ ಸ್ವರೂಪ

ಪ್ರಸ್ತುತ ಪ್ರಬಂಧವನ್ನು ಒಟ್ಟು ಏಳು ಅಧ್ಯಾಯಗಳಲ್ಲಿ ವಿಂಗಡಿಸಿಕೊಂಡು ಈ ಕೆಳಗಿನಂತೆ ಅಧ್ಯಯನಕ್ಕೆ ಒಳಪಡಿಸಲಾಗಿದೆ.

ಅಧ್ಯಾಯ ಒಂದು: ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ಮಹತ್ವ: ಈ ಅಧ್ಯಾಯದಲ್ಲಿ ಅಧ್ಯಯನದ ಉದ್ದೇಶಗಳು, ಅಧ್ಯಯನದ ವ್ಯಾಪ್ತಿ, ಅಧ್ಯಯನದ ಮಹತ್ವ, ಅಧ್ಯಯನದ ವಿಧಾನಗಳಲ್ಲಿ, ಪ್ರಶ್ನಾವಳಿ ವಿಧಾನ, ಸಂದರ್ಶನ ವಿಧಾನ, ಅವಲೋಕನ ವಿಧಾನ, ಅಧ್ಯಯನದ ಮಾದರಿ ನಮೂನೆ, ಸಹಭಾಗಿತ್ವ ವಿಧಾನ, ಗುಂಪು ಚರ್ಚೆ, ವ್ಯಕ್ತಿ ಅಧ್ಯಯನ (ಏಕ ವಿಷಯ ಅಧ್ಯಯನ), ಪ್ರಾಥಮಿಕ ಮಾಹಿತಿಯ ಮೂಲಗಳು, ಅನುಷಂಗಿಕ (Secondary Sources of data) ಮಾಹಿತಿಗಳ ಮೂಲ, ಅಧ್ಯಯನದ ಸ್ವರೂಪ ಹಾಗೂ ಇಲ್ಲಿಯವರೆಗೆ ನಡೆದ ಅಧ್ಯಯನಗಳ ಸಮೀಕ್ಷೆ ನೀಡಲಾಗಿದೆ.

ಅಧ್ಯಾಯ ಎರಡು: ಕರಾವಳಿ ಕರ್ನಾಟಕದ ಮರಾಟಿ ಸಮುದಾಯಗಳು: ಈ ಅಧ್ಯಾಯದಲ್ಲಿ ತುಳುನಾಡಿನ ಚರಿತ್ರೆ, ಬದಲಾಗುತ್ತಿರುವ ಬುಡಕಟ್ಟುಗಳ ಪರಿಕಲ್ಪನೆ, ಸಂವಿಧಾನ ಬದ್ಧವಾಗಿ ಪರಿಶಿಷ್ಟ ಪಂಗಡದಲ್ಲಿ ಸೇರಿರುವ ಬುಡಕಟ್ಟುಗಳು, ಕರಾವಳಿ ಕರ್ನಾಟಕದ ಮರಾಟಿ ಸಮುದಾಯಗಳಾದ ಮರಾಠ, ಮರಾಟಿ, ಕುಂಬ್ರಿ ಮರಾಠಿ, ಮರಾಟಿ ನಾಯ್ಕ, ಕುಣುಬಿ, ಕುಡುಬಿ ಹಾಗೂ ಆರ್ಯ ಮರಾಠ ಸಮುದಾಯಗಳ ಮಾಹಿತಿ ನೀಡಲಾಗಿದೆ.

ಅಧ್ಯಾಯ ಮೂರು: ಮರಾಟಿ ಸಮುದಾಯಗಳ ಜೀವನಾವರ್ತಕ ಮತ್ತು ವಾರ್ಷಿಕಾವರ್ತನ ಆಚರಣೆಗಳ ತೌಲನಿಕ ಅಧ್ಯಯನ: ಈ ಅಧ್ಯಾಯದಲ್ಲಿ ಮರಾಟಿ ಸಮುದಾಯಗಳ ಸಂಸ್ಕಾರಗಳಾದ ಹುಟ್ಟು, ಅಮೆ ಮುಚ್ಚುವುದು, ಬಾಣಂತಿ ಔಷಧಗಳು ಮಗುವಿಗೆ ಮಾಡುವ ಏಳಿರುಳು ಶಾಸ್ತ್ರ, ನಾಮಕರಣ, ಅನ್ನಪ್ರಾಶನ, ಕಿವಿಚುಚ್ಚುವುದು, ಚೌಲ ಸಂಸ್ಕಾರ, ವಿದ್ಯಾರಾಂಭ, ಋತುಮತಿ, ಮರಾಟಿ ಮತ್ತು ಮರಾಟಿ ನಾಯ್ಕ ಸಮುದಾಯದ ವಿವಾಹ ಪದ್ಧತಿ, ವಿವಾಹದ ವಿಧಿ ವಿಧಾನಗಳು, ಮದುವೆಯ ಪೂರ್ವದ ಕಾರ್ಯಕ್ರಮಗಳು, ವದು ವರರ ಕುಲ–ಬಳಿಗಳ ಆಯ್ಕೆ, ಹೆಣ್ಣು ನೋಡುವುದು, ಹೆಣ್ಣಿನ ನಿಶ್ಚಿತಾರ್ಥ, ಗಂಡಿನ ನಿಶ್ಚಿತಾರ್ಥ, ಆಮಂತ್ರಣ ಪತ್ರಿಕೆ, ಮದುವೆ ಆಚರಣೆಗಳಲ್ಲಿ ಚಪ್ಪರ ಹಾಕುವುದು, ಮದುವೆಯ ಹಿಂದಿನ ದಿನದ ಆಚರಣೆಗಳು, ಧಾರೆ ಕಂಬ ಸ್ಥಾಪನೆ, ಗಣಪತಿ ಆರಾಧನೆ ಮತ್ತು ದೇವರ ಊಟ, ಭತ್ತ ಕುಟ್ಟುವುದು, ದೇವರು ಇಡುವುದು ಅಥವಾ ಕುಲದೇವರನ್ನು ತರುವುದು, ಅರಿಶಿನೆಣ್ಣೆ ಏರಿಸುವುದು, ಕಲಶ ಸ್ನಾನ ಮತ್ತು ಮದರಂಗಿ ಆಚರಣೆ, ಮದುವೆ ದಿನದ ಆಚರಣೆಗಳು, ಕೂಡುವಿಕೆ ಅಥವಾ ದಿಬ್ಬಣ ಹೊರಡುವಿಕೆ, ಗ್ರಹ ಪೂಜೆ (ಗಿರೆ / ಗೆರೆ ಪೂಜೆ), ಧಾರೆ ಸೀರೆ ಕೊಡುವುದು, ಮಾಂಗಲ್ಯಧಾರಣೆ ನಡೆಯುವ ಸಂದರ್ಭದ ವಿಧಿ ವಿಧಾನಗಳು, ಮಾಂಗಲ್ಯಧಾರಣೆಯ ನಂತರದ ಕಾರ್ಯಕ್ರಮಗಳು, ವಧುವಿಗೆ ಮಡಿಲು ತುಂಬಿಸಿ ಹೋಮ ಆಚರಣೆ, ದೇಸೆ ಮತ್ತು ಕಂಚಿ ಇಡುವ ಕಾರ್ಯಕ್ರಮ, ಹೆಣ್ಣು ಇಳಿಸಿ ಕೊಡುವ ಆಚರಣೆ, ಮದುವೆಯ ನಂತರದ ದಿನಗಳಲ್ಲಿ ನಡೆಯುವ ಆಚರಣೆಗಳು, ವಿನೋದಾಚರಣೆಗಳು, ಮಾಮಿ ಸಂಮಾನ (ಅತ್ತೆ ಸಮ್ಮಾನ), ಉಡುಪಿ ಜಿಲ್ಲೆಯ ಮರಾಟಿ ಸಮುದಾಯದ ವಿವಾಹ, ನಿಶ್ಚಿತಾರ್ಥ, ನಾಂದಿ ಕಟ್ಟುವ ಪದ್ಧತಿ, ದೇವಕಾರ್ಯ ಮತ್ತು ಅರಿಶಿಣ ಎಣ್ಣೆ ಹಚ್ಚುವ ಕಾರ್ಯಕ್ರಮ, ದಿಬ್ಬಣ ಹೊರಡುವುದು, ಮರಾಟಿಗರಲ್ಲಿ ಪುರುಷರಿಗೆ ಮರು ಮದುವೆ, ಬಾಳೆ ಮದುವೆ, ತಿಳುವಳಿಕೆದಾರರ ವೈವಾಹಿಕ ಸ್ಥಾನಮಾನ, ಗುರಿಕಾರ ಪದ್ಧತಿ, ವರದಕ್ಷಿಣೆ, ವಿಧವಾ ವಿವಾಹ, ವಿವಾಹ ನಿಷೇಧಗಳು, ಮರಾಟಿಗರ ಮದುವೆ ಆಚರಣೆಯಲ್ಲಿ ಗಮನಿಸಿಬಹುದಾದ ಅಂಶಗಳು, ಮದುವೆ ಆಚರಣೆಯ ತಾತ್ವಿಕ ದೃಷ್ಟಿಕೋನ, ಸೀಮಂತ ಕಾರ್ಯ, ಗರ್ಭಿಣಿಯ ಶೃಂಗಾರ, ಮಡಿಲು ತುಂಬುವ ಆಚರಣೆ, ಮರಾಟಿ ಸಮುದಾಯದವರಲ್ಲಿ ಅಂತ್ಯ ಸಂಸ್ಕಾರದ ಆಚರಣೆಗಳು, ಮರಾಟಿ ಮತ್ತು ಮರಾಟಿ ನಾಯ್ಕ ಸಮುದಾಯಗಳಲ್ಲಿರುವ ಗಾದೆಗಳು, ಪ್ರಾಣಿ, ಪಕ್ಷಿ, ಗಿಡ ಮರಗಳಿಗೆ ಸಂಬಂಧಿತ ಹಾಗೂ ಸ್ತ್ರೀಯರಿಗೆ ಸಂಬಂಧಿಸಿದ ನಂಬಿಕೆ ನಿಷೇಧಗಳನ್ನು ಕುರಿತು ವಿವರಿಸಲಾಗಿದೆ.

ಮರಾಟಿ ಮತ್ತು ಮರಾಟಿ ನಾಯ್ಕ ಸಮುದಾಯದ ವಾರ್ಷಿಕಾವರ್ತನಾ ಆಚರಣೆಗಳಲ್ಲಿ, ಪತ್ತನಾಜೆ, ಆಟಿದ ಅಮವಾಸ್ಯೆ (ಕರ್ಕಾಟಕ ಅಮವಾಸ್ಯೆ), ನಾಗರ ಪಂಚಮಿ, ಸೋಣ ಸಂಕ್ರಮಣ (ಸಿಂಹ ಸಂಕ್ರಮಣ), ಪುದ್ದಾರ್ (ಮರಾಟಿಗರು ಆಚರಿಸುತ್ತಿರುವ 'ಹೊಸ್ತು' ಅಥವಾ 'ಪುದ್ದಾರ್'), ಶ್ರೀಕೃಷ್ಣ ಜನ್ಮಾಷ್ಟಮಿ, ಶ್ರೀ ಗಣೇಶ ಚತುರ್ಥಿ, ತುಲಾ ಸಂಕ್ರಮಣ (ಕಾವೇರಿ ಸಂಕ್ರಾಂತಿ), ದಸರಾ, ದೀಪಾವಳಿ (ಬಲೀಂದ್ರ ಆರಾಧನೆ), ಪಂಚಮಿ ವ್ರತ (ಸುಬ್ರಮಣ್ಯ ಷಷ್ಠಿ), ಕೆಡ್ಡಸ, ಶಿವರಾತ್ರಿ ಮತ್ತು ಯುಗಾದಿಗೆ ಸಂಬಂಧಿಸಿದ ಆಚರಣೆಗಳನ್ನು ವಿಶ್ಲೇಷಿಸಲಾಗಿದೆ.

ಅಧ್ಯಾಯ ನಾಲ್ಕು: ಮರಾಟಿ ಸಮುದಾಯಗಳಲ್ಲಿ ಕುಲಬಳಿ ಪದ್ಧತಿ: ಈ ಅಧ್ಯಾಯದಲ್ಲಿ, ಬಳಿ (ಬರಿ), ಬೆಡಗು, ಗೋತ್ರ (ಕುಲ, ವಂಶ ಪರಿಕಲ್ಪನೆಗಳ ಅರ್ಥ), ಬರಿ / ಬಳಿ ಪದದ ಅರ್ಥ, ಬೆಡಗು, ಗೋತ್ರ, ಮರಾಟಿ ಸಮುದಾಯಗಳ ಬಳಿಗಳ ಸ್ವರೂಪ, ಕುಡುಬಿಯರ ಬಳಿಗಳು, ಮರಾಟಿ ನಾಯ್ಕರ ಬಳಿಗಳು, ಕುಂಬ್ರಿ ಮರಾಠಿಗರ ಬಳಿಗಳು, ಅಧ್ಯಯನಕ್ಕೊಳಪಡಿಸಿರುವ ಮರಾಟಿ ನಾಯ್ಕ, ಮರಾಟಿ, ಸಮುದಾಯದ ಬಳಿಗಳ ವಿವರ, ಬಳಿಗಳ ವೈಶಿಷ್ಟತೆ ಹಾಗೂ ತಾತ್ವಿಕತೆ, ಪ್ರಾಣಿ ಪಕ್ಷಿಗಳಿಗೆ ಹೊಂದಿಕೊಂಡು ಬಂದಿರುವ ಬಳಿಗಳು, ಮರ–ಗಿಡಗಳಿಗೆ ಸಂಬಂಧಿಸಿರುವ ಬಳಿಗಳು, ನಿರ್ಜೀವ ವಸ್ತುಗಳ ಮೂಲದಿಂದ ಬಂದಿರುವ ಬಳಿಗಳು, ಮನೆತನಗಳಿಗೆ ಸಂಬಂಧಿಸಿರುವ ಬಳಿಗಳು, ಬಳಿಗಳು ಮತ್ತು ದೇವ ದೇವತೆಗಳು, ದೇವಸ್ಥಾನಗಳಿಗೆ ಸಂಬಂಧಿತ ಬಳಿಗಳು ಹಾಗೂ ಬಳಿಗಳಿಗೆ ಸಂಬಂಧಿಸಿದ ನಿಷೇದ ಮತ್ತು ನಂಬಿಕೆಗಳನ್ನು ಕುರಿತು ವಿಶ್ಲೇಸಿಸಲಾಗಿದೆ.

ಅಧ್ಯಾಯ ಐದು: ಮರಾಟಿ ನಾಯ್ಕ ಮತ್ತು ಮರಾಟಿ ಸಮುದಾಯದ ಆರ್ಥಿಕ ಮತ್ತು ಶೈಕ್ಷಣಿಕ ಸ್ಥಿತಿಗಳ ತೌಲನಿಕ ಅಧ್ಯಯನ: ಈ ಅಧ್ಯಾಯದಲ್ಲಿ ಮರಾಟಿಗರ ಕೃಷಿ, ಮರಾಟಿಗರು ಬೆಳೆಯುವ ಬೆಳೆಗಳು, ಮರಾಟಿಗರ ಕಸುಬುಗಳು, ಮರಾಟಿಗರ ಮನೆಯ ಸ್ವರೂಪ ಮತ್ತು ಒಡೆತನ ಮತ್ತು ಮರಾಟಿಗರ ಶೈಕ್ಷಣಿಕ ಸ್ಥಿತಿ–ಗತಿಗಳ ತೌಲನಿಕ ಅಧ್ಯಯನ ಮಾಡಲಾಗಿದೆ.

ಅಧ್ಯಾಯ ಆರು: ಮರಾಟಿ ಸಮುದಾಯಗಳಲ್ಲಿ ದೈವಾರಾಧನೆ ತೌಲನಿಕ ಅಧ್ಯಯನ ಈ ಅಧ್ಯಾಯದಲ್ಲಿ ಮರಾಟಿ ಸಮುದಾಯಗಳ ಧಾರ್ಮಿಕ ಮತ್ತು ಸಾಂಸ್ಕೃತಿಕ ಆಚರಣೆಗಳ ತೌಲನಿಕತೆ, ಮರಾಟಿ ಮತ್ತು ಮರಾಟಿ ನಾಯ್ಕ ಸಮುದಾಯಗಳು ಆಚರಿಸುವ ಭೂತಾರಾಧನೆಯಲ್ಲಿ ಕಲುಡ್ಕ – ಕಲ್ಲುರ್ಟಿ, ಪಂಜುರ್ಲಿ (ವರ್ತೆ ಪಂಜುರ್ಲಿ), ಮಾಸ್ತಿಯಮ್ಮ, ಸ್ವಾಮಿ ಆರಾಧನೆ, ಗುಳಿಗ, ಹ್ಯಾಗುಳಿ, ಪಿಲಿಚಾಮುಂಡಿ, ಬೊಬ್ಬರ್ಯ, ಜುಮಾದಿ / ಧೂಮಾವತಿ ದೈವ ಆಚರಣೆಗಳನ್ನು ವಿವರಿಸಲಾಗಿದೆ. ಮರಾಟಿಗರ ಭೂತರಾಧನೆಯ ಪ್ರಕಾರಗಳಲ್ಲಿ ಕೋಲ, ನೇಮ, ಕೆಂಡ ಸೇವೆ, ಮತ್ತು ಜಕಣಿ ಆರಾಧನೆಯ ಸ್ವರೂಪವನ್ನು ತಿಳಿಸಲಾಗಿದೆ. ಭೂತಾರಾಧನೆಯಲ್ಲಿನ ಸಾಮಾಜಿಕ ಅಂಶಗಳು, ನಾಗಪೂಜೆ, ನಾಗಾರಾಧನೆಯ ಪ್ರಾಚೀನತೆ, ಮರಾಟಿ ಸಮುದಾಯಗಳ ನಾಗ ಬ್ರಹ್ಮಸ್ಥಾನದಲ್ಲಿರುವ ಪರಿವಾರ ದೈವಗಳು ಮತ್ತು ಆರಾಧನೆಗಳಲ್ಲಿ ರಕ್ತೇಶ್ವರಿ ಮತ್ತು ಯಕ್ಷಿಯ ಆರಾಧನೆ ಕುರಿತು ವಿಶ್ಲೇಷಿಸಲಾಗಿದೆ. ಮರಾಟಿ ಸಮುದಾಯಗಳ ನಾಗ ಸಂಬಂಧಿತ ನಂಬಿಕೆಗಳು, ಗೊಂದೋಳು, ಗೊಂದೋಳು ಪೂಜಾಕ್ರಮ, ಇತರ ಸಮುದಾಯಗಳಲ್ಲಿ ಗೊಂದೋಳು ಪೂಜೆ, ಭೈರವ ಆರಾಧನೆ, ಭೂತಾರಾಧನೆಯ ರೂಪದಲ್ಲಿ ಭೈರವನ ಆರಾಧನೆ, ಮರಾಟಿಗರಲ್ಲಿ ಭೈರವ ಪೂಜೆ, ಭೈರವನ ಪೂಜಾ ಸಂದರ್ಭದ ವಿಧಿ ನಿಷೇದಗಳು, ಭೈರವ ಮತ್ತು ಮಹಮ್ಮಾಯಿಯ ಆರಾಧನೆಗೆ ಸಂಬಂಧಿಸಿದ ಕಥೆಗಳು, ತಿರುಪತಿ ತಿಮ್ಮಪ್ಪನಿಗೆ ಮುಡಿಪು ಸೇವೆ ಮತ್ತು ಪಾನಕ ಪೂಜೆ, ಪಾನಕ ಪೂಜೆ ಹಾಗೂ ಮುಡಿಪು ಸೇವೆ ಮಾಡುವ ವಿಧಾನ, ಮರಾಟಿ ಸಮುದಾಯದಲ್ಲಿ ಕುಲೆ ಆರಾಧನೆ ಮತ್ತು ಪ್ರೇತ ಮದುವೆ, ಕುಲೆ ಮದ್ಮೆ (ಸತ್ತವರಿಗೆ ಮದುವೆ), ಮರಾಟಿಗರಲ್ಲಿ ಬಲಿ ಆಚರಣೆ, ಮರಾಟಿಗರ ಹೋಳಿ ಹುಣ್ಣಿಮೆ, ಮರಾಟಿ ಸಮುದಾಯಗಳಲ್ಲಿ ಹರಕೆ ಮತ್ತು ವಾರ, ಪಕ್ಷ, ನಕ್ಷತ್ರಗಳ ಸಂದರ್ಭದಲ್ಲಿ ಇರುವ ನಂಬಿಕೆ ಮತ್ತು ನಿಷೇಧಗಳನ್ನು ಕುರಿತು ಚರ್ಚಿಸಲಾಗಿದೆ

ಅಧ್ಯಾಯ ಏಳು: ಸಮಾರೋಪದಲ್ಲಿ ಅಧ್ಯಯನದ ಫಲಿತಗಳು, ಸಲಹೆಗಳನ್ನು ನೀಡಲಾಗಿದೆ.

ಅಧ್ಯಯನಕ್ಕೆ ಬಳಸಿಕೊಂಡ ಆಕರ ಗ್ರಂಥಗಳ ಸೂಚಿ, ಅನುಬಂಧಗಳಲ್ಲಿ ಈ ಅಧ್ಯಯನಕ್ಕೆ ಒಳಪಡಿಸಿದ ತಿಳುವಳಿಕೆದಾರರ ಮಾಹಿತಿ, ಮರಾಟಿ ಸಮುದಾಯದವರು ಹಾಡಿದ ಸೋಬಾನೆ, ಹೋಳಿ ಮತ್ತು ಕೈಯೆತಿ ಕೊಡುವ ಹಾಡುಗಳು, ಅಧ್ಯಯನಕ್ಕೆ ಬಳಸಿದ ಪ್ರಶ್ನಾವಳಿ ಮತ್ತು ಅಧ್ಯಯನಕ್ಕೆ ಪೂರಕವಾದ ಛಾಯಾಚಿತ್ರಗಳನ್ನು ನೀಡಲಾಗಿದೆ.

ಸಮಾಜಶಾಸ್ತ್ರೀಯ ಹಿನ್ನೆಲೆ

ಪ್ರಸ್ತುತ ಅಧ್ಯಯನವು ತೌಲನಿಕ ಸಮಾಜಶಾಸ್ತ್ರದ ವ್ಯಾಪ್ತಿಯಲ್ಲಿ ಬರುವಂತಹ ಒಂದು ಅಧ್ಯಯನವಾಗಿದೆ. ಸಮುದಾಯಗಳ ಬಗೆಗಿನ ಗ್ರಹಿಕೆ ಒಂದು ವಿಧದ ಮಿತಿಯನ್ನು ಒಳಗೊಂಡಿದ್ದರೆ ಅಂತಹ ಸಂದರ್ಭದಲ್ಲಿ ಈ ವಿಧಾನವನ್ನು ಅಳವಡಿಸಿಕೊಂಡು ಅಧ್ಯಯನ ಮಾಡಬಹುದಾಗಿದೆ. ತೌಲನಿಕ ಸಮಾಜಶಾಸ್ತ್ರವು ಯಾವುದೇ ಎರಡು ಅಥವಾ ಹಲವು ಸಂಗತಿಗಳ ನಡುವಿನ ಸಾದೃಶ್ಯ ಮತ್ತು ವ್ಯತ್ಯಯಗಳನ್ನು ಪರೀಕ್ಷೆಗೊಳಪಡಿಸಿ ಅಭ್ಯಸಿಸುವುದಾಗಿದೆ. ಇದು ಮೊದಲಿಗೆ ಸಾಮಾಜಿಕ ಸಂಗತಿಗಳ ವಿಧ ಮತ್ತು ವರ್ಗೀಕರಣಗಳನ್ನು ಸಂಸ್ಥಾಪಿಸುತ್ತದೆ. ಮತ್ತು ಎರಡನೆಯದಾಗಿ ಸಂಗತಿಗಳ ತಾತ್ಕಾಲಿಕ ಕ್ರಮಾನುಗತತೆ ಹಾಗೂ ಅನುಭವ ಜನ್ಯ ಸಾಂಘಿಕತೆಯನ್ನು ಪ್ರಾಕ್‌ಕಲ್ಪನೆಗಳ ಮೂಲಕ ಪರೀಕ್ಷಿಸುವುದಾಗಿದೆ. ಈ ಉದ್ದೇಶಗಳೊಂದಿಗೆ ಸಾಮಾಜಿಕ ವಿದ್ಯಮಾನ ಅಥವಾ ಸಂಗತಿಗಳ ನಡುವಿನ ಅಂತರ್‌-ಸಾಂಸ್ಕೃತಿಕ ಮತ್ತು ಅಂತರ್‌-ಸಾಮಾಜಿಕ ಹೋಲಿಕೆ ಮತ್ತು ವ್ಯತ್ಯಾಸಗಳನ್ನು ಅಭ್ಯಸಿಸಬಹುದಾಗಿದೆ. ಹೀಗಾಗಿ ತೌಲನಿಕ ಸಮಾಜಸಾಸ್ತ್ರ ಮತ್ತು ಅದರೊಳಗಿನ ತೌಲನಿಕ ಅಧ್ಯಯನದಲ್ಲಿ ಕಠಿಣ ಪ್ರಾಯೋಗಿಕತೆ ಎಂಬುದು ಇರುವುದಿಲ್ಲ. ಇದು ಒಮ್ಮೊಮ್ಮೆ 'ಅರೆ ಪ್ರಾಯೋಗಿಕ ವಿಧಾನ'ವೂ (Quasi-experimental Method) ಆಗಿದೆ.

ತೌಲನಿಕ ವಿಧಾನದ ಆರಂಭವನ್ನು ಜೆ.ಎಸ್.ಮಿಲ್‌ನ ಬರವಣಿಗೆಯಲ್ಲಿ ಗುರುತಿಸಲಾಗುತ್ತದೆ. ಮಿಲ್‌ನ ವಿಧಾನವನ್ನು ಮುಂದೆ ಎಮಿಲಿ ಡರ್ಖೀಂನ 'ಸ್ಯೂಸೈಡ್' (೧೮೯೭) ಮತ್ತು ಮ್ಯಾಕ್ಸ್ ವೇಬರ್‌ನ 'ಪ್ರಾಟೆಸ್ಟೆಂಟ್ ಎಥಿಕ್ಸ್ ಮತ್ತು ಸ್ಪಿರಿಟ್ ಆಫ್ ಕ್ಯಾಪಿಟಾಲಿಸಂ' (೧೯೦೪-೦೫) ನಲ್ಲಿ ಗುರುತಿಸಲಾಗುತ್ತದೆ. ಇಂತಹ ಸೈದ್ಧಾಂತಿಕ ಅನುಸಂಧಾನವು ಮುಂದೆ ಅಂಕಿ ಅಂಶಾತ್ಮಕ ವಿಶ್ಲೇಷಣೆಗೆ ದಾರಿ ಮಾಡಿಕೊಟ್ಟಿದೆ. ವಾಸ್ತವವಾಗಿ ಅಂಕಿ ಅಂಶಗಳು ಹೋಲಿಕೆ ಮತ್ತು ಭಿನ್ನತೆಗಳನ್ನು ಕಣ್ಣಿಗೆ ರಾಚುವಂತೆ ತೋರಿಸಿಕೊಡುತ್ತವೆ. ಇದು ಮನಸ್ಸನ್ನು ಕೂಡಲೇ ತಟ್ಟುವ ಪರಿಣಾಮಕಾರಿ ವಿಧಾನ. 'ಸ್ಥಿರಾಂಶ' (Constant) ಗಳನ್ನು ಸ್ಥಾಪಿಸಲು ಅಸಾಧ್ಯವಾದಾಗ 'ಸ್ವತಂತ್ರ' (Independent) 'ಅಸ್ಥಿರಾಂಶ' (Variable) ಗಳನ್ನು ರೂಪಿಸಿಕೊಂಡು ಅಧ್ಯಯನವನ್ನು ನಡೆಸುವುದು ಸೂಕ್ತವಾಗುತ್ತದೆ. ಇಂತಹ ಸಂದರ್ಭಗಳಲ್ಲಿಯೇ 'ತೌಲನಿಕ ವಿಧಾನ'ವು ಸಮರ್ಪಕ ವಿಧಾನವಾಗಿ ಹೊರಹೊಮ್ಮುತ್ತದೆ.

ತೌಲನಿಕ ವಿಧಾನವನ್ನು ಆರಂಭಿಕ ವಿಕಾಸವಾದಿ ಸಮಾಜಶಾಸ್ತ್ರಜ್ಞರ ಸಾಂಸ್ಕೃತಿಕ ಭೇದ ವಿಶ್ಲೇಷಣೆಯ ಬರವಣಿಗೆಗಳಲ್ಲಿ ಗುರುತಿಸಲಾಗುತ್ತದೆ. ಇವರು ಹೋಲಿಕೆ ಮತ್ತು ವ್ಯತ್ಯಯಗಳ ನಿರ್ಣಯಗಳನ್ನು ಸಂದರ್ಭಾತೀತವಾಗಿ ನೀಡುವರೆಂಬ ಅಪವಾದವನ್ನು ಹೊತ್ತಿದ್ದಾರೆ. ಇಂತಹ ಒಂದು ಸೈದ್ಧಾಂತಿಕ ಹಿನ್ನೆಲೆಯಲ್ಲಿ ಪ್ರಸ್ತುತ ಅಧ್ಯಯನವಾದ 'ಮರಾಟಿ ಸಮುದಾಯಗಳ ತೌಲನಿಕ ಅಧ್ಯಯನ ನಡೆಸಲಾಗಿದೆ. ಕ್ಷೇತ್ರಕಾರ್ಯದ ಮೂಲಕ ಕಂಡುಬಂದಿರುವ ಮರಾಟಿ ಸಮುದಾಯಗಳನ್ನು ಹೋಲಿಕೆ ಮಾಡಿ ವ್ಯತ್ಯಯಗಳನ್ನು ಪರಿಗ್ರಹಿಸಲಾಗಿದೆ. ಇಂತಹ ಅಧ್ಯಯನವು ಸಮುದಾಯಗಳ ಅಂತರಂಗವನ್ನು ಚೆನ್ನಾಗಿ ಅರ್ಥ ಮಾಡಿಕೊಳ್ಳಲು ಸಹಕಾರಿಯಾಗುವುದರೊಂದಿಗೆ ಸಮುದಾಯದ ಬಗೆಗಿನ ಜ್ಞಾನವನ್ನು ಹೆಚ್ಚಿಸುವುದು.

೧.೭. ಇಲ್ಲಿಯವರೆಗೆ ನಡೆದ ಅಧ್ಯಯನಗಳ ಸಮೀಕ್ಷೆ

• ***ಡಾ.ಕೆ. ಸುಂದರ ನಾಯಕ್, "ಕರಾವಳಿ ಕರ್ನಾಟಕ ಮರಾಟಿ ಜನಾಂಗ ಪರಂಪರೆ ಮತ್ತು ಆಧುನಿಕತೆ", (೨೦೦೮)*** ಮರಾಟಿ ಜನಾಂಗದ ಸಾಮಾಜಿಕ ಜೀವನ ವ್ಯವಸ್ಥೆ, ಧಾರ್ಮಿಕ ಆಚರಣೆಗಳನ್ನು, ಅವರ ಜಾನಪದ ಮತ್ತು ಸಂಸ್ಕೃತಿ ಮುಂತಾದ ಮುಖಗಳನ್ನು ಅಧ್ಯಯನ ಮಾಡಿರುತ್ತಾರೆ. ಮರಾಟಿ ಜನಾಂಗವು ತನ್ನ ಪಾರಂಪರಿಕ ಬದುಕಿನಿಂದ ಆಧುನಿಕತೆಗೆ ಪ್ರವೇಶಿಸುವಾಗ ಉಂಟಾಗಬಹುದಾದ

ಬದಲಾವಣೆಗಳನ್ನು ಮತ್ತು ಆ ಸಮುದಾಯ ಎದುರಿಸುತ್ತಿರುವ ತವಕ ತಲ್ಲಣಗಳನ್ನು ಸಮುದಾಯದ ಒಳಗಿನವರಾಗಿ ವಿಶ್ಲೇಷಿಸಿದ್ದಾರೆ. ಅಲ್ಲದೆ, ಅವರದ್ದೆಯಾದ "ಮರಾಟಿ ಜನಾಂಗದ ಶೈಕ್ಷಣಿಕ, ಸಾಂಸ್ಕೃತಿಕ, ಭಾಷಿಕ, ಮತ್ತು ತಾತ್ವಿಕ ಪರಿವರ್ತನೆಗಳು". ಎಂಬ ಲೇಖನದಲ್ಲಿ ಮರಾಟಿ ಸಮುದಾಯದವರ ಶಿಕ್ಷಣ, ಆರ್ಥಿಕ, ಸಾಂಸ್ಕೃತಿಕ, ಭಾಷಿಕ, ಸಾಮಾಜಿಕ ಕ್ಷೇತ್ರಗಳಲ್ಲಾಗಿರುವ ಬದಲಾವಣೆಗಳನ್ನು ಸ್ಥೂಲವಾಗಿ ವಿವರಿಸಿರುತ್ತಾರೆ. ಅವರದ್ದೇಯಾದ ಮತ್ತೊಂದು ಲೇಖನದಲ್ಲಿ "ಮರಾಟಿ ಜನಾಂಗದ ಜನಪದ ಕಲೆಗಳು" ಮರಾಟಿ ಸಮುದಾಯದಲ್ಲಿ ಕಂಡುಬರುವ ಜನಪದ ಆಟಗಳನ್ನು ಪರಿಚಯಿಸಿ ವಿಶ್ಲೇಷಿಸಿದ್ದಾರೆ.

• ***ಡಾ. ಎಂ.ಎಂ. ಕಲ್ಬುರ್ಗಿ, (ಸಂ)ಕರ್ನಾಟಕದ ಕೈಪಿಯತ್ತುಗಳು*** ಎಂಬ ಕೃತಿಯಲ್ಲಿ ಮರಾಟಿ ಸಮುದಾಯದವರನ್ನು ಕರ್ನಾಟಕದಲ್ಲಿ ಇವರಿಗೆ "ಆರೇರು" ಎಂಬುದಾಗಿ ಕರೆಯುತ್ತಾರೆ. ಮಹಾರಾಷ್ಟ್ರದಲ್ಲಿ 'ಮರಾಠರು' ಎಂದು ಕರೆಯುತ್ತಾರೆ. ಇವರ ಸಮುದಾಯದಲ್ಲಿರುವ ಕೆಲವು ಉಪನಾಮಗಳ ಹೆಸರು ಹಾಗೂ ಆ ಸಮುದಾಯದವರು ಯಾವ ಯಾವ ದೇವರುಗಳಿಗೆ ನಡೆದುಕೊಳ್ಳುತ್ತಾರೆ ಎಂಬುದನ್ನು ತಿಳಿಸಿರುತ್ತಾರೆ.

• ***ಡಾ. ಹಿ.ಜಿ. ಬೋರಲಿಂಗಯ್ಯ, ಮತ್ತು ಡಾ. ಎ. ಎಸ್. ಪ್ರಭಾಕರ ಅವರ 'ಕರ್ನಾಟಕ ಬುಡಕಟ್ಟು ಸಚಿತ್ರಕೋಶ'ದಲ್ಲಿ*** ಕರ್ನಾಟಕದ ಅನುಸೂಚಿತ, ಬುಡಕಟ್ಟುಗಳು ಮತ್ತು ಅಲೆಮಾರಿ ಬುಡಕಟ್ಟುಗಳು ಒಟ್ಟು ೩೩ ಬುಡಕಟ್ಟು ಸಮುದಾಯಗಳ ಆಧುನಿಕ ಸ್ಥಿತ್ಯಂತರಗಳನ್ನು ಅರ್ಥಪೂರ್ಣವಾಗಿ, ಹಲವಾರು ವರ್ಷಗಳ ಸುಧೀರ್ಘ ಕ್ಷೇತ್ರಕಾರ್ಯದ ಮೂಲಕ ದಾಖಲಿಸಿದ್ದಾರೆ. ಮರಾಟಿ ಸಮುದಾಯಗಳಾಗಿರುವ ಮರಾಟಿ ನಾಯ್ಕರು, ಮರಾಟಿ, ಕುಮರಿ ಮರಾಟಿ, ಮರಾಠಿ ಭಾಷಿಕ ಪ್ರದೇಶ ಗಡಿಭಾಗದಿಂದ ವಲಸೆ ಬಂದವರಾಗಿರುತ್ತಾರೆ ಎಂಬುದಾಗಿ ಅಭಿಪ್ರಾಯಪಟ್ಟಿರುತ್ತಾರೆ. ಅಲ್ಲದೆ ಇವರು ಆರಾಧಿಸುತ್ತಿರುವ ಮಹಾಮ್ಮಾಯಿಯ ಗೊಂದಲಪೂಜೆ, ಭೈರಾವರಾಧನೆ ವಿವರಣೆ ಕೂಡ ಇರುತ್ತದೆ.

• ***ಡಾ. ಹಿ.ಚಿ. ಬೋರಲಿಂಗಯ್ಯ, 'ಗಿರಿಜನ ನಾಡಿಗೆ ಪಯಣ' (೧೯೯೧) ಮತ್ತು ಕುಣುಬಿಯವರು (೨೦೧೦)*** ಎಂಬ ಕೃತಿಯಲ್ಲಿ 'ಮೇಘಾನೆ' ಪ್ರದೇಶದಲ್ಲಿ ವಾಸವಿರುವ ಕುಣುಬಿಯವರ ಕುರಿತು ಪರಿಚಯಿಸಿದ್ದಾರೆ.

• ***ಡಾ.ಹಿ.ಚಿ. ಬೋರಲಿಂಗಯ್ಯ, "ಕಾಡು, ಕಾಂಕ್ರಿಟ್ ಮತ್ತು ಜನಪದ"*** ಈ ಕೃತಿ ಕನ್ನಡ ಜಾನಪದದ ಹಿರಿಯ ವಿದ್ವಾಂಸ ಡಾ. ಎಸ್. ಕೆ. ಕರೀಂ ಖಾನ್ ಅವರ ಸಹಯೋಗದೊಂದಿಗೆ ಕಾಡು ಮತ್ತು ಅದರೊಳಗಿನ ಗಿರಿಜನರ ಅಧ್ಯಯನದ ಅಲೋಚನೆಗಳಿಗೆ ಒಂದು ರೂಪ ಕೊಡಲು ಪ್ರಯತ್ನಿಸಿದ ಲೇಖನಗಳ ಕೃತಿ. ಈ ಪುಸ್ತಕದಲ್ಲಿ ಲೇಖಕರು ಬುಡಕಟ್ಟು ಸಂಸ್ಕೃತಿ, ಪರಿಸರ ಮತ್ತು ಜಾನಪದವನ್ನು ಕುರಿತು ಬರೆದಿರುವ ೧೫ ವೈಚಾರಿಕ ಲೇಖನಗಳಿವೆ.

• ***ಡಾ. ಹಿ.ಚಿ. ಬೋರಲಿಂಗಯ್ಯ, "ಸಿದ್ಧಿಯರ ಸಂಸ್ಕೃತಿ"*** ಸಿದ್ಧಿಗಳು ಅಫ್ರಿಕಾ ನೆಲದಲ್ಲಿ ಹುಟ್ಟಿ, ವಸಾಹತು ಶಾಹಿ ಕೈಗೆ ಸಿಕ್ಕಿ ಹೆಡೆಮುರಿ ಕಟ್ಟಿಸಿಕೊಂಡು, ಸರಕು ಸಾಗಣೆಯ ಹಡಗುಗಳಲ್ಲಿ ಜೀವ ಹಿಡಿದು ಸಾಗಿ ಬಂದು, ಗೋವಾ ತೀರದಲ್ಲಿ ಹರಾಜಿಗೆ ಒಳಗಾಗಿ ಈ ನತದೃಷ್ಟ ಸಂತತಿ. ನೂರಾರು ವರ್ಷಗಳ ನಂತರ ಅಂತೂ ಒಂದು ದಿನ ಬಿಡುಗಡೆಗೊಂಡು ಉತ್ತರ ಕನ್ನಡ ಕಾಡು ಸೇರಿತು ಎನ್ನುವುದೇ ಕುತೂಹಲದ ಸಂಗತಿಯಾಗಿದೆ. ಅಲ್ಲದೆ ಸಿದ್ಧಿ ಸಮುದಾಯದ ಸಾಂಸ್ಕೃತಿಕ ಜಗತ್ತು, ಲೋಕದೃಷ್ಟಿ, ಸಮಕಾಲೀನ ಬದುಕು, ಅವರ ಅನನ್ಯತೆ ಮುಂತಾದ ವಿಷಯಗಳ ಅಧ್ಯಯನ ವ್ಯಾಪ್ತಿಯನ್ನು ಈ ಗ್ರಂಥವು ಮತ್ತಷ್ಟು ವಿಸ್ತರಿಸಿದೆ. ಸಿದ್ಧಿ ಜನಾಂಗದ ಪೂರ್ವಾಪರಗಳನ್ನು, ಆಧುನಿಕತೆಯೊಂದಿಗಿನ

ಅವರ ಮುಖಾಮುಖಿಯನ್ನು, ಬದುಕಿನ ಸಂದಿಗ್ಧತೆಯನ್ನು ಈ ಕೃತಿಯ ಮುಖಾಂತರ ಲೇಖಕರು ನಮಗೆ ಪರಿಚಯಿಸಿದ್ದಾರೆ.

• ***ಡಾ. ಹಿ.ಚಿ. ಬೋರಲಿಂಗಯ್ಯ, "ಬುಡಕಟ್ಟು ದೈವಾರಾಧನೆ"*** ಬುಡಕಟ್ಟು ಅಧ್ಯಯನ ವಿಭಾಗದ ಬುಡಕಟ್ಟು ಅಧ್ಯಯನ ಮಾಲೆಯ ಪುಸ್ತಕಗಳಲ್ಲಿ ಬುಡಕಟ್ಟು ದೈವರಾಧನೆಯೂ ಕೂಡ ಒಂದು ಕೃತಿಯಾಗಿದೆ. ನಮ್ಮ ಆದಿಮ (Primitire) ಸಂಸ್ಕೃತಿಯ ದೈವ ವಿಕಾಸದ ನೆಲೆ, ಅದರ ಸ್ವರೂಪ, ಆಧುನಿಕ ಕಾಲದಲ್ಲೂ ಅದು ಭಿನ್ನವಾಗಿ ಕಟ್ಟಿಕೊಡುತ್ತಿರುವ ಕುಲಮೂಲ ಆಚರಣೆಗಳ ಭೌತಿಕ ನಂಬಿಕೆ ಇವೆಲ್ಲವನ್ನು ಈ ಕೃತಿಯಲ್ಲಿ ಆತ್ಮಕಥನದ ಪ್ರವಾಸ ಕತೆಯ ರೂಪದಲ್ಲಿ ತಿಳಿಸುವ ಹಾಗೂ ವಿಶ್ಲೇಷಿಸುವ ಸಮರ್ಥ ಕಾರ್ಯವನ್ನು ಈ ಕೃತಿಯ ರಚನಾಕಾರರು ಮಾಡಿರುತ್ತಾರೆ. ಗ್ರಂಥಕೃರ್ತರು ಬಹು ಹತ್ತಿರದಿಂದ ಕಂಡಂತಹ ಹಲವಾರು ಬುಡಕಟ್ಟುಗಳ ವೀರರು, ಮಾತೃದೇವತೆಗಳು, ದೇವರುಗಳಾದ ಬೀರರ ಮನೆ, ಜಟ್ಟಿಗನ ಬನ, ಕಾಡ್ಯನ ಮನೆ, ಕಾವೆಲಿಯ ಕುಚ್ಚಿ ಕಾಡು, ಪೋಡಿದ ದೈವ, ಮರದ ಮೇಲಿಗ ದೈವರು, ಮಿಂಚೇರಿಯ ಹುಲಿ ಸಮಾಧಿ, ಗೊಲ್ಲರ ಹಟ್ಟಿ, ಬೆಳದಿಂಗಳ ಸಿರಿ ಮತ್ತು ಬಲೀಂದ್ರ ಮುಂತಾದ ದೈವ ದೇವರಗಳನ್ನು ಅವರ-ಆಚರಣ ಉತ್ಸವಗಳನ್ನು ಇಲ್ಲಿ ಅಭಿವ್ಯಕ್ತಿಗೆ ಒಡ್ಡಿದ್ದಾರೆ. ಅಲ್ಲದೆ ಮಾತೃಮೂಲ ಪರಂಪರೆಗಳ ಮೂಲಬೇರು ಹುಡುಕುವ ಕೆಲಸವನ್ನು ಪ್ರಕೃತಿ ನಿರ್ಮಿತ ದೈವಗಳ ಹಿನ್ನೆಲೆಯಲ್ಲಿ ನಿರೂಪಿಸಿದ್ದಾರೆ. ಈ ಕೃತಿಯು ಸಂಶೋಧಕರಿಗೆ ಆಕರ ಗ್ರಂಥವಾಗಿರುವುದರಲ್ಲಿ ಸಂಶಯವೇ ಇಲ್ಲ.

• ***ಪ್ರೊ. ಕೆ. ಎಂ. ಮೇತ್ರಿ ಅವರ "ಸೂಕ್ಷ್ಮ ಆದಿವಾಸಿಗಳು",*** ಈ ಕೃತಿಯು ಮುಖ್ಯವಾಗಿ ಸೂಕ್ಷ್ಮ ಆದಿವಾಸಿಗಳಾದ ಡುಂಗ್ರಿಗರಾಸಿಯ, ಚೆಂಚು, ಗೊಂಡ, ಗೌಡಲ, ಹಕ್ಕಿಪಿಕ್ಕಿ, ಹಸಲರು, ಇರುಳಿಗ, ಕಾಡುಕುರುಬ, ಮಲೆಕುಡಿಯ, ಮೇದರು, ಪಣಿಯನ್, ಯರವ, ಸೋಲಿಗರು ಮುಂತಾದ ಬುಡಕಟ್ಟು ಸಮುದಾಯಗಳ ಮತ್ತು ಪ್ರಾದೇಶಿಕ ಮಿತಿಯ ಬುಡಕಟ್ಟುಗಳಾದ ಕಮ್ಮಾರ, ಕಣಿಯನ್, ಕುರುಬ, ಮರಾಠಾ, ಮರಾಟಿ, ಸಿದ್ಧಿ ಜೇನುಕುರುಬ ಮತ್ತು ಕೊರಗ ಆದಿಮ ಬುಡಕಟ್ಟುಗಳ ಸಮಗ್ರ ಮಾಹಿತಿಯನ್ನು ನೀಡುತ್ತದೆ. ಅಲ್ಲದೆ ಸೂಕ್ಷ್ಮಬುಡಕಟ್ಟು ಸಮುದಾಯದ ರಕ್ಷಣೆಗೆ ಮತ್ತು ಅಭಿವೃದ್ಧಿಗೆ ಕೈ ಜೋಡಿಸಿ ಸಹಕರಿಸುತ್ತಿರುವ ಆದಿವಾಸಿ ರಕ್ಷಣಾ ಪರಿಷತ್ತಿನ ಧ್ಯೇಯೋದ್ದೇಶಗಳ ಮಾಹಿತಿಯು ಇಲ್ಲಿದೆ. ಈ ಎಲ್ಲಾ ದೃಷ್ಟಿಯಿಂದ ಅಧ್ಯಯನಕಾರರಿಗೆ, ಯೋಜನಾಕೃರ್ತರಿಗೂ ಹಾಗೂ ಸಮುದಾಯಗಳ ಸಂಘಟಕರಿಗೆ ಆಕರ ಗ್ರಂಥವಾಗಿದೆ.

• ***ಡಾ. ಕೆ.ಎಂ. ಮೇತ್ರಿ, "ಬುಡಕಟ್ಟು ಕುಲ ಕಸುಬುಗಳು",*** ಈ ಕೃತಿಯಲ್ಲಿ ಕರ್ನಾಟಕದ ೪೯ ಬುಡಕಟ್ಟು ಸಮುದಾಯಗಳ ಸ್ಥೂಲ ಪರಿಚಯದೊಂದಿಗೆ ಅವರ ಕುಲ ಕಸುಬುಗಳ ಮೇಲೆ ಬೆಳಕು ಚೆಲ್ಲುತ್ತದೆ.

• ***ಪ್ರೋ ಎ. ವಿ. ನಾವಡ, 'ಕೊಂಕಣದ ಕುಡುಬಿಯವರು'*** ಈ ಕೃತಿಯಲ್ಲಿ ಕುಡುಬಿಯವರು ಮೂಲತಃ ಗೋವಾ ಸರಹದ್ದಿನಿಂದ ಕರಾವಳಿ ಕರ್ನಾಟಕಕ್ಕೆ ವಲಸೆ ಬಂದು ನೆಲೆ ನಿಂತವರು ಎಂಬುದಾಗಿ ತಿಳಿಸಿದ್ದಾರೆ. ಅಲ್ಲದೆ ಕುಡುಬಿಯರ ಬಗ್ಗೆ ನಡೆದ ಅಧ್ಯಯನ; ಸಮುದಾಯದ ಹಿನ್ನೆಲೆಯ ಕುರಿತು ವಿಸ್ತ್ರತವಾಗಿ ತಿಳಿಸಿದ್ದಾರೆ.

• ***ಡಾ. ರಮೇಶ ಜಿ.ಕೆ., 'ಮರಾಟಿ ಕುಣುಬಿಗಳು',*** ಈ ಕೃತಿಯಲ್ಲಿ ಉತ್ತರ ಕನ್ನಡ ಜಿಲ್ಲೆಯಲ್ಲಿ ವಾಸವಿರುವ ಕುಣುಬಿಗಳು ಮಹಾರಾಷ್ಟ್ರದ ಸಾಂಗ್ಲಿ, ಕೊಲ್ಲಾಪುರ, ಸೊಲ್ಲಾಪುರ, ಪಂಡರಪುರ, ಸತಾರ, ನಾಗಪುರ ಹಾಗೂ ಗೋವಾ ರಾಜ್ಯದ ಬೇರೆ ಬೇರೆ ಸ್ಥಳಗಳಿಂದ ವಲಸೆ ಬಂದು ಕರ್ನಾಟಕದ ಕರಾವಳಿ ಹಾಗೂ ಪಶ್ಚಿಮಘಟ್ಟದ ಪ್ರದೇಶದ ಹಳ್ಳಿಗಳಲ್ಲಿ ನೆಲೆಸಿದ್ದಾರೆ. ಅವರ ಸಾಂಸ್ಕೃತಿಕ, ಧಾರ್ಮಿಕ ಆಚರಣೆಗಳಲ್ಲಿ ಮತ್ತು ಸಮುದಾಯದಲ್ಲಿ ಆಗಿರುವ ಬದಲಾವಣೆಯನ್ನು ತಿಳಿಸಿದ್ದಾರೆ.

• ***ಡಾ. ಸವಿತಾ ನಾಯಕ, 'ಉತ್ತರ ಕನ್ನಡ ಜಿಲ್ಲೆಯ ಕೆಲವು ಬುಡಕಟ್ಟುಗಳಲ್ಲಿ – ಪ್ರಸಾಧನ ಕಲೆ*** 'ಎಂಬ ಕೃತಿಯಲ್ಲಿ ಉತ್ತರ ಕನ್ನಡ ಜಿಲ್ಲೆಯಲ್ಲಿರುವ ಬುಡಕಟ್ಟುಗಳು ಮತ್ತು ಜಾತಿಗಳಾವುವು ಎಂಬ ವಿಷಯದಲ್ಲಿ ಕುಣಬಿ ಸಮುದಾಯವನ್ನು ಪರಿಚಯಿಸಿದ್ದಾರೆ.

• ***ಪ್ರೋ. ಜಿ. ವೆಂಕಟ ಸುಬ್ಬಯ್ಯ – ಕನ್ನಡ ನಿಘಂಟು ಸಂ: ೨,*** ಈ ಕೃತಿಯಲ್ಲಿ ಕುಣಬಿ ಸಮುದಾಯದವರು ಒಕ್ಕಲುತನ ಮಾಡುತ್ತಿರುವ ಜಾತಿಗಳಲ್ಲಿ ಒಂದಾಗಿದೆ. ಅಲ್ಲದೆ ಕುಣಬಿ ಸಮುದಾಯದಲ್ಲಿ ಕುಳನಾಡ, ಮರಾಠಿ, ಕೊಂಕಣಿ ಕುಣಬಿ ಎಂಬ ಪ್ರಭೇದಗಳಿವೆ ಎಂಬುದಾಗಿ ತಿಳಿಸಿರುತ್ತಾರೆ.

• ***ಯಜ್ಞಾವತಿ ಕೇಶವ್ ಕಂಗೆನ್‌ರವರ "ಸಾಂಸ್ಕೃತಿಕ ತುಳುನಾಡು"*** ತುಳುನಾಡಿನ ಜಾನಪದ ಅಧ್ಯಯನದ ವಿವರಗಳನ್ನು ತಿಳಿಸುವ ಕೃತಿಯಾಗಿದೆ. ವಿವಿಧ ಕಾಲಘಟ್ಟಗಳಲ್ಲಿ ಬಳಕೆಯಾಗುತ್ತಿರುವ ಧಾರ್ಮಿಕ ಆರಾಧನಾ ಪದ್ಧತಿಗಳನ್ನು ಅವರು ಗುರುತಿಸಿದ್ದಾರೆ. ಜನಪದರ ಸಾಂಸ್ಕೃತಿಕ ಆಟಗಳು, ಕಂಬಳಗಳು, ಕೋಳಿ ಅಂಕ ಮತ್ತಿತರ ಆಚಾರ – ವಿಚಾರಗಳಿಗೆ ಸಂಬಂಧಿಸಿದ ಮಾಹಿತಿಗಳನ್ನು ಒದಗಿಸಿದ್ದಾರೆ.

• ***ಅನಂತರಾಮು ಕೆ., "ದಕ್ಷಿಣದ ಸಿರಿನಾಡು"*** ಈ ಕೃತಿ ತುಳುನಾಡಿಗೆ ಸಂಬಂಧಿತ ವಿವರಣೆಯನ್ನು ನೀಡುವ ಪ್ರವಾಸ ಸಾಹಿತ್ಯವಾಗಿರುತ್ತದೆ. ಕರಾವಳಿ ಭಾಗದ ಸಾಂಸ್ಕೃತಿಕ ವಿವರಗಳನ್ನು ತಿಳಿಸುವ ಕೃತಿಯಾಗಿದೆ. ತುಳುನಾಡಿನ ಜನಪದರ ಜೀವನ ಪದ್ಧತಿ, ರಾಜರ ಆಳ್ವಿಕೆ, ಆಚರಣೆಗೊಳ್ಳುತ್ತಿರುವ ಶಿಷ್ಟ ದೇವತೆಗಳ ಮಾಹಿತಿ ಹಾಗೂ ಜನಪದ ದೇವತೆಗಳ ಆರಾಧನೆ, ಭೂತಾರಾಧನೆಯ ಸ್ವರೂಪ, ಈ ನಾಡಿನಲ್ಲಿ ಬಳಕೆಯಲ್ಲಿರುವ ಜನಪದ ಆಟಗಳು ಮತ್ತು ಸಾಂಸ್ಕೃತಿಕ ಅಂಶಗಳ ವಿವರಣೆಯುಳ್ಳ ಕೃತಿಯಾಗಿದೆ.

• ***ಡಾ. ಡಿ. ಪಾಂಡುರಂಗ, "ದಕ್ಷಿಣ ಕನ್ನಡ ಜಿಲ್ಲೆಯ ಭೈರರು: ಒಂದು ಸಾಂಸ್ಕೃತಿಕ ಅಧ್ಯಯನ"*** ಈ ಪ್ರಬಂಧದಲ್ಲಿ ಭೈರರ ಕುರಿತು ಆಳವಾದ ಅಧ್ಯಯನ ಮಾಡಿದ್ದಾರೆ. ಅವರು ಪರಿಶಿಷ್ಟ ಜಾತಿಗೆ ಸೇರಿದವರಾಗಿದ್ದು, ಅವರು ತುಳುನಾಡಿನವರಲ್ಲ. ಬೇರೆ ಪ್ರದೇಶಗಳಿಂದ ತುಳುನಾಡಿಗೆ ವಲಸೆ ಬಂದವರೆಂದು ಹೇಳುತ್ತಾರೆ. ಅವರ ಆಚಾರ ವಿಚಾರಗಳಲ್ಲಿ, ತುಳುಭಾಷೆ, ತುಳು ಸಂಸ್ಕೃತಿಗೆ ತಮ್ಮನ್ನು ತಾವು ತೆರೆದುಕೊಂಡಿದ್ದಾರೆ. ತಮ್ಮ ಮಾತೃಭಾಷೆ ಕನ್ನಡದ ಜೊತೆಯಲ್ಲಿ ತುಳು ಭಾಷೆಯನ್ನು ಕಲಿತು, ಈ ಪ್ರದೇಶದ ಸಂಸ್ಕೃತಿಯಲ್ಲಿ ಬೆರೆತು ತಮ್ಮ ಆರಾಧನಾ ಸಂಪ್ರದಾಯವನ್ನು ಅಳವಡಿಸಿಕೊಂಡಿದ್ದಾರೆ. ಹೀಗೆ ಅವರು ವಾಸಿಸುವ ಭೌಗೋಳಿಕ ಪರಿಸ್ಥಿತಿ, ವಲಸೆಯ ಮೂಲ, ಸಾಮಾಜಿಕ ವಿಷಯಗಳನ್ನು ಕ್ಷೇತ್ರಕಾರ್ಯದಿಂದ ವಿಷಯಗಳನ್ನು ಸಂಗ್ರಹಿಸಿ ದಾಖಲಿಸಿದ್ದಾರೆ.

• ***ಡಾ. ಪಿ. ಗುರುರಾಜ್ ಭಟ್, ರವರ "ತುಳುನಾಡು"*** ಈ ಕೃತಿ ತುಳುನಾಡಿನ ಗತವೈಭವವನ್ನು ಸಾರುವ ಆಕರ ಗ್ರಂಥವಾಗಿದೆ. ಅವಿಭಜಿತ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳ ಬಗ್ಗೆ ಸವಿವರವಾದ ವಿಷಯಗಳನ್ನು ತುಳುನಾಡಿನ ಸಾಮ್ರಾಜ್ಯವನ್ನು ಸ್ಥಾಪಿಸಿದ ಐತಿಹಾಸಿಕ ಅರಸು ಮನೆತನಗಳ ವಿವರಗಳು, ಪ್ರಾಚೀನ ಕಾಲಘಟ್ಟದ ಸಾಮಾಜಿಕ ಪರಿಸ್ಥಿತಿಯ ಚಿತ್ರಣ ಮತ್ತು ಭೂತಾರಾಧನೆಯ ಸಂಕೀರ್ಣ ಚಿತ್ರಣ ವಿವರಗಳನ್ನು ತಿಳಿಸುವ ಗ್ರಂಥವಾಗಿದೆ.

• ***ಏರ್ಯ ಲಕ್ಷ್ಮೀನಾರಾಯಣ ಆಳ್ವ (ಸಂ.) "ಮಂಗಳ ತಿಮಿರು"*** ಈ ಕೃತಿಯಲ್ಲಿ ಪ್ರಾದೇಶಿಕವಾಗಿ ವಾಸಿಸುತ್ತಿರುವ ವಿವಿಧ ರೀತಿಯ ಜನಸಮುದಾಯದವರ ಬಗ್ಗೆ ಮಾಹಿತಿಗಳಿವೆ. ತುಳುನಾಡಿನಲ್ಲಿ ಆರಾಧನೆಯಾಗುತ್ತಿರುವ ಭೂತರಾಧನೆಯ ಪರಿಕಲ್ಪನೆಯ ವಿವರವನ್ನು ಒದಗಿಸುವ ವಿಶಿಷ್ಟ ಕೃತಿಯಾಗಿದೆ.

• ***ಡಾ. ಪೀಟರ್ ಜೆ. ಕ್ಲಾಸ್, "ತುಳುವ ದರ್ಶನ",*** ಈ ಕೃತಿಯಲ್ಲಿ ತುಳುನಾಡಿನ ಆಚಾರ – ವಿಚಾರ, ಸಂಪ್ರದಾಯಗಳ ಜೊತೆಯಲ್ಲಿ ಮುಖ್ಯವಾಗಿ ಸಿರಿ ಆರಾಧನೆ ಬಗ್ಗೆ ಅಧ್ಯಯನ ಮಾಡಿರುವ ಕೃತಿಯಾಗಿದೆ.

• ***ಅರವಿಂದ ಮಾಲಗತ್ತಿ ಮತ್ತು ಒಡೆಯರ್ ಡಿ. ಹೆಗ್ಗಡೆ, "ಕೊರಗ ಜನಾಂಗ ವಿಶ್ಲೇಷಣಾತ್ಮಕ ಅಧ್ಯಯನ".*** ಈ ಕೃತಿಯಲ್ಲಿ ಕೊರಗ ಜನಾಂಗದ ಹಿನ್ನೆಲೆ, ದೈಹಿಕ ಲಕ್ಷಣ, ವೇಷಭೂಷಣ, ಆಹಾರ ಪದ್ಧತಿ, ನಂಬಿಕೆ – ಆಚರಣೆಗಳು ಹೀಗೆ ಅನೇಕ ಅಂಶಗಳನ್ನು ಒಳಗೊಂಡಿರುವ ಮಾಹಿತಿಗಳು ಇದರಲ್ಲಿದೆ. ಕೊರಗ ಸಮುದಾಯದವರ ಸಮಸ್ಯೆಗಳನ್ನು ವಿಶ್ಲೇಷಿಸಿ, ಅವುಗಳಿಗೆ ಪರಿಹಾರೋಪಗಳನ್ನು ಸೂಚಿಸಿರುವುದು ಗಮನಾರ್ಹ.

• ***ಬಾಬು ಕೊರಗ ಪಾಂಗಳ, "ಕೊರಗರ ಅಜಲು: ಒಂದು ವಿಶ್ಲೇಷಣೆ",*** ಬಾಬು ಪಾಂಗಳ ಅವರು ಕೊರಗ ಬುಡುಕಟ್ಟು ಸಮುದಾಯದ ಒಳಗಿನವರಾಗಿದ್ದು ತಮ್ಮದೇ ದೃಷ್ಟಿಕೋನದಲ್ಲಿ ಅಜಲು ಪದ್ಧತಿಯನ್ನು ವಿಶ್ಲೇಷಿಸಿರುವುದು ವಿಶೇಷವಾಗಿದೆ. ಈ ಪದ್ಧತಿಯ ಅಮಾನವೀಯ ಆಚರಣೆಯ ಸೂಕ್ಷ್ಮ ನೋಟಗಳನ್ನು ವಿಶ್ಲೇಷಿಸಿದ್ದಾರೆ. ಅಲ್ಲದೇ, ಆ ಪದ್ಧತಿಯ ವಿರುದ್ಧದ ಹೋರಾಟದ ಹಂತಗಳನ್ನು ವಿವರಿಸಿದ್ದಾರೆ. ಜೊತೆಗೆ ಈ ಪದ್ಧತಿಯು ಕೊರಗರನ್ನು ಹೇಗೆ ಮೂಲೆಗುಂಪು ಮಾಡಲಾಗಿದೆ ಮತ್ತು ಅವರನ್ನು ಅಸ್ಪೃಶ್ಯರನ್ನಾಗಿ ಹೇಗೆ ಕಾಣಲಾಗುತ್ತಿದೆ ಎಂಬುದಾಗಿ ಮಾಹಿತಿಯನ್ನು ನೀಡಿರುತ್ತಾರೆ.

• ***ಡಾ. ಪುರುಷೋತ್ತಮ ಬಿಳಿಮಲೆ, "ಕೊರಗರು"*** ಉಪಸಂಸ್ಕೃತಿ ಯೋಜನೆಯಡಿ ಡಾ. ಪುರುಷೋತ್ತಮ ಬಿಳಿಮಲೆ ಬರೆದ ಕೊರಗರು ಒಂದು ಪರಿಚಯಾತ್ಮಕ ಕೃತಿ. ಕೊರಗರ ಕುಟುಂಬ ರಚನೆ, ಜೀವನಾವರ್ತನ, ವಾರ್ಷಿಕಾವರ್ತನ ವಿವರ ಹಾಗೂ ಆ ಸಮುದಾಯವನ್ನು ಕುರಿತು ಬೇರೆ ಬೇರೆ ಕಡೆ ದಾಖಲಾಗಿರುವ ಮಾಹಿತಿಗಳನ್ನು ಒಂದೆಡೆ ವ್ಯವಸ್ಥಿತವಾಗಿ ಕ್ರೋಢೀಕರಿಸಲಾಗಿದೆ. ಅಲ್ಲದೆ ಈ ಗ್ರಂಥದಲ್ಲಿ ಕೊರಗರ ಜನಪದ ಸಾಹಿತ್ಯದ ವಿವರಣೆ ಇರುವುದು ಒಂದು ಗಮನಾರ್ಹ ಅಂಶವಾಗಿದೆ.

• ***ಕಮಲಾಕ್ಷ, "ದಕ್ಷಿಣ ಕನ್ನಡ ಜಿಲ್ಲೆಯ ಹರಿಜನ ಮತ್ತು ಗಿರಿಜನರ ಸಾಮಾಜಿಕ ಇತಿಹಾಸ",*** ಈ ಗ್ರಂಥದಲ್ಲಿ ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ವಾಸವಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿರುವ ಮುಗೇರ, ನಲಿಕೆ, ಪರವ, ಪಂಬದ, ಮೇರರು, ಮುಂಡಾಲ, ಬಾಕುಡ, ಮಲೆಕುಡಿಯ, ಕೊರಗ, ನಾಯ್ಕ, ಮರಾಟಿ, ಮರಾಠ ಮುಂತಾದ ಸಮುದಾಯಗಳ ಸ್ಥೂಲ ಪರಿಚಯ ವಿದೆ.

• ***ಪ್ರೊ. ಎ. ವಿ. ನಾವಡ, "ತುಳು ಪೊಲಿ"*** ಈ ಕೃತಿಯು ತುಳುನಾಡಿನ ನಾಡು – ನುಡಿ, ಜನಾಂಗ, ಮೌಖಿಕ ಮತ್ತು ಲಿಖಿತ ಸಾಹಿತ್ಯ, ಇತಿಹಾಸ, ಸಂಸ್ಕೃತಿ ಮುಂತಾದ ಕ್ಷೇತ್ರಗಳ ಬಹುರೂಪಿ ಸಂಶೋಧನ ಗ್ರಂಥವಾಗಿದೆ. ಅನೇಕ ಹೊಸ ಶೋಧನೆಗಳನ್ನು ದಾಖಲಿಸಿರುವರು. ತುಳು ಪಾಡ್ದನಕ್ಕೆ ಸಂಬಂಧಿಸಿ ಹದಿಮೂರು ಬರಹಗಳು ಇಲ್ಲಿವೆ. ಅಲ್ಲದೆ ಮುಖ್ಯವಾಗಿ ಈ ಜಿಲ್ಲೆಯಲ್ಲಿ ವಾಸಿಸುತ್ತಿರುವ ಬುಡಕಟ್ಟು ಸಮುದಾಯವಾದ ಕೊರಗರ ಸಂಸ್ಕೃತಿಯ ಪರಂಪರೆ ಮತ್ತು ಆಧುನಿಕತೆಗಳ ಸಂಘರ್ಷದ ನೆಲೆಯನ್ನು ಕ್ಷೇತ್ರಕಾರ್ಯದ ಅನುಭವದಿಂದ ವಿವರಿಸಿದ್ದಾರೆ. ಬುಡಕಟ್ಟು ಸಮುದಾಯದ ವೈಶಿಷ್ಟ್ಯವುಳ್ಳ ಕುಡುಬಿ ಸಮುದಾಯದ ಜೀವನ ಶೈಲಿ, ಆಚರಣೆಗಳು, ಪರಂಪರೆ, ಆರಾಧನೆ ಮುಂತಾದ ವಿಷಯಗಳ ಬಗ್ಗೆ ಸಮಗ್ರವಾದ ವಿವರಣೆ ಇದೆ.

• ***ಪ್ರೊ. ಅಮೃತ ಸೋಮೇಶ್ವರ, ತುಳುವ ಜಾನಪದ, ಕೆಲವು ನೋಟಗಳು.*** ಈ ಸಂಕಲನದಲ್ಲಿ ಬಹುತೇಕ ಲೇಖನಗಳು ತುಳುನಾಡಿನ ಜಾನಪದ ಜಗತ್ತಿನ ಅನೇಕ ವಿಶಿಷ್ಟ ವಿಚಾರಗಳ ಸಮೀಕ್ಷಾ ರೂಪಗಳಾಗಿರುತ್ತವೆ. ತುಳುನಾಡಿನ ಆರಾಧನೆ ಮತ್ತು ಪಾಡ್ದನ ಸಾಹಿತ್ಯಗಳ ಅಂಶಗಳು ಕಂಡುಬಂದಿದೆ. ತುಳುನಾಡಿನ ದೈವಾರಾಧನೆ, ನಾಗಪೂಜೆ, ಜನಪದ ಧರ್ಮ, ಹರಕೆಗಳು, ದೈವರಾಧನೆ ಮತ್ತು ಪ್ರಕೃತಿಯ ಸಂಬಂಧಗಳು, (ಭಗವತಿ) ಶಕ್ತಿ ಆರಾಧನೆಯ ವಿವಿಧ ಮುಖಗಳು. ಭೂತಾರಾಧನೆಯಲ್ಲಿನ ನ್ಯಾಯ ವ್ಯವಸ್ಥೆ, ದೈವರಾಧನೆಯ ನಂಬಿಕೆಗಳು, ಮುಂತಾದ ಅನೇಕ ತುಳು ಸಂಸ್ಕೃತಿಯ ಅಂಶಗಳನ್ನು

ಸವಿಸ್ತಾರವಾಗಿ ವಿಶ್ಲೇಷಿಸಿದ್ದಾರೆ. ಒಟ್ಟಿನಲ್ಲಿ ತುಳುನಾಡಿನ ಮೌಖಿಕ ಸಾಹಿತ್ಯ, ಜನಪದ ರಂಗಭೂಮಿ, ಪ್ರದರ್ಶನಾತ್ಮಕ ಕಲೆಗಳು ಮತ್ತು ಸಾಮಾಜಿಕ ಪ್ರಸ್ತುತತೆಗಳನ್ನು ಇಲ್ಲಿ ವಿವರವಾಗಿ ಚರ್ಚಿಸಿದ್ದಾರೆ.

• ***ಪ್ರೊ. ಅಮೃತ ಸೋಮೇಶ್ವರ, "ತುಳು ಬದುಕು – ಕೆಲವು ಮುಖಗಳು".*** ಈ ಕೃತಿಯಲ್ಲಿ ತುಳುನಾಡಿನ ಜನ ಸಮುದಾಯದ ಜೀವನ ಚಿತ್ರಣ ಕುರಿತು ವಿವರಗಳನ್ನು ನೀಡಿರುವರು. ಅವರದೇ "ಅವಿಲು" – ಕೃತಿಯಲ್ಲಿ ತುಳುನಾಡಿನ ಸಾಮಾಜಿಕ, ಐತಿಹಾಸಿಕ ಮತ್ತು ಧಾರ್ಮಿಕ ವಿವರಗಳು ದೊರೆಯುತ್ತದೆ.

• ***ಡಾ. ಗಂಗಾಧರ ದೈವಜ್ಞ, "ಕಚ್ಚೆಗೌಳಿಗರ ಪರಂಪರೆ ಮತ್ತು ಆಧುನಿಕತೆ"*** ಮಹಾರಾಷ್ಟ್ರದಲ್ಲಿ ಅಲೆಮಾರಿಯಾಗಿ ಪಶುಪಾಲನೆ ಮಾಡುತ್ತಿದ್ದ ಕಚ್ಚೆಗೌಳಿಗರು ಕರ್ನಾಟಕದ ಪಶ್ಚಿಮ ಘಟ್ಟವನ್ನು ಪ್ರವೇಶಿಸಿ ತಮ್ಮದೇ ಆದ ಮೂಲ ಪರಂಪರೆ ಮತ್ತು ಸಂಸ್ಕೃತಿಯನ್ನು ಉಳಿಸಿ ಬೆಳೆಸಿಕೊಂಡು ಬಂದಿರುವ ಬುಡಕಟ್ಟು ಸಮುದಾಯದ ಲಕ್ಷಣವುಳ್ಳರಾಗಿರುವ ಬಗೆಯನ್ನು ವಿವರಿಸಿರುವರು. ಮಹಾರಾಷ್ಟ್ರ ಸರ್ಕಾರ ಪರಿಶಿಷ್ಟ ಪಂಗಡದಲ್ಲಿ ಗುರುತಿಸಿರುವುದು ಮತ್ತು ಕರ್ನಾಟಕ ಸರ್ಕಾರ ಅವರನ್ನು ಹಿಂದುಳಿದ ವರ್ಗದಲ್ಲಿಟ್ಟಿರುವುದು. ನಗರೀಕರಣ, ಆಧುನೀಕರಣವು ಈ ಸಮುದಾಯದ ಆಚಾರ–ವಿಚಾರ, ಸಂಪ್ರದಾಯ, ಸಂಸ್ಕೃತಿಯಲ್ಲಿ ಪ್ರಭಾವ ಬೀರಿರುವುದ್ದನ್ನು ಕ್ಷೇತ್ರಕಾರ್ಯದ ಮೂಲಕ ಸಂಗ್ರಹಿಸಿರುವ ಅಂಕಿ ಅಂಶಗಳ ಮತ್ತು ದಾಖಲೆಗಳ ಮೂಲಕ ವಿವರಿಸಿರುತ್ತಾರೆ. ಅಲ್ಲದೆ ಅವರು ಎದುರಿಸುತ್ತಿರುವ ಸಮಸ್ಯೆಗಳ ಬಗ್ಗೆ ಮಾಹಿತಿ ಒದಗಿಸಿದ್ದಾರೆ. ಹಾಗೂ ಜೀವನದ ಎಲ್ಲಾ ಕ್ಷೇತ್ರದಲ್ಲಿ ಹಿಂದುಳಿದ ಇವರನ್ನು ಕರ್ನಾಟಕ ಸರ್ಕಾರವು ಪರಿಶಿಷ್ಟ ಪಂಗಡದಲ್ಲಿ ಸೇರಿಸುವಂತೆ ಸಲಹೆ ನೀಡಿರುವುದು ಕಂಡುಬಂದಿದೆ.

• ***ಡಾ. ಗಂಗಾಧರ ದೈವಜ್ಞ, (ಸಂ), "ಕೊರಗರು": ಸಮಕಾಲೀನ ಸ್ಪಂದನ,*** ಈ ಕೃತಿಯಲ್ಲಿ ಎರಡನೇ ಬುಡಕಟ್ಟು ಸಮ್ಮೇಳನದಲ್ಲಿ ಮಂಡಿತವಾದ ಲೇಖನಗಳನ್ನು ಸಂಪಾದಿಸಲಾಗಿದೆ. ಬಹುತೇಕ ಲೇಖನಗಳನ್ನು ಕೊರಗ ಸಮುದಾಯದವರೇ ಮಂಡಿಸಿರುವುದು ಈ ಕೃತಿಯ ವೈಶಿಷ್ಟ್ಯವಾಗಿದೆ. ಅವರ ಚರಿತ್ರೆ, ಸಂಸ್ಕೃತಿ, ಜೀವನ ವಿಧಾನ, ಆಚರಣೆಗಳು, ನ್ಯಾಯಪದ್ದತಿ, ಅಭಿವೃದ್ಧಿ ಯೋಜನೆಗಳ ಪ್ರಾಮುಖ್ಯತೆ ಮುಂತಾದ ಮಾಹಿತಿಗಳನ್ನು ಈ ಕೃತಿ ಒಳಗೊಂಡಿದೆ. ವರ್ತಮಾನ ಕಾಲದಲ್ಲಿನ ಕೊರಗರ ಮುಂದಿರುವ ಸವಾಲು, ಸಮಸ್ಯೆಗಳ ಬಗೆಗೆ ಇಲ್ಲಿನ ಲೇಖನಗಳು ಬೆಳಕು ಚೆಲ್ಲುತ್ತವೆ.

• ***ಡಾ. ಎ.ಎಸ್. ಪ್ರಭಾಕರ (ಸಂ), "ಆದಿವಾಸಿ ಆಖ್ಯಾನ"*** ಡಾ. ಹಿ.ಚಿ. ಬೋರಲಿಂಗಯ್ಯನವರು ಐವತ್ತು ವರ್ಷ ಪೂರೈಸುತ್ತಿರುವ ಸಂದರ್ಭದಲ್ಲಿ ಡಾ.ಎ.ಎಸ್. ಪ್ರಭಾಕರರವರ ಸಂಪಾದಕತ್ವದಲ್ಲಿ ಅರ್ಪಿಸಿರುವ ಗ್ರಂಥ "ಆದಿವಾಸಿ ಆಖ್ಯಾನ". ಅಭಿನಂದನೆ ಎಂದರೆ ಅದು ಕೇವಲ ಹೊಗಳಿಕೆಯ ಲೇಖನಗಳ ಸರಮಾಲೆಯಾಗಬಾರದು ಎಂದು ಎಚ್ಚರವಹಿಸಿಕೊಂಡು ಸಂಯೋಜನಗೊಂಡ ೫೨ ಲೇಖನಗಳು, ಮುಂದಿನ ಅಧ್ಯಯನಕಾರರಿಗೆ ಒಂದು ಮಾದರಿ. ವ್ಯಕ್ತಿಯ ಚರಿತ್ರೆಗಿಂತ ಬುಡಕಟ್ಟು ಸಂಸ್ಕೃತಿ ಪರಂಪರೆಯೊಂದರ ಚರಿತ್ರೆ ಪ್ರಾಮುಖ್ಯತೆಗೆ ನೀಡಿರುವ ಬೆಲೆ ಇದಾಗಿದೆ. ಈ ಕೃತಿಯಲ್ಲಿ ಭಾರತದ ಬುಡಕಟ್ಟುಗಳ ವೈದಾನಿಕತೆಯನ್ನು 'ವಿಧಾನ' ವಿಭಾಗದಲ್ಲಿ ಚರ್ಚಿಸಿದ್ದಾರೆ. ಬುಡಕಟ್ಟು ಸಮುದಾಯಗಳ ಪರಿಕಲ್ಪನೆ, ಕರ್ನಾಟಕದ ಬುಡಕಟ್ಟುಗಳ ನೆಲೆಗಳು, ಸೀಮೆಯ ಪರಿಕಲ್ಪನೆ, ನಂಬಿಕೆಗಳು, ನ್ಯಾಯ ವ್ಯವಸ್ಥೆ, ವೈದ್ಯಪದ್ಧತಿ, ತಾಂತ್ರಿಕ ಚಿಕಿತ್ಸಾ ವಿಧಾನಗಳು, ಮಾಟ ಮಂತ್ರ ಮೋಡಿ, ಚಿತ್ರಕಲೆ, ಪರಿಸರ ಪ್ರಜ್ಞೆ, ಮಹಿಳೆಯರ ಕುರಿತು ಸ್ಥಾಪಿತ ಗ್ರಹಿಕೆಗಳಿಗೆ ಭಿನ್ನಮತ ಮುಂತಾದ ವಿಷಯಗಳ ಕುರಿತು ಅಧ್ಯಯನ ಮಾಡಿರುವ ವಿವಿಧ ವಿದ್ವಾಂಸರ ಲೇಖನಗಳು 'ಅಖ್ಯಾನ' ವಿಭಾಗದಲ್ಲಿ ಅನಾವರಣಗೊಂಡಿದ್ದು, ಬುಡಕಟ್ಟು ಸಂಸ್ಕೃತಿಯ ಒಳನೋಟಗಳನ್ನು ಕಟ್ಟಿಕೊಡುತ್ತದೆ. ಬುಡಕಟ್ಟು

ಮಹಾಕಾವ್ಯಗಳು, ದೇಶೀ ಕಥನಗಳು, ಕಾವ್ಯಶೈಲಿ, ಮಾದಪ್ಪನ ಕತೆ, ಕಾವ್ಯ ಮುಂತಾದ ಸ್ವರೂಪ ಮತ್ತು ವಿನ್ಯಾಸಗಳನ್ನು ಗುರುತಿಸುವ ಪ್ರಯತ್ನವನ್ನು 'ಕಥನ' ವಿಭಾಗದಲ್ಲಿ ಮಾಡಿರುತ್ತಾರೆ. ಕೊರಗರು, ಕಾಡುಗೊಲ್ಲರು ಮುಂತಾದ ಸಮುದಾಯಗಳ ಸಾಮಾಜಿಕ ಆರ್ಥಿಕ ಸ್ಥಿತಿಗತಿಗಳನ್ನು ಅಂತರ್‌ಶಿಸ್ತೀಯ (Interdiscipline) ನೆಲೆಯಲ್ಲಿ 'ವರ್ತಮಾನ' ವಿಭಾಗದಲ್ಲಿ ವಿಶ್ಲೇಷಿಸಿರುವರು. ಬುಡಕಟ್ಟು ಸಮುದಾಯದ ಅಭಿವೃದ್ಧಿಯ ಬಗ್ಗೆ ಜವಾಹರಲಾಲ್ ನೆಹರು ಹಾಗೂ ಮಹಾಶ್ವೇತಾದೇವಿಯವರ ಚಿಂತನೆ, ಜಾಗತೀಕರಣದ ಪ್ರಭಾವ, ಬುಡಕಟ್ಟು ಅಭಿವೃದ್ಧಿಯಲ್ಲಿ ಸರ್ಕಾರದ ಯೋಜನೆಗಳು, ಸ್ವಯಂ ಸೇವಾ ಸಂಸ್ಥೆಗಳ ಪಾತ್ರವನ್ನು 'ಅಭಿವೃದ್ಧಿ' ವಿಭಾಗದಲ್ಲಿ ಮಾಹಿತಿ ಒದಗಿಸಿರುವರು.

ಅಲ್ಲದೆ, ಸಂಪಾದಕರಾದ ಡಾ.ಎ.ಎಸ್. ಪ್ರಭಾಕರರವರ ಪ್ರಸ್ತಾವನೆಯು ವಿಸ್ತೃತವಾದ ಅಧ್ಯಯನ ಹಾಗೂ ಆಳವಾದ ಒಳನೋಟವನ್ನು ಹೊಂದಿದೆ. ಕೊನೆಯಲ್ಲಿ ಡಾ.ಹಿ.ಚಿ.ಬೋ ಅವರ ಕೃತಿಗಳ ವಿಮರ್ಶೆಯನ್ನು ಒಳಗೊಂಡಿರುತ್ತದೆ. ಒಟ್ಟಿನಲ್ಲಿ, ಅಭಿನಂದನಾ ಗ್ರಂಥವು ವ್ಯಕ್ತಿ ಕೇಂದ್ರದಿಂದ ಶೈಕ್ಷಣಿಕ ಕೇಂದ್ರಕ್ಕೆ ಪರಿವರ್ತನೆಗೊಂಡಿರುವುದು ಅತ್ಯುನ್ನತವಾದ ಮಾದರಿಯಾಗಿದೆ. ಬುಡಕಟ್ಟು ಸಮುದಾಯಗಳ ಅಧ್ಯಯನ, ಸಂಶೋಧನೆಗೆ ಮಾರ್ಗದರ್ಶಿ ಮತ್ತು ಅಪರೂಪದ ಅಮೂಲ್ಯವಾದ ಆಕರ ಗ್ರಂಥವಾಗಿದೆ.

ಈ ಕೃತಿಯು ಯೋಜನೆಗಳ ಅನುಷ್ಠಾನಗೊಳಿಸುವ ಸಂದರ್ಭದಲ್ಲಿ ಸಮಾಜದ ಉಪಯೋಗಕ್ಕೆ ಬರುತ್ತದೆ. ಆ ಕೃತಿಯಲ್ಲಿ ಶ್ರೀಮತಿ ವಿಜಯಲಕ್ಷ್ಮೀ ಆರ್. ಅವರ "ಕರ್ನಾಟಕ ಬುಡಕಟ್ಟು ನೆಲೆಗಳು" ಎಂಬ ಲೇಖನದಲ್ಲಿ ಕುಣುಬಿಯವರ ನೆಲೆಗಳು, ಭಾಷೆ, ಒಳಪಂಗಡ, ವೃತ್ತಿ, ವೇಷಭೂಷಣ, ಆಚಾರ – ವಿಚಾರ, ಜೀವನ ಪದ್ದತಿಗಳ ವಿವರಣೆ ಇರುತ್ತದೆ. ಈ ಸಮುದಾಯವನ್ನು ಬುಡಕಟ್ಟು ಸಮುದಾಯ ಎಂಬುದಾಗಿ ವಿಶ್ಲೇಷಿಸಿರುವರು. ಅದೇ ಕೃತಿಯಲ್ಲಿ ಬಿ.ಪಿ.ಮಹೇಂದ್ರ ಕುಮಾರ್ ಅವರ 'ಬುಡಕಟ್ಟು ಜನಾಂಗದಲ್ಲಿ ಸೀಮೆಯ ಪರಿಕಲ್ಪನೆ' ಎಂಬ ಲೇಖನದಲ್ಲಿ ಉತ್ತರ ಕನ್ನಡ ಜಿಲ್ಲೆಯಲ್ಲಿ ವಾಸವಿರುವ ಕುಣುಬಿ ಜನಾಂಗದ ಸಾಮಾಜಿಕ ಬದುಕಿನ ಸಮಗ್ರ ವಿವರಣೆ ಇದೆ.

• ***ವೀರಣ್ಣ ಎಂ.ಡಿ., "ಗಿರಿಜನರ ವೈದ್ಯ ಪದ್ದತಿಗಳು" (ಸೋಲಿಗ ಬುಡಕಟ್ಟು ಜನಾಂಗಕ್ಕೆ ಸಂಬಂಧಿಸಿದಂತೆ)***

ಕರ್ನಾಟಕ ಸಾಹಿತ್ಯ ಅಕಾಡೆಮಿ ಆಯೋಜಿಸಿದ್ದ ವಿಶೇಷ ಘಟಕ ಯೋಜನೆಯಡಿ ಶ್ರೀ ವೀರಣ್ಣ ಎಂ.ಡಿ. ಅವರು ಸೋಲಿಗ ಬುಡಕಟ್ಟು ಸಮುದಾಯಕ್ಕೆ ಸಂಬಂಧಿಸಿದ ಗಿರಿಜನ ವೈದ್ಯ ಪದ್ಧತಿಗಳು ಎಂಬ ಸಂಶೋಧನ ಪ್ರಬಂಧ ಇದಾಗಿರುತ್ತದೆ. ಕ್ಷೇತ್ರಕಾರ್ಯ, ಸಂದರ್ಶನ ಮತ್ತು ಮಾಹಿತಿದಾರರಿಂದ ಮಾಹಿತಿ ಸಂಗ್ರಹಿಸಿ ತಿಳಿದುಕೊಂಡು ಈ ಕೃತಿಯನ್ನು ರಚಿಸಿರುತ್ತಾರೆ. ನಾಟಿವೈದ್ಯ ಪದ್ದತಿಯ ಹಿಂದಿರುವ ಚೈತನ್ಯ ಶಕ್ತಿಯ ಸತ್ಯ–ಅಸತ್ಯಗಳನ್ನು ಅರಿಯಲು ಪ್ರಯತ್ನಿಸಿದ್ದಾರೆ. ವರ್ತಮಾನದಲ್ಲಿ ಶಿಷ್ಟವೈದ್ಯ ಪದ್ಧತಿಗೆ ಎದುರಾಗಿ ನಿಂತು ಸ್ಪರ್ಧೆಯನ್ನೊಡ್ಡಲು ಸಾಧ್ಯವಾಗದೆ ತತ್ತರಿಸಿ ಹೋಗುವುದಕ್ಕೆ ಮುಂಚಿತವಾಗಿ ಪಾರಂಪರಿಕ ವೈದ್ಯಪದ್ಧತಿಯನ್ನು ಅಭ್ಯಸಿಸಿ ವ್ಯವಸ್ಥಿತವಾಗಿ ಕ್ರೋಢೀಕರಿಸಿ ದಾಖಲಿಸಿದ್ದಾರೆ. ಮಹಿಳೆಯರಿಗೆ ಕೈಗೊಳ್ಳುವ ಚಿಕಿತ್ಸೆ ಹಾಗೂ ಮಕ್ಕಳ ಆರೋಗ್ಯವನ್ನು ಸಂರಕ್ಷಿಸುವ ನಾಟಿವೈದ್ಯ ಪದ್ಧತಿಯ ಸಾಧಕ–ಬಾಧಕಗಳನ್ನು ಬೆಳಕಿಗೆ ತಂದಿದ್ದಾರೆ. ಬುಡಕಟ್ಟು ಸಮುದಾಯಗಳು ತಮ್ಮ ಆರೋಗ್ಯ ಕಾಪಾಡಿಕೊಂಡಿರುವ ಹಿಂದೆ ಅವರು ಅಳವಡಿಸಿಕೊಂಡಿರುವ ಆಹಾರ ಕ್ರಮದ ಬಗ್ಗೆ ವಿಶ್ಲೇಷಿಸಿದ್ದಾರೆ. ಜನಪದ ವೈದ್ಯರನ್ನು ಗುರುತಿಸುವುದು ಉತ್ತಮ ಕ್ರಮವಾಗಿದೆ. ಸೋಲಿಗರ ಸಂಸ್ಕೃತಿಯ ಬಗ್ಗೆ ಈಗಾಗಲೇ ಅನೇಕರು ಸಂಶೋಧನೆ ಮಾಡಿದ್ದು, ಅವರ ವೈದ್ಯಪದ್ಧತಿಯ ಕುರಿತು ಅಧ್ಯಯನಗಳು ಕಡಿಮೆ ಪ್ರಮಾಣದಲ್ಲಿ ನಡೆದಿದ್ದು, ಸೋಲಿಗರ ಪಾರಂಪರಿಕ ವೈದ್ಯ ಪದ್ಧತಿಯನ್ನು ತಿಳಿಯಲು ಸಹಾಯವಾಗಿದೆ.

• *Singh K.S., (Ed), Tribal Movement in India Vol. I & II, Singh K.S., (Ed), Economics of the Tribes and their transformation.* ಭಾರತದ ಅನೇಕ ಬುಡಕಟ್ಟು ಸಮುದಾಯಗಳಲ್ಲಿ ಆಗಿರುವ ಆರ್ಥಿಕ ಸ್ಥಿತ್ಯಂತರವನ್ನು ವಿವರಿಸಿದ್ದಾರೆ. ಉತ್ಪಾದನಾ ವಿಧಾನಗಳಲ್ಲಿ ಆಗಿರುವ ಬದಲಾವಣೆಯನ್ನು ಹಾಗೂ ಉತ್ಪಾದನಾ ವಿಧಾನಕ್ಕೆ ಮತ್ತು ಬುಡಕಟ್ಟುಗಳ ಸಮಯದಾಯದ ಜನರಿಗೆ ಇರುವ ಸಂಬಂಧವನ್ನು ತಿಳಿಸಿದ್ದಾರೆ. ಅಲ್ಲದೆ ಅವರ ಅಧ್ಯಯನವು ಬುಡಕಟ್ಟು ಅರ್ಥವ್ಯವಸ್ಥೆ ಮತ್ತು ಸಮಾಜ ಇವೆರಡಕ್ಕಿರುವ ಸಂಬಂಧಗಳ ಮೇಲೆ ಬೆಳಕು ಚೆಲ್ಲುತ್ತದೆ.

• *C. Vasudevan "Koragas": "The Forgotten of the primitive tribes of Tulunadu", History and Culture, Trichor. The Ethos , "The Forgotten of the primitive tribes of Tulunadu"* ಎಂಬ ಈ ಕೃತಿಯಲ್ಲಿ ಕೊರಗ ಸಮುದಾಯದ ಉಗಮ, ಸಂಪ್ರದಾಯ, ಇತಿಹಾಸ, ಜನಸಂಖ್ಯೆ, ಸಾಕ್ಷರತೆ ಮುಂತಾದ ವಿಷಯಗಳ ಬಗ್ಗೆ ಪರಿಚಯಿಸಿದ್ದಾರೆ. ಅವರ ಆಚಾರ ವಿಚಾರ, ಸಂಪ್ರದಾಯ, ಆಡಳಿತ ವ್ಯವಸ್ಥೆಗೆ ಸಂಬಂಧಿಸಿದ ಅನೇಕ ಮಾಹಿತಿಗಳನ್ನು ನೀಡಿರುವರು.

• **Russel R.V** *"The Tribes and Caste of the Central Provinces of India" Vol. IV* ಎಂಬ ಕೃತಿಯಲ್ಲಿ ಮರಾಟಿಗರು ದಕ್ಷಿಣ ಭಾರತದ ಸೈನಿಕ ವರ್ಗಕ್ಕೆ ಸೇರಿದ ಜನಸಮುದಾಯದವರು. ಮರಾಠಿ ಸಮುದಾಯವರ ಮೂಲ, ವಿಕಾಸ, ಪ್ರಸರಣ, ಅವರ ಬಳಿ ಅಥವಾ ಬೆಡಗು ಪದ್ಧತಿ, ಆಚರಣೆ ಮುಂತಾದ ಅಂಶಗಳ ಮಾಹಿತಿಯನ್ನು ಒದಗಿಸಿರುತ್ತಾರೆ.

• *Pratap Sing Velip Kankar, "The Kurmis - Kundbis of India",* ಈ ಕೃತಿಯಲ್ಲಿ ಕುರ್ಮಿ ಸಮುದಾಯವು ಕೃಷಿ ಜೀವನ ನಡೆಸುವ ಸಮುದಾಯವಾಗಿದೆ. ದೇಶಾದ್ಯಂತ ವಾಸವಿರುವ ಈ ಸಮುದಾಯದವರನ್ನು ಬೇರೆ ಬೇರೆ ಭಾಷೆಗಳಲ್ಲಿ ಹೇಗೆ ಕರೆಯಲಾಗುತ್ತದೆ ಎಂಬುದನ್ನು ಹಾಗೂ ಈ ಸಮುದಾಯದ ಆರ್ಥಿಕತೆಯ ಬಗ್ಗೆ ತಿಳಿಸಿರುವವರು.

• *Francis Buchanan, "A Journey from Madas through the countries of Mysore-Canara and Malabar"* , ಎಂಬ ಗ್ರಂಥದಲ್ಲಿ ಕುಣುಬಿಗಳು ಕರ್ನಾಟಕದ ಮೂಲ ಬುಡಕಟ್ಟು ಎಂಬುದಾಗಿ ತಿಳಿಸಿದ್ದಾರೆ. ಪ್ರಾಕೃತಿಕ ವಿಕೋಪದಿಂದಾಗಿ ಗೋವಾಕ್ಕೆ ವಲಸೆ ಹೋಗಿ ತದನಂತರ ಪೋರ್ಚುಗೀಸರ ಆಳ್ವಿಕೆ ಕಾಲದಲ್ಲಿ ಪುನಃ ಕರ್ನಾಟಕದ ಜೋಯಿಡಾ ಭಾಗಕ್ಕೆ ವಾಪಸ್ಸಾಗಿರುವರು ಎಂಬುದಾಗಿ ತಿಳಿಸಿರುವರು.

• *Luiz, A A D., "Tribes of Mysore",* ಎಂಬ ಕೃತಿಯಲ್ಲಿ ಕುಣುಬಿಯರ ಕುರಿತು ವಿವರಣೆ ನೀಡಿದ್ದಾರೆ. ಇವರ ಪ್ರಕಾರ ಉತ್ತರ ಕನ್ನಡ ಜಿಲ್ಲೆಯಲ್ಲಿ ಕುಣುಬಿ ಸಮುದಾಯದವರು ವಾಸವಿದ್ದು, ಅವರ ಜನಸಂಖ್ಯೆಯ ವಿವರಗಳನ್ನು ನೀಡಿರುತ್ತಾರೆ. ಅವರು ಆರ್ಥಿಕವಾಗಿ, ಶೈಕ್ಷಣಿಕವಾಗಿ ಹಿಂದುಳಿದವರಾಗಿದ್ದಾರೆ. ಇವರು ಮರಾಟಿ, ಕನ್ನಡ, ತುಳು ಭಾಷೆ ಮಾತನಾಡುತ್ತಾರೆ. ಅವರ ಆಹಾರ ಪದ್ದತಿ, ಬೇಟೆ, ಸಾಂಸ್ಕೃತಿಕ ಅಂಶಗಳ ಬಗ್ಗೆ ಬೆಳಕು ಚೆಲ್ಲಿದ್ದಾರೆ. ಜೊತೆಗೆ ಮರಾಟಿ ಬಡಕಟ್ಟಿನ ಬೆಡಗುಗಳಾದ ಭೋಂಸಾ ಅಥವಾ ಭೊಂಸ್ಲೆ ಮರಾಟಿ ಭಾಷೆ, ದೈವಾಚರಣೆಗಳ ಬಗೆಗೆ ವಿವರಿಸಿದ್ದಾರೆ.

• ***Thuston Edgar, Castes and Tribes of Southern India,*** ಎಂಬ ಗ್ರಂಥದಲ್ಲಿ ಕುಣುಬಿ ಸಮುದಾಯದವರು ಬುಡಕಟ್ಟು ಎಂಬುದಾಗಿ ಮೊಟ್ಟ ಮೊದಲು ಗುರುತಿಸಿದ್ದಾರೆ. ಕುಣುಬಿಯರ ವಿವಿಧ ಧಾರ್ಮಿಕ, ಸಾಂಸ್ಕೃತಿಕ ಆಚರಣೆಗಳನ್ನು, ಸಂಪ್ರದಾಯ ಮತ್ತು ಪದ್ಧತಿಗಳನ್ನು ವಿವರಿಸುತ್ತಾ ಸಮುದಾಯವನ್ನು ಪರಿಚಯಿಸಿದ್ದಾರೆ. ಈ ಸಮುದಾಯದ ಬಗ್ಗೆ ಸಾಂಸ್ಕೃತಿಕ ವಿವರಣೆ ನೀಡಿರುವುದರಿಂದ ಮುಂದಿನ ಸಂಶೋಧನಾತ್ಮಕ ಅಧ್ಯಯನಕ್ಕೆ ಈ ಗ್ರಂಥಗಳು ಉಪಯುಕ್ತವಾಗಿರುತ್ತವೆ.

• ***Enthoven, R E., "The Tribes and Castes of Bombay",*** ಎಂಬ ಗ್ರಂಥದಲ್ಲಿ ಉತ್ತರ ಕನ್ನಡ ಜಿಲ್ಲೆಯ ಹಲವಾರು ಸಮುದಾಯಗಳ ಬಗ್ಗೆ ಪರಿಚಯಿಸುವುದರ ಜೊತೆಗೆ ಕುಣುಬಿಯವರ ಜೀವನ ಶೈಲಿ, ಆಹಾರ ಪದ್ಧತಿ, ಬೇಟೆ, ಸಾಂಸ್ಕೃತಿಕ ಅಂಶಗಳ ಬಗ್ಗೆ ಸ್ಥೂಲವಾಗಿ ಪರಿಚಯಿಸಿದ್ದಾರೆ.

• ***Sherring M A., rev., Hindu Tribes and Castes,*** ಗುಜರಾತ್ ರಾಜ್ಯದ ಸೂರತ್ ಜಿಲ್ಲೆಯ ಜುನಾಗಡ್, ಬಂಟ್ವಾ ತಾಲೂಕುಗಳಲ್ಲಿ, ಗೋವೆಲ್‌ವಾರ ಜಿಲ್ಲೆ ಮತ್ತು ವಾಂಡೆ ಸುರವೆಯಂ ಉಪವಿಭಾಗದ ಕೆಲವು ಪ್ರದೇಶಗಳಲ್ಲಿ ಕುಣುಬಿ ಜಾತಿಯ ಸಮುದಾಯದವರು ವಾಸಿಸುವರು ಎಂಬುದಾಗಿ ತಿಳಿಸಿರುವರು.

• ***Shyama M Bhatta , An South Canara And Economic Status of Kudubes",*** ಎಂಬ ವಿಷಯದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ವಾಸಿಸುತ್ತಿರುವ ಕುಡುಬಿಯವರು ಕೃಷಿ ಕಾರ್ಯ ಮಾಡುವವರು ಎಂದು ಪರಿಚಯಿಸಿದ್ದಾರೆ.

• ***Singh K S., "People of India,*** ಕೃತಿಯಲ್ಲಿ ಕುಣುಬಿಯವರು ಮೂಲತಃ ಗೋವಾ ರಾಜ್ಯದವರು. ೧೬ನೇ ಶತಮಾನದಲ್ಲಿ ಕರ್ನಾಟಕದ ಕರಾವಳಿ ಪ್ರದೇಶಕ್ಕೆ ಹಾಗೂ ಕೇರಳ ರಾಜ್ಯಕ್ಕೆ ವಲಸೆ ಬಂದಿರುವ ಸಮುದಾಯವಾಗಿದೆ. ಈ ಕೃತಿಯಲ್ಲಿ ಕುಣುಬಿ ಸಮುದಾಯದ ವಿವಾಹ ಪದ್ಧತಿ, ವೇಷ ಭೂಷಣಗಳು, ಕೃಷಿ, ಪಶುಸಂಗೋಪನೆ ಇತ್ಯಾದಿ ವಿಚಾರಗಳ ಬಗ್ಗೆ ಮಾಹಿತಿ ನೀಡಿರುತ್ತಾರೆ.

• ***Ravindranath Rao Y., "Tribal Transition and change", A study of Kudubis of south India,*** ಎಂಬ ಕೃತಿಯಲ್ಲಿ ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ವಾಸಿಸುತ್ತಿರುವ ಕುಡುಬಿ ಸಮುದಾಯಗಳ ವಾಸವಿದ ನೆಲೆಗಳು, ವೈವಾಹಿಕ, ಕೌಟುಂಬಿಕ ವ್ಯವಸ್ಥೆ, ಬಂಧುತ್ವದ ಪದ್ಧತಿ, ಒಳಪಂಗಡ, ನಂಬಿಕೆ ಮತ್ತು ಆರಾಧನೆಗಳು ಮುಂತಾದ ವಿಷಯಗಳ ಬಗ್ಗೆ ವಿಶ್ಲೇಷಣಾತ್ಮಕ ವಿಚಾರಗಳಿವೆ.

• ***M. Gurulingaiah, "Tribal Culture, Change and Mobility",*** ಈ ಕೃತಿಯಲ್ಲಿ ಬುಡಕಟ್ಟು ಸಮುದಾಯದ ಸಂಸ್ಕೃತಿ, ಅವರ ಕುಟುಂಬ ಮತ್ತು ವೈವಾಹಿಕ ಸಂಸ್ಥೆ, ಶಿಕ್ಷಣದ ವ್ಯವಸ್ಥೆ, ಆರ್ಥಿಕ, ಧಾರ್ಮಿಕ, ರಾಜಕೀಯ ಸಂಘಟನೆ ಮತ್ತು ಚಳುವಳಿ ಹಾಗೂ ಸಾಮಾಜಿಕ ಚಲನೆಯ ವಿವರಗಳಿವೆ. ಸಾಮಾಜಿಕ ಪರಿವರ್ತನೆಯ ಕುರಿತಾದ ವ್ಯಾಖ್ಯೆಗಳು, ಡಾರ್ವಿನ್‌ನ ವಿಕಾಸ ಸಿದ್ಧಾಂತ, ಹರ್ಬರ್ಟ್ ಸ್ಪೈನ್ಸ್‌ರವರ "ಸಾಮಾಜಿಕ ವಿಕಾಸವಾದ", ಪಿ.ಎ. ಸೊರೋಕಿನ್ ಸ್ಪೆಂಗ್ಲರ್‌ರವರ "ಚಕ್ರೀಯ ಸಿದ್ಧಾಂತ"ದ ಬಗ್ಗೆ ವಿವರಣೆ ಇದೆ.

• ***Aiyappan: A Report on the Socio - Economic Conditions of the Aborigind Tribes of Provinces of Madras.*** ಅಯ್ಯಪ್ಪನ್‌ರವರು ಮದರಾಸು ಪ್ರಾಂತ್ಯದ ಹಲವಾರು ಮೂಲನಿವಾಸಿಗಳ ಸಾಮಾಜಿಕ ಆರ್ಥಿಕ ಸ್ಥಿತಿಗಳ ಬಗ್ಗೆ ಕ್ಷೇತ್ರಕಾರ್ಯ ನಡೆಸಿ, ಮದರಾಸು ಸರ್ಕಾರಕ್ಕೆ ವರದಿ ಸಲ್ಲಿಸಿದ್ದಾರೆ.

• ***JEdgar Thruston and K. Rangachary, "Caste and Tribes of Southern India.", Vol. 1 to 7,*** ಈ ಸಂಪುಟಗಳಲ್ಲಿ ದಕ್ಷಿಣ ಭಾರತದಲ್ಲಿರುವ ಜನಜಾತಿಯ ಸ್ಥೂಲವಾದ ವಿವರಗಳಿವೆ. ಯಾವ ಪ್ರಾಂತಗಳಲ್ಲಿ ಯಾವ ಯಾವ ಜನಜಾತಿಗಳಿವೆ, ಅವರ ಸ್ಥಾನಮಾನ, ಸ್ಥಿತಿ ಮತ್ತು ಸ್ಥರಗಳಲ್ಲಿ ಇದೆ, ಅವರ ಸಾಂಸ್ಕೃತಿಕ ಬದುಕು ಎಂಥದ್ದು ಎಂಬುದನ್ನು ತಿಳಿಸಿರುತ್ತಾರೆ. ಈ ಮಾಹಿತಿಯ ಸಂಗ್ರಹವನ್ನು ಆಗಿನ ರಾಜ್ಯಪ್ರಭುತ್ವದ್ದು ಮಾಡಿರುವುದಾಗಿದೆ. ನಾಡಿನ ರಾಜಪ್ರಭುತ್ವ ಅದೆಷ್ಟೋ ಶತಮಾನಗಳಿಂದ ಬುಡಕಟ್ಟು ಸಮುದಾಯಗಳನ್ನು ನಿರ್ಲಕ್ಷಿಸಿರುವುದು ಇವರ ಕೃತಿಗಳಿಂದ ಬೆಳಕಿಗೆ ಬಂದಿರುವುದು ಗಮನಾರ್ಹ.

• ***Ananthakrishna Iyer, L K., Nanjundaiha (ed), "The Mysore Tribes and Castes,*** ಇವರುಗಳು ೧೯೬೧ರಲ್ಲಿ ಕ್ಷೇತ್ರಕಾರ್ಯ ಆಧಾರಿತ ವಿವರವಾದ ಮಾಹಿತಿಗಳನ್ನು ವೈಜ್ಞಾನಿಕವಾಗಿ ಸಂಗ್ರಹಿಸುವ ಪ್ರಯತ್ನ ಮಾಡಿರುತ್ತಾರೆ. ಬುಡಕಟ್ಟು ಸಮುದಾಯಗಳ ಸಾಮಾಜಿಕ ಹಾಗೂ ಸಾಂಸ್ಕೃತಿಕ ಜೀವನದ ಬಗ್ಗೆ ಮಾಹಿತಿ ನೀಡಿದ್ದಾರೆ. ಬುಡಕಟ್ಟು ಸಮುದಾಯಗಳ ಧಾರ್ಮಿಕ ಹಿನ್ನೆಲೆ ಮತ್ತು ಪುರಾಣ ಪುರಷರ ಬಗ್ಗೆ ಕೆಲವೊಂದು ಮಾಹಿತಿಗಳನ್ನು ನೀಡಿದ್ದಾರೆ. ಬುಡಕಟ್ಟು ಸಮುದಾಯಗಳ ಬಗ್ಗೆ ಅಧ್ಯಯನ ನಡೆಸುವ ಸಂಶೋಧಕರಿಗೆ ಇದೊಂದು ಉಪಯುಕ್ತ ಗ್ರಂಥವಾಗಿದೆ.

• ***S. G Morab, "The Soliga of Biligiri Rangana Hills"*** ಬಿಳಿಗಿರಿರಂಗನ ಬೆಟ್ಟದ ಸುತ್ತಮುತ್ತ ಕ್ಷೇತ್ರಕಾರ್ಯ ನಡೆಸಿ ಮಾಹಿತಿಯನ್ನು ಸಂಗ್ರಹಿಸಿ ಮಾನವಶಾಸ್ತ್ರ ಹಿನ್ನೆಲೆಯಲ್ಲಿ ಅಧ್ಯಯನ ನಡೆಸಿದ್ದಾರೆ. ಅವರು ತಮ್ಮ ಗ್ರಂಥದಲ್ಲಿ ಸೋಲಿಗರ ನೆಲೆ, ಸಾಂಸ್ಕೃತಿಕ, ಆರ್ಥಿಕ, ಸಾಮಾಜಿಕ ಜೀವನ, ಬಂಧುತ್ವ, ಧಾರ್ಮಿಕ ನಂಬಿಕೆಗಳು, ರೂಢಿ ಸಂಪ್ರದಾಯ, ಆಚರಣೆಗಳು, ಸೋಲಿಗರ ಸಮಸ್ಯೆ ಹಾಗೂ ಸ್ಥಳೀಯ ಸಂಘ ಸಂಸ್ಥೆಗಳ ಪಾತ್ರ ಮುಂತಾದ ವಿಷಯಗಳ ಬಗ್ಗೆ ವಿವರವಾಗಿ ಚರ್ಚೆ ಮಾಡಿದ್ದಾರೆ. ಬುಡಕಟ್ಟು ಸಮುದಾಯಗಳ ಸಂಶೋಧನೆಯಲ್ಲಿ ತೊಡಗುವವರಿಗೆ ಇದು ಒಂದು ಉಪಯುಕ್ತ ಕೃತಿಯಾಗಿದೆ.

• ***Yogindra Singh, "Modernization of Indian Tradition" (A Systematic study of social change)*** ಈ ಗ್ರಂಥದಲ್ಲಿ ಭಾರತದಲ್ಲಿ ಸಾಮಾಜಿಕ ಬದಲಾವಣೆಯ ಪರಿಕಲ್ಪನೆಯ ಉಗಮ, ಸಿದ್ಧಾಂತ, ವಿಧಾನಗಳ ಕುರಿತು ಚರ್ಚಿಸಿದ್ದಾರೆ. ಅವುಗಳೆಂದರೆ ಸಂಸ್ಕೃತಾನುಕರಣೆ, ಪಾಶ್ಚಾತ್ಯೀಕರಣ, Little and Great Tradition, Multiple Traditions, ರಚನಾತ್ಮಕ ಬದಲಾವಣೆಯು ಸಿದ್ಧಾಂತ, ವಿಧಾನಗಳನ್ನು ಕುರಿತು ಚರ್ಚಿಸಿದ್ದಾರೆ. ಭಾರತದಲ್ಲಿ ಬದಲಾವಣೆಯುಂಟಾಗಲು ಕಾರಣೀಯ ಅಂಶಗಳಾದ ಶಿಕ್ಷಣ, ನಗರೀಕರಣ, ಕೈಗಾರಿಕೀಕರಣ ಮುಂತಾದವುಗಳನ್ನು ಕುರಿತು ವಿಚಾರ ಮಂಡಿಸಿದ್ದಾರೆ. ಇದೊಂದು ಸಾಮಾಜಿಕ ಬದಲಾವಣೆಯ ಕುರಿತು ಅಧ್ಯಯನ ನಡೆಸಲು ಉಪಯುಕ್ತವಾದ ಕೃತಿ ಎಂಬುದಾಗಿ ಪರಿಗಣಿಸಬಹುದು.

• ***Yogindra Singh, Culture change in India "Identity and Globalization",*** ಯೋಗೇಂದ್ರ ಸಿಂಗ್‌ರವರು ಮೇಲಿನ ಗ್ರಂಥದಲ್ಲಿ ಸಾಂಸ್ಕೃತಿಕ ಮೌಲ್ಯಗಳು, ಸಂಸ್ಥೆಗಳು ಹಾಗೂ ಸಿದ್ಧಾಂತ ಕುರಿತು ವಿಮರ್ಶಾತ್ಮಕವಾಗಿ ಮೌಲ್ಯಮಾಪನ ಮಾಡಿದ್ದಾರೆ. ಭಾರತವು ಜಾಗತೀಕರಣದ ಸಂದರ್ಭದಲ್ಲಿ ಆಧುನಿಕ ಸವಾಲುಗಳಾದ ಸಾಂಸ್ಕೃತಿಕ ಮತ್ತು ಆರ್ಥಿಕ ವಿಚಾರಗಳಿಗೆ ಯಾವ ರೀತಿಯಲ್ಲಿ ಪ್ರತಿಕ್ರಿಯಿಸಿದೆ ಎಂಬುದರ ಕುರಿತು ಅಧ್ಯಯನ ನಡೆಸಿದ್ದಾರೆ. ಡಾ. ಸಿಂಗ್ ಅವರು ಈ ಕೃತಿಯಲ್ಲಿ ವಿದ್ಯುನ್ಮಾನ ಮಾಧ್ಯಮ (Ecedronic Media) ವಲಸೆ, ಅಂತರ್ ಸಾಂಸ್ಕೃತಿಕ ಪ್ರಕ್ರಿಯೆ, ಸ್ಥಳೀಯ, ಪ್ರಾದೇಶಿಕ, ರಾಷ್ಟ್ರೀಯ ಮಟ್ಟದ ಸಂಸ್ಕೃತಿಯ ಮೇಲೆ ಜಾಗತಿಕ ಸಂಸ್ಕೃತಿ ಯಾವ ರೀತಿ ಪ್ರಭಾವ ಬೀರಿದೆ ಎಂಬುದನ್ನು ಸ್ಪಷ್ಟಪಡಿಸಿದ್ದಾರೆ.

• ***Srinivas M.N., Seshaih S., Parthasarathy (Ed): "Dimensions of Social change in India"*** ಇವರು ಸಂಪಾದನೆ ಮಾಡಿದ ಗ್ರಂಥದಲ್ಲಿ ಸಾಮಾಜಿಕ ಬದಲಾವಣೆ ಕುರಿತಂತೆ ಹಲವಾರು ದೃಷ್ಟಿಕೋನದಲ್ಲಿ ಅಧ್ಯಯನ ಮಾಡಿದ್ದಾರೆ. ಪ್ರೊ.ಎಂ.ಎನ್. ಶ್ರೀನಿವಾಸರವರು ಸಾಮಾಜಿಕ ಪರಿಕಲ್ಪನೆ, ಸಾಮಾಜಿಕ ಬದಲಾವಣೆಯ ಅಧ್ಯಯನ ವಿಧಾನ, ಧರ್ಮ ಹಾಗೂ ಬದಲಾವಣೆ, ಬುಡಕಟ್ಟು ಮತ್ತು ಬದಲಾವಣೆ, ಮಾಧ್ಯಮ ಮತ್ತು ಬದಲಾವಣೆ, ಗ್ರಾಮೀಣ ಸಾಮಾಜಿಕ ಬದಲಾವಣೆ ಕುರಿತು ಚರ್ಚೆ ಮಾಡಿದ್ದಾರೆ.

• ***Dube S.C., "Tradition and Development",*** ಡಾ। ಎಸ್.ಸಿ.ದುಬೆಯವರು ಈ ಕೃತಿಯಲ್ಲಿ ಸಂಪ್ರದಾಯ ಮತ್ತು ಅಭಿವೃದ್ಧಿಗಿರುವ ಸಂಬಂಧವನ್ನು ಸವಿವರವಾಗಿ ಚರ್ಚಿಸಿದ್ದಾರೆ. ಸಾಮಾಜಿಕ, ಸಾಂಸ್ಕೃತಿಕ ಅಂಶಗಳ ಅಭಿವೃದ್ಧಿ ಹಾಗೂ ಬದಲಾವಣೆಯ ಮೇಲೆ ಯಾವ ರೀತಿ ಪ್ರಭಾವ ಬೀರುತ್ತದೆ ಎಂಬುದನ್ನು ಅಧ್ಯಯನ ಮಾಡಿದ್ದಾರೆ. ಹಿಂದೂ ಅವಿಭಕ್ತ ಕುಟುಂಬಗಳಲ್ಲಿ ಆಗುತ್ತಿರುವ ಬದಲಾವಣೆ, ಸಮೂಹ-ಸಂಪರ್ಕ ಮಾಧ್ಯಮ, ಸಾಮಾಜಿಕ ಅಭಿವೃದ್ಧಿ ಮುಂತಾದವುಗಳ ಕುರಿತು ದೀರ್ಘವಾಗಿ ಚರ್ಚೆ ಮಾಡಿದ್ದಾರೆ. ಸಾಮಾಜಿಕ ಸಂರಚನೆಯಲ್ಲಿನ (Social Structure) ಬದಲಾವಣೆ ಹಾಗೂ ಸಾಂಸ್ಕೃತಿಕ ಮೌಲ್ಯಗಳಲ್ಲಿನ (Cultural Values) ವಿಕಾಸವು ಅಭಿವೃದ್ಧಿಗೆ ಪೂರಕವಾದ ಅಂಶ ಎಂದಿದ್ದಾರೆ.

• ***Milton Singer B.S. Cohn, Bernard S. (Ed), Structure and change in Indian society,*** ಇವರುಗಳು ಸಂಪಾದಿತ ಕೃತಿಯಲ್ಲಿ ಜಾತಿ, ಸಾಮಾಜಿಕ ಸಂರಚನೆ ಹಾಗೂ ಅಂತರ್‌ಜಾತಿ ಸಂಬಂಧ ಕುರಿತ ವಿವಿಧ ಲೇಖನಗಳನ್ನು ಕಲೆ ಹಾಕಿದ್ದಾರೆ. ಈ ಗ್ರಂಥದಲ್ಲಿ ಜಾತಿ ವ್ಯವಸ್ಥೆಯು ಬದಲಾಗುತ್ತಿದೆಯೇ? ಎಂಬ ಪ್ರಶ್ನೆಯ ಕುರಿತು ಪ್ರೊ.ಎಂ.ಎನ್. ಶ್ರೀನಿವಾಸ್, ರೋವಿ, ಲೈಂಕ್ ಅವರ ಲೇಖನಗಳ ಮೂಲಕ ಚರ್ಚಿಸಲಾಗಿದೆ. ಜಾತಿಯು ಯಾವ ರೀತಿಯಲ್ಲಿ ರಾಜಕೀಯ ಮತ್ತು ಆರ್ಥಿಕ ಕ್ಷೇತ್ರಗಳಲ್ಲಿ ವಿಲೀನಗೊಂಡಿದೆ ಎಂದು ಚರ್ಚಿಸಲಾಗಿದೆ. ಜಾತಿ ವ್ಯವಸ್ಥೆ ಹಾಗೂ ಭಾರತೀಯ ಸಮಾಜದಲ್ಲಿನ ಬದಲಾವಣೆ ಕುರಿತು ಇರುವ ಗ್ರಂಥಗಳಲ್ಲಿ ಇದೊಂದು ಪ್ರಮುಖವಾದ ಗ್ರಂಥವೆಂದರೆ ತಪ್ಪಾಗಲಾರದು.

• ***Paulin Kharg and Indira J. Parikh, Cross road of Culture, A study in the Culture of Transience,*** ಈ ಗ್ರಂಥದಲ್ಲಿ ಕೃಷಿಯಲ್ಲಿ ಆಗುತ್ತಿರುವ ಬದಲಾವಣೆಯ ಸ್ವರೂಪ, ಗುಣಲಕ್ಷಣಗಳ ಕುರಿತು ಲೇಖಕರು ಚರ್ಚಿಸಿದ್ದಾರೆ. ಮುಖ್ಯವಾಗಿ ಕೈಗಾರೀಕರಣದ ಪಾತ್ರದ ಬಗ್ಗೆ ಬೆಳಕು ಚೆಲ್ಲಿದ್ದಾರೆ. ಭಾರತೀಯ ಸಮಾಜವು ಯಾವ ರೀತಿಯಲ್ಲಿ ಪಾಶ್ಚಿಮಾತ್ಯ ಮೌಲ್ಯಗಳನ್ನು ಎದುರಿಸಬೇಕಾಗಿದೆ ಎಂಬ ವಿಷಯದ ಬಗ್ಗೆ ಕೂಲಂಕುಷವಾಗಿ ಚರ್ಚಿಸಿದ್ದಾರೆ.

• ***Johnson Kirk, "Globalisation at the cross roads of tradition and modernity in rural India" Sociological Bulletin Vol. 54 No. 1 January April ೨೦೦೫.*** ಜಾನ್‌ಸನ್ ಕಿರ್ಕ್ ಅವರು ತಮ್ಮ ಸಂಶೋಧನಾ ಲೇಖನದಲ್ಲಿ ಗ್ರಾಮೀಣ ಭಾರತದಲ್ಲಿ ಜಾಗತೀಕರಣದ ಪ್ರಭಾವ ಹಾಗೂ ಅದರಿಂದ ಉಂಟಾದ ರಚನಾತ್ಮಕ ಮತ್ತು ಸಾಂಸ್ಕೃತಿಕ ಬದಲಾವಣೆ ಕುರಿತು ಅಧ್ಯಯನ ಮಾಡಿದ್ದಾರೆ. ಸಾರಿಗೆ, ಕೃಷಿ ಹಾಗೂ ಶಿಕ್ಷಣದ ಬೆಳವಣಿಗೆ ಮತ್ತು ಬದಲಾವಣೆಗಳು ಗ್ರಾಮೀಣ ಭಾರತೀಯ ವ್ಯವಸ್ಥೆಯನ್ನು ಏರು-ಪೇರು ಮಾಡಿದೆ. ಕೊಳ್ಳುಬಾಕ ಸಂಸ್ಕೃತಿ ಗ್ರಾಮೀಣ ಭಾರತದಲ್ಲೂ ಉತ್ತುಂಗಕ್ಕೇರಿದೆ. ಮಾಹಿತಿ ತಂತ್ರಜ್ಞಾನವು ಹಳ್ಳಿಗರನ್ನು ಸಹ ವಿಶ್ವದೊಡನೆ ಸಂಪರ್ಕ ಹೊಂದುವಂತೆ ಮಾಡುವಲ್ಲಿ ಸಫಲವಾಗಿದೆ. ಜಾಗತೀಕರಣದಿಂದಾಗಿ

ಗ್ರಾಮಸ್ಥರು ಸಂಪ್ರದಾಯ ಹಾಗೂ ಆಧುನಿಕತೆಯ ಜೊತೆಗೆ ತಮ್ಮ ಜೀವನವನ್ನು ಹೊಂದಾಣಿಕೆ ಮಾಡಿಕೊಳ್ಳುತ್ತಿದ್ದಾರೆ ಎಂಬುದನ್ನು ಲೇಖಕರು ತಮ್ಮ ಅಧ್ಯಯನದಲ್ಲಿ ಕಂಡುಕೊಂಡಿದ್ದಾರೆ.

• ***Dr. Y. Ravindranath Rao, 'Tribal Transition and change', A study of Kudubis of south India, Mangala publications, Mangalore ೨೦೦೩.*** ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ವಾಸ್ತವ್ಯವಿರುವ ಕುಡುಬಿ ಜನಾಂಗದ ಭೌಗೋಳಿಕ ನೆಲೆಗಳು, ಕೌಟುಂಬಿಕ ಮತ್ತು ವೈವಾಹಿಕ ಸಂಸ್ಥೆ, ಧಾರ್ಮಿಕ, ರಾಜಕೀಯ ಆರ್ಥಿಕ ಸ್ಥಿತಿಗತಿಗಳನ್ನು ಕ್ಷೇತ್ರಕಾರ್ಯದ ಮಾಹಿತಿಗಳ ಮೂಲಕ ವಿಶ್ಲೇಷಿಸಿರುವರು. ಅಲ್ಲದೆ ಮೇಲಿನ ಸಾಮಾಜಿಕ ಸಂಸ್ಥೆಗಳಲ್ಲಿ ಆಗಿರುವ ಬದಲಾವಣೆಗಳನ್ನು ದಾಖಲಿಸಿದ್ದಾರೆ. ಆಧುನೀಕರಣ, ಸಂಸ್ಕೃತಾನುಕರಣ, ಪಾಶ್ಚಿಮಾತ್ಯೀಕರಣದ ಪ್ರಭಾವ ಈ ಸಮುದಾಯದ ಹಲವು ವ್ಯವಸ್ಥೆಗಳ ಮೇಲೆ ಯಾವ ಯಾವ ಪರಿಣಾಮ ಬೀರಿರುತ್ತದೆ ಎಂಬುದಾಗಿ ವಿವರಿಸಿದ್ದಾರೆ.

ಅಪ್ರಕಟಿತ ಪಿಎಚ್ ಡಿ ಮಹಾಪ್ರಬಂಧಗಳ ಅಧ್ಯಯನ ಸಮೀಕ್ಷೆ

• ***ವೆಂಕಟೇಶ ಲಂಬೋದ ನಾಯಕ ಅವರ 'ಕುಂಬ್ರಿ ಮರಾಟಿಗರ ಸಾಮಾಜಿಕ ಸಂಕಥನ" 'ಉತ್ತರ ಕನ್ನಡ ಜಿಲ್ಲೆಯನ್ನು ಅನುಲಕ್ಷಿಸಿ'*** ಎಂಬ ಅಪ್ರಕಟಿತ ಪಿಎಚ್.ಡಿ ಮಹಾಪ್ರಬಂಧ ಕನ್ನಡ ವಿಶ್ವವಿದ್ಯಾಲಯ, ೨೦೧೮. ಹಂಪಿ. ಈ ಪ್ರಬಂಧದಲ್ಲಿ ಉತ್ತರ ಕನ್ನಡ ಜಿಲ್ಲೆಯಲ್ಲಿ ವಾಸವಿರುವ ಕುಂಬ್ರಿ ಮರಾಟಿಗ ಸಮುದಾಯದ ಸಾಮಾಜಿಕ ಸ್ಥಿತಿಗತಿಗಳನ್ನು ಅಧ್ಯಯನ ಮಾಡಿರುವರು. ಕುಂಬ್ರಿ ಮರಾಟಿಗರು ಯಾವುದೊಂದು ಚರಿತ್ರೆಯ ಕಾಲಘಟ್ಟದಲ್ಲಿ ಕರ್ನಾಟಕದ ಕರಾವಳಿಯ ಉತ್ತರ ಕನ್ನಡಕ್ಕೆ ವಲಸೆ ಬಂದಿರುವ ಒಂದು ಕೃಷಿಕ ಸಮುದಾಯ. ಈ ಕೃತಿಯಲ್ಲಿ ಕುಂಬ್ರಿ ಮರಾಟಿಗರ ಹೆಸರೇ ಸೂಚಿಸುವಂತೆ 'ಕುಂಬ್ರಿ' ಅಂದರೆ ಕುಮೇರಿ ಕೃಷಿ ಅಥವಾ ಕುಂಬ್ರಿ ಬೇಸಾಯ ಮರಾಠಿ ಭಾಷಿಕ ಸಮುದಾಯವು ಸ್ಥಳಾಂತರ ಬೇಸಾಯ, ಕುತ್ಲು ಬೇಸಾಯ ಸ್ಥಳಾಂತರಿತ ವ್ಯವಸಾಯಗಳಂತ ಲಘು ಬೇಸಾಯ ಪದ್ಧತಿಯನ್ನು ಅವಲಂಬಿಸಿಕೊಂಡು ಬದುಕಿ ಬಂದ ಸಮುದಾಯವಾಗಿರುತ್ತದೆ ಎಂಬುದಾಗಿ ತಿಳಿಸಿರುವರು. ಈ ಕೃತಿಯಲ್ಲಿ ಕುಂಬ್ರಿ ಮರಾಠಿಗರ ಕುಲಕಸುಬು, ಪಾರಂಪರಿಕ ಆರ್ಥಿಕ ಮೂಲ, ಅವರು ಎದುರಿಸುತ್ತಿರುವ ಆರ್ಥಿಕ ಸಂಕಷ್ಟಗಳು, ಇವರ ಶೈಕ್ಷಣಿಕ ಸ್ಥಿತಿಗತಿಗಳ ವಿಶ್ಲೇಷಣೆ, ಸಾಮಾಜಿಕ ಜೀವನ ಜನನದಿಂದ ಮರಣದ ತನಕ ಸಂಸ್ಕಾರಗಳ ವಿವರಣೆಗಳು, ವಾರ್ಷಿಕವಾಗಿ ನಿರಂತರ ಆವರ್ತನಗಳು, ಧಾರ್ಮಿಕ ಮತ್ತು ಸಾಂಸ್ಕೃತಿಕ ಆಚರಣೆಗಳು, ಪಾರಂಪರಿಕ ವೈದ್ಯಪದ್ಧತಿ, ನಂಬಿಕೆ, ವಿಧಿ ನಿಷೇಧಗಳು ಮುಂತಾದ ವಿಷಯಗಳ ಕುರಿತು ಮಾಹಿತಿಯನ್ನು ನೀಡಿರುತ್ತಾರೆ. ಕುಂಬ್ರಿ ಮರಾಠಿಗರು ವರ್ತಮಾನದಲ್ಲಿ ಸರ್ಕಾರದ ಯೋಜನೆಗಳಿಂದ ಪಡೆಯುತ್ತಿರುವ ಸೌಲಭ್ಯಗಳು ಮತ್ತು ಅವುಗಳ ಇತಿಮಿತಿಗಳನ್ನು ಹಾಗೂ ಸಮಸ್ಯೆಗಳನ್ನು ಈ ಕೃತಿಯಲ್ಲಿ ವಿಶ್ಲೇಷಿಸಿದ್ದಾರೆ. ಒಟ್ಟಿನಲ್ಲಿ ಕುಂಬ್ರಿ ಮರಾಠಿ ಸಮುದಾಯವು ಮೂಲತಃ ಪಶುಪಾಲಕ ಸಮುದಾಯವಾಗಿದ್ದು, ಅದು ಕಾಲಾಂತರದಲ್ಲಿ ಕುಮೇರಿ ಬೇಸಾಯವನ್ನು ರೂಪಿಸಿಕೊಂಡು ಕೃಷಿಕ ಸಮುದಾಯವಾಗಿ ರೂಪಾಂತರಗೊಂಡಿದೆ ಎಂಬುದು ಅವರು ವ್ಯಕ್ತಪಡಿಸಿರುತ್ತಾರೆ.

• ***ಮಲ್ಲಿಕಾರ್ಜುನ ಸ. ಸೊಬರದ ಅವರ ಪಿಎಚ್ ಡಿ. ಮಹಾಪ್ರಬಂಧ, "ಕುಣಬಿ ಸಮುದಾಯದ–ಸಾಮಾಜಿಕ ಆರ್ಥಿಕ ಸ್ಥಿತಿಗತಿಗಳ ಅಧ್ಯಯನ, (ಉತ್ತರ ಕನ್ನಡ ಜಿಲ್ಲೆಯನ್ನು ಪರಿಗಣಿಸಿ), ಕನ್ನಡ ವಿಶ್ವವಿದ್ಯಾಲಯ, ಹಂಪಿ.*** ಈ ಪ್ರಬಂಧದಲ್ಲಿ ಮರಾಟಿ ಸಮುದಾಯದ ಕುಣಬಿ ಸಮುದಾಯದವರನ್ನು ಕುರಿತು ಕ್ಷೇತ್ರ ಆಧಾರಿತ ಅಧ್ಯಯನವಾಗಿದೆ. ಕುಣಬಿಯವರ ಸಂಸ್ಕೃತಿಯನ್ನು ಈ ಪ್ರಬಂಧದಲ್ಲಿ ವಿವರಿಸುವ ಪ್ರಯತ್ನ ಮಾಡಿದ್ದಾರೆ. ಉತ್ತರ ಕನ್ನಡ ಜಿಲ್ಲೆಯಲ್ಲಿ ವಾಸಿಸುವ ಕುಣಬಿಯವರ ಸಾಮಾಜಿಕ

ಪದ್ಧತಿ, ಕೌಟುಂಬಿಕ ವ್ಯವಸ್ಥೆ, ಒಳಾಡಳಿತ ಹಾಗೂ ನ್ಯಾಯಪದ್ಧತಿ, ಆಹಾರ ಕ್ರಮ ಉಡುಗೆ ತೊಡುಗೆ, ವಸತಿ ವ್ಯವಸ್ಥೆ, ಕಸುಬುಗಳು, ಕ್ರೀಡೆಗಳು, ಸಂಸ್ಕಾರಗಳು, ಆರಾಧನೆಗಳು ಹಾಗೂ ಆಚರಣೆಗಳು ಮುಂತಾದವುಗಳನ್ನು ಈ ಪ್ರಬಂಧ ಒಳಗೊಂಡಿದೆ. ಬದಲಾಗುತ್ತಿರುವ ಕಾಲಕ್ಕೆ ತಕ್ಕಂತೆ ಅವರ ಬದುಕಿನ ಮೇಲೆ ಇತರ ಸಮುದಾಯದವರ ಪ್ರಭಾವವನ್ನು ಗುರುತಿಸುವ ಪ್ರಯತ್ನವನ್ನು ಸಂಶೋಧಕರು ಮಾಡಿದ್ದಾರೆ. ಕುಣಬಿ ಮತ್ತು ಕುಡುಬಿ ಸಮುದಾಯದವರ ಸಂಸ್ಕೃತಿಯಲ್ಲಿ ಕಂಡುಬರುವ ಸಾಮ್ಯತೆಗಳನ್ನು ಅಲ್ಪಪ್ರಮಾಣದಲ್ಲಿ ಅಧ್ಯಯನವನ್ನು ಸಂಶೋಧಕರು ಮಾಡಿರುತ್ತಾರೆ. ಅಲ್ಲದೆ, ಕುಣಬಿ ಸಮುದಾಯದವರ ಸಂಘಟನೆ, ಕುಮೇರಿ ಬೇಸಾಯಕ್ಕೆ ಸಂಬಂಧಿತ ಹೋರಾಟಗಳು, ಅರಣ್ಯ ಹಕ್ಕುಗಳ ಹೋರಾಟಗಳು, ಮೀಸಲಾತಿ ಚಳುವಳಿ, ಕುಣುಬಿಯವರ ಮೀಸಲಾತಿ ಚಳುವಳಿಗಳು, ಆದಿವಾಸಿಗಳ ಪಟ್ಟಿ ಸೇರ್ಪಡೆಗೊಳಿಸುವಂತೆ ಸುಧೀರ್ಘ ಹೋರಾಟ ಪ್ರತಿಭಟನೆಗಳ ವಿವರಣೆಯನ್ನು ಸಂಶೋಧಕರು ನೀಡಿರುತ್ತಾರೆ. ಕುಣುಬಿ ಸಮುದಾಯಕೋಸ್ಕರ ಸರ್ಕಾರ ಹಮ್ಮಿಕೊಂಡಿರುವ ಅಭಿವೃದ್ಧಿ ಯೋಜನೆಗಳು, ಕಾಡು ಮತ್ತು ಇವರಿಗಿರುವ ಕಾಡಿನ ಸಂಬಂಧಗಳು, ಅಭಿವೃದ್ಧಿ ಯೋಜನೆ, ಸ್ಥಳಾಂತರ ಮತ್ತು ಪರಿಣಾಮಗಳನ್ನು ವಿವರಿಸಿದ್ದಾರೆ. ಒಟ್ಟಿನಲ್ಲಿ ಕುಣುಬಿಗಳು ಬುಡಕಟ್ಟುಗಳ ಲಕ್ಷಣಗಳನ್ನು ಹೊಂದಿದ್ದರೂ ಬುಡಕಟ್ಟು ಅಥವಾ ಆದಿವಾಸಿ ಅಲ್ಲದ ಬುಡಕಟ್ಟುಗಳು ಎಂಬುದಾಗಿ ತಿಳಿಸಿರುವರು. ಒಟ್ಟಿನಲ್ಲಿ ಧಾರ್ಮಿಕ, ಸಾಂಸ್ಕೃತಿಕ, ಆರ್ಥಿಕ ಹಾಗೂ ಶೈಕ್ಷಣಿಕ ಸಂಘಟನೆ ಹೋರಾಟಗಳ ಅಂಶಗಳ ಬಗ್ಗೆ ಬೆಳಕು ಚೆಲ್ಲಿದ್ದಾರೆ.

• ***ಶಂಭು. ಎಸ್. ಫಾಡಿ, Historical and Comparative Study of Kunbi of Central Karnataka and Aborigine Tribe of Goa (ಕರಾವಳಿ ಕರ್ನಾಟಕ ಮತ್ತು ಗೋವಾ ಮೂಲದ ಅಧ್ಯಯನ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೮.*** ಶಂಭು. ಎಸ್. ಫಾಡಿ ಅವರ ಕರಾವಳಿ ಕರ್ನಾಟಕದ ಮತ್ತು ಗೋವಾ ಮೂಲದ ಕುಣಬಿ ಬುಡಕಟ್ಟಿನ ಐತಿಹಾಸಿಕ ಮತ್ತು ತುಲಾನಾತ್ಮಕ ಅಧ್ಯಯನ ಎಂಬ ಅಪ್ರಕಟಿತ ಪಿಎಚ್.ಡಿ ಮಹಾಪ್ರಬಂಧದಲ್ಲಿ ಕರಾವಳಿ ಕರ್ನಾಟಕ ಮತ್ತು ಗೋವಾ ಮೂಲದ ಕುಣುಬಿ(ಕುಡುಬಿ) ಬುಡಕಟ್ಟಿನ ತೌಲನಿಕ ಅಧ್ಯಯನ ಮಾಡಿದ್ದಾರೆ. ಗೋವಾ ರಾಜ್ಯದಲ್ಲಿರುವ ಗಾವಡಾ, ಕುಣುಬಿ ಹಾಗೂ ವೆಲಿಪ್ ಈ ಮೂರರಲ್ಲಿ ಯಾರು ನಿಜವಾದ ಗೋವಾ ಮೂಲದ ಬುಡಕಟ್ಟು ಎಂಬುದನ್ನು ತಿಳಿಯಲು ಪ್ರಯತ್ನಿಸಿದ್ದಾರೆ. ಗೋವಾದ ಕುಣುಬಿ ಬುಡಕಟ್ಟು ಯಾವ ಯಾವ ಕಾರಣಗಳಿಂದಾಗಿ ಕರಾವಳಿ ಕರ್ನಾಟಕದತ್ತ ವಲಸೆ ಹೋಗಿದೆ. ಎಂಬುದರ ಮಾಹಿತಿ ನೀಡಿರುತ್ತಾರೆ. ಪೋರ್ಚುಗೀಸರ ಕಾಲದ ಮತಾಂತರದ ಕಾರ್ಯದ ಪರಿಣಾಮ, ವ್ಯಾಪಾರ ವಿಸ್ತರಣೆ, ಮೇಲ್ವರ್ಗದವರ ತಾರತಮ್ಯ ನೀತಿ, ಶೋಷಣೆ ಮುಂತಾದ ಕಾರಣಗಳಿಂದಾಗಿ ಕುಣುಬಿ ಮತ್ತಿತರ ಆರ್ಥಿಕವಾಗಿ ದುರ್ಬಲವಿರುವ ಸಮುದಾಯಗಳು ಗೋವಾ ಪ್ರದೇಶದಿಂದ ವಲಸೆ ಹೋಗಿರುವುದಾಗಿ ತಿಳಿಸಿರುವರು. ಅಲ್ಲದೆ ಗೋವಾದ ಕುಣುಬಿ ಮತ್ತು ಕರಾವಳಿ ಕರ್ನಾಟಕದ ಕುಡುಬಿಗಳ ಸಾಮಾಜಿಕ ಧಾರ್ಮಿಕ, ಸಾಂಸ್ಕೃತಿಕ, ಆರ್ಥಿಕ ಮತ್ತು ಶೈಕ್ಷಣಿಕ ಸ್ಥಿತಿಗತಿಗಳ ಕುರಿತು ಅಧ್ಯಯನ ನಡೆಸಿರುವರು. ಕುಣುಬಿ ಸಮುದಾಯ ಎದುರಿಸುತ್ತಿರುವ ಸಮಸ್ಯೆ ಹಾಗೂ ಸವಾಲುಗಳನ್ನು ಕೂಡ ಅಧ್ಯಯನ ಮಾಡಿರುವರು, ಕರಾವಳಿ ಜಲ್ಲೆಯಾದ ದಕ್ಷಿಣ ಕನ್ನಡ ಹಾಗೂ ಗೋವಾದಲ್ಲಿ ವಾಸವಿರುವ ಕುಣುಬಿಗಳ ಮಧ್ಯೆ ಇರುವ ಸಾಮ್ಯತೆ ಮತ್ತು ವ್ಯತ್ಯಾಸಗಳನ್ನು ತಿಳಿಸಿರುವರು. ಮುಖ್ಯವಾಗಿ ಗೋವಾದಲ್ಲಿದ್ದ ಬುಡಕಟ್ಟು ಗುಣಲಕ್ಷಣವುಳ್ಳ ಕುಣುಬಿ, ವೆಲೀಪ್, ಗಾವಡೆ ಮುಂತಾದ ಆದಿವಾಸಿ ಸಮುದಾಯಗಳು ಕ್ರೈಸ್ತ ಧರ್ಮಕ್ಕೆ ಮತಾಂತರಗೊಂಡರು. ಮತಾಂತರ ಹೊಂದಿದ ಬಳಿಕ ಸಮುದಾಯದವರು ಕಾಲಾಂತರದಲ್ಲಿ ಕ್ರೈಸ್ತಧರ್ಮ ಬಿಟ್ಟು ತಮ್ಮ ಮೂಲ ಬುಡಕಟ್ಟಿಗೆ ಮರು ಮತಾಂತರಗೊಂಡ ವಿಚಾರ, ಅವುಗಳಿಗೆ ಕೆಲವು ಕಾರಣಗಳನ್ನು ಕೂಡ ಕೃತಿಯಲ್ಲಿ ತಿಳಿಸಿರುವರು.

ಹೀಗೆ ಗೋವಾದ ಮೂಲ ನಿವಾಸಿಗಳ ಮತ್ತು ಕುಣುಬಿ/ಕುಡುಬಿಗಳ ತೌಲನಿಕ ಅಧ್ಯಯನ ತನ್ನದೇಯಾದ ಮಹತ್ವವನ್ನು ಪಡೆದಿರುವುದು ಈ ನಿಟ್ಟಿನಲ್ಲಿ ಈ ಅಧ್ಯಯನವು ಮುಂದಿನ ಅಧ್ಯಯನಕಾರರುಗಳಿಗೆ ಮಾರ್ಗದರ್ಶಿಯಾಗಬಲ್ಲದು.

• ***ಮಹೇಂದ್ರ ಕುಮಾರ ಬಿ. ಪಿ., ಬುಡಕಟ್ಟುಗಳಲ್ಲಿ ಸೀಮಾ ಪದ್ಧತಿ, ತಾತ್ವಿಕ ವಿವೇಚನೆ ಅಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧ, ಬುಡಕಟ್ಟು ಅಧ್ಯಯನ ವಿಭಾಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೮.*** ಸಂಶೋಧಕರು ಈ ಪ್ರಬಂಧದಲ್ಲಿ "ಬುಡಕಟ್ಟು ಸೀಮಾ ಪದ್ಧತಿ– ತಾತ್ವಿಕ ವಿವೇಚನೆ" ಎಂಬ ಅಪ್ರಕಟಿತ ಮಹಾಪ್ರಬಂಧದಲ್ಲಿ ಕರಾವಳಿ ಕರ್ನಾಟಕದ ಉತ್ತರ ಕನ್ನಡ ಜಿಲ್ಲೆಯ ಕುಣುಬಿ ಸಮುದಾಯವನ್ನು ಕೇಂದ್ರವಾಗಿಟ್ಟುಕೊಂಡು ವಿವಿಧ ಬುಡಕಟ್ಟು ಸಮುದಾಯಗಳ ಸೀಮಾ ಪದ್ಧತಿಯನ್ನು ತೌಲನಿಕವಾಗಿ ಅಧ್ಯಯನ ಮಾಡಿರುತ್ತಾರೆ.

ಈ ಅಧ್ಯಯನದಲ್ಲಿ ಬುಡಕಟ್ಟುಗಳಲ್ಲಿರುವ ಸಾಂಸ್ಕೃತಿಕ ಆಚರಣೆಯಾದ 'ಸೀಮಾ ಪದ್ಧತಿ'ಯ ವೈಶಿಷ್ಟತೆ ಮತ್ತು ಮಹತ್ವಗಳನ್ನು ಕುರಿತಾದ ಅಧ್ಯಯನ ಕಂಡುಬರುತ್ತದೆ. ಸೀಮಾ ದೈವಗಳ ಆಚರಣೆಗಳು, ಕುಣುಬಿಯವರು ನೂರಾರು ವರ್ಷಗಳಿಂದ ನಂಬಿ ಆರಾಧಿಸುತ್ತಿರುವ ದೈವಗಳ ಪರಿಚಯ, ಅವರ ಪಾರಂಪರಿಕ ಕೃಷಿಯ ಮಹತ್ವವನ್ನು ವಿವರಿಸಿರುವರು. ಈ ಮಹಾಪ್ರಬಂಧದಲ್ಲಿ ಆಹಾರ ಸಂಗ್ರಹಕಾರರಾಗಿರುವ ಬೆಟ್ಟಕುರುಬ, ಜೇನುಕುರುಬ ಬುಡಕಟ್ಟುಗಳು, ಬೇಟೆ ವೃತ್ತಿಯಲ್ಲಿ ತೊಡಗಿರುವ ಮ್ಯಾಸಬೇಡರ, ಪಶುಪಾಲನ ಸಮುದಾಯವಾಗಿರುವ ಕಾಡುಗೊಲ್ಲರು ಕೃಷಿಕ ಸಮುದಾಯವಾಗಿರುವ ಕುಣುಬಿ, ಹಾಲಕ್ಕಿ ಒಕ್ಕಲಿಗರು, ಸಿದ್ಧಿಗಳು, ಸೋಲಿಗರು ಮತ್ತಿತರ ಸಮುದಾಯಗಳ ಸೀಮಾಪದ್ಧತಿಗಳನ್ನು ತೌಲನಿಕವಾಗಿ ವಿಶ್ಲೇಷಿಸಿರುವರು. ಅಲ್ಲದೆ ವಿದೇಶಗಳಲ್ಲಿ ಕೆಲವು ಆದಿವಾಸಿಗಳ ಸೀಮಾ 'ದ್ಧತಿ ಮತ್ತು ಸೀಮಾಪದ್ಧತಿಯೊಳಗೆ ಬುಡಕಟ್ಟುಗಳ ಪಾರಂಪರಿಕ ಜ್ಞಾನ, ನಾಟಿ ವೈದ್ಯಕೀಯ ಪದ್ಧತಿ, ನ್ಯಾಯವ್ಯವಸ್ಥೆ ಮುಂತಾದ ಅಂಶಗಳ ಕುರಿತು ವಿಶ್ಲೇಷಿದ್ದಾರೆ.

ಬುಡಕಟ್ಟುಗಳ ಭೂಮಿ, ಗಡಿ ಮತ್ತು ಸಂಪನ್ಮೂಲ ಹಕ್ಕುಗಳಾಗಿ ನಡೆಸುತ್ತಿರುವ ಹೋರಾಟ, ಚಳುವಳಿ, ಸಂಘಟನೆ ಮತ್ತು ವ್ಯಾಜ್ಯ ಹಾಗೂ ನ್ಯಾಯತೀರ್ಮಾನಗಳ ಬಗ್ಗೆ ಮಾಹಿತಿಗಳು ಈ ಪ್ರಬಂಧದಲ್ಲಿ ಕಂಡು ಬರುತ್ತದೆ.

ಇಲ್ಲಿಯವರೆಗೆ ಪ್ರಕಟಿತ ಲೇಖನಗಳ ಸಮೀಕ್ಷೆ

• ***ಡಾ.ಎಸ್. ಮೋಹನ್, ಅವರ "ಭೈರವ ಆರಾಧನೆ"*** ಎಂಬ ಲೇಖನದಲ್ಲಿ ದಕ್ಷಿಣ ಕನ್ನಡದಲ್ಲಿ ವಾಸವಿರುವ ಮರಾಟಿ ಸಮುದಾಯದಲ್ಲಿನ ಮರಾಟಿ ನಾಯ್ಕರು ಆರಾಧಿಸಿಕೊಂಡು ಬಂದಿರುವ ಭೈರವ ದೈವದ ಬಗ್ಗೆ ವಿವರಣೆ ನೀಡಿರುತ್ತಾರೆ. ಆತ ದುಷ್ಟಶಕ್ತಿಯ ನಿಗ್ರಹ ಮತ್ತು ಸಮೃದ್ಧಿಯ ಪರಿಕಲ್ಪನೆಯ ಆಶಯವನ್ನು ಪ್ರಕಟಿಸುವ ದೈವ ಎಂಬುದಾಗಿ ಅಭಿಪ್ರಾಯಪಟ್ಟಿರುತ್ತಾರೆ. ಅವರದ್ದೆಯಾದ ಮತ್ತೊಂದು ಲೇಖನ "ಮರಾಟಿ ಬುಡಕಟ್ಟಿನ ಭೈರವಾರಾಧನೆ"

• ***ಡಾ ಕೆ.ಎಂ.ಮೇತ್ರಿ, ಡಾ. ಚೆಲುವರಾಜು (ಸಂ) ಬುಡಕಟ್ಟು ಅಧ್ಯಯನ ಸಂಪುಟ (೪), ಸಂಚಿಕೆ (೧) ಜನವರಿ – ಡಿಸೆಂಬರ್ ೨೦೦೭.*** ಅರ್ಧವಾರ್ಷಿಕ ಸಂಚಿಕೆಯಲ್ಲಿ ಮರಾಟಿ ಬುಡಕಟ್ಟು ಸಮುದಾಯದವರು ಆರಾಧಿಸುತ್ತಿರುವ ಭೈರವ ದೈವದ ಬಗ್ಗೆ ಪರಿಚಯಿಸಿದ್ದಾರೆ. ಅಲ್ಲದೆ ಅವರ ಮತ್ತೊಂದು ಲೇಖನ "ಕಣ್ಮರೆಯಾದ ಜನಪದ ಕುಣಿತ" – "ಬಾಲೆಸಾಂತು" ಮಾರಾಟಿ ನಾಯ್ಕರಲ್ಲಿ ಪ್ರಚಲಿತದಲ್ಲಿದ್ದ 'ಬಾಲೆಸಾಂತು' ಕುಣಿತದ ವಿವರಣೆ ಹಾಗೂ ಇಂದು ಭಾಗಶಃ ಕಣ್ಮರೆಯಾಗಿರುವುದನ್ನು ವಿಶ್ಲೇಷಿಸಿದ್ದಾರೆ.

• *ಶ್ರೀ ಕೈತಂಜಿ ನರಸಿಹಭಟ್ಟರವರ 'ಗೊಂದಲ ಪೂಜೆ'ಎಂಬ ಲೇಖನದಲ್ಲಿ ಸಂದರ್ಶನ* ಮರಾಟಿ ನಾಯ್ಕ ಸಮುದಾಯವು ಕಾಳಭೈರವ ಹಾಗೂ ದೇವಿಯ ಉಪಾಸಕರು. ಮರಾಟಿಗಳು ಮಹಾರಾಷ್ಟ್ರದಿಂದ ವಲಸೆ ಬರುವಾಗ ತಮ್ಮೊಂದಿಗೆ ತಾವು ಆರಾಧಿಸುವ ದೇವರನ್ನು ಈ ಪ್ರದೇಶಕ್ಕೆ ತಂದಿರುವುದಾಗಿ ತಿಳಿಸಿರುತ್ತಾರೆ. ಅಲ್ಲದೆ ಗೋಂದಲ ಪೂಜೆಯ ಕೆಲವು ವಿವರಣೆಯನ್ನು ನೀಡಿರುತ್ತಾರೆ.

• ***ಪ್ರೊ. ಎಚ್.ಜೆ. ಲಕ್ಕಪ್ಪ ಗೌಡ, ಅವರ "ಕರ್ನಾಟಕ ಬುಡಕಟ್ಟುಗಳು" ಸಂಪುಟ: ೧ ಮತ್ತು ಸಂ: ೨'*** ಉತ್ತರ ಕನ್ನಡ ಜಿಲ್ಲೆಯ ಹಲವಾರು ಆದಿವಾಸಿ ಸಮುದಾಯಗಳ ಕುರಿತು ಸಂಕ್ಷಿಪ್ತವಾದ ಬರಹಗಳಿವೆ. ಇದರಲ್ಲಿ ಡಾ. ಅಭಯ್ ಕುಮಾರ್ ಕೌಶಿಕಡಿ ಅವರ 'ಕುಡುಬಿಯವರು' ಎಂಬ ಲೇಖನದಲ್ಲಿ ಈ ಸಮುದಾಯದ ಅಧ್ಯಯನದ ಉದ್ದೇಶ ಹಾಗೂ ಕುಡುಬಿ ಬುಡಕಟ್ಟು ಸಮುದಾಯ ಎಂಬುದಾಗಿ ಗುರುತಿಸಿದ್ದಾರೆ. ಗೋವಾ ಕುಡುಬಿಯರ ಮೂಲನೆಲೆ, ಭಾಷೆ, ಆಹಾರ ಪದ್ಧತಿ, ಬೇಟೆ ಪದ್ಧತಿ, ಧಾರ್ಮಿಕ ನಂಬಿಕೆ ಮತ್ತು ಆರಾಧನೆಗಳು, ನ್ಯಾಯ ಪದ್ಧತಿ, ಸಾಂಸ್ಕೃತಿಯ ಕಲೆಗಳ ವಿವರಗಳನ್ನು ನೀಡಿರುತ್ತಾರೆ.

• ***ಡಾ. ಡಿ. ಬಿ. ನಾಯಕ – 'ಗಿರಿಜನ ಸಿರಿ' – ೨೦೦೩. ಪ್ರೊ. ಪಿ. ಕೆ. ಖಂಡೋಬಾ*** ಅಭಿನಂದನ ಸಂಪುಟದಲ್ಲಿ ಎ. ಸಿ. ಲಲಿತ ಅವರು 'ಕರ್ನಾಟಕದಲ್ಲಿ ಬುಡಕಟ್ಟುಗಳ ಅಧ್ಯಯನ' ಎಂಬ ಲೇಖನದಲ್ಲಿ ಕುಣುಬಿ ಸಮುದಾಯದ ಜೀವನ ವಿಧಾನಗಳ ಸ್ಥೂಲವಾದ ವಿವರಣೆಯಿದೆ.

• **ಗಾಯತ್ರಿ ನಾವಡ, (ಲೇ) "ತವರಿನ ಕಟ್ಟು ಕಡಿವ ಕುಡುಬಿ ವಿವಾಹ"** ಭಂಡಾರ್‌ಕಾರ್ಸ್ ಕಾಲೇಜು ಕುಂದಾಪುರ ಇಲ್ಲಿಯ ಬೆಳ್ಳಿ ಹಬ್ಬದ ಸ್ಮರಣ ಸಂಚಿಕೆ ೧೯೯೮ರಲ್ಲಿ ಶ್ರೀಮತಿ ಗಾಯತ್ರಿ ನಾವಡ ಇವರು "ತವರಿನ ಕಟ್ಟು ಕಡಿವ ಕುಡುಬಿ ವಿವಾಹ" ಎಂಬ ಲೇಖನದಲ್ಲಿ ಕುಡುಬಿ ಸಮುದಾಯದ ವಿವಾಹ ಪದ್ಧತಿಯ ಕುರಿತು ವಿಶ್ಲೇಷಿಸಿರುತ್ತಾರೆ.

• ***Radhamani T R., (Articale), ("Indians Streams Research Journal" vol. 4 issue 8 Sept. 2014 (ISBN 2230-7850) (www.issi.net)*** ಮರಾಟಿ ಸಮುದಾಯವು ತನ್ನ ಭಾಷೆ, ಧಾರ್ಮಿಕ ಆಚರಣೆಗಳನ್ನು ಭಿನ್ನವಾಗಿ ಹೊಂದಿದ್ದು, ಪ್ರತ್ಯೇಕವಾದ ಆಸ್ತಿತ್ವವನ್ನು ಹೊಂದಿರುತ್ತದೆ. ಅಲ್ಲದೆ ಅನೇಕ ಸಮಸ್ಯೆಗಳನ್ನು ಎದುರಿಸುತ್ತಿದೆ ಎಂಬುದಾಗಿ ತಿಳಿಸಿರುವರು.

ಸರಕಾರದ ವರದಿಗಳ ಸಮೀಕ್ಷೆ

• ***ಎಲ್.ಜಿ. ಹಾವನೂರ, 'ಕರ್ನಾಟಕ ಹಿಂದುಳಿದ ವರ್ಗಗಳ ಆಯೋಗದ ವರದಿಯಲ್ಲಿ ಸಂ: ೧ ಮತ್ತು ೨"*** ಕುಡುಬಿಯವರನ್ನು ಹಿಂದುಳಿದ ಜಾತಿಗೆ ಸೇರಿದವರೆಂದು ತಿಳಿಸಿ ಸದರಿ ವರದಿಯು ಇವರನ್ನು ಹಿಂದುಳಿದ ಜಾತಿಯ ಪಟ್ಟಿಯಲ್ಲಿ ಸೇರಿಸಿದೆ. ಆದರೆ ೧೯೬೩ನೇ ಇಸವಿ ತನಕ ಇವರನ್ನು ಬುಡಕಟ್ಟು ಜನರೆಂದು ಸರಕಾರ ಪರಿಗಣಿಸಿತ್ತು.

• ***ಬಾಂಬೆ ಗೆಜೆಟೀಯರ್, ೧೯೮೩, 'ಕರ್ನಾಟಕ ಭಾಗದ್ದು ಅಥವಾ ದಕ್ಷಿಣ ಮಹಾರಾಷ್ಟ್ರ ಸಂಸ್ಥಾನಗಳು' ಭಾಗ: ೧೩*** ಎಂಬ ಗ್ರಂಥದಲ್ಲಿ ಕುಣುಬಿ ಸಮುದಾಯ ನೆಲೆಸಿರುವ ತಾಲೂಕು ಅವರ ಜನಸಂಖ್ಯೆಗಳ ಬಗ್ಗೆ ಕುರಿತು ವಿವರಿಸಿರುತ್ತಾರೆ.

• ***ಕರ್ನಾಟಕ ಸ್ಟೇಟ್ ಗೆಜೇಟಿಯರ್ ಉತ್ತರ ಕನ್ನಡ ಜಿಲ್ಲೆ'*** ಈ ಕೃತಿಯಲ್ಲಿ ಉತ್ತರ ಕನ್ನಡ ಜಿಲ್ಲೆಯಲ್ಲಿನ ಸಮುದಾಯಗಳ ಕಿರುಪರಿಚಯ ನೀಡುವಾಗ ಕುಣುಬಿ ಸಮುದಾಯ ಕುರಿತು ಸ್ಥೂಲವಾಗಿ ಪರಿಚಯಿಸಿದ್ದಾರೆ.

• ***ಕರ್ನಾಟಕ ರಾಜ್ಯ ಪತ್ರ ಏಪ್ರಿಲ್ ೧೧ ೨೦೦೨ರ*** ಪ್ರಕಾರ ಕುಣುಬಿಗಳನ್ನು ಪ್ರವರ್ಗ – ೧ರಲ್ಲಿ ಸೇರಿಸಲ್ಪಟ್ಟಿದ್ದಾರೆ. (ಸರಕಾರಿ ಆದೇಶ ಸಂಖ್ಯೆ – ಸಕಇ/೨೨೫ ಬಿಸಿಎ, ೨೦೦೦ ಬೆಂಗಳೂರು – ೩೦ ಮಾರ್ಚ್ ೨೦೦೨)

• ***ಗವರ್ನಮೆಂಟ್ ಆಫ್ ಗೋವಾ, ಏಪ್ರಿಲ್ ೨೨ ೨೦೦೩ರ*** ಆದೇಶದಲ್ಲಿ ಗೋವಾ ಸರಕಾರ ಆ ರಾಜ್ಯದಲ್ಲಿ ವಾಸಿಸುವ ಕುಣುಬಿ, ವೇಳಪ ಮತ್ತು ಗಾವಡ ಮೂರು ಸಮುದಾಯಗಳನ್ನು ಷೆಡ್ಯೂಲ್ಡ್ ಟ್ರೈಬ್ಸ್ (ಪರಿಶಿಷ್ಟ ಪಂಗಡ) ಎಂಬುದಾಗಿ ಘೋಷಿಸಿರುತ್ತದೆ. (ಆಧಾರ : ಡೈರೆಕ್ಟರ್ ಆಫ್ ಸೋಶಿಯಲ್ ವೆಲ್‌ಫೇರ್, ಗವರ್ನಮೆಂಟ್ ಆಫ್ ಗೋವಾ ಏಪ್ರಿಲ್ ೨೨, ೨೦೦೩)

• ***Mahamadh Peer, "Social, Economic and Educational Conditions of Koragas - An Action Plan".*** ಮಂಗಳೂರು ವಿಶ್ವವಿದ್ಯಾಲಯದ ಸಮಾಜಶಾಸ್ತ್ರ ವಿಭಾಗದ ಪ್ರಾಧ್ಯಾಪಕ ಡಾ. ಮಹಮ್ಮದ್ ಪೀರ್ ಅವರು ದಕ್ಷಿಣ ಕನ್ನಡ ಜಿಲ್ಲಾ ಪರಿಷತ್ತಿಗಾಗಿ ಕೊರಗ ಸಮುದಾಯದ ಆರ್ಥಿಕ, ಸಾಮಾಜಿಕ, ಶೈಕ್ಷಣಿಕ ಸ್ಥಿತಿಗತಿ ಒಂದು ಕಿರು ಯೋಜನೆಯನ್ನು ಅತ್ಯಂತ ವೈಜ್ಞಾನಿಕವಾಗಿ ಸಿದ್ಧಪಡಿಸಿ ವರದಿಯನ್ನು ಸಲ್ಲಿಸಿದ್ದಾರೆ. ಇಲ್ಲಿ ಚರ್ಚಿತವಾದ ಸಂಗತಿಗಳು ಕ್ಷೇತ್ರಕಾರ್ಯ ಆಧಾರಿತವಾಗಿದ್ದು ಕೊರಗ ಸಮುದಾಯವನ್ನು ಕುರಿತು ಖಚಿತ ಅಂಕಿ ಸಂಖ್ಯೆಗಳು ದೊರೆಯುತ್ತವೆ. ಕೊರಗ ಬುಡಕಟ್ಟು ಸಮುದಾಯದ ಆರ್ಥಿಕ, ಸಾಮಾಜಿಕ, ಶೈಕ್ಷಣಿಕ ಸ್ಥಿತಿಗತಿಗಳನ್ನು ಯಾವುದೇ ಪೂರ್ವಾಗ್ರಹವಿಲ್ಲದ ಒಬ್ಬ ಸಮಾಜಶಾಸ್ತ್ರಜ್ಞನ ದೃಷ್ಟಿಕೋನ ಈ ವರದಿಯಲ್ಲಿ ಪ್ರತಿಫಲಿಸಿದೆ.

ಈ ಮೇಲೆ ಪರಾಮರ್ಶೆ ಮಾಡಲಾದ ಲೇಖನಗಳು, ಗ್ರಂಥಗಳು, ಸಂಶೋಧನಾ ಗ್ರಂಥಗಳು ಪ್ರಸ್ತುತ ಅಧ್ಯಯನಕ್ಕೆ ಪೂರಕವಾಗಿದ್ದು, ಅಧ್ಯಯನವು ಯಾವ ನಿಟ್ಟಿನಲ್ಲಿ ಸಾಗಬೇಕು, ಯಾವ ಯಾವ ಅಂಶಗಳು ಒಳಗೊಳ್ಳಬೇಕು ಹಾಗೂ ಯಾವ ಯಾವ ಅಂಶಗಳಿಗೆ ಒತ್ತುಕೊಡಬೇಕು, ಬದಲಾವಣೆಗೆ ಪೂರಕವಾದ ಮತ್ತು ಅದಕ್ಕೆ ತಡೆ ಒಡ್ಡುವ ಅಂಶಗಳು, ಕುಟುಂಬ ಪದ್ಧತಿ, ಮಕ್ಕಳ ಹಾಗೂ ಅಳಿಯ ಸಂತಾನ ಕಟ್ಟು, ಜೀವನಾವರ್ತನ ಆಚರಣೆಗಳು, ವಾರ್ಷಿಕಾವರ್ತನ ಆಚರಣೆಗಳು, ಸಂಸ್ಕಾರಗಳು, ಮಹಿಳೆಯರ ಸ್ಥಾನಮಾನಗಳು, ಕುಲಕಸುಬುಗಳು, ಮುಂತಾದ ಎಲ್ಲಾ ಅಂಶಗಳು ಈ ಗ್ರಂಥಗಳು ಮತ್ತು ಲೇಖನಗಳಲ್ಲಿ ಒಳಗೊಂಡಿವೆ. ಪ್ರಸ್ತುತ ಅಧ್ಯಯನವು ಬುಡಕಟ್ಟು ಸಮುದಾಯದ ಹಾಗೂ ಜಾತಿಯ ತೌಲನಿಕ ಅಂಶಗಳ ಕುರಿತು ಇರುವುದರಿಂದ ಮೇಲಿನ ಅಧ್ಯಯನಗಳು ಪೂರಕವಾದ ಮಾಹಿತಿಯನ್ನು ನೀಡುವುದರ ಜೊತೆಗೆ ಅಧ್ಯಯನವು ಯಾವ ಜಾಡಿನಲ್ಲಿ ಸಾಗಬೇಕೆಂಬುದರ ಬಗ್ಗೆಯೂ ಮಾರ್ಗದರ್ಶನ ನೀಡುತ್ತದೆ. ಒಟ್ಟಾರೆಯಾಗಿ ಮೇಲಿನ ಎಲ್ಲಾ ಪರಾಮರ್ಶನ ಗ್ರಂಥಗಳೂ ಈ ಅಧ್ಯಯನದ ದೃಷ್ಟಿಯಿಂದ ಬಹಳ ಮಹತ್ವದಾಗಿದೆ ಎಂದು ಹೇಳಬಹುದು.

ಅಧ್ಯಾಯ : ಎರಡು.....

ಕರಾವಳಿ ಕರ್ನಾಟಕದ ಮರಾಟಿ ಸಮುದಾಯಗಳು

೨.೧. ಕರಾವಳಿ ಕರ್ನಾಟಕದ ಭೌಗೋಳಿಕ ಮತ್ತು ಚಾರಿತ್ರಿಕ ಹಿನ್ನೆಲೆ
೨.೨. ಬದಲಾಗುತ್ತಿರುವ ಬುಡಕಟ್ಟುಗಳ ಪರಿಕಲ್ಪನೆ
೨.೩. ಸಂವಿಧಾನ ಬದ್ಧವಾಗಿ ಪರಿಶಿಷ್ಟ ಪಂಗಡದಲ್ಲಿ ಸೇರಿರುವ ಬುಡಕಟ್ಟುಗಳು
೨.೪. ಕರಾವಳಿ ಕರ್ನಾಟಕದ ಮರಾಟಿ ಸಮುದಾಯಗಳು

ಅಧ್ಯಾಯ : ಎರಡು

ಕರಾವಳಿ ಕರ್ನಾಟಕದ ಮರಾಟಿ ಸಮುದಾಯಗಳು

೨.೧. ಕರಾವಳಿ ಕರ್ನಾಟಕದ ಭೌಗೋಳಿಕ ಮತ್ತು ಚಾರಿತ್ರಿಕ ಹಿನ್ನೆಲೆ

ಬಹುಜನಾಂಗೀಯತೆಗೆ ಮತ್ತು ಬಹುಭಾಷಿಕತೆಗೆ ಒಂದು ಮಾದರಿಯಂತಿರುವ ಕರಾವಳಿ ಕರ್ನಾಟಕವು ಇತಿಹಾಸದ ಪ್ರಯೋಗ ಶಾಲೆಯಂತಿದೆ. ಕರಾವಳಿ ಜಿಲ್ಲೆಗಳಾದ ಉತ್ತರ ಕನ್ನಡ, ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗೆ ಅದರದ್ದೆ ಆದ ಪ್ರಾದೇಶಿಕ ವೈಶಿಷ್ಟ್ಯಗಳಿವೆ. ಆ ವೈಶಿಷ್ಟತೆಯು ಅದು ಅಲ್ಲಿಯ ನಿಸರ್ಗದಿಂದ ರೂಪಿತಗೊಂಡಿರುವಂತಹುದು. ಈ ದೃಷ್ಟಿಯಲ್ಲಿ ಅವಿಭಜಿತ ದಕ್ಷಿಣ ಕನ್ನಡ (ಉಡುಪಿ ಹಾಗೂ ದಕ್ಷಿಣ ಕನ್ನಡ) ವೈವಿಧ್ಯಮಯವಾದ ಅಂಶಗಳನ್ನು ಪ್ರಾದೇಶಿಕ ವ್ಯಕ್ತಿತ್ವದಲ್ಲಿ ಒಳಗೊಂಡಿದೆ. ಮಲೆನಾಡು, ಅರೆಮಲೆನಾಡು ಕರಾವಳಿಗಳ ವೈಶಿಷ್ಟ್ಯವನ್ನು ಮೈಗೂಡಿಸಿಕೊಂಡಿವೆ. ಪಶ್ಚಿಮ ಘಟ್ಟ ಮತ್ತು ಅರಬ್ಬೀ ಸಮುದ್ರದ ಮಧ್ಯದಲ್ಲಿ ಅಗಲವಾದ ಪ್ರದೇಶವೇ ಅವಿಭಜಿತ ದಕ್ಷಿಣ ಕನ್ನಡ. ೧೮೬೨ರಲ್ಲಿ ಬ್ರಿಟಿಷರಿಂದ ವಿಭಜಿಸಲ್ಪಡುವವರೆಗೆ ದಕ್ಷಿಣ ಕನ್ನಡವನ್ನು 'ಕೆನರಾ ಜಿಲ್ಲೆ'ಯೆಂದೇ ಕರೆಯಲ್ಪಡುತ್ತಿತ್ತು. ಪೋರ್ಚುಗೀಸರು ಕರೆದ 'ಕೆನರಾ' ಜಿಲ್ಲೆಯನ್ನು ಆಡಳಿತದ ಅನುಕೂಲಕ್ಕಾಗಿ ಬ್ರಿಟಿಷರು ಉತ್ತರ ಮತ್ತು ದಕ್ಷಿಣ ಕನ್ನಡಗಳೆಂದು ವಿಭಜಿಸಿದರು. ಇತ್ತೀಚೆಗೆ ೧೯೯೭ ಆಗಸ್ಟ್ ೨೫ರಂದು ದಕ್ಷಿಣ ಕನ್ನಡವನ್ನು ಉಡುಪಿ ಮತ್ತು ಮಂಗಳೂರು ಜಿಲ್ಲೆಗಳೆಂದು ವಿಂಗಡಿಸಿದರೂ ಇವುಗಳ ಸಾಂಸ್ಕೃತಿಕ ನೆಲೆಗಟ್ಟು ಒಂದೇ ಆಗಿದೆ.

ಉತ್ತರ ಕನ್ನಡ, ದಕ್ಷಿಣ ಕನ್ನಡ ಹಾಗೂ ಉಡುಪಿಯನ್ನೊಳಗೊಂಡ ಕರಾವಳಿಯು ಪಶ್ಚಿಮ ಘಟ್ಟದಲ್ಲಿ ಹುಟ್ಟಿ ಸುಮಾರು ೬೦ ಕಿ.ಮೀ.ಗಳಷ್ಟು ಹರಿದು ಪಶ್ಚಿಮದ ಅರಬ್ಬಿಸಮುದ್ರವನ್ನು ಸೇರುವ ಹಲವಾರು ಮುಖ್ಯ ನದಿಗಳಿವೆ. ನೇತ್ರಾವತಿ, ಗಂಗೊಳ್ಳಿ, ಸೀತಾನದಿ, ಸ್ವರ್ಣ ನದಿ ಇವು ವಿಶಾಲವಾದ ಹರವುವುಳ್ಳ ನದಿಗಳು. ಜಿಲ್ಲೆಯ ಮಳೆಯ ಪ್ರಮಾಣ ವಿಪುಲವಾಗಿದೆ. ಜೂನ್‌ನಿಂದ ಸೆಪ್ಟೆಂಬರ್‌ವರೆಗಿನ ಅವಧಿಯನ್ನು ಮಳೆಗಾಲವೆಂದು ಕರೆಯಬಹುದು. ಸರಾಸರಿ ಮಳೆ ೧೫೪.೭೩ ರಿಂದ ೩೯೩೦ ಮೀ.ಮೀ. ಮಳೆಯು ಕರಾವಳಿಯಲ್ಲಿ ಮೊದಲ್ಗೊಂಡು ಘಟ್ಟದ ಕಡೆಗೆ ಬಿರುಸಾಗಿ ಸಾಗುತ್ತದೆ. ಕರಾವಳಿ ಜಿಲ್ಲೆಯ ನಿಸರ್ಗ ಸೌಂದರ್ಯಗಳನ್ನು ಕಂಡು ಖ್ಯಾತ ಕವಯಿತ್ರಿ ಸರೋಜಿನಿ ನಾಯ್ಡು ಅವರು ಈ ಜಿಲ್ಲೆಗಳನ್ನು 'ನಂದನವನ' ಎಂದು ಕರೆದಿದ್ದರು.

ಕರಾವಳಿ ಕರ್ನಾಟಕದ ಚರಿತ್ರೆಯನ್ನು ಪ್ರಾಗ್ಯೈತಿಹಾಸಿಕ ಕಾಲದ ಅವಶೇಷಗಳನ್ನು ಪರಿಶೀಲಿಸಿದರೆ ಪುರಾತತ್ವ ಅನ್ವೇಷಣೆಗಳ ಪ್ರಕಾರ ಕೆನರಾದ ಚರಿತ್ರೆಯ ಕಾಲವನ್ನು ಸಾಂಸ್ಕೃತಿಕವಾಗಿ ಎರಡು ವಿಭಾಗ ಮಾಡಬಹುದು. ಪ್ರಾಗ್ಯೈತಿಹಾಸಿಕ ಯುಗದ ಬೃಹತ್‌ಶಿಲಾ ಸಂಸ್ಕೃತಿಯ ನೆಲೆಗಳು ಮತ್ತು

ಇತಿಹಾಸ ಪ್ರಾರಂಭ ಕಾಲದ ನೆಲೆಗಳು. ಇದರಲ್ಲಿ ಬೃಹತ್‌ಶಿಲಾ ಸಂಸ್ಕೃತಿಯ ನೆಲೆಗಳು ಪುತ್ತೂರು, ಬಡಕಜೆಕಾರು, ಮೂಡಬಿಡಂಬೂರು, ವಡ್ಡರಸೆ, ಬೇಳೂರುಗಳಲ್ಲಿ ಕಾಣಬಹುದು. ಹಾಗೆಯೆ ಇತಿಹಾಸ ಪ್ರಾರಂಭ ಕಾಲದ ನೆಲೆಗಳೆಂದರೆ ಉದ್ಯಾವರ, ಬಾರಕೂರು, ಹಟ್ಟಿಯಂಗಡಿಗಳು.

ಚರಿತ್ರೆಯ ಕಾಲದಿಂದ ಒಂದು ಕ್ಷಣ ಹಿಂದೆ ಸರಿದು ಈ ಭೂಮಿ ರಚನೆ ಹೇಗಾಯಿತು ಎಂದು ಯೋಚಿಸಿದರೆ, ಪುರಾಣದ ಕೆಲವು ಕತೆಗಳು ಸ್ವಲ್ಪ ವಿವರಣೆ ನೀಡುತ್ತವೆ. 'ತ್ರೇತಾಯುಗದಲ್ಲಿ ವಿಷ್ಣುವಿನ ಆರನೇ ಅವತಾರವಾದ ಪರಶುರಾಮನು ಗೋಕರ್ಣದಿಂದ ಕನ್ಯಾಕುಮಾರಿಯವರೆಗಿನ ಪ್ರದೇಶವನ್ನು ವರುಣನಿಂದ ಪಡೆದುಕೊಂಡ. ಪಶ್ಚಿಮ ಘಟ್ಟದ ತುದಿಯಲ್ಲಿ ನಿಂತು ಪರಶುರಾಮನು ಎಸೆದ ಕೊಡಲಿಯಿಂದಾಗಿ ಅರಬ್ಬಿ ಸಮುದ್ರವು ಹಿಂದೆ ಸರಿಯಿತೆಂದು ಬ್ರಹ್ಮಾಂಡ ಪುರಾಣದಿಂದ ತಿಳಿದುಬರುತ್ತದೆ'. ಹಿಂದೂ ಮಹಾಸಾಗರದ ತೀರ ಮತ್ತು ತಳಭಾಗಗಳನ್ನು 'ಗ್ಲೋಮರ್ ಛಾಲೆಂಜರ್' ಎಂಬ ಸಂಶೋಧನಾ ಹಡಗನ್ನು ಪರಿಶೀಲಿಸಿದಾಗ ಪಶ್ಚಿಮ ಸಮನಾಂತರವಾಗಿ ಸಮುದ್ರದಲ್ಲಿ ಸ್ತರಭಂಗ ಉಂಟಾಗಿ ಸಮುದ್ರ ತಳದ ಒಂದು ಭಾಗ ಕುಸಿದುರುವುದು ಕಂಡುಬಂದಿತು. ಈ ಕುಸಿತದಿಂದಾಗಿ ಸಮುದ್ರದ ಆಳವು ಹೆಚ್ಚಾಗಿ ಅದಕ್ಕೆ ನೀರು ಹರಿದಾಗ ತೀರದ ನೀರು ಹಿಂದೆ ಸರಿದಿರಬೇಕು ಎಂದು ತಿಳಿದು ಬಂದಿದೆ. ಅಂದರೆ ಪರಶುರಾಮನ ಕುರಿತಾದ ಕತೆಗೂ ವೈಜ್ಞಾನಿಕವಾಗಿ ಭೂರಚನೆಯ ಕುರಿತಾದ ಸಂಶೋಧನೆಗೂ ಸಂಬಂಧವಿರುವುದು ಕುತೂಹಲದ ಸಂಗತಿಯಾಗಿದೆ. ಕರಾವಳಿ ಜಿಲ್ಲೆಯಲ್ಲಿ ಮುಖ್ಯ ನದಿಗಳಾದ ಕುಮಾರಧಾರ, ಪಯಸ್ವಿನಿ, ಚಂದ್ರಗಿರಿ, ನೇತ್ರಾವತಿ ನದಿಗಳ ವಿಚಾರ ಕ್ರಮವಾಗಿ ಮಾರ್ಕಾಂಡೇಯ ಪುರಾಣ, ವಾಯು ಪುರಾಣ ಮತ್ತು ಭವಿಷ್ಯೋತ್ತರ ಪುರಾಣಗಳಲ್ಲಿ ತಿಳಿದುಬರುತ್ತದೆ.

"ಕ್ರಿ.ಶ. ಮೂರು ಮತ್ತು ನಾಲ್ಕನೆ ಶತಮಾನಗಳಿಗೆ ಸಂಬಂಧಿಸಿದ ತಮಿಳಿನ 'ಸಂಗಂ' ಗ್ರಂಥಗಳಲ್ಲಿ ಕವಿ ಮಾಮುಲನಾರ್ ಈ ಪ್ರದೇಶವನ್ನು 'ತುಳುನಾಡು' ಎಂದು ಕರೆದ ದಾಖಲೆ ಸಿಗುತ್ತದೆ. ಮೌರ್ಯರ ದೊರೆ ಅಶೋಕನ ಕಾಲದಲ್ಲಿ ಈ ನಾಡಿಗೆ 'ಸತಿಯ ಪುತ್ರ' ಎಂಬ ಉಲ್ಲೇಖವಿರುವುದು ಕಂಡುಬರುತ್ತದೆ"[೧]. ಭಾರತದ ಪಶ್ಚಿಮ ಕರಾವಳಿ ಮತ್ತು ಮೆಡಿಟರೇನಿಯನ್ ದೇಶಗಳ ವ್ಯಾಪಾರ ಸಂಬಂಧಗಳನ್ನು ನಾವು ಗ್ರೀಕ್ ಮತ್ತು ರೋಮನ್ ಬರಹಗಾರರ ಗ್ರಂಥಗಳಲ್ಲಿ ಕಾಣುತ್ತೇವೆ. "ಗ್ರೀಕ್ ಪ್ರವಾಸಿ 'ಪ್ಲೀನಿ' ಗ್ರಂಥದಲ್ಲಿ ನೇತ್ರಾವತಿಯನ್ನು 'ನಿತ್ತೀಯಸ್' ಎಂದು ಕರೆದಿದ್ದಾನೆ. ಆತ ಹೆಸರಿಸುವ 'ಬೆರೆಸ್' ಎಂಬುವದು ಬಸರೂರು ಆಗಿರಬೇಕೆಂದು ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ. ಟಾಲೆಮಿ ಗ್ರಂಥಗಳಲ್ಲಿ ಮಂಗಳೂರು 'ಮಹನೂರು' ಆಗಿ ಬಂದಿದೆ. ಆತ ಉಲ್ಲೇಖಿಸಿದ 'ಓಲ್ಯೆಖೋರಾ' ಅಳ್ವಖೇಡವಾಗಿದ್ದು ಅಳುಪರು ಆಳಿದ ಸ್ಥಳವೆಂಬ ಗ್ರಹಿಕೆಯಿದೆ"[೨].

ಐತಿಹಾಸಿಕ ಕಾಲದಲ್ಲಿ ಕದಂಬರು ದಕ್ಷಿಣ ಭಾರತವನ್ನು ಆಳುತ್ತಿದ್ದ ಕಾಲದಲ್ಲಿ, ಉತ್ತರ ಕನ್ನಡ ಹಾಗೂ ದಕ್ಷಿಣ ಕನ್ನಡ ಅವರ ಸಾಮ್ರಾಜ್ಯದ ಭಾಗವಾಗಿತ್ತು. ಈ ಸಂಗತಿಯನ್ನು ಹಳಶಿಯಲ್ಲಿ ಸಿಕ್ಕ ತಾಮ್ರ ಶಾಸನದಿಂದಲೂ ಧಾರವಾಡ ಜಿಲ್ಲೆಯ ದೇವಗಿರಿಯಲ್ಲಿ ಸಿಕ್ಕ ಶಾಸನಗಳಿಂದಲೂ ನಿಜವೆಂದು ಕಂಡುಬರುತ್ತದೆ. ಕ್ರಿ.ಶ. ೫೪೩–೫೬೬ರವರೆಗೆ ಆಳಿದ ಪಶ್ಚಿಮ ಚಾಲುಕ್ಯ ರಾಜನಾದ ೧ನೇ ಪುಲಕೇಶಿಯು ಕದಂಬ ರಾಜನನ್ನು ಸೋಲಿಸಿ ಬನವಾಸಿಯನ್ನು ಸ್ವಾಧೀನಪಡಿಸಿಕೊಂಡನು. ಆ ಕಾಲದಲ್ಲಿ ದಕ್ಷಿಣ ಮತ್ತು ಉತ್ತರ ಕನ್ನಡ ಜಿಲ್ಲೆಯು ಕದಂಬರ ಅಧಿಕಾರದಿಂದ ಕೈ ತಪ್ಪಿ ಚಾಲುಕ್ಯರ ವಶವಾಯಿತು. ಆಳುಪರು ಈ ಪ್ರದೇಶವನ್ನು ಮೊದಲನೆಯ ಶತಮಾನದಿಂದ ಆಡಳಿತ ನಡೆಸುತ್ತಾ ಬಂದವರೆಂದು ಪರಿಗಣಿಸಲ್ಪಟ್ಟರೂ, ಕ್ರಿ.ಶ. ಆರನೇ ಶತಮಾನದವರೆಗೆ ಅಳುಪರ ಕುರಿತು ಹೇಳಿಕೊಳ್ಳಬಹುದಾದ

ದಾಖಲೆಗಳೇನು ಸಿಗುವುದಿಲ್ಲ. ಅಳುಪ ಅರಸರು ಕರ್ನಾಟಕದ ಅರಸರೊಂದಿಗೆ ಬೇರೆ ಬೇರೆ ಕಾಲದಲ್ಲಿ ಮಾಂಡಲಿಕರಾಗಿ, ಸ್ನೇಹಿತರಾಗಿ ಹಾಗೆಯೇ ಬಂಡಾಯಗಾರರಾಗಿ ಆಳಿದ್ದು ಇದೆ. ಕ್ರಿ.ಶ. ಆರನೆಯ ಶತಮಾನದ ಹಲ್ಮಿಡಿ ಹಾಗೂ ಗುಡ್ನಾಪುರ ಶಾಸನಗಳಿಂದ ಕದಂಬರ ಸಾಮಂತರಾಗಿ ಅಳುಪರು ಆಡಳಿತ ನಡೆಸುತ್ತಿದ್ದರು ಎನ್ನುವ ಅಭಿಪ್ರಾಯವಿದೆ.

ಕ್ರಿ.ಶ. ಆರನೆಯ ಶತಮಾನದಲ್ಲಿ ಕರ್ನಾಟಕದಲ್ಲಿ ವಾತಾಪಿ ಚಾಳುಕ್ಯರ ಕಾಲ ಉದಯವಾಯಿತು. ಈ ಕಾಲದಲ್ಲಿ ದಕ್ಷಿಣ ಕನ್ನಡ ಜಿಲ್ಲೆಗಳ ಸ್ಪಷ್ಟ ಇತಿಹಾಸ ಸಿಗುತ್ತದೆ. ಆ ಕಾಲದಲ್ಲಿಯೂ ಚಾಳುಕ್ಯರ ಸಾಮಂತರಾಗಿ ಅಳುಪರು ಆಳುತ್ತಿದ್ದರು. ತಮ್ಮ ವೈರಿಗಳಾದ ಪಲ್ಲವರನ್ನು ಮತ್ತು ಪಾಂಡ್ಯರನ್ನು ಬಗ್ಗು ಬಡಿಯಲು ಚಾಳುಕ್ಯರು ಅಳುಪರೊಂದಿಗೆ ಸ್ನೇಹದಿಂದಿದ್ದರು. ಚಾಳುಕ್ಯರು ಬಲಹೀನರಾದಾಗ ರಾಷ್ಟ್ರಕೂಟರು ಪ್ರಬಲರಾದರು. ಇವರ ನಂತರ ಕರ್ನಾಟಕವನ್ನು ಆಳಿದ ಕಲ್ಯಾಣ ಚಾಳುಕ್ಯರು ದಕ್ಷಿಣ ಕನ್ನಡ ಜಿಲ್ಲೆಯನ್ನು ತಮ್ಮ ಸಾಮ್ರಾಜ್ಯದಲ್ಲಿರಿಸಿಕೊಂಡು ಅಳ್ವ ಖೇಢದ ಸಮೃದ್ಧಿಗೆ ಕಾರಣರಾದರೆಂದು ಬಿಲ್ಹಣನು ತನ್ನ ವಿಕ್ರಮಾದಿತ್ಯ ಚರಿತ್ರೆಯಲ್ಲಿ ತಿಳಿಸಿದ್ದಾನೆ. ಮುಂದೆ ಹೊಯ್ಸಳರ ಕಾಲದಲ್ಲಿ ಕರಾವಳಿ ಜಿಲ್ಲೆಯಲ್ಲಿ ಇನ್ನಷ್ಟು ಪರಿವರ್ತನೆ ಉಂಟಾಯಿತು. ಮೂಡಬಿದಿರೆ ಮತ್ತು ಬಾರಕೂರು ಮೂಡಕೇರಿ ದೇವಸ್ಥಾನದ ಬಳಿ ಸಿಕ್ಕಿರುವ ಶಾಸನ, ಇನೇ ವೀರಬಲ್ಲಾಳನ ಕಾಲದಲ್ಲಿ ಈ ಭೂಪ್ರದೇಶ ಆತನ ವಶಕ್ಕೆ ಒಳಪಟ್ಟಿತ್ತೆಂಬುದನ್ನು ತಿಳಿಸುತ್ತದೆ. ಹೊಯ್ಸಳರು ಬಾರಕೂರಿನಲ್ಲಿ ಸೈನಿಕ ಠಾಣೆಯನ್ನು ಸ್ಥಾಪಿಸಿದರು. ಇವರಿಗೂ ಅಳುಪ ದೊರೆಗಳಿಗೂ ನೆಂಟಸ್ತಿಕೆಯ ಸಂಬಂಧ ಬೆಳೆದು ಎರಡು ಮನೆತನಗಳೂ ಬಾರಕೂರಿನಿಂದ ಆಡಳಿತ ನಡೆಸಿದರೆಂದು ಲಿಖಿತ ಹಾಗೂ ಶಾಸನೋಕ್ತ ದಾಖಲೆಗಳಿಂದ ತಿಳಿದುಬರುತ್ತದೆ.

"ವಿಜಯನಗರ ಸಾಮ್ರಾಜ್ಯ ಸ್ಥಾಪನೆ ಪೂರ್ವದಲ್ಲಿ ಅವಿಭಜಿತ ದಕ್ಷಿಣ ಕನ್ನಡವನ್ನು ಆಳಿದ ಬೇರೆ ಬೇರೆ ಮನೆತನಗಳಿವೆ. ಅಜಿಲರು, ಬಂಗರು, ಚೌಟರು, ಭೈರಸ, ಒಡೆಯರು ಮೂಲರು, ಸಾಮಂತರು, ಪಡುಬಿದ್ರೆ ಬಲ್ಲಾಳರು, ಏರ್ಮಾಳ ಹೆಗ್ಗಡೆ, ಮುಂತಾದ ಅರಸು ಮನೆತನಗಳು ಮುಖ್ಯವಾಗಿವೆ. ಈ ಅರಸು ಮನೆತನಗಳು ಕೆಲವು ಗ್ರಾಮಗಳ ಒಡೆತನ ಹೊಂದಿದ ತುಂಡರಸರ ಹಾಗೆ ದಕ್ಷಿಣ ಕನ್ನಡವನ್ನು ಆಳುತ್ತಿದ್ದರು"[೩]. ಉದಾ: ಅಜಿಲರು ವೇಣೂರನ್ನು, ಬಂಗರು ಬಂಗಾಡಿ, ಮಂಗಳೂರು, ನಂದಾವರ ಚೌಟರು, ತೊಳಹರು ಸುರಾಲು, ವಿಠಲ ಮನೆತನ ವಿಟ್ಲ, ಮೂಡಬಿದ್ರೆ ಬೈರಸ ಒಡೆಯರು ಹೀಗೆ ತಮ್ಮದೇ ಪುಟ್ಟ ರಾಜಧಾನಿ ನಿರ್ಮಿಸಿಕೊಂಡು ಆಳುತ್ತಿದ್ದರು. ವಿಜಯನಗರದ ಅರಸರ ಪ್ರತಿನಿಧಿಗಳು ಬಾರಕೂರು ಮತ್ತು ಮಂಗಳೂರುಗಳನ್ನು ಮುಖ್ಯ ಕೇಂದ್ರವಾಗಿಟ್ಟುಕೊಂಡು ಆಳುತ್ತಿದ್ದರು. ವಿಜಯನಗರದ ಅರಸರಿಗೆ ಹೊರ ದೇಶದ ವಸ್ತುಗಳನ್ನು ಆಮದು ಮಾಡಿಕೊಳ್ಳಲು ಮಂಗಳೂರು ಮತ್ತು ಬಾರಕೂರುಗಳು ಪ್ರಮುಖ ಬಂದರುಗಳಾಗಿದ್ದವು. ಹದಿಮೂರನೆಯ ಶತಮಾನದಲ್ಲಿ ಆಫ್ರಿಕನ್ ಯಾತ್ರಿ ಇಬನ್‌ಬಟೂಟ ಸದಾಶಿವ ಗಢದಿಂದ ಕಲ್ಲಿಕೋಟೆಯವರೆಗೆ ಮಾಡಿದ ತನ್ನ ಯಾತ್ರೆಯಲ್ಲಿ ಅನೇಕ ಅಂಶಗಳನ್ನು ಹೇಳಿದ್ದಾನೆ. ಆ ಕಾಲದಲ್ಲಿ ದಕ್ಷಿಣ ಕನ್ನಡ ಜಿಲ್ಲೆ ಅನೇಕ ತುಂಡರಸರಿಂದ ಆಳಲ್ಪಡುತ್ತಿತ್ತೆಂದು ಅವರೆಲ್ಲ ಬಾರಕೂರಿನಲ್ಲಿ ವಾಸಿಸುತ್ತಿದ್ದ ವಿಜಯನಗರದ ಪ್ರತಿನಿಧಿ 'ಒಡೆಯರ್'ಗೆ ಕಪ್ಪಕಾಣಿಕೆ ಸಲ್ಲಿಸುತ್ತಿದ್ದರೆಂದು ತಿಳಿದುಬರುತ್ತದೆ. ಕೃಷ್ಣದೇವರಾಯನ ಕಾಲದಲ್ಲಿ ದಕ್ಷಿಣ ಕನ್ನಡವನ್ನು ನಾಲ್ವರು ರಾಜಪ್ರತಿನಿಧಿಗಳು ಆಳುತ್ತಿದ್ದರು. ಈ ಹೊತ್ತಿಗೆ ಪೋರ್ಚುಗೀಸರ ಆಗಮನವಾಯಿತು. ೧೪೯೮ರ ವೇಳೆಗೆ ವಾಸ್ಕೋಡಗಾಮ ಉಡುಪಿಯ ಬಳಿಯ ಸೈಂಟ್ ಮೇರಿಸ್ ದ್ವೀಪಕ್ಕೆ ಬಂದಿದ್ದ ಉಲ್ಲೇಖಗಳಿವೆ. ತರುವಾಯ ಕೆಳದಿ ಅರಸರು ವಿಜಯನಗರದ ಉತ್ತರಾಧಿಕಾರಿಗಳಾಗಿ ಬಾರಕೂರು ಮತ್ತು ಮಂಗಳೂರನ್ನು ತಮ್ಮ ಆಧಿಪತ್ಯಕ್ಕೆ ಒಳಪಡಿಸಿದರು.

"ರಕ್ಕಸತಂಗಡಿ ಯುದ್ಧದಲ್ಲಿ ವಿಜಯನಗರದ ಪತನಾನಂತರ ಇಕ್ಕೇರಿಯ ನಾಯಕರು ಸ್ವತಂತ್ರವಾಗಿ ತುಳುನಾಡಿನ ಕರಾವಳಿಯ ಅಧಿಕಾರವನ್ನು ಹಿಡಿದುಕೊಂಡರು. ಇಕ್ಕೇರಿ ನಾಯಕರ ಬಿಗಿ ಆಡಳಿತದಲ್ಲಿ ಕಳಸ-ಕಾರ್ಕಳ (ಕಾರಕಳ), ಹೊನ್ನೆಯಕಂಬಳಿ ಮುಂತಾದ ಅರಸು ಮನೆತನಗಳು ಮೂಲೆಗುಂಪಾದವು. ಪೋರ್ಚುಗೀಸ್, ಮರಾಠ, ನಾಯಕರ (ಕೇರಳ) ದಾಳಿಗಳನ್ನು ಎದುರಿಸುವ ಸಲುವಾಗಿ ಇಕ್ಕೇರಿ ಅರಸರು ಕರಾವಳಿಯ ಉದ್ದಕ್ಕೂ ಅನೇಕ ಕೋಟೆಗಳನ್ನು ಕಟ್ಟಿಸಿ ಅವುಗಳನ್ನು ಕಾಯಲು ರಾಮಕ್ಷತ್ರಿಯ ಸಮುದಾಯದ (ಕೋಟೆಯವರೆಂದು ಪ್ರಸಿದ್ಧರು)ವರನ್ನು ತುಳುನಾಡಿಗೆ ಕರೆತಂದರು. ಭೂಕಂದಾಯ ನಿರ್ಣಯದಲ್ಲಿ ಇಕ್ಕೇರಿ ನಾಯಕರು ಹೊಸ ವ್ಯವಸ್ಥೆ ಜಾರಿಗೊಳಿಸಿದರು. ಭೂಮಿಯ ಸ್ವರೂಪ ಹಾಗೂ ಬೆಳೆದ ಬೆಳೆಗಳಿಗನುಸಾರವಾಗಿ ತೆರಿಗೆ ವಿಧಿಸುವ ಹೊಸ ಕ್ರಮ ಜಾರಿಗೆ ಬಂದಿತು. ಮರಗಳ ಉತ್ಪತ್ತಿಯ ಮೇಲೂ ಸರಕಾರ ತೆರಿಗೆ ವಿಧಿಸುವ ಕ್ರಮ ತಂದಿತು. ನಾಣ್ಯಗಳ ಚಲಾವಣೆಯಲ್ಲಿ ಇಕ್ಕೇರಿ ನಾಯಕರು ಹೊಸ ಏರ್ಪಾಟು ಮಾಡಿದರು. ವೈಯಕ್ತಿಕ ಬೇಸಾಯ, ಗೇಣಿ ಪದ್ಧತಿಗಳಲ್ಲಿ ಹೊಸ ಸುಧಾರಣೆ ಕಾಣಿಸಿಕೊಂಡಿತು. ಕೆಳದಿ ನಾಯಕರ ಆಳ್ವಿಕೆಯಲ್ಲಿ ವಾಣಿಜ್ಯ ವ್ಯವಹಾರಕ್ಕೆ ಹೊಸ ವಿಸ್ತಾರ ದೊರೆಯಿತು. ಕರಾವಳಿಯ ಬಂದರುಗಳಿಂದ ಅಕ್ಕಿ, ಮೆಣಸು, ಬೆಲ್ಲ, ಹುಣಸೆ ಹಣ್ಣು, ಗಂಧ, ಜೋಳ ರಫ್ತಾಗುತ್ತಿತ್ತೆಂದು ಕ್ರಿ.ಶ. ೧೭೫೭ರ ಮಂಜೇಶ್ವರದ ಶಾಸನ ತಿಳಿಸುತ್ತದೆ. ಇಕ್ಕೇರಿ ಅರಸರ ಕಾಲದಲ್ಲಿ ಗೋವೆಯಿಂದ ಬಂದ ವೈಷ್ಣವ ಗೌಡ ಸಾರಸ್ವತರು ಕರಾಡಸ್ಥ ಬ್ರಾಹ್ಮಣ ಬೇತ್ಪಾಜ್ ವಾಣಿಜ್ಯದಲ್ಲಿ ಪ್ರಬಲರಾದವರು"[೪].

೧೭೬೩ರಲ್ಲಿ ಇಕ್ಕೇರಿ ನಾಯಕರ ಪತನಾನಂತರ ಹೈದರಾಲಿ ತುಳುನಾಡನ್ನು ಹಿಡಿದುಕೊಂಡನು. ಇಲ್ಲಿನ ಬಂಗ, ಚೌಟ, ಅಜಿಲ ಮುಂತಾದ ಸಣ್ಣಪುಟ್ಟ ಪಾಳೆಯಗಾರರು ಹೈದರಾಲಿಯನ್ನು ಎದುರಿಸಲಾರದೆ ಮೂಲೆಗುಂಪಾದರು. ಹೈದರಾಲಿ ಟಿಪ್ಪುವಿನ ಕಾಲಕ್ಕಾಗಲೇ ತುಳುನಾಡಿನಲ್ಲಿ ಬ್ರಿಟಿಷರ ಪ್ರಾಬಲ್ಯ ಜಾಸ್ತಿಯಾಯಿತು. ಇಂಗ್ಲಿಷರ ಹಾಗೂ ಟಿಪ್ಪುವಿನ ನಡುವಣ ಕಲಹಗಳಿಗೆ ತುಳುನಾಡು ರಣರಂಗವಾಯಿತು. ಟಿಪ್ಪುವಿನ ಪತನ (ಕ್ರಿ.ಶ. ೧೭೯೯) ದೊಂದಿಗೆ ತುಳುನಾಡು ಬ್ರಿಟಿಷರ ಕೈವಶವಾಯಿತು. ಅಂದರೆ ಸ್ಥಾನೀಯ ಆಳರಸರ ಕೈಯಿಂದ ತಪ್ಪಿದ ತುಳುನಾಡು ಒಂದು ಚಕ್ರಾಧಿಪತ್ಯಕ್ಕೆ ಏಕಾಡಳಿತಕ್ಕೆ ಒಳಗಾಯಿತು. ೧೮೬೨ರಲ್ಲಿ ಕೆನರಾ ಜಿಲ್ಲೆ ಎರಡಾಗಿ ಒಡೆದು ದಕ್ಷಿಣ ಕನ್ನಡ ಜಿಲ್ಲೆ ಎಂಬ ಹೆಸರಲ್ಲಿ ಮದರಾಸು ಅಧಿಪತ್ಯಕ್ಕೆ ಒಳಗಾಯಿತು.

೨.೨. ಬದಲಾಗುತ್ತಿರುವ ಬುಡಕಟ್ಟುಗಳ ಪರಿಕಲ್ಪನೆ

ಕರಾವಳಿ ಕರ್ನಾಟಕ ಜಿಲ್ಲೆಯಲ್ಲಿ ಪರಿಶಿಷ್ಟ ಪಂಗಡಗಳ ಜನಸಂಖ್ಯೆ, ಅವರ ಸಾಮಾಜಿಕ ಮತ್ತು ಪಾರಂಪರಿಕ ಕುಲಕಸುಬುಗಳು, ಸಾಮಾಜಿಕ ಸ್ಥಿತಿಗತಿಗಳನ್ನು ವಿಶ್ಲೇಷಿಸುವುದಕ್ಕೆ ಮೊದಲು ಬುಡಕಟ್ಟು ಎಂದರೇನು? ಬುಡಕಟ್ಟುಗಳನ್ನು ಅರ್ಥೈಸಿಕೊಳ್ಳುವುದು ಹೇಗೆ? ಕರಾವಳಿ ಕರ್ನಾಟಕದಲ್ಲಿ ಯಾವ್ಯಾವ ಬುಡಕಟ್ಟುಗಳ ಪಟ್ಟಿಗೆ ಅಥವಾ ಸಂವಿಧಾನಾತ್ಮಕ ಬುಡಕಟ್ಟುಗಳಿಗೆ ಒಳಪಟ್ಟಿರುವ ಬುಡಕಟ್ಟುಗಳಾವುವು? ಪರಿಶಿಷ್ಟ ಪಂಗಡಗಳ ಸೌಲಭ್ಯಗಳನ್ನು ಪಡೆಯುವ ಸಲುವಾಗಿ ಕರ್ನಾಟಕ ರಾಜ್ಯದಿಂದ ಕೇಂದ್ರಕ್ಕೆ ಕಳುಹಿಸಿರುವ ಪ್ರಸ್ತಾವನೆಗಳಾವುವು? ಎಂಬೆಲ್ಲ ಪ್ರಶ್ನೆಗಳು ಸಹಜವಾಗಿ ನಮ್ಮಲ್ಲಿ ಹುಟ್ಟಿಕೊಳ್ಳುತ್ತದೆ.

ಸಮಾಜಶಾಸ್ತ್ರ ಮತ್ತು ಮಾನವಶಾಸ್ತ್ರ ವಿಷಯಗಳಲ್ಲಿ ಬುಡಕಟ್ಟು ಎಂಬ ಪರಿಕಲ್ಪನೆ ಬೆಳೆದು ಬಂದಿರುವ ರೀತಿಯನ್ನು ಅರ್ಥೈಸುವುದು ಕೂಡ ಅಗತ್ಯವಿದೆ. ಬುಡಕಟ್ಟು ಎಂಬ ಕಲ್ಪನೆಯು ಬೆಳೆದು ಬಂದಿರುವ ರೀತಿಯನ್ನು ನಾಲ್ಕು ರೀತಿಯಲ್ಲಿ ಅರ್ಥೈಸಿಕೊಳ್ಳಬಹುದು.

೧. ಬುಡಕಟ್ಟೊಂದು ಸ್ವಯಂ ಪರಿಪೂರ್ಣ, ಸಮ್ಮೆಕ್ಯವಾದ ಘಟಕವಾಗಿ ಅರ್ಥೈಸಿಕೊಳ್ಳಬಹುದು.

೨. ಬುಡಕಟ್ಟೊಂದು ರಾಜಕೀಯ ಘಟಕವಾಗಿ ಅರ್ಥೈಸಿಕೊಳ್ಳಬಹುದು.

೩. ಬುಡಕಟ್ಟೊಂದನ್ನು ಜನಾಂಗವಾಗಿ ಅರ್ಥೈಸಬಹುದು.

೪. ಬುಡಕಟ್ಟು ಮತ್ತು ಪರಿಶಿಷ್ಟ ಪಂಗಡವಾಗಿ ಅರ್ಥೈಸುವುದು.

"ಯಾವ ಸಮುದಾಯ ಗತಕಾಲದಿಂದಲೂ ನಿಸರ್ಗದ ಮಡಿಲಲ್ಲಿ ಸುಖವಾಗಿ ಬದುಕಲು ಬಯಸುವುದೋ, ಪ್ರಕೃತಿ ಜನ್ಯ ಉತ್ಪನ್ನಗಳನ್ನೇ ಭಕ್ಷಿಸಲು ಯತ್ನಿಸುವುದೋ, ತನ್ನದೆಯಾದ ಒಂದು ವಿಶಿಷ್ಟ ರೀತಿಯ ಜೀವನ ವಿಧಾನದಿಂದ ಜೀವಿಸುವ ಆಶಯವನ್ನು ಹೊಂದಿ ಆ ರೀತಿಯಲ್ಲಿಯೇ ಜೀವನ ನಡೆಸುವುದೋ ಆ ಸಮುದಾಯಗಳಿಗೆ ಆದಿವಾಸಿ ಅಥವಾ ಬುಡಕಟ್ಟು ಎಂದು ಕರೆಯಬಹುದು"[೫]

ಪ್ರತಿಯೊಂದು ಬುಡಕಟ್ಟು ಸಮುದಾಯವೂ ತಮ್ಮದೇ ವಿಶಿಷ್ಟ ಸಂಸ್ಕೃತಿಯನ್ನು ಹೊಂದಿದೆ. ಅವರ ವೇಷಭೂಷಣ, ರೂಢಿ ಸಂಪ್ರದಾಯ, ಸಂಸ್ಕಾರಗಳು, ವಿವಾಹ ಆಚರಣೆಗಳು, ಅಂತ್ಯ ಸಂಸ್ಕಾರ, ನ್ಯಾಯ ವಿಧಾನ, ನೈತಿಕ ನಿಯಮಗಳು, ನಂಬಿಕೆ, ಆಚಾರ ವಿಚಾರಗಳ ಏಕರೂಪತೆ ಇರುತ್ತದೆ. ಇವರು (Idol Worshiper), ನಿಸರ್ಗರಾಧಕರು, ಸರ್ವಚೇತನವಾದಿಗಳು (Animism), ಭೂತ ಪ್ರೇತ, ಮಾಟ-ಮಂತ್ರಗಳಲ್ಲಿ ನಂಬಿಕೆಯುಳ್ಳವರು. ಹೀಗೆ ಬುಡಕಟ್ಟು ಸಂಸ್ಕೃತಿಯು ವೈಶಿಷ್ಟ್ಯತೆಯಿಂದ ಕೂಡಿದೆ. 'ಬುಡಕಟ್ಟುಗಳ ಜೀವನವು ಧರ್ಮದೊಂದಿಗೆ ಲೀನವಾಗಿದೆ. ಇವರ ಇಡೀ ಜೀವನವು 'ಧರ್ಮದಲ್ಲಿ ಎದ್ದಿ ತೆಗೆದಂತಿದೆ'. ಧಾರ್ಮಿಕ ನಿಷ್ಠೆಯುಳ್ಳವರೂ, ಪ್ರಕೃತಿ ಪೂಜೆ, ಪಿತೃಪೂಜೆ (Ancestor worship) ಮತ್ತು ಕುಲದೇವತಾರಾಧನೆ (Totemism) ಅಲ್ಲದೆ ಸಚೇತನವಾದದಲ್ಲಿಯೂ ಇವರು ನಂಬಿಕೆಯಿಟ್ಟವರು.

ಇವರು ಬಹುಮಟ್ಟಿಗೆ ಸ್ವಯಂ ಪರಿಪೂರ್ಣತೆಯನ್ನು ಹೊಂದಿರುವರು. ಇವರು ತಮ್ಮ ಬದುಕಿಗೆ ಅನುಗುಣವಾಗಿ ಸರಳ, ಸೀಮಿತ ಬೇಡಿಕೆಗಳನ್ನು ತಮ್ಮ ಕ್ಷೇತ್ರದಲ್ಲಿಯೇ ಪೂರೈಸಿಕೊಂಡು ಸಂತೃಪ್ತ ಜೀವನವನ್ನು ಸಾಗಿಸುವರು. ಅವರಲ್ಲಿ "ಒಳಬಾಂಧವ್ಯ (Endogamy)"[೬] ದ ವಿವಾಹಗಳೇ ಹೆಚ್ಚಿನ ಸಂಖ್ಯೆಯಲ್ಲಿ ನಡೆಯುತ್ತವೆ. ತಮ್ಮ ಸಮೂಹದ ಪಾವಿತ್ರ್ಯತೆ, ಐಕ್ಯತೆ, ಸಂಪತ್ತು, ಪ್ರತ್ಯೇಕತೆ ಇವುಗಳನ್ನು ಉಳಿಸಿಕೊಳ್ಳಲು ಒಳಬಾಂಧವ್ಯ ವಿವಾಹಕ್ಕೆ ಬದ್ಧರಾಗಿರುವರು. ಇವರು ಇರುವುದರಲ್ಲಿಯೇ ತೃಪ್ತಿ ಪಟ್ಟುಕೊಂಡು ಸ್ವತಂತ್ರ ಜೀವನ ನಿರ್ವಹಣೆಯ ಸರಳ ಸ್ವಭಾವದ ಸಂವೇದನಶೀಲರೂ ಆಗಿದ್ದಾರೆ.

ಬುಡಕಟ್ಟಿನ ಪ್ರಸ್ತುತ ಇರುವ ಅರ್ಥದಿಂದ ಸಂಪೂರ್ಣವಾಗಿ ಭಿನ್ನವಾದ ವ್ಯಾಖ್ಯಾನವೊಂದಿತ್ತು. "ಬುಡಕಟ್ಟು ಎಂಬ ಕಲ್ಪನೆಯು 'ಲ್ಯಾಟಿನ್' ಭಾಷೆಯ 'Tribuz' ಎಂಬ ಪದದಿಂದ ಬಂದಿದೆ."[೭] 'ಟ್ರೈಬುಝ್' ಎಂದರೆ 'ಮೂರು ವಿಭಾಗಗಳು'. ಉದಾ: ರೊಮನ್ನರಿಗೆ ಬುಡಕಟ್ಟು ಒಂದು ರಾಜಕೀಯ ವಿಭಾಗವಾಗಿತ್ತು. ಇದು ಅತ್ಯುನ್ನತ ರಾಜಕೀಯ ಘಟಕವಾಗಿದ್ದು, ತಮ್ಮದೇ ಆದ ಪ್ರಜಾಪ್ರಭುತ್ವ ಮಾದರಿಯ ಆಡಳಿತ ಪದ್ಧತಿಯನ್ನು ಹೊಂದಿತ್ತು. ಇವರ ಆಡಳಿತ ಪದ್ಧತಿಯು ಸಾಂಪ್ರದಾಯಿಕವಾಗಿ ಬೆಳೆದು ಬಂದಂತಹದ್ದಾಗಿತ್ತು. ನಾಗರಿಕ ಸಮಾಜದಂತೆ ಕಟ್ಟುನಿಟ್ಟಿನ ನ್ಯಾಯ ವ್ಯವಸ್ಥೆ ಹಾಗೂ ಲಿಖಿತ ರೂಪದ ಆಡಳಿತ ವ್ಯವಸ್ಥೆ ಇವರಲ್ಲಿರದಿದ್ದರೂ, ತಮ್ಮದೇ ಆದ ಸರಳ ರಾಜಕೀಯ ವ್ಯವಸ್ಥೆಯನ್ನು ಅವರು ಹೊಂದಿದ್ದರ. ಪ್ರತಿಯೊಂದು ಬುಡಕಟ್ಟು ಸಮುದಾಯದಲ್ಲೂ ಒಬ್ಬೊಬ್ಬ

ಮುಖಂಡನಿರುತ್ತಿದ್ದ. ಆತ ಸಮುದಾಯದ ಇತರ ಸದಸ್ಯರ ವರ್ತನೆಗಳ ಮೇಲೆ ನಿಯಂತ್ರಣ ಹೊಂದಿರುತ್ತಿದ್ದ. ನ್ಯಾಯ ತೀರ್ಮಾನ ಮಾಡುವ, ತಪ್ಪಿತಸ್ಥರಿಗೆ ಶಿಕ್ಷೆ ವಿಧಿಸುವ, ದಂಡ ವಿಧಿಸುವ, ಬಹಿಷ್ಕಾರ ಹಾಕುವ, ವಿಶೇಷ ಅಧಿಕಾರವನ್ನು ಈ ನಾಯಕರು ಹೊಂದಿರುತ್ತಿದ್ದರು. ನಾಯಕರ ಆಯ್ಕೆಯು ಹೆಚ್ಚಾಗಿ ಅನುವಂಶಿಕವಾಗಿ ಅಥವಾ ಚುನಾವಣೆಯ ಮೂಲಕ ನಡೆಯುತ್ತಿತ್ತು. ಆಯ್ಕೆಗೊಂಡ ನಾಯಕರು ಸಮೂಹದ ಗೌರವಾದರಗಳಿಗೆ ಪಾತ್ರನಾಗಿರುವ ವ್ಯಕ್ತಿಗಳಾಗಿದ್ದು, ಸಮೂಹದ ಕಲ್ಯಾಣದ ಹೊಣೆ ಹೋಗುತ್ತಿದ್ದರು. ಇಲ್ಲಿ ಮುಖಂಡನ ವ್ಯಕ್ತಿತ್ವವು ಸಹ ಪ್ರಮುಖ ಪಾತ್ರವನ್ನು ವಹಿಸುತ್ತದೆ. ಮರಾಟಿ ಮತ್ತು ಮರಾಟಿ ನಾಯ್ಕ ಸಮುದಾಯಗಳ ಕುಲಪಂಚಾಯತಿಯು ಕಟ್ಟುನಿಟ್ಟಾದ ನಿಯಮಗಳಿಂದ ಕೂಡಿದ್ದು, ಪ್ರತಿಯೊಂದು ಕಾರ್ಯ ಚಟುವಟಿಕೆಗಳೂ ನಾಯಕನ ನೇತೃತ್ವದಲ್ಲಿ ನಡೆಯುತ್ತವೆ.

ಬುಡಕಟ್ಟು ಸಮುದಾಯವೊಂದು ಪ್ರಾದೇಶಿಕ ಸಂಘಟನೆಯಾಗಿದ್ದು, ಅತ್ಯುನ್ನತ ರಾಜಕೀಯ ಘಟಕವಾಗಿದ್ದು, ಕುಲಗಳಿಂದಾದ ವಿಭಿನ್ನ ಪ್ರದೇಶಗಳನ್ನು ಒಳಗೊಂಡಿತ್ತು. ಜನರ ಮೇಲೆ ಸಂಪೂರ್ಣ ನಿಯಂತ್ರಣ ಹೊಂದಿತ್ತು. ಬುಡಕಟ್ಟಿನ ಆಡಳಿತಕ್ಕೆ ಒಳಪಟ್ಟಿರುವ ಪ್ರದೇಶವನ್ನು ಅದೇ ಬುಡಕಟ್ಟಿನ ಹೆಸರಿನಿಂದ ಗುರುತಿಸಲ್ಪಟ್ಟಿತ್ತು. ಹಾಗಾಗಿ 'ಭಾರತ' ಎಂಬ ಹೆಸರು 'ಭರತ' ಬುಡಕಟ್ಟಿನಿಂದ ಬಂದದ್ದು ಎಂದು ತಿಳಿಯಲಾಗಿದೆ. ಉದಾಹರಣೆಗೆ, ಮೀಜೋರಾಂ, ನಾಗಲ್ಯಾಂಡ್, ತ್ರಿಪುರಗಳು, ಬುಡಕಟ್ಟುಗಳಾದ 'ಮೀಜೋ', 'ನಾಗ' ಮತ್ತು 'ತ್ರಿಪುರಿ'ಗಳನ್ನು ಆಧರಿಸಿಯೇ ಹೆಸರಿಸಲ್ಪಟ್ಟ ಪ್ರಾಂತ್ಯಗಳು. ಅಂತೆಯೇ ಸಂತಾಲಪರಗಣ, ಗೊಂಡವನ, ಬುಡಕಟ್ಟುಗಳಾದ ಸಂತಾಲರು, ಗೊಂಡರು, ತಮ್ಮ ಹೆಸರುಗಳನ್ನು ಪಡೆದಿದೆ ಎಂಬುದಾಗಿ ತಿಳಿಯಲಾಗಿದೆ.

Tribe (ಟ್ರೈಬ್) ಎಂಬುದು ಮಾನವಶಾಸ್ತ್ರೀಯವಾದ ಪರಿಕಲ್ಪನೆ. ಈಗಾಗಲೇ ತಿಳಿಸಿರುವಂತೆ ಇಂಗ್ಲೀಷ್‌ನ Tribe (ಟ್ರೈಬ್) ಎಂಬ ಪದವು ಲ್ಯಾಟಿನ್ ಭಾಷೆಯ 'Tribuz' ಎಂಬ ಪದದಿಂದ ಉಗಮಗೊಂಡಿದೆ. ಪ್ರಾರಂಭದಲ್ಲಿ ರೋಮನ್ನರು ಸಮಾಜದಲ್ಲಿ ಜನ ಸಾಮಾನ್ಯರನ್ನು ಸಮಾಜದ ವಿಭಾಗಗಳನ್ನು ಗುರುತಿಸುವಲ್ಲಿ ಬಳಸಿದರು.

ಫೇರ್ ಚೈಲ್ಡ್ ಎಂಬ ಸಮಾಜಶಾಸ್ತ್ರಜ್ಞ ತಮ್ಮ ಸಮಾಜಶಾಸ್ತ್ರದ ನಿಘಂಟು (Dictionary of Sociology) ಎಂಬ ಗ್ರಂಥದಲ್ಲಿ ಆದಿವಾಸಿ ಸಮಾಜವು "ಸಾಮಾನ್ಯವಾಗಿ ಅಸಂಖ್ಯಾತ ರಕ್ತಸಂಬಂಧಿಗಳ ತಂಡಗಳನ್ನು, ಗ್ರಾಮಗಳನ್ನು ಇಲ್ಲವೆ ಉಪ ತಂಡಗಳನ್ನು, ನಿಶ್ಚಿತವಾದ ಭೂ ಪ್ರದೇಶವನ್ನು, ತಮ್ಮದೇ ಆದ ಖಚಿತ ಭಾಷೆಯನ್ನು, ಸಮ್ಯಕ್ ಸಂಸ್ಕೃತಿ ಹಾಗೂ ಒಂದೇ ರೀತಿಯ ರಾಜಕೀಯ ವ್ಯವಸ್ಥೆಯನ್ನು ಪಡೆದು ಹೊರಗಿನವರಿಗೂ ತಮಗೂ ವ್ಯತ್ಯಾಸವಿದೆ ಎಂಬ ಭಾವನೆಗಳೊಂದಿಗಿರುವ ಸಾಮಾಜಿಕ ಸಮೂಹವೇ ಆದಿವಾಸಿ ಸಮೂಹವೆನಿಸಿಕೊಳ್ಳುತ್ತದೆ" ಎಂದು ಹೇಳಿದ್ದಾರೆ.

ಸುಪ್ರಸಿದ್ಧ ಮಾನವ ಶಾಸ್ತ್ರಜ್ಞರಾದ ಕ್ರೋಬರ್‌ರವರು ಬುಡಕಟ್ಟು ಎಂಬ ಶಬ್ದದ ಅರ್ಥವನ್ನು ಅತೀ ಸರಳವಾಗಿ ಎರಡೇ ವಾಕ್ಯಗಳಲ್ಲಿ ವಿವೇಚಿಸಿದ್ದಾರೆ. "ಬುಡಕಟ್ಟು ಜನಾಂಗವು ಚಿಕ್ಕದಾಗಿ (Small) ಪ್ರತ್ಯೇಕವಾದ (Isolated) ಹಾಗೂ ಒಂದಕ್ಕೊಂದು ಹೆಣೆದಿರುವ ಸಾಮಾಜಿಕವಾಗಿ ಮತ್ತು ಸಾಂಸ್ಕೃತಿಕವಾಗಿ ಬಂಧುತ್ವವನ್ನು (Kinship) ಅಳವಡಿಸಿಕೊಂಡು ವ್ಯವಸ್ಥಿತವಾಗಿ ರಚಿತವಾಗಿರುವ ಸಮಾಜ ಎಂದಿದ್ದಾರೆ."[೮] ಇನ್ನೊಬ್ಬ ಮಾನವಶಾಸ್ತ್ರಜ್ಞರಾದಂತಹ ಪಿಡ್ಡಿಂಗ್‌ಟನ್‌ರವರು

ಇನ್ನೂ ವಿಶಾಲವಾಗಿ ಮತ್ತು ವಿಶೇಷ ಗುಣಲಕ್ಷಣಗಳನ್ನು ಬುಡಕಟ್ಟು ಜನಾಂಗಗಳು ಹೊಂದಿರುವಂತಹ ಹಿನ್ನೆಲೆಯಲ್ಲಿ ಅರ್ಥೈಸಿದ್ದಾರೆ. "ಚಿಕ್ಕ ಚಿಕ್ಕ ಸಾಮಾಜಿಕ ಗುಂಪುಗಳಾಗಿ ಹಂಚಿ ತಾಂತ್ರಿಕತೆಯಲ್ಲಿ ಬಹು ರೀತಿಯ ಸ್ಥರದಲ್ಲಿದ್ದು ಸಂಬಂಧ, ಪ್ರಾದೇಶಿಕ ಹಾಗೂ ಆರ್ಥಿಕ ವಿಷಯಗಳಲ್ಲಿ ವೈಶಿಷ್ಟ್ಯತೆ ಹೊಂದಿದ ಇಂತಹ ಗುಣಗಳಿಂದೊಡಗೂಡಿದ ಜನಾಂಗಗಳನ್ನು ಬುಡಕಟ್ಟು ಅಥವಾ ಪ್ರಾಚೀನ ಸಮುದಾಯಗಳೆಂದು ಕರೆದಿದ್ದಾರೆ."[೯]

ಭಾರತದ ಇಂಪೀರಿಯಲ್ ಗೆಜೆಟಿಯರ್ ಪ್ರಕಾರ (೧೯೧೧) "ಆದಿವಾಸಿ ಸಮುದಾಯವು ಹಲವಾರು ಕುಟುಂಬಗಳ ಸಂಗ್ರಹವಾಗಿದ್ದು, ಒಂದೇ ಹೆಸರನ್ನು ಹೊಂದಿದ್ದು, ಒಂದೇ ಭಾಷೆಯನ್ನಾಡುತ್ತಾ, ನಿರ್ದಿಷ್ಟ ಭೂ ಪ್ರದೇಶದಲ್ಲಿ ವಾಸಿಸುತ್ತಾ, ಮೂಲತಃ ಒಳಬಾಂಧವ್ಯ ಸಮೂಹವಾಗಿರುವುದು."[೧೦]

"ಡಿ. ಎನ್. ಮುಜುಮದಾರ್ ಪ್ರಕಾರ "ಆದಿವಾಸಿಗಳೆಂದರೆ ಹಲವಾರು ಕುಟುಂಬಗಳ ಸಮೂಹವು ಸಾಮಾನ್ಯ ನಾಮಾಂಕಿತವನ್ನು ಹೊಂದಿರುವ, ನಿರ್ದಿಷ್ಟ ಪ್ರದೇಶದಲ್ಲಿ ನೆಲೆಸಿರುವ ವಿಶಿಷ್ಟ ಭಾಷೆಯನ್ನಾಡುವ, ವಿವಾಹ ಮತ್ತು ಉದ್ಯೋಗಗಳ ಬಗ್ಗೆ ಕೆಲವೊಂದು ನಿಶ್ಚಿತ ಕ್ರಿಯಾ ವಿಧಾನಗಳನ್ನು ಒಳಗೊಂಡಿರುವ ಪರಸ್ಪರ ಸಹಕಾರ ಹಾಗೂ ತಿಳುವಳಿಕೆಗಳ ಮೇಲೆ ನೆಲೆಸಿರುವ ಸಮುದಾಯ ಎಂದಿದ್ದಾರೆ"[೧೧].

ಭಾರತದಲ್ಲಿ ಬುಡಕಟ್ಟುಗಳನ್ನು ಜನಾಂಗೀಯ ಆಧಾರದಲ್ಲಿ ನಿಗ್ರೀಟೋ, ಮುಂಗೋಲಿಯನ್ ಮತ್ತು ಮೆಡಿಟರೇನಿಯನ್ ಮೂರು ಪ್ರವರ್ಗಗಳಲ್ಲಿ ಸೇರಿಸಲ್ಪಟ್ಟಿರುತ್ತಾರೆ.

'ಟ್ರೈಬ್' ಎಂಬ ಪದವು ಆರ್ಥಿಕವಾಗಿ, ಸಾಮಾಜಿಕವಾಗಿ ಹಿಂದುಳಿದ ಬಡವರು ಎಂಬ ಅರ್ಥದಲ್ಲಿ ಬಳಸಲಾಯಿತು. ಇಂಗ್ಲೀಷ್ ಭಾಷೆಯಲ್ಲಿ ಈಗಿನ ಬಳಕೆಯಲ್ಲಿರುವ ಅರ್ಥದಲ್ಲಿ ಹೇಳುವುದಾದರೆ ಏಷ್ಯ ಮತ್ತು ಆಫ್ರಿಕಾದಲ್ಲಿ ವಸಾಹತುಶಾಹಿ ವಿಸ್ತರಣೆಯೊಂದಿಗೆ ಬೆಳಕಿಗೆ ಬಂದಿತು.

"ಇತ್ತೀಚಿನ ವರ್ಷಗಳಲ್ಲಿ ಭಾರತದ ಬುಡಕಟ್ಟು ಪದಕ್ಕೆ ಪರ್ಯಾಯವಾಗಿ 'ಆದಿವಾಸಿ' ಪದವು ಬಳಕೆಯಲ್ಲಿದೆ. ಒಂದು ಬುಡಕಟ್ಟನ್ನು ನಾವು ಸಾಮಾನ್ಯವಾಗಿ ನಿರ್ದಿಷ್ಟ ಆಡುಭಾಷೆ, ಏಕ ರೀತಿಯ ಸಾಂಸ್ಕೃತಿಕ ಹಿನ್ನೆಲೆ, ಒಗ್ಗಟ್ಟಿನ ಸಾಮಾಜಿಕ ಸಂಘಟನೆಯನ್ನು ಹೊಂದಿ ಒಂದು ನಿರ್ದಿಷ್ಟ ಮೇರೆಯೊಳಗೆ (definite geographical locality) ವಾಸಿಸುವ ಒಂದು ಸಾಮಾಜಿಕ ಸಂಘಟನೆಯಾಗಿದೆ. ಅಲ್ಲದೆ ಇವರನ್ನು ಬೆಟ್ಟುಗುಡ್ಡಗಳಲ್ಲಿ, ಕಾಡು ಕಣಿವೆಗಳಲ್ಲಿ ವಾಸಿಸುವ ಅರೆನಾಗರಿಕ ಜನರೆಂದು ಅಥವಾ ವಿಶೇಷ ತರದ ಕೃಷಿ ಪದ್ಧತಿಯನ್ನು ಆಳವಡಿಸಿಕೊಂಡಿರುವ ಕೃಷಿಕ ಜನರೆಂದು ಪರಿಗಣಿಸಲಾಗಿದೆ".[೧೨]

ಸ್ವತಂತ್ರ ಪೂರ್ವ ಭಾರತದಲ್ಲಿ ಬ್ರಿಟಿಷರು ೧೯೩೬ರಲ್ಲಿ ಅಧಿಸೂಚಿಸಿದ ಬುಡಕಟ್ಟುಗಳ ಪಟ್ಟಿಯನ್ನೇ ಯಥಾವತ್ತಾಗಿ ಸಂವಿಧಾನಬದ್ಧವಾಗಿ ೨೬.೦೧.೧೯೫೦ರಂದು ಆಯಾ ಪ್ರದೇಶಗಳಲ್ಲಿ ಪರಿಶಿಷ್ಟ ಪಂಗಡ ಎಂದು ಅಧಿಸೂಚಿಸಲಾಯಿತು. ಪರಿಶಿಷ್ಟ ಬುಡಕಟ್ಟು (Scheduled tribes) ಪದವು ಪ್ರಧಾನವಾಗಿ ಒಂದು ಆಡಳಿತಾತ್ಮಕ ಹಾಗೂ ಸಂವಿಧಾನಾತ್ಮಕ ಪರಿಕಲ್ಪನೆಯಾಗಿದೆ. ಭಾರತ ಸಂವಿಧಾನದ ೩೪೨(೧)ನೇಯ ವಿಧಿಯ ಅಡಿಯಲ್ಲಿ ಪಟ್ಟಿ ಮಾಡಿದಂತಹ ಬುಡಕಟ್ಟು ಸಮುದಾಯವನ್ನು ಸೂಚಿಸುತ್ತದೆ. ಆದರೆ ಸಂವಿಧಾನದಲ್ಲಿ ಎಲ್ಲಿಯೂ ಬುಡಕಟ್ಟು ಪದಕ್ಕೆ ವ್ಯಾಖ್ಯೆಯನ್ನು ಕೊಟ್ಟಿಲ್ಲ.

ಒಂದು ಬುಡಕಟ್ಟನ್ನು ಪರಿಶಿಷ್ಟ ಪಂಗಡ ಎಂದು ಪರಿಗಣಿಸಲು ಅನುಸರಿಸಬೇಕಾದ ನಿಯಮಗಳು ಮತ್ತು ತತ್ವಗಳ ಬಗ್ಗೆಯೂ ಸಂವಿಧಾನವು ಮೌನವಾಗಿದೆ ಎಂದೇ ತಿಳಸಬಹುದು. ಭಾರತ ಸಂವಿಧಾನದ

ಅನುಚ್ಛೇದ ೩೪೨ (೧)ರ ಪ್ರಕಾರ ರಾಷ್ಟ್ರಪತಿಯವರು ಹಾಗೂ (೨) ರ ಪ್ರಕಾರ ಸಂಸತ್ತು ಅರ್ಹ ಸಮುದಾಯಗಳನ್ನು ಅನುಸೂಚಿತ ಬುಡಕಟ್ಟೆಂದು ಆದೇಶಿಸಿ ಮೀಸಲಾತಿಯನ್ನು ಕಲ್ಪಿಸಬಹುದು.

ಭಾರತ ಸಂವಿಧಾನದ ಅನುಚ್ಛೇದ ೩೪೨ (೧) ರ ಪ್ರಕಾರ ರಾಷ್ಟ್ರಪತಿಯವರು ಯಾವುದೇ ರಾಜ್ಯದ ಅಥವಾ ಯಾವುದೇ ಕೇಂದ್ರ ಆಡಳಿತ ಪ್ರದೇಶಕ್ಕೆ ಸಂಬಂಧಿಸಿದಂತೆ, ಮತ್ತು ಅದು ರಾಜ್ಯವಾಗಿರುವಲ್ಲಿ ಅದರ ರಾಜ್ಯಪಾಲರೊಡನೆ ಸಮಾಲೋಚನೆ ಮಾಡಿದ ತರುವಾಯ, ಈ ಸಂವಿಧಾನದ ಉದ್ದೇಶಗಳಿಗಾಗಿ ಸಂದರ್ಭಾನುಸಾರ ಆ ರಾಜ್ಯದ ಅಥವಾ ಕೇಂದ್ರ ಆಡಳಿತ ಪ್ರದೇಶ ಸಂಬಂಧದಲ್ಲಿ ಅನುಸೂಚಿತ ಬುಡಕಟ್ಟುಗಳ ಅಥವಾ ಬುಡಕಟ್ಟು ಸಮುದಾಯಗಳು ಅಥವಾ ಬುಡಕಟ್ಟುಗಳ ಅಥವಾ ಬುಡಕಟ್ಟು ಸಮುದಾಯದ ಭಾಗಗಳನ್ನು ಅಥವಾ ಅದರೊಳಗಿನ ಗುಂಪುಗಳನ್ನು ಸಾರ್ವಜನಿಕ ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸಬಹುದು. (೨) ಸಂಸತ್ತು ಕಾನೂನು ಮೂಲಕ ಯಾವುದೇ ಬುಡಕಟ್ಟನ್ನು ಅಥವಾ ಬುಡಕಟ್ಟಿನ ಸಮುದಾಯವನ್ನು ಅಥವಾ ಯಾವುದೇ ಬುಡಕಟ್ಟು ಅಥವಾ ಬುಡಕಟ್ಟಿನ ಸಮುದಾಯದ ಭಾಗವನ್ನು ಅಥವಾ ಅದರೊಳಗಿನ ಗುಂಪನ್ನು (೧)ನೆಯ ಖಂಡದ ಮೇರೆಗೆ ಹೊರಡಿಸಲಾದ ಅಧಿಸೂಚನೆಯಲ್ಲಿ ನಿರ್ದಿಷ್ಟ ಪಡಿಸಿದ ಅನುಸೂಚಿತ ಬುಡಕಟ್ಟುಗಳ ಪಟ್ಟಿಯಲ್ಲಿ ಸೇರಿಸಬಹುದು ಅಥವಾ ಅದರಿಂದ ತೆಗೆದು ಹಾಕಬಹುದು; ಆದರೆ ಮೇಲೆ ಹೇಳಿದಂತೆ ಅಲ್ಲದೆ, ಸದರಿ ಖಂಡದ ಮೇರೆಗೆ ಹೊರಡಿಸಲಾದ ಅಧಿಸೂಚನೆಯನ್ನು ಆ ತರುವಾಯದ ಯಾವುದೇ ಅಧಿಸೂಚನೆಯ ಮೂಲಕ ವ್ಯತ್ಯಸ್ತಗೊಳಿಸತಕ್ಕುದಲ್ಲ.

ಪರಿಶಿಷ್ಟ ಪಂಗಡ ಅಥವಾ ಬುಡಕಟ್ಟು ಎಂದು ಘೋಷಿಸಲು ಕೆಲವು ಗುಣಲಕ್ಷಣಗಳನ್ನು ಕೇಂದ್ರ ಸರ್ಕಾರ ನಿಗದಿ ಮಾಡಿದೆ. ಭಾರತದಲ್ಲಿ ಆದಿಮ ಸಮುದಾಯಗಳನ್ನು ಪರಿಶಿಷ್ಟ ಪಂಗಡಗಳೆಂದು ಪರಿಗಣಿಸಲು ೧೯೫೩ರ ಪರಿಶಿಷ್ಟ ಜಾತಿ ಮತ್ತು ಬುಡಕಟ್ಟುಗಳ ಆಯೋಗವು ಈ ಕೆಳಗಿನ ಲಕ್ಷಣಗಳನ್ನು ಪಟ್ಟಿ ಮಾಡಿದೆ.

೧. ನಾಗರಿಕ ಸಮುದಾಯದಿಂದ ದೂರವಿದ್ದು ಕಾಡು, ಬೆಟ್ಟ, ಪರ್ವತ ಅಥವಾ ಪರ್ವತದ ಅಂಚಿನಲ್ಲಿ ಬದುಕುವವರು.

೨. ನಿಗ್ರೋಯಿಡ್, ಆಸ್ಟ್ರೋಲಾಯಿಡ್, ಮಂಗೋಲಾಯಿಡ್ ಮತ್ತು ಕೊಕೊಸೈಡ್ ಈ ನಾಲ್ಕು ಜನಾಂಗದಲ್ಲಿ ಯಾವುದಾದರು ಒಂದಕ್ಕೆ ಸೇರಿರಬೇಕು.

೩. ಬುಡಕಟ್ಟು ಪ್ರತ್ಯೇಕ ಭಾಷೆಯನ್ನು ಹೊಂದಿರಬೇಕು.

೪. ಪಿತೃಪೂಜೆ, ದೈವಗಳ ಆರಾಧನೆಯನ್ನು ಮಾಡುವ ಪ್ರಾಚೀನ ಆಚರಣೆಯನ್ನು ಹೊಂದಿರಬೇಕು.

೫. ಪ್ರಾಚೀನ ಕಸುಬುಗಳಾದ ಬೇಟೆ, ಬೇಸಾಯ, ಕುಮೇರಿ ಕೃಷಿ ಮತ್ತು ಕಾಡುತ್ಪತ್ತಿಗಳನ್ನು ಸಂಗ್ರಹಿಸಿ ಜೀವನ ನಿರ್ವಹಿಸುವವರಾಗಿರಬೇಕು.

೬. ಮಾಂಸ ಸೇವನೆಯನ್ನು ಮಾಡುವವರಾಗಿರಬೇಕು.

ಈ ಮೇಲಿನ ಅಂಶಗಳ ಆಧಾರದಲ್ಲಿ ಬುಡಕಟ್ಟು ಅಥವಾ ಆದಿವಾಸಿ ಸಮುದಾಯಗಳ ಬದುಕಿಗೆ ಪೂರಕವಾದ ವಾತಾವರಣ ಇದಾಗಿದೆ. ಅಧ್ಯಯನದ ವ್ಯಾಪ್ತಿಯೊಳಪಟ್ಟ ಕರಾವಳಿ ಕರ್ನಾಟಕದ ಮೂರು ಜಿಲ್ಲೆಗಳಲ್ಲಿ ವೈವಿಧ್ಯಮಯ ಬುಡಕಟ್ಟು ಸಮುದಾಯಗಳನ್ನು ಗಮನಿಸಬಹುದಾಗಿದೆ.

೨.೩. ಸಂವಿಧಾನ ಬದ್ಧವಾಗಿ ಪರಿಶಿಷ್ಟ ಪಂಗಡದಲ್ಲಿ ಸೇರಿರುವ ಬುಡಕಟ್ಟುಗಳು

ಭಾರತದಲ್ಲಿ ೧೯೫೦ ರಿಂದ ೨೦೧೧ರ ವರೆಗೆ ಪರಿಶಿಷ್ಟ ಪಂಗಡದ ಪಟ್ಟಿಯಲ್ಲಿ ಅನುಚ್ಛೇದ ೩೪೨(೧) ಮತ್ತು (೨) ಪ್ರಕಾರ ಸೇರಿರುವ ಬುಡಕಟ್ಟುಗಳ ಸಂಖ್ಯೆ ೭೦೫. ದೇಶದ ೩೦ ರಾಜ್ಯ

ಹಾಗೂ ಕೇಂದ್ರಾಡಳಿತ ಪ್ರದೇಶಗಳಲ್ಲಿನ ಬುಡಕಟ್ಟು ಜನಸಂಖ್ಯೆ. ಅಂದರೆ, ಭಾರತದ ಒಟ್ಟು ಜನಸಂಖ್ಯೆಯ ಶೇಕಡಾ ೮.೬ರಷ್ಟು ಮಾತ್ರ. ಇದರಲ್ಲಿ ೭೫ ಆದಿಮ ಬುಡಕಟ್ಟುಗಳು ಸೇರಿವೆ. ಕರ್ನಾಟಕ ರಾಜ್ಯದಲ್ಲಿ ಜೇನು ಕುರುಬ ಮತ್ತು ಕೊರಗ ಆದಿವಾಸಿಗಳನ್ನು ಆದಿಯ ಬುಡಕಟ್ಟುಗಳೆಂದು ಅಥವಾ ಅತೀ ಸೂಕ್ಷ್ಮ ಆದಿವಾಸಿಗಳೆಂದು ಭಾರತ ಸರ್ಕಾರ ಗುರುತಿಸಿದೆ. "೨೦೧೧ರ ಜನಗಣತಿಯ ಪ್ರಕಾರ ಕರ್ನಾಟಕ ರಾಜ್ಯದಲ್ಲಿ ಬುಡಕಟ್ಟುಗಳ ಒಟ್ಟು ಜನಸಂಖ್ಯೆ ೪೨,೪೮,೯೮೭, ಪುರುಷರು ೨೧,೩೪,೭೫೪, ಸ್ತ್ರೀಯರು ೨೧,೧೪,೨೩೩ ದಾಖಲಾಗಿರುತ್ತದೆ."[೧೩] "ಕರ್ನಾಟಕ ರಾಜ್ಯದ ಒಟ್ಟು ಜನಸಂಖ್ಯೆಯ ಶೇಕಡಾ ೬.೯೫ ರಷ್ಟು ಜನ ಬುಡಕಟ್ಟಿನವರಿದ್ದಾರೆ. ನಗರ ಪ್ರದೇಶಗಳಲ್ಲಿ ವಾಸಿಸುವ ಬುಡಕಟ್ಟಿನವರ ಜನಸಂಖ್ಯೆ ೮,೧೯,೧೯೬ ಇವುಗಳಲ್ಲಿ ಪುರುಷರು ೪,೧೦,೯೯೨, ಸ್ತ್ರೀಯರು ೪,೦೮,೨೦೪. ಗ್ರಾಮೀಣ ಪ್ರದೇಶಗಳಲ್ಲಿ ವಾಸಿಸುವ ಬುಡಕಟ್ಟಿನವರ ಜನಸಂಖ್ಯೆ ೩೪,೨೯,೭೯೧ ಇವುಗಳಲ್ಲಿ ಪುರುಷರು ೧೭,೨೩,೭೬೨ ಮತ್ತು ಸ್ತ್ರೀಯರು ೧೭,೦೬,೦೨೯. ರಾಜ್ಯದಲ್ಲಿ ಸಂವಿಧಾನ ಬದ್ಧವಾಗಿ ೧೯೫೦ ರಿಂದ ಇವತ್ತಿನವರೆಗೆ ಪರಿಶಿಷ್ಟ ಪಂಗಡದ ಪಟ್ಟಿಗೆ ಸೇರಿರುವ ಬುಡಕಟ್ಟುಗಳ ಸಂಖ್ಯೆ ಒಟ್ಟು ೫೦."[೧೪]

ಕೋಷ್ಟಕ: ೨.೧

ಉತ್ತರ ಕನ್ನಡ, ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿರುವ ಬುಡಕಟ್ಟು ಸಮುದಾಯಗಳ ಜನಸಂಖ್ಯೆ ವಿವರ

ಕ್ರ.ಸಂ.	ಜಿಲ್ಲೆಯ ವಿವರ	ಗ್ರಾಮೀಣ	ನಗರ	ಒಟ್ಟು
೧.	ಉತ್ತರ ಕನ್ನಡ	೨೭,೯೪೯	೬,೨೯೦	೩೪,೨೩೯
೨.	ಉಡುಪಿ	೪೧,೫೯೬	೧೧,೩೦೧	೫೨,೮೯೭
೩.	ದಕ್ಷಿಣ ಕನ್ನಡ	೬೫,೮೪೪	೧೬,೪೨೪	೮೨,೨೬೮
	ಒಟ್ಟು	**೧,೩೫,೩೮೯**	**೩೪,೦೧೫**	**೧,೬೯,೪೦೪**

ಮೇಲಿನ ಕೋಷ್ಟಕದಲ್ಲಿ "೨೦೧೧ರ ಜನಗಣತಿಯ ಪ್ರಕಾರ ಕರ್ನಾಟಕದ ಕರಾವಳಿಯ ಮೂರು ಜಿಲ್ಲೆಗಳಾದ ಉತ್ತರ ಕನ್ನಡ, ಉಡುಪಿ ಮತ್ತು ದಕ್ಷಿಣ ಕನ್ನಡದಲ್ಲಿ ಬುಡಕಟ್ಟುಗಳ ಒಟ್ಟು ಜನಸಂಖ್ಯೆ ೧,೬೯,೪೦೪ ಅವುಗಳಲ್ಲಿ ಗ್ರಾಮೀಣ ಪ್ರದೇಶದಲ್ಲಿ ೧,೩೫,೩೮೯ ಮತ್ತು ನಗರ ಪ್ರದೇಶದಲ್ಲಿ ೩೪೦೧೫ ಜನ ಬುಡಕಟ್ಟುನವರಿದ್ದಾರೆ. ಉತ್ತರ ಕನ್ನಡ ಜಿಲ್ಲೆಯನ್ನು ಗಮನಿಸಿದ್ದಾಗ ನಗರ ಪ್ರದೇಶದಲ್ಲಿ ೬೨೯೦ ಮತ್ತು ಗ್ರಾಮೀಣ ಪ್ರದೇಶದಲ್ಲಿ ೨೭೯೪೯ ಆಗಿರುತ್ತದೆ. ಉಡುಪಿ ಜಿಲ್ಲೆಯಲ್ಲಿ ನಗರ ಪ್ರದೇಶದಲ್ಲಿ ೧೧೩೦೧ ಮತ್ತು ಗ್ರಾಮೀಣ ಪ್ರದೇಶದಲ್ಲಿ ೪೧೫೯೬ ಆಗಿರುತ್ತದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನಗರಪ್ರದೇಶದಲ್ಲಿ ೧೬೪೨೪ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ೬೫೮೯ ಆಗಿರುತ್ತದೆ"[೧೫].

ಕನ್ನಡ ಮತ್ತು ಮರಾಟಿ ಬಾಂಧವ್ಯಗಳು

ಶಂಬಾ ಸಂಪುಟಗಳ ಸಂಪಾದಕರಾದ ಪ್ರೊ. ಮಲ್ಲೇಪುರಂ ಜಿ ವೆಂಕಟೇಶ ಅವರು ಶಂಬಾ ಸಂಪುಟ ಭಾಗದ ಕಂನಾಡು-ಕರ್ನಾಟ-೧ ಪ್ರಸ್ತಾವನೆಯಲ್ಲಿ ಶಂಬಾ ಅವರು "ಕನ್ನಡ ಜನರ ಮೂಲಸ್ಥಾನ ಯಾವುದು? ಅವರ ಭೌಗೋಳಿಕ ನೆಲೆ ಎಲ್ಲಿ? ಅವರು ಬದುಕಿದ ಪರಿಸರ, ಉಸಿರಾಡಿದ ಸ್ಥಾನ ಎಲ್ಲಿ ಎಂಬ ಪ್ರಶ್ನೆ ಹಾಕಿಕೊಂಡು. ಶಂಬಾ ಅವರು ಈ ಪ್ರಶ್ನೆಗೆ ಉತ್ತರವನ್ನು ಹೀಗೆ

ಕಂಡುಕೊಂಡರು. ಅವರ ತೀರ್ಮಾನದ ಪ್ರಕಾರ ಗೋದಾವರಿ ನರ್ಮದಾ ನದಿಯ ತೀರವೇ ಕನ್ನಡದ ಮೂಲ ಸ್ಥಾನ"[೧೬] ಎಂದು ಹೇಳಿದ್ದಾರೆ. 'ಕವಿರಾಜ ಮಾರ್ಗಕಾರನು ಕನ್ನಡ ನಾಡಿನ ಭೂ ಪ್ರದೇಶದ ವಿಸ್ತಾರವನ್ನು 'ಕಾವೇರಿಯಿಂದ ಗೋದಾವರಿ ವರಂ ಇರ್ದ ನಾಡೆಲ್ಲಮಾ ಕನ್ನಡದೊಳ್ ಭಾವಿಸಿದ ಜನಪದಂ' ಎಂದು ತಿಳಿಸಿದ್ದಾನೆ. "ಒಂದೊಮ್ಮೆ ಕನ್ನಡವೇ ಆಗಿದ್ದ 'ಮಹಾರಾಷ್ಟ್ರದ ನೆಲವು ಇಂದು ಕನ್ನಡತನ ಕಳೆದುಕೊಂಡಿತು. ಇದರ ಕಾರಣ ಮೀಮಾಂಸೆ ಯಾವುದೆಂದು 'ಮಹಾರಾಷ್ಟ್ರದ ಮೂಲ'ವು ಕನ್ನಡಿಗರು"[೧೭]ಎಂದು ತಿಳಿಸಿದ್ದಾರೆ. ಶಂಬಾ ಅವರು ತಮ್ಮ ಮಹಾರಾಷ್ಟ್ರದ ಮೂಲ ಎಂಬ ಕೃತಿಯಲ್ಲಿ ಕಾವೇರಿಯಿಂದ ಗೋದಾವರಿಯವರೆಗೆ ಹಬ್ಬಿದ್ದ ಕನ್ನಡ ನಾಡಿನ ಭೌಗೋಳಿಕ ವ್ಯಾಪ್ತಿಯನ್ನು ಕುಗ್ಗಿಸಿಕೊಳ್ಳಲು ಆದ ಕಾರಣಗಳನ್ನು ಬಗೆಗೆ ಹೀಗೆ ಹೇಳಿದ್ದಾರೆ. 'ಆರ್ಯೀಕರಣದ ಪ್ರಭಾವದಿಂದ ಕನ್ನಡ ಸಂಸ್ಕೃತಿ ತನ್ನ ಮೂಲ ಲಕ್ಷಣಗಳನ್ನು ಕಳೆದುಕೊಂಡಿತು. ವಾಸ್ತವವಾಗಿ ಇದೇ ಕಣ್ಮರೆಯಾದ 'ಕನ್ನಡ ಸಂಸ್ಕೃತಿಯ' ಕತೆಯಾಗಿದೆ ಆರ್ಯೀಕರಣದ ಪ್ರಭಾವದಲ್ಲಿ ಕಂದಮಿಳರು ತಮ್ಮ ಕೀಳರಿಮೆಯನ್ನು ಹೆಚ್ಚಿಸಿಕೊಂಡರು. "ಆರ್ಯತನ್ನವನ್ನು ತಮ್ಮದಾಗಿಸಿಕೊಳ್ಳಬೇಕು" ಎಂಬ ಭಾವವೇ ಕನ್ನಡವು ವಿಸ್ಮೃತಿಗೊಳ್ಳಲು ಪರ್ಯಾಯವಾಗಿ ಕಾರಣವಾಯಿತು."[೧೮]ಎಂದು ಹೇಳಿದ್ದಾರೆ ಎಂಬುದನ್ನು ಮಲ್ಲೇಪುರಂ ಜಿ. ವೆಂಕಟೇಶ ಅವರು ಪ್ರಸ್ತಾವನೆಯಲ್ಲಿ ಸೂಚಿಸಿದ್ದಾರೆ.

ಇಂದಿನ ಮಹಾರಾಷ್ಟ್ರದಲ್ಲಿ ರಚನೆಯಾದ 'ಪ್ರಾಚೀನ ಮಹಾನುಭಾವ ಸಾಹಿತ್ಯದಲ್ಲಿ ಮತ್ತು 'ಜ್ಞಾನೇಶ್ವರಿ'ಯಂಥ ಗ್ರಂಥಗಳಲ್ಲಿ 'ಮರ್ಹಾಟ' ಅಥವಾ 'ಮರಹಟ್ಟ' ಎಂಬ ಪ್ರಯೋಗಗಳನ್ನು ಕಾಣುತ್ತೇವೆ. ಇದರಿಂದ 'ಮರಾಠ'ದ ಪೂರ್ವ ರೂಪ 'ಮರ್ಹಾಟ ಅಥವಾ ಮರಾಹಟಿ' ಮರಹಟು ಇರಬೇಕೆಂದು ಸ್ಪಷ್ಟವಾಗುತ್ತದೆ. ಈ ರೀತಿಯಲ್ಲಿ 'ಮರಾಠ' ಕ್ಕಿಂತ 'ಮರ್ಹಾಟಿ' ಇಲ್ಲವೇ 'ಮರಹಟ್ಟಿ' ಇರಬೇಕೆಂದು ಸ್ಪಷ್ಟವಾಗುತ್ತದೆ. ಈ ರೀತಿಯಲ್ಲಿ 'ಮರಾಠ'ಕ್ಕಿಂತ 'ಮರ್ಹಾಟಿ' ಇಲ್ಲವೇ ಮರಹಟ್ಟಿ ಈ ಪ್ರಯೋಗಗಳು ಪ್ರಾಚೀನ ಹಾಗೂ ಶುದ್ಧವಾಗಿವೆಯಂಬುದು ನಿರ್ವಿವಾದವಾಗಿದೆ"[೧೯]ಎಂದು ಶಂಬಾ ಅವರು ಮರ್ಹಾಟೀ ಸಂಸ್ಕೃತಿ ಕೆಲ ಸಮಸ್ಯೆಗಳು ಎಂಬ ಗ್ರಂಥದಲ್ಲಿ ತಿಳಿಸಿದ್ದಾರೆ.

ಈ ಮರಾಟಿ ಸಮುದಾಯಗಳ ಪುರೋಹಿತರಾದ ಕರಾಡ ಬ್ರಾಹ್ಮಣರು ಇಂದಿನ ಮಹಾರಾಷ್ಟ್ರದ ಕರಾಡ ಪ್ರದೇಶದಿಂದ ಅವರೂ ಕರಾವಳಿ ಪ್ರದೇಶಕ್ಕೆ ವಲಸೆ ಬಂದರು. ಕರಾಡ ಪ್ರದೇಶವು ಕನ್ನಡ ನಾಡಿನ ಭೂಪ್ರದೇಶವಾಗಿದ್ದು ಇದು ಪ್ರಾಚೀನದಲ್ಲಿ ಕರಹಾಟಕವೇ ಎಂದು ರಾಧಾ ಕೃಷ್ಣ ಬೆಳ್ಳೂರು ಅಭಿಪ್ರಾಯಪಡುತ್ತಾರೆ. Stewart Gordon ತನ್ನ The New Cambridge History of India Marathas–೧೬೦೦–೧೮೧೮ ಎಂಬ ಗ್ರಂಥದಲ್ಲಿ ಮರಾಟಿ ಮೂಲವನ್ನು ಹೀಗೆ ಹೇಳಿದ್ದಾರೆ. "ಬೆಡ್ಸ್ ಗುಹೆಯಲ್ಲಿ ಸುಮಾರು ಒಂದನೆಯ ಶತಮಾನದ ಕಾಲದ ಶಿಲಾಶಾಸನದಲ್ಲಿ 'ಮಹಾರಥಿನಿ' ಎಂಬ ರಾಣಿಯ ಹೆಸರು ಉಲ್ಲೇಖ ಗೊಂಡಿದೆ. ಅದೇ ರೀತಿ ಐದನೆಯ ಶತಮಾನದ ಸಿಂಘಲೀಸ್ ಕಥೆಯಲ್ಲಿ ಆ ಪ್ರಾಂತ್ಯದವನ್ನು ಮಹಾರಟ್ಟ ಎಂದು ಕರೆಯಲಾಗಿದೆ ಎಂದು ಹೇಳಿದ್ದಾರೆ. 'ಪ್ರಾಚೀನ ಕರ್ನಾಟಕದ ಇತಿಹಾಸವೇ ಪ್ರಾಚೀನ ಮಹಾರಾಷ್ಟ್ರದ ಇತಿಹಾಸವಾಗಿದೆ. ಇಂದಿನ ಮಹಾರಾಷ್ಟ್ರದ ಬಹುಭಾಗ ಪ್ರಾಚೀನ ಕರ್ನಾಟಕದಲ್ಲಿ ಅಂತರ್ಗತವಾಗಿತ್ತು ಎಂಬುದಕ್ಕೆ ನಮಗೆ ಮಹಾರಾಷ್ಟ್ರದಲ್ಲಿ ಸಿಗುವ ಕನ್ನಡದ ಶಾಸನಗಳೇ ಮುಖ್ಯ ಆಧಾರಗಳಾಗಿವೆ" ಎಂದು ಡಾ. ಜಿ. ಎಸ್. ಉಪಾಧ್ಯಾಯ ಅವರು ಅಭಿಪ್ರಾಯ ಪಡುತ್ತಾರೆ. ಹೀಗಾಗಿ ಇಂದು ಕರ್ನಾಟಕಕ್ಕೆ ವಲಸೆ ಬಂದಿರುವ ಮರಾಟಿ ಸಮುದಾಯಗಳ ಸಮೂಹಗಳು ಒಂದು ಕಾಲದಲ್ಲಿ ಕನ್ನಡದ ಭೂಭಾಗದ ಪ್ರದೇಶಗಳಿಂದಲೇ ಬಂದಿರಬೇಕು ಹೀಗಾಗಿ ಇವರನ್ನು ಪ್ರಾಚೀನ ಕರ್ನಾಟಕದ ಮೂಲದವರು ಎಂದು ಹೇಳಬಹುದು.

"ಮರಾಟಿ, ಮರಾಠಿ ಎನ್ನುವದು ದೇಶವಾಚಕ ಶಬ್ದವಾಗಿದೆ. ಮಹಾರಾಷ್ಟ್ರ ಮರಹಾಟಿ ಪದದಿಂದ ಸಂಸ್ಕೃತೀಕರಣಗೊಂಡ ಪದ. ಮರಹಾಟಿ ಕನ್ನಡದ 'ಮರ ಮತ್ತು ಹಟ್ಟಿ' ಪದಗಳ ರೂಪಾಂತರ ಪದ ಮರವರು ಹಾಗೂ ಹಟ್ಟಿಗಳು ಕನ್ನಡದ ಪಶುಪಾಲಕರೆಂದು ಶಂಬಾ ಅವರ ಅಭಿಪ್ರಾಯ. ಮರಾಟಿ ಸಂಸ್ಕೃತೀಕರಣಗೊಂಡು 'ಮರಾಠಿ'ಯಾಗಿದೆಯೆಂದು ಸಂಶೋಧಕರ ಅಭಿಪ್ರಾಯ 'ಮರಹಟ್ಟ>ಮರಾಟಿ>ಮರಾಠಿ' ಆಗಿದೆ. ಈ ಮರಾಟಿಯಿಂದಲೇ ಈ 'ಮರಾಟಿ'ಗೆ ಜಾತಿ ಸೂಚಕ ಪದ ಬಂದಿದೆ.

ಸುಮಾರು ೧೪ನೇ ಶತಮಾನದಲ್ಲಿ ಬಂದವರೆಂದು ಹೇಳುವ ಮರಾಟಿಗರು 'ಮರಾಠಿ' ಭಾಷೆಯಲ್ಲಿ ಮಾತನಾಡುತ್ತಿದ್ದುದರಿಂದ ತುಳುನಾಡಿನ ಪ್ರದೇಶದ ಜನರು ಅವರನ್ನು 'ಮರಾಟಿಗರು' ಎಂದು ಕರೆಯಲ್ಪಟ್ಟು ಅದನ್ನೇ ರೂಢಿಗೆ ತಂದಿರಲು ಸಾಧ್ಯವಿದೆ".[೨೦]

ಮರಾಟಿ ನಾಯ್ಕರು ೧೪ನೇ ಶತಮಾನದಲ್ಲಿ ತುಳುನಾಡನ್ನು ಪ್ರವೇಶಿಸಿದರು ಎಂಬುದನ್ನು ಸುಂದರ ನಾಯಕ ಅವರು ಅಲ್ಲಗಳೆದಿದ್ದಾರೆ. 'ತುಳುನಾಡಿನ ಪಾಡ್ದನಗಳಲ್ಲಿ ಕೊರಗ, ನಲ್ಕೆ, ಪರವ, ಪಂಬದ ಮುಂತಾದ ಜಾತಿಯವರ ಹಾಗೂ ಉಳಿದ ಮೇಲ್ವರ್ಗದವರ ಜಾತಿ, ವೃತ್ತಿ ಇತ್ಯಾದಿಗಳು ಉಕ್ತಗೊಂಡಿವೆ. ಆದರೆ ಮರಾಟಿಗರ ಹೆಸರು, ವೃತ್ತಿ ಇವುಗಳಾವವೂ ಈ ಪಾಡ್ದನಗಳಲ್ಲಿ ಉಲ್ಲೇಖವಾಗಿರುವುದಿಲ್ಲ. ತುಳುನಾಡಿನ ಪುರಾಣಗಳಾದ ಅಲಿಖಿತ ಪರಂಪರೆಯ ಪಾಡ್ದನಗಳಲ್ಲಿ ಮರಾಟಿ ಪದದ ಉಲ್ಲೇಖವಾಗಲೀ ಮರಾಟಿ ಜನರ ಕುರಿತಂತೆ ಪ್ರಸ್ತಾವವಾಗಲೀ ಇಲ್ಲದಿರುವುದರಿಂದ ಮರಾಟಿಗರು ೧೬-೧೭ನೇ ಶತಮಾದಿಂದೀಚೆಗೆ ಕರಾವಳಿ ಕರ್ನಾಟಕ್ಕೆ ವಲಸೆ ಬಂದಿರಬೇಕು"[೨೧]

"ಶಿವಾಜಿಯ ತಂದೆ ಷಹಜಿಯು 'ಸುಮಾರು ೨೬ ವರ್ಷಗಳ ಕಾಲ ಕ್ರಿ.ಶ. ೧೬೩೮-ಕ್ರಿ.ಶ. ೧೬೬೪) ವಿಜಾಪುರದ ಆದಿಲ್‌ಷಾಹಿಗಳ ಸೈನಿಕಾಧಿಕಾರಿಯಾಗಿದ್ದು ಅವರ ಪರ ಹೋರಾಡಿ ಕರ್ನಾಟಕದಲ್ಲಿ ಅನೇಕ ದೇವಾಲಯಗಳನ್ನು ಕಟ್ಟಿಸುವುದರೊಂದಿಗೆ ಬೆಂಗಳೂರಿನ ಕೋಟೆಯನ್ನು ನವೀಕರಿಸುವುದರೊಂದಿಗೆ ಬೆಂಗಳೂರನ್ನು ಮರಾಠರ ಸಂಸ್ಕೃತಿಯ ಕೇಂದ್ರವನ್ನಾಗಿ ಮಾಡುವಲ್ಲಿ ಮತ್ತು ಕರ್ನಾಟಕದಲ್ಲಿ ಮರಾಠರ ಆಳ್ವಿಕೆ ಮತ್ತು ನೆಲೆಸುವಿಕೆಗೆ ನಿಜವಾದ ಅಡಿಪಾಯ ಹಾಕುವಲ್ಲಿ ಯಶಸ್ವಿಯಾದನು. ಸುಮಾರು ೧೬ನೇ ಶತಮಾನದ ಮಧ್ಯಭಾಗದಿಂದೀಚೆಗೆ ಮರಾಟಿಗರು ಬಹುಸಂಖ್ಯೆಯಲ್ಲಿ ಹಂತ ಹಂತವಾಗಿ ಕರ್ನಾಟಕಕ್ಕೆ ವಲಸೆ ಬಂದರು"[೨೨]

೨.೪. ಕರಾವಳಿ ಕರ್ನಾಟಕದ ಮರಾಟಿ ಸಮುದಾಯಗಳು

ಮರಾಠಿ

ಮರಾಟಿ ಬುಡಕಟ್ಟು ಹಿಂದೆ ಮರಾಠರ ಸಾಮ್ರಾಜ್ಯದಲ್ಲಿ ಸೈನಿಕರಾಗಿದ್ದು ಕಾರಣಾಂತರಗಳಿಂದ ದಕ್ಷಿಣ ಕನ್ನಡ, ಕಾಸರಗೋಡು, ಹೊಸದುರ್ಗ ಮತ್ತು ಕೊಡಗುಗಳತ್ತ ವಲಸೆ ಬಂದು ನೆಲೆ ನಿಂತಿರುವರು. ಭಾಷಾವಾರು ಪ್ರಾಂತ ರಚನೆಯಾದಾಗ ಕೊಡಗು ಜಿಲ್ಲೆ ಕನ್ನಡ ನಾಡಿಗೆ ಸೇರಿಕೊಂಡಿತು. ಭಾರತ ಸರ್ಕಾರದ ಆದೇಶದಂತೆ ಕೊಡಗು ಜಿಲ್ಲೆಗೆ ಸೀಮಿತಗೊಂಡಂತೆ ಮರಾಠಿ ಬುಡಕಟ್ಟು ಪರಿಶಿಷ್ಟ ಪಂಗಡಕ್ಕೆ ಸೇರಿಕೊಂಡಿತು. ಈ ಬುಡಕಟ್ಟಿನ ಪ್ರಾದೇಶಿಕ ಮಿತಿಯನ್ನು ಇದುವರೆಗೂ ಸಡಿಲಿಸಿಲ್ಲ. ೨೦೧೧ರ ಜನಗಣತಿಯ ಪ್ರಕಾರ ಕೊಡಗು ಜಿಲ್ಲೆಯಲ್ಲಿನ ಮರಾಠ ಬುಡಕಟ್ಟಿನ ಜನಸಂಖ್ಯೆ ೩೩೯೬ ದಾಖಲಾಗಿರುವುದು.

ಭಾರತ ಸರ್ಕಾರದ ಆದೇಶದಂತೆ ದಕ್ಷಿಣ ಕನ್ನಡ ಜಿಲ್ಲೆಗೆ ಸೀಮಿತಗೊಂಡಂತೆ 'ಮರಾಟಿ' ಬುಡಕಟ್ಟು ಪರಿಶಿಷ್ಟ ಪಂಗಡ ಪಟ್ಟಿಯಲ್ಲಿದೆ. ಇಂದು ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಗೆ ಸೀಮಿತಗೊಂಡಂತೆ

ಕರ್ನಾಟಕ ರಾಜ್ಯದ ಪರಿಶಿಷ್ಟ ಪಂಗಡ ಪಟ್ಟಿಯ ಕ್ರಮ ಸಂಖ್ಯೆ ೩೬ರಲ್ಲಿ ಮರಾಟಿ ಸಮುದಾಯ ಬುಡಕಟ್ಟಿನ ಪಟ್ಟಿಯಲ್ಲಿದೆ. ಇವರು ಮಹಾರಾಷ್ಟ್ರ ಮತ್ತು ಗೋವಾ ರಾಜ್ಯದ ಮೂಲದವರು. ಕೊಂಕಣಿ ಮಿಶ್ರಿತ ಮರಾಠಿ ಇವರ ಮಾತೃಭಾಷೆ ಅಲ್ಲದೆ ತಮ್ಮನ್ನು ಕ್ಷತ್ರಿಯರೆಂದು ಗುರುತಿಸಿಕೊಳ್ಳುವರು.

ಒಂದು ಕಾಲದಲ್ಲಿ ಇವರು ಬೇಟೆಗಾರರಾಗಿದ್ದು, ಕುಮೇರಿ ಬೇಸಾಯ ಮಾಡುತ್ತಿದ್ದರು. ಕ್ರಮೇಣ ಕೃಷಿಯೇ ಇವರ ಮುಖ್ಯ ಕಸುಬು. ಕೂಲಿ, ಬೀಡಿಕಟ್ಟುವ, ಪಶುಪಾಲನೆ, ಅರಣ್ಯೋತ್ಪಾದನೆಯ ಸಂಗ್ರಹ ವೃತ್ತಿಯನ್ನು ಸಹ ಅವಲಂಬಿಸಿದ್ದಾರೆ. ೨೦೧೧ರ ಜನಗಣತಿಯ ಪ್ರಕಾರ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇವರ ಜನಸಂಖ್ಯೆ ೮೨೨೬೮ ದಾಖಲಾಗಿರುವುದು.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನೆಲೆಸಿರುವವರನ್ನು 'ಮರಾಟಿ'ಗಳೆಂದು ಹಾಗೂ ಕೊಡಗು ಜಿಲ್ಲೆಯಲ್ಲಿರುವವರನ್ನು 'ಮರಾಠಿ'ಯವರೆಂದು ಕರೆಯುತ್ತಾರೆ. ಭಾರತ ಸರಕಾರ ಸ್ವಾತಂತ್ರ್ಯೋತ್ತರ ಕಾಲದಲ್ಲಿ ಇವರನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸಿತು. ಕೊಡಗಿನಲ್ಲಿ ಇವರನ್ನು ಮರಾಠ ಅಥವಾ ಮರಾಠಿ ಎಂಬುದಾಗಿ ಕರೆಯುತ್ತಾರೆ. ತಮ್ಮನ್ನು ತಾವು ಕ್ಷತ್ರಿಯರೆಂದು ಗುರುತಿಸಿಕೊಂಡು 'ಕ್ಷತ್ರಿಯ ಮರಾಠಿ' ಎಂತಲೂ, 'ಆರ್ಯ ಮರಾಠಿ' 'ಅರೇರು' ಎಂಬುದಾಗಿ ಗುರುತಿಸಿ 'ಆರ್ಯ ಯಾನೆ ಮರಾಠಿ' ಎಂಬುದಾಗಿ ಗುರುತಿಸಿಕೊಂಡಿರುವರು. ಬ್ರಾಹ್ಮಣೇತರ ಮರಾಟಿಗಳು ಛತ್ರಪತಿ ಶಿವಾಜಿ ಹಾಗೂ ಪೇಶ್ವೆಯವರ ಕಾಲದಲ್ಲಿ ಸೈನ್ಯದಲ್ಲಿ ಸೈನಿಕರಾಗಿದ್ದು, ಕಾರಣಾಂತರಗಳಿಂದ ಕರ್ನಾಟಕ ಮತ್ತು ಕೇರಳ ರಾಜ್ಯದ ಬೆಟ್ಟ, ಪರ್ವತದಂಚಿಗೆ, ಗಿರಿಕಂದರಗಳತ್ತ ಬಂದು ಅಲ್ಲಿಯೇ ನೆಲೆ ನಿಂತು ಕಾಲಕ್ರಮೇಣ ಬುಡಕಟ್ಟೀಕರಣಕ್ಕೊಳಗಾದರು.

ಮರಾಟಿ ಬುಡಕಟ್ಟಿನವರನ್ನು ಸ್ಥಳೀಯ ತುಳುವರು 'ಆರೆ ಮರಾಟಿ', 'ಕಾಡು ಮರಾಟಿ', 'ಕನಡೇರು, ಕ್ಷತ್ರಿಯ ಮರಾಟಿ', 'ಮರಾಠೇರು', 'ಮರಾಠಿ', 'ಮರಾಠ' ಎಂಬ ಪದಗಳಿಂದ ಕರೆಯುವರು. ಇವರು ತಮ್ಮ ಹೆಸರುಗಳೊಂದಿಗೆ ಹೆಚ್ಚಾಗಿ ರಾವ್, ಜೀ, ಓಜೀ ಎಂತಲೂ ಕರೆಯುತ್ತಾರೆ. ಈ ಮೂರು ಪದಗಳು ಗೌರವ, ಮರ್ಯಾದೆ ಸೂಚಕ ಪದಗಳು ಅವರ ಹೆಸರಿನೊಂದಿಗೆ ವಿಲೀನಗೊಂಡಿರುತ್ತವೆ.

ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ತಾಲೂಕಿನ ಮುಲ್ಕಿ ಹೋಬಳಿಯ ಕವತ್ತಾರು, ಎಳತ್ತೂರು, ಕೊಲ್ಲೂರು, ಕುಕ್ಕಿಕಟ್ಟೆಯಲ್ಲಿ ೪೩ ಮನೆಗಳಿದ್ದು, ಉಡುಪಿ ಜಿಲ್ಲೆಯ ಕಾರ್ಕಳ ತಾಲೂಕಿನ ಹಿರೇಯಂಗಡಿ, ಜೋಡುಕಟ್ಟೆ, ಕುಂಟಲಪ್ಪಾಡಿ, ಕಾರ್ಕಳ ಪಟ್ಟಣ ಸಾಣೂರು ಗ್ರಾಮಗಳಲ್ಲಿ ಸುಮಾರು ೧೮೩ ಕುಟುಂಬಗಳು ವಾಸವಾಗಿರುವುದು ಕ್ಷೇತ್ರಕಾರ್ಯದಲ್ಲಿ ಕಂಡುಬಂದಿದೆ. ಇವರಲ್ಲಿ ಬಳಿ ಪದ್ಧತಿ ಚಾಲ್ತಿಯಲ್ಲಿದೆ. ಸುಮಾರು ೯೬ ಬಳಿ ಇರುವುದೆಂದು ತಿಳುವಳಿಕೆದಾರರು ತಿಳಿಸಿರುವರು. ಕ್ಷೇತ್ರಕಾರ್ಯ ಸಂದರ್ಭದಲ್ಲಿ ಮರಾಟಿ ಸಮುದಾಯದಲ್ಲಿ ಬೆಡ್ಕಂ, ಅಸಲ್, ಬೇಡೇಕರ್, ಬೋಂಸ್ಲೆ, ಚವ್ಹಾನ/ಚವನ್, ಮೊರೆ, ದೇವಕರ, ಜಗತಾಪ, ಜಾದವ, ರಾಥೋಡ್, ಪವಾರ, ಸಿಂಧೆ, ಸೆಪ್ಪೇಕರ, ತಾಮಸ್, ಉಬ್ಲೇಕರ, ವಾಗ್ಮಾನ್, ವಿಡೆ ಮುಂತಾದ ೧೭ ಬಳಿಗಳು ದೊರೆತಿವೆ. ಇವು ವೈವಾಹಿಕ ಸಂಬಂಧ ಬೆಳೆಸುವಲ್ಲಿ ಸಹಕಾರಿಯಾಗಿವೆ.

ಕುಂಬ್ರಿ ಮರಾಟಿ

ಕುಂಬ್ರಿ ಮರಾಟಿ ಸಮುದಾಯದವರು ಉತ್ತರ ಕನ್ನಡ ಜಿಲ್ಲೆಯ ಯಲ್ಲಾಪುರ, ಶಿರಸಿ, ಕುಮಟಾ, ಅಂಕೋಲಾ, ಸಿದ್ಧಾಪುರ, ಹೊನ್ನಾವರ ಹಾಗೂ ಭಟ್ಕಳ ತಾಲೂಕುಗಳಲ್ಲಿ ಸಾಂದ್ರವಾಗಿ ಕಂಡುಬರುತ್ತಾರೆ.

ಇವರು ಪಶ್ಚಿಮಘಟ್ಟಗಳ ಕಡಿದಾದ ಕಣಿವೆ ಪ್ರದೇಶಗಳಲ್ಲಿ ಚದುರಿದಂತೆ ವಾಸವಾಗಿದ್ದು, ಆರಂಭ ಕಾಲದಲ್ಲಿ ಕುಮೇರಿ ಕೃಷಿ ಪದ್ಧತಿಯನ್ನು ಅನುಸರಿಸುತ್ತಾ ಇತ್ತೀಚೆಗೆ ಒಂದೊಂದು ಸ್ಥಳದಲ್ಲಿ ನೆಲೆನಿಂತಿರುವುದು ಕಂಡುಬರುತ್ತದೆ.

ಕುಂಬ್ರಿ ಮರಾಟಿಗರು, ಶಿರಸಿ, ಸಿದ್ಧಾಪುರ, ಕುಮಟಾ, ಹೊನ್ನಾವರ, ಭಟ್ಕಳ, ಯಲ್ಲಾಪುರದ ದಕ್ಷಿಣ ಭಾಗ, ಅಂಕೋಲಾ ತಾಲೂಕಿನ ಪೂರ್ವ ಭಾಗಗಳಲ್ಲಿ ನೆಲೆ ನಿಂತಿರುವುದನ್ನು ಕ್ಷೇತ್ರಕಾರ್ಯ ಸಂದರ್ಭದಲ್ಲಿ ಗುರುತಿಸಲಾಗಿದೆ. ಯಲ್ಲಾಪುರ ತಾಲೂಕಿನ ಕೆಳಾಸೆ, ಇಳೆಹಳ್ಳಿ, ಹೆಮ್ಮಾಡಿ, ಕೊಡ್ಲಗದ್ದೆ, ಅರೆಬೈಲು, ಸುಂಕನಾಳ, ಮಂಚಿಕೇರಿ, ಕೋಟೆಮನೆ, ಕೊಂಡೆಮನೆ, ಕನ್ನಡಗಲ್ಲು ಹಾಗೂ ಬೆಳಗೇರಿ, ಚಿಪಗೇರಿಯಲ್ಲಿ ಶಿರಸಿ ತಾಲೂಕಿನ ಬೆಡನಗಾಂ, ಎಕ್ಕೆಂಬಿ, ಬಿಸಲಕೊಪ್ಪ, ಮಳಗಿ, ಸೋಂದಾ, ಸಾಲ್ಕಣಿ, ವಾಜಗದ್ದೆ, ಜಡ್ಡಿಗದ್ದೆ, ದೇವನಹಳ್ಳಿ, ಬೆಣಂಗಾವ್, ಮೇಲಕೊಪ್ಪಲು, ಮತ್ತಿಘಟ್ಟಾ, ಸವಲೆ, ಬರಸಗುಣೆ, ಕಲ್ಲಳ್ಳಿ, ಮುಂಡಗಾರುಗಳಲ್ಲಿ, ಸಿದ್ಧಾಪುರ ತಾಲೂಕಿನ ನಿಲಕುಂದ, ಬಿರಲಮಕ್ಕಿ, ಕೋಚಿಗದ್ದೆ, ಹೆಗ್ಗರಣೆ, ಹಳ್ಳಿಬೈಲು, ಮಂದಾನೆಗಳಲ್ಲಿ, ಕುಮಟಾ ತಾಲೂಕಿನ ಬಂಗಾಣೆ, ಮೊರಸ, ಕವಲೋಡಿ, ಸಾಂತಗಲ್, ಉಳ್ಳೂರು ಮಠ, ಮೊಸಿಮನೆ, ನಾಗೂರು ಬಂಡಗಾರ, ಯೋಣ, ಹಳ್ಳಿಬೈಲುಗಳಲ್ಲಿ, ಹೊನ್ನಾವರ ತಾಲೂಕಿನ ಮಂಕಿ ಗೇರುಸೊಪ್ಪ, ಅಡಿಕೆಕುಳಿ, ಸಂಪೊಳ್ಳಿ ಹಡಿನಬಾಳಗಳಲ್ಲಿ, ಭಟ್ಕಳದ ಹಡಿಲು, ಹೆಂಜಲೆ ಕಟಗಾರ ಕೊಪ್ಪಗಳಲ್ಲಿ ಇವರ ವಾಸದ ನೆಲೆಗಳನ್ನು ಗುರುತಿಸಲಾಗಿದೆ.

ಕುಂಬ್ರಿ ಮರಾಟಿಗರು ಅಲೆಮಾರಿ ಪಶುಪಾಲಕರ ಮತ್ತು ಕುಮ್ರಿ ಬೇಸಾಯ ಪದ್ಧತಿಯನ್ನು ರೂಢಿಸಿಕೊಂಡು ಬಂದವರು 'ಕುಂಬ್ರಿ' ಎಂಬ ಪದವು 'ಕುಮ್ರಿ' ಎಂಬ ಪದದ ಸ್ಥಳೀಯ ಬಳಕೆಯ ರೂಪವಾಗಿದೆ. 'ಕುಮ್ರಿ' ಬೇಸಾಯ ಮಾಡುತ್ತಾ ಉತ್ತರ ಕನ್ನಡದ ಇಳಿಜಾರು ಕಣಿವೆಗಳಲ್ಲಿ ವಾಸಿಸುವ ಈ ಸಮುದಾಯ ಇಂದಿಗೂ ಜಿಲ್ಲೆಯ ಹಲವೆಡೆ ಕುಮ್ರಿ ಬೇಸಾಯ ಕ್ರಮವನ್ನು ಅನುಸರಿಸಿರುತ್ತಾರೆ. ಇತರೆ ಸಮುದಾಯಗಳಾದ ಕುಣಬಿ, ಕುಡುಬಿ, ಮರಾಟ, ಮರಾಠಿ, ಆರ್ಯ ಮರಾಠಿ, ಕ್ಷತ್ರಿಯ ಮರಾಠಿ, ಮರಾಟಿ ನಾಯ್ಕ ಸಮುದಾಯದವರು ಸಹ ಕುಮ್ರಿ ಬೇಸಾಯಗಾರರು. ಈ ಸಮುದಾಯ ಕುಮ್ರಿ ಬೇಸಾಯ ಅನುಸರಿಸಿಕೊಂಡು ಬಂದ ಕಾರಣಕ್ಕೆ 'ಕುಮ್ರಿ ಮರಾಠಿ'ಗರು ಅಥವಾ 'ಕುಂಬ್ರಿ ಮರಾಠಿ'ಗರು ಎಂದು ಕರೆಯಲಾಗುತ್ತದೆ. ಇವರು ಮೂಲತಃ ಸೈನಿಕರಾಗಿ ಸೇವೆ ಸಲ್ಲಿಸುತ್ತಿದ್ದರು ಎಂಬುದಾಗಿ ಚರಿತ್ರೆಕಾರರು ಗುರುತಿಸಿದ್ದಾರೆ. ಅಲ್ಲದೆ, ಶಿವಾಜಿ ಸೈನ್ಯದಲ್ಲಿ ಈ ಸಮುದಾಯದವರು ಹೆಚ್ಚಿನ ಸಂಖ್ಯೆಯಲ್ಲಿದ್ದರು. ಶಿವಾಜಿಯು ಕರ್ನಾಟಕದ ಗಡಿ ಪ್ರದೇಶದಲ್ಲಿ ತನ್ನ ರಾಜ್ಯ ವಿಸ್ತರಿಸುವ ಭಾಗವಾಗಿ ಈ ಸಮುದಾಯಗಳನ್ನು ಇಲ್ಲಿಗೆ ಪದೇ ಪದೇ ಕರೆತಂದಿರಬಹುದೆಂದು ಅನೇಕ ಚರಿತ್ರೆಕಾರರು ಊಹಿಸಿರುತ್ತಾರೆ.

ಈ ಸಮುದಾಯದ ಜನಸಂಖ್ಯೆಯ ಬಗೆಗೆ ನಿಖರವಾದ ಮಾಹಿತಿಗಳಿಲ್ಲ. ೨೦೧೧ರ ಜನಗಣತಿಯಲ್ಲಿಯೂ ಕುಂಬ್ರಿ ಮರಾಠಿಗರ ಜನಸಂಖ್ಯೆಯ ಬಗೆಗೆ ನಿಖರವಾದ ಹಾಗೂ ಪ್ರತ್ಯೇಕವಾದ ಅಂಕಿ ಅಂಶಗಳು ಲಭ್ಯವಿಲ್ಲ. ಆದರೆ ಸಮುದಾಯದ ಹಿರಿಯರು, ಜನಪ್ರತಿನಿಧಿಗಳು ಸಭೆ ಸೇರಿ ಜಿಲ್ಲಾ ಮಟ್ಟದಲ್ಲಿ ಕುಂಬ್ರಿ ಮರಾಠಿ ಅಭಿವೃದ್ಧಿ ಸಂಘವನ್ನು ರಚಿಸಿಕೊಂಡು ಮಾಹಿತಿ ಸಂಗ್ರಹಿಸಿದ್ದು, ಉತ್ತರ ಕನ್ನಡ ಜಿಲ್ಲೆಯಲ್ಲಿ ಸುಮಾರು ೧೫೦೦೦ ರಿಂದ ೧೬೦೦೦ ಜನಸಂಖ್ಯೆ ಇರುವ ಬಗ್ಗೆ ಹೇಳಲಾಗುತ್ತಿದೆ.

ಇವರು ಹೆಚ್ಚಾಗಿ ವಾಸಿಸುವ ಪ್ರದೇಶಗಳಿಗೆ 'ಕೊಪ್ಪ' ಎಂದು ಕರೆಯುತ್ತಾರೆ. ಅಲ್ಲದೆ ಇವರು ಬೇರೆ ಬೇರೆ ಪ್ರದೇಶಗಳಿಗೆ 'ಕೊಪ್ಪ' ಎಂದು ಕರೆದರೆ ಕುಂಬ್ರಿ ಮರಾಠಿಗರ ಹಳ್ಳಿ ಎಂದರ್ಥ. ಒಂದೇ

ಕಡೆ ಗುಂಪು ಗುಂಪಾಗಿರುವ ಇವರ ಸಮುದಾಯದ ಮುಖಂಡವನ್ನು 'ಗೌಡ' ಎಂದು ಕರೆಯುವ ವಾಡಿಕೆ ಇದೆ. ಸಮುದಾಯದಲ್ಲಿ ಉಂಟಾಗುವ ನ್ಯಾಯ ವ್ಯವಸ್ಥೆ, ಊರವರೆಲ್ಲರೂ ಸೇರಿ ಕೈಗೊಳ್ಳುವ ಚಟುವಟಿಕೆಗಳು, ಹೊಂದಾಣಿಕೆ ಸಹಬಾಳ್ವೆಯೂ ಸೇರಿದಂತೆ ಸಹಜ ಹಾಗೂ ಸರಳ ಜೀವನ ನಿರ್ವಹಣೆಗೆ ಈ 'ಗೌಡ' ಸಲಹೆ ಮಾರ್ಗದರ್ಶನ ನೀಡುತ್ತಾನೆ. ಸಮುದಾಯದ ಆಚಾರ-ವಿಚಾರ, ಸಂಪ್ರದಾಯಗಳನ್ನು ಮೀರಿದರೆ ಶಿಕ್ಷೆ ವಿಧಿಸುವ ಪದ್ಧತಿಯೂ ಚಾಲ್ತಿಯಲ್ಲಿದೆ.

ಕುಂಬ್ರಿ ಮರಾಟಿಗರು ಶ್ರಮ ಜೀವಿಗಳು, ಕೃಷಿ ಹಾಗೂ ಅರಣ್ಯೋತ್ಪನ್ನಗಳ ಮೇಲೆಯೇ ಅವಲಂಬಿತರಾಗಿರುವರು. ಇವರು ಸ್ಥಳಾಂತರ ಬೇಸಾಯ ಪದ್ಧತಿಯನ್ನು ರೂಢಿಸಿಕೊಂಡು ಆಹಾರ ಹಾಗೂ ರಕ್ಷಣೆಗಾಗಿ ಕರಾವಳಿ ರಾಜ್ಯಗಳಿಗೆ ವಲಸೆ ಬಂದಿರಬಹುದು. ಅವರ ಉಡುಗೆ-ತೊಡುಗೆ, ಆಹಾರ, ಭಾಷೆ ಹಾಗೂ ಕುಲ (ಬಳಿ) ಪದ್ಧತಿ, ಒಳಾಡಳಿತ, ರೂಢಿ-ಸಂಪ್ರದಾಯಗಳು, ಪ್ರಕೃತಿ ಆರಾಧನೆ, ಕುಲಲಾಂಛನ, ಶಕ್ತಿಯಾರಾಧನೆ, ಗಡಿಹಬ್ಬ, ಭೂಮಿ ಹುಣ್ಣಿಮೆ, ಸುಗ್ಗಿ, ಹೊಸಕ್ಕಿ ಹಬ್ಬ, ಕಣಹಬ್ಬ, ಮುಷ್ಟಿ, ಮಾಸ್ತಿ ಆರಾಧನೆ, ಕುಲೆ / ಪ್ರೇತಾರಾಧನೆ ಮುಂತಾದವುಗಳಲ್ಲದೇ ಕೃಷಿಗೆ ಸಂಬಂಧಿಸಿದ ಹಬ್ಬಗಳನ್ನು ಭಯ ಭಕ್ತಿಯಿಂದ ಆರಾಧಿಸಿಕೊಂಡು ಬಂದಿದ್ದಾರೆ.

ಕುಂಬ್ರಿ ಮರಾಟಿಗರು ಆರಂಭದಲ್ಲಿ ಸ್ಥಳಾಂತರ ಬೇಸಾಯವನ್ನು ಅವಲಂಬಿಸಿದ ಇವರು ಬರುಬರುತ್ತಾ ಒಂದೆಡೆ ನೆಲೆ ನಿಂತು ಕೃಷಿ ಚಟುವಟಿಕೆ ಕೈಗೊಳ್ಳುತ್ತಿರುವುದನ್ನು ಕ್ಷೇತ್ರಕಾರ್ಯ ಸಂದರ್ಭದಲ್ಲಿ ಗಮನಿಸಿರುವೆನು. ಆಧುನಿಕತೆ ಹಾಗೂ ನಾಗರಿಕತೆಯ ಪರಿಣಾಮವಾಗಿ ಕೃಷಿಯನ್ನು ಹೊರತುಪಡಿಸಿ ಇತರೆ ಕಸುಬುಗಳಲ್ಲಿ ತೊಡಗಿಸಿಕೊಂಡಿರುವುದನ್ನು ಕೂಡ ಗಮನಿಸಲಾಯಿತು. ಅರಣ್ಯೋತ್ಪಾದನೆಗಳನ್ನು ಸಂಗ್ರಹಿಸಿ ಮಧ್ಯವರ್ತಿಗಳಿಗೆ ಮಾರಾಟ ಮಾಡಿ, ಉಳಿದ ಹಣದಲ್ಲಿ ಜೀವನಾವಶ್ಯಕ ವಸ್ತುಗಳನ್ನು ಖರೀದಿಸಿ ಜೀವನ ನಿರ್ವಹಿಸುತ್ತಿದ್ದಾರೆ.

ಕುಂಬ್ರಿ ಮರಾಠಿಗರು ಮೂಲತಃ ಶೈವ ಪಂಥದವರಾಗಿರಬೇಕು ಇವರು ಪೂಜಿಸುವ 'ಮಹಾದೇವ' ಮತ್ತು ಕುರ್ಮಿನಾಥ ಅಥವಾ 'ಕಲ್ಮರಾಜ್' ಮುಂತಾದ ದೇವರನ್ನು ಆರಾಧಿಸುತ್ತಾರೆ.

ಮರಾಟಿ ನಾಯ್ಕ

ದಕ್ಷಿಣ ಕನ್ನಡ, ಉಡುಪಿ, ಕೇರಳರಾಜ್ಯದ ಕಾಸರಗೋಡು ಜಿಲ್ಲೆಯಲ್ಲಿ ಮರಾಟಿಗರೆಲ್ಲರು ನಾಯ್ಕ / ನ್ಯಾಕ ಎಂಬ ಕುಲನಾಮವನ್ನು ಹೊಂದಿದ್ದಾರೆ. ನಾಯ್ಕ/ನಾಯಕ ಎಂಬ ಅಂಕಿತದಿಂದ ಅಂತ್ಯಗೊಳ್ಳುವ ಹೆಸರುಳ್ಳವರೆಲ್ಲಾ ಮರಾಟಿಗರಲ್ಲ. ಈ ನಾಯ್ಕ ಎಂಬುದು ಜಿಲ್ಲೆಯ ಇತರೆ ಸಮುದಾಯಗಳಾದ ಗೌಡ ಸಾರಸ್ವತ, ಬಂಟ, ಬಿಲ್ಲವ, ರಾಮಕ್ಷತ್ರಿಯ, ಪರಿವಾರ ಬಂಟ, ಖಾರ್ವಿ, ಗಾಳದ ಕೊಂಕಣಿ, ಸಮಗಾರ, ಮಲೆನಾಡಿನ ಒಕ್ಕಲಿಗ, ಬಯಲು ಸೀಮೆಯ ಲಂಬಾಣಿ, ಬೇಡ, ವಾಲ್ಮೀಕಿ, ಈಡಿಗ, ಇನ್ನೂ ಆನೇಕ ಸಮುದಾಯಗಳಲ್ಲಿದೆ. ವಾಸ್ತವವಾಗಿ ನಾಯ್ಕ (ನಾಯಕ) ಎಂಬುದು ಗ್ರಾಮದ ಮುಖಂಡನಿಗಿರುವ ಹೆಸರು. ಸೈನಿಕ ವ್ಯವಸ್ಥೆಯಲ್ಲಿ ಜವಾಬ್ದಾರಿಯುತ ಒಂದು ನಿರ್ದಿಷ್ಟ ಹುದ್ದೆ. ಅಲ್ಲದೆ 'ನಾಯಕ' ಎಂಬುದು ಸಂಸ್ಕೃತ ಮೂಲದ ಪದವಾಗಿದೆ.

ಮರಾಟಿಗರು ಮೂಲತಃ ಮಹಾರಾಷ್ಟ್ರ ರಾಜ್ಯದಿಂದ ಬಂದವರು. ಮರಾಠಿಯ ಉಪಭಾಷೆಯನ್ನು ಮಾತನಾಡುವುದರಿಂದ 'ಮಹಾರಾಷ್ಟ್ರ' ಮೂಲ ಎಂದು ಹೇಳಿದರೆ ತಪ್ಪಾಗಲಾರದು. ಶಿವಾಜಿಯ ಅಥವಾ ಪೇಶ್ವೆಗಳ ಸೈನಿಕರಾಗಿಯೂ ಇರಲು ಸಾಧ್ಯವಿದೆ. ಸೇವಾದಳದಲ್ಲಿ ನಾಯ್ಕ (ನಾಯಕ್) ಎನ್ನುವ ಹುದ್ದೆಯಲ್ಲಿ ಮರಾಟಿಗರ ಪೂರ್ವಜರು ಸೇವೆ ಮಾಡುತ್ತಿದ್ದುದರಿಂದ ರೂಢಿಗತವಾಗಿ

'ನಾಯಕರು' ಎಂಬ ಪದ ಹೆಸರಲ್ಲಿ ಸೇರಿರಲು ಸಾಧ್ಯವಿದೆ. ವಲಸೆ ಬಂದ ಕಾಲದಲ್ಲಿ ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯ ತುಳುವರು ಮರಾಟಿಗರ ಮೂಲ ಇತಿಹಾಸ ತಿಳಿದು 'ಮರಾಟಿ ನಾಯ್ಕರು' ಎಂಬ ನಾಮಪದದಿಂದ ಕರೆಯಲು ಸಾಧ್ಯವಿದೆ. ಇವರ ಹೆಸರಿನ ಮುಂದೆ ನಾಯ್ಕ (ನ್ಯಾಕ) ಎಂಬ ಕುಲನಾಮವಿದ್ದು ಅವರನ್ನು 'ಮರಾಟಿ ನಾಯ್ಕ' ಎಂಬ ಜಾತಿ ಸೂಚಕ ಪದವನ್ನು ಬಳಸುತ್ತಾ ಬರಲಾಗಿದೆ.

ಭಾರತದ ಇತರೆ ಬುಡಕಟ್ಟು ಸಮುದಾಯಗಳಂತೆ ಮರಾಟಿ ನಾಯ್ಕರು ಹಳ್ಳಿಗಳಲ್ಲಿ ತಮ್ಮದೇ ಆದ ವಾಸಸ್ಥಳವನ್ನು ಹೊಂದಿದ್ದು ಒಟ್ಟಾಗಿ ಒಂದೇ ಕಡೆ ವಾಸಿಸುತ್ತಿದ್ದಾರೆ. ಇವರು ಕೊಂಕಣಿ ಮಿಶ್ರಿತ ಮರಾಠಿ ಆಡುಭಾಷೆ ಮಾತನಾಡುತ್ತಾರೆ. ವಿಭಿನ್ನ ನಂಬಿಕೆ ಮತ್ತು ಆಹಾರ ನಿಷೇಧಗಳಿಂದಾಗಿ ಇವರು ಮಾಂಸಾಹಾರಿಗಳಾಗಿದ್ದಾರೆ.

ಪಿತೃಪ್ರಧಾನ ಅವಿಭಕ್ತ (Patriarchal Joint family) ಮತ್ತು ವಿಸ್ತರಿತ ಕುಟುಂಬ (Extend Family) ಗಳು ಮರಾಟಿ ನಾಯ್ಕರಲ್ಲಿ ಕಾಣುವ ಮುಖ್ಯ ಕುಟುಂಬದ ಪ್ರಕಾರಗಳು. ಇಂದು ಸಣ್ಣ ಅಣು ಕುಟುಂಬಗಳಾಗಿ (Nuclear Family) ಬದಲಾವಣೆಗೊಳ್ಳುತ್ತಿದೆ. ಇವರಲ್ಲಿ ಇಂದಿಗೂ ಅನೇಕ ಪ್ರಾಚೀನ ಹೆಸರುಗಳನ್ನು ಕಾಣಬಹುದು. ಗಂಡಸರಲ್ಲಿ ನಾಯ್ಕ ಹಾಗೂ ಹೆಂಗಸರಲ್ಲಿ 'ಬಾಯಿ' ಎಂಬ ನಾಮಪದದಿಂದ ಕೂಡಿಕೊಂಡಿರುತ್ತದೆ. ಇವರಲ್ಲಿ ಹಲವಾರು 'ಬಳಿ' ಕುಲಗಳಿದ್ದು, ವಿವಾಹವು ಬಳಿಯ ಹೊರಗೆ ನಡೆಯುತ್ತದೆ. ಮರಾಟಿ ನಾಯ್ಕರಲ್ಲಿ ೯೬ ಬಳಿಗಳಿವೆ ಎಂಬ ನಂಬಿಕೆಯಿದೆ. ಎಲ್ಲಾ ಬುಡಕಟ್ಟು ಸಮುದಾಯಗಳಲ್ಲಿ ಇರುವಂತೆ ಕುಲ ಲಾಂಛನದ (Totemism) ಲಕ್ಷಣಗಳು ಕಂಡು ಬರುತ್ತವೆ.

ಮರಾಟಿ ನಾಯ್ಕರ ವಿವಾಹ ಪದ್ಧತಿ ಪ್ರಸ್ತುತ ಹಿಂದೂ ಸಂಪ್ರದಾಯ ರೀತಿಯಲ್ಲೇ ನಡೆಯುತ್ತಿದೆ. ಇವರಲ್ಲಿ ಅನೇಕ ಪ್ರಾಚೀನ ಬುಡಕಟ್ಟು ಸಂಸ್ಕಾರಗಳು, ವಿಧಿ ವಿಧಾನಗಳು, ರೂಢಿಗಳು, ಸಂಪ್ರದಾಯ ನಂಬಿಕೆಗಳನ್ನು ಕಾಣಬಹುದು. 'ತೆರ' ಎಂದು ಕರೆಯುವ ವಧುದಕ್ಷಿಣೆ ಪದ್ಧತಿಯನ್ನು ಇವರು ಅನುಸರಿಸುತ್ತಾರೆ. ಇತರೆ ಹಿಂದೂ ಸಮುದಾಯಗಳ ಹಾಗೂ ನೆರೆ ಹೊರೆಯವರ ಪ್ರಭಾವಗಳಿಂದ ವರದಕ್ಷಿಣೆ ಪದ್ಧತಿಯನ್ನು ಇವರಲ್ಲಿ ಕಾಣಬಹುದು. ಪಿತೃ ಆರಾಧನೆ, ಭೂತಾರಾಧನೆ, ಸರ್ವಚೇತನವಾದ, ಆಲೌಕಿಕ ಶಕ್ತಿ ಆರಾಧನೆ, ಕುಲದೇವತಾ ಆರಾಧನೆ ಇತ್ಯಾದಿಗಳು ಮರಾಟಿ ನಾಯ್ಕರ ಧರ್ಮದ ಮುಖ್ಯ ಗುಣಲಕ್ಷಣಗಳಾಗಿವೆ.

ಮರಾಟಿ ನಾಯ್ಕ ಸಮುದಾಯ ಅನೇಕ ವರ್ಷಗಳ ಕಾಲ ಕುಮೇರಿ ಬೇಸಾಯ (Shifting ultiration) ಮಾಡುತ್ತಾ ಕಾಡಿನಿಂದ ಕಾಡಿಗೆ ತಮ್ಮ ವಸತಿಯನ್ನು ಬದಲಾಯಿಸುತ್ತಿದ್ದರು. ಇದು ಇವರ ಅಲೆಮಾರಿ ಬುಡಕಟ್ಟು ಲಕ್ಷಣವನ್ನು ಸೂಚಿಸುತ್ತದೆ. ಹೀಗಾಗಿ ಮರಾಟಿಗರನ್ನು ಕುಂಬ್ರಿ ಮರಾಟಿಗರು ಎಂದು ಕರೆಯುವ ವಾಡಿಕೆ ಇದೆ. ಸಾಮಾನ್ಯವಾಗಿ ಪುರುಷರು ಬೇಟೆ, ಅಕ್ಕಿ ಮುಡಿ ಕಟ್ಟುವುದು, ಬಾವಿ ತೋಡುವುದು, ಮರ ಕಡಿಯುವುದು, ಕಂಬಳದ ಕೋಣಗಳನ್ನು ಸಾಕುವುದು, ತರಕಾರಿ ಹಾಗು ಕೃಷಿ ನಿರ್ವಹಿಸುತ್ತಾರೆ. ಕಾಡಿನಿಂದ ಜೇನು ಸಂಗ್ರಹಿಸಲು ಮತ್ತು ಮಹಿಳೆಯರು ಚಾಪೆ ತಯಾರಿಸಲು ತಮ್ಮದೇ ಆದ ದೇಶಿ ಜ್ಞಾನ ಮತ್ತು ನೈಪುಣ್ಯತೆಗಳನ್ನು ಅನುಸರಿಸುತ್ತಾರೆ.

ಕರ್ನಾಟಕ ರಾಜ್ಯದಲ್ಲಿ ೧೯೬೧ರಂದು ಭೂಸುಧಾರಣಾ ಕಾಯ್ದೆಯಿಂದಾಗಿ ಗೇಣಿ ಪದ್ಧತಿಯನ್ನು ಅನುಸರಿಸಿಕೊಂಡು ಹೋಗುತ್ತಿದ್ದ ಅನೇಕ ಮರಾಟಿ ನಾಯ್ಕ ಕುಟುಂಬಗಳಿಗೆ ತಮ್ಮ ಮಾಲೀಕರಿಂದ ಭೂಮಿ ಪಡೆಯಲು ಅನುಕೂಲವಾಯಿತು. ಆದರೆ ಕೆಲವು ಕುಟುಂಬಗಳಿಗೆ ಅತೀ ಕಡಿಮೆ ಭೂಮಿ

ಲಭಿಸಿತು. ಇನ್ನು ಕೆಲವು ಕಡೆ ಭೂಮಿ ಸಿಗದೆ ವಿವಾದಗಳು ನಡೆದ ಮತ್ತು ನಡೆಯುತ್ತಿರುವ ಕುರಿತು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಗಮನಿಸಲಾಗಿದೆ. ಅಲ್ಲದೆ ಇವರಲ್ಲಿರುವ ಬಡತನ ಅನಕ್ಷರತೆ, ಅಜ್ಞಾನದಿಂದಾಗಿ ಇನ್ನೂ ಅನೇಕ ಕುಟುಂಬಗಳಿಗೆ ಭೂಸುಧಾರಣ ಯೋಜನೆಯಲ್ಲಿ ಭೂಮಿ ಪಡೆಯಲು ಸಾಧ್ಯವಾಗಲಿಲ್ಲ. ತಮ್ಮ ಭೂಮಾಲಕರೊಂದಿಗೆ ಹೋರಾಟ ಮಾಡಲು ವಿಫಲರಾಗಿ ಇದರ ಪರಿಣಾಮದಿಂದ ಬೇರೆಡೆ ಹೋಗಿ ಗುಡ್ಡ ಬೆಟ್ಟ ಪ್ರದೇಶದಲ್ಲಿ ನೆಲೆಸಬೇಕಾಯಿತು.

ಒಟ್ಟಿನಲ್ಲಿ ಇವರು ಶ್ರಮದಿಂದ ಬದುಕುವ ರಾಜ್ಯದ ಒಂದು ದುರ್ಬಲ ವರ್ಗದ ಸಮುದಾಯವೆಂದು ಪರಿಗಣಿಸಬಹುದು. ಈಗಾಗಲೇ ವಿವರಿಸಿದಂತೆ ಇವರು ಆರ್ಥಿಕವಾಗಿ, ಶೈಕ್ಷಣಿಕವಾಗಿ ತೀರಾ ಹಿಂದುಳಿದಿದ್ದಾರೆ. ಸಾಮಾಜಿಕವಾಗಿ ಕೆಳಮಟ್ಟದಲ್ಲಿದ್ದು ಹಾಗೂ ರಾಜಕೀಯವಾಗಿ ಅಸಂಘಟಿತರಾಗಿದ್ದಾರೆ.

ಕೋಷ್ಟಕ: ೨.೨

ಉಡುಪಿ ಜಿಲ್ಲೆಯ ಮರಾಟಿ ನಾಯ್ಕ ಸಮುದಾಯದವರು ವಾಸಿಸುತ್ತಿರುವ ನೆಲೆಗಳು

ಕೂಡ್ಲಿ, ಬಾರಕೂರು	ಹೆಬ್ಬಾರಬೆಟ್ಟು, ನಂಚಾರು, ಮುದ್ದೂರು
ಬಂಡೀಮಠ, ಬಾರಕೂರ	ಮಡಿ, ಚೇರ್ಕಾಡಿ
ಮಸ್ಕಿಬೈಲು, ಬಾರಕೂರು	ಹಲಗೆಗುಂಡಿ, ಬಾಯರ್‌ಬೆಟ್ಟು, ಚೇರ್ಕಾಡಿ
ಹೊನ್ನೆಕುಂಬ್ರಿ ಮಂದಾರ್ತಿ	ಕನ್ನಾರು, ಚೇರ್ಕಾಡಿ
ಹೇರಾಡಿ, ಬಾರಕೂರು	ಮೂರೂರು ದರ್ಕಾಸು ಕನ್ನಾರು, ಚೇರ್ಕಾಡಿ
ಆರೂರು, ತೆಂಕಬೆಟ್ಟು, ಬ್ರಹ್ಮಾವರ	ಕನ್ನಾರು ಕೋಡಿ, ಚೇರ್ಕಾಡಿ
ಬಲ್ಜಿ, ಮಟಪಾಡಿ, ಬ್ರಹ್ಮಾವರ	ಬಚ್ಚಪ್ಪು, ಹೆಬ್ರಿ
ಕೆಳಕುಂಜಾಲು, ನೀಲಾವರ, ಬ್ರಹ್ಮಾವರ	ಬಂಗಾರಗುಡ್ಡೆ, ಹೆಬ್ರಿ
ಕೆಳಅಡ್ಪು, ಆರೂರು, ಬ್ರಹ್ಮಾವರ	ಮೊಣ್ಗೆಕಟ್ಟೆ, ಮಲೆಬೆಟ್ಟು, ಶಿವಪುರ
ಚಾಂತಾರು, ಮೂಡುಬೆಟ್ಟು, ಬ್ರಹ್ಮಾವರ	ಹುತ್ರುಬೈಲು, ಕುಚ್ಚೂರು, ಹೆಬ್ರಿ
ನೀಲಾವರಗುಡ್ಡೆ, ಬ್ರಹ್ಮಾವರ	೩೮ನೇ ಕಳ್ತೂರು ಮೂಲ್ಕಿ, ಸಂತೆಕಟ್ಟೆ
ದೇವುಬೈಲು, ಚಾಂತಾರು, ಬ್ರಹ್ಮಾವರ	ಹೆಬ್ರಿ
ದ್ಯಾಂಗಾಲು ಅಮುಜಿ, ಕೆಂಜೂರು	ಹೆಬ್ಬಾರ್‌ಬೆಟ್ಟು, ನಂಚಾರು
ಅಮುಜಿ, ಕೆಂಜೂರು, ಕೊಕ್ಕರ್ಣೆ, ಬ್ರಹ್ಮಾವರ	ಕಲ್ಲಾಡಿ, ಕುಚ್ಚೂರು, ಹೆಬ್ರಿ
ಕರ್ಜೆ ದರ್ಕಾಸ್ತು, ಬ್ರಹ್ಮಾವರ	ಹಣೆಗೋಡು, ಬೇಳಂಜೆ, ಹೆಬ್ರಿ
ಅರೆಕಲ್ಲುಮನೆ, ಕರ್ಜೆ, ಬ್ರಹ್ಮಾವರ	ಮಾತಲ್‌ಜೆಡ್ಡು, ಹೆಬ್ರಿ
ಹಲುವಳ್ಳಿ, ಬ್ರಹ್ಮಾವರ	ಹಾನಾಡಿ ಬೇಳಂಜೆ ಹಾಡಿಮೆನ, ಹೆಬ್ರಿ
ಆಲಡ್ಕ, ಹಲುವಳ್ಳಿ, ಬ್ರಹ್ಮಾವರ	ಹೊನ್ನೆಕಟ್ಟೆ, ಶಿವಪುರ, ಹೆಬ್ರಿ
ಸಾಸ್ತಾವು, ಕೊಕ್ಕರ್ಣೆ	ಕಾಚಿಲ, ಶಿವಪುರ, ಹೆಬ್ರಿ

ಬೆನಗಲ್ ಸಾಸ್ತಾವು, ಕೊಕ್ಕರ್ಣೆ	ಕುಯಿಲಾಡಿ, ಬೊಮ್ಮರಬೆಟ್ಟು, ಹಿರಿಯಡಕ
ಪಡುಕೊಟಂಬೈಲು, ಕೊಕ್ಕರ್ಣೆ	ಕನರಾಡಿ ಮನೆ, ಮಣಿಪುರ, ಮರ್ಣೆ, ಉಡುಪಿ
ಹೆನ್ನಿ, ಕೊಕ್ಕರ್ಣೆ	ಕೊಡಂಗಳ, ಮರ್ಣೆ, ಉಡುಪಿ
ಮೈರ್‌ಮಡಿ, ಕರ್ಜೆ, ಬ್ರಹ್ಮಾವರ	ದೇವಡಗುಂಡ, ಕುದಿ, ಹಿರಿಯಡಕ
ಕಡಂಗೋಡು, ಕರ್ಜೆ	ಮುಕುಡೆ ಕೊಡಂಗಳ, ಮರ್ಣೆ, ಉಡುಪಿ
ಶಿವಗೋಣ್, ಪಾರ್ತಿಬೆಟ್ಟು, ಚೇರ್ಕಾಡಿ	ಕೊಂಡಾಡಿ ಬೊಮ್ಮರಬೆಟ್ಟು, ಹಿರಿಯಡಕ
ಪರುಬೆಟ್ಟು, ಹುತ್ತಿ, ಚೆರ್ಕಾಡಿ	ಸಾಣೆಕ್ಲು, ಹಿರಿಯಡಕ
ವಡ್ಗ, ಚೇರ್ಕಾಡಿ	ಕುದಿ, ಹಿರಿಯಡಕ
ಚೇರ್ಕಾಡಿ, ಬ್ರಹ್ಮಾವರ	ಪಡು ಆತ್ರಾಡಿ, ಆತ್ರಾಡಿ, ಉಡುಪಿ
ಮುಂಡ್ಕಿನ ಜೆಡ್ಡು, ಚೇರ್ಕಾಡಿ	ಭಟ್ರಕೋಡಿ, ಹಿರೇಬೆಟ್ಟು, ಉಡುಪಿ
ನಿಡೂರ್ ಬೈಲ್, ಚೇರ್ಕಾಡಿ	ಕಂಬಳಿಬೆಟ್ಟು, ಹಾವಂಜೆ, ಉಡುಪಿ
ಬಾಯರ್ ಬೆಟ್ಟು, ಚೇರ್ಕಾಡಿ	೮೨ ಕುದಿ, ಕೊಂಡಾಡಿ ಮಿತ್ತೆಟ್ಟು, ಉಡುಪಿ
ಶಿರೂರು, ಮುದ್ದುಮನೆ	ಅಂಜಾರು, ಬಾಳೆತೋಟ, ಹಿರಿಯಡಕ
ಕಬ್ಯಾಡಿ, ೮೦ನೇ ಬಡಗುಬೆಟ್ಟು, ಪರ್ಕಳ, ಉಡುಪಿ	ಸರಳೆಬೆಟ್ಟು, ಪರ್ಕಳ, ಉಡುಪಿ
ಬಸ್ತಿಮಜಲು, ಹಿರಿಯಡಕ	ಸರಳೆಬೆಟ್ಟು, ಸುವರ್ಣನದಿ, ಹೆರ್ಗ, ಉಡುಪಿ
ಕಂಚಿನಬೈಲು, ಹಿರೇಬೆಟ್ಟು, ಉಡುಪಿ	ಮಾಣಿಬೆಟ್ಟು, ಪರ್ಕಳ, ಉಡುಪಿ
ಕೊಜಪಾಡಿ, ಮರ್ಣೆ, ಉಡುಪಿ	ಬೆಳ್ವಾಡಿ, ಪೆರ್ಡೂರು, ಉಡುಪಿ
ನೂಜಿ, ಹಿರೇಬೆಟ್ಟು, ಪರ್ಕಳ, ಉಡುಪಿ	ಕೆಳಪರ್ಕಳ, ಪರ್ಕಳ, ಉಡುಪಿ
ಕುಕ್ಕಿಕಟ್ಟೆ, ಪೆರ್ಣಂಕಿಲ, ಹಿರಿಯಡಕ	ಮಲ್ಪೆ ರಸ್ತೆ, ಪುತ್ತೂರು, ಸಂತೆಕಟ್ಟೆ, ಉಡುಪಿ
ಹಿರಿಯಡಕ	ಅರ್ಬಿ ೮೦ ಬಡಗಬೆಟ್ಟು, ಪರ್ಕಳ, ಉಡುಪಿ
ಕುಕ್ಕೆಹಳ್ಳಿ, ಹಾವಂಜೆ, ಉಡುಪಿ	ತಾಂಗೋಡೆ ೮೦ ಬಡಗಬೆಟ್ಟು, ಪರ್ಕಳ, ಉಡುಪಿ
ಹತ್ರಬೈಲು, ಪೆರ್ಡೂರು	ಜಾಕಿಬೆಟ್ಟು, ಕರಂಬಳ್ಳಿ, ಕುಂಜಿಬೆಟ್ಟು, ಉಡುಪಿ
ನಾಲ್ಕೋಡಿ ಕ್ರ್ಯೊತ್ಯಾರು, ಪೆರ್ಡೂರು	ಕಬ್ಯಾಡಿ, ಪರ್ಕಳ, ಉಡುಪಿ
ಮಟ್ಟಿಬೈಲು, ಪೆರ್ಡೂರು	ಇಂದ್ರಾಳಿ, ಕುಂಜಿಬೆಟ್ಟು, ಉಡುಪಿ
ಕಲ್ಲಮಜಲ್ ಮನೆ, ಪೆಲತ್ತೂರು, ಕಾರ್ಕಳ	ಗುಳ್ಮೆ, ಇಂದ್ರಾಳಿ, ಕುಂಜಿಬೆಟ್ಟು, ಉಡುಪಿ
ಮುಟ್ಲುಪಾಡಿ, ಮುನಿಯಾಲು	ನಯಂಪಳ್ಳಿ, ಸಂತೆಕಟ್ಟೆ, ಉಡುಪಿ
ಮೊಟುಜಡ್ಡು, ಮುನಿಯಾಲು	ಪಣಿಯಾಡಿ, ಕುಂಜಿಬೆಟ್ಟು, ಉಡುಪಿ

ಕಾಡುಹೊಳೆ, ಮುನಿಯಾಲು	ಕೆಳಕಬ್ಯಾಡಿ, ಪರ್ಕಳ, ಉಡುಪಿ
ಮೈರ್‌ಗುಳಿ, ಕಡ್ತಲ, ಕಾರ್ಕಳ	ಮೂಡುಬೈಲೂರು, ಬೈಲೂರು, ಉಡುಪಿ
ಎಳ್ಳಾರೆ, ಕಾರ್ಕಳ	ಕಲ್ಲಕುಮೇರಿ, ಮೂಡು ಅಲೆವೂರು, ಉಡುಪಿ
ಕುಳ್ಳುಂಜೆ, ಶಂಕರನಾರಾಯಣ	ಕಕ್ಕುಂಜೆ, ಪೆರಂಪಳ್ಳಿ, ಉಡುಪಿ
ನರಿಕೊಡ್ಲು, ಶಂಕರನಾರಾಯಣ	ಮುಗ್ಗೇರಿ ಕುಕ್ಕೇಹಳ್ಳಿ, ದುಗ್ಗಣ್ಣಬೆಟ್ಟು, ಬೆಳ್ಳಂಪಳ್ಳಿ ಉಡುಪಿ
ಕಟ್ಟೆಮಕ್ಕಿ, ಶಂಕರನಾರಾಯಣ	ಪರಾರಿ ಕೊಳಲಗಿರಿ, ಉಡುಪಿ
ಕುಪ್ಪಾರು, ಶಂಕರನಾರಾಯಣ	ಹಾವಂಜೆ, ಉಡುಪಿ
ಸೋಣೆ, ಶಂಕರನಾರಾಯಣ	ಮುಕುಡ, ಕೊಡಂಗಳ ಅಲೆವೂರು, ಉಡುಪಿ
ಪಡುಹೆಮ್ಮಣ್ಣು, ಅಮಾವಾಸೆಬೈಲು	ಕೋಡಿ, ಅಲೆವೂರು, ಉಡುಪಿ
ಕನ್ನಾಲಿ, ಮೂಡುಬಗೆ, ಅಂಪಾರು	ಅಲೆವೂರು, ಉಡುಪಿ
ಕೊಡ್ಲಾಡಿ, ಮಾರ್ಡಿ	ಗುರ್ಜೆಬೆಟ್ಟು, ಅಲೆವೂರು, ಉಡುಪಿ
ಜಡ್ಡಿನಗದ್ದೆ, ಜಂಬ್ಯಾಡಿ, ಅಮಾವಾಸೆಬೈಲು	ಮಾರ್ಪಳ್ಳಿ, ಕುಕ್ಕಿಬೆಟ್ಟು, ಉಡುಪಿ
ಕೆಳಸುಂಕ, ನೂಜಿ, ಅಮಾವಾಸೆಬೈಲು	ಹೊನ್ನೆಕೋಡಿ, ಅಲೆವೂರು, ಉಡುಪಿ
ಶ್ಯಾಮಿಹಕ್ಲು, ಅಮಾವಾಸೆಬೈಲು	ಕಲ್ಲಟ್ಟ, ಶಿರ್ವ, ಉಡುಪಿ
ಬೊಬ್ಬರ್ಯಜೆಡ್ಡು, ಅಮಾವಾಸೆಬೈಲು	ಪಾಲುಮನೆ, ಸೂಡಾ, ಕಾರ್ಕಳ
ಕೊಟ್ಟಾಕಿ, ನಡಂಬೂರು ರಟ್ಟಾಡಿ,	
ಅಮಾವಾಸೆಬೈಲು	
ಮಂದುಪಾಲು, ಮರೂರು ಬೆಳ್ವೆ	
ನೆಲ್ಲಿಕಟ್ಟೆ ವಯಾ ಅಂಪಾರು	
ದೊಟ್ಟಿನಬೇರು, ಸಿದ್ಧಾಪುರ, ಹೊಸಂಗಡಿ	
ತಟ್ಟುವಟ್ಟು, ಹಾಲಾಡಿ	
ಮೂಡುಸಗ್ರಿ, ಕುಂಜಿಬೆಟ್ಟು, ಉಡುಪಿ	
ಮಂಚಿ, ಕುಂಜಿಬೆಟ್ಟು, ಉಡುಪಿ	

ಕುಣಬಿ

"ಕುಣಬಿ ಸಮುದಾಯದವರು ಮಹಾರಾಷ್ಟ್ರಕ್ಕೆ ಹೊರಗಿನಿಂದ ಹೋರಾಟ ಮಾಡಲು ಕರೆತಂದ ಸೇವಕರು. ಅಂದರೆ ಮೂಲತಃ ಅವರು ಮಹಾರಾಷ್ಟ್ರದವರಲ್ಲ ಎಂದು ತಿಳಿಯುತ್ತದೆ. ಕುಣಬಿಯರು ಸೈನಿಕ ವೃತ್ತಿಯನ್ನು ಅವಲಂಬಿಸಿದ್ದರು. ಆ ವೃತ್ತಿಯು ಅವರ ಹಕ್ಕು ಮತ್ತು ಹೆಮ್ಮೆಯ ವಿಷಯವಾಗಿತ್ತು. ಇವರು ತಮ್ಮ ಸೇವೆಗಾಗಿ ವತನ್ ಮತ್ತು ಇನಾಮ್‌ಗಳನ್ನು ಪಡೆಯುತ್ತಿದ್ದರೆನ್ನಲಾಗಿದೆ. ಕರಾವಳಿ

ಕರ್ನಾಟಕದಲ್ಲಿ ನೆಲೆಸಿರುವ ಮರಾಟಿಗರನ್ನು ಮೂಲತಃ ಕುಣಬಿ ಜನಾಂಗವೆಂದು ಗುರುತಿಸಲಾಗಿದೆ. ಸೈನಿಕ ವೃತ್ತಿಯ ಜನಾಂಗದ ಆದರ್ಶ, ತತ್ವಗಳಾಗಿದ್ದು ಇವರು ಮೊಗಲ್ ಸಾಮ್ರಾಜ್ಯದ ರಕ್ಷಣೆಗಾಗಿ ಹೋರಾಡಿದ್ದರು"[೨೩]ಎಂದು ಅಭಿಪ್ರಾಯ ಪಡುತ್ತಾರೆ.

ಕುಣುಬಿಯವರು ಪ್ರಮುಖವಾಗಿ ಉತ್ತರ ಕನ್ನಡ ಜಿಲ್ಲೆಯ ಕಾರವಾರ, ಹೊನ್ನಾವರ, ಅಂಕೋಲ, ಯಲ್ಲಾಪುರ, ಜೊಯಿಡಾ ತಾಲೂಕುಗಳಲ್ಲಿ ಸಾಂದ್ರವಾಗಿ ಕಾಣಿಸಿಕೊಳ್ಳುತ್ತಾರೆ. ಇವರು ಕೃಷಿಕರು. ಈ ಸಮುದಾಯದವರನ್ನು ದೇಶದ ಬೇರೆ ಬೇರೆ ರಾಜ್ಯಗಳಲ್ಲಿ ವಿವಿಧ ಹೆಸರುಗಳಿಂದ ಕರೆಯುತ್ತಾರೆ. ಕೇರಳ ರಾಜ್ಯದಲ್ಲಿ ಕುಡುಂಬಿ, ಮಧ್ಯಪ್ರದೇಶದಲ್ಲಿ ಕುಬಂಬಿ, ಕುರ್ಮಿ, ಆಹಿರ್, ಮಹಾರಾಷ್ಟ್ರದಲ್ಲಿ ಕುಣುಬಿ, ಮರಾಠ ಕುಣುಬಿ, ಅಹಿರ್, ಒರಿಸ್ಸಾದಲ್ಲಿ ಕುಡುಂಬಿ, ಕುಲ್ಮಿ, ಕುರ್ಮಿ, ತಮಿಳುನಾಡಿನಲ್ಲಿ ಕುರುಂಬಾ, ಕುಡುಂಬೋ, ಗುಜರಾತ್‌ದಲ್ಲಿ ಲೇವಾ ಕುಣುಬಿ, ಪಟಿದಾರ, ಅಹಿರ್ ಮತ್ತು ಗೋವಾದಲ್ಲಿ ಕುಣುಬಿ ಎಂದು ಕರೆಯಿಸಿಕೊಳ್ಳುವರು.

ಸುಮಾರು ೪೦೦ ವರ್ಷಗಳ ಹಿಂದೆ ಕುಣುಬಿಯವರು ಗೋವೆಯಿಂದ ವಲಸೆ ಬಂದವರು. ಕುಣುಬಿಗಳಂತೆಯೇ ಮರಾಠಿ, ಮರಾಟಿ ನಾಯ್ಕ, ರಾಮಕ್ಷತ್ರಿಯ, ಗೌಡ ಸಾರಸ್ವರ ಬ್ರಾಹ್ಮಣ, ರೋಮನ್ ಕೆಥೋಲಿಕ್, ಮರಾಟಿ, ಕುಡುಬಿ ಮುಂತಾದ ಸಮುದಾಯಗಳು ವಿವಿಧ ಕಾರಣಗಳಿಂದಾಗಿ ಗೋವಾ ಹಾಗೂ ಅದರ ಅಕ್ಕಪಕ್ಕದ ಪ್ರದೇಶಗಳಿಂದ ೧೫ ಹಾಗೂ ೧೬ನೇ ಶತಮಾನದ ನಡುವೆ ಕರಾವಳಿ ಕರ್ನಾಟಕಕ್ಕೆ ವಲಸೆ ಬಂದವರು.

ಜೆರೋಮ್ ಸಾಲ್ಡಾನಾ ಅವರು ಅಭಿಪ್ರಾಯ "ಸುಮಾರು ೧೬ನೇ ಶತಮಾನದಲ್ಲಿ ಬ್ರಾಹ್ಮಣರು ಮತ್ತು ಇತರ ಹಿಂದೂ ಸಮುದಾಯದವರು ಬಹುಸಂಖ್ಯೆಯಲ್ಲಿ ಗೋವೆಯನ್ನು ತ್ಯಜಿಸಿ ಕೆನರಾದಲ್ಲಿ ನೆಲೆ ನಿಂತರು" ಎಂದು ಅಭಿಪ್ರಾಯ ಪಡುವರು.

'ಆ್ಯಟೋನಿಯೋ ಮಸ್ಕರೇನಸ್‌ರವರು ಹೇಳುವಂತೆ ಕುಣುಬಿಯವರು ಮುಂಡಾ ಆಸ್ಟ್ರಾಡ್ ಕುಲಕ್ಕೆ ಸೇರಿದ ಜನಾಂಗದವರಾಗಿರುವರು. ಸ್ಟೀಪನ್ ಫುಕ್ಸ್‌ರವರ ಪ್ರಕಾರ ಕುಣುಬಿಗಳು ಆಹಾರ ಸಂಗ್ರಹಿಸುವ ಮತ್ತು ಭೇಟೆಯಾಡುವ ದಕ್ಷಿಣ ಭಾರತದ ಒಂದು ಬುಡಕಟ್ಟು ಸಮುದಾಯವಾಗಿದೆ ಎಂದು ತಿಳಿಸಿರುವರು.

ಕರಾವಳಿ ಕರ್ನಾಟಕದಲ್ಲಿ ಕುಣುಬಿಯವರು ಗೋವಾ ಮೂಲದ ಬುಡಕಟ್ಟಿನವರು. ಇವರು ಸುಮಾರು ೧೫೦೪ ರಿಂದ ೧೫೮೯ರ ಸಮಯದಲ್ಲಿ ಪೋರ್ಚುಗೀಸರ ಅಲ್ಬುಕರ್ಕನಿಂದ ದಬ್ಬಾಳಿಕೆ, ಬಲತ್ಕಾರದ ಮತಾಂತರಕ್ಕೊಳಬೇಕಾದ ಗಂಡಾಂತರ ಬಂತು. ಇದನ್ನು ಪ್ರತಿಭಟಿಸಿ ಅಲ್ಲಿಂದ ತಪ್ಪಿಸಿಕೊಂಡು ಕರಾವಳಿ ಜಿಲ್ಲೆಯಾದ ಉತ್ತರ ಕನ್ನಡ, ಉಡುಪಿ ಹಾಗೂ ದಕ್ಷಿಣ ಕನ್ನಡ ಜಿಲ್ಲೆಗಳಿಗೆ ವಲಸೆ ಬಂದಿದ್ದಾರೆ.

ಕುಡುಬಿ

ಕುಡುಬಿಯವರು ಗೋವಾ ರಾಜ್ಯದ ಮೂಲ ನಿವಾಸಿಗಳ ಗುಂಪಿಗೆ ಸೇರಿದರು. ಸುಮಾರು ನಾಲ್ಕು ಶತಮಾನಗಳ ಹಿಂದೆ ಕರಾವಳಿ ಜಿಲ್ಲೆಯಾದ ಉತ್ತರ ಕನ್ನಡಕ್ಕೆ ವಲಸೆ ಬಂದು ನೆಲೆನಿಂತವರು. ಕುಡುಬಿಯರು ಊರಿನಿಂದ ದೂರವಿದ್ದು, ಪರ್ವತ, ಕಾಡಿನ ಮಧ್ಯೆ ಅಥವಾ ಬೆಟ್ಟ, ಪರ್ವತ, ಕಾಡಿನಂಚಿನಲ್ಲಿ ಕಂಡುಬರುತ್ತಾರೆ. ಕುಂದಾಪುರ ತಾಲೂಕಿನ ಹಾಲಾಡಿ ಹೊಳೆಯಿಂದ ದಕ್ಷಿಣಕ್ಕೆ

ವಾಸವಿರುವ ಉಡುಪಿ ತಾಲೂಕನ್ನು ಒಳಗೊಂಡು ಕುಡುಬಿಯವರನ್ನು 'ಗೋವೆ ಕುಡುಬಿ'ಯವರೆಂದು ಕರೆಯುತ್ತಾರೆ. ಕುಂದಾಪುರ ತಾಲೂಕಿನ ಹಾಲಾಡಿ, ಹಾರ್ದಳ್ಳಿ, ಹೇರೂರು, ಗೋಳಿಯಂಗಡಿ, ಹೊಸಂಗಡಿ, ವಂಡಾರು, ಅಂಪಾರು, ಹೊಸಂಗಡಿ, ಕಮಲಶಿಲೆ, ಬೆಳ್ವೆ ಮುಂತಾದ ಗ್ರಾಮಗಳಲ್ಲಿ ಕಂಡುಬರುವ ಇವರನ್ನು ಹೆಚ್ಚಾಗಿ 'ಗೋವೆ ಕುಡುಬಿ'ಯವರೆಂದು ಕರೆಯುವರು. ಮಂಗಳೂರು ತಾಲೂಕಿನ ಬಜಪೆ, ಕೊಂಪದವು, ಮುಚ್ಚೂರು, ಎಡಪದವು, ಕುಪ್ಪಪದವು, ಗಂಜೀಮಠ, ಮೂಡಬಿದರೆ, ಬಂಟ್ವಾಳ ತಾಲೂಕಿನ ಕೆಲವೊಂದು ಗ್ರಾಮಗಳಾದ ರಾಯಿ, ಕ್ಶೈಲ, ಸಿದ್ಧಕಟ್ಟೆ, ಪ್ರದೇಶದಲ್ಲಿದ್ದವರನ್ನು 'ಕೊಡಿಯಾಲ ಕುಡುಬಿ' ಎಂದು ಕರೆಯುವರು.

ಕುಂದಾಪುರದ ಉತ್ತರಕ್ಕೆ ಕಾರ್ಕಳ ತಾಲೂಕಿನ ಮಿಯ್ಯಾರು, ಹೆಬ್ರಿ, ಸುರ್ಗೋಳಿ, ಶಿವಪುರ, ಕಬ್ಬಿನಾಲೆ, ಮುದ್ರಾಡಿ, ಮಡಾಮಕ್ಕಿ, ಮುದ್ರಾಡಿ ಪರಿಸರದ ಕುಡುಬಿಯವರನ್ನು 'ನಾಡ ಕುಡುಬಿ'ಯವರೆಂದು ಕರೆಯುತ್ತಾರೆ. ಕುಂದಾಪುರ ತಾಲೂಕಿನ ಸಿದ್ಧಾಪುರ, ಹೊಸಂಗಡಿ, ಹಲರಿಮಠದಲ್ಲಿ ವಾಸವಿರುವ ಕೆಲ ಕುಡುಬಿ ಕುಟುಂಬದವರನ್ನು 'ಜೋಗಿ ಕುಡುಬಿ'ಯವರೆಂದು ಕರೆಯುತ್ತಾರೆ. ಅಲ್ಲದೆ ಕುಂದಾಪುರ ತಾಲೂಕಿನ ಉತ್ತರಕ್ಕೆ ಬೈಂದೂರು, ಕೊಲ್ಲೂರು, ಅರೆಶಿರೂರು, ಮಾಸ್ತಿಕಟ್ಟೆ, ಮಾರ್ನಕಟ್ಟೆ ಪ್ರದೇಶದಲ್ಲಿರುವ ಕುಡುಬಿಯವರನ್ನು 'ಅರೆಕುಡುಬಿ'ಯವರೆಂದು ಕರೆಯುತ್ತಾರೆ.

ಕುಡುಬಿಯವರು ಇಂಡೋ-ಆರ್ಯನ್ ಭಾಷೆಗೆ ಸೇರಿದ ಕೊಂಕಣಿ ಭಾಷೆ ಮಾತನಾಡುತ್ತಾರೆ. ಈ ಸಮುದಾಯದವರಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ತುಳುವರ ಸಾಮಾಜಿಕ ಮತ್ತು ಸಾಂಸ್ಕೃತಿಕ ಪ್ರಭಾವ ಬೀರಿದ್ದರಿಂದ ಅವರು ಆಡುವ ಭಾಷೆಯಲ್ಲಿ ತುಳು ಹಾಗೂ ಕನ್ನಡದ ಶಬ್ದಗಳನ್ನು ಉಪಯೋಗಿಸುತ್ತಾರೆ. ಕುಡುಬಿ ಸಮುದಾಯದ ಪುರುಷರು ತಮ್ಮ ಹೆಸರಿನ ಮುಂದೆ 'ನಾಯ್ಕ' ಮತ್ತು 'ಗೌಡ' ಎಂಬ ಅಡ್ಡ ಹೆಸರನ್ನು ಹೊಂದಿರುತ್ತಾರೆ. ಹೆಂಗಸರು ಬಾಯಿ / ಬ್ಯಾ ಎಂಬ ಪದವನ್ನು ಸೇರಿಸಿಕೊಂಡಿರುತ್ತಾರೆ. ಇವರು ಹೆಚ್ಚಾಗಿ ಶ್ರಮಿಕ ವರ್ಗದವರಾದ್ದರಿಂದ ದುಡಿಮೆಗೆ ಅನುಕೂಲವಾದ ಬಟ್ಟೆಗಳನ್ನು ತೊಡುತ್ತಾರೆ. ಹಿರಿಯ ತಲೆಮಾರಿನ ಜನರು ಸಾಮಾನ್ಯವಾಗಿ ತಲೆಯ ಹಿಂದೆ ಜುಟ್ಟು ಬಿಡುತ್ತಾರೆ. ಅವರಲ್ಲಿ ಜುಟ್ಟು ಕತ್ತರಿಸಬಾರದು ಎಂಬ ನಂಬಿಕೆ ಮತ್ತು ನಿಯಮವಿದೆ. ಹಿಂದೆ ಜುಟ್ಟು ಕತ್ತರಿಸಿಕೊಂಡರೆ ಜಾತಿ ಪಂಚಾಯತಿ ನಡೆಸಿ ದಂಡ ವಿಧಿಸುತ್ತಿದ್ದರು. ಇಂದು ಯುವ ಜನಾಂಗ ಜುಟ್ಟನ್ನು ಕತ್ತರಿಸಿಕೊಳ್ಳುತ್ತಾರೆ. ಮಹಿಳೆಯರ ವಿಶಿಷ್ಟವಾದ ಉಡುಪುಗಳಿಂದ ಕುಡುಬಿಯವರೆಂದು ಗುರುತಿಸಬಹುದು. ಇವರು ಬಣ್ಣ ಬಣ್ಣದ ಸೀರೆಯನ್ನು ಎದೆಯ ಮಟ್ಟದವರೆಗೆ ಸುತ್ತಿ 'ಗೇಂಟಿ' ಹಾಕುತ್ತಾರೆ.

ಕುಡುಬಿ ಸಮುದಾಯದಲ್ಲಿ ವಂಶ ಗುರುತಿಸಲು ಬಳಿ, ಬರಿ (ತುಳುಪದ) ಪದಗಳನ್ನು ರೂಢಿಯಲ್ಲಿವೆ. ಡಾ. ಅಭಯ ಕುಮಾರ್ ಅವರು ಗೋವಾ ಕುಡುಬಿಯವರಲ್ಲಿ ೩೬ ಬಳಿಗಳಿವೆ ಎಂದು ಅಭಿಪ್ರಾಯಪಟ್ಟಿದ್ದಾರೆ. ಡಾ. ವೈ. ರವೀಂದ್ರನಾಥ ರಾವ್ ಅವರು ಕರಾವಳಿ ಕರ್ನಾಟಕದಲ್ಲಿ ವಾಸವಿರುವ ಕುಡುಬಿ ಬುಡಕಟ್ಟುಗಳಲ್ಲಿ ಸುಮಾರು ೧೨೨ ಬಳಿಗಳಿವೆ ಎಂಬುದಾಗಿ ತಿಳಿಸಿದ್ದಾರೆ. ಡಾ.ಎ.ವಿ. ನಾವಡರವರು ಕುಡುಬಿಯವರಲ್ಲಿ ೧೬ ಬಳಿಗಳನ್ನು ಗುರುತಿಸಿದ್ದಾರೆ. ನನ್ನ ಕ್ಷೇತ್ರಕಾರ್ಯ ಸಂದರ್ಭದಲ್ಲಿ ೨೦ ಬಳಿಗಳನ್ನು ಗುರುತಿಸಲಾಗಿದೆ. ಈ ಎಲ್ಲಾ ಬಳಿಗಳು ಪ್ರಾಣಿ ಪಕ್ಷಿಗಳು, ನಿರ್ಜೀವ ಮತ್ತು ಭೌತ ವಸ್ತುಗಳು, ಊರುಗಳಿಗೆ ಸಂಬಂಧಿಸಿದವುಗಳು. ಅಧಿಕಾರ, ಸಾಮರ್ಥ್ಯ, ಸಂಪತ್ತುಗಳಿಗೆ ಹೊಂದಿಕೊಂಡು ಬಂದಿರುವ ಬಳಿಗಳು ಹಾಗೂ 'ಕಾರ್' ಎಂಬ ಪ್ರತ್ಯಯಗಳಿಂದ ಅಂತ್ಯವಾಗುವ ಹೆಸರು ಹಾಗೂ

ಕುಲಗಳು ಉದಾ: ಗುಗ್ಗುಲ್‌ಕಾರ್, ಕುತ್ಕಾರ್, ಪತ್ಕಾರ್, ನಾಯ್ಕರ್, ವಾಘನಕಾರ್, ದುಕ್ಕಾರ್, ಮೊಕ್ಕರ್, ಡೇವಿಡ್ಕರ್, ಜಟ್ಕರ್, ಶಿವಗಣ್, ಕೊಚ್ಚಿಕಾರ್ ಇತ್ಯಾದಿ. 'ಕರ್' ಎಂಬ ಪ್ರತ್ಯೇಯವನ್ನು ಬಳಸಿದರೆ ಅಲ್ಲಿ ವಾಸವಿದ್ದವರು ಎಂದು ಅರ್ಥೈಸಿಕೊಳ್ಳಲಾಗುತ್ತದೆ. 'ಧಾರವಾಡಕರ್' ಇದರಲ್ಲಿ 'ಕರ್' ಎಂದರೆ ಧಾರವಾಡದಲ್ಲಿ ಇದ್ದವರು ಎಂದು ತಿಳಿಯಬೇಕಾಗುತ್ತದೆ.

ಕುಡುಬಿಯವರು ಪಿತೃಪ್ರಧಾನ, ಕುಟುಂಬ ವ್ಯವಸ್ಥೆಯನ್ನು ಹೊಂದಿದವರು. ಅವಿಭಕ್ತ ಕುಟುಂಬ ಪದ್ಧತಿಯನ್ನು ಹೊಂದಿದ್ದು, ಹಿಂದೆ ಒಂದೊಂದು ಕುಟುಂಬದಲ್ಲಿ ೪೦ಕ್ಕಿಂತ ಹೆಚ್ಚು ಸದಸ್ಯರ ಸಂಖ್ಯೆ ಹೊಂದಿದ್ದರು ಎಂದು ಕುಡುಬಿ ಸಮುದಾಯದ ಹಿರಿಯರು ನೆನಪಿಸಿಕೊಳ್ಳುತ್ತಿದ್ದಾರೆ. ಅವಿಭಕ್ತ ಕುಟುಂಬ ಪದ್ಧತಿಯನ್ನು ಅನುಸರಿಸುವ ಇವರು ಒತ್ತು ಘರ್ (ಕುಟುಂಬ) ಒಲಘರ್ (ದೊಡ್ಡ ಕುಟುಂಬ) ಅಥವಾ ಸಗಾಲೆ ಕುಟುಂಬ (ಒಂದೇ ಸಂತತಿಗೆ ಸೇರಿದವರು) ಎಂದು ಕರೆಯುತ್ತಾರೆ. ಮನೆಯ ಹಿರಿಯ ವ್ಯಕ್ತಿಯೇ ಇಡೀ ಕುಟುಂಬದ ಸಾಮಾಜಿಕ, ಆರ್ಥಿಕ ಹಾಗೂ ಸಾಂಸ್ಕೃತಿಕ ಆಚರಣೆಗಳನ್ನು ನಿಯಂತ್ರಿಸುವವ. ಅಲ್ಲದೇ ಯಾವುದೇ ಧಾರ್ಮಿಕ, ವಿವಾಹ, ಶುಭ ಹಾಗೂ ಅಶುಭಕಾರ್ಯಗಳು ಇವರ ಮುಂದಾಳತ್ವದಲ್ಲಿ ಜರಗುತ್ತವೆ. ಆಸ್ತಿಯ ಹಕ್ಕು ಸಾಮಾನ್ಯವಾಗಿ ಪಿತೃ ಪ್ರಧಾನವಾಗಿರುತ್ತದೆ. ತಂದೆಯ ನಂತರ ಮನೆಯ ಹಿರಿಯ ಗಂಡು ಮಗನಿಗೆ ಸೇರುತ್ತದೆ.

ಕುಡುಬಿಯರ ಆರ್ಥಿಕ ವ್ಯವಸ್ಥೆಯನ್ನು ಗಮನಿಸಿದಾಗ ಪ್ರಾಚೀನ ಕಾಲದಿಂದಲೇ ಆಹಾರ ಸಂಗ್ರಹಣೆ, ಬೇಟೆ, ಕುಮೇರಿ ಕೃಷಿಯಲ್ಲಿ ತೊಡಗಿಕೊಂಡವರು. ಇವರು ಆರ್ಥಿಕವಾಗಿ ಹಂತ ಹಂತವಾಗಿ ವಿಕಾಸಗೊಂಡವರು. ವಸಾಹತುಶಾಹಿ ಕಾಲ ಪೂರ್ವದಲ್ಲಿ ಭಾರತೀಯ ಅನೇಕ ಬುಡಕಟ್ಟುಗಳು ಒಂದಲ್ಲಿ ಒಂದು ರೀತಿಯಲ್ಲಿ ಆರ್ಥಿಕ ಸೌಲಭ್ಯದಿಂದ ವಂಚಿತರಾಗಿದ್ದಾರೆ. ಇತರೆ ಸಮುದಾಯದವರು ಭೂಮಿಯನ್ನು ಆಕ್ರಮಿಸಿಕೊಂಡು, ಅವರ ಭೂಮಿಯಲ್ಲಿಯೇ ಬುಡಕಟ್ಟುಗಳನ್ನು ಜೀತದಾಳುಗಳಾಗಿ ದುಡಿಸಿಕೊಳ್ಳುತ್ತಾ ಬಂದಿದ್ದಾರೆ. ಯಾವಾಗ ಇವರು ಗೋವಾದಿಂದ ವಲಸೆ ಬಂದ ಮೇಲೆ ಬದುಕಿನಲ್ಲಿ ಆರ್ಥಿಕ ಸ್ಥಿತ್ಯಂತರಕ್ಕೆ ಒಳಗಾದರು. ಕುಡುಬಿಯರು ಮೇಲ್ಜಾತಿಯ ಬ್ರಾಹ್ಮಣರ ಹಾಗೂ ಭೂಮಾಲಕರ ಮನೆಗಳಲ್ಲಿ, ತೋಟದಲ್ಲಿ ಕೆಲಸದಾಳುಗಳಾಗಿ ಸೇರಿಕೊಂಡರು. ನಂತರ ಕುಮೇರಿ ಕೃಷಿಯ ಅನುಭವವಿದ್ದರಿಂದ ತಾವು ವಾಸವಿರುವ ಕಾಡಿನಂಚಿನಲ್ಲಿಯೇ ಗುದ್ದಲಿ ಹಾಗೂ ಮರದಿಂದ ಮಾಡಿದ ಸಲಕರಣೆಗಳನ್ನು ಬಳಸಿಕೊಂಡು ಕುಮೇರಿ ಕೃಷಿ, ಕೈತೋಟ ಮಾಡಿ ಅನೇಕ ಬೆಳೆಗಳನ್ನು ಬೆಳೆದರು. ಇವರು ಇಂದು ತಮ್ಮ ಮೂಲ ವೃತ್ತಿಯಿಂದ ಸ್ಥಿತ್ಯಂತರಗೊಳ್ಳುತ್ತಿರುವುದ್ದನ್ನು ಕ್ಷೇತ್ರಕಾರ್ಯ ಸಂದರ್ಭದಲ್ಲಿ ಗಮನಿಸಿದ್ದೇನೆ.

ಇಂದು ಬಹುಸಂಖ್ಯಾತ ಕುಡುಬಿಯರು ಅನಕ್ಷರಸ್ಥರಾಗಿದ್ದು, ಶೈಕ್ಷಣಿಕವಾಗಿ ತೀರಾ ಹಿಂದುಳಿದವರಾಗಿದ್ದಾರೆ, ಇವರು ವಾಸಿಸುತ್ತಿರುವ ಪ್ರದೇಶಗಳು ದಟ್ಟ ಅರಣ್ಯದಲ್ಲಿವೆ. ಶಾಲೆಗಳು ತುಂಬಾ ದೂರದಲ್ಲಿವೆ. ಮಳೆಗಾಲದಲ್ಲಿ ಶಾಲೆಗಳು ನಡೆಯುವುದಿಲ್ಲ. ಇವರ ಮಕ್ಕಳ ಮಾತೃಭಾಷೆ ಕೊಂಕಣಿಯಾದ್ದರಿಂದ ಶಿಕ್ಷಕರಿಗೆ ಈ ಭಾಷೆಗೊತ್ತಿಲ್ಲದ್ದರಿಂದ ಮಕ್ಕಳು ಕಲಿಯುವಿಕೆಯಲ್ಲಿ ಹಿಂದುಳಿಯುತ್ತಿದ್ದಾರೆ.

ಕುಡುಬಿಯರು ಪ್ರಕೃತಿ ಆರಾಧಕರಾಗಿದ್ದು, ಸ್ಥಳೀಯ ಭೂತಾರಾಧನೆ, ನಾಗಾರಾಧನೆ, ಪಿತೃರಾಧನೆ, ಕುಲೆ ಆರಾಧನೆಗಳಿಂದ ಇವರು ಪ್ರಭಾವಿತರಾಗಿದ್ದಾರೆ. ಇವರು ಶಕ್ತಿದೇವತೆಯನ್ನು ಮತ್ತು ಗೋವಾದ ಮಲ್ಲಿಕಾರ್ಜುನನನ್ನು ಪೂಜಿಸುತ್ತಾರೆ. ಹೋಳಿ ಇವರ ಪ್ರಮುಖ ಹಬ್ಬವಾಗಿದೆ. ಈ ಸಂದರ್ಭದಲ್ಲಿ ಶಕ್ತಿ ಅಥವಾ "ಗೋವಾ ಅಮ್ಮ"ನನ್ನು ಪೂಜಿಸುವ ಸಂಪ್ರದಾಯವಿದೆ. ಅಲ್ಲದೆ ಸಾಮೂಹಿಕವಾಗಿ

ಗುಮ್ಮಟೆ (ಗುಂಬೋಟ್) ಕೋಲಾಟ (ತೋಣಿ) ಜಡೆವೃತ್ಯ (ದೂರೀವಾಚ್) ಎಂಬ ಹೆಸರಿನ ವಿವಿಧ ನೃತ್ಯಗಳನ್ನಾಡುವರು. ಹಬ್ಬದ ಸಂದರ್ಭದಲ್ಲಿ ವನಭೋಜನ ಅಥವಾ ಹೊಸ ಊಟ ಹಮ್ಮಿಕೊಳ್ಳುವರು. ಇತರೆ ಹಿಂದೂ ಸಂಪ್ರದಾಯ ಹಬ್ಬಗಳನ್ನು ಆಚರಿಸುತ್ತಾರೆ.

ಕುಡುಬಿಯರಲ್ಲಿ ಬಡತನ ಅಜ್ಞಾನ, ಮೂಢನಂಬಿಕೆಗಳು, ಅನಕ್ಷರತೆ ಮತ್ತು ಅನಾರೋಗ್ಯದಂತಹ ಪ್ರಮುಖ ಸಮಸ್ಯೆಗಳನ್ನು ಅನುಭವಿಸುತ್ತಿದ್ದಾರೆ. ಆದ್ದರಿಂದ ಸರಕಾರ ಸಂವಿಧಾನಾತ್ಮಕ ಅನುಕೂಲತೆಗಳನ್ನು ಮತ್ತು ರಕ್ಷಣೆ ನೀಡಬೇಕಾದ ಅವಶ್ಯಕತೆ ಇದೆ.

ಆರ್ಯ ಮರಾಠ

ಆರ್ಯ ಮರಾಠರು ಕರಾವಳಿ ಪ್ರದೇಶದ ದಕ್ಷಿಣ ಕನ್ನಡ, ಕಾಸರಗೋಡು, ಉಡುಪಿಯಲ್ಲಿ ವಾಸಿಸುತ್ತಿರುವುದು ಕ್ಷೇತ್ರಕಾರ್ಯ ಸಂದರ್ಭದಲ್ಲಿ ತಿಳಿದು ಬಂದಿದೆ. ಇವರ ಜಾತಿಯ ಬಗ್ಗೆ ಕರ್ನಾಟಕ ರಾಜ್ಯ ಸರ್ಕಾರ ಸರ್ಕಾರಿ ಆದೇಶ ಸಂಖ್ಯೆ SWD ೨೨೫ ೩೦ ೨೦೦೦ ಬೆಂಗಳೂರು ೩೦.೦೩.೨೦೧೨ರ Annexure IV ರಲ್ಲಿ category III (ಃ) ಯಲ್ಲಿ ಆರ್ಯ, ಮರಾಠ ಮತ್ತು ಆರ್ಯ ಮರಾಠ ಎಂಬುದಾಗಿ ಗುರಿತಿಸಿರುತ್ತದೆ. ಆದರೆ ಕೇರಳ ಸರ್ಕಾರ ತನ್ನ ಆದೇಶ ಸಂಖ್ಯೆ GO(P) No: ೩೬/೨೦೦/SC ST D.D. ತಿರುವನಂತಪುರ ದಿನಾಂಕ: ೨೭.೦೫.೨೦೦೦ of SC, ST development (ಈ) Department Kerala State ೩೦.೧೩.೨೦೦೨ ರಂತೆ Annexure – A Kept of Backward classes in the state 'ಆರ್ಯ' ಎಂಬುದಾಗಿ ಗುರುತಿಸಿದೆ. ಆರ್ಯ ಮರಾಠ ಸಮುದಾಯದವರು ಕೇರಳ ರಾಜ್ಯದ ಕಾಸರಗೋಡು ಜಿಲ್ಲೆಯಲ್ಲಿ ದಟ್ಟವಾಗಿ ಮತ್ತು ಕರ್ನಾಟಕ ರಾಜ್ಯದ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯಲ್ಲಿ ವಿರಳವಾಗಿ ವಾಸಿಸುತ್ತಿರುವುದು ಕಂಡುಬರುತ್ತದೆ. ಆರ್ಯ ಮರಾಠ ಸಮುದಾಯದ ಸಂಘಟನೆಯಾದ 'ಆರ್ಯ ಯಾನೆ ಮರಾಠ ಸಮಾಜ ಸಂಘ (ರಿ.) ಮಂಗಳೂರು – ಕಾಸರಗೋಡು ಇವರು ತಮ್ಮ ಸಂಘಟನಾತ್ಮಕ ವ್ಯವಸ್ಥೆಗಾಗಿ ಸಮೀಕ್ಷೆ ನಡೆಸಿರುವ ಪ್ರಕಾರ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಂಗಳೂರು ವಲಯ ಪೂರ್ವ, ಪಶ್ಚಿಮ, ಉತ್ತರ ದಕ್ಷಿಣ, ಬಂಟ್ವಾಳ, ಪುತ್ತೂರು, ಸುಳ್ಯ, ಬೆಳ್ತಂಗಡಿ, ಮೂಡುಬಿದಿರೆ ವಲಯವಾಗಿ ಗುರುತಿಸಿ ಅವುಗಳ ಕುಟುಂಬಗಳ ಸಂಖ್ಯೆಯ ಆಧಾರದಲ್ಲಿ ಈ ಕೆಳಗಿನಂತೆ ವಿಂಗಡಿಸಿರುತ್ತಾರೆ.

ಕೋಷ್ಟಕ: ೨.೩.

ಆರ್ಯ ಮರಾಠರ ವಾಸದ ನೆಲೆಗಳು ಮತ್ತು ಆ ನೆಲೆಗಳಲ್ಲಿ ವಾಸವಿರುವ ಕುಟುಂಬಗಳ ವಿವರ

ಕ್ರ.ಸಂ.	ಜಿಲ್ಲೆ	ತಾಲೂಕುಗಳು/ವಲಯ	ವಾಸವಿರುವ ಕುಟುಂಬಗಳು
೧.	ದಕ್ಷಿಣ ಕನ್ನಡ	ಮಂಗಳೂರು ಪೂರ್ವ (ಜಲ್ಲಿ ಗುಡ್ಡೆ)	೧೨೩
		ಮಂಗಳೂರು ಪಶ್ಚಿಮ (ಬೋಳಾರ)	೧೦೦
		ಮಂಗಳೂರು ದಕ್ಷಿಣ (ಕುಂಪಲ)	೧೫೩
		ಮಂಗಳೂರು ಉತ್ತರ	೧೧೪
		ಬಂಟ್ವಾಳ	೧೫
		ಪುತ್ತೂರು	೩೪

		ಸುಳ್ಯ	೮೭
		ಬೆಳ್ತಂಗಡಿ	೧೪
		ಮೂಡಬಿದ್ರೆ	೧೮
		ಒಟ್ಟು	**೬೫೮**
೨.	**ಉಡುಪಿ**	**ಉಡುಪಿ**	**೩೯**
		ಕುಂದಾಪುರ	೧೭
		ಕಾರ್ಕಳ	೧೨೪
		ಒಟ್ಟು	**೧೮೦**
೩.	**ಕಾಸರಗೋಡು**	ಆಡೂರು	೧೨೩
		ಕುಂಟಾರು	೧೦೨
		ಆದೂರು	೧೩೩
		ಮಲ್ಲ	೧೧೮
		ಕುಡಂಕುಜೀ	೧೦೮
		ಕಾಸರಗೋಡು	೧೫೬
		ಮಂಜೇಶ್ವರ	೦೫
		ಒಟ್ಟು	**೭೪೫**
	ಒಟ್ಟು : ೧+೨+೩ (೬೫೮+೧೮೦+೭೪೫=೧೫೮೩ ಕುಟುಂಬಗಳು)		

ದಕ್ಷಿಣ ಕನ್ನಡ, ಉಡುಪಿ ಮತ್ತು ಕಾಸರಗೋಡಿನಲ್ಲಿ ವಾಸವಾಗಿರುವ ಒಟ್ಟು ಆರ್ಯ ಮರಾಠರ ಕುಟುಂಬಗಳ ಸಂಖ್ಯೆ ೧೫೮೩ ಎಂದು ತಿಳಿಯುತ್ತದೆ.

ಕೊಡಗಿನ ಮರಾಠರು

ಕೊಡಗಿನ ಮಡಿಕೇರಿ, ಸೋಮವಾರಪೇಟೆ, ವಿರಾಜಪೇಟೆ ತಾಲೂಕುಗಳಲ್ಲಿ ವಾಸಿಸುತ್ತಿರುವ ಮರಾಠಿಗರು ದಕ್ಷಿಣ ಕನ್ನಡ ಜಿಲ್ಲೆಯಿಂದ ಮತ್ತು ಕೇರಳ ರಾಜ್ಯದ ಕಾಸರಗೋಡು ಜಿಲ್ಲೆಯಿಂದ ಸುಮಾರು ೩೦೦-೪೦೦ ವರ್ಷಗಳ ಹಿಂದೆ ಅಲ್ಲಿಗೆ ವಲಸೆ ಹೋದವರು. ೧೯೫೬ ನವೆಂಬರ್ ೧೮ರಂದು ಭಾಷಾವಾರು ಪ್ರಾಂತ ರಚನೆಯಾದಾಗ ಕೊಡಗು ಜಿಲ್ಲೆಯು ಕರ್ನಾಟಕಕ್ಕೆ ಸೇರ್ಪಡೆಗೊಂಡಿತು. ಭಾರತ ಸರ್ಕಾರದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ತಿದ್ದುಪಡಿ ಆದೇಶದ ಪ್ರಕಾರ ಕೊಡಗು ಜಿಲ್ಲೆಗೆ ಸೀಮಿತಗೊಂಡಂತೆ ಮರಾಠ ಬುಡಕಟ್ಟು ಪರಿಶಿಷ್ಟ ಪಂಗಡ ಪಟ್ಟಿಯ ಕ್ರಮ ಸಂಖ್ಯೆ (೪)ರಲ್ಲಿತ್ತು. ಈ ಬುಡಕಟ್ಟಿನ ಪ್ರಾದೇಶಿಕ ಮಿತಿಯನ್ನು ಇಲ್ಲಿಯವರೆಗೆ ಸರ್ಕಾರ ಸಡಿಲಿಸಿಲ್ಲ. ಇವರು ಹಿಂದೆ ಮರಾಠ ಸಾಮ್ರಾಜ್ಯದಲ್ಲಿ ಸೈನಿಕರಾಗಿದ್ದು, ಕಾರಾಣಾಂತರಗಳಿಂದಾಗಿ ದಕ್ಷಿಣ ಕನ್ನಡ, ಹೊಸದುರ್ಗ, ಕಾಸರಗೋಡು ಮತ್ತು ಕೊಡಗುಗಳತ್ತ ವಲಸೆ ಬಂದು ನೆಲೆ ನಿಂತಿರುವರು. ಇವರ ಮಾತೃಭಾಷೆ ಕೊಂಕಣಿ ಮಿಶ್ರಿತ ಮರಾಠಿ. ಇವರು ತುಳು ಮತ್ತು ಕನ್ನಡದಲ್ಲಿಯು ವ್ಯವಹರಿಸುತ್ತಾರೆ.

೨೦೧೧ರ ಜನಗಣತಿ ಪ್ರಕಾರ ಕೊಡಗು ಜಿಲ್ಲೆಯಲ್ಲಿಯ ಮರಾಠ ಬುಡಕಟ್ಟಿನ ಜನಸಂಖ್ಯೆ ೩೩೯೬ ಪುರುಷರು ೧೬೪೫, ಸ್ತ್ರೀಯರು ೧೭೫೧ ದಾಖಲಾಗಿರುತ್ತದೆ. ಇವರ ಜನಸಂಖ್ಯೆ ನಗರದಲ್ಲಿ ೨೦೧೦ ಮತ್ತು ಗ್ರಾಮೀಣ ಪ್ರದೇಶದಲ್ಲಿ ೩೧೮೮ ಜನರಿರುವರು. ಸಂಸಾರ ನಿರ್ವಹಣೆಗೆ ಸಾಕಷ್ಟು ಆದಾಯ ದೊರೆಯದಿದ್ದ ಕಾಲದಲ್ಲಿ ದಕ್ಷಿಣ ಕನ್ನಡ ಹಾಗೂ ಕಾಸರಗೋಡು ಜಿಲ್ಲೆಯಿಂದ ಕೆಲಸವನ್ನು ಹುಡುಕಿಕೊಂಡು ಕೊಡಗಿಗೆ ಹೋಗಿ ಅಲ್ಲಿಯೇ ಶಾಶ್ವತವಾಗಿ ತಳವೂರಿದವರು. ಚಿಕ್ಕಮಂಗಳೂರಿನಲ್ಲಿರುವ ಮರಾಠಿಗರು ಈ ಪ್ರದೇಶಗಳಿಂದಲೇ ಹೋಗಿರುವರು ಎಂಬ ಮಾಹಿತಿ ದೊರೆಯುತ್ತದೆ.

ಕೆಲವು ದಶಕಗಳ ಹಿಂದೆ "ಘಟ್ಟಕ್ಕೆ ಆಳು ಕಟ್ಟುವುದು" ಎಂಬ ಮಾತು ಪ್ರಚಲಿತದಲ್ಲಿತ್ತು. ಈ ನೆಲೆಯಲ್ಲಿ ಮಲೆನಾಡಿನ ಕಾಫಿ ತೋಟದ ಕೆಲಸಗಳಾಗಿ ತುಳುನಾಡಿನ ಕೂಲಿಯಾಳುಗಳನ್ನು ಕರೆದು ಕೊಂಡು ಹೋಗಿ ಕಾಫಿ ತೋಟದ ಕೆಲಸಗಳನ್ನು ಮಾಡಿಸಿಕೊಳ್ಳಲಾಗುತ್ತಿತ್ತು. ಇದರಲ್ಲಿ ಸಾಮಾನ್ಯವಾಗಿ ದುಡಿಯುವ ವರ್ಗದ ಎಲ್ಲಾ ಜಾತಿಯ ಜನರಿದ್ದರು. ಮರಾಠಿ ಸಮುದಾಯದ ಅನೇಕರು ಕೃಷಿ ಕೂಲಿಕಾರರಾಗಿ ಕೊಡಗಿನಲ್ಲಿಯೇ ನೆಲೆ ನಿಂತರು. ಕೆಲ ಸಮಯ ದುಡಿದು ಉಳಿತಾಯ ಹಣದಿಂದ ಕ್ರಮೇಣ ಅಲ್ಲಿ ಸ್ವಲ್ಪ ಭೂಮಿಯನ್ನು ಗಳಿಸಿಕೊಂಡು ಕೃಷಿಕರಾಗಿ ಜೀವನ ಸಾಗಿಸುತ್ತಾ ಬಂದರು, ಕಾಲಾನಂತರ ಅಭಿವೃದ್ಧಿ ಹೊಂದುತ್ತಾ ಕೃಷಿಯೊಡನೆ ಇತರೆ ವೃತ್ತಿಗಳನ್ನು ಕೈಕೊಂಡು ಭದ್ರವಾಗಿ ನೆಲೆಯೂರಿದರು.

ಜೀವನಾವರ್ತಕ ಮತ್ತು ವಾರ್ಷಿಕಾವರ್ತನ ಆಚರಣೆಗಳಲ್ಲಿ ಕೊಡಗಿನ ಮರಾಠರು ದಕ್ಷಿಣ ಕನ್ನಡ ಮರಾಟರನ್ನೇ ಪ್ರತಿನಿಧಿಸುತ್ತಾರೆ. ಅವರ ಆಚರಣೆ, ಆರಾಧನೆ, ನಂಬಿಕೆ, ನಡವಳಿಗಳಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಮರಾಟರದ್ದೇ ಆಗಿದೆ. ಕೊಡಗಿನಲ್ಲಿ ವಾಸಿಸುತ್ತಿದ್ದರೂ ಕೊಡಗಿನವರ ಆಚರಣೆ, ಸಂಪ್ರದಾಯ ಅವರ ಸಂಸ್ಕೃತಿ, ಇವರ ಮೇಲೆ ಹೆಚ್ಚಿನ ಪ್ರಭಾವ ಬೀರಿರುವುದಿಲ್ಲ. ಕಾಸರಗೋಡು ಮತ್ತು ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯ ಮರಾಟರನ್ನು ಕೊಡಗಿನವರು ಗೌರವದಿಂದ ಕಾಣುತ್ತಾರೆಂಬ ಅಭಿಪ್ರಾಯಗಳಿವೆ.

ಕೊಡಗಿನ ಮರಾಠರಲ್ಲಿ ಮತ್ತು ಕಾಸರಗೋಡಿನ ಮರಾಠಿಗರಲ್ಲಿ ವಿವಾಹ ಸಂಬಂಧಗಳು ಹಿಂದಿನ ಕಾಲದಿಂದಲೂ ನಿರಂತರವಾಗಿ ನಡೆದುಕೊಂಡು ಬಂದಿರುವುದು ಕ್ಷೇತ್ರಕಾರ್ಯ ಸಂದರ್ಭದಲ್ಲಿ ಕಂಡುಬಂದಿರುತ್ತದೆ. ಇತ್ತೀಚೆಗೆ ದಕ್ಷಿಣ ಕನ್ನಡ ಜಿಲ್ಲೆಗೂ ವೈವಾಹಿಕ ಸಂಬಂಧ ಉಂಟಾಗಿರುವುದು ಗಮನಕ್ಕೆ ಬಂದಿರುತ್ತದೆ.

ಭೂತಾರಾಧನೆ ಕೊಡಗಿನ ಮರಾಠಿಗರಲ್ಲಿಯೂ ಕಂಡು ಬರುತ್ತದೆ. ಕಲ್ಕುಡ–ಕಲ್ಲುರ್ಟಿ, ಗುಳಿಗ, ಅಣ್ಣಪ್ಪ ಸ್ವಾಮಿ (ಅಣ್ಣಪ್ಪ ಪಂಜುರ್ಲಿ) ಕೊರತಿ ಮೊದಲಾದ ದೈವಗಳು ಕೊಡಗಿನ ಮರಾಠಿಗರಿಂದ ಆರಾಧಿಸಲ್ಪಡುತ್ತವೆ. ಇವು ತುಳುನಾಡಿನಿಂದ ಬಂದಂಥ ಭೂತಗಳು. ಜೊತೆಗೆ ಹೆಚ್ಚಿನ ಮನೆಗಳಲ್ಲಿ ಚಾಮುಂಡಿ ಎನ್ನುವ ಸ್ತ್ರೀ ದೈವದ ಆರಾಧನೆಯೂ ಅವರಲ್ಲಿ ವ್ಯಾಪಕವಾಗಿದೆ. ಇದು ಮೂಲತಃ ಘಟ್ಟದ ಮೇಲಿನ ದೈವ. ಈ ದೈವದ ಆರಾಧನೆ ತುಳುನಾಡಿನ ಮರಾಟಿಗರಲ್ಲೂ ಉಂಟು. ತಮ್ಮ ತಾಯ್ನಾಡಿಗೆ ಬಂದಾಗ ಅವರ ಬೆನ್ನು ಹತ್ತಿಕೊಂಡು ಚಾಮುಂಡಿ ದೈವವು ತುಳುನಾಡಿಗೆ ಬಂದಿತೆಂದೂ, ಈ ಮೂಲಕ ಈ ಪ್ರದೇಶದ ಮರಾಟಿಗರಿಂದ ಆರಾಧಿಸಲ್ಪಟ್ಟಿತೆಂದೂ ಇಲ್ಲಿನ ಮರಾಟಿಗರು ಹೇಳುತ್ತಾರೆ. ತುಳು ಮತ್ತು ಮಲಯಾಳಿ ಭಾಷೆ ಗೊತ್ತಿರುವ ಕೊಡಗಿನಲ್ಲಿ ಶಾಶ್ವತವಾಗಿ ನೆಲೆ ನಿಂತಾಗ, ತುಳುನಾಡಿನ ಅಥವಾ ಕರಾವಳಿ ಪ್ರದೇಶದ ತಮ್ಮ ಭೂತಗಳನ್ನು ಕೊಡಗಿನಲ್ಲಿ ನಂಬಿ ಆರಾಧಿಸಿಕೊಂಡು

ಬರಲಾಯಿತೆಂದು ತಿಳುವಳಿಕೆದಾರರು ಹೇಳುವರು. ತುಳುನಾಡಿನಲ್ಲಿರುವ ರಾಜನ್ ದೈವಗಳಾದ ಕೊಡಮಣ್ತಾಯ, ಜಾರಂದಾಯ, ಜುಮಾದಿ, ವ್ಯಾಘ್ರ- ಚಾಮುಂಡಿಯೇ ಮೊದಲಾದ ದೈವಗಳ ಸಾಮೂಹಿಕ ಆರಾಧನೆ ಕೊಡಗಿನ ಮರಾಠಿಗರಲ್ಲಿ ಕಂಡುಬರುವುದಿಲ್ಲ. ಕೊಡಗಿನ ಮರಾಟಿಗರ ಭೂತಾರಾಧನೆ ಏನಿದ್ದರೂ ಮನೆ ದೈವಗಳ ಆರಾಧನೆಗಷ್ಟೇ ಸೀಮಿತವಾಗಿರುವುದು ಕ್ಷೇತ್ರಕಾರ್ಯ ಸಂದರ್ಭದಲ್ಲಿ ಕಂಡುಬಂದಿರುತ್ತದೆ.

ಶಿವಾಂಶವೆಂದು ಹೇಳುವ 'ಮುತ್ತಪ್ಪನ್' ದೇವರ (ಕೆಲವು ಮರಾಠಿಗರು ಮುತ್ತಪ್ಪ ದೈವವೆಂದೂ ಹೇಳುತ್ತಾರೆ) ಆರಾಧನೆ ಕೊಡಗಿನ ಮರಾಠಿಗರಲ್ಲಿದೆ. ಕೃಷಿ ಕಾರ್ಯ ಅಥವಾ ಯಾವುದೇ ಒಳ್ಳೆಯ ಕೆಲಸಗಳನ್ನು ಪ್ರಾರಂಭಿಸುವಾಗ ಅಥವಾ ಮುಂಚಿತವಾಗಿ ಈ ದೈವಕ್ಕೆ ಹರಕೆ ಹೇಳಿಕೊಂಡು ಪೂಜೆ ಸಲ್ಲಿಸಿರುತ್ತಾರೆ. ಕೇರಳ ರಾಜ್ಯ ಪರ್ಸಿನ್ ಕಡವು ಮೂಲವಾಗಿರುವ ಮುತ್ತಪ್ಪನ್ ದೇವರು ಇರುವ ಗುಡಿಯ ಹೊರಭಾಗದಲ್ಲಿ ನಾಯಿಯ ಮೂರ್ತಿಯೊಂದಿದೆ. ಅಲ್ಲದೆ ಮುತ್ತಪ್ಪನ್ ಬೇಟೆ ಪ್ರಿಯ ದೇವರು ಎನ್ನುತ್ತಾರೆ. ಶೇಂದಿ ಮತ್ತು ಒಣ ಮೀನನ್ನು ಈ ದೇವರಿಗೆ ನೈವೇದ್ಯವಾಗಿ ಅರ್ಪಿಸಲಾಗುತ್ತದೆ. ಮುಂದೇ ಅದನ್ನೇ ಪ್ರಸಾದ ರೂಪದಲ್ಲಿ ಹಂಚಲಾಗುತ್ತದೆ.

ಇಲ್ಲಿಯ ಮರಾಟಿಗರಲ್ಲಿ ನಾಗಾರಾಧನೆ ಇದೆಯಾದರೂ ತುಳುನಾಡಿನಲ್ಲಿರುವಂತೆ ನಾಗಮಂಡಲಗಳಿಲ್ಲ. ದಕ್ಷಿಣ ಕನ್ನಡದಲ್ಲಿರುವಷ್ಟು ಬೇರೆ ಕಡೆಗಳಲ್ಲಿ ನಾಗನಿಗೆ ಮಹತ್ವವಿಲ್ಲದಿರುವುದರಿಂದ ಕೊಡಗಿನಲ್ಲಿ ನಾಗಮಂಡಲಗಳು ನಡೆಯದಿರಲೂ ಕಾರಣವಾಗಿರಬಹುದು. ಮನೆ ಮಾತು, ಮಾತೃಭಾಷೆ ಕೊಡಗಿನ ಮರಾಠಿಗರಲ್ಲಿ ಮರಾಠಿಯೇ ಆಗಿದೆ. ಒಟ್ಟು ಈ ಜನರು ಕೊಡಗಿನಲ್ಲಿ ಇದ್ದಾರೆ ಎನ್ನುವ ಅಂಶವನ್ನು ಹೊರತುಪಡಿಸಿದರೆ ಉಳಿದಂತೆ ಎಲ್ಲಾ ವಿಚಾರಗಳಲ್ಲಿ ಇವರು ತುಳುನಾಢಿನ ಮರಾಟಿಗರೇ ಆಗಿದ್ದಾರೆ.

ಕೊನೆ ಟಿಪ್ಪಣಿಗಳು

೧. ರಮೇಶ ಕೆ. ವಿ., ೧೯೬೯, A History of South Cenara P-೧೮
೨. ರಮೇಶ ಕೆ. ವಿ., ೧೯೬೯, A History of South Cenara .P-೨೧
೩. ರಮೇಶ ಕೆ. ವಿ., ೧೯೬೯, A History of South Cenara P-೧೩೧-೧೩೩
೪. ವಸಂತ ಮಾಧವ, ೧೯೮೫, Religion in Costal Karnataka, P-೧೬
೫. ಮಲ್ಲೇಪುರಂ ಜಿ. ವೆಂಕಟೇಶ, (ಸಂ), ಶಂಬಾ ಕೃತಿ ಸಂಪುಟ-೧, ೧೯೯೯, ಪು-XXI
೬. ಅದೇ, ಪು-XXII
೭. ಅದೇ, ಪು-XXII
೮. ಅದೇ, ಪು-೧೧೩
೯. ಮೋಹನ್ ಎಸ್, ೨೦೦೮, ಮರಾಟಿ ನಾಯ್ಕರು ಒಂದು ಸಾಂಸ್ಕೃತಿಕ ಅಧ್ಯಯನ, ಪು-೪,
೧೦. ಸುಂದರ ನಾಯಕ, ೨೦೦೮, 'ಕರಾವಳಿ ಕರ್ನಾಟಕ ಮರಾಟಿ ಜನಾಂಗ ಪರಂಪರೆ ಮತ್ತು ಆಧುನಿಕತೆ, ಪುಟ-೨೯
೧೧. ಅದೇ, ಪುಟ-೨೮
೧೨. ಡಾ. ಕೆ.ಎಂ. ಮೇತ್ರಿ, ೨೦೧೪, ಕರ್ನಾಟಕದ ಏಕೀಕರಣ ಮತ್ತು ಬುಡಕಟ್ಟುಗಳು, ಸಮಾಜ ಅಧ್ಯಯನ (ಸಂ) ಸಮಾಜ ವಿಜ್ಞಾನಗಳ ಸಂಶೋಧನೆ ಪತ್ರಿಕೆ ಸಂ-೧ ಸಂಚಿಕೆ-೧ ಜುಲೈ-ಡಿಸೆಂಬರ್.

೧೩. Endogamy ಒಳಬಾಂಧವ್ಯ, (ಒಬ್ಬ ವ್ಯಕ್ತಿಯು ತನ್ನ ಜಾತಿಯ ಮತ್ತು ಉಪಜಾತಿಯ ಒಳಗಡೆ ತನ್ನ ಜೀವನ ಸಂಗಾತಿಯನ್ನು ಆಯ್ಕೆ ಮಾಡಿಕೊಳ್ಳುವ ನಿಯಮ)

೧೪. Subramanya G., ೨೦೧೬, Social Problems, P–೪೯೮

೧೫. Krober A. L., ೧೯೪೮, Anthropology, Race Language – culture Psychology, P–೭

೧೬. Piddington (Ralph), ೧೯೬೩, Introduction to Social Anthropology vol-೨ Edinburgh, Oliver of Boy.

೧೭. ಚ.ನ. ಶಂಕರರಾವ್, ೧೯೯೫, ಭಾರತೀಯ ಸಮಾಜ, ಪು–೩೮೩

೧೮. ಅದೇ, ಪು–೩೮೩.

೧೯. ವಿಶೇಷ ತರದ ಕೃಷಿ ಪದ್ಧತಿ ಅಂದರೆ "ಕುಮೇರಿ ಕೃಷಿ".

೨೦. ಕೆ.ಎಂ. ಮೇತ್ರಿ, ೨೦೧೭, "ಸೂಕ್ಷ್ಮ ಆದಿವಾಸಿಗಳು", ಪು–೧–೨೪

೨೧. ಕರ್ನಾಟಕ ರಾಜ್ಯ ಪರಿಶಿಷ್ಟ ಪಂಗಡಗಳ ಜನಸಂಖ್ಯಾ ಪಟ್ಟಿ, ೨೦೧೧.

೨೨. ಉತ್ತರ ಕನ್ನಡ, ದಕ್ಷಿಣ ಕನ್ನಡ, ಉಡುಪಿ ಜಿಲ್ಲೆಯ ಪರಿಶಿಷ್ಟ ಪಂಗಡಗಳ ಜನಸಂಖ್ಯಾ ಪಟ್ಟಿ, ೨೦೧೧.

೨೩. ಸುಂದರ ನಾಯಕ, ೨೦೦೮, ಕರಾವಳಿ ಕರ್ನಾಟಕದ ಮರಾಟಿ ಜನಾಂಗ ಪರಂಪರೆ ಮತ್ತು ಆಧುನಿಕತೆ, ಪು–೨೯

ಅಧ್ಯಾಯ : ಮೂರು.....

ಮರಾಟಿ ಸಮುದಾಯಗಳ ಜೀವನಾವರ್ತಕ ಮತ್ತು ವಾರ್ಷಿಕಾವರ್ತನ ಆಚರಣೆಗಳ ತೌಲನಿಕ ಅಧ್ಯಯನ

ಅಧ್ಯಾಯ : ಮೂರು

ಮರಾಟಿ ಸಮುದಾಯಗಳ ಜೀವನಾವರ್ತಕ ಮತ್ತು ವಾರ್ಷಿಕಾವರ್ತನ ಆಚರಣೆಗಳ ತೌಲನಿಕ ಅಧ್ಯಯನ

ಪ್ರತಿಯೊಂದು ಸಮುದಾಯದಲ್ಲಿ ನಂಬಿಕೆ, ಆಚರಣೆ, ಸಂಪ್ರದಾಯ, ವಿಧಿನಿಷೇಧಗಳು ಇದ್ದೇ ಇರುತ್ತವೆ. ಹುಟ್ಟಿನಿಂದ ಸಾಯುವವರೆಗೆ ಸತ್ತ ನಂತರವು ಮಾನವ ಆತ್ಮ ಅನೇಕ ಆಚರಣೆಗಳಿಗೆ ಒಳಪಡುವುದನ್ನು ಕಾಣುತ್ತೇವೆ. ಮನುಷ್ಯ ಬದುಕಿದ್ದಾಗ ಒಳಗೊಳ್ಳುವ ಆಚರಣೆಗಳಿಗಿಂತ ಸಾವಿನ ನಂತರ ಒಳಪಡುವ ಆಚರಣೆಗಳು ಬಹಳ ಮಹತ್ವ ಪಡೆದಿರುತ್ತವೆ. ಜೀವಿತ ಅವಧಿಯಲ್ಲಿ ನಡೆಯುವ ಆಚರಣೆಗಳಲ್ಲಿ ಕೆಲ ಕುಂದುಕೊರತೆಗಳಾದರೂ ಅದನ್ನು ಸಹಕರಿಸುವಂತೆ ಕೇಳಿಕೊಳ್ಳಬಹುದು. ಆದರೆ ಸತ್ತ ವ್ಯಕ್ತಿಯ ಆತ್ಮಕ್ಕೆ ಸಲ್ಲಿಸುವ ಆಚರಣೆಗಳಲ್ಲಿ ಏರು / ಪೇರಾಗಿ ಆ ಆತ್ಮಕ್ಕೆ ಸಿಟ್ಟು ಬಂದರೆ ಅದು ಯಾರ ಮಾತನ್ನು ಕೇಳವುದಿಲ್ಲ, ಜೀವಂತವಿರುವ ಎಲ್ಲರಿಗೂ ತೊಂದರೆ ಕೊಡುತ್ತದೆ ಎಂಬ ಕಾರಣದಿಂದ ಸತ್ತ ವ್ಯಕ್ತಿಗಳ ಆತ್ಮ ಸಂಸ್ಕಾರಕ್ಕೆ ಸಂಬಂಧಿಸಿದಂತೆ ನಡೆಯುವ ಎಲ್ಲಾ ಆಚರಣೆಗಳನ್ನು ಪ್ರತಿಯೊಂದು ಸಮುದಾಯ ತನ್ನ ಪಾರಂಪರಿಕ ತಿಳುವಳಿಕೆಯ ಮೂಲಕ ಬಂದಿರುವುದನ್ನು ಹಾಗೂ ಪ್ರತಿಯೊಂದು ಆಚರಣೆಯನ್ನು ಕಟ್ಟುನಿಟ್ಟಿನಿಂದ ಪಾಲಿಸಿಕೊಂಡು ಬರುತ್ತಿರುವುದನ್ನು ಕಾಣುತ್ತೇವೆ. ಸಮುದಾಯಗಳಲ್ಲಿ ಪ್ರಚಲಿತವಿರುವ ಅಲಿಖಿತ ಸಂವಿಧಾನಬದ್ಧ ಈ ಆಚರಣೆಗಳನ್ನು ಕ್ರಮವಾಗಿ ಆಚರಿಸದಿದ್ದರೆ ಬಹಿಷ್ಕಾರಗಳಂತಹ ಶಿಕ್ಷೆಗಳಿಗೂ ಒಳಗಾಗುವ ಸಂಭವ ಇರುತ್ತದೆ. ಸಮುದಾಯಗಳಲ್ಲಿ ಇಂದು ಪ್ರಚಲಿತವಿರುವ ಪ್ರತಿಯೊಂದು ಆಚರಣೆಯನ್ನು ಅಧ್ಯಯನಕ್ಕೊಳಪಡಿಸುವ ಸಂದರ್ಭದಲ್ಲಿ ಪರಂಪಾರನುಗತವಾಗಿ ಬಂದ ಆಚರಣೆಗಳಾವುವು? ಈ ಆಚರಣೆಗಳಲ್ಲಿ ಯಾವ ರೀತಿ ಬದಲಾವಣೆಗಳಾಗಿವೆ? ಬದಲಾವಣೆಗಳಿಗೆ ಕಾರಣಗಳೇನು? ಎಂಬುದನ್ನು ಹುಡುಕುವ ಪ್ರಯತ್ನ ಮಾಡುತ್ತೇವೆ. ಡಾ. ದೇವಿಪ್ರಸಾದ ಚಟ್ಟೋಪಾಧ್ಯಾಯ ಅವರು 'ಅನಾಗರಿಕ ವ್ಯವಸ್ಥೆಯನ್ನು ದಾಟಿ ನಾಗರಿಕತೆಯ ಹೊಸ್ತಿಲನ್ನು ಮುಟ್ಟಿದ ಮೇಲೂ ಬಹಳ ಕಾಲದವರೆಗೆ ಮನುಷ್ಯ ತನ್ನ ಭೂತಕಾಲದ ಅನಾಗರಿಕ ಹಂತದ ಅನೇಕ ಅಭ್ಯಾಸಗಳನ್ನು ಪೂರ್ಣವಾಗಿ ಬಿಡಲಾರದೆ ಹೋದ, ನಾಗರಿಕ ಸಮಾಜದ ಮನುಷ್ಯನ ಗ್ರಹಿಕೆಗಳು ಹಾಗೂ ನಂಬಿಕೆಗಳಲ್ಲಿ ಆದಿಮ ಕಾಲದ ವಿಧ ವಿಧವಾದ ನಂಬಿಕೆಗಳು ಹಾಗೆ ಅಂಟಿಕೊಂಡಿವೆ. ಆದ್ದರಿಂದಲೇ ನಾಗರಿಕತೆಯ ಪ್ರಾರಂಭದ ವಿಷಯಗಳನ್ನು ಸರಿಯಾಗಿ ತಿಳಿದುಕೊಳ್ಳಲು ಅನಾಗರಿಕ ಅವಸ್ಥೆಯ ಸನ್ನಿವೇಶಗಳನ್ನು ವಿಶೇಷವಾಗಿ ತಿಳಿದುಕೊಳ್ಳುವ ಅವಶ್ಯಕತೆ ಇದೆ ಎಂದು ಹೇಳಿದ್ದಾರೆ'.

ದೇವಿಪ್ರಸಾದ ಚಟೋಪಾಧ್ಯಾಯ ಅವರ ಈ ಮಾತುಗಳನ್ನು ಗಮನಿಸಿದಾಗ ಮರಾಟಿ ಮತ್ತು ಮರಾಟಿ ನಾಯ್ಕ ಈ ಎರಡೂ ಸಮುದಾಯಗಳಲ್ಲಿ ಪಾರಂಪರಿಕವಾಗಿ ಆಚರಿಸಿಕೊಂಡು ಬರುತ್ತಿರುವ

ಆಚರಣೆಗಳು ಆಧುನಿಕ ಯುಗದಲ್ಲಿಯೂ ಕೆಲ ಪಾರಂಪರಿಕ ಆಚರಣೆಗಳು ಇಂದಿಗೂ ಜೀವಂತವಾಗಿರುವುದನ್ನು ಗಮನಿಸಿದರೆ, ಅವುಗಳಲ್ಲಿರುವ ತಿಳುವಳಿಕೆ ವಿಜ್ಞಾನದ ಅಂಶಗಳು ಸರ್ವಕಾಲಕ್ಕೂ ಬಹಳ ಉಪಯುಕ್ತವಾದವುಗಳು, ಹೀಗಾಗಿ ಕೆಲ ಪಾರಂಪರಿಕ ಸಂಗತಿಗಳು ಉಳಿದುಕೊಂಡು ಕಟ್ಟುನಿಟ್ಟಿನಿಂದ ಪಾಲಿಸಿಕೊಂಡು ಬರುತ್ತಿರುವುದನ್ನು ಕಾಣುತ್ತೇವೆ.

ಮರಾಟಿ ಮತ್ತು ಮರಾಟಿ ನಾಯ್ಕ ಈ ಎರಡೂ ಸಮುದಾಯಗಳಲ್ಲಿ ಕಂಡು ಬರುತ್ತಿರುವ ಆಚರಣೆ ಮತ್ತು ಸಂಪ್ರದಾಯಗಳ ಹಿಂದೆ ಒಂದು ತಿಳುವಳಿಕೆ ಅಡಕವಾಗಿರುತ್ತದೆ ಮತ್ತು ಅದರಲ್ಲಿ ವಿಶೇಷತೆ ಇರುತ್ತದೆ ಎಂಬುದನ್ನು ಪರಿಗಣಿಸಬೇಕಾಗುತ್ತದೆ. ಕೆಲ ಆಚರಣೆಗಳನ್ನು ಅನೇಕ ಅಧ್ಯಯನಕಾರರು ಅವು ನಿರುಪಯುಕ್ತವಾದವು ಎಂದು ಹೇಳಿದ್ದಾರೆ. ನಾನು ಸಹ ನಿರುಪಯುಕ್ತ ಹಾಗೂ ಅನಿಷ್ಟ ಸಂಪ್ರದಾಯಗಳನ್ನು ಮುಂದುವರೆಸಬೇಕೆಂದು ಹೇಳುವುದಿಲ್ಲ ಇಂದು ಮರಾಟಿ ಮತ್ತು ಮರಾಟಿ ನಾಯ್ಕ ಸಮುದಾಯಗಳಲ್ಲಿಯ ಪ್ರತಿಯೊಂದು ಆಚರಣೆಗಳನ್ನು ಗಮನಿಸಿದಾಗ ಅವುಗಳಲ್ಲಿ ಪುರೋಹಿತಶಾಹಿ ಆಚರಣೆಗಳ ಪ್ರಭಾವ ಪ್ರೇರಣೆಗಳು ಅಧಿಕ ಪ್ರಮಾಣದಲ್ಲಿ ಗೋಚರಿಸುತ್ತಿರುವುದನ್ನು ಗಮನಿಸಿದ್ದೇನೆ. ವಾಸ್ತವವಾಗಿ ಇಂದು ಕರಾವಳಿ ಕರ್ನಾಟಕದಲ್ಲಿ ವಾಸಿಸುತ್ತಿರುವ ಸಾಮಾನ್ಯವಾಗಿ ಎಲ್ಲ ಸಮುದಾಯಗಳಲ್ಲಿ ಪುರೋಹಿತಶಾಹಿ ವರ್ಗಗಳ ಆಚರಣೆಗಳು ಒಂದಲ್ಲ ಒಂದು ರೀತಿಯಲ್ಲಿ ನುಸುಳಿರುವುದು ಕಂಡು ಬರುತ್ತವೆ.

ಸಂಸ್ಕಾರಗಳು, ನಂಬಿಕೆ, ಆಚರಣೆಗಳು ಮತ್ತು ಸಂಪ್ರದಾಯ, ಸಾಮಾಜಿಕ ಜಗತ್ತಿನ ಅವಿಭಾಜ್ಯ ಅಂಗಗಳು. ಹುಟ್ಟಿನಿಂದ ಸಾವಿನ ತನಕ ಮನುಷ್ಯನ ಬೆಳವಣಿಗೆಯ ವಿವಿಧ ಹಂತಗಳಲ್ಲಿ ನಡೆಸುವ ಸಂಸ್ಕಾರಗಳು ವ್ಯಕ್ತಿಯ ದೈಹಿಕ, ಬೌದ್ಧಿಕ ಮತ್ತು ಮಾನಸಿಕ ಬೆಳವಣಿಗೆಗೆ ಪೂರಕವಾಗಿರುತ್ತವೆ. ಸಂಸ್ಕಾರಗಳು ವ್ಯಕ್ತಿಯನ್ನು ಆತನು ಬದುಕಿ ಬಾಳುವ ಸಂಸ್ಕೃತಿಗೆ ಒಳಪಡಿಸುತ್ತಾ ಅಂತಿಮವಾಗಿ ಮಾನವೀಕರಣ ಪ್ರಕ್ರಿಯೆಗೆ ಒಳಪಡಿಸುತ್ತವೆ. ಮರಾಟಿ ನಾಯ್ಕ ಮತ್ತು ಮರಾಟಿಗರು ತಮ್ಮದೆ ಆದ ಸಂಸ್ಕಾರ, ಪದ್ಧತಿ, ಸಂಪ್ರದಾಯ, ಆಚರಣೆ, ಲೋಕರೂಢಿ ನಂಬಿಕೆಗಳನ್ನು ಅನುಸರಿಸು ಬೆಳೆದು ಬಂದಿದ್ದಾರೆ.

೩.೧. ಮರಾಟಿ ಸಮುದಾಯಗಳ ಸಂಸ್ಕಾರಗಳು

ಹುಟ್ಟು

"ಒಂದು ಜೀವಿಯು ಮತ್ತೊಂದು ಜೀವಿಗೆ ಜನ್ಮ ನೀಡುವುದು ಸೃಷ್ಟಿಯ ನಿಯಮ. ಆದರೆ ಇದು ಮನುಷ್ಯನ ವಿಷಯಕ್ಕೆ ಬಂದಾಗ ತನ್ನದೆ ಆದ ಕೆಲವು ನೀತಿ ನಿಯಮಗಳು ಸಂಪ್ರದಾಯ, ಆಚರಣೆಗಳು ಒಳಗೊಂಡಿರುತ್ತದೆ. ಇದರಂತೆ ಒಂದು ಹಂತದಲ್ಲಿ ಹೆಣ್ಣು ಇಲ್ಲಿ ಮುಖ್ಯವಾದ ಪಾತ್ರವನ್ನು ವಹಿಸುತ್ತಾಳೆ. ಹೆರಿಗೆ ಎನ್ನುವುದು ಹೆಣ್ಣಿನ ಪಾಲಿಗೆ ಒಂದು ಮರುಜನ್ಮವಾಗಿದೆ. ಹಿಂದಿನಿಂದಲೂ ಮರಾಟಿ ಸಮುದಾಯದ ಮನೆಯಲ್ಲಿ ಯಾರಾದರೂ ಸ್ತ್ರೀಯರು ಬಸುರಿ ಎಂದು ತಿಳಿದ ಕೂಡಲೆ ಆಕೆಯ ಪತಿ, ತಾಯಿ, ಅತ್ತೆ, ಅಜ್ಜಿ ಮತ್ತು ಮನೆಯವರೆಲ್ಲರೂ ತಮ್ಮ ವಂಶದ ಕುಡಿಯ ಬಗ್ಗೆ ಅವರು ತೆಗೆದುಕೊಳ್ಳುವ ಕಾಳಜಿ, ಪಡುವ ಆತಂಕ ಅಷ್ಟಿಷ್ಟಲ್ಲ. ಮಗು ಗರ್ಭದಲ್ಲಿರುವಾಗಲೇ ಅದರ ಆರೋಗ್ಯದ ಬಗ್ಗೆ, ಮಗುವನ್ನು ಹೆರುವ ತಾಯಿಯ ಆರೋಗ್ಯದ ಬಗ್ಗೆ ತುಂಬಾ ಕಾಳಜಿ ವಹಿಸುತ್ತಾರೆ. ಹಿಂದೆ ಈಗಿರುವಂತೆ ವೈದ್ಯಕೀಯ ಸೌಲಭ್ಯವಿಲ್ಲದ ಕಾರಣ ಹೆರಿಗೆಯು ಹೆಣ್ಣಿನ ಪಾಲಿಗೆ ಮರುಜನ್ಮವಿದ್ದಂತೆ. ಮರಾಟಿ ಸಮುದಾಯದವರು ಗರ್ಭಿಣಿ ಎಂದು ತಿಳಿದ ಕೂಡಲೇ ಆಕೆಗೆ ತಯಾರಿಸುವ ಆಹಾರ

ಪದಾರ್ಥಗಳು ವಿಶೇಷವಾಗಿರುತ್ತವೆ. ಬಾಣಂತನಕ್ಕೆ ಬೇಕಾಗುವ ಆಹಾರ ಸಾಂಬಾರ ಪದಾರ್ಥಗಳನ್ನು ಹೆಚ್ಚಾಗಿ ಪೌಷ್ಠಿಕ ಆಹಾರ ಪದಾರ್ಥಗಳನ್ನೆ ಕೊಡುತ್ತಿದ್ದರು. ಆಕೆಯ ಮನದ ಬಯಕೆ ಈಡೇರಿಸಲು ಮೊದಲ ಐದು ತಿಂಗಳು ತುಂಬಿದ ಬಳಿಕ 'ಹೂ ಮುಡಿಸುವ ಶಾಸ್ತ್ರ' ಮಾಡುತ್ತಾರೆ"[೧]. "ಉಡುಪಿಯ ಸುತ್ತಮುತ್ತಲ ಪ್ರದೇಶದಲ್ಲಿ ಈ ಆಚರಣೆಯನ್ನು ಸೀಮಂತ ಅಥವಾ ಬಯಕೆ ಎನ್ನುವರು. ಕುಂದಾಪುರ ತಾಲೂಕಿನ ಸುತ್ತಮುತ್ತಲಿನ ಪ್ರದೇಶದಲ್ಲಿ ವಾಸಿಸುವ ಮರಾಟಿಗರು 'ಉಂಬುಕೆ' ಎನ್ನುವ ಶಾಸ್ತ್ರ ಮಾಡುವರು"[೨]. "ಆಕೆಗೆ ಏಳನೇ ತಿಂಗಳು ತುಂಬಿದ ಬಳಿಕ ಬಸುರಿಗೆ ಸೂತಕದ ಲೆಕ್ಕ ಪ್ರಾರಂಭಿಸುವರು. ಅಂದಿನಿಂದ ಆಕೆ ದೈವ, ದೇವಸ್ಥಾನಕ್ಕೆ ಹೋಗುವುದು ಪೂಜೆ ಮಾಡುವುದು ನಿಷಿದ್ಧವಾಗಿರುತ್ತದೆ. ಸಾಮಾನ್ಯವಾಗಿ ಮೊದಲ ಹೆರಿಗೆಯ ಸಂದರ್ಭದಲ್ಲಿ 'ಸೀಮಂತ' ಎನ್ನುವ ಒಂದು ವಿಶಿಷ್ಟ ಆಚರಣೆ ಮಾಡಿ ಗರ್ಭಿಣಿ ಹೆಂಗಸನ್ನು ಮೊದಲ ಹೆರಿಗೆಗೆ ತನ್ನ ತಾಯಿ ಮನೆಗೆ ಕಳುಹಿಸುವ ಸಂಪ್ರದಾಯ ಎರಡೂ ಸಮುದಾಯದಲ್ಲಿ ಕಂಡುಬರುತ್ತದೆ"[೩]. ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಗಮನಿಸಿದಾಗ ಆಧುನಿಕ ಸಮಾಜದ ವೈದ್ಯಕೀಯ ಸೌಲಭ್ಯದ ಕಾರಣಗಳಿಂದ ಆಸ್ಪತ್ರೆಯಲ್ಲಿ ಹೆರಿಗೆ ಮಾಡುವುದು ಕಂಡುಬರುತ್ತದೆ.

ಹೆರಿಗೆ

"ಹಿಂದಿನ ಕಾಲದಲ್ಲಿ ಹಳ್ಳಿಗಾಡಿನಲ್ಲಿ ಆಸ್ಪತ್ರೆಯ ಸೌಲಭ್ಯ ಆಧುನಿಕ ವೈದ್ಯಕೀಯ ಸೌಲಭ್ಯ ಇಲ್ಲವಾದುದರಿಂದ ಹೆಚ್ಚಿನ ಹೆರಿಗೆಗಳು ಮನೆಗಳಲ್ಲಿಯೇ ನಡೆಯುತ್ತಿದ್ದವು. ವೈದ್ಯರುಗಳ ಬದಲಾಗಿ ಪಾರಂಪರಿಕ ಜ್ಞಾನ ಮತ್ತು ಅನುಭವ ಹೊಂದಿದ ಹಳ್ಳಿಯ ಹಿರಿಯ ಮಹಿಳೆಯರು ಹೆರಿಗೆ ಮಾಡಿಸುತ್ತಿದ್ದರು"[೪]. "ಹೆರಿಗೆಯ ಎಲ್ಲಾ ಕಾರ್ಯಗಳನ್ನು ಸುಸೂತ್ರವಾಗಿ ನಿಭಾಯಿಸುವುದಲ್ಲದೆ. ಬಸುರಿಯ ಜೊತೆ ಆಕೆಯ ಮನೆಯವರಿಗೂ ಧೈರ್ಯ ಮತ್ತು ಆತ್ಮವಿಶ್ವಾಸ ತುಂಬುತ್ತಿದ್ದರು. ಹೊಟ್ಟೆ ನೋವು ಕಾಣಿಸಿಕೊಂಡ ಕೂಡಲೆ ಓಮದ ಕಷಾಯ ಮಾಡಿಕೊಡುತ್ತಿದ್ದರು. ಏಕೆಂದರೆ ಅದು ಹೆರಿಗೆ ಬೇನೆ ಹೌದೋ ಅಲ್ಲವೋ ಎಂದು ಪರೀಕ್ಷಿಸುವ ಸಲುವಾಗಿ. ಒಂದು ವೇಳೆ ಅದು ಹೆರಿಗೆ ಬೇನೆಯೇ ಆಗಿದ್ದಲ್ಲಿ ಈ ಕಷಾಯ ಕುಡಿದ ಕೂಡಲೇ ನೋವು ಹೆಚ್ಚಾಗುತ್ತದೆ, ಇಲ್ಲವಾದಲ್ಲಿ ಕಡಿಮೆಯಾಗುತ್ತದೆ. ಇದಲ್ಲದೆ ಹೆರಿಗೆ ನೋವು ಆರಂಭವಾದಾಗ ಬೂರುಗದ ಮರದ ಜೊತೆ ಜೀರಿಗೆಯನ್ನು ಬೆರೆಸಿ ಜಜ್ಜಿ ಅದಕ್ಕೆ ನೀರು ಹಾಕಿ ಸರಿಯಾಗಿ ಹಿಂಡಿ ರಸವನ್ನು ಕುಡಿಸುತ್ತಾರೆ. ಹೆರಿಗೆ ನೋವು ಕಡಿಮೆಯಾಗಲು ಎಳನೀರಿಗೆ ಮೊಣ್ಣಾಳಿಸೊಪ್ಪು ಹಾಗೂ ಜೀರಿಗೆ ಹಾಕಿ ಆ ನೀರನ್ನು ಕುಡಿಯಲು ನೀಡುತ್ತಾರೆ. ಎಲ್ಲವೂ ಸುಗಮವಾಗಿ ಸಾಗಲೆಂದು ಆಕೆಯ ಮನೆಯವರು ದೇವರಿಗೆ ಅನೇಕ ಹರಕೆಗಳನ್ನು ಹೊತ್ತು ದೈವ ದೇವರ ಕೃಪೆಗಾಗಿ ಪ್ರಾರ್ಥಿಸುತ್ತಾರೆ"[೫].

"ಆಧುನಿಕ ವೈದ್ಯಕೀಯ ವಿಜ್ಞಾನದ ತಿಳುವಳಿಕೆ ಇಲ್ಲದಿದ್ದರೂ ಮರಾಟಿಗರೂ ಹೆರಿಗೆ ಶಾಸ್ತ್ರ, ಬಾಣಂತನ, ಮಗುವಿನ ಆರೈಕೆ ಇವುಗಳಿಗೆ ಸಂಬಂಧಪಟ್ಟಂತೆ ದೇಸಿಯ ಪಾರಂಪರಿಕ ಅನುಭವ ಕೇಂದ್ರಿತ ಜ್ಞಾನವನ್ನು ಇವರು ರೂಢಿಸಿಕೊಂಡಿದ್ದಾರೆ. ಹೆರಿಗೆಯಾದ ತಕ್ಷಣ ಮನೆಯ ನಾಲ್ಕು ಮೂಲೆಗಳಲ್ಲಿ ಎದುರು ಮಾಡಿನಲ್ಲಿ ಬಚ್ಚಲ ಮನೆಯಲ್ಲಿ ಕಾಸರಕನ ಗಿಡದ ಎಲೆಗಳಿರುವ ಗೊಂಬೆಳನ್ನು ತಂದು ಸಿಕ್ಕಿಸಿಡುವರು. ಅಲ್ಲದೆ ಹೆರಿಗೆಯಾದ ಸುದ್ದಿಯನ್ನು ಇತರರಿಗೆ ಬಟ್ಟಲು ಅಥವಾ ಜಾಗಟೆ ಬಡಿಯುವುದರ ಮೂಲಕ ಪರೋಕ್ಷವಾಗಿ ತಿಳಿಸುತ್ತಾರೆ"[೬].

ಅಮೆ ಮುಚ್ಚುವುದು

"ಹೆರಿಗೆಯಾದ ಕೂಡಲೆ ಮೊದಲನೆ ದಿನ ಮಾಸುನ್ನು (ಮತ್ತಿ) ಅಥವಾ ಮಗುವಿನ ಹೊಕ್ಕಳ ಬಳ್ಳಿ ಕತ್ತರಿಸಿ, ಮಣ್ಣಿನ ಮಡಿಕೆಯಲ್ಲಿ ತುಂಬಿ ಬಚ್ಚಲ ಹಿಂದೆ ನೀರು ಹೋಗುವ ಜಾಗದಲ್ಲಿ ತೆಗ್ಗು ತೋಡಿ ಹೂತು ಹಾಕುತ್ತಾರೆ. ಈ ಹೊಂಡವನ್ನು ಅರ್ಧ ಮುಚ್ಚಿ ಮತ್ತೆ ಅರ್ಧ ಹಾಗೆ ಬಿಡುವರು. ಏಳು ದಿನಗಳ ತನಕ ಬಾಣಂತಿ ಹಾಗೂ ಮಗುವಿಗೆ ಸ್ನಾನ ಮಾಡಿಸಿದ ನೀರು ಇದೇ ಹೊಂಡಕ್ಕೆ ಹೋಗುವಂತೆ ಮಾಡುವರು. ಅಲ್ಲಿ ಬೇರೆ ಯಾರೂ ಸ್ನಾನ ಮಾಡುವಂತಿಲ್ಲ. ಏಳು ದಿನಗಳ ಬಳಿಕ ಅಮೆ ಹೊಂಡವನ್ನು ಮುಚ್ಚುವ ಪದ್ಧತಿ ಇದೆ. ಇನ್ನೂ ಕೆಲವು ಗ್ರಾಮಾಂತರ ಪ್ರದೇಶದಲ್ಲಿ ಮಾಸನ್ನು ಹಟ್ಟಿಯಲ್ಲಿ ತೆಗ್ಗು ತೆಗೆದು ಹೂಳುವರು ಅಲ್ಲದೆ ಕೆಲವು ಕಡೆಗಳಲ್ಲಿ ಮಾಸನ್ನು ಕಾಸರಕನ ಮರದ ಬುಡದಲ್ಲಿ ಹೊಂಡ ತೆಗೆದು ಹುಗಿದು ಅದರ ಮೇಲೆ ಕಲ್ಲು ಮತ್ತು ಮುಳ್ಳನ್ನು ಇಡುತ್ತಾರೆ. ಕಾರಣವೇನೆಂದರೆ, ಯಾವುದೇ ಪ್ರಾಣಿಗಳು ತಿನ್ನಬಾರದು ಎಂಬ ಎಚ್ಚರವಹಿಸುತ್ತಾರೆ. ಹಟ್ಟಿಯಲ್ಲಿ ಹೂತಿರುವ ಆಮೆ ಹೊಂಡಕ್ಕೆ ಕೆಲವು ಕಡೆಗಳಲ್ಲಿ ಬಾಣಂತಿಯೇ ಪೂಜೆ ಮಾಡುವವಳು. ಅಂದು ಸಂಜೆ ಒಂದು ಹಣತೆಯಲ್ಲಿ ಬಾಣಂತಿಯ ಎದೆ ಹಾಲು ಇನ್ನೊಂದು ಹಣತೆಯಲ್ಲಿ ಅನ್ನದ ತಿಳಿನೀರು ಮತ್ತೊಂದು ಹಣತೆಯಲ್ಲಿ ಅನ್ನವನ್ನು ಹಾಗೂ ಮೆಂತೆ ದೋಸೆಯನ್ನಿಟ್ಟು ಬಾಣಂತಿ ಪೂಜೆ ಮಾಡುತ್ತಾಳೆ. ಪೂಜೆ ಮುಗಿಸಿದ ನಂತರ ಒಳಗೆ ಬರುವಾಗ ಬಾಣಂತಿಯ ಬೆನ್ನಿಗೆ ಮೆಲ್ಲನೆ ತಟ್ಟುತ್ತಾ ಒಳಗೆ ಕರೆದುಕೊಂಡು ಬರುತ್ತಾರೆ"[೭]. ಹೀಗೆ ಮಾಡುವುದರಿಂದ ಬಾಣಂತಿಯ ಬೆನ್ನುಮೂಳೆ ಗಟ್ಟಿಯಾಗುತ್ತದೆ ಎಂದು ಮರಾಟಿಗರ ನಂಬಿಕೆ.

"ಮಗುವಿನ ಜನನದ ನಂತರ ಮೂರು ತಿಂಗಳು ಬಾಣಂತಿ ಮತ್ತು ಮಗುವಿನ ಆರೈಕೆ ಅತೀ ಮುಖ್ಯವಾಗಿರುತ್ತದೆ. ಇವರಿಬ್ಬರಿಗೂ ನಂಜು ಆಗದಂತೆ ತುಂಬಾ ಮುಂಜಾಗ್ರತೆ ವಹಿಸುತ್ತಾರೆ. ಅಲ್ಲದೆ ಯಾವುದೇ ರೀತಿಯ ತೊಂದರೆಯು ಬರಬಾರದೆಂದು ಬಾಣಂತಿಯ ಕೋಣೆಯನ್ನು ತುಂಬಾ ಶುಚಿಯಾಗಿಡುತ್ತಾರೆ. ಹೊರಗಿಂದ ಬಂದವರು ಕೈ ಕಾಲು ತೊಳೆಯದೆ ಈ ಕೋಣೆಗೆ ಪ್ರವೇಶಿಸುವಂತಿಲ್ಲ. ದಿನವೂ ಬಾಣಂತಿಗೆ ಅರಶಿಣ ಹಾಗೂ ಸೀಗೆಕಾಯಿ ಪುಡಿಯನ್ನು ಎಣ್ಣೆಯಲ್ಲಿ ಕಲಿಸಿ ಮೈಗೆಲ್ಲ ತಿಕ್ಕಿ, ಮಸಾಜು ಮಾಡಿ ಹಂಡೆಗಟ್ಟಲೆ ಬಿಸಿ ನೀರು ಕಾಯಿಸಿ ಸ್ನಾನ ಮಾಡಿಸುವರು. ಮೊದಲ ಮೂರು ದಿನ ಮೆಣಸಿನ ತಿಳಿಸಾರು, ಉಪ್ಪಿನಕಾಯಿ ಮತ್ತು ಅನ್ನವನ್ನು ಕೊಡುತ್ತಾರೆ. ಬಾಣಂತಿಗೆ ನೆಗಡಿಯಾಗಬಾರದೆಂಬ ದೃಷ್ಟಿಯಲ್ಲಿ ಕಾಫಿ ಮಾಡಿ ಕೊಡುವರು. ಅಲ್ಲದೆ ನಂಜಿಲ್ಲದ ಆಹಾರವನ್ನು ಮಾತ್ರ ಕೊಡುತ್ತಾರೆ. ಹೊಟ್ಟೆ ಹುಣ್ಣು ಮಾಸುವುದಕ್ಕೆಂದು ಹಾಲು ಉತ್ಪತ್ತಿ, ರಕ್ತ ಶುದ್ಧಿಗೆ, ದೈಹಿಕ ಸಾಮರ್ಥ್ಯ ಹೆಚ್ಚಿಸಲು ಬಾಣಂತಿಗೋಸ್ಕರ ಮುಂದಿನ ಮೂರು, ನಾಲ್ಕು ತಿಂಗಳು ಬಗೆ ಬಗೆಯ ಬಾಣಂತಿ ಔಷಧಗಳನ್ನು ವಿಶೇಷವಾಗಿ ಈ ಎರಡೂ ಸಮುದಾಯದವರು ನೀಡುತ್ತಾರೆ"[೮].

೩.೨. ಬಾಣಂತಿ ಔಷಧಗಳು

ಬೆಲ್ಲದ ಗಂಜಿ ಅನ್ನ

ಬಾಣಂತಿ ಔಷಧದಲ್ಲಿ ಮೊದಲನೆಯದು ಬೆಲ್ಲದ ಗಂಜಿ ಅನ್ನ. ಇದನ್ನು ಹೆರಿಗೆಯ ದಿನದಿಂದ ಮೂರು ಒಪ್ಪತ್ತು ಅಂದರೆ ಬೆಳಿಗ್ಗೆ, ಮಧ್ಯಾಹ್ನ, ರಾತ್ರಿ ಕೊಡುತ್ತಾರೆ. ಇದು ಆದಷ್ಟು ಬೇಗ ಎದೆ ಹಾಲಾಗಲು ಮತ್ತು ಗರ್ಭಕೋಶದ ಹುಣ್ಣು ಮಾಯಲು ಸಹಾಯವಾಗುತ್ತದೆ. ಅನ್ನವನ್ನು ಮೆತ್ತಗೆ ಬೇಯಿಸಿ ಒಲೆಯ ಮೇಲಿಟ್ಟು ಒಂದು ಚಿಟಕಿ ಉಪ್ಪು, ಹದಕ್ಕೆ ತಕ್ಕ ಬೆಲ್ಲ ಹಾಕಿ ಕುದಿಸಿದರೆ ಬೆಲ್ಲದ ಗಂಜಿ ಅನ್ನ ಸಿದ್ಧವಾಗುತ್ತದೆ.

ಜೀರಿಗೆ ಮೆಣಸಿನ ಸಾರು, ಶುಂಠಿ ಪಲ್ಯದ ಅನ್ನ

ಒಲೆಯ ಮೇಲೆ ಸ್ವಲ್ಪ ನೀರಿಟ್ಟು ರುಚಿಗೆ ಬೇಕಾಗುವಷ್ಟು ಉಪ್ಪು, ಬೆಲ್ಲ ಹಾಕಿ ಕುದಿಸುವವರು. ಜೀರಿಗೆ ಮತ್ತು ಮೆಣಸಿನ ಕಾಳು ಹುರಿದು ಪುಡಿ ಮಾಡಿಕೊಂಡು ಒಂದು ಚಮಚದಷ್ಟು ಪುಡಿಯನ್ನು ಹಾಕಿ ಕುದಿಸಿ ಸಾರು ಮಾಡುತ್ತಾರೆ. ಇದಕ್ಕೆ ಹುಳಿ ಅಂಶ ಹಾಗೂ ಒಗ್ಗರಣೆ ಇಲ್ಲ. ಈ ಸಾರಿನ ಊಟ ಮಾಡಿ ಬೇಜಾರಾದ್ರೆ ಒಂದು ಹೊತ್ತು ಸಾರು ಒಂದು ಹೊತ್ತು ಶುಂಠಿ ಪಲ್ಯದ ಅನ್ನ ಕೊಡುತ್ತಾರೆ.

ಒಲೆಯ ಮೇಲೆ ಬಾಣಲೆಯಲ್ಲಿ ಒಂದೆರಡು ಚಮಚ ತುಪ್ಪ ಹಾಕಿ ಒಗ್ಗರಣೆ ಮಾಡಿ, ಅದಕ್ಕೆ ಒಂದು ಚಮಚ ಒಣ ಶಂಠಿ ಪುಡಿ ಹಾಕುವರು. ಮೆತ್ತಗೆ ಮಾಡಿದ ಅನ್ನವನ್ನು ಅದರಲ್ಲಿ ಹಾಕಿ ರುಚಿಗೆ ಬೇಕಾಗುವಷ್ಟು ಉಪ್ಪು ಹಾಗೂ ಮಜ್ಜಿಗೆಯನ್ನು ಹಾಕಿ ಕುದಿಸುವವರು. ಹತ್ತು ದಿನದ ತನಕ ಇವೆರಡು ಆಹಾರ ಕೊಡುತ್ತಾರೆ. ಬೇರೆ ಮೇಲೋಗರವನ್ನು ಹಾಕಬಾರದು. ಹನ್ನೊಂದನೆಯ ದಿನದಿಂದ ಶುಂಠಿ ಲೇಹ್ಯವನ್ನು ಬೆಳಿಗ್ಗೆ ಖಾಲಿ ಹೊಟ್ಟೆಯಲ್ಲಿ ತಿನ್ನಿಸುವರು. ಹಡೆದ ದಿನದಿಂದ ದಿನಾ ಬೆಳಿಗ್ಗೆ ಮೆಣಸಿನ ಕಾಳಿನ ಪುಡಿಗೆ ಬೆಲ್ಲ ಕಲಸಿ ಒಂದು ಗೋಲಿ ಗಾತ್ರದ ಗುಳಿಗೆ ಮತ್ತು ಒಣಶುಂಠಿ ಪುಡಿಗೆ ಬೆಲ್ಲ ಸೇರಿಸಿ ಒಂದು ಗೋಲಿ ಗಾತ್ರ ಗುಳಿಗೆಯನ್ನು ಜಗಿಯದೆ ನುಂಗಲು ಕೊಡುವರು.

ಶುಂಠಿ ಲೇಹ್ಯ

ಶುಂಠಿ ಲೇಹ್ಯ ಸಿದ್ಧಪಡಿಸಲು ೨೫೦ ಗ್ರಾಂ ಒಣ ಶುಂಠಿ, ೧೦೦ ಗ್ರಾಂ ಜೀರಿಗೆ, ೨೫೦ ಗ್ರಾಂ ಒಣ ದ್ರಾಕ್ಷಿ, ೧೦೦ ಗ್ರಾಂ ಗಸಗಸೆ, ೧ ಕೆ.ಜಿ. ತುಪ್ಪ, ೧ ಕೆ.ಜಿ. ಕಲ್ಲು ಸಕ್ಕರೆ ಮತ್ತು ಬೆಲ್ಲ, ಇವು ಬೇಕಾಗುವ ಸಾಮಾನುಗಳು. ಜೀರಿಗೆ ಮತ್ತು ಶುಂಠಿಯನ್ನು ಕುಟ್ಟಿ ಪುಡಿ ಮಾಡಿಕೊಂಡು ದ್ರಾಕ್ಷಿಯನ್ನು ತುಪ್ಪದಲ್ಲಿ ಕರಿದಿಟ್ಟುಕೊಳ್ಳುತ್ತಾರೆ. ಗಸಗಸೆಯನ್ನು ಹುರಿದು ಪುಡಿ ಮಾಡಿ ಅಥವಾ ರುಬ್ಬಿಟ್ಟುಕೊಳ್ಳುವರು. ಒಲೆ ಮೇಲೆ ೨೫೦ ಗ್ರಾಂ ಆಗುವಷ್ಟು ತುಪ್ಪ ಬಾಣಲೆಯಲ್ಲಿ ಇಟ್ಟುಕೊಂಡು ಬಿಸಿಯಾದ ಮೇಲೆ ಜೀರಿಗೆ ಪುಡಿ, ಶುಂಠಿ ಪುಡಿ, ಗಸಗಸೆ ಪುಡಿ, ಕರಿದ ಒಣ ದ್ರಾಕ್ಷಿ ಎಲ್ಲಾ ಹಾಕಿ ಮುಗುಚುವರು. ತುಪ್ಪದಲ್ಲಿ ಸ್ವಲ್ಪ ಹೊತ್ತು ಮಗುಚಿದಾಗ ಬೆಂದ ಪರಿಮಳ ಬಂದ ಮೇಲೆ ಬೇಕಾಗುವಷ್ಟು ಸಕ್ಕರೆ ಅಥವಾ ಬೆಲ್ಲ ಹಾಕಿ ಮತ್ತೆ ೨೫೦ ಗ್ರಾಂ ತುಪ್ಪ ಹಾಕಿ ಚೆನ್ನಾಗಿ ಮಗುಚುವರು. ಸಕ್ಕರೆ ಪಾಕ ಬಂದು ಬಾಣಲೆ ಬಿಟ್ಟ ಮೇಲೆ ಕೆಳಗೆ ಇಳಿಸುತ್ತಾರೆ. ತಣ್ಣಗಾದ ಮೇಲೆ ಬೇರೆ ಸ್ಟೀಲ್ ಡಬ್ಬಿಯಲ್ಲಿ ತುಂಬಿಟ್ಟುಕೊಂಡು ದಿನಾ ಬೆಳಗಿನ ಜಾವ ದೊಡ್ಡ ನಿಂಬೆಹಣ್ಣಿನ ಗಾತ್ರದಷ್ಟು ತಿನ್ನುವರು. ಇದನ್ನು ಹೆರಿಗೆಯಾದ ಹನ್ನೊಂದನೇ ದಿನದಿಂದ ಇಪ್ಪತ್ತು ದಿನ ತಿನ್ನಬೇಕು.

ಮೆಣಸು

ಹನ್ನೊಂದನೆಯ ದಿನದಿಂದ ಮಧ್ಯಾಹ್ನ ಮೊದಲು ಮೆಣಸಿನಲ್ಲಿ ಊಟ ಮಾಡುವರು. ನಂತರ ಮಾಡಿದ ಮೇಲೋಗರವನ್ನು ಸ್ವಲ್ಪ ಹಾಕಿಕೊಂಡು ಊಟ ಮಾಡಿಸುತ್ತಾರೆ. ಈ ಮೆಣಸನ್ನು ಹಾಗಲಕಾಯಿ, ಬಾಳೆಗೊಂಡಿಗೆ ಮತ್ತು ಬೆಳ್ಳುಳ್ಳಿಯಿಂದಲೂ ಮಾಡುತ್ತಾರೆ.

ತರಕಾರಿ ೨೫೦ ಗ್ರಾಂ ೧೫೦ ಗ್ರಾಂ ಮೆಣಸಿನ ಕಾಳು, ಸ್ವಲ್ಪ ಜೀರಿಗೆ, ಒಂದು ಮುಷ್ಟಿಯಾಗುವಷ್ಟು ಕೊತ್ತಂಬರಿ, ಸ್ವಲ್ಪ ತೆಂಗಿನಕಾಯಿ, ರುಚಿಗೆ ಉಪ್ಪು, ಹುಣಸೆ ಹಣ್ಣಿನ ನೀರು, ಸ್ವಲ್ಪ ಎಣ್ಣೆ, ಸ್ವಲ್ಪ ತುಪ್ಪ, ಬೆಲ್ಲ ಇವು ಬೇಕಾಗುವ ಸಾಮಾನುಗಳು.

ತರಕಾರಿಯನ್ನು ತೊಳೆದು ಹೆಚ್ಚಿಕೊಂಡು ಎಣ್ಣೆ, ಸ್ವಲ್ಪ ತುಪ್ಪ ಹಾಕಿ ಒಗ್ಗರಣೆ ಹಾಕುವರು. ತರಕಾರಿ ಬೇಯಿಸಿಕೊಂಡು, ಮೆಣಸಿನ ಕಾಳು, ಜೀರಿಗೆ, ಕೊತ್ತಂಬರಿ ಮೂರನ್ನೂ ಹುರಿದು ಪುಡಿ

ಮಾಡಿಟ್ಟುಕೊಂಡು, ತೆಂಗಿನಕಾಯಿ ಮಿಕ್ಸಿಗೆ ಹಾಕಿ ಪುಡಿ ಮಾಡಿದ ಎಲ್ಲವನ್ನು ಒಗ್ಗರಣೆ ಹಾಕುವರು. ರುಚಿಗೆ ಬೇಕಾಗುವಷ್ಟು ಉಪ್ಪು, ಬೆಲ್ಲ, ಹುಣಸೆ ಹಣ್ಣಿನ ನೀರು ಹಾಕಿ ಮತ್ತೆ ತುಪ್ಪವನ್ನು ಬಜ ಬಜ ಅನ್ನುವಷ್ಟು ಹಾಕಿ ಚೆನ್ನಾಗಿ ಮಗುಚುವರು. ಇದು ಎಷ್ಟು ದಿನ ಇಟ್ಟರೂ ಹಾಳಾಗುವುದಿಲ್ಲ.

ಬಾಳೆಗೊಂಡಿಗೆ ಮೆಣಸು

ಬಾಳೆಗೊಂಡಿಗೆಯ ಕೆಂಪು ಎಸಳನ್ನು ತೆಗೆದು, ತುದಿಯಲ್ಲಿ ಬಿಳಿ ಎಸಳಿನ ಸಹಿತ ಹೂವನ್ನು ಸಣ್ಣಗೆ ಹೆಚ್ಚಿಕೊಂಡು, ಒಗ್ಗರಣೆಗೆ ಹಾಕಿ ನಂತರ ಉಪ್ಪು, ಬೆಲ್ಲ, ಹುಣಸೆ ಹಣ್ಣಿನ ನೀರು, ಹುರಿದು ಪುಡಿ ಮಾಡಿದ ಮೆಣಸಿನ ಕಾಳು, ಜೀರಿಗೆ, ಕೊತ್ತಂಬರಿ ಪುಡಿ, ತೆಂಗಿನಕಾಯಿ ಎಲ್ಲಾ ಹಾಕಿ ಹಾಗಲಕಾಯಿ ಮೆಣಸು ಮಾಡಿದ ಹಾಗೆ ಚೆನ್ನಾಗಿ ಮಗುಚುವರು. ಇದು ಬಾಣಂತಿಗೆ ತುಂಬಾ ಒಳ್ಳೆಯದು.

ಬೆಳ್ಳುಳ್ಳಿ ಮೆಣಸು

ಏಳೆಂಟು ಗಡ್ಡೆ ಬೆಳ್ಳುಳ್ಳಿಯ ಸಿಪ್ಪೆ ತೆಗೆದು ಅದನ್ನು ಎಣ್ಣೆ ಅಥವಾ ತುಪ್ಪದಲ್ಲಿ ಹುರಿದುಕೊಂಡು ತೆಂಗಿನ ತುರಿ, ಬೆಲ್ಲ, ಉಪ್ಪು, ಹುಣಸೆ ಹಣ್ಣು ಮತ್ತು ಬೇಕಾಗುವಷ್ಟು ಮೆಣಸಿನಕಾಳು ಪುಡಿ ಎಲ್ಲಾ ಒಟ್ಟಿಗೆ ರುಬ್ಬಿ ಚಟ್ನಿ ತರಹ ಮಾಡಿಕೊಂಡು ಬಾಣಲೆಗೆ ಸ್ವಲ್ಪ ಎಣ್ಣೆ, ಸ್ವಲ್ಪ ತುಪ್ಪ ಹಾಕಿ ಒಗ್ಗರಣೆ ಮಾಡಿಕೊಳ್ಳುವರು. ಅದಕ್ಕೆ ರುಬ್ಬಿದ್ದನ್ನು ಹಾಕಿ ಎಣ್ಣೆ ತುಪ್ಪ ಬಜ ಬಜ ಅನ್ನುವಷ್ಟು ಹಾಕಿ ಚೆನ್ನಾಗಿ ಮಗುಚುವರು. ಗಟ್ಟಿಯಾಗುವಷ್ಟು ಚೆನ್ನಾಗಿ ಮಗುಚಿದರೆ ಎಷ್ಟು ದಿನ ಇಟ್ಟರೂ ಹಾಳಾಗುವುದಿಲ್ಲ. ಅಕಸ್ಮಾತ್ ಮೆಣಸುಗಳು ವಾಸನೆ ಬಂದು ಹಾಳಾಗಲು ಶುರುವಾಗಿವೆ ಎನ್ನಿಸಿದರೆ ಮತ್ತೆ ಬಾಣಲೆಗೆ ಹಾಕಿ ಸ್ವಲ್ಪ ಹೊತ್ತು ಮಗುಚಿದರೆ ವಾಸನೆ ಹೋಗಿ ಸರಿಯಾಗುತ್ತದೆ. ಮೆಣಸನ್ನು ಎಣ್ಣೆ ಮತ್ತು ತುಪ್ಪ ಎರಡನ್ನು ಹಾಕಿಕೊಂಡು ಊಟ ಮಾಡಲು ನೀಡುವರು. ಈ ಮೂರು ಮೆಣಸನ್ನು ಸ್ವಲ್ಪ ಸ್ವಲ್ಪವೇ ಎಂಟೆಂಟು ದಿನಕ್ಕೆ ಆಗುವಷ್ಟು ಮಾಡುವರು. ಹನ್ನೊಂದನೇ ದಿನದಿಂದ ಒಂದು ತಿಂಗಳ ತನಕ ತಿನ್ನಲು ಕೊಡುವರು.

ಗೋಧಿ ದೋಸೆ ಅಥವಾ ಗೋಧಿ ಚಪಾತಿ

ಗೋಧಿ ದೋಸೆ ಅಥವಾ ಚಪಾತಿಯನ್ನು ಎರಡನೇ ತಿಂಗಳಿನಲ್ಲಿ ಬೆಳಿಗ್ಗೆ ಅಥವಾ ರಾತ್ರಿ ಊಟಕ್ಕೆ ಬದಲು ತಿನ್ನಲು ಕೊಡುವರು. ಒಂದು ಹೊತ್ತು ತಿಂದರೆ ಸಾಕಾಗುತ್ತದೆ. ರಾತ್ರಿ ತಿಂದರೆ ಬಾಯಾರಿಕೆ ಆಗುವ ಹಾಗಿದ್ದರೆ ಸ್ವಲ್ಪ ಅನ್ನ ಮಜ್ಜಿಗೆ ಊಟ ಮಾಡಿಸುವರು. ಇದನ್ನು ಇಪ್ಪತ್ತು ದಿನ ಮಾಡುವರು. ಈ ಆಹಾರವನ್ನು ಸೇವಿಸುವುದರಿಂದ ಬೆನ್ನು ಮತ್ತು ಮೂಳೆಗಳು ಗಟ್ಟಿಯಾಗುತ್ತವೆಂದು ಹಿರಿಯರು ಹೇಳುತ್ತಾರೆ.

ಚಪಾತಿ ಹಿಟ್ಟು ಕಲಿಸುವಾಗ ೨–೩ ಚಮಚ ತುಪ್ಪ ಹಾಕಿ ಕಲಿಸುತ್ತಾರೆ. ಚಪಾತಿ ಬೇಯಿಸುವಾಗ ಕೂಡ ತುಂಬಾ ತುಪ್ಪ ಹಾಕಿ ಬೇಯಿಸುವರು. ಗೋಧಿ ನೆನೆಸಿ ರುಬ್ಬಿ ದೋಸೆ ಮಾಡಬಹುದು. ಅಥವಾ ಒಂದು ಕೆ.ಜಿ., ಗೋಧಿಗೆ ಒಂದು ಪಾವು ಉದ್ದಿನ ಬೇಳೆ ಹಾಕಿ ಹಿಟ್ಟು ಮಾಡಿಕೊಂಡು ದೋಸೆ ಹೊಯ್ಯುತ್ತಾರೆ. ಬೇಯಿಸುವಾಗ ತುಂಬಾ ತುಪ್ಪ ಹಾಕಿ ಬೇಯಿಸುತ್ತಾರೆ. ತಿನ್ನುವಾಗ ಕೂಡ ತುಂಬಾ ತುಪ್ಪ ಹಾಕಿಕೊಂಡು ತಿನ್ನಲು ಕೊಡುತ್ತಾರೆ. ಈ ಹಿಟ್ಟಿನಿಂದ ದೋಸೆಯನ್ನು ತೆಳ್ಳಗೆ ಹೊಯ್ಯಲು ಬರುವುದಿಲ್ಲ ದಪ್ಪಗೆ ಮಾಡುವರು. ಈ ಗೋಧಿಯಿಂದ ತಯಾರಿಸಿದ ಆಹಾರಗಳನ್ನು ತಿನ್ನುವಾಗ

ಸ್ವಲ್ಪ ಎದೆ ಹಾಲು ಕಡಿಮೆ ಆಗಬಹುದು. ಆಗ ಮಧ್ಯ ಮಧ್ಯ ಒಂದೊಂದು ದಿನ ಬೆಳಿಗ್ಗೆ ಊಟಕ್ಕೆ ಹೆಚ್ಚಿನ ಪ್ರಮಾಣದಲ್ಲಿ ತೆಂಗಿನಕಾಯಿ ಹಾಕಿ. ಕಾಯಿ ಹಾಲು ಗಂಜಿ ಮಾಡಿ ನೀಡುವರು. ಇದು ಬಾಣಂತಿ ಔಷಧಿಯಲ್ಲಿ ಒಂದು.

ಅರ್ಧ ಕೆ.ಜಿ., ಹಸಿ ಶುಂಠಿಯನ್ನು ರುಬ್ಬಿ ಅಥವಾ ಕುಟ್ಟಿ ರಸ ತೆಗೆದು ಅರ್ಧ ಕೆ.ಜಿ., ಈರುಳ್ಳಿ ಸಣ್ಣಗೆ ಹೆಚ್ಚಿಕೊಂಡು ಮೂಕ್ಕಾಲು ಕೆ.ಜಿ., ಬೆಲ್ಲದಿಂದ ಎಳೆ ಪಾಕ ಮಾಡಿಕೊಂಡು, ಶುಂಠಿ ರಸ, ಹುರಿದ ಈರುಳ್ಳಿ ಮತ್ತು ತುಪ್ಪ ಹಾಕಿ ಮಗುಚಬೇಕು. ಬಾಣಲೆ ಬಿಟ್ಟ ನಂತರ ಕೆಳಗಿಳಿಸಬೇಕು. ಇದನ್ನು ಸಂಜೆ ಆರು ಗಂಟೆ ಹೊತ್ತಿಗೆ ಸಣ್ಣ ನಿಂಬೆಹಣ್ಣಿನ ಗಾತ್ರದಷ್ಟು ತಿಂದು ಒಂದು ಲೋಟ ಹಾಲು ಕುಡಿಯಲು ನೀಡುತ್ತಾರೆ.

ಹೊರಿ

ಬಾಣಂತಿಯ ಕೊನೆ ಔಷಧಿ ಹೊರಿ. ಇದನ್ನು ಗೋದಿ ಆಹಾರದ ಸೇವನೆ ನಂತರ ೨೦ ದಿನ ತಿನ್ನಿಸುವರು. ಗಸೆಗಸೆ ಅರ್ಧ ಕೆ.ಜಿ., ಒಣದ್ರಾಕ್ಷಿ ಅರ್ಧ ಕೆ.ಜಿ., ಕಲ್ಲು ಸಕ್ಕರೆ ಅರ್ಧ ಕೆ.ಜಿ., ಬಾದಾಮಿ ಕಾಲು ಕೆ.ಜಿ., ೧೦೦ ಗ್ರಾಂ ಉತ್ತತ್ತಿ, ತುಪ್ಪ ೧ ಕೆ.ಜಿ., ೧೦೦ ಗ್ರಾಂ ಅಂಟು, ೧ ಕೆ.ಜಿ ಒಣ ಕೊಬ್ಬರಿ, ೧ ಕೆ.ಜಿ. ಸಕ್ಕರೆ ಇವು ಬೇಕಾಗುವ ಸಾಮಾನುಗಳು.

"ಗಸೆಗಸೆ ಹುರಿದು ಪುಡಿ ಮಾಡಿಕೊಳ್ಳುವರು ಅಥವಾ ಗಸಗಸೆ (ಹಸಿ), ಬಾದಾಮಿ, ಉತ್ತತ್ತಿ ಎಲ್ಲಾ ಒಟ್ಟಿಗೆ ಹಾಕಿ ರುಬ್ಬಿಟ್ಟುಕೊಳ್ಳುತ್ತಾರೆ. ಅಂಟನ್ನು ಕುಟ್ಟಿ ಪುಡಿ ಮಾಡಿ ತುಪ್ಪದಲ್ಲಿ ಕರಿದಿಟ್ಟುಕೊಳ್ಳುವರು. ಪುಡಿಮಾಡಿದ ಗಸಗಸೆ, ದ್ರಾಕ್ಷಿ, ಪುಡಿಗಳೆಲ್ಲವನ್ನೂ ತುಪ್ಪ ಹಾಕಿ ಚೆನ್ನಾಗಿ ಮಗುಚಿಕೊಂಡು, ಚೆನ್ನಾಗಿ ಬೆಂದು ಪರಿಮಳ ಬಂದ ಮೇಲೆ ಕಲ್ಲು ಸಕ್ಕರೆ, ಬೇಕಾದಲ್ಲಿ ಸ್ವಲ್ಪ ಸಕ್ಕರೆ ಹಾಕಿ, ಅಂಟನ್ನು ಚೆನ್ನಾಗಿ ಮಗುಚುತ್ತಾರೆ. ಪಾಕ ಬಂದು ಗಟ್ಟಿಯಾಗಿ (ಮುದ್ದೆಯಾಗಿ) ಬಾಣಲೆಗೆ ಬಿಟ್ಟ ನಂತರ ಕೆಳಗಿಳಿಸಿ ತಣ್ಣಗಾದ ಮೇಲೆ ಸ್ಟೀಲ್ ಡಬ್ಬಿಗೆ ಹಾಕಿಟ್ಟುಕೊಂಡು, ದೊಡ್ಡ ನಿಂಬೆ ಹಣ್ಣಿನ ಗಾತ್ರ ಲೇಹ್ಯವನ್ನು ಬೆಳಗಿನ ಜಾವ ಹಸಿದ ಹೊಟ್ಟೆಯಲ್ಲಿ ಇಪ್ಪತ್ತು ದಿನ ತಿನ್ನಿಸುವರು. ಹತ್ತು ದಿನದ ನಂತರ ದಿನಾ ಬೆಳಿಗ್ಗೆ, ಮಧ್ಯಾಹ್ನ, ಸಂಜೆ, ರಾತ್ರಿ ಬಾಣಂತಿಗೆ ವೀಳ್ಯದೆಲೆಯನ್ನು ತಿನ್ನಿಸುತ್ತಾರೆ. ಬಾಣಂತಿಗೆ ಇದು ಒಳ್ಳೆಯದೆಂದು, ವೀಳ್ಯದೆಲೆ ಮತ್ತು ಸುಣ್ಣದಲ್ಲಿರುವ ಕ್ಯಾಲ್ಸಿಯಮ್ ಮಗು ಹಾಗೂ ಬಾಣಂತಿಗೆ ಒಳ್ಳೆಯದೆಂದು ಹಿರಿಯರು ಹೇಳುತ್ತಾರೆ. ಮರಾಟಿಗರು ಉಪಯೋಗಿಸುವ ಬಾಣಂತಿ ಔಷಧಿ ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶ ಭಿನ್ನಭಿನ್ನವಾಗಿರುವುದು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಕಂಡುಬಂದಿರುತ್ತದೆ"[೯].

೩.೩. ಮಗುವಿಗೆ ಮಾಡುವ ಏಳಿರುಳು ಶಾಸ್ತ್ರ

"ಹಡೆದ ಏಳನೇ ದಿನ ಏಳಿರುಳು ಶಾಸ್ತ್ರವನ್ನು ಮಗುವಿಗೆ ಮಾಡುತ್ತಾರೆ. ಇದನ್ನು ಏಳನೆಯ ದಿನ ರಾತ್ರಿ ೭ ರಿಂದ ೮ ಗಂಟೆಯ ಹೊತ್ತಿಗೆ ಮಾಡುತ್ತಾರೆ. ಆ ದಿನ ಮಗುವಿನ ಹಣೆಯಲ್ಲಿ ಬ್ರಹ್ಮ 'ಹಣೆ ಬರಹ'ವನ್ನು ಬರೆಯುವನೆಂದು ಹಿಂದಿನವರ ನಂಬಿಕೆ. ಈ ಶಾಸ್ತ್ರವನ್ನು ಹಿಂದಿನವರು ಪ್ರತಿ ಮಗುವಿಗೂ ಮಾಡುತ್ತಿದ್ದರಂತೆ. ಕೊನೆಗೆ ಮೊದಲಿನ ಮಗುವಿಗಾದ್ರೂ ಮಾಡಲೇಬೇಕೆಂದು ಹೇಳುತ್ತಾರೆ"[೧೦].

ಆ ದಿನ ರಾತ್ರಿ ಬಾಣಂತಿ ಮತ್ತು ಮಗುವಿನ ತಲೆಗೆ ಸ್ವಲ್ಪ ಎಣ್ಣೆ ಹಚ್ಚುತ್ತಾರೆ. ಕಣ್ಣಿಗೆ ಕಾಡಿಗೆಯನ್ನು ಇಬ್ಬರೂ ಹಚ್ಚಿಕೊಳ್ಳುತ್ತಾರೆ. ಬೆಣ್ಣೆಯಲ್ಲಿ ಜಾಯಿಕಾಯಿ, ಬಜೆ, ಹಿಪ್ಲಿ ತೇಯ್ದು ಮಗುವಿನ ಕೈಯಲ್ಲೇ

ನೆಕ್ಕಿಸುವರು. ಅಕ್ಕಿ ಹಿಟ್ಟಿನಲ್ಲಿ ಒಂದು ಹೆಣ್ಣು, ಒಂದು ಗಂಡು ಬೊಂಬೆ ಮಾಡಿಟ್ಟುಕೊಳ್ಳುತ್ತಾರೆ. ಬಾಣಂತಿ ಈ ಶಾಸ್ತ್ರವನ್ನು ಮಾಡುವಾಗ ಪೂರ್ವ ದಿಕ್ಕಿಗೆ ಮುಖ ಮಾಡಿ ಕುಳಿತುಕೊಳ್ಳಬೇಕು. ಬಾಣಂತಿ ಕುಳಿತ ಎದುರುಗಡೆ ಎಡಕ್ಕೆ ಸೂರ್ಯ, ಬಲಕ್ಕೆ ಚಂದ್ರ, ಮಧ್ಯ ತುಳಸಿಕಟ್ಟೆ ಗಿಡ ಬರೆಯಬೇಕು. ಅದರ ಮೇಲೆ ಏಳು ಅಕ್ಕಿ ಕಾಳು, ಏಳು ಗರಿಕೆಗೆ, ಗಂಧ ಹಚ್ಚಿ ಮೂರರ ಮೇಲು ಇಡಬೇಕು. ಸೂರ್ಯನ ಮೇಲಿರುವ ಅಕ್ಕಿಯನ್ನು ಹಲ್ಲುಗಳಿಗೆ ತಗುಲಿಸದೇ ನುಂಗಬೇಕು. ಚಂದ್ರನ ಮೇಲಿರುವ ಅಕ್ಕಿಯನ್ನು ಹಣೆಗೆ ಹಚ್ಚಿಕೊಳ್ಳಬೇಕು. ತುಳಸಿ ಕಟ್ಟೆ ಮೇಲಿರುವ ಅಕ್ಕಿಯನ್ನು ಸೂರ್ಯ ಚಂದ್ರರಿಗೆ ಹಾಕಿ ಕೈ ಮುಗಿದು, ಮೂರರ ಮೇಲಿರುವ ಗರಿಕೆಯನ್ನು ತಲೆಗೆ ಸಿಕ್ಕಿಸಿಕೊಳ್ಳಬೇಕು.

ಈ ಶಾಸ್ತ್ರ ಮಾಡುವ ಮುನ್ನ ಸೂರ್ಯ, ಚಂದ್ರ, ತುಳಸಿಗಿಡದ ಚಿತ್ರ ಬರೆದ ಮೇಲೆ ಒಂದು ದೀಪ ಹಚ್ಚಿಟ್ಟುಕೊಂಡು ಬಾಣಂತಿ ಆ ದಿನ ಹಣೆಗೆ ಕುಂಕುಮ ಹಚ್ಚಿಕೊಳ್ಳಬೇಕು. ಹಚ್ಚಿದ ದೀಪ ರಾತ್ರಿಯೆಲ್ಲಾ ಉರಿಯುತ್ತಿರಬೇಕು. ಆ ದಿನ ರಾತ್ರಿ ವಿಧಿ ದೇವತೆ ಬಂದು ಮಗುವಿನ ಹಣೆಯಲ್ಲಿ 'ಹಣೆ ಬರಹ'ವನ್ನು ಬರೆಯುತ್ತಾಳೆಂದು ಹಿರಿಯರ ನಂಬಿಕೆ. ಆದ್ದರಿಂದ ರಾತ್ರಿ ೨–೩ ಗಂಟೆಯವರೆಗೆ ದೀಪ ಉರಿಯುತ್ತಿರಬೇಕು. ಈ ಎಲ್ಲಾ ಶಾಸ್ತ್ರವನ್ನು ಬಾಣಂತಿ ಮಗುವನ್ನು ಎತ್ತಿಕೊಂಡೆ ಮಾಡಬೇಕು. ನಂತರ ಮಗುವನ್ನು ಎತ್ತಿಕೊಂಡು ಮೂರು ಸುತ್ತು ಪ್ರದಕ್ಷಣೆ ಕೈ ಮುಗಿಯಬೇಕು.

ಬಾಣಂತಿಯನ್ನು ಮುಟ್ಟದೇ ಇದ್ದವರು ನೀರಿನ ಲೋಟಕ್ಕೆ ಅಕ್ಕಿಕಾಳು ಹಾಕಿಕೊಂಡು ಬಾಣಂತಿ ಮಗುವಿಗೆ ನಿವಾಳಿಸಬೇಕು ಮತ್ತೆ ಅಕ್ಕಿ ಹಿಟ್ಟಿನಲ್ಲಿ ಬೊಂಬೆ ಮಾಡಿದ್ದರೆ ಅದರಿಂದ ಅಥವಾ ಸ್ವಲ್ಪ ಅನ್ನದಲ್ಲಿ ಮಗುವಿಗೆ ಬಾಣಂತಿಗೆ ನಿವಾಳಿಸಿ, ಗುಂಡಿ ತೋಡಿ ಹುಗಿಯಬಹುದು, ಇಲ್ಲದಿದ್ರೆ ಯಾರೂ ಓಡಾಡದ ಜಾಗದಲ್ಲಿ ಎಸೆಯಬಹುದು. ಹಿಂದೆಲ್ಲಾ ಆಮೆ ಹೊಂಡಕ್ಕೆ ಹಾಕುತ್ತಿದ್ದರಂತೆ. ಈಗ ಆಮೆ ಹೊಂಡ ಇರುವುದಿಲ್ಲ.

ಆ ದಿನ ಗಂಡನ ಅಕ್ಕ ಪಕ್ಕದ ಮನೆಯವರನ್ನು ಕರೆಯಬಹುದು. ಬಂದವರಿಗೆ ಪಂಜಕಜ್ಜಾಯ, ಕಡ್ಲೆಕಾಳು ಉಸುಳಿ ಮಾಡಿ ಹಂಚುವರು ಗಂಡನ ಮನೆಯವರು ಬಂದಿದ್ದರೆ, ರಾತ್ರಿ ಊಟಕ್ಕೆ ಏನಾದ್ರೂ ವಿಶೇಷ ತಿಂಡಿ (ಸುಕ್ಕಿನುಂಡೆ, ಬಿಸ್ಕುಟು ಆಂಬೊಡೆ) ಮಾಡಿ ಹಾಕುತ್ತಾರೆ.

೩.೪. ನಾಮಕರಣ

ಮಗು ಹುಟ್ಟಿದ ಹನ್ನೊಂದನೆಯ ದಿನ ತೊಟ್ಟಿಲು ಹಾಕಲು ಯಾವುದೇ ಮುಹೂರ್ತ ನೋಡುವ ಅಗತ್ಯವಿಲ್ಲ. ಏಕೆಂದರೆ ಆ ದಿನ ತುಂಬಾ ಪವಿತ್ರವಾಗಿರುತ್ತದೆ ಎಂಬ ನಂಬಿಕೆ. ಒಂದು ವೇಳೆ ಆ ದಿನ ಆಗದಿದ್ದರೆ ಬೇರೆ ದಿನ ಮತ್ತು ಮುಹೂರ್ತ ನೋಡಬೇಕು. ಸಾಮಾನ್ಯವಾಗಿ ಮಗು ಹುಟ್ಟಿದ ಹದಿನಾರನೆಯ ದಿನದಂದು ಮಗುವಿಗೆ ಹೆಸರು ಇಡುವ ಪದ್ಧತಿ ಹೆಚ್ಚಾಗಿ ಮರಾಟಿ ಸಮುದಾಯದಲ್ಲಿ ಕಂಡುಬರುತ್ತದೆ. ಹುಟ್ಟಿದ ದಿನ ನಿಶ್ಚಿಯವಾದರೆ ನಕ್ಷತ್ರ ವಾರಕ್ಕೆ ಹೊಂದಿಕೆಯಾಗುವ ಹೆಸರನ್ನು ಮಕ್ಕಳಿಗೆ ಇಡುತ್ತಾರೆ. ತೊಟ್ಟಿಲಿಗೆ ಮಗುವನ್ನು ಹಾಕುವ ಕ್ರಮ ಹೆಚ್ಚಾಗಿ ಪೂರ್ವಾಹ್ನವೇ ನಡೆಯುತ್ತದೆ. ಕೆಲವು ಗ್ರಾಮಾಂತರ ಪ್ರದೇಶದಲ್ಲಿ ಸಂಜೆ ಗೋಧೋಳಿ ಲಗ್ನದಲ್ಲಿ ತೊಟ್ಟಿಲಿಗೆ ಹಾಕುತ್ತಾರೆ. ತೊಟ್ಟಿಲಿಗೆ ಹಾಕುವ ದಿನ ಮಗುವಿಗೆ ಎಣ್ಣೆ ಹಚ್ಚಿ ಸ್ನಾನ ಮಾಡಿಸಿ ಹೊಸ ಬಟ್ಟೆ ಉಡಿಸಿ, ಕಣ್ಣಿಗೆ ಕಾಡಿಗೆ ಹಚ್ಚಿ, ಹಣೆಗೆ ತಿಲಕ ಇಟ್ಟು, ಕೆನ್ನೆಗೆ ದೃಷ್ಟಿ ಬೊಟ್ಟು ಇಟ್ಟು ಅಲಂಕಾರ ಮಾಡಿ ಆ ದಿನ ಬಜೆ, ಜಾಯಿಕಾಯಿ ಎಲ್ಲವನ್ನೂ ತೇದು ಮಗುವಿನ ಬಾಯಿಗೆ ಹಚ್ಚುತ್ತಾರೆ.

"ತೊಟ್ಟಿಲನ್ನು ತೊಳೆದು ಒರೆಸಿ ಅದಕ್ಕೆ ಆಚೆ, ಈಚೆ ಬದಿ ಸೂರ್ಯ, ಚಂದ್ರರನ್ನು ಬಿಡಿಸಿ ಹೂಗಳಿಂದ ಶೃಂಗಾರ ಮಾಡಿ, ಚೆನ್ನೇರಿಬಳ್ಳಿ"[೧೧] (ಚೆನ್ನೆದ ಬೂರು)ಯನ್ನು ಅದರ ಸುತ್ತ ಸುತ್ತುತ್ತಾರೆ. ತೊಟ್ಟಿಲಿಗೆ ಗರಿಕೆ ಹುಲ್ಲು, ಸೆಗಣಿ ಮತ್ತು ಕಾಸರಕನ ಮರದ ಎಲೆಯನ್ನು ಮಗುವಿಗೆ ದೃಷ್ಟಿಯಾಗದಂತೆ ಕಟ್ಟುತ್ತಾರೆ. ಮರಾಟಿಗರು ಮಗುವನ್ನು ತೊಟ್ಟಿಲಿಗೆ ಹಾಕುವ ಮುನ್ನ ಒಂದು ಆಚರಣೆಯನ್ನು ಮಾಡುತ್ತಾರೆ. ಒಂದು ಗುಂಡು ಕಲ್ಲನ್ನು (ಲಕ್ಷಣವಿರುವ) ಮಡಿ ಬಟ್ಟೆಯಲ್ಲಿ ಹಿಡಿದುಕೊಂಡು ಅದನ್ನು ಬಾಣಂತಿಯ ತಾಯಿಗೆ ಕೊಡುತ್ತಾರೆ. ತೊಟ್ಟಿಲ ಆಚೆ ಇಬ್ಬರೂ ಈಚೆಗೆ ಇಬ್ಬರೂ ಮೂರು ಬಾರಿ ಬಾಣಂತಿಯ ಅತ್ತೆಯ ಕೈಗೆ ಕೊಡುತ್ತಾರೆ. (ಕೆಲವು ಕಡೆಯಲ್ಲಿ ಸಿಪ್ಪೆ ತೆಗೆದ / ತೆಗೆಯದ ತೆಂಗಿನಕಾಯಿಯನ್ನು) ನಂತರ ಆ ಕಲ್ಲನ್ನು ತೊಟ್ಟಿಲ ಒಳಗೆ ಮಲಗಿಸುತ್ತಾರೆ. ನಂತರ ಕಲ್ಲನ್ನು ತೆಗೆದು ಮಗುವನ್ನು ಮೂರು ಬಾರಿ ತೊಟ್ಟಿಲ ಕೆಳಭಾಗದಿಂದ ಅದಲು ಬದಲು ಮಾಡಿಕೊಳ್ಳುತ್ತಾರೆ. ಕೊನೆಗೆ ಬಾಣಂತಿಯ ಅತ್ತೆ ಮಗುವನ್ನು ತೊಟ್ಟಿಲಲ್ಲಿ ಮಲಗಿಸುತ್ತಾರೆ. ನಂತರ ಮುತ್ತೈದೆಯರು ಜೋಗುಳ ಹಾಡುವರು. ಸಾಮಾನ್ಯವಾಗಿ ಅಜ್ಜ, ಅಜ್ಜಿಯರ ಹೆಸರನ್ನು ಮಗುವಿಗೆ ಇಡುವರು. ಇನ್ನು ಕೆಲವೊಂದು ಕಡೆ ಮರಾಟಿಗರಲ್ಲಿ ಮಗುವಿನ ಮಾವ ಸಂಬಂಧಿ ಮಗುವಿನ ಕಿವಿಯಲ್ಲಿ ಹೆಸರನ್ನು ಕೂಗಿ ಕರೆಯುತ್ತಾರೆ. ನಂತರ ಬಂದಂತಹ ಕುಟುಂಬಸ್ಥರು ಮತ್ತು ನೆರೆಹೊರೆಯವರಿಗೆ ಪಂಚಕಜ್ಜಾಯಯನ್ನು ಹಂಚುತ್ತಾರೆ.

೩.೫. ಅನ್ನಪ್ರಾಶನ

"ಮಾನವ ಶರೀರಕ್ಕೆ ದ್ರವ ಆಹಾರ ಎಷ್ಟು ಮುಖ್ಯವೋ ಅಷ್ಟೇ ಪೋಷಕಾಂಶಯುಕ್ತ ಘನ ಆಹಾರ ಪದಾರ್ಥಗಳು ಮುಖ್ಯ. ಮಗುವಿಗೆ ಅನ್ನವನ್ನು ನೀಡುವ ಪ್ರಥಮ ಹಂತದ ಆಚರಣೆ ಅನ್ನಪ್ರಾಶನ. ಸಾಮಾನ್ಯವಾಗಿ ಮಗುವಿಗೆ ಆರನೇ ತಿಂಗಳಲ್ಲಿ ಅನ್ನಪ್ರಾಶನ ಸಂಸ್ಕಾರ ಮಾಡುವುದು ಹಿತಕರವೆಂದು ಆಯುರ್ವೇದ ತಜ್ಞ ಸುಶ್ರುತ ಅಭಿಪ್ರಾಯವಾಗಿರುತ್ತದೆ"[೧೨]. ಸಾಮಾನ್ಯವಾಗಿ ಹಲ್ಲು ಮೂಡುವ ಸಂದರ್ಭದಲ್ಲಿ ಜೀರ್ಣಶಕ್ತಿ ವೃದ್ಧಿಸುವ ಲಕ್ಷಣ ಕಂಡುಬರುವುದು.

"ಮರಾಟಿಗರಲ್ಲಿ ಬೆಸಸಂಖ್ಯೆಯ ತಿಂಗಳುಗಳ ಪ್ರಾಯದಲ್ಲಿ ಘನ ಆಹಾರವನ್ನು (ಅನ್ನಪ್ರಾಶನ) ನೀಡುವುದು ಗಮನಿಸಿರುವೆನು. ಇವರಲ್ಲಿ ತೆನೆಕಟ್ಟುವ (ಕದಿರು ಕಟ್ಟುವ) ಹಬ್ಬದ ಸಂದರ್ಭದಲ್ಲಿ ಅಥವಾ ಹೊಸ ಅಕ್ಕಿ ಊಟ ಮಾಡುವ ದಿನದಂದು ಅಥವಾ ಮಹಾನವಮಿ (ವಿಜಯದಶಮಿ) ದಿನದಂದು ಇನ್ನೂ ಕೆಲವರು ಗಣೇಶ ಚತುರ್ಥಿಯ ದಿನದಂದು ದೇವಸ್ಥಾನದಲ್ಲಿ ಮಗುವಿಗೆ ಅನ್ನಪ್ರಾಶನ ಆಚರಣೆ ನಡೆಸುವರು"[೧೩]. ಹರಕೆ ಹೇಳಿಕೊಂಡಿರುವವರು ಮಂದಾರ್ತಿ ಶ್ರೀ ದುರ್ಗಾಪರಮೇಶ್ವರಿ, ಕಟೀಲು ಶ್ರೀ ದುರ್ಗಾಪರಮೇಶ್ವರೀ ದೇವಸ್ಥಾನದಲ್ಲಿ ಅನ್ನಪ್ರಾಶನ ಮಾಡುವರು. ಮತ್ತೆ ಕೆಲವರು ಹರಕೆ ಹೇಳಿಕೊಂಡಿರುವವರು ಸ್ಥಳೀಯ ದೇವಸ್ಥಾನದ ಜಾತ್ರೆಯ ಸಂದರ್ಭಗಳಿಗೆ ದೇವರ ಪಲ್ಲಪೂಜೆ ಆದ ನಂತರ ಮಗುವಿಗೆ ಅನ್ನಪ್ರಾಶನ ಮಾಡುವ ಆಚರಣೆ ಕಂಡುಬರುತ್ತದೆ. ಅನುಕೂಲಸ್ಥರು ಹೆಚ್ಚಿನ ಕಡೆ ಕುಲಪುರೋಹಿತರನ್ನು ಅಥವಾ ಮರಾಟಿಗರ ದೇವಸ್ಥಾನದ ತಮ್ಮ ಅರ್ಚಕರ ಸಮ್ಮುಖದಲ್ಲಿ ಹಾಗೂ ಕುಟುಂಬ ಸದಸ್ಯರ ಸಮ್ಮುಖದಲ್ಲಿ ಈ ಕ್ರಿಯಾಚರಣೆ ನಡೆಸುತ್ತಾರೆ. ಕೆಲವೊಂದು ಕಡೆ ಚಿನ್ನ, ಬೆಳ್ಳಿಯ ಅಥವಾ ಪಂಚಲೋಹದ ಪಾತ್ರೆಯಲ್ಲಿ ಪಾಯಸವನ್ನು ಹಾಕಿ ತಿನಿಸುವರು. ಎರಡು ಸಮುದಾಯದವರು ಹೆಚ್ಚಿನವರು ಕೃಷಿ ಬೇಸಾಯಗಾರ ಹಿನ್ನೆಲೆಯವರಾಗಿದ್ದು, ಅನ್ನವೇ ಅವರ ಪ್ರಧಾನ ಆಹಾರ ಆಗಿರುವುದರಿಂದ ಈ ಆಚರಣೆಯನ್ನು ಹೆಚ್ಚಿನ ಪ್ರಾಶಸ್ತ ಕೊಟ್ಟು ಆಚರಿಸುತ್ತಾರೆ.

"ವೈದಿಕರಲ್ಲಿ ಅನ್ನಪ್ರಾಶನದ ನಿಮಿತ್ತ ಹೋಮ ಮಾಡಿ ಈ ಪವಿತ್ರಾಗ್ನಿಯಲ್ಲಿ ಹಾಲು, ತುಪ್ಪ, ಅನ್ನ ಬೇರೆಸಿದ ಪಾಯಸವನ್ನು ಬೆಳ್ಳಿಯ ಪಾತ್ರೆಯಲ್ಲಿ ತಯಾರಿಸಿ, ತಣಿದ ನಂತರ ಜೇನುತುಪ್ಪ ಸುರಿಸುತ್ತಾ ಮಂತ್ರಪೂರ್ವಕ ಪ್ರಾರ್ಥಿಸಿ, ಮಗುವಿನ ತಾಯಿ ಮಗುವನ್ನು ತನ್ನ ತೊಡೆಯಲ್ಲಿರಿಸಿ, ಮಗುವಿನ ತಂದೆಯೊಡಗೂಡಿ ಮಂತ್ರ ಹೇಳಿ ಅನ್ನವನ್ನು ನೀಡುವರು. ಅಲ್ಲದೆ ನೆರೆದ ಸಂಬಂಧಿಕರು ಮಗುವಿನ ನಾಲಗೆಗೆ ಚಮಚದಿಂದ ದೇವರ ಅನ್ನಪ್ರಸಾದವನ್ನು ತಾಗಿಸುವರು"[೧೪].

ಮರಾಟಿಗರು ಮತ್ತು ಮರಾಟಿ ನಾಯ್ಕರು ಮಗುವಿನ ಶಾರೀರಿಕ, ಮಾನಸಿಕ ಬೆಳವಣಿಗೆಗೆ ಘನ ಆಹಾರದ ಅಗತ್ಯತೆಯನ್ನು ಮನಗಂಡಿರುತ್ತಾರೆ. "ಅನ್ನ"ವು ಜೀವದಾತು ಎಂಬ ಕಲ್ಪನೆಯ ಜೊತೆಗೆ ಧಾರ್ಮಿಕ ನಂಬಿಕೆ ಇವರಲ್ಲಿದೆ. ಆದ್ದರಿಂದ "ಅನ್ನಬ್ರಹ್ಮ" ಎಂಬ ಭಾವನೆ ವ್ಯಕ್ತವಾಗುತ್ತದೆ. ಆರೋಗ್ಯ ದೃಷ್ಟಿಯಿಂದ ಮತ್ತು 'ಸಂಪತಾಭಿವೃದ್ಧಿ'ಯಾಗಲಿ ಎಂಬ ಆಶಯ ಈ ಆಚರಣೆಯಲ್ಲಿ ವ್ಯಕ್ತವಾಗುತ್ತದೆ.

೩.೬. ಕಿವಿಚುಚ್ಚುವುದು(ಕರ್ಣಭೇದನ)

"ರಸಿಕ ಪುತ್ತಿಗೆ ಅವರ ಪ್ರಕಾರ ಕಿವಿಯು ಮಾನವ ದೇಹದ 'ಗಂಗೆಯಮುನೆ'ಯವರಂತೆ ಎರಡು ನದಿಗಳಿದ್ದಾಗಿ ಎಂಬುದಾಗಿ ಅಭಿಪ್ರಾಯ ಪಡುತ್ತಾರೆ"[೧೫]. "ಕಿವಿಗೆ ಆಭರಣ ಧರಿಸುವುದರಿಂದ ದೇಹದ ರಕ್ಷಣೆ, ಸೌಂದರ್ಯ ವೃದ್ಧಿಯಾಗುವುದರ ಜೊತೆಗೆ ಅಂಡವಾಯು ಹರ್ನಿಯಾ, ಹಿನ್ಸಿರಿಯಾ ರೋಗಗಳಿಗೆ ತಡೆ ಒಡ್ಡಿದಂತಾಗುವುದು"[೧೬]. "ಈ ಹಿನ್ನೆಲೆಯಲ್ಲಿ ವೈದಿಕರಲ್ಲಿ ಸ್ತ್ರೀ–ಪುರುಷರು ಎನ್ನದೆ ಕರ್ಣಾಭರಣ ಧರಿಸುವ ಸಂಪ್ರದಾಯ ಬೆಳೆದು ಬಂದಿರುವುದು"[೧೭]. "ಅಲ್ಲದೆ ಗಂಡು ಮಗುವಿಗೆ ಮೊದಲು ಬಲ ಕಿವಿ ಚುಚ್ಚಬೇಕು, ಹೆಣ್ಣು ಮಕ್ಕಳಿಗೆ ಮೊದಲು ಎಡ ಕಿವಿ ಚುಚ್ಚಬೇಕು ಎಂಬ ನಂಬಿಕೆ ಮರಾಟಿಗರಲ್ಲಿದೆ. ಜೊತೆಗೆ ಚಿನ್ನದ ಮೇಲೆ ಬಿದ್ದ ನೀರು ದೇಹದ ಮೇಲೆ ಬರುವುದು ಆರೋಗ್ಯಕರ ಎಂಬುದು ಕರ್ಣಭೇಧನ ಮೂಲ ಉದ್ದೇಶಗಳಾಗಿರಬಹುದು"[೧೮].

ಕರಾವಳಿ ಭಾಗದ ಮರಾಟಿ ನಾಯ್ಕ ಮತ್ತು ಮರಾಟಿಗರಲ್ಲಿ ತಮ್ಮ ಗಂಡು ಮಕ್ಕಳಿಗೆ ಒಂದು, ಮೂರು, ಐದನೇ ವರ್ಷದ ಪ್ರಾಯದಲ್ಲಿ (ಬೆಸ ವರ್ಷ) ಕಿವಿ ಚುಚ್ಚುವ ಪದ್ಧತಿ ಇದೆ. ಮರಾಟಿಗರಲ್ಲಿ ಹೆಣ್ಣು ಮಕ್ಕಳಿಗೆ ಮೂಗು ಚುಚ್ಚುವುದು ಹನ್ನೆರಡನೆಯ ವಯಸ್ಸಿನಲ್ಲಿ. ಎರಡು ಸಮುದಾಯದಲ್ಲಿ ಪುರೋಹಿತರಿಂದ ನಿರ್ಧಾರವಾಗಿರುವ ಮುಹೂರ್ತಕ್ಕೆ ಸರಿಯಾಗಿ ಅಕ್ಕಸಾಲಿಗರನ್ನು ತಮ್ಮ ಮನೆಗೆ ಕರೆಯಿಸಿಕೊಳ್ಳುವರು. ಹತ್ತಿರದ ಸಂಬಂಧಿಕರು (ರಕ್ತಸಂಬಂಧ) ಬಂಧುಗಳನ್ನು ಕರೆಯುವರು. ಈ ಆಚರಣೆಯನ್ನು ಮನೆಯ ಚಾವಡಿಯಲ್ಲಿ ನಡೆಸುವರು. ಈ ಆಚರಣೆ ಅಕ್ಕಸಾಲಿಗರ ಆಭರಣದ ಅಂಗಡಿಯಲ್ಲಿಯೂ ಕೆಲ ಸಾರಿ ನಡೆಯುವುದು. ಒಂದು ಗೆರಸೆ (ಹರಿವಾಣ)ಯಲ್ಲಿ ಒಂದು ಸೇರು ಬೇಳ್ತಕ್ಕಿ, ಒಂದು ತೆಂಗಿನ ಕಾಯಿ, ಸ್ವಲ್ಪ ಹೂವು, ತಾಂಬೂಲವನ್ನು ಚಾವಡಿಯ ಮಧ್ಯದಲ್ಲಿ ಇಡುತ್ತಾರೆ. (ಚಿನ್ನಾಭರಣ ಅಂಗಡಿಯಲ್ಲಿ ಕೂಡ ಈ ಆಚರಣೆ ನಡೆಯುತ್ತದೆ) ಅದರ ಬಲ ಬದಿಯಲ್ಲಿ ಮಗುವಿನ ತಂದೆ ಮಗುವಿನೊಂದಿಗೆ ತನ್ನ ತೊಡೆಯ ಮೇಲೆ ಕುಳ್ಳರಿಸುವನು. ತಾಯಿ ಸಿಹಿಯನ್ನು ಮಗುವಿಗೆ ಕೊಡುವಳು. ಅಲ್ಲಿ ಸೇರಿರುವ ಜನರು ಮಗುವಿನ ಆರೋಗ್ಯ, ತೇಜಸ್ಸು, ಆಯುಷ್ಯ ವೃದ್ಧಿಯಾಗಲಿ ಎಂದು ದೇವರಲ್ಲಿ ಪ್ರಾರ್ಥಿಸಿ ಮಗುವನ್ನು ಹರಸುತ್ತಾರೆ. ಅಕ್ಕಸಾಲಿಗನು ಬೆಳ್ಳಿಯ ಅಥವಾ ಚಿನ್ನದ ಸರಿಗೆಯಿಂದ ಗಂಡು ಮಗುವಿನ ಬಲ ಕಿವಿಗೆ, ಹೆಣ್ಣು ಮಗುವಿನ ಎಡ ಕಿವಿಗೆ ಮೊದಲು ತೂತು ಮಾಡಿ ಆಭರಣ ತೊಡಿಸುತ್ತಾನೆ. ನಂತರ ಮನೆಯ ಯಜಮಾನ ಅಕ್ಕಸಾಲಿಗನಿಗೆ ಗೆರಸೆಯಲ್ಲಿ ಪರಿಕರಗಳನ್ನು ಹಸ್ತಾಂತರಿಸುವನು. "ಮರಾಟಿ ನಾಯ್ಕರಲ್ಲಿ ಕಿವಿ ಚುಚ್ಚದೇ ಇರುವ ಹುಡುಗರನ್ನು

ತಮಾಷೆಗಾಗಿ 'ಮುಸಲ್ಮಾನ' ಎಂದು ಈಗಲೂ ಕೀಟಲೆ ಕೊಡುವುದು ಗ್ರಾಮಾಂತರ ಭಾಗದಲ್ಲಿ ಪ್ರಚಲಿತದಲ್ಲಿದೆ"[೧೯].

"ಅಬ್ಬೆ ಡೂಬ್ಯಾಸ್ ಜೆ.ಎ."[೨೦] "ಎನ್.ಎನ್. ಭಟ್ಟಾಚಾರ್ಯ"[೨೧], "ಪ್ರೋ: ಎಂ.ಎನ್. ಶ್ರೀನಿವಾಸ"[೨೨] ಅವರ ಕೃತಿಗಳಲ್ಲಿ ಕಿವಿಗೆ ಆಭರಣ ತೊಡಿಸುವುದರಿಂದ ಅಥವಾ ಕಿವಿಯಂಚಿನ ಮಧ್ಯಭಾಗಕ್ಕೆ ತೂತು ತೆಗೆಯುವುದರಿಂದ ಮತ್ತು ಹೆಣ್ಣು ಮಕ್ಕಳ ಮೂಗಿಗೆ ತೂತು ತೆಗೆಯುವುದರಿಂದ, ಮೈ ನೆರೆಯುವ ಸಂದರ್ಭದಲ್ಲಿ ಸಾಮಾನ್ಯವಾಗಿ ಹೆಣ್ಣು ಮಕ್ಕಳಲ್ಲಿ ಕಂಡುಬರುವ ತಲೆಸಿಡಿತ, ಕಣ್ಣು ಉರಿ ಬರುವುದಿಲ್ಲ. ಶಾರೀರಿಕ ಅಂಗ ವೈಫಲ್ಯವನ್ನು ತಡೆಯಲು ಮತ್ತು ಹೆಣ್ಣು ಮಕ್ಕಳ (ಮದುವೆಯ ಸಂದರ್ಭ) ಕಾಲಿನ ಬೆರಳುಗಳಿಗೆ ಬೆಳ್ಳಿಯ ಅಥವಾ ಪಂಚಲೋಹದ ಉಂಗುರ ತೊಡುವುದರಿಂದ ಹೆಂಗಸರಿಗೆ ಹೆರಿಗೆ ಸುಲಭವಾಗುವುದು. ಕೈಗೆ ಕಪ್ಪು ಬಳೆ ತೊಡುವುದರಿಂದ ದೃಷ್ಟಿದೋಷ ನಿವಾರಣೆಯಾವುದು ಎಂದು ಮರಾಟಿ ನಾಯ್ಕ ಮತ್ತು ಮರಾಟಿಗರು ತಮ್ಮ ಅನುಭವದಿಂದ ತಿಳಿಸಿರುವರು"[೨೩]. ಒಟ್ಟಿನಲ್ಲಿ ಅಲಂಕಾರ, ದೇಹಾರೋಗ್ಯ, ಆಯುಷ್ಯ ಮತ್ತು ತೇಜಸ್ಸು ವೃದ್ಧಿ ಎಂಬ ತತ್ತ್ವವನ್ನು ಆಧರಿಸಿ ಕಿವಿ, ಮೂಗು, ಕಾಲು, ಕೈಗಳಿಗೆ ಆಭರಣ ಧರಿಸುವ ಪದ್ಧತಿ ಈ ಎರಡು ಸಮುದಾಯಗಳಲ್ಲಿದೆ.

೩.೭. ಚೌಲ ಸಂಸ್ಕಾರ (ಚೂಡಾಕರ್ಮ / ಕಜಂಬು ಮದ್ವೆ)

"ಮೊದಲ ಸಲ ಮಗುವಿನ ತಲೆಕೂದಲನ್ನು ಕ್ಷೌರಿಕನಿಂದ ತೆಗೆಯುವುದಕ್ಕೆ "ಚೌಲ" ಎನ್ನುತ್ತಾರೆ. ತುಳುವಿನಲ್ಲಿ 'ಕಜಂಬುದ ಮದ್ವೆ' (ಮದ್ಮೆ) ಎಂದು ಕರೆಯಲಾತುತ್ತಿದೆ. ಡಾ. ವಿವೇಕ ರೈಯವರು ತುಳು ಜಾನಪದ ಸಾಹಿತ್ಯದಲ್ಲಿ ಗಂಡು ಮಕ್ಕಳ ಹುಟ್ಟು ಕೂದಲನ್ನು ಕತ್ತರಿಸುವ ಆಚರಣೆಗೆ 'ಚೌಲ' 'ಚವಳ' 'ಮುಡಿ' ಸಂಸ್ಕಾರ ಎಂದು ಅಭಿಪ್ರಾಯ ಪಟ್ಟಿರುತ್ತಾರೆ"[೨೪].

ಚರಕ ಮತ್ತು ಸುಶ್ರುತ ಇವರಿಬ್ಬರ ಅಭಿಪ್ರಾಯದಂತೆ ಹುಟ್ಟು ಕೂದಲು, ಉಗುರುಗಳನ್ನು ತೆಗೆಯುವುದರಿಂದ ಮಗುವಿನ ಆರೋಗ್ಯ ಸುಧಾರಿಸುವುದು. ತೇಜಸ್ಸು ಸೌಂದರ್ಯ, ಬಲ ಸಂವರ್ಧಿಸುವುದು. ಇದರಿಂದಾಗಿ ಆತನ ಮನಸ್ಸಿಗೆ ಶಾಂತಿ ಬರುವುದು ಎಂದಿದ್ದಾರೆ.

"ಮರಾಟಿ ನಾಯ್ಕರು ನಿಗದಿಪಡಿಸಿದ ದಿನ ಕ್ಷೌರಿಕನನ್ನು ಕರೆಸುತ್ತಾರೆ. ಪ್ರಥಮ ಬಾರಿಗೆ ಮಗುವಿನ ತಲೆಗೆ ಕತ್ತರಿ ಹಾಕುವುದನ್ನು. ಇವರು 'ಕಜಂಬುದ ಮದ್ಮೆ' ಎಂದು ಕರೆಯುವರು. ಕ್ಷೇತ್ರಕಾರ್ಯ ಸಂದರ್ಭದಲ್ಲಿ ಮರಾಟಿ ನಾಯ್ಕ ಸಮುದಾಯದ ಮಗುವಿನ ಕೂದಲನ್ನು ಕತ್ತರಿಸಿರುವುದನ್ನು ಗಮನಿಸಿರುವೆನು"[೨೫]. "ಮರಾಟಿಗರ ಚೌಲದ ಆಚರಣೆಯನ್ನು ಅವರ ಹಿರಿಯ ಮಗನ ತಲೆ ಕೂದಲನ್ನು ಕತ್ತರಿಸುವಾಗ ಆರ್ಥಿಕ ಶಕ್ತಿಯುಳ್ಳವರು ಊರಿನವರನ್ನು ಮತ್ತು ಜಾತಿಯ ಜನರನ್ನು ಕರೆಸಿ ಊಟೋಪಚಾರದ ವ್ಯವಸ್ಥೆ ಮಾಡುವರು. ಹುಡುಗನಿಗೆ ೫, ೭, ೧೧ ವರ್ಷ ಪ್ರಾಯದಲ್ಲಿ ಚೌಲದ ಆಚರಣಾ ವಿಧಿಯನ್ನು ಮಾಡುವರು. ಈ ಸಂದರ್ಭದಲ್ಲಿ ಜಾತಿಯ ಮುಖಂಡ ಗುರಿಕಾರ ಉಪಸ್ಥಿತರಿರುವರು. ಸಂಬಂಧಿಕರನ್ನು ಈ ಕಾರ್ಯಕ್ರಮಕ್ಕೆ ಆಮಂತ್ರಿಸುವರು. ಮನೆಯಲ್ಲಿ ಬೆಳಗ್ಗೆ ಈ ಆಚರಣೆಯನ್ನು ಮಾಡುವರು. ನಿರ್ದಿಷ್ಟವಾದ ಜಾಗದಲ್ಲಿ ನೆಲದ ಮೇಲೆ ಮರದ ಮಣೆಯನ್ನು ಇಡುತ್ತಾರೆ. ಅದರ ಮೇಲೆ ಅಗಸನು ಅಥವಾ ಕ್ಷೌರಿಕನು ಮಡಿಬಟ್ಟೆ ಹಾಸುವನು. ಮನೆಯ ಯಜಮಾನ್ತಿ ಒಂದು ಹರಿವಾಣ ಅಥವಾ ಗೆರಸೆಯಲ್ಲಿ ಐದು ತೆಂಗಿನಕಾಯಿ, ಕುಚಲಕ್ಕಿ, ವೀಳ್ಯದೆಲೆ, ಅಡಿಕೆ ಸ್ವಲ್ಪ ಹಣ ಇಟ್ಟು ಕಾಲು ದೀಪವನ್ನು ಮಣೆಯ ಬದಿಯಲ್ಲಿ ಇಡುವರು. ಜೊತೆಗೆ ಕ್ಷೌರಿಕ ತಂದಿರುವ

ಬಟ್ಟೆಯನ್ನು ಹಾಸುವಳು. ಸ್ನಾನ ಮಾಡಿ ಬಂದ ಬಾಲಕನನ್ನು ತಂದೆ ಅಥವಾ ಅಜ್ಜ (ಹಿರಿಯ ವ್ಯಕ್ತಿ) ಮಣೆ ಮೇಲೆ ಕುಳ್ಳಿರಿಸುವನು. ಕ್ಷೌರಿಕನು ನೆರೆದ ಜನರ ಒಪ್ಪಿಗೆ ಪಡೆದು, ದೇವರಲ್ಲಿ ಪ್ರಾರ್ಥಿಸಿ, ಹುಡುಗನ ಬಲ ಮತ್ತು ಎಡ ಕಿವಿಯ ಮೇಲ್ಭಾಗಕ್ಕೆ ಸ್ವಲ್ಪ ನೀರು ತಾಗಿಸಿ ಸ್ವಲ್ಪ ಕೂದಲನ್ನು ಕತ್ತರಿಸುವನು. ತದನಂತರ ನೆರಳಿರುವ ಮರದ ಅಡಿಗೆ ಕರೆದುಕೊಂಡು ಹೋಗಿ ಕ್ಷೌರಿಕನು ತಲೆಕೂದಲನ್ನು ಕತ್ತರಿಸುವನು. ಈ ತಲೆಕೂದಲನ್ನು ಹಾಲು ಒಸರುತ್ತಿರುವ ಮರದ ಬುಡಕ್ಕೆ ಅಥವಾ ಹಾಲೆ ಮರದ ಬುಡದ ಮಣ್ಣಿನಲ್ಲಿ ಹುಗಿಯುವರು. ಮರಾಟಿಗರು ಹುಟ್ಟಿದ ಗಂಡು ಮಕ್ಕಳಿಗೆ ಒಂದು ವರ್ಷ, ಮೂರು, ಐದು ವರ್ಷದೊಳಗೆ ಕೇಶಮಂಡನ ಮಾಡುವ ಸಂಪ್ರದಾಯವಿದೆ ಎಂಬ ಮಾಹಿತಿಯನ್ನು ಕ್ಷೇತ್ರಕಾರ್ಯ ಸಂದರ್ಭದಲ್ಲಿ ನೀಡಿರುವರು"[೨೬]. ಈ ಆಚರಣೆಯನ್ನು ಮರಾಟಿ ನಾಯ್ಕ ಮತ್ತು ಮರಾಟಿಗರು ಮಾತ್ರ ಮಾಡುವುದಲ್ಲದೇ ಸ್ಥಳೀಯ ಬಂಟರು, ಮೊಗವೀರ, ಬಿಲ್ಲವ, ಸೆಟ್ಟಿಗಾರ, ದೇವಾಡಿಗ, ಮೂಲ್ಯರಲ್ಲೂ ಈ ಆಚರಣೆ ಕಂಡು ಬರುತ್ತದೆ.

ಮರಾಟಿ ಮತ್ತು ಮರಾಟಿ ನಾಯ್ಕರ ಈ ಸಂಸ್ಕಾರವು ವೈದಿಕ ಪದ್ಧತಿಯ ಚೌಲ ಸಂಸ್ಕಾರವನ್ನು ಹೋಲುತ್ತದೆ. ಈ ಎಲ್ಲಾ ಸಮುದಾಯಗಳ ಒಟ್ಟು ಆಶಯ 'ಹುಟ್ಟುವ ಸಮಯದ ಕೂದಲು ಅಶುದ್ಧ ಮತ್ತು ಅದನ್ನು ಕತ್ತರಿಸುವುದರಿಂದ ಮಕ್ಕಳ ಆರೋಗ್ಯ ಸುಧಾರಿಸಿ, ಬಲ, ತೇಜಸ್ಸು, ಬರುವುದೆಂದು ತಮ್ಮ ಅಭಿಪ್ರಾಯ ವ್ಯಕ್ತಪಡಿಸುವರು. ಅಲ್ಲದೆ, ಮಗುವಿನ ಮೊದಲ ಕೂದಲನ್ನು (ಪವಿತ್ರ ಎಂಬ ಭಾವನೆ) ದೇವರ ಮುಡಿಗೆ ಅರ್ಪಿಸುವ ಪದ್ಧತಿ ಎರಡು ಸಮುದಾಯದಲ್ಲಿದೆ. ಇತ್ತೀಚೆಗೆ ಎರಡು ಸಮುದಾಯದವರು ಸ್ಥಳೀಯ ಸಂಸ್ಕೃತಿಯ ಪ್ರಭಾವ, ಆಧುನೀಕರಣದಿಂದಾಗಿ ತಿರುಪತಿ ಮತ್ತು ಸುಬ್ರಮಣ್ಯ ದೇವಾಲಯಕ್ಕೆ ಹೋಗಿ ಮುಡಿ ಅರ್ಪಿಸುವುದನ್ನು ಗಮನಿಸಬಹುದು.

೩.೮. ವಿದ್ಯಾರಾಂಭ (ಅಕ್ಷರಾರಂಭ)

"ಈ ಸಂಸ್ಕಾರವನ್ನು 'ವಿದ್ಯಾರಂಭ', 'ಅಕ್ಷರಾರಂಭ' ಎಂಬ ಪರ್ಯಾಯ ಪದಗಳಿಂದ ಗುರುತಿಸುವುದು ಕಂಡುಬರುತ್ತದೆ. ಮರಾಟಿ ನಾಯ್ಕ ಮತ್ತು ಮರಾಟಿಯವರಲ್ಲಿ ಗಂಡು ಮತ್ತು ಹೆಣ್ಣು ಮಕ್ಕಳಿಗೆ ಅವರ ಹುಟ್ಟಿನ ದಿನದಿಂದ ಐದನೇ ವರ್ಷದ ಪ್ರಾಯದಲ್ಲಿ ವಿದ್ಯಾರಂಭ ಸಂಸ್ಕಾರ ಮಾಡುವರು. ಈ ಆಚರಣೆ ವ್ಯಕ್ತಿಯನ್ನು ಕತ್ತಲೆಯಿಂದ ಬೆಳಕಿನತ್ತ, ಅಜ್ಞಾನದಿಂದ ಜ್ಞಾನದೆಡೆಗೆ ಕೊಂಡೊಯ್ಯಲು ಸಹಕರಿಸುವ ಆಚರಣೆ ಆಗಿರುತ್ತದೆ. ವಿದ್ಯಾರಂಭ ಸಂಸ್ಕಾರವು ಹೆಚ್ಚಾಗಿ ಎಲ್ಲಾ ಹಿಂದುಗಳಲ್ಲಿ ಕಂಡುಬರುತ್ತದೆ. ಮನೆಗಳಲ್ಲಿ, ಗುರುವಿನ ಮನೆಯಲ್ಲಿ, ಮಠಗಳಲ್ಲಿ, ದೇವಾಲಯಗಳಲ್ಲಿ ಇತ್ತೀಚೆಗೆ ಕೆಲವೊಂದು ಭಜನಾ ಮಂದಿರಗಳಲ್ಲಿ ಈ ಆಚರಣೆ ನಡೆಯುವುದನ್ನು ಕ್ಷೇತ್ರಕಾರ್ಯ ಸಂದರ್ಭದಲ್ಲಿ ಗಮನಿಸಲಾಗಿದೆ"[೨೭].

"ಈ ಆಚರಣೆಗೆ ಸಂಬಂಧಪಟ್ಟಂತೆ ಎರಡು ಸಮುದಾಯದವರು ತಮ್ಮ ಕುಲ ಪುರೋಹಿತರಲ್ಲಿ ಕೆಲ ಕಡೆ ಗ್ರಾಮದಲ್ಲಿ ವಾಸವಿರುವ ಪುರೋಹಿತರಲ್ಲಿ ವಿಚಾರಿಸಿ, ಅವರಿಂದ ಮುಹೂರ್ತವನ್ನು ನಿರ್ಣಯಿಸುತ್ತಾರೆ. ಸಾಮಾನ್ಯವಾಗಿ ಇತ್ತೀಚೆಗೆ ಗಣೇಶ ಚತುರ್ಥಿ ಅಥವಾ ಶರನ್ನವರಾತ್ರಿಯ ಶಾರದಾ ಮಹೋತ್ಸವ ಸಮಯದಲ್ಲಿ ಅಕ್ಷರಾಭ್ಯಾಸವನ್ನು ನೆರವೇರಿಸುವುದು ಕಂಡುಬಂದಿರುತ್ತದೆ. ಅನುಕೂಲಸ್ಥರು ತಮ್ಮ ಮನೆಗೆ ಪುರೋಹಿತರನ್ನು ಆಮಂತ್ರಿಸಿ, ಮನೆಯನ್ನು ಶುಚಿಗೊಳಿಸಿ, ಮಗುವಿಗೆ ಸ್ನಾನ ಮಾಡಿಸಿ, ಪುಣ್ಯಾಹವಾಚನ, ಗಣಹೋಮ ಮಾಡಿಸುವರು. ಗಣ ಹೋಮದ ಎದುರು ಭಾಗದಲ್ಲಿ ಅಕ್ಷರಾಭ್ಯಾಸಕ್ಕೆ ಹರಡಿರುವ ಅಕ್ಕಿಯ ಬಳಿ ಮಗುವನ್ನು ಪೂರ್ವಾಭಿಮುಖವಾಗಿ ಕುಳ್ಳಿರಿಸುವರು. ಗಣಹೋಮದ

ನಂತರ ತೀರ್ಥವನ್ನು ಮತ್ತು ಪುಣ್ಯಾಹ ವಾಚನ ತೀರ್ಥವನ್ನು ಮಗುವಿಗೆ ಮತ್ತು ನೆರೆದ ಎಲ್ಲರಿಗೂ ಸಿಂಪಡಿಸಿ, ಅರ್ಚಕರು ಮಗುವಿನ ಬಾಯಿಂದ "ಓಂ ಶ್ರೀ ಗಣೇಶಾಯ ನಮಃ ಓಂ ಶ್ರೀ ಸರಸ್ವತ್ಯೈ ನಮಃ" ಎಂದು ಮೂರು ಬಾರಿ ಹೇಳಿಸುವರು. ಅಲ್ಲದೆ ಮಗುವಿನ ಕೈಗಳಿಂದ ಇದೇ ಮಂತ್ರವನ್ನು ಅಕ್ಕಿ ಮೇಲೆ ಬರೆಸುವರು. ಮಗುವಿನ ಕೈಗಳಿಂದಲೇ ಕಾಣಿಕೆ ರೂಪದಲ್ಲಿ ಹೊಸ ಪಂಚೆ, ಶಾಲು, ಫಲ ತಾಂಬೂಲ ಹಾಗೂ ಹಣವನ್ನು ಕೊಡಿಸುವರು. ಅರ್ಚಕರು ಮಗುವು ಬುದ್ಧಿವಂತನೂ, ವಿದ್ಯಾವಂತನೂ, ಗುಣವಂತನೂ ಆಗಲೆಂದು ನೆರೆದ ಭಕ್ತರ ಸಮ್ಮುಖದಲ್ಲಿ ಹೇಳುವರು. ನಂತರ ಎಲ್ಲರೂ ಅನ್ನಪ್ರಸಾದವನ್ನು ಸ್ವೀಕರಿಸುವರು"[೨೮].

ಇತ್ತೀಚಿನ ವರ್ಷಗಳಲ್ಲಿ ಆಧುನಿಕ ಶಿಕ್ಷಣದ ಪ್ರಭಾವದಿಂದ ಮಕ್ಕಳನ್ನು ಆಂಗ್ಲಮಾಧ್ಯಮ ಶಾಲೆಗಳಿಗೆ ಅಥವಾ ಬಾಲವಾಡಿಗಳಿಗೆ ಕಳುಹಿಸುವ ಕಾರಣದಿಂದಾಗಿ ವಿದ್ಯಾರಂಭ ಸಂಸ್ಕಾರವನ್ನು ಮಗುವಿನ ಪ್ರಾಯ ಮೂರು ವರ್ಷ ಐದನೆಯ ತಿಂಗಳಲ್ಲಿ ನಡೆಸುವುದನ್ನು ಕ್ಷೇತ್ರಕಾರ್ಯ ಸಂದರ್ಭ ತಿಳಿದುಕೊಳ್ಳಲಾಗಿದೆ.

ವೈದಿಕ ಪದ್ಧತಿಯಲ್ಲಿ ಗಂಡು ಮಕ್ಕಳಿಗೆ ಐದು ವರ್ಷ ಐದು ತಿಂಗಳು, ಐದನೆ ದಿನ ಅಥವಾ ಐದು ವರ್ಷ ಒಂಬತ್ತು ತಿಂಗಳು, ಒಂಬತ್ತನೇ ದಿನ ಪವಿತ್ರವಾದುದು ಎಂದು ಕಲ್ಪಿಸಿ, ವಿದ್ಯಾರಂಭ ಸಂಸ್ಕಾರ ಮಾಡುವರು. ಆ ದಿನ ವಿದ್ಯಾರಂಭ ಮಾಡಿಸಿ, ಉಪನಯನ ಸಂಸ್ಕಾರ ಮಾಡುವರು. ಇತ್ತೀಚೆಗೆ ಇವೆರಡನ್ನೂ ಪ್ರತ್ಯೇಕವಾಗಿ ಮಾಡುವುದನ್ನು ಗಮನಿಸಬಹುದು. ವಿದ್ಯಾರಂಭ ಸಂಸ್ಕಾರದಂದು ಮಗುವಿಗೆ ಉತ್ತರಾಣೆ ಗಿಡದ ಕಡ್ಡಿಯಿಂದ ಮಂತ್ರವೊಂದನ್ನು ಬರೆಯಲು ಆರ್ಚಕರು ಅಥವಾ ಕುಲ ಪರೋಹಿತರು ಸಹಕರಿಸುವುದು ಕಂಡು ಬರುತ್ತದೆ.

ಮಗುವು ತನ್ನನ್ನು ತಾನು ಅರಿತುಕೊಳ್ಳಲು ಪ್ರೇರಣೆ ಹಾಗೂ ಮಗುವಿನ ಪ್ರತಿಭಾ ಶಕ್ತಿ ವಿಕಾಸಗೊಳ್ಳಲು ಗುರುವಿನ ಅಗತ್ಯತೆ ಇದೆ. ಗುರುವಿನ ಮಾರ್ಗದರ್ಶನ ಮತ್ತು ಮಗುವಿನ ಸ್ವಪ್ರಯತ್ನಗಳಿಂದ ವಿದ್ಯಾವಂತನಾಗಬೇಕು, ಸಂಸ್ಕಾರಯುಕ್ತನಾಗಬೇಕು, ಮಗುವಿನಲ್ಲಿರುವ ಸುಪ್ತಪ್ರಜ್ಞೆ, ವಿಚಾರಗಳಿಗೆ ಚೈತನ್ಯ ನೀಡುವ ಮತ್ತು ಜಾಗೃತಗೊಳಿಸುವುದಕ್ಕೆ ಈ ಆಚರಣೆ ನಾಂದಿಯಾಗಲೆಂದು ಎಲ್ಲರ ಆಶಯವಾಗಿರುತ್ತದೆ.

೩.೯. ಋತುಮತಿ

"ಎಂ.ಎನ್. ಭಟ್ಟಾಚಾರ್ಯ ಅವರು ಹೆಣ್ಣು ಸಂತಾನೋತ್ಪತ್ತಿಗೆ ಸಿದ್ಧಳಾಗುವ ಸಂದರ್ಭದಲ್ಲಿ ಆಚರಿಸುವ ಕ್ರಿಯಾವಿಧಿಯೇ ಪ್ರಥಮ ರಜೋದರ್ಶನ, ಮಾನವ ಜನಾಂಗದಲ್ಲಿ ಜಾತಿ, ಮತ, ಪಂಥ ಭೇದವಿಲ್ಲದೆ ಕಂಡು ಬರುವ ಈ ಆಚರಣೆ ಒಂದೇ ರೀತಿಯಾಗಿರುವುದೆಂದು ಅಭಿಪ್ರಾಯ ಪಟ್ಟಿದ್ದಾರೆ"[೨೯]. ಮರಾಟಿಗರು ಹುಡುಗಿ ಮೈ ನೆರೆಯುದನ್ನು ತಮ್ಮ ಭಾಷೆಯಲ್ಲಿ "ಚೆಡುನಾವ್‌ಲಾಗ್ಲೆ"[೩೦] ಎಂದು ಕರೆಯುತ್ತಾರೆ. "ತುಳುವರಲ್ಲಿ ಹೆಣ್ಣು ದೊಡ್ಡವಳಾದಾಗ 'ಪೊಣ್ಣು ಮದ್ಮಲಾಯಲ್'"[೩೧] ಎಂದು ಕರೆಯುತ್ತಾರೆ. ಈ ಸಂದರ್ಭದಲ್ಲಿ 'ಮದಿಮಲ ಮದಿಮೆ' ಎಂಬ ಆಚರಣೆ ಮಾಡುತ್ತಾರೆ.

ಹೆಣ್ಣು ಮತ್ತು ಗಂಡು ತಮ್ಮ ಜೀವನದಲ್ಲಿ ಪ್ರೌಢಾವಸ್ಥೆಗೆ ಬರುವುದು ಸಹಜ ಕ್ರಿಯೆ. ಗಂಡು ಪ್ರೌಢಾವಸ್ಥೆಗೆ ಬಂದಾಗ ಯಾವುದೇ ರೀತಿಯ ಶಾಸ್ತ್ರ ನಿಷೇಧಗಳು, ಕಟ್ಟುಪಾಡುಗಳು, ಸಂಪ್ರದಾಯಗಳು ಹೆಚ್ಚಾಗಿ ಕಂಡುಬರುವುದಿಲ್ಲ. ಆದರೆ ಹೆಣ್ಣಿನ ವಿಚಾರ ಬಂದಾಗ ಅನೇಕ ರೀತಿಯ ಸಂಪ್ರದಾಯಗಳು ಆಚರಣೆಗಳು ಹಿಂದಿನ ಕಾಲದಿಂದಲೂ ಮುಂದುವರಿದುಕೊಂಡು ಬಂದಿವೆ. ಸ್ತ್ರೀಯನ್ನು ಸೃಷ್ಟಿಗೆ

ಮುಖ್ಯಕಾರಣವಾಗಿ, ಸಮೃದ್ಧಿಯ ಸಂಕೇತವಾಗಿ, ಪವಿತ್ರತೆಯಿಂದ ಗೌರವದಿಂದ, ಕಾಣುತ್ತದೆ. ಸಮಾಜ ಈ ಆಚರಣೆಯ ಮೂಲಕ ಜವಾಬ್ದಾರಿಯನ್ನು ಎಚ್ಚರಿಕೆಯನ್ನು ನೀಡುವುದು ಕಂಡುಬರುತ್ತದೆ.

"ಮರಾಟಿಗರಲ್ಲಿ ಹುಡುಗಿ ಮೈ ನೆರೆದ ನಂತರ ಅವಳನ್ನು ಒಂದು ಹಾಲು ಒಸರುವ ಮರದ ಬುಡದಲ್ಲಿ ಕುಳ್ಳರಿಸುವರು. ಈ ವರ್ತಮಾನವನ್ನು ಸ್ವಜಾತಿಯ ಗುರಿಕಾರನಿಗೆ ತಿಳಿಸುವರು. ಗುರಿಕಾರನು ತನ್ನ ಹೆಂಡತಿಯೊಂದಿಗೆ ಬೇರೆ ಬೇರೆ ಬಳಿಯ ಐದು ಮಂದಿ ಮುತ್ತೈದೆಯರನ್ನು ಮತ್ತು ಆ ಊರಿಗೆ ಸಂಬಂಧಿತ ಮಡಿವಾಳ್ತಿಯನ್ನು ಆಮಂತ್ರಿಸುವ ಪದ್ಧತಿ ಹಿಂದೆ ಇತ್ತು ಎಂಬುದಾಗಿ ಕ್ಷೇತ್ರಕಾರ್ಯ ಸಂದರ್ಭ ಹಿರಿಯ ಹೆಂಗಸರು ಮಾಹಿತಿಯನ್ನು ನೀಡಿರುವರು. ಅಲ್ಲದೆ ಈ ಆಚರಣೆಯ ಕ್ರಮವನ್ನು ಕೆಳಗಿನಂತೆ ತಿಳಿಸಿರುತ್ತಾರೆ"[೩೧].

"ನಾಲ್ಕು ಅಥವಾ ಐದು ಮಂದಿ ಮುತ್ತೈದೆಯರು ಹಾಗೂ ಮಡಿವಾಳ್ತಿಯು ಸೇರಿ, ಹೊಸ ಐದು ಮಣ್ಣಿನ ಕುಡಿಕೆ (ಮುಗ್ಗೆ (ತುಳು) ಕಲಶ) ಅಥವಾ ಕಂಚು ಹಿತ್ತಾಳೆಯ (ಈಗ ಸ್ಟೀಲ್ ಆಗುತ್ತಿದೆ) ತಂಬಿಗೆಯಲ್ಲಿ ಬಾವಿಯ ಶುದ್ಧ ನೀರನ್ನು ತುಂಬಿಸಿ ಅವುಗಳಿಗೆ ಮಾವಿನ, ಹಲಸಿನ ಎಲೆ ಹಾಗೂ ತೆಂಗಿನ ಕಾಯಿಯನ್ನಿಟ್ಟು, ವೀಳ್ಯದೆಲೆ ಅಡಿಕೆಯ ಪಟ್ಟಿ, ತುಳಸಿದಳ ಹಾಕಿ ಕಲಶ ಸಿದ್ಧಪಡಿಸುತ್ತಾರೆ. ಮನೆಯ ಪಕ್ಕದ ಹಲಸಿನ ಮರದ ಬುಡವನ್ನು ಸ್ವಚ್ಛಗೊಳಿಸಿ ರಂಗೋಲಿ ಬರೆದು (ರಂಗೋಲಿಯ ತರ ಬರೆದು) ಅದರ ಮೇಲೆ ಸ್ವಲ್ಪ ಭತ್ತವನ್ನು ಹರಡಿ ಸಿಪ್ಪೆಯುಳ್ಳ ನಾಲ್ಕು ತೆಂಗಿನಕಾಯಿಗಳನ್ನು ಜೋಡಿವರು. ಮೈ ನೆರೆದ ಹುಡುಗಿಗೆ ಹಸಿರು ಬಣ್ಣದ ಸೀರೆ ಉಡಿಸಿ, ತೆಂಗಿನ ಕಾಯಿಯ ಮೇಲೆ ಕುಳ್ಳರಿಸುತ್ತಾರೆ. ಆಕೆಯ ಮುಂದೆ ಮಹಾಗಣಪತಿ ದೇವರಿಗಾಗಿ 'ಗಣಪತಿ ಸುತ್ತೈ"[೩೩] ಇಡುತ್ತಾರೆ. ನಾಲ್ಕು ಐದು ದೀಪ ಇಡುವರು.

"ನಾಲ್ಕು ಮೂಲೆಗಳಲ್ಲಿ ವೃತ್ತಾಕಾರವಾಗಿ ರಚಿಸಿರುವ ಚಿಕ್ಕ ರಂಗೋಲಿಯಲ್ಲಿ ಅವುಗಳ ಮೇಲೆ ನಾಲ್ಕು ಸಿಂಬೆಗಳನ್ನಿಡುತ್ತಾರೆ. ಬಳಿಕ ಒಂದೊಂದು ಸಿಂಬೆಯ ಮೇಲೆ ನೀರು ತುಂಬಿದ ಒಂದೊಂದು ತುಂಬಿಗೆಯನ್ನಿಡುವರು. ಇವುಗಳನ್ನು ನಾಲ್ಕು ಕಲಶಗಳೆಂದು ಪರಿಗಣಿಸಲಾಗುತ್ತದೆ. ಪ್ರತಿಯೊಂದು ಕಲಶದ ಬಳಿ ಒಂದೊಂದು ವೀಳ್ಯದೆಲೆ ಮತ್ತು ಒಂದೊಂದು ಅಡಿಕೆ ಇಡುತ್ತಾರೆ. ನಾಲ್ಕು ಚೌಕದ ಮಧ್ಯದಲ್ಲಿ ಒಂದು ಭದ್ರವಾದ ಅಡಿಪಾಯವನ್ನು ರಚಿಸಿ ಅದರ ಮೇಲೆ ಒಂದಕ್ಕೊಂದು ಜೋಡಿಸಿದ ಸಿಪ್ಪೆಯಿರುವ ನಾಲ್ಕು ಐದು ತೆಂಗಿನಕಾಯಿಗಳನ್ನಿರಿಸಿ ಮೈ ನೆರೆದ ಹುಡುಗಿಯನ್ನು ಕರೆತಂದು ಅದರ ಮೇಲೆ ಕುಳ್ಳರಿಸುತ್ತಾರೆ. ಆಗ ಮಡಿವಾಳ್ತಿಯು ಹುಡುಗಿಯ ತಲೆಯ ಮೇಲೆ ಚೌಕಾರದ ಬಿಳಿ ವಸ್ತ್ರವೊಂದನ್ನು ಹಿಡಿಯುತ್ತಾಳೆ. ಆ ಸಮಯದಲ್ಲಿ ಗುರಿಕಾರನ ಹೆಂಡತಿ ಮತ್ತು ವಿಭಿನ್ನ ಬಳಿಯ ನಾಲ್ಕು ಮುತ್ತೈದೆಯರು ನಾಲ್ಕು ಮೂಲೆಯಲ್ಲಿರುವ ಕಲಶಗಳನ್ನು ವೀಳ್ಯದೆಲೆ ಸಹಿತ ತಂದು ಒಂದೊಂದಾಗಿ ಕೈಗೆತ್ತಿಕೊಂಡು ಅವುಗಳಲ್ಲಿರುವ ನೀರನ್ನು ಹುಡುಗಿಯ ತಲೆಯ ಮೇಲೆ ಹಿಡಿದಿರುವ ಬಿಳಿ ವಸ್ತ್ರದ ಮೇಲೆ ಸುರಿಯುತ್ತಾರೆ. ಇದನ್ನು ಕಲಶದ ನೀರಿನ ಸ್ನಾನವೆನ್ನುತ್ತಾರೆ. ಆ ಬಳಿಕ ಹುಡುಗಿಯನ್ನು ಅಲ್ಲಿಂದ ಎಬ್ಬಿಸಿ ತೆಂಗಿನ ಮರದ ಕಟ್ಟೆ ಯಲ್ಲಿ ಕುಳ್ಳರಿಸಿ ಅವಳಿಗೆ ಸಂಪೂರ್ಣ ಸ್ನಾನವನ್ನು ಮಾಡಿಸುವರು. ಇಲ್ಲಿಗೆ 'ನೀರು ಮೀಯಿಸುವ ಶಾಸ್ತ್ರ' ಮುಗಿಯುತ್ತದೆ. ನಂತರ ಉಟ್ಟ ವಸ್ತ್ರವನ್ನು ಬದಲಾಯಿಸಿ ಮೈ ನೆರೆದ ಹೆಣ್ಣನ್ನು ಮೂರು ಅಥವಾ ನಾಲ್ಕು ದಿನಗಳ ವರೆಗೆ ಮನೆಯಿಂದ ಪ್ರತ್ಯೇಕಿಸಿ, ಕೆಲವು ಕಡೆ ಮನೆಯೊಳಗಡೆ ಪ್ರತ್ಯೇಕ ಕೊಠಡಿಯಲ್ಲಿ ಇರಿಸಿರುವುದು ಕ್ಷೇತ್ರಕಾರ್ಯ ಸಂದರ್ಭದಲ್ಲಿ ಕಂಡು ಬಂದಿದೆ. ಜೊತೆಗೆ ಅವಳೊಂದಿಗೆ ಓರ್ವ ವೃದ್ಧೆಯನ್ನು ಆರೈಕೆಗಾಗಿ ಇರಿಸುವುದು. ನಂತರ ಹುಡುಗಿಯನ್ನು ವಸ್ತ್ರಾಭರಣಗಳಿಂದ ಶೃಂಗಾರ ಮಾಡಿ ಕುರ್ಚಿಯಲ್ಲಿ ಕುಳ್ಳರಿಸಿ ಮುತ್ತೈದೆಯರು ಅವಳಿಗೆ ಅಕ್ಷತೆ ಹಾಕಿ ಉಡುಗೊರೆಗಳನ್ನು ಕೊಡುವ ಸಂಪ್ರದಾಯವಿತ್ತು ಎಂಬುದಾಗಿ

ತಿಳುವಳಿಕೆದಾರರು ತಿಳಿಸಿರುವರು. ಮುಖ್ಯ ಗುರಿಕಾರನ ಹೆಂಡತಿ ಆಕೆಯನ್ನು ಅಡುಗೆ ಮನೆಗೆ ಕರೆಕೊಂಡು ಹೋಗಿ ಅಲ್ಲಿರುವ ಒಲೆ, ಅನ್ನ ತುಂಬಿದ ಪಾತ್ರೆಗೆ ನಮಸ್ಕಾರ ಮಾಡಿಸಿ, ಪಾತ್ರೆಯನ್ನು ಅವಳ ಎರಡು ಕೈಗಳಿಂದ ಹಿಡಿಸುವಳು. ಆ ಬಳಿಕ ಅಲ್ಲಿಂದ ಹೊರ ಬಂದು ಮನೆಯಂಗಳದಲ್ಲಿರುವ ತೆಂಗಿನ ಅಥವಾ ಹಲಸಿನ ಮರಕ್ಕೆ ಅವಳಿಂದ ನಮಸ್ಕಾರ ಮಾಡಿಸುತ್ತಾಳೆ. ಈ ಆಚರಣೆಯನ್ನು ತುಳುವಿನಲ್ಲಿ 'ಕರ ಪತ್ತವುನು' ಎಂದು ಕರೆಯುತ್ತಾರೆ. ಈ ಎಲ್ಲಾ ಕೆಲಸಗಳು ಹೆಂಗಸರದ್ದೆ ಆಗಿರುತ್ತದೆ. ಅವಳ ಕೈಗೆ (ಚಿಕ್ಕ ಕತ್ತಿ) ಒಂದು ಗೆಜ್ಜೆ ಕತ್ತಿಯನ್ನು ನೀಡುತ್ತಾರೆ. ಈ ಸಂದರ್ಭದಲ್ಲಿ ಕೆಲವು ದಿನಗಳ ವರೆಗೆ ಸಂಬಂಧಿಕರು ವಿವಿಧ ತಿಂಡಿ ತಿನಿಸುಗಳನ್ನು ಮುಖ್ಯವಾಗಿ ತೆಂಗಿನಕಾಯಿ ಹೆರೆದು ಹಾಕಿದ ಅವಲಕ್ಕಿಯನ್ನು ಅವಳಿಗೆ ನೀಡುವರು. ಸಂಬಂಧಿಕರಲ್ಲಿ ಹಿರಿಯಳಾದವಳು ಮೈ ನೆರೆಯುವಿಕೆಯ ಮತ್ತು ಅದರ ಪರಿಣಾಮದ ಬಗೆಗೆ ಆಕೆಗೆ ಮಾಹಿತಿಯನ್ನು ನೀಡುತ್ತಾರೆ. ಮರಾಟಿಗರಲ್ಲಿ ಮೈ ನೆರೆದ ದಿನದಿಂದ ಮೂರು ದಿನಗಳ ಕಾಲ ಕೆಲವು ಕಡೆ ನಾಲ್ಕು ದಿನಗಳ ತನಕ ಆಕೆಯನ್ನು ಯಾರು ಮುಟ್ಟುವಂತಿಲ್ಲ. ಊಟೋಪಚಾರದ ಬಗೆಗೆ ಪ್ರತ್ಯೇಕ ವ್ಯವಸ್ಥೆ ಮಾಡುವರು. ಆ ದಿನಗಳಲ್ಲಿ ಆಕೆಯು ಬಾವಿಯ ನೀರನ್ನು ಸೇದುವಂತಿಲ್ಲ ಅಥವಾ ಮುಟ್ಟುವಂತಿಲ್ಲ. ಹೂವು ಮುಡಿವಂತಿಲ್ಲ. ತುಪ್ಪ ಹಾಲು ಕೆಲವು ಕಡೆಗಳಲ್ಲಿ ಮೀನು ಮಾಂಸ ಸೇವಿಸುವಂತಿಲ್ಲ. ನಾಲ್ಕು ಅಥವಾ ಐದನೇ ದಿನ ಬೆಳಿಗ್ಗೆ ಮತ್ತೆ ಮಡಿವಾಳ್ತಿ ಬರುವಳು, ಕುಟುಂಬದಲ್ಲಿಯ ಮೂರು ನಾಲ್ಕು ಮುತ್ತೈದೆಯರು ಸೇರಿ ಆಕೆಯನ್ನು ಬಾವಿಯ ಬಳಿ ಕರೆದೊಯ್ದು (ಅಥವಾ ಗೌಪ್ಯವಾದ ಜಾಗದಲ್ಲಿ) ಸ್ನಾನ ಮಾಡಿಸುವರು. ಈ ಸಂದರ್ಭದಲ್ಲಿ ಮೊದಲಿಗೆ ದನದ ಸಗಣಿ ನೀರನ್ನು ಮಾವಿನ ಎಲೆ, ಹಲಸಿನ ಎಲೆಗಳ ತುದಿಯನ್ನು, ಸಗಣಿ ನೀರಿನಲ್ಲಿ ಎದ್ದಿ, ಆ ನೀರನ್ನು ಆಕೆಯ ಮೇಲೆ ಸಿಂಪಡಿಸುವರು ನಂತರ ಸೀಗೆ ಎಣ್ಣೆ ಹಚ್ಚಿ, ಅರಿಶಿಣ ಪುಡಿಯಿಂದ ಸಂಪೂರ್ಣವಾಗಿ ಸ್ನಾನ ಮಾಡಿಸುತ್ತಾರೆ. ಆಕೆ ಉಟ್ಟ ಮಲೀನ ಬಟ್ಟೆಯನ್ನು ಹರಿಯುವ ನೀರಿನಲ್ಲಿ ಬಿಡುವರು. ಅಥವಾ ಕೆಲವು ಕಡೆ ಸುಡುವರು. ಶುದ್ಧವಾದ ಬಟ್ಟೆ ಉಡಿಸಿ ಮನೆಗೆ ಕರೆದು ತರುವರು. ಈ ಆಚಾರಣೆಯನ್ನು 'ನಾಲ್‌ನೀರ್ ವಿಪಾವುನಿ' (ನಾಲ್ಕು ದಿನಗಳ ಸ್ನಾನ) ಎಂದು ಕರೆಯುತ್ತಾರೆ. ಅಲ್ಲಿ ಸೇರಿದ ಹೆಂಗಸರು ಆಕೆಯನ್ನು 'ಹೆಂಗಸು' (ಓ ಪೊಣ್ಣೆಜೋವ್ ತುಳು)"[೩೪] ಎಂದು ತಮಾಷೆ ಮಾಡಿ ಕರೆಯುತ್ತಾರೆ.

ಈ ಆಚರಣೆಯ ಹಿನ್ನೆಲೆಯಲ್ಲಿ ಕೆಲ ವಿಷಯಗಳು ಕಾಣಿಸಿಕೊಳ್ಳುತ್ತವೆ. ಮುಖ್ಯವಾಗಿ ಆಕೆಗೆ ಯೌವನ ಪ್ರಾಪ್ತಿಯಾಗಿದೆ ಎಂಬುದನ್ನು ಸಾಮಾಜಿಕವಾಗಿ ಸಾರುವುದು. ಇದೊಂದು ಶಕ್ತಿಯುತ ಆಚರಣೆ ಕೂಡ ಹೌದು. ಅಲ್ಲದೆ ಹುಡುಗಿ ಮದುವೆಗೆ ಯೋಗ್ಯವಾಗಿದ್ದಾಳೋ ಇಲ್ಲವೋ ಎಂಬುದನ್ನು ಹೊರ ಜಗತ್ತಿಗೆ ಬಹಿರಂಗವಾಗಿ ತಿಳಿಸಲು ಈ ಆಚರಣೆಯೇ ಹೊರತು ಬೇರೆ ಆಚರಣೆಗಳು ಪ್ರಾಚೀನ ಕಾಲದಲ್ಲಿ ಇರಲಿಲ್ಲ. ಹುಡುಗಿ ಮೈ ನೆರೆಯದಿದ್ದರೆ ಸಂತತಿ ಪಡೆಯಲು ಶಕ್ತಳಾಗಿರುವುದಿಲ್ಲವೆಂಬುದು ವೈಜ್ಞಾನಿಕ ಸತ್ಯ. ವಿವಾಹದ ಮುಖ್ಯ ಉದ್ದೇಶವೇ ಸಂತಾನವನ್ನು ಪಡೆಯುದಾಗಿರುವುದರಿಂದ ಆಕೆಯನ್ನು ತಾಯ್ತನಕ್ಕೆ ಅರ್ಹಳನ್ನಾಗಿಸುವ ಪ್ರಥಮ ಪ್ರಕ್ರಿಯೆಯಿದು.

ನಂತರ ಆಕೆ ಹುಡುಗಿಯಾಗಿರದೆ ಹೆಂಗಸಾಗಿ ಅವಳ ಪಾತ್ರ ಪರಿವರ್ತನೆಗೊಳ್ಳುತ್ತದೆ. ಇನ್ನು ಮುಂದೆ ಭಿನ್ನ ಎನ್ನುವ ಭಾವನೆ ಅವಳಲ್ಲಿ ಸದಾ ಜಾಗೃತವಾಗಿದ್ದು, ಅವಳಿಗೆ ತನ್ನ ಇತಿಮಿತಿಗಳೇನು ಎಂಬುದು ಹಂತ ಹಂತವಾಗಿ ಅರಿವಿಗೆ ಬರುತ್ತದೆ. ಈ ಹಿಂದಿನಂತೆ ಅಣ್ಣತಮ್ಮಂದಿರ ಜೊತೆ ಹೆಚ್ಚಾಗಿ ಸಲುಗೆಯಲ್ಲಿ ಇರಲು ಸಾಧ್ಯವಿಲ್ಲವೆಂಬ ಅರಿವು ಕೂಡ ಬರುತ್ತದೆ. ತಂದೆಯ ಜೊತೆ ಕೂಡ ಸಲುಗೆಯಿಂದ ವರ್ತಿಸುವಂತಿಲ್ಲ. ಮಾನಸಿಕವಾಗಿ ಒಂದು ರೀತಿ ಭಯ ಅವಳಲ್ಲಿ ಅವರಿಸಿಕೊಂಡಿರುತ್ತದೆ. ಬಹುಶಃ ಇದರಿಂದಾಗಿಯೇ ಅವಳು ಸಾಂಸಾರಿಕವಾಗಿ ತಗ್ಗಿ ಬಗ್ಗಿ ನಡೆಯುವುದಕ್ಕೆ ಕಾರಣವಾಗುವುದೇನೋ ಎಂಬ ಪ್ರಮುಖವಾದ ಅನಿಸಿಕೆ ಮರಾಟಿಗರಲ್ಲಿದೆ.

"ಇತ್ತೀಚಿನ ದಿನಗಳಲ್ಲಿ ಈ ಆಚರಣೆ ಬದಲಾವಣೆಗೊಂಡಿದೆ. ಅನೇಕ ಸಮುದಾಯಗಳು ಈ ಆಚರಣೆಯನ್ನು ಮುಂದೂಡಿಕೊಂಡು ಬಂದಿರುವುದನ್ನು ಸಹ ಗಮನಿಸಬಹುದು. ವಿವಾಹದ ಪೂರ್ವದಲ್ಲಿ ಪುರೋಹಿತರಲ್ಲಿ ಮುಹೂರ್ತ ಕೇಳಿಕೊಂಡು, ನಿಗದಿಪಡಿಸಿದ ದಿನದಂದು, ಯಾವುದಾದರೊಂದು ದೇವಸ್ಥಾನಕ್ಕೆ ತೆರಳಿ, 'ಕಲಶಸ್ನಾನ' ಮಾಡುವ ಮೂಲಕ ದೇಹ ಶುದ್ಧಿ ಮಾಡುವುದನ್ನು ವೈದಿಕ ಪರಂಪರೆಯಿಂದ ಪ್ರಭಾವಿತಗೊಂಡಿರುವುದನ್ನು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ತಿಳುವಳಿಕೆದಾರರು ತಿಳಿಸಿರುತ್ತಾರೆ"[೩೫].

ಮರಾಟಿಗರಲ್ಲಿ ಇತ್ತೀಚಿನವರೆಗೆ ಈ ಸಂಪ್ರದಾಯವನ್ನು ಕಟ್ಟುನಿಟ್ಟಾಗಿ, ವ್ಯವಸ್ಥಿತವಾಗಿ ಆಚರಿಸುತ್ತಿದ್ದರು. ನಗರೀಕರಣ, ಆಧುನಿಕ ವಿದ್ಯಾಭ್ಯಾಸದಿಂದ ಹೊರಗುಳಿದಿರುವ ಅನೇಕ ಹಳ್ಳಿಗಳಲ್ಲಿಯ ಮರಾಟಿ ನಾಯ್ಕರಲ್ಲಿ ಇದನ್ನು ಆಚರಿಸುವುದು ಕಂಡು ಬರುತ್ತದೆ. ಸಮಾಜದಲ್ಲಿ ಆರ್ಥಿಕವಾಗಿ ಹೆಚ್ಚು ಪ್ರಬಲರಾಗುತ್ತಾ ಮತ್ತು ವಿದ್ಯಾವಂತರಾಗುತ್ತಾ ಬಂದಂತೆ ಈ ಪದ್ಧತಿ ಹೆಣ್ಣಿಗೆ ಒಂದು ರೀತಿ ಮುಜುಗರವನ್ನುಂಟು ಮಾಡುವ ಸಾಧ್ಯತೆಗಳಿವೆ. ಹುಡುಗನ ಕಡೆಯವರು ಹುಡುಗಿಯನ್ನು ನೋಡಲು ಬಂದಾಗ ಬಾಯಿತಪ್ಪಿ ಅವಳ ವಯಸ್ಸು ಗೊತ್ತಾಗಲು ಸಾಧ್ಯತೆಗಳಿವೆ ಎಂಬುದನ್ನು ಮನಗಂಡು, ಇದರ ಆಚರಣೆ ಸರಳವಾಗುತ್ತಿದೆ. ನಗರ ಪ್ರದೇಶಗಳಲ್ಲಿ ಬಹುಮಟ್ಟಿಗೆ ನಿಂತು ಹೋಗಿದೆ ಎಂದು ಹೇಳಬಹುದು.

ಡಾ. ವಿವೇಕ ರೈಯವರು "ತುಳು ಜಾನಪದ ಸಾಹಿತ್ಯ"ದಲ್ಲಿ ವೈದಿಕ ಬ್ರಾಹ್ಮಣರಲ್ಲಿ 'ಋತುಶಾಂತಿ ಹೋಮ' ಸಂದರ್ಭ ಮೈ ನೆರೆತ ಹುಡುಗಿ ಅರಿಶಿಣ ಕಲಸಿದ ನೀರಿಗೆ ಕೈಯನ್ನು ಅದ್ದಿ ತನ್ನ ಕೈಯ ಬೆರಳಿನ ಅಚ್ಚನ್ನು ತನ್ನ ಮನೆಯ ಗೋಡೆಯ ಮೇಲೆ ಮೂಡಿಸುವವಳು. ಆ ಮನೆಯಲ್ಲಿ ಓರ್ವ ಹೆಣ್ಣು ವಿವಾಹಕ್ಕೆ ಅಥವಾ ಸಂತಾನೋತ್ಪತ್ತಿಗೆ ಅರ್ಹಳಾಗಿರುವಳು ಎನ್ನುವ ಸೂಚನೆ ಎಂಬುದಾಗಿ ಅಭಿಪ್ರಾಯಪಟ್ಟಿರುತ್ತಾರೆ"[೩೬]. ಗರುಡ ಪುರಾಣದಲ್ಲಿ 'ಋತುಮತಿಯಾದ ಬಳಿಕ ಹೆಣ್ಣೊಬ್ಬಳು ಪವಿತ್ರಳು' ಎಂಬ ಮಾತನ್ನು ಮರಾಟಿ ಮತ್ತು ಮರಾಟಿ ನಾಯ್ಕ ಸಮುದಾಯದವರು ಒಪ್ಪಿಕೊಂಡಿರುವಂತೆ ಕಾಣುತ್ತದೆ.

ಡಾ. ನಂಜಮಣ್ಣಿ ಎಂ. ಅವರು ಸಾಮಾಜಿಕ ಮಾನವಶಾಸ್ತ್ರದಲ್ಲಿ "ಆದಿವಾಸಿ ಜನಾಂಗಗಳಾದ ನೀಲಗಿರಿಯ ಬಡಗರು, ತೊಡವರು, ನಾಗ ಬುಡಕಟ್ಟುಗಳು ಮೈ ನೆರೆದ ಹೆಣ್ಣಿಗೆ ವೃದ್ಧ ಸ್ತ್ರೀಯರಿಂದ ಲೈಂಗಿಕ ಜೀವನದ ಬಗ್ಗೆ ತಿಳುವಳಿಕೆ ತರಬೇತಿ ನೀಡುವರು"[೩೭] ಎಂಬುದಾಗಿ ಅಭಿಪ್ರಾಯ ಪಟ್ಟಿದ್ದಾರೆ.

ದಕ್ಷಿಣ ಭಾರತದ ಬುಡಕಟ್ಟು ಸಮುದಾಯಗಳಾದ ಇರುಳಿಗರು, ಕೊರವರು, ಯನಾದಿಗಳು, ಗೊಂಡರು, ಗೊಂಬೆರಾಯರು ಮೊದಲಾದವರು ಹೆಣ್ಣಿನ ಜೀವನದಲ್ಲಿ ಅವಳು ಪ್ರೌಢಾವಸ್ಥೆಯನ್ನು ತಲುಪುವ ಮತ್ತು ಪ್ರಥಮ ರಜಸ್ವಲೆಯಾಗುವ ಸಂದರ್ಭ ಆಯಾ ಬುಡಕಟ್ಟಿನ ಆಚರಣೆಗೆ ಹೆಚ್ಚಿನ ಮಹತ್ವ ನೀಡಿರುವುದು ಕಂಡು ಬಂದಿರುತ್ತದೆ.

೩.೧೦. ಮರಾಟಿ ಸಮುದಾಯಗಳ ವಿವಾಹ ಪದ್ಧತಿ

ಮರಾಟಿ ನಾಯ್ಕ ಸಮುದಾಯದವರಲ್ಲಿ ವಿವಾಹ ಪದ್ಧತಿ

ಮರಾಟಿ ನಾಯ್ಕ ಮತ್ತು ಮರಾಟಿ ಸಮುದಾಯಗಳಲ್ಲಿ ತಂದೆಯ ಕುಲ, ಬಳಿ ಅಥವಾ ಗೋತ್ರಕ್ಕೆ ಸಂಬಂಧಿಸಿದಂತೆ ವಿವಾಹ ಸಂಬಂಧಗಳನ್ನು ಏರ್ಪಡಿಸುತ್ತಾರೆ. ತಂದೆಯ ಸೋದರಿ ಅಥವಾ ಸೋದರತ್ತೆಯ ಮಕ್ಕಳಲ್ಲಿ ತಾಯಿಯ ಸಹೋದರ ಮಕ್ಕಳಲ್ಲಿ ವಿವಾಹಕ್ಕೆ ಸಂಬಂಧಿಸಿದ ಕೊಡುಕೊಳ್ಳುವಿಕೆ

ನಡೆಯುವುದು ಸಾಮಾನ್ಯ. ಒಂದು ಮನೆಯ ಗಂಡು ಹೆಣ್ಣು ಮತ್ತು ಮತ್ತೊಂದು ಮನೆಯ ಗಂಡು ಹೆಣ್ಣಿನೊಂದಿಗೆ ಪರಸ್ಪರ ವಿನಿಮಯ ಮಾಡಿ ಮದುವೆ ಮಾಡುವುದು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ವೀಕ್ಷಿಸಲಾಗಿದೆ. ಒಂದೇ ಬಳಿಯ ಜೊತೆಗೆ ವಿವಾಹ ಸಂಬಂಧ ಬೆಳೆಸುವುದು ಯಾವ ಬುಡಕಟ್ಟಿನಲ್ಲೂ ಒಪ್ಪಿಗೆ ಇಲ್ಲ. ತೆರಕೊಡುವ ಪದ್ಧತಿ ಸಾಮಾನ್ಯವಾಗಿ ಈ ಎರಡೂ ಸಮುದಾಯಗಳಲ್ಲಿ ಕಂಡುಬರುತ್ತದೆ. ಹೆಣ್ಣು ಕೇಳಲು ಗಂಡಿನ ಹತ್ತಿರದ ಸಂಬಂಧಿಕರೇ ಹೆಣ್ಣಿನ ಮನೆಗೆ ಹೋಗುವ ಸಂಪ್ರದಾಯವಿದೆ. ಈ ಎರಡು ಸಮುದಾಯಗಳಲ್ಲಿ ಯಾವ ಕಾರಣಕ್ಕೂ ನಮ್ಮಲ್ಲಿ ಹೆಣ್ಣು ಇದೆ. ನಿಮ್ಮ ಮಗನಿಗೆ ಸಂಬಂಧ ಬೆಳೆಸಿ ಎಂದು ಗಂಡಿನ ಮನೆಗೆ ಹೋಗುವುದು ಕಂಡುಬರುವುದಿಲ್ಲ. ಹೆಣ್ಣನ್ನು ತನ್ನ ತಾಯಿಯ ಸಹೋದರನ ಮಗನಿಗೆ ಹಾಗೂ ತಂದೆಯ ಸಹೋದರಿಯ ಮಗನಿಗೆ ಮದುವೆ ಮಾಡಿ ಕೊಡುವ ಕ್ರಮವಿದೆ. ಅದೇ ರೀತಿ ಗಂಡಿಗೂ ತನ್ನ ತಂದೆಯ ತಂಗಿಯ ಮಗಳಿಗೆ ತಾಯಿಯ ಸಹೋದರನ ಮಗಳಿಗೆ ವಿವಾಹ ಮಾಡಿಕೊಡುವ ಕ್ರಮವಿದೆ.

ಭಾರತದಲ್ಲಿ ಆದಿವಾಸಿ ಸಮುದಾಯಗಳು ತಮ್ಮದೇ ಆದ ವಿವಾಹದ ಪದ್ಧತಿಗಳು, ವಿಧಿ, ವಿಧಾನಗಳು, ನಿಷೇದಗಳು, ವಿವಿಧ ಬಗೆಯ ವಿವಾಹ ಪದ್ಧತಿಗಳನ್ನು ಹೊಂದಿವೆ. ಶತ ಶತಮಾನಗಳಿಂದ ರೂಢಿಸಿಕೊಂಡು ಬಂದಿರುವ ಮದುವೆ ಆಚರಣೆಗಳು ಇಂದು ಬದಲಾವಣೆಯ ಪ್ರಕ್ರಿಯೆಯಲ್ಲಿವೆ. ಇತ್ತೀಚಿನ ದಿನಗಳಲ್ಲಿ ಸಂಸ್ಕೃತೀಕರಣದ ಫಲವಾಗಿ ಕೆಳಜಾತಿಯವರು ಹಾಗೂ ಬುಡಕಟ್ಟು ಸಮುದಾಯದವರು ಮೇಲ್ವರ್ಗದವರನ್ನು ಅನುಕರಣೆ ಮಾಡುತ್ತಿರುವುದು ಕಂಡು ಬರುತ್ತದೆ. ಪಾಶ್ಚಾತ್ಯೀಕರಣದ ಪ್ರಭಾವದಿಂದಾಗಿ ವಿವಾಹದ ಅನೇಕ ಆಚರಣೆಗಳು ಬದಲಾಗುತ್ತಿದ್ದು, ಅಲ್ಲದೆ ಸ್ಥಳೀಯ ಪ್ರಬಲವಾದ ಜಾತಿ ಸಮುದಾಯಗಳ ಪ್ರಭಾವಗಳಿಂದಲೂ ವಿವಾಹ ಆಚರಣೆಯಲ್ಲಿ ಬದಲಾವಣೆ ಕಂಡು ಬರುತ್ತಿದೆ. ಇತ್ತೀಚೆಗೆ ಈ ಸಮುದಾಯಗಳು ವೈದಿಕರನ್ನು ಅನುಕರಣೆ ಮಾಡುತ್ತಿವುದನ್ನು ಗಮನಿಸಲಾಗಿದೆ. ಈ ಸಮುದಾಯಗಳಲ್ಲಿ ಅನೇಕ ಕಾರಣಗಳಿಂದ ಹಲವಾರು ಆಚರಣೆಗಳು ಬದಲಾವಣೆಯಾಗುತ್ತಿವೆ. ಬೆರಳೆಣಿಕೆಯಷ್ಟು ಮೂಲ ಸಂಪ್ರದಾಯ ಆಚರಣೆಗಳನ್ನು ಮುಂದುವರೆಸಿಕೊಂಡು ಬರುತ್ತಿರುವುದನ್ನು ಕ್ಷೇತ್ರಕಾರ್ಯ ಸಂದರ್ಭದಲ್ಲಿ ವೀಕ್ಷಿಸಲಾಗಿದೆ. ಈ ಎರಡೂ ಸಮುದಾಯದವರ ಸಂಪ್ರದಾಯಿಕವಾದ ವಿವಾಹದ ಆಚರಣೆಗಳನ್ನು ತಿಳಿದುಕೊಂಡು ಇತ್ತೀಚಿನ ದಿನಗಳಲ್ಲಿ ಅವರ ಮದುವೆಗಳಲ್ಲಿ ಆಗುತ್ತಿರುವ ಬದಲಾವಣೆಗಳನ್ನು ಗುರುತಿಸಿ ತೌಲನಿಕವಾಗಿ ವಿಶ್ಲೇಷಿಸಲಾಗಿದೆ.

ಸಮಾಜದ ವಿವಿಧ ಕ್ಷೇತ್ರಗಳಲ್ಲಿ ಅನೇಕ ಬದಲಾವಣೆಗಳಾಗಿವೆ. ಅದರಂತೇ ಬುಡಕಟ್ಟು ಹಾಗೂ ಇತರೆ ಸಮುದಾಯಗಳಲ್ಲಿಯ ವಿವಾಹಗಳ ಆಚರಣೆಗಳಲ್ಲಿ ಅನೇಕ ಬದಲಾವಣೆಗಳು ಆಗಿರುವುದು ಕಂಡು ಬರುತ್ತದೆ. ಮರಾಟಿ ನಾಯ್ಕ ಮತ್ತು ಮರಾಟಿಗರಲ್ಲಿ ಸಂಪ್ರದಾಯಿಕ ವಿವಾಹ ಪದ್ಧತಿಗಳಲ್ಲಿ ಬದಲಾವಣೆಗಳು ಆಗಿರುವುದು ಕಂಡುಬರುತ್ತದೆ. ಇದಕ್ಕೆ ಮೂಲಕ ಕಾರಣ ಆರ್ಥಿಕತೆ ಎಂದು ಹೇಳಬಹುದು. ಉತ್ಪಾದನೆ ಉತ್ಪಾದನಾ ವ್ಯವಸ್ಥೆ ಬದಲಾದಂತೆ ಆರ್ಥಿಕತೆ ಬದಲಾವಣೆಯಾಗುತ್ತದೆ. ವಿವಾಹದ ಸಿದ್ಧತೆಗೆ ವಾರಗಟ್ಟಲೆ ತೆಗೆದುಕೊಳ್ಳುತ್ತಿರುವ ಸಮಯ, ಮನೆಯಲ್ಲಿ ವಿವಾಹ ಮಾಡುವುದರಿಂದ ಆಗುವ ಸಮಸ್ಯೆಗಳನ್ನು ಎದುರಿಸುವುದಕ್ಕೆ ಇಂದು ಯಾರಿಗೂ ಸಮಯ ಮತ್ತು ತಾಳ್ಮೆ ಇಲ್ಲ. ಈ ಹಿಂದೆ ಜಾತಿಯ ವ್ಯವಸ್ಥೆಯಲ್ಲಿರುವ ಸಮುದಾಯಿಕ ಪ್ರಜ್ಞೆಯನ್ನು ಇಂದು ಕಾಣುವುದಿಲ್ಲ. ಆಧುನಿಕ ಶಿಕ್ಷಣ, ಪ್ರಬಲ ಅನ್ಯ ಸಮುದಾಯಗಳ ಪ್ರೇರಣೆ, ಪ್ರಭಾವ, ಆಧುನಿಕ ಆರ್ಥಿಕ ನೀತಿ ಪುರೋಹಿತ ಶಾಹಿಗಳ ಒಡನಾಟ ಮುಂತಾದ ಕಾರಣಗಳಿಂದ ಮರಾಟಿಗರೂ ಹಿಂದೆ ಬಿದ್ದಿಲ್ಲ ಎಂದು ಹೇಳಬಹುದು.

ಮರಾಟಿ ನಾಯ್ಕ ಸಮುದಾಯದ ವಿವಾಹದ ವಿಧಿ ವಿಧಾನಗಳು: ಮದುವೆಯ ಪೂರ್ವದ ಕಾರ್ಯಕ್ರಮಗಳು

ವದು ವರರ ಕುಲ-ಬಳಿಗಳ ಆಯ್ಕೆ

ಮರಾಟಿ ನಾಯ್ಕ ಮತ್ತು ಮರಾಟಿ ಸಮುದಾಯದಲ್ಲಿ ಗಂಡು ಹೆಣ್ಣುಗಳ ವಿವಾಹ ನಿರ್ಣಯಿಸುವಲ್ಲಿ ಬಳಿಗಳು ಮಹತ್ವದ ಪಾತ್ರವಹಿಸುತ್ತವೆ. ಇವರು ತಮ್ಮ ವಿವಾಹಗಳಲ್ಲಿ ಬಳಿ (ಬರಿ) ಗಳ ಬಳಕೆಯನ್ನು ಬಹಳ ಎಚ್ಚರಿಕೆಯಿಂದ ನೋಡಿಕೊಳ್ಳುವರು. ಸಮಾನ ಬಳಿಗಳಲ್ಲಿ ವಿವಾಹ ನಿಷಿದ್ಧ. ಕಾರಣ ಸಮಾನ ಬಳಿಗಳ ವಿವಾಹ ಎಂದರೆ ರಕ್ತ ಸಂಬಂಧಿಗಳ ವಿವಾಹವಾದಂತೆ. ಅದರಿಂದ ಉತ್ತಮ ಫಲ ದೊರೆಯದು. ದಾಂಪತ್ಯ ಜೀವನ ಹೆಚ್ಚು ಕಾಲ ಬಾಳುವುದಿಲ್ಲ. ಅವರಲ್ಲಿರುವ ಗುಣಗಳೇ ಮುಂದೆ ಜನಿಸಬಹುದಾದ ಅವರ ಮಕ್ಕಳಿಗೂ ಬರಬಹುದು. ಅದು ಪಾರಂಪರಿಕ ರೋಗಗಳು ಆಗಬಹುದು ಅಥವಾ ಇನ್ನಿತರ ಕೆಟ್ಟ ಗುಣ ನಡತೆಗಳೂ ಮುಂದುವರೆಯಬಹುದು. ಅವರಿಂದ ಆರೋಗ್ಯವಂತ ಮಕ್ಕಳು ಹುಟ್ಟುವ ಬದಲು ರೋಗಿಷ್ಟ ಅಥವಾ ಅಂಗವಿಕಲ ಮಕ್ಕಳು ಹುಟ್ಟಬಹುದು. ಅಥವಾ ದೋಷ ತಟ್ಟಬಹುದೆಂಬ ನಂಬಿಕೆಗಳು ಈ ಎರಡು ಸಮುದಾಯದವರಲ್ಲದೆ. ಆದರೆ ವೈಜ್ಞಾನಿಕವಾಗಿ ಇವುಗಳನ್ನು ಪುಷ್ಟೀಕರಿಸುವ ಆಧಾರಗಳಿಲ್ಲ. ಇತ್ತೀಚಿನ ದಿನಗಳಲ್ಲಿ ಸಮಾನ ಬಳಿಗಳ ವಿವಾಹವೂ ಕೆಲವೊಂದು ಕಡೆ ನಡೆದಿವೆ ಎಂಬುದಾಗಿ ತಿಳುವಳಿಕೆದಾರರು ಅಭಿಪ್ರಾಯ ಪಟ್ಟಿದ್ದಾರೆ. ಸಮಾನ ಬಳಿಗಳ ವಿವಾಹದಿಂದಾಗಿ ದಾಂಪತ್ಯ ಮುರಿದು ಬಿದ್ದಿರುವ, ಅಂಗವಿಕಲ ಮಕ್ಕಳು ಹುಟ್ಟಿಕೊಂಡಿರುವ ಸ್ಪಷ್ಟ ಉದಾಹರಣೆಗಳಿಲ್ಲ. ಆದರೂ ಈ ನಂಬಿಕೆ ಇಂದಿನ ದಿನಗಳಲ್ಲಿ ಬಲವಾಗಿ ಪ್ರಭಾವ ಬೀರಿದ್ದರಿಂದ ತಮ್ಮ ವಿವಾಹಗಳಲ್ಲಿ ಮರಾಟಿಗರು ಬಳಿಗಳ ಬಗೆಗೆ ಹೆಚ್ಚಿನ ಗಮನ ಕೊಡುತ್ತಾರೆ.

ಮರಾಟಿಗರಲ್ಲಿ ಕೆಲ ಬಳಿಗಳ ಮಧ್ಯೆ ಯಾವುದೇ ರೀತಿಯ ವೈವಾಹಿಕ ಸಂಬಂಧಗಳು ಏರ್ಪಡುವುದಿಲ್ಲ. ಬಳಿಗಳಲ್ಲಿ ಶ್ರೇಷ್ಠ, ನಿಕೃಷ್ಟ ಎಂಬ ಭಾವನೆ ಅವರಲ್ಲಿದೆ. ಹಾಗೆಯೇ ಕೆಲವೊಂದು ಬಳಿಗಳಿಗೆ ಹೆಚ್ಚು ಪ್ರಾಶಸ್ತ್ಯಗಳನ್ನು ನೀಡುವುದು ಕಂಡುಬರುತ್ತದೆ. ಉದಾಹರಣೆಗೆ ಬಡೆಗಾರ, ಲಾಂಜಗಾರ, ಸಾಲ್ವೆಗಾರ ಮತ್ತು ಪೆಂಕ್ಲೆಗಾರ. ಈ ಬಳಿಗಳವರ ವಿಶೇಷವೇನೆಂದರೆ ಇವರು ಬಳಿಗಳ ಮೂಲಕ ಹೆಣ್ಣಿನ ಮತ್ತು ಗಂಡಿನ ಗುಣ ನಡತೆ ಮತ್ತು ಸ್ವಭಾವಗಳನ್ನು ಕಂಡುಕೊಳ್ಳುವರು. ಸಾಲ್ವೆಗಾರ ಬಳಿಯ ಕುಟುಂಬದಲ್ಲಿ ಗಂಡ ಬೇಗ ಸಾಯುತ್ತಾನೆ. ಸಾಲಗಾರನಾಗುತ್ತಾನೆ, ಧೂವಾಳಿಯ ಬಳಿಯವರು ಬೆಳವಣಿಗೆ ಹೊಂದುವುದಿಲ್ಲ ಎಂಬ ತಿಳುವಳಿಕೆ ಅವರಲ್ಲಿದೆ. ಇವೆಲ್ಲ ಸಮುದಾಯದಲ್ಲರುವ ಮೂಢನಂಬಿಕೆಗಳೆಂದರೆ "ಇವು ನಮ್ಮ ಹಿರಿಯರು ಅನುಭವದ ಮೂಲಕ ಬಂದಂತಹವುಗಳು. ಅದನ್ನು ಅಷ್ಟು ಸುಲಭವಾಗಿ ನಿರಾಕರಿಸಲಾಗದು ಎಂದು ಸಮುದಾಯದ ಹಿರಿಯರು ಹೇಳುತ್ತಾರೆ.

ಪ್ರಾಚೀನ ಕಾಲದಲ್ಲಿ ಮರಾಟಿ ನಾಯ್ಕ ಮತ್ತು ಮರಾಟಿಗರ ವಿವಾಹದಲ್ಲಿ ಹುಡುಗಿಯ ಮತ್ತು ಹುಡುಗನ ತಂದೆ ಅದೇ ರೀತಿ ಹುಡುಗನ ಮತ್ತು ಹುಡುಗಿಯ ತಾಯಿ ಒಂದೇ ಮೂಲದ ಬಳಿಗಳಿಗೆ ಸೇರಿದವರಾಗಿದ್ದರೆ ಆ ಮದುವೆ ನಡೆಯುವುದಿಲ್ಲ ಎಂದು ತಿಳುವಳಿಕೆದಾರರು ಹೇಳುತ್ತಾರೆ. ಕಾರಣವೇನೆಂದರೆ ಆ ಹುಡುಗ ಹುಡುಗಿಯರಲ್ಲಿ ಸಹೋದರ, ಸಹೋದರಿಯ ಸಂಬಂಧ ಬೆಸೆಯುತ್ತದೆ ಎನ್ನುವ ನಂಬಿಕೆ ಅವರಲ್ಲಿದೆ. ಹೀಗಾಗಿ ಅಂತಹ ವಿವಾಹಗಳು ನಿಷಿದ್ಧವಾಗಿವೆ. ಆದರೆ ಈಗಿನ ಮದುವೆಗಳಲ್ಲಿ ಬಳಿಗಳ ವಿಚಾರವನ್ನು ಅಷ್ಟಾಗಿ ಯಾರೂ ಗಮನಕ್ಕೆ ತೆಗೆದುಕೊಳ್ಳುತ್ತಿಲ್ಲ. ಕೆಲವು ಹೊರಬಾಂಧವ್ಯಗಳಲ್ಲಿ ಗಂಡು ಹೆಣ್ಣುಗಳಿಗೆ ಪರಸ್ಪರ ಒಪ್ಪಿಗೆ ಇದ್ದರೆ. ಬಳಿಗಳ ವಿಚಾರವನ್ನು ಬದಿಗಿರಿಸಿ

ಹಾಗೂ ಕೆಲವೊಂದು ಸಂಪ್ರದಾಯಗಳನ್ನು ಕೈಬಿಟ್ಟು ವಿವಾಹಗಳು ನಡೆಯುತ್ತಿವೆ ಎಂದು ತಿಳುವಳಿಕೆದಾರರು ಕ್ಷೇತ್ರಕಾರ್ಯ ಸಂದರ್ಭದಲ್ಲಿ ಉದಾಹರಣೆ ಸಹಿತ ವೈಯಕ್ತಿಕ ಮಾತುಕತೆಯ ಸಂದರ್ಭದಲ್ಲಿ ತಿಳಿಸಿರುವರು. ಮರಾಟಿ ನಾಯ್ಕ ಸಮುದಾಯದ ಅನೇಕ ವಿದ್ಯಾವಂತ ಯುವಕರು ಒಂದು ಹುಡುಗಿಯ ಹೆಸರಿನ ಮುಂದೆ ನಾಯ್ಕ ಅಥವಾ ನಾಯಕ ಎಂದು ಇರುವುದನ್ನು ಗಮನಿಸಿ ಅವಳನ್ನು ಪ್ರೀತಿಸಿ ತಂದೆ ತಾಯಿ ಹಿರಿಯರನ್ನು ಹುಡುಗಿಯ ಮನೆಗೆ ಕರೆದುಕೊಂಡು ಹೋದಾಗ ಆ ಹುಡುಗಿಯ ಜಾತಿ ಬೇರೆಯಾಗಿ, ಮದುವೆ ನಿಶ್ಚಯವನ್ನು ಮುರಿಯಲು ಪ್ರಯತ್ನಿಸಿದಾಗ ಹುಡುಗ–ಹುಡುಗಿ ಪ್ರೇಮ ವಿವಾಹವಾಗಿರುವ ಬಗ್ಗೆ ಅನೇಕ ನಿದರ್ಶನಗಳಿವೆ ಎಂದು ತಿಳುವಳಿಕೆದಾರರು ತಿಳಿಸಿದ್ದಾರೆ.

ಬಳಿ (ಬರಿ) ಆಯ್ಕೆಯು ಮದುವೆಯ ಮೊದಲ ಮೆಟ್ಟಿಲು. ಮಧ್ಯವರ್ತಿಯೊಬ್ಬ ಗಂಡು ಮತ್ತು ಹೆಣ್ಣಿನ ಕುಟುಂಬದವರ ಬಳಿಯ ವಿವರವನ್ನು ತಿಳಿದುಕೊಂಡು ಸ್ಪಷ್ಟಪಡಿಸಿದ ನಂತರವೇ ಹೆಣ್ಣು ನೋಡಲು ಗಂಡಿನವರು ಹೊರಡುತ್ತಾರೆ. ಅದಲ್ಲದೆ ಸಂಬಂಧಿಕರು ಗಂಡು ಹೆಣ್ಣನ್ನು ಹತ್ತಿರದಿಂದ ಬಲ್ಲವರಾಗಿದ್ದು, ಅವರ ಮನೆತನ, ಗುಣ, ನಡತೆ, ಕುಟುಂಬದ ಬಗ್ಗೆ ಚೆನ್ನಾಗಿ ಅರಿತವರಾಗಿದ್ದು ಅನೇಕ ಎಡರು ತೊಡರುಗಳನ್ನು ತಪ್ಪಿಸಲು ಎಚ್ಚರ ವಹಿಸುವುದು ಈ ಎರಡೂ ಸಮುದಾಯಗಳಲ್ಲಿ ಕಂಡುಬರುತ್ತದೆ.

ಹೆಣ್ಣು ನೋಡುವುದು

ಸಾಮಾನ್ಯವಾಗಿ ಮರಾಟಿ ಸಮುದಾಯಗಳು ಅನ್ಯ ಬಳಿಗಳ ಆಯ್ಕೆ ಮಾಡಿ ಸ್ಪಷ್ಟಪಡಿಸಿದ ಮೇಲೆ ಹೆಣ್ಣು ನೋಡುವ ಕಾರ್ಯಕ್ಕೆ ಅನುಮತಿ ನೀಡುತ್ತಾರೆ. ಪ್ರಾಚೀನ ಕಾಲದಲ್ಲಿ ಮದುವೆ ನಿಶ್ಚಯ ಮಾಡುವಾಗ ಗಂಡು ಮತ್ತು ಹೆಣ್ಣಿನ ಅಭಿಪ್ರಾಯ ಕೇಳುವ ಪರಿಪಾಟ ಇವರಲ್ಲಿರಲಿಲ್ಲ. ಸಾಕಷ್ಟು ಮುನ್ನೆಚ್ಚರಿಕೆ ತೆಗೆದುಕೊಂಡು ಹೆಣ್ಣು ನೋಡುವುದಕ್ಕೆ ಮುಂಚಿತವಾಗಿಯೇ ಎಚ್ಚರಿಕೆ ವಹಿಸುತ್ತಿದ್ದರು. ಈ ಪದ್ಧತಿ ಇಂದು ಅಲ್ಲಲ್ಲಿ ಕಂಡುಬರುತ್ತದೆ.

ಹೆಣ್ಣು ನೋಡಲು ಹೊರಡುವ ಸಂದರ್ಭದಲ್ಲಿ ಸೋದರಮಾವ, ತಂದೆ, ಭಾವ, ಅಕ್ಕ ಅಥವಾ ತಂಗಿಯ ಗಂಡ ಮತ್ತು ಜಾತೀಯ ಗುರಿಕಾರ ಆ ತಂಡದಲ್ಲಿರುವರು. ಒಂದು ವೇಳೆ ತಂದೆ ಇಲ್ಲದಿದ್ದರೆ ಚಿಕ್ಕಪ್ಪ ಅಥವಾ ದೊಡ್ಡಪ್ಪ ತಂದೆಯ ಹತ್ತಿರದ ಬಂಧುಗಳು, ಗುರಿಕಾರ ಇಲ್ಲದಿದ್ದರೆ ಆ ಸಮಾಜದ ಗಣ್ಯವ್ಯಕ್ತಿ ಇರುತ್ತಾರೆ. ಕೆಲವೊಂದು ಸಲ ಮಧ್ಯವರ್ತಿ ಮೂಲಕ ಹುಡುಗಿಯ ಮನೆಯವರಿಗೆ ಮುಂಚಿತವಾಗಿ ಹೆಣ್ಣು ನೋಡಲು ಬರುವ ವಿಷಯ ತಿಳಿಸುತ್ತಾರೆ. ಮರಾಟಿಗರಲ್ಲಿ ವಿವಾಹ ಪೂರ್ವ ಮಾತುಕತೆಗಳಿಗಾಗಿ ಮೂರು ಜನ ಹೋಗಬಾರದೆಂಬ ಸಂಪ್ರದಾಯವಿದೆ. ಇದು ಇತರೇ ಸಮುದಾಯಗಳಲ್ಲಿಯೂ ಕಂಡು ಬರುತ್ತದೆ. ಅಮವಾಸ್ಯೆ, ಅಮವಾಸ್ಯೆಯ ಹಿಂದಿನ ದಿನ 'ಬೂದಿ' ಮಂಗಳವಾರ ಬಿಟ್ಟು ಉಳಿದ ದಿನಗಳಲ್ಲಿ ಹೆಣ್ಣು ನೋಡಲು ಹೋಗುವರು. ಹೊರಡುವ ವೇಳೆ ವಿಧವೆ, ಬೆಕ್ಕು, ಸರ್ಪ, ಒಂಟಿ ಬ್ರಾಹ್ಮಣ ಅಡ್ಡ ಬಂದಲ್ಲಿ ಅಥವಾ ಯಾರಾದರೂ ಎಲ್ಲಿಗೆ ಹೋಗುತ್ತೀರಿ ಎಂದು ಕೇಳಿದರೆ ಅಶುಭ ಎಂದು ತಿಳಿಯುವರು, ಮುತ್ತೈದೆಯರು, ಕೇರೆ ಹಾವು, ತುಂಬಿದ ಕೊಡ, ಹೆಣ, ಮುಂಗುಸಿ, ನರಿ ಇವು ಎದುರಿಗೆ ಬಂದರೆ ಶುಭ ಎಂದು ಭಾವಿಸುತ್ತಾರೆ. ಗಂಡಿನವರಿಗೆ ಹುಡುಗಿಯ ಬಳಿಯ ವಿಚಾರ ಆಕೆಯ ಕೌಟುಂಬಿಕ ಹಿನ್ನೆಲೆಗಳು ಒಪ್ಪಿಗೆಯಾದರೆ, ಹೆಣ್ಣಿನ ಮನೆಯವರು ಗಂಡಿನ ಬಗ್ಗೆ ಗುಣ ಸ್ವಭಾವ ನಡವಳಿಕೆ, ಉದ್ಯೋಗ ಮತ್ತು ಮನೆತನದ ಬಗ್ಗೆ ವಿಚಾರಿಸಿ ಒಪ್ಪಿಗೆ

ತಿಳಿಸಲು ಹೇಳುವರು. ಆ ಸಂದರ್ಭದಲ್ಲಿ ಹುಡುಗಿಯ ಹತ್ತಿರದ ಸಂಬಂಧಿಕರು ಹುಡುಗನ ಮತ್ತು ಅವನ ಮನೆತನದ ಬಗ್ಗೆ ವಿವರ ಪಡೆಯುತ್ತಾರೆ.

ಹೆಣ್ಣು ಒಪ್ಪಿಗೆಯಾದರೆ ಊಟ ಉಪಚಾರ ಸ್ವೀಕರಿಸಿ ಹೆಣ್ಣಿನವರನ್ನೂ ಬರಲು ಆಮಂತ್ರಿಸುತ್ತಾರೆ. ಇದೇ ಸಂದರ್ಭದಲ್ಲಿ ಹುಡುಗಿ ಹುಡುಗನ ಜಾತಕದ ಬಗೆಗೆ ಜ್ಯೋತಿಷ್ಯರಲ್ಲಿ ವಿಚಾರಿಸಿ ಪರಸ್ಪರ ಜಾತಕ ಹೊಂದಾಣಿಕೆ ಆಗುವುದರ ಬಗೆಗೆ ತಿಳಿದುಕೊಳ್ಳುತ್ತಾರೆ. ಜಾತಕ ಇಲ್ಲದಂತಹ ಸಂದರ್ಭದಲ್ಲಿ 'ದೇವರ ಪ್ರಸಾದ' ಅಥವಾ 'ಶಕುನ'ಗಳನ್ನು ನೋಡುವರು. ಇವುಗಳಲ್ಲಿ ಯಾವುದಾದರೂ ಒಂದರಲ್ಲಿ ಶುಭ ಫಲಿಸಿದರೆ ಮುಂದಿನ ಮಾತುಕತೆ ನಡೆಸುತ್ತಾರೆ. ಪರಸ್ಪರ ಒಪ್ಪಿಗೆಯಾದಲ್ಲಿ ಊಟೋಪಚಾರ ಮುಗಿಸಿ ಗಂಡು ಮತ್ತು ಹೆಣ್ಣಿನ ಕಡೆಯವರು ಗುರಿಕಾರರೊಂದಿಗೆ ಕುಲಪುರೋಹಿತರೊಂದಿಗೆ ಸಮಾಲೋಚಿಸಿ ಮದುವೆ ನಿಶ್ಚಯ ದಿನ ನಿರ್ಣಯಿಸುವರು.

ಹೆಣ್ಣಿನ ನಿಶ್ಚಿತಾರ್ಥ

ನಿಶ್ಚಿತಾರ್ಥವನ್ನು 'ನಿಶ್ಚಯತಾಂಬೂಲ', 'ನಿಶ್ಚಯ ಸಂಮಾನ,' ಎಂದು ಮರಾಟಿ ನಾಯ್ಕರು ಹಾಗೂ ಮರಾಟಿಗರು ಕರೆಯುತ್ತಾರೆ. ಮರಾಟಿಗರ ಈ ಎರಡು ಸಮುದಾಯದಲ್ಲಿ ಮೊದಲಿಗೆ ಹೆಣ್ಣಿನ ಮನೆಯಲ್ಲಿ, ನಿಶ್ಚಯಶಾಸ್ತ್ರ ಮಾಡುವರು. ಹೆಣ್ಣಿನ ಮನೆಯವರು ನಿಗದಿ ಮಾಡಿದ ದಿನ ಗಂಡಿನ ಮನೆಯವರ ಬಂಧು-ಮಿತ್ರರು ಮತ್ತು ಊರಿನ ಗುರಿಕಾರರ ಜೊತೆ ಹೆಣ್ಣಿನ ಮನೆಗೆ ಹೋಗುತ್ತಾರೆ. ಹೆಣ್ಣಿನ ಮನೆಯಲ್ಲಿ ನೆಂಟರು ಮತ್ತು ಊರಿನ ಗುರಿಕಾರರು ಸೇರಿರುತ್ತಾರೆ. ಎರಡೂ ಕಡೆಯ ಗುರಿಕಾರರು ಗಂಡು ಹೆಣ್ಣಿನ ಬಳಿಗಳ ಬಗೆಗೆ ತಿಳಿದುಕೊಂಡು ಅವೆರಡೂ ಬೇರೆ ಬೇರೆಯದೇ ಎಂಬುದನ್ನು ಖಚಿತ ಪಡಿಸಿಕೊಳ್ಳುತ್ತಾರೆ. ಎರಡೂ ಕಡೆಯವರು ತುಳಸಿಕಟ್ಟೆಯ ಪಕ್ಕದಲ್ಲಿ ಪೂರ್ವ ಪಶ್ಚಿಮ ಭಾಗದಲ್ಲಿ ಪ್ರತ್ಯೇಕವಾದ ಚಾಪೆಯನ್ನು ಹಾಕಿ ಮಧ್ಯ ಭಾಗದಲ್ಲಿ ಒಂದು ಮರದ ಮಣೆಯನ್ನಿಡುತ್ತಾರೆ. ಅದರ ಪಕ್ಕದಲ್ಲಿ ಒಂದು ದೀಪವನ್ನು ಹಚ್ಚುವರು. ಒಂದರಲ್ಲಿ ಗಂಡಿನವರ ಇನ್ನೊಂದರಲ್ಲಿ ಹೆಣ್ಣಿನವರು ಹರಿವಾಣ ಇಡುತ್ತಾರೆ. ಈ ಹರಿವಾಣದಲ್ಲಿ ಐದು ವೀಳ್ಯದೆಲೆ, ಐದು ಅಡಿಕೆ ಮತ್ತು ಅಡಿಕೆ ಹೋಳುಗಳನ್ನು ಇಡುವುದು ರೂಢಿ. ಈ ಮಣೆಯ ಹಿಂದೆ ವಧು ಮತ್ತು ವರನ ಕಡೆಯ ವಾರಸುದಾರರು ಎದುರು ಬದರಾಗಿ ಕುಳಿತುಕೊಳ್ಳುತ್ತಾರೆ. ಊರಿನ ಗುರಿಕಾರ ಮತ್ತು ಮೊಕ್ತೇಸರ ಅಲ್ಲಿ ನೆರೆದಿರುವ ಗಂಡು ಮತ್ತು ಹೆಣ್ಣಿನ ಹೆತ್ತವರ, ಹಿರಿಯರ, ಅನುಭವಸ್ಥ ಗಣ್ಯರ ಸಮ್ಮುಖದಲ್ಲಿ ಈ ಸಂಬಂಧಕ್ಕೆ ಯಾರದ್ದಾದರೂ ವಿರೋಧವಿದೆಯೇ ಎಂದು ಕೇಳುವರು, ಇಲ್ಲವೆಂದಾಗ ವಧು ವರರ ಮಾವಂದಿರ ಮಾತಿಗೆ ಸಾಕ್ಷಿಯಾಗಿ ನಾಲ್ಕು ಜನ ಗೃಹಸ್ಥರ ಮುಂದೆ ಎಲ್ಲರೂ ಎದ್ದು ನಿಂತು ತಾಂಬೂಲದ ಹರಿವಾಣವನ್ನು ಪರಸ್ಪರ ವಿನಿಮಯ ಮಾಡಿಕೊಳ್ಳುತ್ತಾರೆ. ಈ ಆಚರಣೆಯನ್ನು ಮರಾಟಿಗರು "ಪಾನ್ ಪೋಡು ದೇವುಂಚೆ ಗೆವುಂಚೆ" ಎನ್ನುವರು. (ಅಡಿಕೆ ಹೋಳು, ವೀಳ್ಯದೆಲೆ ಕೊಡುವುದು ಮತ್ತು ತೆಗೆದುಕೊಳ್ಳುವುದು) ತುಳುವಿನಲ್ಲಿ ಈ ಕ್ರಿಯೆಯನ್ನು 'ಕಾಯಿ ಪೂಲು ಪಗಪ್ಪುನಿ' ಎನ್ನುವರು. ಇದೊಂದು ಸಾಮಾಜಿಕ ಒಪ್ಪಂದ ಮತ್ತು ಪ್ರಾಮಾಣಿಕೃತ ಕ್ರಿಯೆ ಎನ್ನಬಹುದು. ಇದು ಮನೆ ದೇವರ, ತುಳಸಿಕಟ್ಟೆ ದೇವರ, ಗುರುಹಿರಿಯರ ಸಮ್ಮುಖದಲ್ಲಿ ಪ್ರಮಾಣ ಪೂರ್ವಕವಾದ ವಾಗ್ದಾನ ಎಂದು ತಿಳಿಯುತ್ತಾರೆ. ನಂತರ ವಚನ ನಿಷ್ಪರಾದ ಬಳಿಕ ಅದಕ್ಕೆ ಸಾಕ್ಷಿಯಾಗಿ ಅಡಿಕೆಗಳನ್ನು ಸಣ್ಣ ಸಣ್ಣ ಹೋಳುಗಳನ್ನಾಗಿ ಮಾಡಿ ಎರಡೂ ಕಡೆಯವರು ತಾಂಬೂಲ ಹಾಕಿಕೊಳ್ಳುವರು ಮತ್ತು ಸಭೆಗೂ ಹಂಚುವರು. ನಿಶ್ಚಿತಾರ್ಥದಲ್ಲಿ ಎಲೆ ಅಡಿಕೆಯ ಬದಲಾವಣೆ ಮಾಡಿಕೊಂಡ ಮೇಲೆ ಆಡಿದ ಮಾತಿಗೆ ತಪ್ಪಬಾರದೆಂಬ ವಚನ ಬದ್ಧತೆಯ ಪ್ರಮಾಣ.

ಸತ್ಯ ಧರ್ಮ ನ್ಯಾಯಗಳ ಪವಿತ್ರತೆ ಅದಕ್ಕಿದೆ. ವಿವಾಹ ಮುರಿದು ಬೀಳದಂತೆ ಅದು ತಡೆಯುತ್ತದೆ. ಒಮ್ಮೆ ಈ ಕಾರ್ಯ ಮುಗಿದ ಮೇಲೆ ಮತ್ತೆ ಯಾರೂ ಅದರ ವಿರುದ್ಧ ಮಾತೆತ್ತಲಾರರು. ಇತರೆ ಜಾತಿಗಳ ಮದುವೆ ನಿಶ್ಚಯದ ಸಂದರ್ಭದಲ್ಲಿ ಒಪ್ಪಂದ ಪತ್ರ ಸಿದ್ಧಪಡಿಸುತ್ತಾರೆ. ಇವರಿಗೆ ಯಾವ ದಾಖಲೆಗಳು ಬೇಕಾಗಿಲ್ಲ. ಒಂದು ರೀತಿಯ ಮೌಖಿಕ ಒಪ್ಪಂದವಿದು. ಸಮಾಜವೇ, ಅನುಮೋದಿಸಿದ ಅಲಿಖಿತ ನಿಯಮವೂ ಹೌದು. ಈ ಆಚರಣೆಯನ್ನು ಗಮನಿಸಿದಾಗ ಎರಡು ಅಪರಿಚಿತ ಕುಟುಂಬಗಳ ಮಧ್ಯೆ ವೈವಾಹಿಕ ಬಂಧುತ್ವವನ್ನು ಕಲ್ಪಿಸಿಕೊಳ್ಳುವ ವೀಳ್ಯಶಾಸ್ತ್ರ ನಡೆಯುವುದು ಅರ್ಥಪೂರ್ಣವಾಗಿದೆ.

ಸಾಂಪ್ರದಾಯಿಕ ಮರಾಟಿಗರಲ್ಲಿ ಇಂದು ನಿಶ್ಚಯ ಕಾರ್ಯದಲ್ಲಿ ಹಲವಾರು ಬದಲಾವಣೆಗಳಾಗಿ ಹೊಸ ಸಂಪ್ರದಾಯಗಳು ಪ್ರವೇಶ ಆಗಿರುವುದು ಕಂಡುಬರುತ್ತದೆ. ಎರಡು ಸಮುದಾಯಗಳಲ್ಲಿ ಕಂಡು ಬರುವ 'ಉಂಗುರಧಾರಣೆ' ಹೆಚ್ಚುವರಿಯಾಗಿ ಸೇರಿಕೊಂಡಿದೆ. ಹೆಣ್ಣು ನಿಶ್ಚಯದ ದಿನ ಉಂಗುರ ಧಾರಣೆ ಮಾಡುವುದು ಕಂಡು ಬರುತ್ತದೆ. ಉಂಗುರ ಧಾರಣೆ ಮಾಡುವುದಕ್ಕೆ ಮರಾಟಿ ಸಮುದಾಯಗಳ ಹಿರಿಯರು ಈ ಹೊಸ ಪರಂಪರೆಯನ್ನು ಒಪ್ಪುತ್ತಿಲ್ಲ. ಆದರೆ ಯುವಕರು ಹಿರಿಯರ ಮಾತುಗಳನ್ನು ಕೇಳುತ್ತಿಲ್ಲ.

ಗಂಡಿನ ನಿಶ್ಚಿತಾರ್ಥ

ಈ ಹಿಂದೆ ಹೆಣ್ಣಿನ ಮನೆಯಲ್ಲಿ ನಿಶ್ಚಯ ಕಾರ್ಯ ನಡೆದಂತೆಯೇ ಗಂಡಿನ ಮನೆಯಲ್ಲೂ ನಡೆಯುತ್ತದೆ. ಕೆಲ ಪ್ರದೇಶಗಳಲ್ಲಿ ಈ ಕಾರ್ಯ ವಿಜ್ರಂಭಣೆಯಿಂದ ನಡೆದರೆ, ಕೆಲವರು ತಮ್ಮ ಆರ್ಥಿಕ ಸ್ಥಿತಿಗತಿ ಮತ್ತು ಸಾಮಾಜಿಕ ಸ್ಥಾನಮಾನಗಳಿಗೆ ಅನುಗುಣವಾಗಿ ಗಂಡಿನ ನಿಶ್ಚಯ ಕಾರ್ಯ ನಡೆಯುವುದನ್ನು ಕ್ಷೇತ್ರಕಾರ್ಯ ಸಂದರ್ಭದಲ್ಲಿ ವೀಕ್ಷಿಸಲಾಗಿದೆ. ಈ ನಿಶ್ಚಿತಾರ್ಥದಲ್ಲಿ ಹೆಣ್ಣಿನ ಕಡೆ ನಿಶ್ಚಯಿಸಿದಂತೆ ಮದುವೆಯ ಒಪ್ಪಂದಗಳಲ್ಲಿ ಏನಾದರೂ ವ್ಯತ್ಯಾಸಗಳಾಗಿದ್ದಲ್ಲಿ ಮುಕ್ತವಾಗಿ ಚರ್ಚೆ ನಡೆಸಿ ನಿರ್ಧಾರಕ್ಕೆ ಬರುತ್ತಾರೆ. ಮದುವೆಗೆ ಸಂಬಂಧಿಸಿದ ಖರ್ಚು ವೆಚ್ಚ, ಮದುವೆಯ ದಿನ ಮತ್ತು ಸಭಾಮಂಟಪದ ವ್ಯವಸ್ಥೆ ಕುರಿತು ಚರ್ಚಿಸುತ್ತಾರೆ. ವಧು ದಕ್ಷಿಣೆಯು ನಿಧಾನಗತಿಯಲ್ಲಿ ಬದಲಾವಣೆಗೊಂಡು ವರದಕ್ಷಿಣೆಯ ಪ್ರವೇಶ ಆಗಿರುವುದನ್ನು ಕ್ಷೇತ್ರಕಾರ್ಯದಲ್ಲಿ ಗಮನಿಸಿದ್ದೇನೆ. ಪ್ರಾಚೀನ ಕಾಲದಲ್ಲಿ ಮರಾಟಿಗರಲ್ಲಿ 'ತೆರ' ಎಂದು ಕರೆಯಲ್ಪಡುವ ವಧು ದಕ್ಷಿಣೆ ಇತ್ತು. ಇಂದು ಈ ಪದ್ಧತಿಯನ್ನು ಸಾಂಕೇತಿಕವಾಗಿ ಕಾಣಲಾಗುತ್ತಿದೆ. ಇವರ ಸಂಪ್ರದಾಯದಂತೆ ೧೦ ರೂ ೨೫ ಪೈಸೆ ತೆರ ಕೊಡುವ ಪದ್ಧತಿ ಇತ್ತು. ವರದಕ್ಷಿಣೆ ಜೊತೆಗೆ ಬಂಗಾರ ಕೊಡುವ ಮತ್ತು ವಿವಾಹದ ಖರ್ಚನ್ನು ಹೆಣ್ಣಿನ ಕಡೆಯಿಂದಲೇ ಭರಿಸುವ ಪದ್ಧತಿ ಆರಂಭವಾಗಿದೆ.

ಆಮಂತ್ರಣ ಪತ್ರಿಕೆ

ಪ್ರಾಚೀನ ಕಾಲದಲ್ಲಿ ವಧು ವರರ ಮನೆಯವರು ತಮ್ಮ ಕುಟುಂಬಸ್ಥರಿಗೆ ಜಾತಿಯ ಬಂಧು-ಬಾಂಧವರಿಗೆ, ನೆರೆಹೊರೆಯವರಿಗೆ ವಿವಾಹ ಕಾರ್ಯಕ್ರಮಕ್ಕೆ ಆಮಂತ್ರಿಸುವಲ್ಲಿ ಕೆಲ ಪದ್ಧತಿಗಳಿದ್ದವು. ಕುಟುಂಬದವರಿಗೆ ಹಾಗೂ ನೆಂಟರಿಷ್ಟರಿಗೆ ಮದುವೆ ಆಮಂತ್ರಣ ಪತ್ರಿಕೆಯೊಂದಿಗೆ ವೀಳ್ಯದೆಲೆ ಮತ್ತು ಅಡಿಕೆಯನ್ನಿಟ್ಟು ಆಮಂತ್ರಿಸುವುದು ಸಂಪ್ರದಾಯ. ಈ ಸಂದರ್ಭದಲ್ಲಿ ಆಮಂತ್ರಣ ನೀಡುವವರು ಮತ್ತು ಸ್ವೀಕರಿಸುವವರು ತಲೆಗೆ ಮುಂಡಾಸು ಕಟ್ಟಿ ವೀಳ್ಯೆದೆಲೆ ಮತ್ತು ಅಡಿಕೆಯನ್ನಿಟ್ಟು ಆಹ್ವಾನಿಸುವರು. ವಧುವಿನ ಮನೆಯವರು ವರನ ಮನೆಗೆ ಮತ್ತು ವರನ ಮನೆಯವರು ವಧುವಿನ ಮನೆಗೆ ಹೋಗಿ ಕರೆಯುವುದು ಕ್ರಮ. ಕೆಲವೊಂದು ಕಡೆ ಮಹಿಳೆಯರು ಹೋಗಿ ತಮ್ಮ ಮಕ್ಕಳ ವಿವಾಹಕ್ಕೆ ಆಮಂತ್ರಿಸುವ

ಪದ್ಧತಿ ಇದೆ. ಇತ್ತೀಚೆಗೆ ಈ ನಿಯಮ ಸಡಿಲಗೊಳ್ಳುತ್ತಿದೆ. ಅನೇಕ ಕಡೆ ವಿದ್ಯಾವಂತ, ನೌಕರ ವರ್ಗದ ಹುಡುಗ ಹುಡುಗಿಯರು ಪ್ರತ್ಯೇಕ ಆಮಂತ್ರಣ ಪತ್ರಿಕೆ ಮುದ್ರಿಸಿ ಹಂಚುತ್ತಿರುವುದು ಕಂಡುಬರುತ್ತದೆ.

ಚಪ್ಪರ ಹಾಕುವುದು

ನಿಶ್ಚಿತಾರ್ಥ ಆದ ದಿನದಿಂದಲೇ ಮದುವೆ ಮನೆಯಲ್ಲಿ ಹೊಸ ಕಳೆ ಪ್ರಾರಂಭವಾಗುತ್ತದೆ. ಅನೇಕ ಮರಾಟಿ ಹಿರಿಯರು ಹಿಂದಿನ ಕಾಲದಲ್ಲಿ ಮದುವೆ ಅಂದರೆ ಸಂಪ್ರದಾಯಿಕವಾಗಿ ಐದಾರು ದಿನಗಳವರೆಗೆ ನಡೆಯುತ್ತಿರುವುದನ್ನು ನೆನಪಿಸಿಕೊಂಡುರು. ಇಂದು ಐದಾರು ದಿನಗಳ ಬದಲಿಗೆ ಒಂದೆರಡು ದಿನಗಳಿಗೆ ಸೀಮಿತಗೊಂಡಿದೆ. ಗೌಜು ಗದ್ದಲಗಳಲ್ಲಿ ಕಡಿಮೆ ಏನೂ ಆಗಲಿಲ್ಲ ಎಂದು ತಿಳುವಳಿಕೆದಾರರು ಹೇಳುವರು. ಮನೆಗೆ ಸುಣ್ಣ ಬಣ್ಣ ಬಳಿದು ತೆಂಗಿನಗರಿಗಳಿಂದ ಮನೆಯಂಗಳದಲ್ಲಿ ಚಪ್ಪರ ಹಾಕುವರು. ಮದುವೆಗೆ ಆಹ್ವಾನಿತರನ್ನು ಸ್ವಾಗತಿಸಲು ಮನೆಯ ಸದಸ್ಯರೆಲ್ಲರೂ ಸಿದ್ಧರಾಗಿರುತ್ತಿದ್ದರು. ಆದರೆ ಇಂದು ಬಹುತೇಕ ಮರಾಟಿಗರ ಮದುವೆ ಸಮಾರಂಭಗಳು ಪಟ್ಟಣ, ನಗರಗಳ ಹಾಗೂ ದೇವಸ್ಥಾನದ ಹತ್ತಿರದ ಕಲ್ಯಾಣ ಮಂಟಪದಲ್ಲಿ ನಡೆಯುತ್ತಿವೆ. ಮನೆಯ ಮತ್ತು ಚಪ್ಪರದ ಅಲಂಕಾರಗಳೆಲ್ಲ ಅವರವರ ಆರ್ಥಿಕ ಅನುಕೂಲಕ್ಕೆ ತಕ್ಕಂತೆ ಇರುವುದನ್ನು ಗಮನಿಸಲಾಗಿದೆ. ಇಂದು ಮದರಂಗಿ ಕಾರ್ಯ ದೇವರ ಊಟದಿಂದ ಹಿಡಿದು ಅತ್ತೆಯ ಮನೆಯ ಸಂಮಾನದ ತನಕ ಅನೇಕ ಕಡೆಗಳಲ್ಲಿ ಕೇಟರರ್ಸ್ ಮತ್ತು ಇವೆಂಟ್ ಆರೆಂಜರ್ಸ್ ಪ್ರವೇಶ ಪಡೆದಿರುವುದನ್ನು ಕಾಣುತ್ತೇವೆ.

ಮದುವೆಯ ಹಿಂದಿನ ದಿನದ ಆಚರಣೆಗಳು

ಮದುವೆಯ ಹಿಂದಿನ ದಿನ ಮರಾಟಿ ನಾಯ್ಕರಲ್ಲಿ ಶಾಸ್ತ್ರೋಕ್ತವಾಗಿ ದೇವರ ದೇವಕಾರ್ಯ, ಕುಲದೇವರನ್ನು ಮನೆಗೆ ತರುವ ಕಾರ್ಯ, ಭತ್ತ ಕುಟ್ಟುವ ಸಂಪ್ರದಾಯ, ಅರಿಶಿಣ ಎಣ್ಣೆ ಹಚ್ಚುವುದು, ಕಲಶ ಸ್ನಾನ, ಮಡಿವಾಳ ಮತ್ತು ಕ್ಷೌರಿಕನ ಧಾರ್ಮಿಕ ವಿಧಿ ವಿಧಾನ, ಮದರಂಗಿ ಶಾಸ್ತ್ರ, ವಧುವಿನ ಮನೆಗೆ ವರನ ಕಡೆಯಿಂದ ಅತಿಥಿಗಳ ಆಗಮನ, ವರನ ತಮ್ಮನಿಂದ ವಧುವಿಗೆ ಉಡಿ ತುಂಬಿಸುವ ಕಾರ್ಯ ನಡೆಯುತ್ತದೆ. ಮರಾಟಿ ಸಮುದಾಯಗಳ ಕೆಲ ಮದುವೆಗಳು ಸಂಪ್ರದಾಯದಂತೆ ಹಾಗೂ ವಿಜ್ರಂಭಣೆಯಿಂದ ನಡೆಯುವುದನ್ನು ಕ್ಷೇತ್ರಕಾರ್ಯ ಸಂದರ್ಭದಲ್ಲಿ ಗಮನಿಸಿದ್ದೇನೆ. ಈ ಎಲ್ಲಾ ಕಾರ್ಯಕ್ರಮಗಳಿಂದ ನಾವು ತಿಳಿದುಕೊಳ್ಳುವುದೇನೆಂದರೆ ಮದುಮಗ ಮತ್ತು ಮದುಮಗಳನ್ನು ತಮ್ಮ ಸಾಮಾನ್ಯ ಜೀವನ ಕ್ರಮದಿಂದ ಅಸಾಮಾನ್ಯರನ್ನಾಗಿ ಉನ್ನತೀಕರಿಸುವುದು ಮತ್ತು ಗೃಹಸ್ಥಾಶ್ರಮದ ಜವಾಬ್ದಾರಿಯನ್ನು ಸಮಾಜ ಹೊರಿಸುವ ಪ್ರಕ್ರಿಯೆ ಆಗಿರುತ್ತದೆ.

ಧಾರೆ ಕಂಬ ಸ್ಥಾಪನೆ

ವಧು ವರರ ಮನೆಗಳಲ್ಲಿ ಪ್ರತ್ಯೇಕವಾಗಿ ಈ ಎಲ್ಲಾ ಶಾಸ್ತ್ರಗಳು ನಡೆಯುತ್ತವೆ. ಚಪ್ಪರದ ಮಧ್ಯ ಭಾಗದಲ್ಲಿ ಹಾಳೆ ಮರದ ಧಾರೆ ಕಂಬ ಅಥವಾ ಮಹೂರ್ತ ಕಂಬವನ್ನು ನೆಟ್ಟು ಕಂಬದ ಸುತ್ತ ಮಡಿ ವಸ್ತ್ರ, ಮಾವಿನ ಎಲೆ, ವೀಳ್ಯದೆಲೆ, ಅಡಿಕೆಗಳನ್ನು ಕಟ್ಟುತ್ತಾರೆ. ಮುಹೂರ್ತದ ಕಂಬದ ಮೇಲೆ ಮತ್ತು ಚಪ್ಪರಕ್ಕೆ ಚೌಕ ಅಥವಾ ಆಯತಾಕಾರದಲ್ಲಿ ಬಿಳಿ ಮಡಿವಸ್ತ್ರ ಕಟ್ಟಿರುತ್ತಾರೆ. ಇದಕ್ಕೆ ಮಡಿವಾಳನು ತೆಂಗಿನಕಾಯಿ ಮತ್ತು ತೂಗು ದೀಪವನ್ನು ನೇತು ಹಾಕುತ್ತಾನೆ. ಅಂಗಳದಲ್ಲಿರುವ ತುಳಸಿಕಟ್ಟೆ ಹತ್ತಿರ, ಅತಿಥಿಗಳನ್ನು ಸತ್ಕರಿಸುವ ಎಲ್ಲಾ ಸಿದ್ಧತೆಗಳನ್ನು ಮಾಡಿಕೊಂಡಿರುತ್ತಾರೆ.

ಗಣಪತಿ ಆರಾಧನೆ ಮತ್ತು ದೇವರ ಊಟ

ಮದುರಂಗಿ ದಿನದ ಆರಂಭದಲ್ಲಿ 'ಗಣಪತಿ' ಆರಾಧನೆಗೆ ಸೇರಿದವರು ಮತ್ತು ಕುಟುಂಬಸ್ಥರೆಲ್ಲರು ಪ್ರಾರ್ಥನೆ ಮಾಡುತ್ತಾರೆ. ಇದನ್ನು 'ಗಣಪತಿ ದೇವರು' ಇಡುವುದು ಎನ್ನುತ್ತಾರೆ. ಗಣಪತಿ ದೇವರ ಅನುಗ್ರಹಬೇಕೆಂದು ಪ್ರಾರ್ಥಿಸುತ್ತಾರೆ. ವಧುವರರ ಅಲಂಕಾರಕ್ಕೆ ಖರೀದಿಸಿದ ಒಡವೆ, ಮದುವೆಯ ಸೀರೆ ತಾಂಬೂಲ ಮುಂತಾದ ಎಲ್ಲ ವಸ್ತ್ರಗಳನ್ನು ಮಣೆಯ ಮೇಲೆ ಇಟ್ಟು, ದೈವ ದೇವರು, ಪಿತೃಗಳ ಜೊತೆಗೆ ನಾಗದೇವರನ್ನು ಪ್ರಾರ್ಥಿಸಿ ಆಶೀರ್ವಾದ ಪಡೆಯುತ್ತಾರೆ. ವಿವಾಹ ಕಾರ್ಯಕ್ರಮ, ಮದುಮಗ ಮತ್ತು ಮದುಮಗಳ ಮುಂದಿನ ದಾಂಪತ್ಯ ಜೀವನದಲ್ಲಿ ಯಾವುದೇ ವಿಘ್ನಗಳು ಬಾರದೇ ಇರಲಿ ಎಂದು ಹಿರಿಯರೊಬ್ಬರು ಪ್ರಾರ್ಥಿಸುತ್ತಾರೆ. ಹೆಣ್ಣು ಮಗಳೊಬ್ಬಳು ಅಂದು ಸ್ನಾನ ಮಾಡಿ ಸಸ್ಯಾಹಾರದ ಊಟವನ್ನು ತಯಾರಿಸುತ್ತಾಳೆ. ದೇವರ ಊಟವಾದುದರಿಂದ ಅಂದು ಮಾಂಸಾಹಾರ ನಿಷಿದ್ಧ. ದೇವರ ಪ್ರಸಾದವನ್ನು ಹತ್ತಿರದ ಸಂಬಂಧಿಕರಿಂದ ಹೊರತುಪಡಿಸಿ ಇಬ್ಬರು ಸಣ್ಣ ಮಕ್ಕಳಿಗೆ ವಿಶೇಷವಾಗಿ ದೇವರ ಊಟವನ್ನು ಬಡಿಸುತ್ತಾರೆ. ನಂತರ ಬಂದಿರುವ ಎಲ್ಲ ಕುಟುಂಬಸ್ಥರು ಮತ್ತು ಸಂಬಂಧಿಕರು ಸೇರಿ ಮಧ್ಯಾಹ್ನದ ಭೋಜನ ಮಾಡುತ್ತಾರೆ.

ಭತ್ತ ಕುಟ್ಟುವುದು

ಮಧ್ಯಾಹ್ನದ ಭೋಜನದ ನಂತರ ಕೆಲ ಹೆಂಗಸರು ಸೇರಿ ಭತ್ತ ಕುಟ್ಟುವ ಶಾಸ್ತ್ರ ಮಾಡುತ್ತಾರೆ. ನಾಲ್ಕೈದು ಹೆಂಗಸರು ಒನಕೆಗೆ ಮಾವು, ಹಲಸು, ರೆಂಜೆ ಮರದ ಎಲೆಗಳನ್ನು ಒನಕೆಗೆ ಕಟ್ಟಿರುತ್ತಾರೆ. ಈ ಸಂದರ್ಭದಲ್ಲಿ ಇತರೆ ಮಹಿಳೆಯರು ಸೋಭಾನೆ ಪದಗಳನ್ನು ಹಾಡುತ್ತಾರೆ. ವಧುವು ಒನಕೆ ಹಿಡಿದು ಸಾಂಕೇತಿಕವಾಗಿ ಭತ್ತ ಕುಟ್ಟುತ್ತಾಳೆ. ಕೆಲ ಪ್ರದೇಶಗಳಲ್ಲಿ ಮರಾಟಿ ನಾಯ್ಕರು ಮುಹೂರ್ತದ ಮಣಿ ಕಟ್ಟಿದ ಮೇಲೆ, ತುಳಸಿ ಮುಂಭಾಗದಲ್ಲಿ ಅಥವಾ ಅಂಗಳದಲ್ಲಿ ನಾಲ್ಕು ಮೂಲೆಗಳಲ್ಲಿ ಗೆರಸೆಯನ್ನು (ಮರ) ತಂದು ಅದರ ಮಧ್ಯಭಾಗದಲ್ಲಿ ಭತ್ತವನ್ನು ಹಾಕಿ, ಐದು ಜನ ಮುತ್ತೈದೆಯರು ವಧುವೂ ಸೇರಿ ಐದು ಅಲಂಕೃತವಾದ ಒನಕೆಗಳಿಂದ ಏಕಕಾಲದಲ್ಲಿ ಭತ್ತ ಕುಟ್ಟುವ ಸಂಪ್ರದಾಯವನ್ನು ಕ್ಷೇತ್ರಕಾರ್ಯದಲ್ಲಿ ಗಮನಿಸಲಾಗಿದೆ.

ದೇವರು ಇಡುವುದು ಅಥವಾ ಕುಲದೇವರನ್ನು ತರುವುದು

ಮರಾಟಿ ನಾಯ್ಕರಲ್ಲಿ ಅವರದ್ದೇ ಆದ ಸಂಪ್ರದಾಯವಿದೆ. ಕುಲದೇವರನ್ನು ಅವರವರ ಬಳಿಗನುಗುಣವಾಗಿ ಗುರುತಿಸಿಕೊಂಡಿದ್ದಾರೆ. ಪ್ರತಿಯೊಂದು ಬಳಿಗೆ ಅನ್ವಯವಾಗುವ ಪ್ರಕೃತಿ ಒಂದಲ್ಲ ಒಂದು ಮರ, ಗಿಡ, ಬಳ್ಳಿ ಇತ್ಯಾದಿಗಳು ಕುಲದ ಸಂಕೇತವಾಗಿವೆ. ಉದಾಹರಣೆಗೆ ಹುತ್ತದ ಮಣ್ಣು, ಅತ್ತಿಮರ ಪಾದೆ ಕಲ್ಲಿನ ಮಧ್ಯದಲ್ಲಿ ಬೆಳೆಯುವ ಒಂದು ರೀತಿಯ ಮುಳ್ಳು, ಹತ್ತಿ, ಬೇವು, ಇವುಗಳನ್ನು ತಮ್ಮ ಕುಲದೇವರೆಂದು ತಿಳಿದು ಸಾಂಕೇತಿಕವಾಗಿ ತಂದು ತಮ್ಮ ದೇವರ ಕೋಣೆಯಲ್ಲಿ ಇಡುವ ಪದ್ಧತಿಯನ್ನು ಪರಂಪರಾನುಗವಾಗಿ ಆಚರಿಸುತ್ತಾ ಬಂದಿದ್ದಾರೆ ಎಂದು ತಿಳುವಳಿಕೆದಾರರು ಹೇಳುತ್ತಾರೆ. ಮರಾಟಿ ನಾಯ್ಕರು ದೇವರು ತರುವ ಕಾರ್ಯವನ್ನು ಗಮನಿಸಿದಾಗ, ಅದು ಪ್ರಕೃತಿಯೊಂದಿಗೆ ಸಾಮರಸ್ಯದ ಬದುಕನ್ನು ಸಾಗಿಸುವ ತತ್ವ ಅಡಗಿದೆ ಎಂದು ಹೇಳಬಹುದು. ದೇವರು ತರುವ ಸಂದರ್ಭದಲ್ಲಿ ಒಂದು ವೀಳ್ಯದೆಲೆ, ಸುಲಿದ ಅಡಿಕೆ, ಒಂದು ನಾಣ್ಯ, ವರನ ಮನೆಯಾದರೆ ಮದುವೆಗಾಗಿ ತಂದಿರುವ ಪಂಚೆಯ ನೂಲು, ವಧುವಿನ ಮನೆಯಾದರೆ ವಧುವಿನ ತಂದೆಯ ಪಂಚೆಯ ನೂಲನ್ನು ತೆಗೆದು ಗಿಡ ಅಥವಾ ಮರ ಅಥವಾ ಹುತ್ತದ ಬುಡದಲ್ಲಿಟ್ಟು, ಅಲ್ಲಿ ಸೇರಿರುವ ಎಲ್ಲಾ ವ್ಯಕ್ತಿಗಳು ಆ

ಕುಲದೇವರನ್ನು ಪ್ರಾರ್ಥಿಸುತ್ತಾರೆ. 'ನಮ್ಮ ಮಗ ಅಥವಾ ಮಗಳಿಗೆ ಲಗ್ನ ಏರ್ಪಡಿಸಿದ್ದೇವೆ. ನಮ್ಮ ಕುಲದೇವರಾಗಿರುವ ನೀನು ಈ ಶುಭ ಸಂದರ್ಭದಲ್ಲಿ ನಮ್ಮ ಮನೆಗೆ ಬಂದು ಯಾವುದೇ ರೀತಿಯ ವಿಘ್ನಗಳು ಬಾರದಂತೆ ಉತ್ತಮ ರೀತಿಯಲ್ಲಿ ವಿವಾಹ ಕಾರ್ಯಕ್ರಮ ಯಶಸ್ವಿಯಾಗಿ ನೆರವೇರಿಸಿ ಕೊಡಬೇಕು. ನಮ್ಮ ಕುಟುಂಬದ ಎಲ್ಲರಿಗೂ ಅನುಗ್ರಹಿಸಬೇಕೆಂದು ಪ್ರಾರ್ಥಿಸುತ್ತಾರೆ.' ಈ ಸಂದರ್ಭದಲ್ಲಿ ವರ ಅಥವಾ ವಧುವಿನ ಬಳಿಗೆ ಸಂಬಂಧಿಸಿದ ಕುಲದೇವರು ಹುತ್ತವಾದಲ್ಲಿ ಭೂಮಿಯ ಮೇಲ್ಭಾಗದಲ್ಲಿರುವ ಹುತ್ತದ ಮಣ್ಣಿನ ಒಂದು ಭಾಗವನ್ನು ಕೆಲವೊಮ್ಮೆ ಹುತ್ತದ ತುದಿಯ ನಾಲ್ಕೈದು ಇಂಚಿನ ಮಣ್ಣಿನ ಭಾಗವನ್ನು ಜಾಗರೂಕತೆಯಿಂದ ಕತ್ತರಿಸಿ, ಹರಿವಾಣದಲ್ಲಿ ಇಡುತ್ತಾರೆ. ತಮ್ಮ ಬಳಿಯ ಕುಲದೇವರು ಮರವಾಗಿದ್ದಲ್ಲಿ ಅದರ ಒಂದು ಟೊಂಗೆಯನ್ನು ಅಥವಾ ಗಿಡವಾಗಿದ್ದಲ್ಲಿ ಇಡೀ ಗಿಡವನ್ನು ಕಿತ್ತು ಜಾಗರೂಕತೆಯಿಂದ ತಂದು, ನೀರು ಹರಿಯುವ ಸ್ಥಳದಲ್ಲಿ, ಬಾವಿ ಕಟ್ಟೆಯಲ್ಲಿ ಅಥವಾ ಕೆರೆಯ ಹತ್ತಿರ ಹಿಂದಿನ ದಿನ ಅಥವಾ ಮದರಂಗಿಯ ದಿನ ತಂದು ಇಡುತ್ತಾರೆ. ಆ ವಸ್ತುವನ್ನು ಶಾಸ್ತ್ರೋಕ್ತವಾಗಿ ಮನೆಯ ದೇವರೊಂದಿಗೆ ಸೇರಿಸಿ, ಮದರಂಗಿ ದಿನ ನಾಲ್ಕೈದು ಮುತ್ತೈದೆಯರು ಸೇರಿ, ಬಿಳಿ ವಸ್ತ್ರವನ್ನು ಆ ಪವಿತ್ರವಾದ ಕುಲದೇವರ ಮೇಲ್ಭಾಗದಲ್ಲಿ ವಸ್ತ್ರದ ನಾಲ್ಕು ಮೂಲೆಯನ್ನು ಹಿಡಿದು, ತಾವು ತಂದಿರುವ ದೇವರಿಗೆ ಬಿಸಿಲು ತಾಗದ ಹಾಗೆ ಎಚ್ಚರ ವಹಿಸುತ್ತಾರೆ. ಕೊನೆಗೆ ಅದನ್ನು ದೇವರ ಕೋಣೆಗೆ ತಂದು ಅದಕ್ಕೆ ಸಾಂಕೇತಿಕವಾಗಿ ಪೂಜೆ ಮಾಡಿ, ಜಾಗ್ರತೆಯಿಂದ ವಿವಾಹ ಕಾರ್ಯಕ್ರಮ ಮುಗಿಯುವರೆಗೆ ಕಾಪಾಡಿಕೊಳ್ಳುತ್ತಾರೆ. ನಂತರ ಹುತ್ತದ ಮಣ್ಣನ್ನು ಮಾತ್ರ ಪ್ರಸಾದ ರೂಪದಲ್ಲಿ ಧಾರಣೆ ಮಾಡುತ್ತಾರೆ ಅಥವಾ ಅವರು ಎಲ್ಲಿಂದ ಹುತ್ತದ ಮಣ್ಣನ್ನು ತಂದಿರುತ್ತಾರೋ ಅಲ್ಲಿ ತೆಗೆದುಕೊಂಡು ಹೋಗಿ ಪ್ರಾರ್ಥಿಸಿ ಇಡುತ್ತಾರೆ.

ಹಳ್ಳಿಗಳಲ್ಲಿ ದೇವರನ್ನು ತರುವ ಸಂಪ್ರದಾಯವನ್ನು ಇಂದೂ ಕಾಣುತ್ತೇವೆ. ನಗರಗಳಲ್ಲಿ ಈ ಸಂಪ್ರದಾಯ ಬಹುತೇಕ ನಿಂತು ಹೋಗಿದೆ. ತೋರಣ ಅಥವಾ ಮುಹೂರ್ತ ಕಂಬ ಸ್ಥಾಪಿಸುವುದು, ಭತ್ತ ಕುಟ್ಟುವ ಸಂಪ್ರದಾಯ ಮರೆಯಾಗಿದೆ. ಮಡಿವಾಳ ಮತ್ತು ಕ್ಷೌರಿಕ ಈ ಕೆಲಸಕ್ಕಾಗಿ ಬರುವುದು ಮತ್ತು ಮದುವೆ ಮನೆಯವರು ಕರೆಯುವ ಆಚರಣೆಗಳು ನಗರ ಭಾಗದಲ್ಲಿ ನಿಂತು ಹೋಗಿವೆ ಎಂದು ಹೇಳಬಹುದು.

ಅರಿಶಿನೆಣ್ಣೆ ಏರಿಸುವುದು: ಇದು ವಧುವರರ ಮನೆಗಳಲ್ಲಿ ಮದರಂಗಿ ಶಾಸ್ತ್ರದ ದಿನ ನಡೆಯುವ ಆಚರಣೆಯಾಗಿದೆ. ಕುಲ ದೇವರನ್ನು ತಂದು ನಂತರ ದೇವರ ಕೋಣೆ ಅಥವಾ ಜಗಲಿಯಲ್ಲಿ ಚಾಪೆ ಹಾಸಿ ಮರದ ಮಣೆಯ ಮೇಲೆ ದೀಪಹಚ್ಚಿ, ವಧು ವರರನ್ನು ಕುಳ್ಳರಿಸುತ್ತಾರೆ. ಐದು ಜನ ಮುತ್ತೈದೆಯರು ಒಂದು ಚಾಕುವಿನ ತುದಿಯಿಂದ ವರ ಅಥವಾ ವಧುವಿನ ತಲೆ, ಭುಜ, ಕೈ, ಸೊಂಟ, ಕಾಲು, ಪಾದ ಮತ್ತು ನೆಲಕ್ಕೆ ಹೀಗೆ ನೆಲದಿಂದ ತಲೆಯವರೆಗೆ ಮುಟ್ಟಿಸುತ್ತಾರೆ. ಇದನ್ನು "ಅರಶಿನೆಣ್ಣೆ ಏರಿಸುವುದು" ಅಥವಾ 'ಎಣ್ಣೆ ಏರಿಸುವುದು' ಎಂದು ಕರೆಯುತ್ತಾರೆ.

ಯಾವುದೇ ದುಷ್ಟಶಕ್ತಿಯು ವಧುವರರಿಗೆ ಯಾವುದೇ ರೀತಿಯಲ್ಲಿ ತೊಂದರೆ ನೀಡಬಾರದೆಂಬ ನಂಬಿಕೆಯಿಂದ ಎಣ್ಣೆ ಏರಿಸುವರು. ವಿವಾಹದ ನಂತರ ಮರುದಿನ ಗಂಡನ ಮನೆಯಲ್ಲಿ "ಎಣ್ಣೆ ಇಳಿಸುವ" ಆಚರಣೆ ನಡೆಯುತ್ತದೆ. ಉಡುಪಿ ಜಿಲ್ಲೆಯಲ್ಲಿ ಮರಾಟಿಗರು ವಾಸಿಸುತ್ತಿರುವ ಕೆಲ ಪ್ರದೇಶಗಳ ಎಣ್ಣೆ ಏರಿಸುವ ಸಂದರ್ಭದಲ್ಲಿ ವರನಿಗೆ ಜಾತಿಯ ಗುರಿಕಾರ ಅಥವಾ ಭಾವ ಮುಹೂರ್ತದ ಮಣಿಯನ್ನು ಕಟ್ಟುತ್ತಾರೆ. ವಧುವಿಗೆ ವಧುವಿನ ನಾದಿನಿ, ಅತ್ತಿಗೆ ಅಥವಾ ಗುರಿಕಾರನ ಪತ್ನಿ ಕಟ್ಟುವರು.

ಕಲಶ ಸ್ನಾನ ಮತ್ತು ಮದರಂಗಿ ಆಚರಣೆ: ಎಣ್ಣೆ ಏರಿಸುವ ಕಾರ್ಯಕ್ರಮ ಮುಗಿದ ತಕ್ಷಣ ವಧುವರರ ಮನೆಯಲ್ಲಿ ಮದರಂಗಿ ಶಾಸ್ತ್ರದ ದಿನ ಕಲಶಸ್ನಾನ ಅಥವಾ ಕೆಲ ಪ್ರದೇಶಗಳಲ್ಲಿ ಬಾಳೆಗಿಡವನ್ನು

ಕಡಿಯುವ ಕಾರ್ಯ ನಡೆಯುತ್ತದೆ. ಈ ಆಚರಣೆಯನ್ನು ಕ್ಷೇತ್ರಕಾರ್ಯ ಸಂದರ್ಭದಲ್ಲಿ ವೀಕ್ಷಿಸಲಾಗಿದೆ. ಮದುವೆ ಮನೆಯ ಅಂಗಳದ ಯಾವುದಾದರೊಂದು ಮೂಲೆಯಲ್ಲಿ ಅಕ್ಕಿ ಹಿಟ್ಟು ಅಥವಾ ಶೇಡಿ ಮಣ್ಣಿನಿಂದ ಮಂಡಲ ಅಥವಾ ವೃತ್ತವನ್ನು ಮಡಿವಾಳ್ತಿಯು ಬರೆದಿರುತ್ತಾಳೆ, ಅದರ ಮಧ್ಯದಲ್ಲಿ ಮತ್ತು ನಾಲ್ಕು ಮೂಲೆಯಲ್ಲಿ ಬೈಹುಲ್ಲಿನಿಂದ ತಯಾರಿಸಿದ ಸಿಂಬಿಯನ್ನಿಟ್ಟು, ಮಧ್ಯಭಾಗದಲ್ಲಿ ದೊಡ್ಡ ಗಾತ್ರದ ಮಣ್ಣಿನ ಮಡಿಕೆಯನ್ನಿಟ್ಟಿರುತ್ತಾರೆ. ನಾಲ್ಕು ಮೂಲೆಗಳಲ್ಲಿ ಚಿಕ್ಕ ಚಿಕ್ಕ ತಂಬಿಗೆಯನ್ನಿಟ್ಟು ಅದಕ್ಕೆ ನೀರು ಹಾಕಿ ಅಡಿಕೆ, ಮಾವಿನ ಮತ್ತು ಹಲಸಿನ ಎಲೆಗಳನ್ನಿಟ್ಟು ಐದು ಕಲಶಕ್ಕೆ ದೊಂದು ನಾಣ್ಯವನ್ನು ಹಾಕುವ ಪದ್ಧತಿ ಪರಂಪರಾನುಗತವಾಗಿ ನಡೆದು ಬಂದಿತ್ತು ಎಂಬುದಾಗಿ ತಿಳುವಳಿಕೆದಾರರು ತಿಳಿಸಿರುವರು. ಇತ್ತೀಚಿನ ದಿನಗಳಲ್ಲಿ ಮಣ್ಣಿನ ಮಡಿಕೆಯ ಬದಲು ತಾಮ್ರ ಅಥವಾ ಸ್ಟೀಲಿನ ಕೊಡವನ್ನು ಉಪಯೋಗಿಸುವುದು ಕಂಡುಬಂದಿದೆ. ಈ ಸಂದರ್ಭದಲ್ಲಿ ವಧು-ವರರ ಅಜ್ಜಿಯನ್ನು ಪೂರ್ವಕ್ಕೆ ಮುಖಮಾಡಿ ಕುಳ್ಳರಿಸುತ್ತಾರೆ. ವಧು-ವರರು ಮಂಡಲಕ್ಕೆ ಮೂರು ಸುತ್ತು ಸುತ್ತಿ ಬಲಗಾಲನ್ನು ಇಟ್ಟು ಮಂಡಲದೊಳಗೆ ಪ್ರವೇಶಿಸುತ್ತಾರೆ. ಅಜ್ಜಿಯ ಮೊಣಕಾಲ ಮೇಲೆ ವಧುವರರು ಕುಳಿತುಕೊಳ್ಳುತ್ತಾರೆ. ಮಡಿವಾಳ್ತಿ, ಗುರಿಕಾರನ ಹೆಂಡತಿ ಹಾಗೂ (ಎಲ್ಲರೂ ಮುತ್ತೈದೆಯಾಗಿರಬೇಕು) ನಾಲ್ಕು ಜನ ಮುತ್ತೈದೆಯರು ಸೇರಿ ವೃತ್ತಾಕಾರ ಅಥವಾ ಆಯತಾಕಾರವಾಗಿ ಕಟ್ಟಿರುವ ಕಲಶದ ನೀರನ್ನು ಮೂರು ಸಲ ಪ್ರದಕ್ಷಿಣೆ ಹಾಕಿ ಬರುವ ಸಂದರ್ಭದಲ್ಲಿ, ಸ್ವಲ್ಪ ನೀರನ್ನು ಭೂಮಿಗೆ ಚಿಮುಕಿಸಿ, ಮಂಡಲಕ್ಕೆ ತಂಬಿಗೆಯಲ್ಲಿರುವ ನೀರನ್ನು ಹಾಕುತ್ತಾರೆ. ಮಧ್ಯದಲ್ಲಿಟ್ಟ ಕಲಶಕ್ಕೆ ಅದೇ ರೀತಿ ಪ್ರದಕ್ಷಿಣೆ ಹಾಕಿಸಿ ಎಲ್ಲಾ ನೀರನ್ನು ಹೊಯ್ಯುತ್ತಾರೆ. ಈ ಸಂದರ್ಭದಲ್ಲಿ ಬೈ ಹುಲ್ಲಿನಲ್ಲಿ ಕಟ್ಟಿರುವ ಹಗ್ಗವನ್ನು ವಧುವರರು ತುಂಡರಿಸುತ್ತಾ ಮಂಡಲದಿಂದ ಹೊರ ಬರುತ್ತಾರೆ. ಈ ಆಚರಣೆಯನ್ನು ಮರಾಟಿ ನಾಯ್ಕರು 'ಪಿಲೆಸ್ನಾನ' 'ಅರಿಶಿಣ ಎಣ್ಣೆ ಸ್ನಾನ' ಅಥವಾ 'ಕಲಶ ಸ್ನಾನ' ಎನ್ನುವರು. ನಂತರ ವಧುವನ್ನು ವಧುವಿನ ಅಕ್ಕ ಮತ್ತಿತರರು ಸೇರಿ ಪ್ರತ್ಯೇಕವಾಗಿ ಸ್ನಾನ ಮಾಡಲು ಕರೆದುಕೊಂಡು ಹೋಗುತ್ತಾರೆ. ವಧುವರರು ಸ್ನಾನದ ನಂತರ ಹೊಸ ಬಟ್ಟೆ ಧರಿಸುತ್ತಾರೆ.

ಒಂದು ವೇಳೆ ವಯೋವೃದ್ಧೆ ಅಥವಾ ವಧುವರನ ಅಜ್ಜಿ ಇಲ್ಲದ ಪಕ್ಷದಲ್ಲಿ ವಧುವರರನ್ನು ಮಾತ್ರ ಕುಳ್ಳರಿಸಿ 'ಪಿಲೆಸ್ನಾನ' ಕಾರ್ಯ ನೆರವೇರಿಸುತ್ತಾರೆ. 'ಪಿಲೆಸ್ನಾನ' ಮಾಡಿ ಎದ್ದೇಳುವಾಗ ಮೊದಲೇ ತಂದಿಟ್ಟ ಬಾಳೆಗಿಡವನ್ನು ಎಡಗೈಯಿಂದ ವರನಿಂದ ಕಡಿಸುತ್ತಾರೆ ಮತ್ತು ಬಾಳೆಗಿಡ ಕಡಿದ ಕತ್ತಿಯನ್ನು ಅಲ್ಲೇ ಬಿಡುತ್ತಾರೆ. ಕಲಶಸ್ನಾನ ಮಾಡಿದ ಜಾಗವನ್ನು ಸೆಗಣಿ ನೀರು ಹಾಕಿ ಸ್ವಚ್ಛಗೊಳಿಸುತ್ತಾರೆ. ಈ ಆಚರಣೆಗೆ ಉಪಯೋಗಿಸಿರುವ ಕೆಲವೊಂದು ವಸ್ತುಗಳನ್ನು ಮಡಿವಾಳ್ತಿ ತನ್ನ ಎಡಗೈಯಿಂದ ದೂರಕ್ಕೆ ಎಸೆಯುತ್ತಾಳೆ. ನಂತರ ವರನ ಕಡೆಯಿಂದ ನೀಡಿರುವ ಸೀರೆ ಉಡಿಸಿ ಮತ್ತು ಹೂವು ತೊಡಿಸಿ ವಧುವನ್ನು ಸಿಂಗರಿಸುತ್ತಾರೆ. ನಾದಿನಿ ಅಥವಾ ನಾದಿನಿಯ ತೆತ್ತಿಗಾರ (ಮಹೂರ್ತೋಲಿ)ಳಾರುವವಳು ಕೊಡೆ ಹಿಡಿದು ಚಪ್ಪರದ ಮುಖ್ಯ ದ್ವಾರಕ್ಕೆ ಬರುತ್ತಾಳೆ. ವಧು ಪ್ರವೇಶಿಸುವ ಸಂದರ್ಭದಲ್ಲಿ ಆರತಿ ಮಾಡುತ್ತಾರೆ. ಇದಾದ ತಕ್ಷಣ ಸ್ವಾಗತಿಸುವ ಸಂದರ್ಭದಲ್ಲಿ ತಂದಿರುವ ಕುರ್ದಿ ನೀರು (ಕೆಂಪು ನೀರು)ನ್ನೂ ವಧುವರರ ಪಾದಗಳಿಗೆ ಸುರಿಯುತ್ತಾರೆ. ಇದನ್ನು ದೃಷ್ಟಿ ತೆಗೆಯುವ ಕ್ರಮ ಎಂದು ಹೇಳುತ್ತಾರೆ. ವಧು ಅಥವಾ ವರನನ್ನು ನೇರವಾಗಿ ದೇವರ ಕೋಣೆಗೆ ಕರೆದುಕೊಂಡು ಹೋಗಿ ದೇವರಿಗೆ ನಮಸ್ಕರಿಸುತ್ತಾರೆ. ನಂತರ ಚಾವಡಿ ಅಥವಾ ತಮಗೆ ಅನುಕೂಲ ಆಗುವ ತುಳಸಿಕಟ್ಟೆಯ ಮುಂಭಾಗದಲ್ಲಿ (ಚಪ್ಪರದ ಅಡಿ) ಚಾಪೆಯ ಮೇಲೆ ಕುಳಿತುಕೊಳ್ಳುತ್ತಾರೆ. ವರನಿಗೆ ಮಡಿಲು ತುಂಬಿಸುವ ಸಂಪ್ರದಾಯವಿದೆ. ಮದುಮಗಳ ಮಡಿಲು

ತುಂಬಿಸಲು ತಂದಿರುವ ಬಿಳಿ ವಸ್ತ್ರದ ಎರಡೂ ತುದಿಗಳನ್ನು ತಮ್ಮ ಸೊಂಟಕ್ಕೆ ಬಿಗಿಯಾಗಿ ಹಿಂದಿನಿಂದ ಕಟ್ಟುತ್ತಾರೆ. ವರನ ತಮ್ಮ (ಮೈದುನ) ಒಂದು ಹರಿವಾಣದಲ್ಲಿ ಅಕ್ಕಿ, ವೀಳ್ಯೆದೆಲೆ ಮತ್ತು ಅಡಿಕೆ ಜೊತೆಗೆ ಒಂದು ನಾಣ್ಯವನ್ನು ವಧುವಿನ ಎದುರಿರುವ ವರನ ಮಣೆಯ ಮೇಲೆ ಇಡುತ್ತಾನೆ. ವರನ ತಮ್ಮ ತನ್ನ ಬೊಗಸೆಯಿಂದ ಮೂರು ಸಲ ಅಕ್ಕಿಯನ್ನು ಮತ್ತು ತೆಂಗಿನಕಾಯಿ, ವೀಳ್ಯೆದೆಲೆ, ಅಡಿಕೆ ಮತ್ತು ನಾಣ್ಯವನ್ನು ವಧುವಿನ ಮಡಿಲಿಗೆ ತುಂಬಿಸುತ್ತಾನೆ. ಹರಿವಾಣದಲ್ಲಿ ಉಳಿದಿರುವ ಅಕ್ಕಿಯನ್ನು ಒಂದೇ ಸಲ ಮಡಿಲಿಗೆ ಸುರಿದು ಅದೇ ಮಡಿಲಿನಿಂದ ಅಕ್ಷತೆಯ ರೂಪದಲ್ಲಿ ವಧುವಿನ ಹಣೆಗೂ ಹಾಗೂ ತನ್ನ ತಲೆಯ ಮೇಲೆ ಹಾಕಿಕೊಳ್ಳುತ್ತಾನೆ. ಇದನ್ನು ಮಡಿಲು ತುಂಬಿಸುವುದು ಎಂದು ಕರೆಯುವರು. ನಂತರ ವಧುವು ಮಡಿಲು ತುಂಬಿದ ಅಕ್ಕಿಯೊಂದಿಗೆ ಮೇಲೆದ್ದು ದೇವರಿಗೆ ನಮಸ್ಕರಿಸಿ ಅಲ್ಲಿ ಉಪಸ್ಥಿತರಿರುವ ಎಲ್ಲ ಹಿರಿಯರ ಕಾಲು ಮುಟ್ಟಿ ನಮಸ್ಕರಿಸಿ ಆಶೀರ್ವಾದ ಪಡೆಯುವವಳು. ನಂತರ ದೇವರ ಕೋಣೆಗೆ ಹೋಗಿ ಅಲ್ಲಿ ಮಣೆಯ ಮೇಲಿಟ್ಟ ಬಾಳೆ ಎಲೆಯ ಮೇಲೆ ಎಲ್ಲವನ್ನು ಸುರಿಯುತ್ತಾಳೆ. ಮಡಿಲು ತುಂಬುವ ಶಾಸ್ತ್ರ ವರನಿಗೆ ಇಲ್ಲ. ಆದರೆ ವರನು ಪಿಲೆಸ್ನಾನ ಮಾಡಿ ಬಂದ ಮೇಲೆ ಅಜ್ಜಿಗೆ 'ಅಜ್ಜಿ ಸೀರೆ' ಕೊಟ್ಟು ಅವಳಿಂದ ಆಶೀರ್ವಾದ ಪಡೆಯುತ್ತಾನೆ. ಇದಾದ ಬಳಿಕ ವರನ ಭಾವನು ಒಂದು ಚಾಕುವಿನ ತುದಿಗೆ ಅಡಿಕೆ ಮತ್ತು ಕುರ್ದಿ ನೀರನ್ನು (ಅರಿಶಿಣ ಹುಡಿಯ ನೀರು) ತಾಗಿಸಿ, ಬಿಳಿ ವಸ್ತ್ರದಲ್ಲಿ ಸುತ್ತಿ, ವರನ ಸೊಂಟದ ಬಲ ಭಾಗದ ಪಂಚೆಗೆ ಕಟ್ಟಿ, ಚಾಕುವಿನ ತುದಿ ಮೇಲ್ಭಾಗದಲ್ಲಿರುವಂತೆ ಎಚ್ಚರ ವಹಿಸುತ್ತಾನೆ. ಇದನ್ನು ಮರಾಟಿಗರು 'ಬಾಂಗ್' ಎಂದು ಕರೆಯುತ್ತಾರೆ. ಈ ಪದ್ಧತಿಯು ಮರಾಟಿಗರಲ್ಲಿ ಮಾತ್ರ ಕಂಡುಬರುತ್ತದೆ.

'ಪಿಲೆಸ್ನಾನ'ವು ವಧು ಅಥವಾ ವರನಲ್ಲಿ ಇರುವಂತಹ ದುಷ್ಟಶಕ್ತಿಯನ್ನು ಹೋಗಲಾಡಿಸುವ ಅಥವಾ ದೃಷ್ಟಿ ದೋಷ ಪರಿಹರಿಸಲು ಮಾಡುತ್ತಿರುವ ಆಚರಣೆಯಾಗಿದೆ. ಈ ಆಚರಣೆಯಲ್ಲಿ ವಯೋ ವೃದ್ಧರನ್ನು ಕುಳ್ಳರಿಸುವುದು ವಧು ಅಥವಾ ವರನಲ್ಲಿ ಇರಬಹುದಾದ ಪ್ರೇತಾತ್ಮವನ್ನು ಬಿಡಿಸುವ ಕ್ರಿಯೆ ಎಂದು ಹೇಳುವರು. ವಧು ಅಥವಾ ವರರಲ್ಲಿ ಏನಾದರೂ ದೋಷ ಇದ್ದರೆ ಅದು ಅಜ್ಜಿಗೆ ವರ್ಗಾಯಿಸಲಿ ಎಂಬ ಆಶಯವಾಗಿದೆ. ವಯೋ ವೃದ್ಧಳಾದ ಅಜ್ಜಿ ತನ್ನ ಲೌಕಿಕ ಜೀವನವನ್ನು ಬಿಟ್ಟು ಈಗಾಗಲೇ ಪ್ರಕೃತಿ ಸಹಜವಾಗಿರುವ ಧಾರ್ಮಿಕ ಅಥವಾ ಆಧ್ಯಾತ್ಮ ಜೀವನಕ್ಕೆ ಕಾಲಿಟ್ಟಿದ್ದರಿಂದ ಪ್ರಪಂಚದ ಸುಖ ಸಂತೋಷಗಳಿಂದ ಲೌಕಿಕ ಜೀವನದಿಂದ ವಿಮುಖವಾಗುವ ಮನಸ್ಥಿತಿ ಕಾರಣ ಎಂದು ಅರ್ಥೈಸಿಕೊಳ್ಳಬಹುದು. ಒಂದು ವೇಳೆ ಅಜ್ಜಿ ಸಮ್ಮತಿಸದಿದ್ದಲ್ಲಿ ವಧುವರರಲ್ಲಿರುವ ದುಷ್ಟಶಕ್ತಿ, ಪ್ರೇತಬಾಧೆಯನ್ನು ಬಾಳೆಗಿಡಕ್ಕೆ ವರ್ಗಾಯಿಸುವುದು ಮತ್ತು ಎಡಗೈಯಿಂದ ಬಾಳೆ ಗಿಡ ಕಡಿಯುವರು. ವಧುವಿಗೆ ವರನ ತಮ್ಮನಿಂದ ಮಡಿಲು ತುಂಬಿಸುವ ಕ್ರಿಯೆ ಅವಿಭಕ್ತ ಕುಟುಂಬದ ಮಹತ್ವವನ್ನು ವ್ಯಕ್ತಪಡಿಸುವ ಮತ್ತು ಪಿತೃ ಪ್ರಧಾನದ ಕೌಟುಂಬಿಕ ರಚನೆಯ ಮಹತ್ವವನ್ನು ಒತ್ತಿ ಹೇಳುತ್ತದೆ. ಅಲ್ಲದೇ ಮಡಿಲು ತುಂಬಿಸಲು ಉಪಯೋಗಿಸುತ್ತಿರುವ ವಸ್ತುಗಳಾದ ತೆಂಗಿನಕಾಯಿ, ಅಡಿಕೆ, ವೀಳ್ಯೆದೆಲೆ, ಸಂತಾನೋತ್ಪತ್ತಿ, ಸಮೃದ್ಧಿ ಮತ್ತು ಫಲವಂತಿಕೆಯ ಸಂಕೇತವಾಗಿದೆ. ತೆಂಗಿನಕಾಯಿಯು ಪವಿತ್ರತೆಯ ಭಾಗವಾಗಿದೆ.

ಕಲಶ ಸ್ನಾನವಾದ ಮೇಲೆ ವಧು ಮತ್ತು ವರ ಇಬ್ಬರೂ ಮನೆಯಿಂದ ಹೊರಗೆ ಹೋಗುವುದನ್ನು ನಿಷೇಧಿಸಲಾಗಿದೆ. ಒಂದು ವೇಳೆ ಹೋಗುವುದಾರೆ. ವರನ ಜೊತೆಗೆ ಹತ್ತಿರ ಸಂಬಂಧಿಕರಾಗಿರುವ ಭಾವ ಅಥವಾ ಅಳಿಯ ಅದೇ ರೀತಿ ವಧುವಿನ ಜೊತೆಗೆ ಅಕ್ಕ ಅಥವಾ ತಂಗಿ ಇರಲೇಬೇಕು ಎಂಬ ನಂಬಿಕೆ ಇದೆ. ಇಂದು ಈ ನಂಬಿಕೆ ಬದಲಾವಣೆಗೊಂಡು ಅನಿವಾರ್ಯದ ಸಂದರ್ಭದಲ್ಲಿ ಯಾವ

ವ್ಯಕ್ತಿಯೂ ಆಗುತ್ತದೆ. ಜೊತೆಯಲ್ಲಿ ಯಾರಾದರೊಬ್ಬರು ಇರಬೇಕೆಂಬ ಆಶಯವನ್ನು ಇಂದು ಕಾಣುತ್ತೇವೆ.

ಕಲಶಸ್ನಾನ ಮತ್ತು ಮಡಿಲು ತುಂಬಿಸುವ ಆಚರಣೆ ಆದ ಬಳಿಕ ಎಲ್ಲರೂ ಭೋಜನ ಸ್ವೀಕರಿಸಿ ಮಡಿವಾಳ ಕಟ್ಟಿದ ಮಡಿವಸ್ತ್ರದ ಅಡಿಯಲ್ಲಿ ಮೆಹಂದಿ (ಮದರಂಗಿ), ಕಾರ್ಯಕ್ರಮ ನಡೆಯುತ್ತದೆ. ಸಾಮಾನ್ಯವಾಗಿ ಮರಾಟಿ ಸಮುದಾಯದವರು ಈ ಕಾರ್ಯಕ್ರಮವನ್ನು ರಾತ್ರಿ ನಡೆಸುತ್ತಾರೆ. ಆದರೆ ಇಂದು ಅದು ಮಧ್ಯಾಹ್ನದ ಹೊತ್ತಿಗೆ ನಡೆಯುವುದು ಕಂಡು ಬರುತ್ತದೆ. ಕೆಲವು ಕಡೆ ಮದುವೆಗೆ ೨ ಅಥವಾ ೩ ದಿನ ಮುಂಚಿತವಾಗಿ ವಧು/ವರರ ಮದರಂಗಿ ಕಾರ್ಯಕ್ರಮ ನಡೆಯುತ್ತದೆ. ಮದರಂಗಿ ತಯಾರಿಸುವಾಗ ಅನೇಕ ವಿಧಿ ನಿಷೇಧಗಳು ಕಂಡು ಬರುತ್ತದೆ. ಮದರಂಗಿಯನ್ನು ಶುಭ ಕಾರ್ಯಗಳಿಗೆ ಉಪಯೋಗಿಸುವುದರಿಂದ ಅದನ್ನು ಪವಿತ್ರ ಎಂದು ಭಾವಿಸಲಾಗಿದೆ. ಮದರಂಗಿಯ ಎಲೆಗಳನ್ನು ಮುತ್ತೈದೆಯರು ಅಥವಾ ಹುಡುಗಿಯರು ಗಿಡದಿಂದ ಕೀಳಬಹುದು. ವಿಧವೆಯರು ಮದರಂಗಿ ತಯಾರಿಸಬಾರದೆಂಬ ನಿಷೇಧವಿದೆ.

ಮದರಂಗಿಯು ಫಲವಂತಿಕೆಯ ಸಂಕೇತ, ವಧ/ವರರ ಅಂಗೈಯಲ್ಲಿ ಸೂರ್ಯ ಚಂದ್ರರ ಚಿತ್ತವನ್ನು ಬಿಡಿಸುವುದು ಸಂಪ್ರದಾಯ. ನಂತರ ಸಂಬಂಧಿಕರು ಮತ್ತು ಆಗಮಿಸಿರುವ ಬಂಧುಗಳು ಮದರಂಗಿ ಹಚ್ಚುವರು. ಈ ಆಚರಣೆಯಲ್ಲಿ ವ್ಯಕ್ತಪಡುವ ಅಂಶವೆಂದರೆ ವಧು/ವರರ ಜೀವನ ಸೂರ್ಯ ಚಂದ್ರರಂತೆ ಶಾಶ್ವತವಾಗಿರಲಿ ಮತ್ತು ಮುಂದಿನ ಜೀವನ ಅನ್ಯೋನ್ಯವಾಗಿರಲಿ ಎಂಬ ಆಶಯ ಈಗ ನಂಬಿಕೆಯಾಗಿದೆ.

ಮದುವೆ ದಿನ ನಡೆಯುವ ಆಚರಣೆಗಳು

ಕೂಡುವಿಕೆ ಅಥವಾ ದಿಬ್ಬಣ ಹೊರಡುವಿಕೆ

ಮದುವೆಯ ಹಿಂದಿನ ದಿನವನ್ನು ಮರಾಟಿ ಸಮುದಾಯದವರು 'ಮದುವೆಗೆ ಕೂಡುವ ದಿನ' ಎಂದು ಕರೆಯುತ್ತಾರೆ. ಅಂದು ಮತ್ತು ಮದುವೆಯ ದಿನ ಬೆಳಗಿನ ಸಮಯಕ್ಕೆ ಬಂಧು ಬಾಂಧವರೆಲ್ಲರೂ ಒಟ್ಟಾಗಿ ಸೇರುತ್ತಾರೆ. ಪ್ರಾಚೀನ ದಿನಗಳಲ್ಲಿ ಇಂದಿನಂತೆ ವಾಹನ ಸೌಕರ್ಯಗಳಿರಲಿಲ್ಲ. ಮದುವೆಗೆ ಬರುವವರೆಲ್ಲರೂ ಕಾಲ್ನಡಿಗೆಯಿಂದಲೇ ಮದುವೆ ಮನೆಗೆ ಹೋಗುತ್ತಿದ್ದರು. ದೂರದ ಊರುಗಳಲ್ಲಿರುವ ಸಂಬಂಧಿಕರಿಗೆ ಮದುವೆ ದಿನದ ಮಹೂರ್ತಕ್ಕೆ ಸರಿಯಾಗಿ ತಲುಪಲು ಸಾಧ್ಯವಾಗುತ್ತಿರಲಿಲ್ಲ. ಆದ್ದರಿಂದ ಹತ್ತಿರದ ಸಂಬಂಧಿಕರು ಮದುವೆ ಹಿಂದಿನ ದಿನ ಬರುತ್ತಿದ್ದರು. ಎಲ್ಲರೂ ಒಟ್ಟಾಗಿ ಮದುವೆಯ ಹಿಂದಿನ ದಿನ ಸಂಜೆಯೊಳಗೆ ಮದುವೆ ಮನೆಯನ್ನು ಸೇರಿಕೊಳ್ಳುತ್ತಿದ್ದರು. ಇದಕ್ಕೆ 'ಕೂಡುವಿಕೆ' ಎಂದು ಹೆಸರು. ಇದು ಗಂಡು ಮತ್ತು ಹೆಣ್ಣಿನ ಎರಡೂ ಮನೆಗಳಲ್ಲಿ ನಡೆಯುತ್ತದೆ.

ಮರಾಟಿ ನಾಯ್ಕರ ಮದುವೆಗಳು ಹೆಚ್ಚಾಗಿ ಹೆಣ್ಣಿನ ಮನೆಯಲ್ಲಿ ನಡೆಯುತ್ತವೆ. ವಧುವಿನ ಮನೆಯವರು ಆರ್ಥಿಕವಾಗಿ ತುಂಬಾ ದುರ್ಬಲರಾಗಿದ್ದರೆ. ವರನ ಮನೆಯಲ್ಲಿ ಮದುವೆ ಇಟ್ಟುಕೊಳ್ಳುತ್ತಾರೆ. ಮದುವೆ ಮುಹೂರ್ತವನ್ನು ಗಮನದಲ್ಲಿಟ್ಟು ಪ್ರಯಾಣಕ್ಕೆ ತೆಗೆದುಕೊಳ್ಳುವ ಸಮಯವನ್ನು ಲೆಕ್ಕ ಹಾಕಿ ದಿಬ್ಬಣ ಹೊರಡಿಸಲು ಏರ್ಪಾಟು ಮಾಡುತ್ತಾರೆ.

ದಿಬ್ಬಣ ಹೊರಡುವುದಕ್ಕಿಂತ ಪೂರ್ವದಲ್ಲಿ ತಮ್ಮ ಮನೆಯ ಮತ್ತು ಊರಿನ ದೈವ ದೇವರನ್ನು ಪ್ರಾರ್ಥಿಸಿ ಹರಕೆ ಹೇಳಿ ಹೊರಡುವುದು ಸಂಪ್ರದಾಯ. ವರನ ಮನೆಯಿಂದ ಹೊರಡುವಾಗ ಪೆಟ್ಟಿಗೆಯೊಂದರಲ್ಲಿ ಮದುಮಗಳಿಗೆ ಧಾರೆ ಸೀರೆ, ರವಿಕೆ, ಮಾಂಗಲ್ಯ ಸೂತ್ರ, ಹೂವು, ಬಳೆ,

ಕನ್ನಡಿ, ಬಾಚಣಿಗೆ ಮುಂತಾದವುಗಳನ್ನು ತೆಗೆದುಕೊಂಡು ಹೋಗುತ್ತಾರೆ. ವರನ ಮತ್ತು ವಧುವಿನ ಉಪಚಾರಕ್ಕಾಗಿ ವರನ ಭಾವ ಅಥವಾ ಒಬ್ಬ ಹುಡುಗನನ್ನು ಅದೇ ರೀತಿ ವಧುವಿನ ಕಡೆಯಿಂದ ಒಬ್ಬಳನ್ನು ನಿಯುಕ್ತಿಗೊಳಿಸುತ್ತಾರೆ. ವರನ ಉಪಚಾರ ಮಾಡುವವನಿಗೆ ಮರಾಟಿ ಭಾಷೆಯಲ್ಲಿ "ಬುಡಕೋಲು" ಮತ್ತು ವಧುವನ್ನು ಉಪಚರಿಸುವವಳಿಗೆ "ಬುಡ್ಕಿಲಿ" ಎಂದೂ ಕರೆಯುತ್ತಾರೆ. ಮದುಮಗ ಹೊರಡುವಾಗ ತೋರಣದ ಬಳಿ ಬಂದು ಚಪ್ಪರದ ಮೇಲೆ ಅಡಿಕೆ, ವೀಳ್ಯ ಮತ್ತು ಅಕ್ಷತೆ ಹಾಕಿ ಚಪ್ಪರ ಪೂಜೆ ಸಲ್ಲಿಸಿ, ಕಾಲಿಗೆ ಕುರ್ದಿ ನೀರನ್ನು ಚಿಮುಕಿಸಿ, ದೃಷ್ಟಿ ತೆಗೆದ ಮೇಲೆ ಪ್ರಯಾಣ ಪ್ರಾರಂಭಿಸುತ್ತಾನೆ. ವಧುವಿನ ಮನೆಯವರು ವರನ ದಿಬ್ಬಣದ ನಿರೀಕ್ಷೆಯಲ್ಲಿರುತ್ತಾರೆ. ಮೊದಲೇ ಮಾತುಕತೆಗಳು ನಡೆದಿರುವಂತೆ ನಿಶ್ಚಿತ ಸಮಯಕ್ಕೆ ಸರಿಯಾಗಿ ವರನ ದಿಬ್ಬಣವು ವಧುವಿನ ಮನೆಗೆ ಬರುತ್ತದೆ. ವರನ ದಿಬ್ಬಣ ಬಂದ ಕೂಡಲೇ ಅವರು ಮದುವೆ ಚಪ್ಪರವನ್ನು ಪ್ರವೇಶಿಸುವುದಿಲ್ಲ. ಅದಕ್ಕೆ ಸಮುದಾಯದ ಹಿರಿಯರ, ಗುರಿಕಾರರ, ಮೊಕ್ತೇಸರರ ಅನುಮತಿ ಹಾಗೂ ಗೌರವದ ಸ್ವಾಗತ ನಿರೀಕ್ಷಿಸುತ್ತಾರೆ. ಹೀಗಾಗಿ ವರನ ದಿಬ್ಬಣದವರಿಗೆ ಚಪ್ಪರದ ಹೊರಗೆ ತಂಗಲು ವ್ಯವಸ್ಥೆ ಮಾಡಿರುತ್ತಾರೆ. ವರನ ಕಡೆಯಿಂದ ಇಬ್ಬರು ಹಿರಿಯ ವ್ಯಕ್ತಿಗಳ ಅಥವಾ ಗುರಿಕಾರ ವಧುವಿನ ಸಂಬಂಧಿತರಿಗೆ ತಾವು ಆಗಮಿಸಿರುವ ವಿಷಯ ತಿಳಿಸುತ್ತಾರೆ. ಈ ಸಂದರ್ಭದಲ್ಲಿ ವಧುವಿನ ಕಡೆಯ ಗುರಿಕಾರರು ಮತ್ತು ಹಿರಿಯ ಮುತ್ತೈದೆಯರು ಕಲಶ, ಕನ್ನಡಿ, ಹೂವು, ಕುಂಕುಮ ಇತ್ಯಾದಿ ಮಂಗಳ ಪ್ರಧಾನ ವಸ್ತುಗಳನ್ನು ಹಿಡಿದುಕೊಂಡು ವರನ ದಿಬ್ಬಣ ಹಾಗೂ ವರನನ್ನು ಸ್ವಾಗತಿಸಲು ಆಗಮಿಸುವರು. ಪರಸ್ಪರ ಶುಭಾಷಯಗಳನ್ನು ವಿನಿಮಯ ಮಾಡಿಕೊಳ್ಳುತ್ತಾರೆ. ಕೊನೆಗೆ ದಿಬ್ಬಣಿಗರ ಮೇಲೆ ಪನ್ನೀರನ್ನು ಸಿಂಪಡಿಸಿ ಪರಸ್ಪರ ಸ್ವಾಗತಿಸುತ್ತಾ ರಾಮ್ ರಾಮ್ ಎಂದು ಹೇಳುತ್ತಾ ಹೇಳಿ ಧ್ವನಿಗೂಡಿಸುತ್ತಾ ಮದುವೆ ಚಪ್ಪರವನ್ನು ಪ್ರವೇಶಿಸುತ್ತಾರೆ. ಮದುಮಗನಿಗೆ ಕುರ್ಚಿಯಲ್ಲಿ ಕುಳಿತುಕೊಳ್ಳಲು ವ್ಯವಸ್ಥೆ ಮಾಡಿರುತ್ತಾರೆ. ಅವನ ಪಕ್ಕದಲ್ಲಿ ಅವನನ್ನು ಉಪಚರಿಸುವ ಭಾವ, ಸಂಬಂಧಿಕರು ಕುಳಿತುಕೊಳ್ಳುತ್ತಾರೆ. ದಿಬ್ಬಣಿಗರಿಗೆ ಸಂಪ್ರದಾಯದಂತೆ ಬೆಲ್ಲ ನೀರನ್ನು ಕೊಟ್ಟು ಸತ್ಕರಿಸುತ್ತಾರೆ. ಹರಿವಾಣದಲ್ಲಿ ವೀಳ್ಯದೆಲೆ ಮತ್ತು ಅಡಿಕೆಯನ್ನು ಗಂಡಸರಿಗೂ ಹೆಂಗಸರಿಗೂ ಪ್ರತ್ಯೇಕವಾಗಿ ನೀಡುತ್ತಾರೆ. ಅಗತ್ಯ ಬಿದ್ದರೆ ಉಪಹಾರದ ವ್ಯವಸ್ಥೆ ಮಾಡುತ್ತಾರೆ.

ಗ್ರಹ ಪೂಜೆ (ಗಿರೆ / ಗೆರೆ ಪೂಜೆ)

ಪ್ರಾಚೀನ ಕಾಲದಲ್ಲಿ ಮರಾಟಿ ನಾಯ್ಕರ ಮದುವೆ ಕಾರ್ಯಕ್ರಮಗಳನ್ನು ಶಾಸ್ತ್ರೋಕ್ತವಾಗಿ ನೆರವೇರಿಸಲು ಕರಾಡ ಬ್ರಾಹ್ಮಣರನ್ನು ಕರೆಸಬೇಕೆಂಬ ಸಂಪ್ರದಾಯವಿತ್ತು ಎಂಬುದನ್ನು ತಿಳುವಳಿಕೆದಾರರು ಹೇಳುತ್ತಾರೆ. ಇತ್ತೀಚೆಗೆ ಇವರು ವಾಸವಿರುವ ಪ್ರದೇಶಗಳಲ್ಲಿ ಬೇರೆ ಜಾತಿಯ ಅರ್ಚಕ ವರ್ಗದ ಬ್ರಾಹ್ಮಣರು ವಿವಾಹ ಕಾರ್ಯಕ್ರಮವನ್ನು ಶಾಸ್ತ್ರೋಕ್ತವಾಗಿ ನೆರವೇರಿಸುತ್ತಿದ್ದಾರೆ. ಚಪ್ಪರದಡಿಯಲ್ಲಿ ಅಥವಾ ವಧು ವರರ ಶೃಂಗಾರದ ಕೊಠಡಿ ಒಂದು ನಿರ್ದಿಷ್ಟ ಸ್ಥಳದಲ್ಲಿ ಗಣಪತಿಯ ಪ್ರತಿಮೆ ಇಡುತ್ತಾರೆ.

ವಧುವರರ ಕಡೆಯವರು ಧಾರಾ ಮುಹೂರ್ತಕ್ಕೆ ತಯಾರಾದಾಗ ಪುರೋಹಿತರು ಸಂಪ್ರದಾಯಿಕವಾಗಿ ನಡೆಯಬೇಕಾಗಿರುವ ಗೃಹಪೂಜೆ, ನವಗ್ರಹ ಪೂಜೆ, ಮಾಂಗಲ್ಯ ಸೂತ್ರ ಹೋಮ ಮತ್ತಿತರ ಆಚರಣೆಗಳಿಗೆ ಬೇಕಾದ ಎಲ್ಲಾ ಏರ್ಪಾಡು ಮಾಡಿಕೊಳ್ಳುತ್ತಾರೆ. ವರನ ಭಾವ ವರನನ್ನು ಧಾರೆ ಕಂಬ ಅಥವಾ ಸಭಾ ಮಂಟಪದ ಬಳಿ ಕರೆ ತಂದು ಮಣೆಯ ಮೇಲೆ ಕುಳ್ಳರಿಸುತ್ತಾನೆ. ಪುರೋಹಿತರು ವರನ ಎದುರಿಗೆ ಕುಳಿತು ವರನ ಕಡೆಯವರು ನೀಡಿದ ಮೊರವನ್ನು ವರ ಮತ್ತು

ಆರ್ಚಕನ ಮಧ್ಯೆ ಇಡುತ್ತಾರೆ. ಗೆರೆಸೆ ಮಧ್ಯದಲ್ಲಿ ಒಂದು ಸೇರು ಬೆಳ್ತಿಗೆ ಅಕ್ಕಿಯನ್ನು ಬಾಳೆ ಎಲೆಯ ಮೇಲೆ ಹಾಕಿ, ಅದರ ಮೇಲೆ ತೆಂಗಿನಕಾಯಿ ವೀಳ್ಯದೆಲೆ ಮತ್ತು ಅಡಿಕೆಯನ್ನು ಮರದ ಮಧ್ಯದಲ್ಲಿಡುತ್ತಾರೆ. ಒಂದು ಹಿಡಿ ಅಕ್ಕಿ ಅದರ ಮೇಲೆ ವೀಳ್ಯದೆಲೆ ಅಡಿಕೆ, ೧೨ ತೊಂಡೆಕಾಯಿ, ಒಂದು ನೂಲಿನ ಉಂಡೆ, ಅರಿಶಿಣ ತುಂಡು, ಗರಿಕೆ ಹುಲ್ಲು, ಹಿಂಗಾರದಿಂದ ತಯಾರು ಮಾಡಿದ ಬಾಸಿಂಗ ಇವುಗಳನ್ನು ಮೊರದ ೮ ಕಡೆ ಪುರೋಹಿತರು ಜೋಡಿಸುತ್ತಾರೆ. ತೆಂಗಿನಕಾಯಿಯ ಮೇಲೆ ಬಿಳಿ ಪಂಚೆ ಇಡುತ್ತಾರೆ. ನಂತರ ಪುರೋಹಿತರು ಮಂತ್ರ ಪಠಿಸಿ ಪೂಜೆ ಮಾಡುತ್ತಾರೆ. ವರನಿಂದ ಗೆರೆಸೆಯಲ್ಲಿರುವ ವಸ್ತುಗಳಿಗೆ ಅಕ್ಷತೆ ಹಾಕಿಸಿ ನಮಸ್ಕರಿಸುತ್ತಾರೆ. ನಂತರ ವರನನ್ನು ಕುಳಿತಲ್ಲಿಯೇ ತಿರುಗಿ ಮುಖ ಮಾಡಿ ಕುಳ್ಳಿರಿಸಿ ಅವನ ಕೈಗೆ ವೀಳ್ಯ ಮತ್ತು ಅಡಿಕೆ ಕೊಟ್ಟು ಅದನ್ನು ಹಿಮ್ಮುಖವಾಗಿ ಹಿಂಬದಿಯಿಂದ ಮೊರಕ್ಕೆ ಬೀಳುವಂತೆ ಹಾಕಿಸುತ್ತಾರೆ. ಇದೇ ರೀತಿ ವಧುವಿನ ಅಕ್ಕ ಅಥವಾ ನಾದಿನಿ ವಧುವನ್ನು ಕರೆ ತಂದು ಮಣೆಯ ಮೇಲೆ ಕುಳ್ಳಿರಿಸಿ ವಧುವಿನ ಕಡೆಯ ಗೆರೆಸೆಯಲ್ಲಿ ಅವರು ತಂದ ವಸ್ತುಗಳನ್ನು ಪುರೋಹಿತರು ಕ್ರಮಬದ್ಧವಾಗಿ ಜೋಡಿಸಿ, ಪೂಜೆ ಮಾಡಿಸುತ್ತಾರೆ. ಅದೇ ಸಂದರ್ಭದಲ್ಲಿ ಹಿಂಗಾರದ ಬಾಸಿಂಗವನ್ನು ಮದುಮಗಳ ಹಣೆಗೆ ಕಟ್ಟುತ್ತಾರೆ. ವಧು ಕೂಡಾ ವರ ಮಾಡಿದ ರೀತಿಯಲ್ಲಿಯೇ ತಿರುಗಿ ಕುಳಿತು ಹಿಮ್ಮುಖವಾಗಿ ವೀಳ್ಯ ಮತ್ತು ಅಡಿಕೆಯನ್ನು ಹಿಂಬದಿಯಿಂದ ಮರಕ್ಕೆ ಹಾಕುತ್ತಾಳೆ. ಈ ರೀತಿ ಮದುಮಗ ಮತ್ತು ಮದುಮಗಳು ಸಲ್ಲಿಸುವ ಪೂಜೆಯನ್ನು ಮರಾಟಿಗರು ತಮ್ಮ ಭಾಷೆಯಲ್ಲಿ 'ಗಿರೆ ಪೂಜೆ ಅಥವಾ ಗೆರೆ ಪೂಜೆ' ಎಂದು ಕರೆಯುತ್ತಾರೆ. ವೈದಿಕ ಸಂಪ್ರದಾಯದಲ್ಲಿ ಪೂಜೆಯನ್ನು 'ಗೃಹಪೂಜೆ ಅಥವಾ ನವಗ್ರಹ ಪೂಜೆ' ಎನ್ನುತ್ತಾರೆ.

ಇಲ್ಲಿ ಉಪಯೋಗಿಸುತ್ತಿರುವ ಎಲ್ಲಾ ವಸ್ತುಗಳನ್ನು ತಾತ್ವಿಕ ಹಿನ್ನೆಲೆಯನ್ನು ಗಮನಿಸಿದಾಗ ಕೃಷಿ ಸಂಪ್ರದಾಯ ಮತ್ತು ಕೃಷಿಗೆ ಪೂರಕವಾದ ಪರಿಕರಗಳನ್ನು ಉಪಯೋಗಿಸುವುದರಿಂದ ಇದೊಂದು ಸಮೃದ್ಧಿಯ ಮತ್ತು ಉತ್ಪಾದನೆಯ ಸಂದೇಶವನ್ನು ನೀಡುವುದಲ್ಲದೆ ಅಡಿಕೆ, ಹಿಂಗಾರ ಮತ್ತು ವೀಳ್ಯದೆಲೆಯು ಅಪ್ರತ್ಯಕ್ಷವಾಗಿ ಆವ್ಯಕ್ತವಾಗಿ ಸಂತಾನೋತ್ಪತ್ತಿಯ ಸಂಕೇತವಾಗಿದೆ. ಅಡಿಕೆಯನ್ನು ಮುಂದೆ ಭಿತ್ತಿ ಬೆಳೆಸಿದ ನಂತರ ನೂರಾರು ಅಡಿಕೆಗಳಾಗುವುದು ಫಲವಂತಿಕೆಯ ಲಕ್ಷಣವಾಗಿರುವುದು ಕಂಡು ಬರುತ್ತದೆ.

ಧಾರೆ ಸೀರೆ ಕೊಡುವುದು

ಗೃಹ ಪೂಜೆಯಾದ ನಂತರ ವರನ ಕಡೆಯವರು ಧಾರೆ ಸೀರೆ ಕೊಡುವುದು ಸಂಪ್ರದಾಯ. ವಧುವಿನ ಶೃಂಗಾರಕ್ಕೆ ಬೇಕಾಗಿರುವ ಧಾರೆ ಸೀರೆ, ರವಿಕೆ, ಐದು ಬಗೆಯ ಹೂವುಗಳನ್ನು ಮತ್ತು ಇತರೆ ವಸ್ತುಗಳನ್ನು ಹರಿವಾಣದಲ್ಲಿಟ್ಟು ಧಾರಾ ಕಂಬದ ಬಳಿ ಚಾಪೆಯ ಮೇಲೆ ಮಣೆ ಹಾಕುವರು. ವರನ ಮತ್ತು ವಧುವಿನ ಹಿರಿಯರು ಸೇರಿಕೊಂಡು ವರನ ಕಡೆಯವರು ವಧುವಿನ ಕಡೆಯವರಿಗೆ ಪೂರ್ವಾಭಿಮುಖವಾಗಿ ನಿಂತು ದೇವರಲ್ಲಿ ಹಾಗೂ ಗುರು ಹಿರಿಯರಲ್ಲಿ ಪ್ರಾರ್ಥಿಸಿ ಹರಿವಾಣವನ್ನು ಎತ್ತಿ ಕೊಡುವ ಕ್ರಿಯೆಗೆ 'ಧಾರೆ ಸೀರೆ ಕೊಡುವುದು' ಎಂದು ಕರೆಯುತ್ತಾರೆ. ಮರಾಟಿ ನಾಯ್ಕರ ಈ ಕ್ರಿಯೆಯನ್ನು ಮೂರು ಭಾರಿ ಮರಾಟಿ ಭಾಷೆಯಲ್ಲಿ 'ಸೋ ಸಾಡೋ ದೇತೋ ಮಂತೆತ್' ಎಂದು ಹೇಳಿ ಹರಿವಾಣ ಪಡೆದುಕೊಳ್ಳುತ್ತಾರೆ. ಧಾರೆ ಸೀರೆ ಕೊಡುವಾಗ ವಧುವರರನ್ನು ಮಣೆಗಳ ಮೇಲೆ ನಿಲ್ಲಿಸಿ ಅವರಿಬ್ಬರ ಮಧ್ಯೆ ಬಿಳಿ ಪಂಚೆಯ ಪರದೆ ಹಿಡಿದು, ಮೊದಲಿಗೆ ಪರದೆಯ ಮೇಲಿಂದ ಉರಿಯುವ ಚಿಕ್ಕ ದೀಪವನ್ನು ವರನ ಕಡೆಯವರಿಗೆ ನೀಡಿ, ನಂತರ ಧಾರೆ ಸೀರೆಯನ್ನು ಹರಿವಾಣದಲ್ಲಿಟ್ಟು ಮದುಮಗಳನ್ನು ಸಿಂಗರಿಸುವ ಹೆಂಗಸರ ಕೈಗೆ ಕೊಡುತ್ತಾರೆ.

ಮಾಂಗಲ್ಯಧಾರಣೆ ನಡೆಯುವ ಸಂದರ್ಭದ ವಿಧಿ ವಿಧಾನಗಳು

ಅಲಂಕಾರಗೊಂಡ ವರನನ್ನು ಆತನ ಭಾವನು ಧಾರೇ ಮಂಟಪಕ್ಕೆ ಕರೆ ತರುತ್ತಾನೆ. ಅದೇ ರೀತಿ ವಧುವಿನ ಸೋದರ ಮಾವ ವಧುವನ್ನು ಧಾರೇ ಮಂಟಪಕ್ಕೆ ಕರೆ ತರುತ್ತಾನೆ. ವರನು ಕಚ್ಚೆ ಪಂಚೆ ಹಾಕಿ, ತಲೆಗೆ ಪೇಟವನ್ನು ಧರಿಸಿ, ಎದೆಗೆ ಮತ್ತು ಬೆನ್ನಿಗೆ ಕತ್ತರಿ ಆಕಾರದಲ್ಲಿ ಸುತ್ತಿದ ರೇಷ್ಮೆ ಶಾಲು, ಬಾಸಿಂಗ, ಸೊಂಟದಲ್ಲಿ ಬಾಂಗ್ ಧರಿಸಿಕೊಂಡಿರುತ್ತಾನೆ. ವಧುವನ್ನು ಧಾರೆ ಎರೆದು ಕೊಡುವ ವಧುವಿನ ಸೋದರ ಮಾವ ಹಾಗೂ ವರನ ತಂದೆ ಅಂಗಿ ಧರಿಸದೆ ತಲೆಗೆ ಮುಂಡಾಸು ಮತ್ತು ಹೆಗಲಿಗೆ ಒಂದು ಪಂಚೆ ಹಾಕಿಕೊಂಡಿರುತ್ತಾರೆ. ಪುರೋಹಿತ ಧಾರೆಗೆ ಮತ್ತು ಇತರೆ ವಿಧಿವಿಧಾನಗಳಿಗೆ ಎಲ್ಲಾ ಸಿದ್ಧಪಡಿಸಿಕೊಂಡು ಎರಡು ಹೂವಿನ ಹಾರಗಳನ್ನು ಇಟ್ಟಿರುತ್ತಾನೆ. ಧಾರಾ ಮಂಟಪದಲ್ಲಿ ಪೂರ್ವ ಪಶ್ಚಿಮವಾಗಿ ಎರಡು ತುದಿ ಬಾಳೆ ಎಲೆಯಲ್ಲಿ ಒಂದೊಂದು ಸೇರು ಅಕ್ಕಿ ಹಾಕಿರುತ್ತಾರೆ. ವಧುವರರನ್ನು ಅಕ್ಕಿಯ ಮೇಲೆ ಎದುರು ಬದುರಾಗಿ ನಿಲ್ಲಿಸಿ, ಅವರಿಬ್ಬರ ಮಧ್ಯೆ ಬಿಳಿ ಮಡಿ ಬಟ್ಟೆಯ ಪರದೆ ಹಿಡಿಯುತ್ತಾರೆ. ಪುರೋಹಿತರು ವಧುವರರ ಕೈಗಳಿಗೆ ಹೂ ಮಾಲೆ ಕೊಟ್ಟು ಮಂತ್ರೋಚ್ಚಾರಣೆ ಮಾಡುತ್ತಾ ಮೊದಲಿಗೆ ವರನ ಕೊರಳಿಗೆ ವಧುವಿನಿಂದ ನಂತರ ವಧುವಿನ ಕೊರಳಿಗೆ ವರನಿಂದ ಹೂ ಮಾಲೆ ಹಾಕಿಸುತ್ತಾರೆ. ಆ ವೇಳೆಗೆ ಪರದೆಯನ್ನು ಸರಿಸುತ್ತಾರೆ. ಪುರೋಹಿತರು ಧಾರೆ ಗಿಂಡಿಯನ್ನು ವಧುವಿನ ಸೋದರ ಮಾವ ಅಥವಾ ತಂದೆ ತಾಯಿಯ ಕೈಯಲ್ಲಿ ಕೊಡುತ್ತಾರೆ. ನೆರೆದಿರುವ ನೆಂಟರಿಷ್ಟರು ಸಮ್ಮತಿ ಮತ್ತು ಶುಭ ಹಾರೈಕೆಯ ಸಂಕೇತವಾಗಿ ಧಾರಾ ಗಿಂಡಿಯನ್ನು ಮುಟ್ಟುತ್ತಾರೆ. 'ನಾವು ನಮ್ಮ ಹುಡುಗಿಯನ್ನು ಧಾರೆ ಎರೆದುಕೊಡುತ್ತೇವೆ ಎಂದು ಹೆತ್ತವರು ಹೇಳುತ್ತಾರೆ'. ಎರಡು ಕಡೆಯ ಗುರಿಕಾರರು, ವಧುವರರ ಹೆತ್ತವರು, ಸೋದರ ಮಾವಂದಿರು ಇತರೆ ಬಂಧು-ಮಿತ್ರರು ಮಂಟಪದ ಬಳಿ ಹಾಜರಿರುತ್ತಾರೆ. ಧಾರೆ ಎರೆಯುವಾಗ ಗಂಡಿನ ಅಂಗೈಗಳ ಮೇಲೆ ಹೆಣ್ಣಿನ ಅಂಗೈಯನ್ನಿಟ್ಟು ಅದರ ಮೇಲೆ ತೆಂಗಿನಕಾಯಿ ಮತ್ತು ವೀಳ್ಯದೆಲೆಯನ್ನಿಟ್ಟು, ಅದರ ಮೇಲೆ ಧಾರಾ ಜಲವನ್ನು ವಧುವಿನ ಸೋದರ ಮಾವ ದಂಪತಿಗಳು ಅಥವಾ ತಂದೆ ತಾಯಿಯ ಅಥವಾ ಅಣ್ಣ ಅತ್ತಿಗೆ ಎರೆಯುತ್ತಾರೆ. ವಧುವರರ ಕೈಗಳಿಂದ ಬೀಳುವ ಧಾರೆ ನೀರನ್ನು ಹರಿವಾಣದಲ್ಲಿ ಸಂಗ್ರಹಿಸುತ್ತಾರೆ. ವಧುವರರ ಅಂಗೈ ಮೇಲೆ ಐದು ಬಾರಿ ಕಲಶದ ನೀರಿನಿಂದ ಧಾರೆ ಎರೆಯುತ್ತಾರೆ.

ಅರ್ಚಕರು ರಚಿಸಿರುವ ಮಂಡಲದ ಮೇಲೆ ಇರುವ ಬಾಳೆ ಎಲೆಯಲ್ಲಿ ಪ್ರತ್ಯೇಕವಾಗಿ ಒಂದರಲ್ಲಿ ಬೆಳ್ತಿಗೆ ಅಕ್ಕಿ, ತೆಂಗಿನಕಾಯಿ, ವೀಳ್ಯದೆಲೆ, ಅಡಿಕೆ ಹಾಗೂ ಮಾಂಗಲ್ಯ ಸೂತ್ರ ಇಟ್ಟಿರುತ್ತಾರೆ. ಪುರೋಹಿತರ ಮೂಲಕ ಮುತ್ತೈದೆಯರು ಬಂಧು ಮಿತ್ರ ಇಷ್ಟರಿಗೆ ಮುಟ್ಟಿಸಿದ ಕರಿಮಣಿಯನ್ನು ಪುರೋಹಿತರು ವರನ ಕೈಗೆ ಕೊಡುವರು. ಎಲ್ಲರಿಗೂ ಅಕ್ಷತೆ ಕಾಳನ್ನು ಕೊಟ್ಟು ಪುರೋಹಿತ ಪ್ರಾರ್ಥನೆ ಮಾಡಿ ಕರಿಮಣಿಯನ್ನು ವಧುವಿನ ಕೊರಳಿಗೆ ಕಟ್ಟಲು ತಿಳಿಸುತ್ತಾರೆ. ವಧುವರರ ಮೇಲೆ ಎಲ್ಲರೂ ಅಕ್ಷತಾ ಕಾಳನ್ನು ಹಾಕಿ ಹರಸುತ್ತಾರೆ. ಇಲ್ಲಿಗೆ ಮಾಂಗಲ್ಯಧಾರಣಾ ವಿಧಿ ವಿಧಾನ ಮುಗಿಯುತ್ತದೆ.

ಮಾಂಗಲ್ಯಧಾರಣೆಯ ನಂತರದ ಆಚರಣೆಗಳು

ಪುರೋಹಿತರು ವಧು ವರರ ಎದೆಯ ಭಾಗಕ್ಕೆ ೫ ಸುತ್ತು ಮತ್ತು ಸೊಂಟದ ಕೆಳಗೆ ೩ ಸುತ್ತು ಬಿಳಿ ನೂಲನ್ನು ಸುತ್ತುತ್ತಾರೆ. ಎದೆಯ ಭಾಗಕ್ಕೆ ಸುತ್ತಿದ ದಾರವನ್ನು ಕಾಲಿನಿಂದ ಕೆಳಗೆ ಜಾರಿಸಿ ತೆಗೆದು, ಅದಕ್ಕೆ ಅರಿಶಿಣ ತುಂಡನ್ನು ಕಟ್ಟಿ, ಮದುಮಗನು ಅದನ್ನು ವಧುವಿಗೆ ಕೈಗೆ ಕಟ್ಟುತ್ತಾನೆ. ಸೊಂಟದಿಂದ ಕೆಳಗೆ ಸುತ್ತಿದ ಧಾರವನ್ನು ತಲೆಯ ಮೇಲಿನಿಂದ ತೆಗೆದು ಅದಕ್ಕೂ ಅರಿಸಿಣ

ತುಂಡನ್ನು ಕಟ್ಟಿ ವಧುವು ವರನ ಕೈಗೆ ಕಟ್ಟುತ್ತಾಳೆ. ಇದನ್ನು 'ಕಂಕಣಧಾರೆ' ಎಂದು ಕರೆಯುತ್ತಾರೆ. ನಂತರ ವಧುವಿನ ಹಣೆಗೆ ವರನ ಹಣೆ ತಾಗಿಸಿ. ವಧು ತನ್ನ ಮುಖವನ್ನು ಕನ್ನಡಿಯಲ್ಲಿ ನೋಡುವಂತೆ ಮಾಡುವರು. ಹಣೆಗೆ ಕಲಶ ಗಿಂಡಿಯಿಂದ ಧಾರೆ ಎರೆಯುತ್ತಾರೆ. ತಲೆಯ ಮೇಲೆ ಬಿದ್ದ ನೀರು ವಧುವರರ ಹಣೆ ಮತ್ತು ಮುಖದ ಮೂಲಕ ಕನ್ನಡಿಗೆ ಬಿದ್ದು ನೆಲಕ್ಕೆ ಬೀಳುತ್ತದೆ. ಕೈಗೆ ಕಟ್ಟಿರುವ ಕಂಕಣವನ್ನು ವಧುವು ಪ್ರಥಮ ಬಾರಿಗೆ ವರನ ಮನೆಗೆ ಗೃಹಪ್ರವೇಶದ ಮೂಲಕ ಹೋಗಿ ಅಲ್ಲಿ ವಧು ವರನ ಕೈಗೆ ಕಟ್ಟಿರುವ ಕಂಕಣವನ್ನು ಒಂದೇ ಕೈಯಲ್ಲಿ ಬಿಚ್ಚಬೇಕು. ಅದೇ ರೀತಿ ವರನೂ ಸಹ ವಧುವಿನ ಕೈಯಲ್ಲಿರುವ ಕಂಕಣವನ್ನು ಒಂದೇ ಕೈ ಬಳಸಿ ಬಿಚ್ಚಬೇಕು.

ವಧುವಿಗೆ ಮಡಿಲು ತುಂಬಿಸಿ ಹೋಮದ ಆಚರಣೆ

ವಧುವಿನ ಸೊಂಟಕ್ಕೆ ಬಿಳಿ ಪಂಚೆ ಕಟ್ಟಿ ವರನು ಅವಳ ಮಡಿಲಿಗೆ ಹರಿವಾಣದಿಂದ ಅಕ್ಕಿ, ವೀಳ್ಯ ಮತ್ತು ಅಡಿಕೆಯನ್ನು ತನ್ನ ಬೊಗಸೆಯಿಂದ ಮೂರು ಸಾರಿ ಹಾಕುತ್ತಾನೆ. ಉಳಿದ ಅಕ್ಕಿಯನ್ನು ಪೂರ್ತಿಯಾಗಿ ಮಡಿಲಿಗೆ ಹಾಕಲಾಗುತ್ತದೆ. ವರನು ವಧುವಿನ ಕೈ ಹಿಡಿದು ಧಾರಾ ಮಂಟಪಕ್ಕೆ ಮೂರು ಸುತ್ತು ಪ್ರದಕ್ಷಿಣೆ ಹಾಕುತ್ತಾನೆ. ಈ ಸಂದರ್ಭದಲ್ಲಿ ವಧುವಿನ ಧಾರೆ ಸೀರೆಯ ಸೆರಗಿನ ತುದಿಯನ್ನು ವರ ಶಾಲಿನ ತುದಿಗೆ ಕಟ್ಟುತ್ತಾರೆ. ಪುರೋಹಿತರು ಮಂಡಲ ಬರೆದು ಎರಡು ಮರದ ಮಣೆಗಳನ್ನು ಹಾಕಿ ಒಂದರಲ್ಲಿ ವರನನ್ನು ಕುಳ್ಳಿರಿಸಿ ಅವನ ಎಡಭಾಗದಲ್ಲಿ ವಧುವನ್ನು ಕುಳ್ಳಿರಿಸುತ್ತಾರೆ. ಮಂಡಲದ ಮೇಲೆ (ಕೃತಕವಾದ ಹೋಮ ಕುಂಡ ರಚಿಸಿರುತ್ತಾರೆ.) ಹಲಸಿನ ಕಟ್ಟಿಗೆ ಮತ್ತು ಒಣ ತೆಂಗಿನಕಾಯಿ ಸಿಪ್ಪೆ ಹಾಕಿ ಹೋಮ ಸಿದ್ಧಪಡಿಸುತ್ತಾರೆ. ಹಾಲು, ಜೇನು, ತುಪ್ಪ, ಗಂಧ ಇವುಗಳನ್ನು ಹೋಮಕ್ಕೆ ಹಾಕುತ್ತಾರೆ. ನಂತರ ವಧುವರರು ಹೋಮಕ್ಕೆ ಹೂಗಳನ್ನು ಹಾಕುತ್ತಾನೆ ಮತ್ತು ವಧುವರರನ್ನು ಹೋಮದ ಬಳಿ ನಿಲ್ಲಿಸಿ ಅವರ ಕೈಗಳಿಗೆ ವಧುವಿನ ಸಹೋದರ ಹೊದ್ಲುನ್ನು ಹಾಕುತಾನೆ. ಅದನ್ನು ಅವರಿಬ್ಬರೂ ಹೋಮಕ್ಕೆ ಹಾಕುತ್ತಾರೆ. ಈ ಕ್ರಿಯೆಯನ್ನು ಮೂರು ಭಾರಿ ಮಾಡುತ್ತಾರೆ. ಇದಕ್ಕೆ ಪ್ರತಿಯಾಗಿ ವಧುವಿನ ಸಹೋದರನಿಗೆ ಮದುಮಗನು ಉಡುಗೊರೆ ನೀಡಿ ಪುರಸ್ಕರಿಸುವ ಪದ್ಧತಿ ಇದೆ. ವಧುವರರು ಹೋಮಕ್ಕೆ ಅಂತಿಮ ಪೂಜೆ ಸಲ್ಲಿಸಿ ಪ್ರದಕ್ಷಿಣೆ ಹಾಕಿ ಕೈ ಮುಗಿದ ನಂತರ ಮನೆಯೊಳಗೆ ದೇವರ ಕೋಣೆಗೆ ಹೋಗುವ ಪದ್ಧತಿ ಇದೆ. ಅಲ್ಲಿ ಅವರಿಬ್ಬರನ್ನು ಕುಳ್ಳಿರಿಸಿ ಹಾಲು ಮತ್ತು ಬಾಳೆಹಣ್ಣನ್ನು ಕೊಡುತ್ತಾರೆ. ವರನು ಅರ್ಧಭಾಗ ಹಾಲನ್ನು ಕುಡಿದು ಅರ್ಧ ಬಾಳೆಹಣ್ಣನ್ನು ತಿಂದು ಉಳಿದ ಭಾಗವನ್ನು ವಧುವಿಗೆ ಕೊಡುತ್ತಾನೆ. ಇದನ್ನು 'ಎಂಜಲು ತಿನ್ನಿಸುವುದು' ಎನ್ನುತ್ತಾರೆ. ಇತ್ತೀಚಿನ ಸನ್ನಿವೇಶದಲ್ಲಿ ಈ ಪದ್ಧತಿಯನ್ನು ದೇಸೆ (ಸೇಸೆ) ಹಾಕಿದ ನಂತರ ಊಟಕ್ಕಿಂತ ಮುಂಚಿತವಾಗಿ ವರನ ಮನೆಗೆ ಹೋಗಿ ದೇವರಿಗೆ ಕೈ ಮುಗಿದು ಎಂಜಲು ತಿನ್ನುವ ಪದ್ಧತಿಯನ್ನು ಅನುಸರಿಸುವುದು ಕ್ಷೇತ್ರಕಾರ್ಯ ಸಂದರ್ಭದಲ್ಲಿ ಕಂಡುಬಂದಿದೆ.

ದೇಸೆ ಮತ್ತು ಕಂಚಿ ಇಡುವ ಕಾರ್ಯಕ್ರಮ

ಮದು ಮಕ್ಕಳು ಬಂಧು ಮಿತ್ರರ, ಗುರು ಹಿರಿಯರ ಆಶೀರ್ವಾದ ಪಡೆಯುವ ಸಲುವಾಗಿ ಮರಾಟಿಗರ ಮದುವೆಯಲ್ಲಿ ಸೇಸೆ ಹಾಕುವುದು ಮತ್ತು ಕಂಚಿ ಇಡುವುದು ಮದುವೆಯ ಮುಖ್ಯ ವಿಧಿಗಳಲ್ಲಿ ಒಂದು. ಮರಾಟಿ ನಾಯ್ಕರ ಗುರಿಕಾರರ ಸ್ಥಾನವನ್ನು ಹೊಂದಿರುವ ವ್ಯಕ್ತಿ ವಧು, ವರರ ಕೈಗಳನ್ನು ಹಿಡಿದು ಸಮಸ್ತ ಸಭೆಗೆ ವಧುವರರಿಬ್ಬರನ್ನು ದೇಸೆಗೆ ಕುಳ್ಳಿರಿಸುತ್ತೇನೆ ಎಂದು ಮೂರು ಭಾರಿ ಕೂಗಿ ಹೇಳುವುದು ಸಂಪ್ರದಾಯ. ಈ ಸಂದರ್ಭದಲ್ಲಿ ಸಭೆಯಲ್ಲಿದ್ದವರು ದೇವರ ಅಪ್ಪಣೆ

ಎಂದು ಹೇಳುತ್ತಾರೆ. ಈ ಸಂದರ್ಭದಲ್ಲಿ ಧಾರಾ ಮಂಟಪದಲ್ಲಿ ನವದಂಪತಿಗಳು ಕುಳಿತುಕೊಳ್ಳುವ ಆಸನದ ಎದುರು ದೀಪ ಹಚ್ಚುತ್ತಾರೆ. ಜೊತೆಗೆ ಎರಡು ಹರಿವಾಣಗಳನ್ನಿಡುತ್ತಾರೆ. ಒಂದು ಹರಿವಾಣದಲ್ಲಿ ಅಕ್ಷತೆ ಹಾಕಲು ಅಕ್ಕಿಯನ್ನು ಇಡುತ್ತಾರೆ. ಮತ್ತೊಂದು ಹರಿವಾಣ ಖಾಲಿ ಇರುತ್ತದೆ. ಪ್ರಾಚೀನ ಕಾಲದ ಮರಾಟಿಗರಲ್ಲಿ ವಧುವರರು ಕುಳಿತುಕೊಳ್ಳುವ ಆಸನವನ್ನು ಮಡಿವಾಳರು ಸಿದ್ಧತೆ ಮಾಡಿಕೊಡುವ ಪದ್ಧತಿ ಇತ್ತು. ಮತ್ತು ಧಾರಾ ಮಂಟಪದಲ್ಲಿ ತೂಗುದೀಪವನ್ನು ಹಚ್ಚಿಡುವ ಪದ್ದತಿ ಇತ್ತು ಎಂದು ಹಿರಿಯ ತಿಳುವಳಿಕೆದಾರರು ತಿಳಿಸುತ್ತಾರೆ. ಅಲ್ಲದೆ ಗುರಿಕಾರನು ಸೇಸೆಗೆ ಕಂಚಿ ಇಡುತ್ತೇನೆ ಎಂದು ಮೂರು ಭಾರಿ ಸಭೆಗೆ ಹೇಳಿ ಆ ಖಾಲಿ ಹರಿವಾಣವನ್ನು ಮದುಮಗಳ ಮುಂದೆ ಇಡುತ್ತಾನೆ. ಕಂಚಿ ಇಡುವ ಕ್ರಮ ಸಂಪೂರ್ಣ ನಿಂತು ಹೋದರೂ ಕೆಲ ಪ್ರದೇಶಗಳಲ್ಲಿ ಅಲ್ಪ ಸ್ವಲ್ಪ ನಗದು ಹಣ ಹಾಕಿದ ಕವರು ಕೊಡುವ ಮತ್ತು ಉಡುಗೊರೆ ನೀಡುವ ಪದ್ಧತಿ ಕಂಡು ಬರುತ್ತದೆ. ಹಿಂದಿನ ಕಾಲದಲ್ಲಿ ಗುರಿಕಾರ ಅಥವಾ ಕುಟುಂಬದ ಹಿರಿಯ ವ್ಯಕ್ತಿ ನೆಂಟರಿಷ್ಟರು ಹಾಕಿರುವ ಸಹಾಯ ಧನ, ಉಡುಗೊರೆಯನ್ನು ಸಭೆಗೆ ಜೋರಾಗಿ ಹೇಳುತ್ತಿದ್ದರು. ಸಹಾಯ ಧನ ನೀಡಿದ ಸಂಬಂಧಿಕರ ಹೆಸರನ್ನು ಮತ್ತು ಬಳಿಯನ್ನು ಸಭೆಗೆ ಹೇಳುವ ಸಂಪ್ರದಾಯ ಒಂದು ಕಾಲದಲ್ಲಿ ಇತ್ತು ಎಂದು ತಿಳುವಳಿಕೆದಾರರ ಅಭಿಪ್ರಾಯ. ಆದರೆ ಇಂದು ಈ ಪದ್ಧತಿಯು ಹಿಂದಕ್ಕೆ ಸರಿದು ಕವರಿನೊಳಗೆ ಹಣ ಮತ್ತು ಉಡುಗೊರೆಯನ್ನು ಬಣ್ಣ ಬಣ್ಣದ ಕವರಿನಲ್ಲಿ ಸುತ್ತಿ ನೀಡುವುದನ್ನು ಕಾಣುತ್ತೇವೆ. ಮದುವೆಗಳ ಆಮಂತ್ರಣದಲ್ಲಿ 'ಆಶೀರ್ವಾದವೇ ಉಡುಗೊರೆ' ಎಂದು ಸೂಚಿಸಿರುತ್ತಾರೆ. ಸಾರ್ವಜನಿಕರ ಹಾಗೂ ಬಂಧು-ಮಿತ್ರರ ಆಶೀರ್ವಾದ ಕಾರ್ಯಕ್ರಮ ಮುಗಿದ ಮೇಲೆ ಕೊನೆಗೆ ಜಾತಿ ಮುಖಂಡರು ಮದುಮಕ್ಕಳಿಬ್ಬರನ್ನು ಕುಳ್ಳರಿಸಿ ಸೇಸೆ ಇಳಿಸುವುದು ಮತ್ತು ಸೇರಿದ ಎಲ್ಲರನ್ನು ಭೋಜನಕ್ಕೆ ಆಮಂತ್ರಿಸುವುದು ಸಂಪ್ರದಾಯವಾಗಿದೆ. ವಿವಾಹ ಆಚರಣೆಯಲ್ಲಿ ಸಸ್ಯಾಹಾರದ ಊಟವೇ ಆಚರಣೆಯಲ್ಲಿದೆ. ನಿಶ್ಚಿತಾರ್ಥ, ಗಂಡು ಮತ್ತು ಹೆಣ್ಣಿನ ಔತಣ ಕಾರ್ಯಕ್ರಮಗಳಲ್ಲಿ ಮಾಂಸಾಹಾರ ಬಳಕೆಯಾದರೆ ವಿವಾಹದ ದಿನ ಮಾತ್ರ ಅದಕ್ಕೆ ನಿಷೇಧವಿದೆ.

ಹೆಣ್ಣು ಇಳಿಸಿ ಕೊಡುವ ಆಚರಣೆ

ಮದುವೆಯ ಧಾರೆ ಕಾರ್ಯ ಮುಗಿದು ಸೇಸೆಯ ನಂತರ ಮದುಮಕ್ಕಳನ್ನು ಚಪ್ಪರದಿಂದ ಹೊರಗೆ ಸ್ವಲ್ಪ ದೂರ ಕರೆದೊಯ್ಯಲಾಗುತ್ತದೆ. ಅಲ್ಲಿ ಸೂರ್ಯನಿಗೆ ನಮಸ್ಕಾರ ಮಾಡಿಸಿ ತಿರುಗಿ ಚಪ್ಪರದೊಳಗೆ ಬಂದ ನಂತರ 'ಹೆಣ್ಣು ಒಪ್ಪಿಸಿಕೊಡುವ' ಪದ್ಧತಿ ಆಚರಿಸಲಾಗುವುದು. ಇದನ್ನು ತುಳುವಿನಲ್ಲಿ 'ದೊಂಪ ಜಪ್ಪುನಿ ಮತ್ತು ಪೊಣ್ಣು ಒಚ್ಚಿದು ಕೊರ್ಪಿನಿ' ಎಂದು ಕರೆಯಲಾಗುತ್ತದೆ. ಇದು ಮದುವೆಯ ಮುಕ್ತಾಯವನ್ನು ತಿಳಿಸುವ ಪ್ರಕ್ರಿಯೆಯಾಗಿರುತ್ತದೆ. ಮದುವೆ ಚಪ್ಪರದಿಂದ ವಧು ಹಾಗೂ ಆಕೆಯ ಕಡೆಯವರು ನಿರ್ಗಮಿಸುವ ಮೊದಲು ಆಕೆಯ ತಂದೆ ತಾಯಿಗಳಿಂದ ವರನ ತಂದೆ ತಾಯಿಗಳಿಗೆ ನೆರೆದ ಹಿರಿಯರು ಹಾಗೂ ಕುಟುಂಬಸ್ಥರ ಸಮ್ಮುಖದಲ್ಲಿ ಈ ಕಾರ್ಯಕ್ರಮ ಜರಗುತ್ತದೆ. ತಮ್ಮ ಮಗಳನ್ನು ಹುಡುಗನೊಬ್ಬನಿಗೆ ಕನ್ಯಾದಾನ ಮಾಡಿ ಧಾರೆ ಎರೆದುಕೊಟ್ಟು ಆತನಿಂದ ಆಕೆಯ ಕೊರಳಿಗೆ ಮಂಗಳಸೂತ್ರವನ್ನು ಕಟ್ಟಿಸಿಕೊಂಡಿದ್ದಾಳೆ. ತಂದೆ ತಾಯಿಗಳು ತಮ್ಮ ಮಗಳ ಮೇಲೆ ಅವರಿಗಿರುವ ಹಕ್ಕನ್ನು ಇನ್ನೂ ಕಳೆದುಕೊಂಡಿರುವುದಿಲ್ಲ. ಅದನ್ನು ಕಳೆದುಕೊಳ್ಳುವ ಕ್ರಿಯೆ ಇದಾಗಿದೆ. ವಧುವಿನ ಎರಡೂ ಕೈಗಳನ್ನು ತನ್ನ ಕೈಗಳಿಂದ ಹಿಡಿದುಕೊಂಡು ಆಕೆಯ ತಂದೆ ತಾಯಿಗಳು ಸೇರಿದಂತೆ ಸೋದರ ಮಾವ ಆಕೆಯನ್ನು ವರನ ತಂದೆ ತಾಯಿಗಳಿಗೆ ಒಪ್ಪಿಸಿಕೊಡುವನು. ಆಗ ಆತನು ಅವರನ್ನುದ್ದೇಶಿಸಿ, "ಈ ವರೆಗೆ ಈ ಮಗುವಿನ ಜವಾಬ್ದಾರಿ, ಹೊಣೆಗಾರಿಕೆ, ಖರ್ಚು-

ವೆಚ್ಚ, ಅಂದ–ಚೆಂದ, ಕುಂದು ಕೊರತೆ, ಸುಖ–ದುಃಖ, ಕಷ್ಟ–ನಷ್ಟ, ರೋಗ ರುಜಿನ, ಭಾರ ಹಗುರಗಳೆಲ್ಲ ನಮ್ಮದಾಗಿದ್ದವು. ಮೇಲೆ ಇಟ್ಟರೆ ಕಾಗೆ ಕೊಂಡು ಹೋಗಬಹುದು, ಕೆಳಗೆ ಇಟ್ಟರೆ ಇರುವೆ ಒಯ್ಯಬಹುದು ಎಂಬ ಮಮಕಾರದಿಂದ ಸಾಕುತ್ತಾ ಬಂದಿದ್ದೇವೆ. ಈ ತನಕ ಈ ಮಗುವು ಮನೆಯ ಹೊಸ್ತಿಲು ದಾಟಿ ಹೊರಗೆ ಕಾಲಿಟ್ಟವಳಲ್ಲ, ಒಬ್ಬರಿಗೆ ಒಂದು ಮಾತು ಹೇಳಿದವಳಲ್ಲ, ಒಬ್ಬರಿಂದ ಒಂದು ಮಾತು ಹೇಳಿಸಿಕೊಂಡವಳಲ್ಲ, ಅವಳಿಗೆ ಒಂದು ತಿಳಿದರೆ ಒಂಬತ್ತು ತಿಳಿಯದು. ಹಾಗಿರುವಾಗ ಈ ವರೆಗೆ ನಾವು ಹೇಗೆ ಪ್ರೀತಿಯಿಂದ ರಕ್ಷಿಸಿಕೊಂಡು ಬಂದಿರುವೆವೋ ಅದೇ ರೀತಿಯಲ್ಲಿ ನೀವೂ ಕೂಡಾ ಆಕೆಯ ತಪ್ಪು ಒಪ್ಪುಗಳನ್ನೆಲ್ಲಾ ಮಡಿಲಿಗೆ ಹಾಕಿಕೊಂಡು ಅವಳನ್ನು ರಕ್ಷಿಸುತ್ತಾ ಬರಬೇಕೆಂದು ನಮ್ಮ ಮನೆಯ ಈ ದೀಪವನ್ನು ನಿಮ್ಮ ಕೈಗೆ ಒಪ್ಪಿಸಿಕೊಡುತ್ತಿದ್ದೇವೆ" ಎಂದು ಹೇಳುವನು. ಇದಕ್ಕೆ ತುಳುವಿನಲ್ಲಿ 'ಪೊಣ್ಣು ಒಚ್ಚಿದು ಕೊರ್ಪಿನಿ' ಎನ್ನುತ್ತಾರೆ. ಇನ್ನೂ ಏನಿದ್ದರೂ ನಮ್ಮ ಮಗಳು ಮುಂದಕ್ಕೆ ನಿಮಗೆ ಸೇರಿದವಳು. ಆಕೆಯ ಹಕ್ಕುದಾರರು ನೀವು ಅವಳ ಮೇಲೆ ನಮಗಿರುವ ಹಕ್ಕನ್ನು ನಾವು ಈ ಮೂಲಕ ಕಳೆದುಕೊಂಡಿದ್ದೇವೆ ಎಂಬುದನ್ನು ಸಾರುವಂತೆ ಹೆಣ್ಣು ಒಪ್ಪಿಸಿ ಕೊಡುವ ಕಾರ್ಯಕ್ರಮ ನಡೆಯುತ್ತದೆ. ಈ ವಿವಾಹದ ಮೂಲಕ ವರನ ತಂದೆ ತಾಯಿಗೆ ಆಕೆಯ ಸಂಪೂರ್ಣ ಹಕ್ಕು ಪ್ರಾಪ್ತವಾದರೂ ತಮಗಿಷ್ಟ ಬಂದಂತೆ ಆಕೆಯನ್ನು ನಡೆಸಿಕೊಳ್ಳಬಾರದೆಂದು ಸೂಚ್ಯವಾಗಿ ತಿಳಿಸಿ ಹೇಳುವ ಸಂದೇಶವೂ ಇರುತ್ತದೆ. ಈ ಸಂದರ್ಭದಲ್ಲಿ ಸಹಜವಾಗಿಯೇ ಮದುಮಗಳು ಆಕೆಯ ತಂದೆ – ತಾಯಿಗಳು, ಒಡಹುಟ್ಟಿದವರು ಭಾವೋದ್ವೇಗಕ್ಕೆ ಒಳಗಾಗುವುದನ್ನು ಕ್ಷೇತ್ರಕಾರ್ಯ ಸಂದರ್ಭದಲ್ಲಿ ಮನಗಂಡಿದ್ದೇನೆ. ಉಡುಪಿ ಜಿಲ್ಲೆಯ ಕುಂದಾಪುರ ಗ್ರಾಮಾಂತರ ಪ್ರದೇಶಗಳಲ್ಲಿ ಹೆಣ್ಣು ಇಳಿಸಿ ಕೊಡುವ ಸಂದರ್ಭದಲ್ಲಿ ಕೆಲವರು ಕೈಯೆತ್ತಿಕೊಡುವ ಹಾಡು ಹಾಡುವುದನ್ನು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಕಂಡುಕೊಂಡಿದ್ದೇನೆ.

ಹೀಗೆ ಹೆಣ್ಣಿನ ಮನೆ ಅಥವಾ ಕಲ್ಯಾಣ ಮಂಟಪದಲ್ಲಿ ಧಾರಾಕಾರ್ಯ ಮುಗಿಸಿ ವರನು ತನ್ನ ಮನೆಗೆ ವಧುವನ್ನು ದಿಬ್ಬಣ ಸಮೇತ ಕರೆದುಕೊಂಡು ಹೋಗುತ್ತಾನೆ. ಇತ್ತೀಚೆಗೆ ಕಲ್ಯಾಣ ಮಂಟಪದಿಂದ ನೇರವಾಗಿ ವಧುವರನ ಜೊತೆಗೆ ಕೆಲವೇ ಕೆಲವು ನೆಂಟರಿಷ್ಟರೊಂದಿಗೆ ವರನ ಜೊತೆಗೆ ಆತನ ಮನೆಗೆ ಹೋಗುತ್ತಾರೆ. ಉಳಿದ ಸಂಬಂಧಿಕರು, ಸ್ನೇಹಿತರು ಕಲ್ಯಾಣ ಮಂಟಪದಿಂದಲೇ ತೆರಳುವುದು ಕಂಡುಬರುತ್ತದೆ. ವಧುವು ಪ್ರಥಮ ಬಾರಿಗೆ ತನ್ನ ಗಂಡನ ಮನೆ ಪ್ರವೇಶ ಮಾಡುವಾಗ ವಧುವಿಗೆ ವರನ ತಂಗಿ ಅಥವಾ ಅಕ್ಕ ಕಾಲಿಗೆ ನೀರೆರೆದು ಆರತಿ ಎತ್ತಿ ಬರಮಾಡಿಕೊಳ್ಳುತ್ತಾರೆ. ಅದರೊಂದಿಗೆ ಕುರ್ದಿ ನೀರು ತಯಾರಿಸಿ ತೆಂಗಿನಕಾಯಿಯನ್ನು ನಿವಾಳಿಸಿ ಮೂರು ದಾರಿ ಸೇರುವಲ್ಲಿ ನೀರನ್ನು ಚೆಲ್ಲಿ ತೆಂಗಿನಕಾಯಿ ಒಡೆಯುವರು. ಈ ಆಚರಣೆ ದೃಷ್ಟಿ ದೋಷ ತೆಗೆಯುವುದಾಗಿದೆ. ಇದೇ ಸಂದರ್ಭದಲ್ಲಿ ವಧು ಹೊಸ್ತಿಲು ದಾಟುವಾಗ ಐದು ಕಡೆ ಸ್ವಲ್ಪ ಸ್ವಲ್ಪ ಅಕ್ಕಿ ಹಾಕಿ ಅದರ ಮೇಲೆ ಬಿಳಿ ವಸ್ತ್ರ ಹಾಸಿರುತ್ತಾರೆ. ವಧುವು ತನ್ನ ಗಂಡನೊಂದಿಗೆ ಅದರ ಮೇಲೆ ನಡೆಯುತ್ತಾ ಬಂದು, ದೇವರ ಕೋಣೆಯಲ್ಲಿಯ ದೇವರಿಗೆ ನಮಸ್ಕರಿಸುತ್ತಾಳೆ. ಧಾರಾ ಮುಹೂರ್ತದ ಸಂದರ್ಭದಲ್ಲಿ ಮಡಿಲು ತುಂಬಿದ ಅಕ್ಕಿಯನ್ನು ಹಾಗೂ ಸೆರಗಿನ ತುದಿಯಲ್ಲಿ ಕಟ್ಟಿದ ಅಕ್ಕಿ ಕಾಳನ್ನು ಗಂಡನ ಮನೆಯಲ್ಲಿ ಅನ್ನ ಮಾಡಿ ಆತನಿಗೆ ಬಡಿಸಬೇಕೆಂಬ ಪದ್ಧತಿಯು ಕೆಲ ಪ್ರದೇಶಗಳಲ್ಲಿ ಕಂಡುಬರುತ್ತದೆ.

ಮದುವೆಯ ನಂತರದ ದಿನಗಳಲ್ಲಿ ನಡೆಯುವ ಆಚರಣೆಗಳು

ಮದುವೆಯ ಮರುದಿನ ನವದಂಪತಿಗಳು ಕೆಲವು ವಿನೋದಗಳಿಂದ ಕೂಡಿದ ಆಚರಣೆಗಳಲ್ಲಿ ಪಾಲ್ಗೊಳ್ಳುವುದನ್ನು ಕ್ಷೇತ್ರಕಾರ್ಯ ಸಂದರ್ಭದಲ್ಲಿ ಗಮನಿಸಲಾಗಿದೆ. ಒಂದು ವಾರದೊಳಗೆ ವರನ ಮನೆಯಲ್ಲಿ ಅತ್ತೆಗೆ ಮತ್ತು ವಧುವಿನ ಮನೆಯಲ್ಲಿ ವರನ ತಾಯಿಗೆ ಸನ್ಮಾನ ಕಾರ್ಯಗಳು ನೆಡೆಯುತ್ತವೆ.

ವಿನೋದಾಚರಣೆಗಳು

ಹಿಂದಿನ ಕಾಲದಲ್ಲಿ ನವದಂಪತಿಗಳಲ್ಲಿರುವ ನಾಚಿಕೆ ಸ್ವಭಾವವನ್ನು ದೂರ ಮಾಡಲು ಅನೇಕ ವಿನೋದಾಚರಣೆಗಳನ್ನು ಹಮ್ಮಿಕೊಂಳ್ಳುತ್ತಿದ್ದರು. ಇಂದು ತಾಂತ್ರಿಕ ಯುಗದಲ್ಲಿ ವಿವಿಧ ವಿನೋದಾವಳಿಗಳು ಮೂಲೆ ಗುಂಪಾಗಿ ನಶಿಸಿ ಹೋಗುತ್ತಿರುವುದು ಕಂಡುಬಂದಿದೆ. ಆದರೆ ಕೆಲ ಗ್ರಾಮಾಂತರ ಪ್ರದೇಶಗಳಲ್ಲಿ ವಿವಾಹದ ಮರುದಿನ ಒಕುಳಿಯಾಟ, ಜೇನು ತೆಗೆಯುವ ನಟನೆಯನ್ನು ಗಂಡ ಮತ್ತು ಹೆಂಡತಿ ಮಾಡುತ್ತಿರುವುದನ್ನು ಹಾಗೂ ಕೆಂಪು ಇರುವೆಯ ಗುಂಪನ್ನು ತಿಳಿಯದಂತೆ ಒಂದು ಬಟ್ಟೆಯಲ್ಲಿ ಸುತ್ತಿ ನವದಂಪತಿಗಳಿಗೆ ಕೊಟ್ಟು ಗಂಟುಬಿಚ್ಚಲು ಹೇಳುವುದು, ಅವರು ತಿಳಿಯದೇ ಗಂಟು ಬಿಚ್ಚಿದ ತಕ್ಷಣ ಇರುವೆಗಳೆಲ್ಲಾ ನವದಂಪತಿಗಳ ಮೈ ತುಂಬಾ ಕಚ್ಚುತ್ತಿದ್ದವು. ಅವರಿಬ್ಬರು ಕೊಸರಿಕೊಂಡಾಗ ನೆರೆದವರು ತಮಾಷೆ ಮಾಡಿ ನಗೆಗಡಲಲ್ಲಿ ಮುಳುಗಿ ಮತ್ತೆ ಕೆಲವರು ಅವರಿಗೆ ಸಹಕರಿಸುವ ನೆಪದಿಂದ ಪುನಃ ಅದನ್ನೇ ಅವರ ಮೈ ಮೇಲೆ ಹಾಕಿ ಸಂತೋಷ ಪಡುವ ವಿಷಯವನ್ನು ಹಿರಿಯರು ತಮ್ಮ ಅನುಭವಗಳನ್ನು ಕ್ಷೇತ್ರಕಾರ್ಯ ಸಂದರ್ಭದಲ್ಲಿ ತಿಳಿಸಿದ್ದಾರೆ.

ಮಾಮಿ ಸಂಮಾನ (ಅತ್ತೆ ಸಮ್ಮಾನ)

ವಧುವಿನ ತಾಯಿಗೆ ಸಂಬಂಧ ನೋಡುವ ಮತ್ತು ನಿಶ್ಚಯ ಸಂದರ್ಭದಲ್ಲಿ ಭಾವಿ ಅಳಿಯನ ಮನೆಗೆ ಬರಲು ನಿಷೇಧವಿದೆ. ಆದರೆ ಈ ನಿಷೇಧವು ಕೆಲವೊಂದು ಕಡೆ ಸಡಿಲಗೊಂಡಿರುವುದು ಕಂಡುಬಂದಿದೆ. ಹಿಂದಿನ ಕಾಲದಲ್ಲಿ ಅತ್ತೆಯಾದವಳು ಮದುವೆ ನಂತರ ಹೊಸದಾಗಿ ಅಳಿಯನ ಮನೆಗೆ ಪ್ರವೇಶಿಸುವ ದಿನವನ್ನು ವಿಜ್ರಂಭಣೆಯಿಂದ ಆಚರಿಸುವುದು ಕಂಡು ಬರುತ್ತದೆ. ಅದಕ್ಕೆ ಪ್ರತಿಯಾಗಿ ಮದುಮಗನು ಮದುಮಗಳ ತಾಯಿ ಮನೆಗೆ ಬರುವ ಸಂದರ್ಭವು ಕೂಡಾ ವಿಶೇಷವಾಗಿ ಸನ್ಮಾನ ಕಾರ್ಯಕ್ರಮಗಳು ಜರುಗುವುದು ಕಂಡು ಬರುತ್ತದೆ. ಗಂಡಿನ ಮನೆಯಲ್ಲಿ ಜರಗುವ ಸನ್ಮಾನ ಕಾರ್ಯಕ್ರಮವನ್ನು ತುಳುವಿನಲ್ಲಿ 'ಮಾಮಿಸಿಕೆ' 'ಮಾಮಿ ಸಂಮಾನ' ಎಂದು ಕರೆಯುತ್ತಾರೆ.

ಮೊದಲ ಬೀಗರ ಊಟವು ಗಂಡಿನ ಮನೆಯಲ್ಲಿ ನಡೆಯುತ್ತದೆ. ಮದುವೆ ದಿನದಂದೇ ಹರಿವಾಣದಲ್ಲಿ ತಾಂಬೂಲವನ್ನಿಟ್ಟು ವಧುವಿನ ಕಡೆಯವರನ್ನು ಆಮಂತ್ರಿಸುತ್ತಾರೆ. ಅಂದು ಮದುಮಗನ ಅತ್ತೆಗೆ ವಿಶೇಷ ಆಮಂತ್ರಣವಿರುತ್ತದೆ. ಅತ್ತೆಯನ್ನು ಬರಮಾಡಿ ಮಾಂಸದೂಟ ಹಾಕಿ ಗೌರವಿಸಿ ಕಳುಹಿಸುವ ಸಂಪ್ರದಾಯ ಎರಡು ಮರಾಟಿ ಸಮುದಾಯದವರಲ್ಲಿದೆ. ಅಳಿಯನ ಮನೆಗೆ ಅತ್ತೆ ಭೇಟಿ ನೀಡುವ ಮೊದಲ ಇದಾಗಿದ್ದಲ್ಲಿ ಅಳಿಯನ ಮನೆಯ ವಾತಾವರಣವನ್ನು ತಿಳಿಯಲು ಇದು ಸಹಕಾರಿಯಾಗುತ್ತದೆ. ಅತ್ತೆ ಸನ್ಮಾನ ಮಾಡದಿದ್ದರೆ ಅತ್ತೆ ತನ್ನ ಮಗಳನ್ನು ಕರೆದುಕೊಂಡು ಹೋಗಲು ಅಳಿಯನ ಮನೆಗೆ ಬರುವುದಿಲ್ಲ ಎಂಬುದು ಹಿರಿಯರ ಮಾತು. ಇದೊಂದು ಅತ್ತೆಗೆ ಗೌರವ ನೀಡುವ ಪದ್ಧತಿಯಾಗಿದ್ದು, ಮಹತ್ವವನ್ನು ಪಡೆದುಕೊಂಡಿದೆ.

ಕೆಲವೊಂದು ಕಡೆ ಅಂದು ಮದುಮಗಳನ್ನು ವಧುವಿನ ಮನೆಯವರು ವರನ ಮನೆಯಿಂದ ನಿರ್ಗಮಿಸುವ ವೇಳೆ ತಾಂಬೂಲವನ್ನಿಟ್ಟು ವಧುವಿನ ಮನೆಯಲ್ಲಿ ಜರುಗುವ ಕಾರ್ಯಕ್ರಮಕ್ಕೆ ಆಹ್ವಾನಿಸುತ್ತಾರೆ. ಇದನ್ನು 'ತೊಡಮನೆ' ಎಂದು ಕರೆಯುತ್ತಾರೆ. ನಿಗದಿಪಡಿಸಿದ ದಿನದಂದು ವರ ಹಾಗೂ ವರನ ಮನೆಯವರು ವಧುವಿನ ಮನೆಗೆ ಬರುತ್ತಾರೆ. ಅಲ್ಲಿಯೂ ವರನ ಮನೆಯಲ್ಲಿ ಆದಂತಹ ಉಪಚಾರ ಇರುತ್ತದೆ. ವರನಿಗೆ ವರನ ಅತ್ತೆ ಚಿನ್ನದ ಉಡುಗೊರೆ ನೀಡುವುದನ್ನು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಕಂಡುಬಂದಿದೆ. ಇದಕ್ಕೆ ಕೂಡಾ 'ಮಾಮಿಸಿಕೆ' ಅಥವಾ 'ಅತ್ತೆ ಸಂಮಾನ' ಎಂದು ಕರೆಯುತ್ತಾರೆ.

೩.೧೧. ಉಡುಪಿ ಜಿಲ್ಲೆಯ ಮರಾಟಿ ಸಮುದಾಯದ ವಿವಾಹ

ನಿಶ್ಚಿತಾರ್ಥ

ಗಂಡು ಹೆಣ್ಣುಗಳ ಜಾತಕ ಕೂಡಿ ಬಂದರೆ ಹಿರಿಯರು ಒಪ್ಪಿದರೆ, ನಿಶ್ಚಯ ಕಾರ್ಯ ಹೆಣ್ಣಿನ ಮನೆಯಲ್ಲಿ ಜರಗುತ್ತದೆ. ಗಂಡಿನ ಮನೆಯ ಬಂಧುಗಳಲ್ಲಿ ಸಾಮಾನ್ಯವಾಗಿ ಐದು ಜನರು (ಮುಖ್ಯವಾಗಿ ವರನ ತಂದೆ, ದೊಡ್ಡಪ್ಪ, ಚಿಕ್ಕಪ್ಪ, ಸೋದರಮಾವ, ಭಾವ, ಅಣ್ಣ ಮೊದಲಾದವರು) ಹೆಣ್ಣಿನ ಮನೆಗೆ ನಿಗದಿಪಡಿಸಿದ ದಿನ ಹೋಗುತ್ತಾರೆ. ಅಲ್ಲಿ ಎರಡು ಹರಿವಾಣದಲ್ಲಿ ವೀಳ್ಯದೆಲೆ ಮತ್ತು ಅಡಿಕೆ ಹೋಳುಗಳನ್ನು ಎರಡೆರಡರಂತೆ ಏಳು ಕಡೆ ಇರಿಸಲಾಗಿರುತ್ತದೆ. ಇದು ಸಪ್ತಋಷಿ ಗೋತ್ರ ಸಂಕಲ್ಪ. ಮಂತ್ರಾಕ್ಷತೆ (ಬೆಳ್ತಿಗೆ ಅಕ್ಕಿ) ಮತ್ತು ಹೂವುಗಳನ್ನು ಹರಿವಾಣದಲ್ಲಿ ಇಟ್ಟಿರುತ್ತಾರೆ. ಮನೆಯಲ್ಲಿ ದೀಪ ಹಚ್ಚುವರು. ಅಂಗಳದಲ್ಲಿ ಪೂರ್ವ ಪಶ್ಚಿಮಕ್ಕೆ ನೀಳವಾಗಿ ಚಾಪೆ ಹಾಸಲಾಗುತ್ತದೆ. ಕುಲಗುರು ಹಾಗೂ ಮೊಕ್ತೇಸರರು ಈ ಹರಿವಾಣಗಳನ್ನು ಗಂಡು ಮತ್ತು ಹೆಣ್ಣಿನ ಕಡೆಯ ಹಿರಿಯರಿಗೆ ಎತ್ತಿ ಕೊಡುತ್ತಾರೆ. ಎರಡು ಕಡೆಯವರೊಂದಿಗೆ ಅವರವರ ಬಂಧುಗಳು ನಿಂತಿರುತ್ತಾರೆ. ಎಲ್ಲ ಗಂಡಸರು ತಲೆಗೆ ಮುಂಡಾಸು ಕಟ್ಟಿರುತ್ತಾರೆ. ಗಂಡಿನ ತಂದೆ ಅಥವಾ ಕುಟುಂಬದ ಹಿರಿಯ ಹರಿವಾಣವನ್ನು ಕೈಯಲ್ಲಿ ಹಿಡಿದು, ಬಳಿ, ಮನೆತನದ ಹೆಸರು ಹೇಳಿ, ಇಂತವರ ಇಷ್ಟನೇ ಪುತ್ರ, ಇಂತವನಿಗೆ ನಾವು ಹೆಣ್ಣಿನ ಬಳಿ ಮತ್ತು ಮನೆತನ ಹೇಳಿ, ಇಂತವರ ಇಷ್ಟನೇ ಪುತ್ರಿ ಇಂತವಳನ್ನು ಇಂತಹ ತಾರೀಖಿನ ದಿನ ನೀವು ಧಾರೆಯೆರದು ವಿವಾಹ ಮಾಡಿಕೊಡಲು ಸಿದ್ಧರಿದ್ದೀರಾ? ಎಂದು ಮೂರು ಬಾರಿ ಕೇಳುತ್ತಾರೆ. ಹೆಣ್ಣಿನ ಕಡೆಯ ಹಿರಿಯರು ಮೇಲಿನಂತೆ ಪುನರುಚ್ಚರಿಸಿ ನಾವು ಸಿದ್ಧರಿದ್ದೇವೆ ಎಂದು ಮೂರು ಬಾರಿ ಹೇಳುತ್ತಾರೆ. ಹೆಣ್ಣಿನವರು ನೆಂಟರಿಗೆ ಕುಡಿಯಲು ಬೆಲ್ಲ ಮತ್ತು ನೀರು ಕೊಡುತ್ತಾರೆ. ನಂತರ ತಾಂಬೂಲ ಚರ್ವಣ ಮಾಡಿ ತಿನ್ನಿಸುವರು. ಗಂಡಿನ ಕಡೆಯವರು ಹೆಣ್ಣಿನ ಮನೆಯಲ್ಲಿ ಊಟ ಮಾಡಿದರೆ ಹೆಣ್ಣು ಕೊಡುವ ಮತ್ತು ತರುವ ಕಾರ್ಯ ನಿಶ್ಚಯವಾದಂತೆ.

ನಾಂದಿ ಕಟ್ಟುವ ಪದ್ಧತಿ

ವಿವಾಹ ನಿಗದಿಪಡಿಸಿದ ದಿನಾಂಕಕ್ಕಿಂತ ಹನ್ನೊಂದು ದಿನ ಮೊದಲು ಕುಟುಂಬದಲ್ಲಿ ಬರುವ ಸೂತಕಾದಿಗಳ ತೊಂದರೆ ನಿವಾರಣೆಗಾಗಿ ನಾಂದಿ ಕಟ್ಟುವರು. (ಸ್ವಂತ ಮನೆಯವರ ಸೂತಕ ಬಂದರೆ ವಿವಾಹ ಮಾಡುವುದಿಲ್ಲ. ಶುದ್ಧವಾದ ನಂತರವೇ ವಿವಾಹ ಮಾಡುತ್ತಾರೆ). ವರ ಹಾಗೂ ವಧುವಿನ ಮನೆಯಲ್ಲಿ 'ಚಪ್ಪರ' 'ಎಡೆಚಪ್ಪರ' ನಿರ್ಮಿಸುತ್ತಾರೆ. ಅರ್ಚಕರ ಮೂಲಕ ಪೂಜೆ ಮಾಡಿಸಿದ ಅರಿಶಿಣದ ಕೊಂಬು, ನೂಲುಂಡೆ, ಅಕ್ಷತೆ, ನಾಣ್ಯಗಳು, ಹೂವುಗಳನ್ನು ಚಪ್ಪರದ ಮುಹೂರ್ತದ ಕಂಬಕ್ಕೆ ಮಡಿ ಬಟ್ಟೆ ಕಟ್ಟುತ್ತಾರೆ. ಧಾರಾ ಮಂಟಪ ನಿರ್ಮಿಸಿ ತಳಿರು ತೋರಣಗಳಿಂದ ಶೃಂಗರಿಸುತ್ತಾರೆ. ಚಪ್ಪರದಲ್ಲಿ ಮುಹೂರ್ತ ಕಂಬದ ಹತ್ತಿರ ತೂಗು ದೀಪ ಹಚ್ಚುತ್ತಾರೆ.

ದೇವಕಾರ್ಯ ಮತ್ತು ಅರಿಶಿಣ ಎಣ್ಣೆ ಹಚ್ಚುವ ಕಾರ್ಯಕ್ರಮ

ವಿವಾಹದ ಮೊದಲ ದಿನ ಅರಿಶಿಣ ಮುಹೂರ್ತದ (ದೇವಕಾರ್ಯ) ದಿನ ಬೆಳಿಗ್ಗೆ ವರನ ಮನೆಯಲ್ಲಿ ವರನಿಗೆ ಕ್ಷೌರಿಕನಿಂದ ಹಾಲಿನಿಂದ ಮುಖಕ್ಷೌರ ಮಾಡಿಸುವರು. (ಕ್ಷೌರಿಕನಿಗೆ ೫ ಕುಡ್ತೆ ಅಕ್ಕಿ, ೧ ಕಾಯಿ, ೫ ವೀಳ್ಯದೆಲೆ, ೧ ಅಡಿಕೆ, ೧ ಮುಂಡು ಮತ್ತು ಹಣ ಕೊಡುವರು) ಸಾಯಂಕಾಲ ಮುಹೂರ್ತಕ್ಕೆ 'ಕಲಶ' ಸ್ಥಾಪನೆ ಮಾಡುತ್ತಾರೆ. ಐದು ಮಂದಿ ಸುಮಂಗಲಿಯರು ವಲ್ಲಿ ಧರಿಸಿ ಗಂಗಾಪೂಜೆ ಮಾಡಿ ನೀರು ತಂದು ಕೊಂಬು ಗಿಂಡಿಯಲ್ಲಿ ಹಾಕಿ, ಮಾವಿನ ಎಲೆ, ಜಟ್ಟು ಇರುವ ತೆಂಗಿನಕಾಯಿ ಇಟ್ಟು ಕೊಂಬು ಗಿಂಡಿಗೆಗೆ ೫ ಕಡೆ ಗಂಧ, ಕುಂಕುಮದ ಬೊಟ್ಟು ಇಟ್ಟು; ಕಂಚಿನ

ಬಟ್ಟಲಿನಲ್ಲಿ ೫ ಕುಡ್ತೆ ಕುಚ್ಚಿಗೆ ಅಕ್ಕಿ, ಗಂಧ, ಕುಂಕುಮ, ಬಾಚಣಿಗೆ, ಕನ್ನಡಿ, ಹೂವು, ದೀಪ ಇಟ್ಟು ಅದರಲ್ಲಿ ಕೊಂಬುಗಿಂಡಿ ಇಟ್ಟು ಕಲಶ ಸ್ಥಾಪನೆ ಮಾಡುವರು. ಇದನ್ನು ಹೆಣ್ಣಿನ ಮನೆಯಲ್ಲೂ ಮಾಡುವ ಪದ್ಧತಿ ಇದೆ. ಇದು ವಿವಾಹದ ಪ್ರಥಮ ಹೆಜ್ಜೆ. ವರ (ಅಥವಾ ಕುಟುಂಬದ ಹಿರಿಯರು ಗುರುಗಳು ಅಥವಾ ಮೊಕ್ತೇಸರರು) ಸ್ನಾನ ಮಾಡಿ ತಮ್ಮ ಆರಾಧ್ಯ ದೇವರನ್ನು ಕುಳ್ಳಿರಿಸಿ, ಅಲಂಕರಿಸಿ, ಅರ್ಘ್ಯ ಪಾದ್ಯ ನೈವೇದ್ಯಗಳಿಂದ ದೇವರನ್ನು ಪೂಜಿಸುವನು. ನಂತರ ದೇವರ ಎದುರು ಎಡಬದಿಯಲ್ಲಿ ಅಕ್ಕಿಯಲ್ಲಿ ರಂಗವಲ್ಲಿ ಬರೆದು ಅದರ ಮೇಲೆ ಮಣೆ ಇಟ್ಟು ಬಟ್ಟೆ ಹಾಸುತ್ತಾನೆ. ವರನ ತಾಯಿ ಮಗನ ಕೈ ಹಿಡಿದು ಮೂರು ಸುತ್ತು ಪ್ರದಕ್ಷಣೆ ಹಾಕಿಸಿ ಮಣೆಯ ಮೇಲೆ ವರನನ್ನು ಕುಳ್ಳರಿಸುತ್ತಾಳೆ. ಇದು ಅರಶಿನೆಣ್ಣೆ ಕಾರ್ಯಕ್ರಮ. ಪ್ರಥಮವಾಗಿ ತಾಯಿ ಮಗನಿಗೆ ಅರಿಶಿನೆಣ್ಣೆ ಹಚ್ಚುವಳು. ತಾಯಿ ಇಲ್ಲದಿದ್ದರೆ (ತಾಯಿ ಮುತ್ತೈದೆಯಲ್ಲದಿದ್ದರೆ) ಚಿಕ್ಕತಾಯಿ, ದೊಡ್ಡತಾಯಿ, ಅಕ್ಕ ಮದುವೆಯಾದ ತಂಗಿ ಇದರಲ್ಲಿ ಯಾರಾದರೂ ಆಗಬಹುದೆಂದು ಜ್ಯೋತಿಷ್ಯರಲ್ಲಿ ಅಥವಾ ಹಿರಿಯರಲ್ಲಿ ಕೇಳಿ ನಂತರ ಎಲ್ಲಾ ಸುಮಂಗಲಿಯರು ಅರಿಶಿನೆಣ್ಣೆ ಹಚ್ಚುವರು. ಇದೇ ರೀತಿ ವಧೂವಿಗು ವಧುವಿನ ಮನೆಯಲ್ಲಿ ಆಚರಣೆ ಮಾಡುತ್ತಾರೆ. ಐದು, ಏಳು, ಒಂಭತ್ತು ಸಲ ಅರಶಿನೆಣ್ಣೆ ಹಚ್ಚುವುದನ್ನು ಕ್ಷೇತ್ರಕಾರ್ಯದಲ್ಲಿ ಗಮನಿಸಿದ್ದೇನೆ. ಅರಿಶಿನೆಣ್ಣೆ ಹಚ್ಚಿದ ನಂತರ ವಿವಾಹಕ್ಕೆ ತಂದ ಬಟ್ಟೆಗಳನ್ನು ದೇವರ ಮುಂದೆ ಒಂದು ಮರದ ಮಣೆಯ ಮೇಲೆ ಇಟ್ಟು ಪೂಜೆ ಮಾಡುವರು. ಇದನ್ನು 'ಜವಳಿ' ಏರಿಸುವ ಕಾರ್ಯಕ್ರಮ ಎನ್ನುತ್ತಾರೆ. ವರನ ಮನೆಯಲ್ಲಿ ಜವಳಿ ಏರಿಸುವುದರೊಂದಿಗೆ ಬಾಸಿಂಗ, ತೊಂಡ್ಲು, ಚಾಕು ಇಟ್ಟು ಪೂಜಿಸುವರು. ನಂತರ ದೇವತಾ ಕಾರ್ಯದ ಊಟೋಪಚಾರಗಳು ನಡೆಯುತ್ತವೆ. ಊಟದ ನಂತರ ಒಂದು ಬಾರಿ ಅರಿಶಿನೆಣ್ಣೆ ಹಚ್ಚಿ ೨ನೇ ಬಾರಿಯ ಅರಿಶಿನೆಣ್ಣೆಯನ್ನು ಕಳಸದ ನೀರಿನಿಂದ ವರನಿಗೆ / ವಧುವಿಗೆ ಕಳಸ ಸ್ನಾನ ಮಾಡಿಸುವರು. ಕಳಸ ಸ್ನಾನ ಅಂದರೆ ೫ ಗಿಂಡಿ (ಪಂಚಭೂತ ಸಂಕಲ್ಪ) ೭ ಗಿಂಡಿ (ಸಪ್ತಋಷಿ ಸಂಕಲ್ಪ)ಗಳನ್ನು ಆಯತಾಕಾರದಲ್ಲಿರಿಸಿ ಅದಕ್ಕೆ ಒಂಭತ್ತು ಸುತ್ತು (ನವಗ್ರಹದ ಸಂಕಲ್ಪ) ನೂಲು ಸುತ್ತಿ ಕೋಟೆ ಕಟ್ಟಿ ನಡುವೆ ವರ ಮತ್ತು ವರನ ತಾಯಿ (ವಧು ಮತ್ತು ವಧುವಿನ ತಾಯಿ) (ಮೊದಲು ಅರಿಶಿನೆಣ್ಣೆ ಮಾಡಿದವರು) ಯನ್ನು ಕುಳ್ಳರಿಸಿ, ಮುತ್ತೈದೆಯರು ಅವರ ತಲೆಗೆ ಎಣ್ಣೆ ಹಾಕಿ ನೀರೆರೆದು ಸ್ನಾನ ಮಾಡಿಸುವರು ಮತ್ತು ಅಕ್ಷತೆ (ದೇಸೆ) ಹಾಕುವರು. ಕಳಸ ಸ್ನಾನದ ನಂತರ ದೇವತಾಕಾರ್ಯ (ದೇವ್ಕಾರೆ) ಮುಗಿದಂತೆ.

ದಿಬ್ಬಣ ಹೊರಡುವುದು

ಮರುದಿನ ವರನಿಗೆ ಕಚ್ಚೆಹಾಕಿದ ಬಿಳಿಧೋತ್ರ ಉಡಿಸಿ ಬಿಳಿ ಅಂಗಿ ತೊಡಿಸಿ, ಅರಿಶಿಣದ ಪಟ್ಟೆಶಾಲು ಹೊದಿಸಿ ತಲೆಗೆ ಪೇಟ ಇರಿಸಿ ಶೃಂಗರಿಸುತ್ತಾರೆ. ವರನ ಹಣೆಗೆ ಮೂರು ಎಳೆ ಗಂಧನಾಮ, ಕಪ್ಪು ದೃಷ್ಟಿಬೊಟ್ಟು ಇಟ್ಟು, ವರನ ತಂದೆ (ಅಥವಾ ಮೊಕ್ತೇಸರರು, ಗುರುಗಳು, ವರನ ತಂದೆ ಸ್ಥಾನದಲ್ಲಿರುವ ಯಾರಾದರೊಬ್ಬರು) ಕುಳ್ಳರಿಸಿ ಸಂಕಲ್ಪದ ದೇವರಿಗೆ ಆರತಿ ಎತ್ತಿ, ನಾಲ್ಕು ಮೊಳದ ಬಿಳಿ ಬೈರಾಸನ್ನು ದೇವರ ಎದುರಿನಲ್ಲಿ ಹಾಸಿ, ಅದರಲ್ಲಿ ೫ ಕುಡ್ತೆ ಅಕ್ಕಿ, ಎರಡು ತೆಂಗಿನಕಾಯಿ, ಹತ್ತು ಬಾಳೆಹಣ್ಣು, ೧೦ ವೀಳ್ಯದೆಲೆ, ೨ ಅಡಿಕೆ, ಎರಡು ತುಂಡು ಬೆಲ್ಲ, ನಾಣ್ಯ ಇರಿಸಿದ ಚೆಂಚನ್ನು, ೫ ಕುಡ್ತೆ ಅಕ್ಕಿ, ಎರಡು ತೆಂಗಿನಕಾಯಿ, ೫ ವೀಳ್ಯದೆಲೆ, ೧ ಅಡಿಕೆ, ೨ ನಾಣ್ಯ ಇರುವ ಬಿಳಿ ಬೈರಾಸಿನಲ್ಲಿ ಕಟ್ಟಿದ ಗಂಟು ಕಟ್ಟಿ ದೇವರಿಗೆ ನಮಸ್ಕರಿಸಿ "ಚೆಂಚನ್ನು" ವರನ ಕೈಗೆ ಕೊಡುತ್ತಾರೆ. ಚೆಂಚು, ಲಿಂಬೆಯನ್ನು ಚುಚ್ಚಿದ ಚಾಕು ಸಮೇತವಾಗಿ ವರನು ಕುಲದೇವರಿಗೆ ನಮಸ್ಕರಿಸಿ ತನ್ನವರೊಂದಿಗೆ ಎಡೆಚಪ್ಪರವನ್ನು ಪ್ರವೇಶಿಸಿ ಕುಳಿತುಕೊಳ್ಳುವನು. (ಇದೇ ರೀತಿ ವಧುವಿನ ಮನೆಯಲ್ಲಿ ವರನ

ಕಡೆಯವರು ಹೂ, ಸೀರೆ, ಬಳೆ ನೀಡಿ ಬಾಸಿಂಗ ಕಟ್ಟಿ ಮಡಲಕ್ಕಿ ಕಟ್ಟುವರು) ವರನು ತನ್ನ ಮನೆಗೆ ಮದುಮಗಳೊಂದಿಗೆ ಹಿಂತಿರುಗುವವರೆಗೆ ದೇವರ ದೀಪ ನಂದದಂತೆ ಬೇಕಾದಷ್ಟು ಎಣ್ಣೆ ಹಾಕುವರು. ವರನ ವಿವಾಹ ಕಾರ್ಯ ಮುಗಿಯುವವರೆಗೆ ವರನ ಭಾವ ದಡ್ಡೆತನ ಸಹಾಯಕನಾಗಿ ವರನೊಂದಿಗಿರಬೇಕು. ವಧುವಿಗೆ ಅವಳ ಅಕ್ಕ ದಡ್ಡೆತನ ಮಾಡಬೇಕು.

"ಎಡೆ ಚಪ್ಪರದಲ್ಲಿ" ಬೆಲ್ಲ ನೀರು ಸೇವನೆಯ ನಂತರ ವಧುವಿನ ಮನೆಗೆ ವರನ ದಿಬ್ಬಣ ಹೊರಡುತ್ತದೆ. ವಧುವಿನ ಮನೆಗೆ ಮುಂಚಿತವಾಗಿ ಬರುವುದನ್ನು ವಧುವಿನ ಮನೆಯವರಿಗೆ ತಿಳಿಸುವ ಸಲುವಾಗಿ ಸಿಡಿಮದ್ದುಗಳನ್ನು ಸ್ಫೋಟಿಸುತ್ತಾರೆ. ದಿಬ್ಬಣ ವಧುವಿನ ಮನೆಯ ಎಡೆ ಚಪ್ಪರವನ್ನು ಪ್ರವೇಶಿಸುವಾಗ ಹೆಣ್ಣಿನ ಮನೆಯ ಬಂಧುಗಳು ಅವರನ್ನು ಸ್ವಾಗತಿಸಿ, ಬೆಲ್ಲ, ನೀರು, ಪಾನಕ, ಹಣ್ಣು ಹಂಪಲು, ತಾಂಬೂಲಗಳನ್ನು ಕೊಟ್ಟು ಗೌರವಿಸಿ ಉಪಚರಿಸುತ್ತಾರೆ. ದಿಬ್ಬಣದವರಿಗೆ ಊಟದ ವ್ಯವಸ್ಥೆ ಮಾಡಿರುತ್ತಾರೆ. ಅವರು ಊಟದ ನಂತರ ವಿಶ್ರಾಂತಿ ಪಡೆಯುತ್ತಾರೆ.

ಧಾರಾ ಮುಹೂರ್ತಕ್ಕೆ ಮೊದಲು ವರನನ್ನೂ, ವಧುವನ್ನೂ ಶೃಂಗರಿಸುತ್ತಾರೆ. ವರನಿಗೆ ಕಪ್ಪು ಬೊಟ್ಟು, ಬಿಳಿ ಜರಿ ಧೋತಿಯ ಕಚ್ಚೆ, ರೇಷ್ಮೆಯ ಶಾಲು, ಬಿಳಿ ಅಂಗಿ ತೊಡಿಸುವುದು ಸಂಪ್ರದಾಯ. ಎಡೆ ಚಪ್ಪರದಲ್ಲಿ ಬಾಸಿಂಗ, ಚಾಕು, ಚಾಕುವಿಗೆ ಒಂದು ಲಿಂಬೆ ಹಣ್ಣನ್ನು ಚುಚ್ಚಿಡುತ್ತಾರೆ. ಗಣಪತಿ ಪೂಜೆ ಮಾಡುತ್ತಾರೆ. ಹೆಣ್ಣಿನ ಮನೆಗೆ ಹಿರಿಯರು ಎಣ್ಣೆ, ಅರಿಶಿಣ, ೫ ತೆಂಗಿನಕಾಯಿ, ಸೀರೆ, ವಧುವಿನ ಶೃಂಗಾರಕ್ಕೆ ಹೂವುಗಳನ್ನು ಸುಮಂಗಲಿಯರಿಗೆ ಕೊಡುತ್ತಾರೆ. ಕಲಶ, ಕನ್ನಡಿ ದೀಪವನ್ನು ಒಟ್ಟಿಗೆ ತೆಗೆದುಕೊಂಡು ಹೋಗಿ ಧಾರೆ ಮಂಟಪ ಎದುರು ಇಡುತ್ತಾರೆ. ಮದುಮಗನಿಗೆ ಮತ್ತು ಮದುಮಗಳಿಗೆ ಅಡ್ಡ ಕುಂಕುಮ ಬೊಟ್ಟು ಇಡುತ್ತಾರೆ. ಹೆಣ್ಣಿನ ಮನೆಯಿಂದಲೂ ಹಿರಿಯರು ಎಣ್ಣೆ ಅರಿಶಿಣ, ಐದು ತೆಂಗಿನಕಾಯಿಯನ್ನು ಗಂಡಿನವರ ಎಡೆ ಚಪ್ಪರಕ್ಕೆ ತಲುಪಿಸುವರು. ಎಡೆ ಚಪ್ಪರದಲ್ಲಿ ಬಾಸಿಂಗ, ಚಾಕು ಇಟ್ಟು ಪೂಜೆ ಮಾಡಿ ಹಿರಿಯರು ಅಥವಾ ತಂದೆ ವರನಿಗೆ ಪೇಟ ಇಟ್ಟು ಬಾಸಿಂಗ ಕಟ್ಟುವರು. ನಂತರ ಹಿರಿಯರು ಚಪ್ಪರದಲ್ಲಿ ವಧೂವರರ ಬಳಿ, ಮನೆತನದ ಹೆಸರು ಹೇಳಿ ಲಗ್ನಪತ್ರಿಕೆಯೊಂದಿಗೆ ತಾಂಬೂಲ ಬದಲಾಯಿಸಿ ೭ ಬಳಿಯವರಿಗೆ ಹಂಚಬೇಕು. ನಂತರ ಧಾರೆ ಮಂಟಪಕ್ಕೆ ವರನ ದಿಬ್ಬಣ ಪ್ರವೇಶ ಮಾಡುತ್ತಾದೆ. ಪ್ರವೇಶದ ದ್ವಾರದ ಬಳಿ ವರನ ಕಾಲು ತೊಳೆದು ಕುರ್ದಿನೀರು ಚಿಮುಕಿಸಿ ಆರತಿ ಮಾಡಿ, ಬೆಳ್ತಕ್ಕಿ ತೆಗೆದು, ತೆಂಗಿನಕಾಯಿಯನ್ನು ವರನಿಗೆ ನಿವಾಳಿಸಿ ಒಡೆಯುತ್ತಾರೆ. ಎರಡು ಕಡೆಯವರು ಅಕ್ಷತೆ ಹಾಕಿ ವರನನ್ನು ಸ್ವಾಗತಿಸುವರು. ಚಪ್ಪರ ಪ್ರವೇಶಿಸಿದ ವರನಿಗೆ (ಉಪನಯನವಾಗದಿದ್ದರೆ) ಉಪನಯನ ಸಂಸ್ಕಾರ, ಗೃಹಾಸ್ಥಾಶ್ರಮ ಪ್ರವೇಶಕ್ಕಾಗಿ ದ್ವಿತೀಯ ಯಜ್ಞೋಪವೀತ ಧಾರಣೆಯನ್ನು ಪುರೋಹಿತರು ಮಾಡುತ್ತಾರೆ. ನಂತರ ವಧುವಿನ ತಂದೆ ತಾಯಿ (ಅಥವಾ ಧಾರೆ ಎರೆಯುವ ದಂಪತಿಗಳು) ವರನ ಕಾಲು ತೊಳೆದು ವಧುವನ್ನು ಸ್ವೀಕರಿಸಬೇಕೆಂದು ವರನಿಗೆ ಪಂಚೆ, ಶಾಲು, ಉಂಗುರ, ಉಡುಗೊರೆಯಾಗಿ ಕೊಡುವರು. ವರ ಗಂಧದ ಕಲ್ಲಿನ ಮೇಲೆ ನಿಲ್ಲಬೇಕು. ವರನ ಎದುರಿನಲ್ಲಿ ತೆರೆ ಹಿಡಿಯುತ್ತಾರೆ. ವಧುವಿನ ಸೋದರಮಾವ ಸಭೆಯಲ್ಲಿ ಕೈ ಮುಗಿದು ವಧುವನ್ನು ಧಾರೆಯೆರೆಯಲು ಅಪ್ಪಣೆ ಕೇಳಿ, ಸೊಂಟಕ್ಕೆ ಮಡ್ಲಕ್ಕಿ ಕಟ್ಟಿದ ವಧುವನ್ನು ಧಾರೆಗೆ ನಿಲ್ಲಿಸುವನು. ವರನ ಎದುರಿನಲ್ಲಿರುವ ಮೆಟ್ಟು ಕುಕ್ಕೆಯಲ್ಲಿ ವಧುವನ್ನು ನಿಲ್ಲಿಸಬೇಕು. (ಮೆಟ್ಟುಕುಕ್ಕೆ – ೧೦ ಕುಡ್ತೆ ಅಕ್ಕಿ, ೨ ತೆಂಗಿನಕಾಯಿ, ೧೦ ವೀಳ್ಯದೆಲೆ, ೨ ಅಡಿಕೆ ಇರಿಸಿದ ಸಣ್ಣಕುಕ್ಕೆ) ಪುರೋಹಿತರು ವಧುವಿನ ತಂದೆ ತಾಯಿಯಿಂದ ಧಾರೆ ಮಾಡಿಸುತ್ತಾರೆ. ಪಂಚಭೂತಗಳ ಸಾಕ್ಷಿಯಾಗಿ

ಪ್ರಾಣಿಗ್ರಹಣ ಮಾಡುವುದರಿಂದ ವಧೂವರರ ಸುತ್ತಲೂ ೫ ಸುತ್ತು ನೂಲಿನ ದಾರದಿಂದ ಸುತ್ತುತ್ತಾರೆ. ಹಿಂಗಾರದ ಹಾರ ಹಾಕಿದ ನಂತರ ವರನು ವಧುವಿಗೆ ಮಾಂಗಲ್ಯ ಕಟ್ಟುತ್ತಾನೆ. ನಂತರ ಸುತ್ತಿದ ದಾರವನ್ನು ೩, ೨ರಂತೆ ವಿಭಜಿಸಿ ಅದಕ್ಕೆ ಅರಿಶಿಣ ಕೊಂಬು (ತುಂಡು) ಕಟ್ಟಿ ೩ ಎಳೆ ದಾರವನ್ನು ವರನ ಕೈಗೂ ೨ ಎಳೆ ದಾರವನ್ನು ವಧುವಿನ ಕೈಗೂ ಕಂಕಣ ಕಟ್ಟುವರು. 'ಲಾಜಾ ಹೋಮ'ದ ನಂತರ ವಧೂವರವರಿಗೆ ಸ್ವಲ್ಪ ವಿಶ್ರಾಂತಿ ಇರುತ್ತದೆ. ನಂತರ ಶೇಷೋಪಚಾರಕ್ಕೆ ಹೊಸಬಟ್ಟೆ, ಹಾಕಿಸಿ ಶೃಂಗಾರ ಮಾಡಿ ಕುಳ್ಳರಿಸುವರು. ವರನ ದಡ್ಡೆ (ಭಾವ) ಸಭೆಯಲ್ಲಿ ಕೈ ಮುಗಿದು ಸಮಸ್ತರಲ್ಲಿ ಮದುಮಕ್ಕಳನ್ನು ಧಾರೆ ಸೇಸೆಗೆ ಕುಳ್ಳರಿಸಲು ಅಪ್ಪಣೆಯೋ ಎಂದು ಮೂರು ಬಾರಿ ಕೇಳಿ ವಧೂವರರನ್ನು ಶೇಷೋಪಚಾರಕ್ಕೆ ಕುಳ್ಳರಿಸುತ್ತಾರೆ. ವರನ ಕಡೆಯ ಒಂದು ಹೆಣ್ಣು ಮಗುವಿಗೂ ವಧುವರರಿಗೂ ಹೆಣ್ಣಿನ ಕಡೆಯವರು ಕಾಲುತೊಳೆದು ಮಡಿಲು ತುಂಬುವರು. ಮಡಿಲು ತುಂಬಿದವರಿಗೆ ಮರ್ಯಾದೆಯಾಗಿ ೧ ತೆಂಗಿನಕಾಯಿ ಕೊಡುತ್ತಾರೆ. ಬಳಿಕ ವಧುವಿನ ಸೋದರ ವರನ ಕೈಹಿಡಿಯುವ ಶಾಸ್ತ್ರ ಮಾಡುವನು. ವರನ ಕೈ ಹಿಡಿದವನಿಗೆ ಉಡುಗೊರೆ ನೀಡಿ. ಹೊಸತಾಗಿ ಪಾಣಿಗ್ರಹಣ ಮಾಡಿದ ನವದಂಪತಿಗಳು ಈ ಸಂದರ್ಭದಲ್ಲಿ ಉಡುಗೊರೆ ನೀಡಿ ಮೊದಲು ಸೇಸೆ ಹಾಕುವರು. (ಮೊದಲು ಶೇಷ ಹಾಕದ ದಂಪತಿಗಳಿಗೆ ವಿವಾಹ ಸಮಾರಂಭಗಳಲ್ಲಿ, ವಿವಾಹ ಮಂಟಪಕ್ಕೆ ಮತ್ತು ಚಪ್ಪರಕ್ಕೆ ಒಟ್ಟಾಗಿ ಪ್ರವೇಶಿಸುವ ಅಥವಾ ಭಾಗವಹಿಸುವ ಹಕ್ಕು ಇರುವುದಿಲ್ಲ.) ನವದಂಪತಿಗಳು ಎಷ್ಟೇ ಜೋಡಿ ಇದ್ದರೂ ಈ ಸಂದರ್ಭದಲ್ಲಿ ಮೊದಲ ಸೇಸೆ ಹಾಕಬಹುದು. ಈ ಅಧಿಕಾರ ಗಂಡಿನ ಕಡೆಯವರಿಗೆ ಇರುತ್ತದೆ. ಗಂಡಿನ ಕಡೆಯವರಲ್ಲಿ ಯಾರಾದರೂ ಕೇಳಿ ಈ ಶೇಷೋಪಚಾರದಲ್ಲಿ ಭಾಗವಹಿಸಬಹುದು. ಸೇಸೆ ಹಾಕುವಾಗ ಪತಿಯು ಕಚ್ಚೆ ಹಾಕಿ, ಶಾಲು ಹೊದ್ದು, ಮುಂಡಾಸು ಕಟ್ಟಿರಬೇಕು. ಪತ್ನಿ ವಲ್ಲಿ ಧರಿಸಬೇಕು. ಮೊದಲ ಸೇಸೆ ಹಾಕಿದ ನಂತರ ಇತರೆ ದಂಪತಿಗಳು ಸೇಸೆ ಹಾಕಬೇಕು. ಶೇಷೋಪಚಾರದ ನಂತರ ಕೊನೆಗೆ ವಧುವಿನ ಹೆತ್ತವರು ಧಾರೆ ಎರೆದವರು ಸೇಸೆ ಹಾಕುವರು. ಎರಡು ಕಡೆಯವರು ಅಕ್ಕಿ ಹಿಟ್ಟಿನಿಂದ ತಯಾರಿಸಿದ ಹಣತೆ ದೀಪಗಳಿಂದ ವಧುವರರಿಗೆ ಶೋಭಾನೆ ಹೇಳಿ ಆರತಿ ಮಾಡುವರು. ನಂತರ ದಡ್ಡೆ ವಧೂವರರನ್ನು ವಧುವಿನ ಮನೆಯ ದೇವರ ಮನೆಗೆ ಕರೆದುಕೊಂಡು ಹೋಗಿ ಕುಳ್ಳರಿಸುತ್ತಾನೆ. ಅತ್ತೆಯಾದವಳು ದಂಪತಿಗಳಿಗೆ ಹಾಲು ಕುಡಿಸುತ್ತಾಳೆ. ಬಂಧುಬಾಂಧವರಿಗೆ ಊಟೋಪಚಾರಗಳು ನಡೆಯುತ್ತವೆ. ಇಲ್ಲಿಗೆ ಹೆಣ್ಣಿನ ಮನೆಯಲ್ಲಿನ ವಿವಾಹ ಕಾರ್ಯಗಳು ಮುಗಿಯುತ್ತವೆ. ವಧುವಿನ ತಂದೆ ತಾಯಿ ಅಥವಾ ಮಾವ ವಧುವನ್ನು ವರನ ತಂದೆ ತಾಯಿಯವರಿಗೆ ಒಪ್ಪಿಸುವ ಕ್ರಮ (ಹೆಣ್ಣೊಳಿಸಿ)ವನ್ನು ಹಿರಿಯರ ಮೂಲಕ ಮಾಡುವರು. ಊಟವಾದ ನಂತರ ವರನ ಮನೆಗೆ ದಿಬ್ಬಣ ಹೊರಡುತ್ತದೆ. ವಧುವಿನೊಂದಿಗೆ ವಧುವಿನ ಅಕ್ಕ ಭಾವ (ಅಥವಾ ಹತ್ತಿರದ ಸಂಬಂಧಿಕರು ಚಿಕ್ಕಪ್ಪ, ಚಿಕ್ಕಮ್ಮ) ವರನ ಮನೆಗೆ ಹೋಗುತ್ತಾರೆ.

ವರನ ಮನೆಯ ಎಡೆ ಚಪ್ಪರದಲ್ಲಿ ದಿಬ್ಬಣದವರು ಕುಳಿತುಕೊಂಡು. ವಧು ಗೃಹ ಪ್ರವೇಶದ ಮುಹೂರ್ತದವರೆಗೆ ವಿಶ್ರಾಂತಿ ಪಡೆಯುತ್ತಾರೆ. ಮುತ್ತೈದೆಯರು ವಧುವರರನ್ನು ಹಾಡುಹೇಳಿ ಆರತಿ ಬೆಳಗಿದ ನಂತರ ಮದುಮಕ್ಕಳು ಚಪ್ಪರ ಪ್ರವೇಶಿಸುತ್ತಾರೆ. ವಧು ಹೊಸ್ತಿಲ ಬಾಗಿಲ ಮೆಟ್ಟಿಲ (ಬಾಗಿಲಿನ ಪಡಿ) ಮೇಲೆ ಸೇರಿನಲ್ಲಿರಿಸಿದ ಅಕ್ಕಿಯನ್ನು ಬಲಗಾಲಿನಿಂದ ಬಲಗಾಲು ಒಳಗಿಟ್ಟು ಪ್ರವೇಶಿಸುವಳು. ದೇವರ ಮನೆಯಲ್ಲಿ ವಧುವರರನ್ನು ಕುಳ್ಳರಿಸಿ ಆರತಿ ಬೆಳಗಿ ಹಾಲು ಹಣ್ಣು ನೀಡಿ ಸತ್ಕರಿಸುತ್ತಾರೆ. ನಂತರ ವಧೂವರರನ್ನು ಬಟ್ಟೆ ಬದಲಾಯಿಸಿ ಶೃಂಗರಿಸಿ ಗೃಹಪ್ರವೇಶ ಶೇಷೋಪಚಾರಕ್ಕೆ ಮಂಟಪದಲ್ಲಿ ಕುಳ್ಳರಿಸುತ್ತಾರೆ. ಶೇಷೋಪಚಾರದ ನಡೆದ ನಂತರ ಆರತಿ ಬೆಳಗಿ ವಧೂವರರನ್ನು ದೇವರ ಕೋಣೆಗೆ

ಕರೆದುಕೊಂಡು ಹೋಗುವಾಗ ವರನ ಅಕ್ಕಂದಿರು ಬಾಗಿಲಲ್ಲಿ ತಡೆಯುತ್ತಾರೆ. ಈ ಸಂದರ್ಭದಲ್ಲಿ ಬಾಗಿಲು ತಡೆಯುವ ಹಾಡು ಹೇಳುತ್ತಾರೆ. ಅಕ್ಕಂದಿರು ಹೆಣ್ಣು ಕೇಳುತ್ತಾರೆ. ತಾನು ಅಕ್ಕನ ಮಗನಿಗೆ ಹೆಣ್ಣು ಕೊಡುತ್ತೇನೆ ಎಂದು ಹೇಳಿದ ನಂತರ ಬಾಗಿಲಿನಿಂದ ದಾಟಲು ಬಿಡುತ್ತಾರೆ. ದೇವರ ಕೋಣೆಯಲ್ಲಿ ಕುಳ್ಳರಿಸಿ ಸಹೋದರಿಯರು ಆರತಿ ಮಾಡುತ್ತಾರೆ. ಪೇಟ ಬಾಸಿಂಗ ಇವುಗಳನ್ನು ವಧುವರರ ಹಣೆಯಿಂದ ಬಿಚ್ಚಿ ತೆಗೆಯುತ್ತಾರೆ. ಬಾಸಿಂಗವನ್ನು ಮನೆಯ ಮಾಡಿನ ಪಕ್ಕಾಸಿನಲ್ಲಿ ಅಥವಾ ಎದುರಿನ ಕಿಟಕಿಗೆ ಕಟ್ಟುತ್ತಾರೆ. ನಂತರ 'ಸಂಕಲ್ಪ ದೇವರನ್ನು' ಕುಳ್ಳರಿಸಿದವರು ದೇವರು ಎಬ್ಬಿಸುತ್ತಾರೆ. ಬಳಿಕ ಗೃಹಪ್ರವೇಶದ ಉಪಚಾರಗಳು ನಡೆಯುತ್ತದೆ.

ಮರುದಿನ 'ಚೆಂಚಕ್ಕಿ ಪಾಯಸದ ಊಟ' ನಡೆಯುತ್ತದೆ. ವಧುವಿನೊಂದಿಗೆ ಬಂದ ಅಕ್ಕಭಾವಂದಿರು ಸಮ್ಮಾನದೂಟ ಮಾಡಿ ಎರಡು ದಿನ ಇದ್ದ ವಧುವರರನ್ನು ದಡ್ಡೆಯನ್ನೂ ವಧುಗೃಹಕ್ಕೆ ಸಮ್ಮಾನಕ್ಕಾಗಿ ಕರೆದೊಯ್ಯುತ್ತಾರೆ. ಹಿರಿಯರ ಕಾಲು ಹಿಡಿದು ನಮಸ್ಕರಿಸಿ ತವರಿಗೆ ಹೋಗುವಾಗ ಮಡಲಕ್ಕಿ ಹಾಕಿಸಿಕೊಂಡು ಹೋಗಬೇಕು. ಒಂದು ವಾರ ವರನ ಮನೆಯಲ್ಲಿ ವರನಿಗೂ ದಡ್ಡೆಗೂ ಸಮ್ಮಾನ ನಡೆಯುತ್ತದೆ. ಅದರೊಂದಿಗೆ ವೀಳ್ಯ ಹಾಕುವುದು, ಅಡಿಕೆ ಆಡಿಸುವುದು, ಓಕುಳಿಯಾಡುವುದು, ಅಭ್ಯಂಜನ ಸ್ನಾನ ಮಾಡಿಸುವುದು ಮೊದಲಾದ ಕಾರ್ಯಕ್ರಮಗಳು ಜರಗುತ್ತವೆ. ದಂಪತಿಗಳ ಕೂಡುವಿಕೆಗೆ "ಪ್ರಸ್ತ"ದ ಏರ್ಪಾಡು ಮಾಡುತ್ತಾರೆ. ಒಂದು ವಾರದ ಸಮ್ಮಾನದ ನಂತರ ದಂಪತಿಗಳು ವಧುವಿನ ಮನೆಗೆ ಹೊರಡುತ್ತಾರೆ. ಹೊರಡುವಾಗ ಅಲ್ಲಿರುವ ಎಲ್ಲ ಹಿರಿಯರ ಕಾಲು ಹಿಡಿದು ನಮಸ್ಕರಿಸಿ ಆಶೀರ್ವಾದ ಪಡೆಯುವರು. ಮದುಮಕ್ಕಳು ದಂಪತಿ ಸಮೇತರಾಗಿ ವಧುವಿನ ಮನೆಗೆ ತೆರಳಿ ಅಲ್ಲಿನ ಸಮ್ಮಾನದೂಟ ಸ್ವೀಕರಿಸಿ, ಮತ್ತೆ ಅನುಕೂಲಕ್ಕೆ ತಕ್ಕಂತೆ ವರನ ಮನೆಗೆ ಬರುವರು. ಒಂದೆರಡು ವಾರಗಳೊಳಗೆ ಧಾರೆಯೆರೆದವರನ್ನು ವರನ ಮನೆಗೆ ಕರೆಸಿ ಸಮ್ಮಾನ ಮಾಡವರು. ನಂತರ ವಧುವಿನ ತಮ್ಮ ಅವಳನ್ನು ತವರು ಮನೆಗೆ ಕರೆದುಕೊಂಡು ಹೋಗುತ್ತಾನೆ. ಒಂದು ವಾರದ ನಂತರ ವರ ಅಥವಾ ವರನ ಹೆತ್ತವರು ವಧುವಿನ ಮನೆಗೆ ಹೋಗಿ ವಧುವನ್ನು ತಮ್ಮ ಮನೆಗೆ ಕರೆದುಕೊಂಡು ಬರುತ್ತಾರೆ. ಅಲ್ಲಿಯವರೆಗೆ ವಧು ಮಡಿಲಕ್ಕಿಯನ್ನು ತನ್ನೊಂದಿಗೆ ಗಂಡನ ಮನೆಗೂ ತವರು ಮನೆಗೂ ಒಯ್ಯುತ್ತಿರಬೇಕೆಂಬ ನಿಯಮವಿದೆ. ಪತಿಗೃಹಕ್ಕೆ ಬಂದ ನಂತರ ಈ ಮಡಿಲಕ್ಕಿ ಸಮೇತ ದೇವರಿಗೆ ನಮಸ್ಕರಿಸಿ ಆ ಅಕ್ಕಿಯಿಂದ ಅನ್ನ ಅಥವಾ ಪಾಯಸ ಮಾಡಬೇಕು. ಇಲ್ಲಿಗೆ ವಿವಾಹದ ಎಲ್ಲ ಕಾರ್ಯಗಳು ಮುಗಿಯುತ್ತವೆ.

ಮರಾಟಿಗರಲ್ಲಿ ಪುರುಷರಿಗೆ ಮರು ಮದುವೆ

ಮರಾಟಿಗರಲ್ಲಿ ಗಂಡಸಿನ ಮೊದಲ ಹೆಂಡತಿ ನಿಧನ ಹೊಂದಿದ್ದರೆ, ಅವನಿಗೆ ಪುನಃ ಮದುವೆ ಮಾಡಿಕೊಳ್ಳುವ ಅವಕಾಶ ಇದೆ. ಅಲ್ಲದೆ ಮೊದಲ ಹೆಂಡತಿ ಜೀವಂತವಿರುವಾಗಲೇ ಒಂದು ವೇಳೆ ಆಕೆಯು ಗುಣಪಡಿಸಲಾಗದಂತಹ ಕಾಯಿಲೆಗೆ ಒಳಗಾಗಿ ದೀರ್ಘಕಾಲದಿಂದ ಬಳಲುತ್ತಿದ್ದರೆ, ಹುಚ್ಚಿ ಆಗಿದ್ದರೆ, ಅಥವಾ ಮದುವೆಯಾಗಿ ದೀರ್ಘ ಕಾಲದವರೆಗೆ ಆಕೆಯಿಂದ ಸಂತಾನ ಪಡೆಯದಿದ್ದಲ್ಲಿ ಆಕೆಯ ಅನುಮತಿ ಪಡೆದು ಆಕೆಗೆ ಭವಿಷ್ಯತ್ತಿನಲ್ಲಿ ಬದುಕುವ ಸಲುವಾಗಿ ಜೀವನಾಂಶವನ್ನಿಟ್ಟು ಹೆತ್ತವರ ಅಥವಾ ಜವಾಬ್ದಾರಿಯುತ ವ್ಯಕ್ತಿಗಳ ಮತ್ತು ಜಾತೀಯ ಗುರಿಕಾರನ ಒಪ್ಪಿಗೆಯನ್ನು ಪಡೆದು ಗಂಡಸು ಮರುವಿವಾಹ ಆಗುವ ಪದ್ಧತಿಯು ಎರಡೂ ಸಮುದಾಯದಲ್ಲಿ ಕಂಡು ಬರುತ್ತದೆ ಎಂಬುದು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ತಿಳಿದು ಬಂದಿರುತ್ತದೆ.

ಬಾಳೆ ಮದುವೆ

ಜೋಯಿಸರು (ಜ್ಯೋತಿಷ್ಯರು) ಹುಡುಗನ ಜಾತಕವನ್ನು ಪರಿಶೀಲಿಸಿದಾಗ ಆತನ ಜನ್ಮ ಕುಂಡಲಿಯಲ್ಲಿ ಎರಡು ಮದುವೆಯಾಗುವ ದುರ್ಯೋಗ ಇದ್ದಲ್ಲಿ ಬಾಳೆ ಮದುವೆ ಮಾಡುವ ಸಂಪ್ರದಾಯ ಕರಾವಳಿಯ ಮರಾಟಿಗರಲ್ಲಿದೆ. ಕ್ಷೇತ್ರಕಾರ್ಯ ಮಾಡುವ ಸಂದರ್ಭದಲ್ಲಿ ಈ ವಿಷಯ ತಿಳಿದು ಬಂದಿದೆ. ಈ ಆಚರಣೆಯಲ್ಲಿ ಗಂಡಿಗೆ ಬಾಳೆಗಿಡದೊಂದಿಗೆ ಮೊದಲನೆಯ ವಿವಾಹ ಮಾಡಿಸುವರು.

ಬಾಳೆಗಿಡವನ್ನು ಹೆಣ್ಣೆಂದು ಪರಿಗಣಿಸಿ ಅದಕ್ಕೆ ಅರಿಶಿಣ ಕುಂಕುಮ ಹಚ್ಚಿ ಹೂವಿನಿಂದ ಅಲಂಕಾರ ಮಾಡುವರು. ಗಂಡು ಅದರ ಎಲೆಯೊಂದನ್ನು ಹಿಡಿದು ಅದರ ಪಕ್ಕದಲ್ಲಿ ನಿಲ್ಲುವನು. ಗಂಡು ಅದಕ್ಕೆ ವಧು ಎಂದು ತಿಳಿದು ಮಾಲೆಯನ್ನು ಹಾಕುವನು. ವರನ ಕುಟುಂಬಕ್ಕೆ ಸೇರದ ವ್ಯಕ್ತಿಯೊರ್ವನು ಈ ವ್ಯಕ್ತಿಗೆ ಅದನ್ನು ಧಾರೆ ಎರೆದುಕೊಡುವನು. ಇದಾದ ನಂತರ ತಾನು ಹಿಡಿದ ಬಾಳೆಎಲೆ ಹಾಗೂ ಬಾಳೆಗಿಡವನ್ನು ಕಡಿಯುವನು. ಇಲ್ಲಿಗೆ ತನ್ನ ಮೊದಲ ಹೆಂಡತಿ ಸತ್ತಳು ಎಂದು ನಂಬುವರು. ಇದರಿಂದ ತಿಳಿದು ಬರುವ ತಾತ್ವಿಕತೆ ಏನೆಂದರೆ ಮೊದಲ ಮದುವೆಯಿಂದ ಬರುವ ಅರಿಷ್ಟ ಅನಾಹುತಗಳು ತಪ್ಪಿದವು ಎಂಬ ನಂಬಿಕೆ ಈ ಎರಡೂ ಸಮುದಾಯದಲ್ಲಿ ಕಂಡುಬರುತ್ತದೆ. ಈ ಪದ್ಧತಿಯು ಮರಾಟಿಗರಲ್ಲಿ ಮಾತ್ರವಲ್ಲ ತುಳುನಾಡು ಹಾಗೂ ಉತ್ತರ ಕನ್ನಡ ಜಿಲ್ಲೆಯಲ್ಲಿ ವಾಸವಿರುವ ರಾಮಕ್ಷತ್ರಿಯ, ಮಡಿವಾಳ, ದೇವಾಡಿಗ, ಕುಂಬಾರ, ಬಂಟ (ಶೆಟ್ಟಿ), ನಾಡವ, ಕ್ಷೌರಿಕ, ನಾಯರಿ ಸಮುದಾಯಗಳಲ್ಲಿಯೂ ಕಂಡು ಬರುತ್ತದೆ.

ತಿಳುವಳಿಕೆದಾರರ ವೈವಾಹಿಕ ಸ್ಥಾನಮಾನ

ವೈವಾಹಿಕ ಸ್ಥಾನವು ಸಮುದಾಯದ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗತಿಗಳನ್ನು ತಿಳಿದುಕೊಳ್ಳಲು ಸಹಕಾರಿಯಾಗುತ್ತದೆ. ವೈವಾಹಿಕ ಸ್ಥಾನಮಾನ ವ್ಯಕ್ತಿಯೋರ್ವನು ವಿವಾಹಿತನೇ ಅಥವಾ ಅವಿವಾಹಿತನೇ, ವಿಧುರನೇ, ವಿಧವೆ, ವಿಚ್ಛೇದಿತನೇ ಅಥವಾ ವಿಚ್ಛೇದಿತಳೇ, ಪರಿತ್ಯಜಿಸಿದವನೇ ಅಥವಾ ಪರಿತ್ಯಜಿಸಿದವಳೇ ಎಂಬುದನ್ನು ತಿಳಿಯುವಂತಹದ್ದಾಗಿರುತ್ತದೆ.

ಕುಟುಂಬ ಜವಾಬ್ದಾರಿಯುತ ಸದಸ್ಯನನ್ನಾಗಿ ಮಾಡುತ್ತದೆ. ತಮಾಷೆಗಾಗಿಯೇ ಅಥವಾ ವ್ಯಂಗ್ಯವೋ ಅವನಿಗೊಂದು ವಿವಾಹ ಮಾಡಿದರೆ ಎಲ್ಲಾ ಸರಿ ಹೋಗುತ್ತದೆ. ಜವಾಬ್ದಾರಿ ಬರುತ್ತದೆ ಎಂಬ ಮಾತುಗಳು ಎಲ್ಲೆಲ್ಲೂ ಕೇಳಿ ಬರುತ್ತವೆ. ಜವಾಬ್ದಾರಿಯುತ ವ್ಯಕ್ತಿಯು ಕುಟುಂಬದ ಸುಖ–ಸಂತೋಷಗಳು, ಕಷ್ಟ–ನಷ್ಟಗಳ, ದುಃಖ–ದುಮ್ಮಾನಗಳಲ್ಲಿ ಭಾಗವಹಿಸಿ ಅನುಭವಗಳನ್ನು ಆತನಿಗೆ ನೀಡುತ್ತದೆ.


ಈ ಅಧ್ಯಯನದಲ್ಲಿ ತಿಳುವಳಿಕೆದಾರರ ಹಾಗೂ ಅವರ ಕುಟುಂಬ ಸದಸ್ಯರುಗಳ ವೈವಾಹಿಕ ಸ್ಥಾನಮಾನವನ್ನು ಅಧ್ಯಯನ ಮಾಡಲಾಗಿದೆ. ಮರಾಟಿ ನಾಯ್ಕ ಸಮುದಾಯದ ೧೫೦ ಕುಟುಂಬ ಹಾಗೂ ಮರಾಟಿ ಸಮುದಾಯದ ೧೫೦ ಕುಟುಂಬದ ಯಜಮಾನರನ್ನು ಸಂದರ್ಶನಕ್ಕೆ ಒಳಪಡಿಸಲಾಗಿದೆ. ಅವರ ಕುಟುಂಬಗಳಲ್ಲಿ ಅವರೇ ದುಡಿಯುವರಾಗಿದ್ದು, ಕುಟುಂಬದ ಮುಖ್ಯಸ್ಥರು ಕೂಡ ಅವರೇ ಆಗಿದ್ದಾರೆ. ಪ್ರಸ್ತುತ ಸಂಶೋಧನೆಯಲ್ಲಿ ತಿಳುವಳಿಕೆದಾರರ ವೈವಾಹಿಕ ಸ್ಥಾನಮಾನವನ್ನು ಅಧ್ಯಯನ ಮಾಡಲಾಗಿದೆ. ಅವು ಈ ಕೆಳಗಿನಂತಿವೆ.

ಕೋಷ್ಟಕ: ೩.೧

ಅಧ್ಯಯನಕ್ಕೊಳಪಡಿಸಿದ ಮರಾಟಿ ನಾಯ್ಕ ಮತ್ತು ಮರಾಟಿ ಸಮುದಾಯಗಳ ತಿಳುವಳಿಕೆದಾರರ ವೈವಾಹಿಕ ಸ್ಥಾನಮಾನದ ವಿವರ

ಸಮುದಾಯದ ಹೆಸರು	ತಾಲೂಕು	ಮಾಹಿತಿದಾರರ ವೈವಾಹಿಕ ಸ್ಥಾನಮಾನ ವಿವರಗಳು					
		ಅವಿವಾಹಿತ	ವಿವಾಹಿತ	ವಿಧವೆ/ ವಿಧುರ	ವಿಚ್ಚೇದಿತ/ ಪರಿತ್ಯಾಗ	ಇತರ	ಒಟ್ಟು
ಮರಾಟಿ ನಾಯ್ಕ	ಕುಂದಾಪುರ	೦೩	೪೬	೦೧	ಇಲ್ಲ	ಇಲ್ಲ	೫೦
	ಉಡುಪಿ	೦೨	೪೧	೦೭	ಇಲ್ಲ	ಇಲ್ಲ	೫೦
	ಕಾರ್ಕಳ	೦೧	೪೫	೦೪	ಇಲ್ಲ	ಇಲ್ಲ	೫೦
	ಒಟ್ಟು	೦೬	೧೩೨	೧೨	ಇಲ್ಲ	ಇಲ್ಲ	೧೫೦
	ಶೇಕಡವಾರು	೦೪%	೮೮%	೦೮%	ಇಲ್ಲ	ಇಲ್ಲ	೧೦೦%
ಮರಾಠ	ಕಾರ್ಕಳ ತಾಲೂಕು	೦೨	೧೨೫	೨೩	ಇಲ್ಲ	ಇಲ್ಲ	೧೫೦
	ಶೇಕಡವಾರು	೦೧.೩೩%	೮೩.೩೩%	೧೫.೩೪%	ಇಲ್ಲ	ಇಲ್ಲ	೧೦೦%

ತಿಳುವಳಿಕೆದಾರರ ವೈವಾಹಿಕ ಸ್ಥಾನಮಾನ ವಿವರಗಳು



ಮೇಲ್ಕಂಡ ಕೋಷ್ಟಕದಲ್ಲಿ ಮರಾಟಿ ನಾಯ್ಕ ಮತ್ತು ಮರಾಟಿ ಸಮುದಾಯದ ವೈವಾಹಿಕ ಸ್ಥಾನಮಾನದ ವಿವರಗಳನ್ನು ನೀಡಲಾಗಿದೆ.

ವೈವಾಹಿಕ ಸ್ಥಾನಮಾನದ ಬಗ್ಗೆ ಕುಂದಾಪುರ, ಉಡುಪಿ, ಕಾರ್ಕಳ ತಾಲೂಕುಗಳ ವ್ಯಾಪ್ತಿಯಲ್ಲಿ ಬರುವ ೧೫೦ ಮರಾಟಿ ನಾಯ್ಕ ಸಮುದಾಯದ ಕುಟುಂಬಗಳನ್ನು ಸಮೀಕ್ಷೆಗೊಳಪಡಿಸಿದಾಗ ೦೬ (೪%) ರಷ್ಟು ಅವಿವಾಹಿತ ಜನಸಂಖ್ಯೆ ಕಂಡರೆ, ವಿವಾಹಿತ ಜನರ ಸಂಖ್ಯೆಯನ್ನು ೧೩೨ (೮೮%) ರಷ್ಟು ಇರುವುದು ಕಂಡುಬಂದಿದೆ. ಅದೇ ರೀತಿ ವಿಧವೆ ಮತ್ತು ವಿಧುರರ ಸಂಖ್ಯೆಯು ೧೨ (೦೮%) ರಷ್ಟು ಕಂಡು ಬರುತ್ತದೆ.

ಕಾರ್ಕಳ ತಾಲೂಕಿನ ವ್ಯಾಪ್ತಿಯಲ್ಲಿ ಮರಾಟಿ ಸಮುದಾಯದ ತಿಳುವಳಿಕೆದಾರರ ವೈಯಕ್ತಿಕ ಸ್ಥಾನಮಾನಗಳ ಬಗೆಗೆ ೧೫೦ ಮರಾಟಿ ಕುಟುಂಬಗಳಲ್ಲಿ ಸಮೀಕ್ಷೆ ಮಾಡಿದ್ದಾಗ ೦೨ (೧.೩೩%) ರಷ್ಟು ಅವಿವಾಹಿತ ಜನಸಂಖ್ಯೆ ಕಂಡು ಬಂದಿದ್ದು, ೧೨೫ (೮೩.೩೩%) ರಷ್ಟು ವಿವಾಹಿತ ಜನಸಂಖ್ಯೆ ಸಿಗುತ್ತದೆ. ವಿಧವೆ ಮತ್ತು ವಿಧುರರ ಸಂಖ್ಯೆಯು ೨೩ (೧೫.೩೪%)ರಷ್ಟು ತಿಳಿದು ಬರುತ್ತದೆ.

• ಸಮುದಾಯಗಳ ವೈವಾಹಿಕ ಸ್ಥಾನಮಾನಗಳನ್ನು ಗಮನಿಸಿದಾಗ ವಿವಾಹಿತರೇ ಹೆಚ್ಚಾಗಿದ್ದು, ಅವಿವಾಹಿತ, ವಿಧವೆ / ವಿಧುರರ ಸಂಖ್ಯೆ ತುಂಬಾ ಕಡಿಮೆ ಇದೆ. ವಿಚ್ಛೇದಿತರು ಯಾರು ಇಲ್ಲ.

• ಮರಾಟಿ ಸಮುದಾಯಗಳ ವಿಮರ್ಶಿಸಿದಾಗ ವಿವಾಹಿತರೇ ಹೆಚ್ಚು ಇದ್ದು, ಅವಿವಾಹಿತ ಸಂಖ್ಯೆ ಕೇವಲ ೨ ಇದ್ದು, ವಿಧವೆ ಮತ್ತು ವಿಧುರ ಸಂಖ್ಯೆ ೨೩ ಆಗಿದ್ದು, ಇಲ್ಲಿ ಯಾವುದೇ ವಿಚ್ಛೇದಿತರು ಕಂಡು ಬರುವುದಿಲ್ಲ.


• ಕುಂದಾಪುರ, ಉಡುಪಿ, ಕಾರ್ಕಳ ತಾಲೂಕಿನ ಮರಾಟಿ ನಾಯ್ಕ ಹಾಗೂ ಮರಾಟಿ ಸಮುದಾಯದವರಿಗೆ ಹೋಲಿಕೆ ಮಾಡಿದಾಗ ವಿವಾಹಿತರೇ ಹೆಚ್ಚಾಗಿದ್ದು, ವಿಧುರರ ಸಂಖ್ಯೆ ಸಾಮಾನ್ಯವಾಗಿದ್ದು, ವಿಚ್ಛೇದಿತರು ಯಾರು ಇಲ್ಲದಿರುವುದು ತಿಳಿದು ಬರುತ್ತದೆ.

ಕೋಷ್ಟಕ: ೩.೨

ಕುಟುಂಬ ಸದಸ್ಯರುಗಳ ವೈವಾಹಿಕ ಸ್ಥಾನಮಾನದ ವಿವರ

ಸಮುದಾಯದ ಹೆಸರು	ತಾಲೂಕುಗಳು	ವೈವಾಹಿಕ ಸ್ಥಾನಮಾನ ಹಂಚಿಕೆ				
		ಅವಿವಾಹಿತ	ವಿವಾಹಿತ	ವಿಧವೆ/ವಿಧುರ	ಇತರ	ಒಟ್ಟು
ಮರಾಟಿ ನಾಯ್ಕ	ಕುಂದಾಪುರ	೨೩	೧೨೩	೦೨	ಇಲ್ಲ	೧೪೮
	ಉಡುಪಿ	೫೨	೧೨೭	೦೭	ಇಲ್ಲ	೧೮೬
	ಕಾರ್ಕಳ	೪೫	೧೨೯	೦೫	-	೧೭೯
	ಒಟ್ಟು	೧೨೦	೩೭೯	೧೪	-	೫೧೩
	ಶೇಕಡವಾರು	**೨೩.೩೯**	**೭೩.೮೮**	**೦೨.೭೩**	-	**೧೦೦**
ಮರಾಟಿ	ಒಟ್ಟು	೧೨೨	೨೯೫	೩೮	-	೪೫೫
	ಶೇಕಡವಾರು	**೨೬.೮೧**	**೬೪.೮೪**	**೦೮.೩೫**	-	**೧೦೦**

ವೈವಾಹಿಕ ಸ್ಥಾನಮಾನ ಹಂಚಿಕೆ ಒಟ್ಟು



ಕೋಷ್ಟಕ ಸಂಖ್ಯೆ ೩.೨ರಲ್ಲಿ ಮರಾಟಿ ನಾಯ್ಕ ಮತ್ತು ಮರಾಟಿ ಸಮುದಾಯದವರ ಕುಟುಂಬದ ಸದಸ್ಯರುಗಳ ವೈವಾಹಿಕ ಸ್ಥಾನಮಾನದ ವಿವರಗಳನ್ನು ಗುರುತಿಸಲಾಗಿದೆ.

ಇಲ್ಲಿ ಕುಟುಂಬ ಸದಸ್ಯರುಗಳ ವೈವಾಹಿಕ ಸ್ಥಾನಮಾನದ ಬಗ್ಗೆ ಕುಂದಾಪುರ ಉಡುಪಿ ಮತ್ತು ಕಾರ್ಕಳ ತಾಲೂಕು ವ್ಯಾಪ್ತಿಯಲ್ಲಿ ಬರುವ ೧೫೦ ಮರಾಟಿ ನಾಯ್ಕ ಕುಟುಂಬಗಳು ಹಾಗೂ ೧೫೦ ಮರಾಟಿ ಕುಟುಂಬಗಳನ್ನು ಸಮೀಕ್ಷೆಗೊಳಪಡಿಸಿದಾಗ ೧೨೦ (೨೩.೬೯) ರಷ್ಟು ಅವಿವಾಹಿತರು ಹಾಗೂ ೩೭೯ (೭೩.೮೮)ರಷ್ಟು ವಿವಾಹಿತರು ಮತ್ತು ೧೪ (೨.೭೩) ರಷ್ಟು ವಿಧುರ ಮತ್ತು ವಿಧವೆಯರಿದ್ದಾರೆ. ಮರಾಟಿ ನಾಯ್ಕ ಸಮುದಾಯದಲ್ಲಿ ೧೨೨ (೨೬.೮೧) ರಷ್ಟು ಅವಿವಾಹಿತರು, ೨೯೫ (೬೪.೮೩%) ರಷ್ಟು ವಿವಾಹಿತರು ಮತ್ತು ೩೮ (೮.೩೫%) ರಷ್ಟು ವಿಧವೆ ಮತ್ತು ವಿಧುರ ಜನಸಂಖ್ಯೆಯು ಮರಾಟಿಗರಲ್ಲಿ ಕಾಣಬಹುದಾಗಿದೆ.

- ಮರಾಟಿ ನಾಯ್ಕ ಮತ್ತು ಮರಾಟಿಗರನ್ನು ಹೋಲಿಕೆ ಮಾಡಿದಾಗ ಅವಿವಾಹಿತರಿಗಿಂತ ವಿವಾಹಿತರು ಹೆಚ್ಚಾಗಿದ್ದು, ವಿಧುರ ಮತ್ತು ವಿಧವೆಯರ ಸಂಖ್ಯೆಯು ಸ್ವಲ್ಪ ಪ್ರಮಾಣದಲ್ಲಿ ಕಂಡುಬರುತ್ತದೆ.

ಜಾತಕ ನೋಡುವುದರ ಬಗ್ಗೆ ಅಭಿಪ್ರಾಯ

ವೈದಿಕರ ಮತ್ತು ಕೆಲವೊಂದು ಮೇಲ್ಜಾತಿಯ ಸಮುದಾಯಗಳಲ್ಲಿ ಜಾತಕ ನೋಡುವ ಪದ್ದತಿ ಕ್ರಮೇಣ ಇತರ ಸಮುದಾಯಗಳಿಗೂ ಪಸರಿಸಿದೆ. ವಿವಾಹಿತ ದಂಪತಿಗಳು ನೂರು ಕಾಲ ಚೆನ್ನಾಗಿ ಬಾಳಿ ಬದುಕಲಿ ಎಂಬ ಆಶಯದಿಂದ ಇಂದಿನ ಸಮಾಜದಲ್ಲಿ ಜಾತಕ ಬರೆಸುವುದು, ಕಾಲಕಾಲಕ್ಕೆ ಜಾತಕ ಓದಿಸುವುದು, ವಿವಾಹ ಪೂರ್ವದ ಸಂದರ್ಭದಲ್ಲಿ ಅದನ್ನು ನೋಡಿ, ಜೋಡಿ ಸರಿ ಹೊಂದುತ್ತದೋ ಇಲ್ಲವೋ ಎಂಬುದನ್ನು ನಿರ್ಧರಿಸುವುದು ಕಂಡುಬರುತ್ತದೆ. ಮರಾಟಿ ನಾಯ್ಕ ಮತ್ತು ಮರಾಟಿಗರಲ್ಲಿ ಇತ್ತೀಚಿನವರೆಗೆ ಈ ಪದ್ಧತಿ ಇರಲಿಲ್ಲ. ಇಂದು ಅವರು ಸಹ ಈ ನಿಟ್ಟಿನಲ್ಲಿ ಸಾಗುತ್ತಿರುವುದು ಕಂಡು ಬರುತ್ತದೆ. ಜಾತಕ ನೋಡುವ ಹಾಗೂ ನೋಡದಿರಲು ಕಾರಣಗಳ ಬಗೆಗೆ ಮಾಹಿತಿಯನ್ನು ಸಂಗ್ರಹಿಸಿ ಕೆಳಗಿನ ಕೋಷ್ಟಕದಲ್ಲಿ ನೀಡಲಾಗಿದೆ.

ಕೋಷ್ಟಕ: ೩.೩

ಅಧ್ಯಯನಕ್ಕೊಳಪಟ್ಟ ತಿಳುವಳಿಕೆದಾರರು ತಮ್ಮ ಕುಟುಂಬದ ಸದಸ್ಯರ ವಿವಾಹ ಸಂದರ್ಭದಲ್ಲಿ ಜಾತಕ ನೋಡುವುದರ ಬಗೆಗಿನ ಅಭಿಪ್ರಾಯ

ಸಮುದಾಯದ ಹೆಸರು	ತಾಲೂಕಿನ ಹೆಸರು	ಜಾತಕ ನೋಡುವುದರ ಅಭಿಪ್ರಾಯ ಹಂಚಿಕೆ				
		ನೋಡುತ್ತೇವೆ	%	ನೋಡುವುದಿಲ್ಲ	%	ಒಟ್ಟು
ಮರಾಟಿ ನಾಯ್ಕ	ಕುಂದಾಪುರ	೩೩	೨೨.೦೦	೧೭	೧೧.೩೩	೫೦
	ಉಡುಪಿ	೨೮	೧೮.೬೭	೨೨	೧೪.೬೭	೫೦
	ಕಾರ್ಕಳ	೩೬	೨೪.೦೦	೧೪	೦೯.೩೩	೫೦
	ಒಟ್ಟು	೯೭	–	೫೩		೧೫೦
	ಶೇಕಡವಾರು	೬೪.೬೭	–	೩೫.೩೩		೧೫೦
ಮರಾಟಿ	ಕಾರ್ಕಳ	–	–	–	–	–
	ಒಟ್ಟು	೧೦೮	–	೪೨	–	೧೫೦
	ಶೇಕಡವಾರು	೭೨.೦೦	–	೨೮.೦೦	–	೧೦೦

ಕೋಷ್ಟಕ ಸಂಖ್ಯೆ ೩.೩ರಲ್ಲಿ ಸಮೀಕ್ಷೆಗೊಳಪಟ್ಟ ತಿಳುವಳಿಕೆದಾರರ ಕುಟುಂಬದ ಸದಸ್ಯರ ವಿವಾಹ ಪೂರ್ವ ಸಂದರ್ಭದಲ್ಲಿ ಜಾತಕ ನೋಡುವುದರ ಬಗೆಗಿನ ಅಭಿಪ್ರಾಯದ ವಿವರವನ್ನು ನೀಡಲಾಗಿದೆ.

ಈ ಮೇಲಿನ ಕೋಷ್ಟಕಕ್ಕೆ ಸಂಬಂಧಿಸಿದಂತೆ ಕುಂದಾಪುರ, ಉಡುಪಿ, ಕಾರ್ಕಳ ತಾಲೂಕುಗಳ ವ್ಯಾಪ್ತಿಯಲ್ಲಿ ಬರುವ ಮರಾಟಿ ನಾಯ್ಕ ಸಮುದಾಯದ ಅಧ್ಯಯನ ಮಾಡಿದಾಗ ಒಟ್ಟು ೧೫೦ ಮರಾಟಿ ನಾಯ್ಕ ಸಮುದಾಯದ ಕುಟುಂಬಗಳಲ್ಲಿ ೯೭ (೬೪.೬೭%) ರಷ್ಟು ಕುಟುಂಬಗಳು ತಾವು ತಮ್ಮ ಕುಟುಂಬ ಸದಸ್ಯರ ವಿವಾಹ ಪೂರ್ವ ಸಂದರ್ಭದಲ್ಲಿ ಜಾತಕ ನೋಡುತ್ತಿರುವುದರ ಬಗೆಗೆ ಮಾಹಿತಿ ನೀಡಿದ್ದಾರೆ. ಅದರಂತೆ ಇನ್ನುಳಿದ ೫೩ (೩೫.೩೩%) ಕುಟುಂಬಗಳ ಜಾತಕವನ್ನು ಮದುವೆ ಪೂರ್ವ ನೋಡುವುದಿಲ್ಲವೆಂಬುದು ತಿಳಿಸಿರುವುದು ಕಂಡು ಬರುತ್ತದೆ.

ಜಾತಕ ನೋಡುವ ಸಂಪ್ರದಾಯದ ಬಗ್ಗೆ ಕಾರ್ಕಳ ತಾಲೂಕಿನಲ್ಲಿಯ ಮರಾಟಿ ಸಮುದಾಯದಲ್ಲಿ ೧೫೦ ಕುಟುಂಬಗಳನ್ನು ಸಮೀಕ್ಷೆಗೊಳಪಡಿಸಿದಾಗ ಒಟ್ಟು ೧೦೮ (೭೨%) ತಾವು ತಮ್ಮ ಕುಟುಂಬದ ಸದಸ್ಯರ ವಿವಾಹ ಪೂರ್ವದ ಸಂದರ್ಭದಲ್ಲಿ ಜಾತಕ ನೋಡುವುದರ ಬಗೆಗೆ ತಿಳಿದರೆ ಉಳಿದ ೪೨ (೨೮%) ರಷ್ಟು ಕುಟುಂಬಗಳು ಜಾತಕವನ್ನು ಪರಿಗಣಸುವುದಿಲ್ಲವೆಂಬ ಹೇಳಿಕೆಗಳನ್ನು ನೀಡಿದ್ದಾರೆ.

ಈ ಮಾಹಿತಿಯಿಂದ ಜಾತಕಕ್ಕೆ ಹೆಚ್ಚಿನ ಪ್ರಾಶಸ್ತ್ಯವನ್ನು ತಮ್ಮ ಕುಟುಂಬದ ಸದಸ್ಯರು ವಿವಾಹದಲ್ಲಿ ಕೊಡುವುದು ಕಂಡುಬಂದಿದೆ.

• ಉಡುಪಿ ಜಿಲ್ಲೆಯ ಮರಾಟಿ ನಾಯ್ಕ ಮತ್ತು ಮರಾಟಿ ಕುಟುಂಬದ ಸದಸ್ಯರ ವಿವಾಹ ಸಂದರ್ಭದಲ್ಲಿ ಜಾತಕ ನೋಡುವುದರ ಅಭಿಪ್ರಾಯದ ಬಗೆಗೆ ಎರಡು ಸಮುದಾಯಗಳನ್ನು ಹೋಲಿಕೆ ಮಾಡಿ ನೋಡಿದಾಗ ಎರಡು ಸಮುದಾಯಗಳಲ್ಲಿ ಜಾತಕ ನೋಡುವವರೇ ಹೆಚ್ಚಾಗಿದ್ದು, ನೋಡದೇ ಇರುವವರು ಸ್ವಲ್ಪ ಪ್ರಮಾಣದಲ್ಲಿ ಕಂಡು ಬರುತ್ತಾರೆ.

ಕೋಷ್ಟಕ: ೩.೪

ಅಧ್ಯಯನಕ್ಕೊಳಪಟ್ಟ ತಿಳುವಳಿಕೆದಾರರ ಜಾತಕ ನೋಡಲು ಮತ್ತು ನೋಡದಿರಲು ಕಾರಣಗಳ ವಿವರ

ಸಮುದಾಯದ ಹೆಸರು ಮತ್ತು ತಾಲೂಕು	ಜಾತಕ ನೋಡಲು ಕಾರಣಗಳ ಹಂಚಿಕೆ					ಜಾತಕ ನೋಡದಿರಲು ಕಾರಣಗಳು					ಸಮೀಕ್ಷೆಗೊಳಪಟ್ಟ ಮಾಹಿತಿದಾರರ ಸಂಖ್ಯೆ
	ಮುಂದಿನ ಜೀವನದಲ್ಲಿ ಸುಖವಾಗಿರಲು	ಕಂಟಕಗಳನ್ನು ನಿವಾರಣೆ ಮಾಡಲು	ವಧು-ವರರ ಜಾತಕ ಹೊಂದಾಣಿಕೆ ಯಾದರೆ	ವಿವಾಹ ಘಳಿಗೆ ಮಾತ್ರ ನೋಡಲು	ಒಟ್ಟು	ಹಿಂದೆ ಯಾರು ಜಾತಕ ನೋಡುವುದಿಲ್ಲ	ಅನ್ಯಜಾತಿಯ ವರ ಅನುಕರಣೆ ನಮ್ಮಲ್ಲಿ ಬಂದಿರುತ್ತದೆ	ಆಧುನಿಕ ಕಾಲದಲ್ಲಿ ಜಾತಕ ನೋಡುವುದು		ಒಟ್ಟು	
ಮರಾಟಿ ನಾಯ್ಕ											
ಕುಂದಾಪುರ	೦೧	೨೭	೦೫	-	೩೩	೧೫	೦೨	೦೦	೦೦	೧೭	೫೦
ಉಡುಪಿ	೦೫	೧೭	೦೩	೦೩	೨೮	೧೭	೦೦	೦೦	೦೫	೨೨	೫೦
ಕಾರ್ಕಳ	೦೩	೨೪	೦೭	೦೨	೩೬	೧೪	೦೦	೦೦	೦೦	೧೪	೫೦
ಒಟ್ಟು	೦೯	೬೮	೧೫	೦೫	೯೭	೪೬	೦೨	೦೦	೦೫	೫೩	೧೫೦
ಶೇಕಡವಾರು	೬.೦೦	೪೫.೩೩	೧೦.೦೦	೦೩.೩೩	೬೪.೬೭	೩೦.೬೭	೦೧.೩೩	೦೦	೩.೩೩	೩೫.೩೩	೧೦೦.೦೦
ಮರಾಟಿ											
ಕಾರ್ಕಳ ತಾಲೂಕು	-	-	-	-	-		-	-	-	-	-
ಒಟ್ಟು	೭	೭೬	೦೮	೧೧	೧೦೨	೨೭	೧೮	೦೩	-	೪೮	೧೫೦
ಶೇಕಡವಾರು	೦೪.೬೭	೫೦.೬೭	೦೫.೩೩	೦೭.೩೩	೬೮.೦೦	೧೮.೦೦	೧೨.೦೦	೦೨.೦೦	-	೩೨.೦೦	೧೦೦.೦೦

ಆಧಾರ: ಮರಾಟಿ ನಾಯ್ಕ ೧೫೦ ಕುಟುಂಬಗಳು, ಮರಾಟಿ ೧೫೦ ಕುಟುಂಬಗಳ ಸಮೀಕ್ಷೆ, ಪ್ರಾಥಮಿಕ ಮಾಹಿತಿಗಳ ಆಧಾರದಲ್ಲಿ ರಚಿತವಾದ ಕೋಷ್ಟಕ

ಮೇಲ್ಕಂಡ ಕೋಷ್ಟಕ ೩.೪ರಲ್ಲಿ ಅಧ್ಯಯನಕ್ಕೊಳಪಟ್ಟ ತಿಳುವಳಿಕೆದಾರರಲ್ಲಿ ಜಾತಕವನ್ನು ತಮ್ಮ ಕುಟುಂಬದ ಸದಸ್ಯರ ವಿವಾಹದಲ್ಲಿ ನೋಡಲು ಮತ್ತು ನೋಡದಿರಲು ಇರುವ ಕಾರಣಗಳನ್ನು ಗುರುತಿಸಲಾಗಿದೆ. ಕುಂದಾಪುರ, ಉಡುಪಿ, ಕಾರ್ಕಳ ತಾಲೂಕುಗಳ ೧೫೦ ಮರಾಟಿ ನಾಯ್ಕ ಕುಟುಂಬಗಳನ್ನು ಸಮೀಕ್ಷೆಗೆ ಒಳಪಡಿಸಿದಾಗ ಅವರು ಜಾತಕ ನೋಡಲು ನೀಡಿರುವ ಕಾರಣಗಳು ಹೀಗಿವೆ. ಮುಂದಿನ ಜೀವನದಲ್ಲಿ ಸುಖವಾಗಿರಲು ಒಟ್ಟು ೦೯ (೬%) ರಷ್ಟು ಕುಟುಂಬಗಳು ಕಾರಣ ನೀಡಿದರೆ, ಕಂಟಕ ನಿವಾರಣೆಯ ಕಾರಣದಿಂದ ಒಟ್ಟು ೬೮ (೪೫.೩೪%) ರಷ್ಟು ಕುಟುಂಬಗಳು ಜಾತಕ ನೋಡುತ್ತಿರುವುದು ಕಂಡುಬಂದರೆ, ವಧು-ವರರ ಹೊಂದಾಣಿಕೆಗೆ ಅನುಕೂಲವಾಗಲಿ ಎಂಬ ಕಾರಣದಿಂದ ಒಟ್ಟು ೧೫ (೧೦%) ರಷ್ಟು ಕುಟುಂಬಗಳು ಜಾತಕ ನೋಡುವುದಾಗಿ ಮತ್ತು ಉತ್ತಮ ವಿವಾಹ ಗಳಿಗೆ ನೋಡಲು ಒಟ್ಟು ೦೫ (೦೩.೩೩%) ಕುಟುಂಬಗಳು ಜಾತಕವನ್ನು ನೋಡುತ್ತಿರುವುದನ್ನು ಕಾಣಬಹುದಾಗಿದೆ. ಅಂದರೆ ಒಟ್ಟು ೬೮% ರಷ್ಟು ಕುಟುಂಬಗಳು ತಮ್ಮ ಕಾರಣಗಳಲ್ಲಿ ಜಾತಕವನ್ನು ನೋಡುವ ಬಗ್ಗೆ ತಿಳಿಸಿದ್ದಾರೆ. ಉಳಿದ ಕುಟುಂಬಗಳು ಜಾತಕವನ್ನು ನೋಡುವುದಿಲ್ಲವೆಂಬ ಮಾಹಿತಿ ನೀಡಿದ್ದಾರೆ. ಅದರ ಕಾರಣಗಳನ್ನು ಅಧ್ಯಯನ ಮಾಡಿದಾಗ ಹಿಂದೆ ಯಾರು ಜಾತಕ ನೋಡುತ್ತಿರಲಿಲ್ಲವೆಂದು ೨೭ (೧೮%) ರಷ್ಟು ಕುಟುಂಬಗಳು ತಿಳಿಸಿದರೆ, ಅನ್ಯಜಾತಿಯವರ ಅನುಕರಣೆಯ ಪ್ರಕಾರ ನಮ್ಮಲ್ಲಿ ಬರುತ್ತದೆ ಎಂಬ ಕಾರಣದಿಂದ ೦೨ (೧.೩೩%) ಕುಟುಂಬಗಳು ಕಾರಣ ನೀಡಿವೆ. ಆಧುನಿಕತೆಯ ಮತ್ತು ಪುರೋಹಿತಶಾಹಿ ನೀತಿಯ ಪರಿಣಾಮದ ಕಾರಣದಿಂದ ಜಾತಕವನ್ನು ನೋಡುದಿಲ್ಲವೆಂದು ೦೫ (೩.೩೩%) ಕುಟುಂಬಗಳು ತಿಳಿಸಿವೆ.

ಕಾರ್ಕಳ ತಾಲೂಕಿನ ಮರಾಟಿ ಸಮುದಾಯದ ೧೫೦ ಕುಟುಂಬಗಳನ್ನು ಸಮೀಕ್ಷೆಗೊಳಪಡಿಸಿದಾಗ ೧೦೨ (೬೮%) ರಷ್ಟು ಕುಟುಂಬಗಳು ಜಾತಕ ನೋಡುತ್ತಿರುವುದು ಕಂಡು ಬರುತ್ತದೆ. ಅದರ ಕಾರಣಗಳನ್ನು ಅವಲೋಕಿಸಿದಾಗ ಮುಂದಿನ ಜೀವನ ಸುಖಕರವಾಗಿರಲು ೭ (೪.೬೭%) ಕುಟುಂಬಗಳು, ಜಾತಕ ನೋಡಿದರೆ ಕಂಟಕ ನಿವಾರಣೆಗೆ ೭೬ (೫೦.೬೭%) ರಷ್ಟು ಕುಟುಂಬಗಳು ಜಾತಕವನ್ನು ನೋಡುತ್ತಿದ್ದರೆ, ವಧು-ವರರಿಗೆ ಹೊಂದಾಣಿಯ ಅನುಕೂಲಕ್ಕೆ ೦೮ (೦೫.೩೩%) ರಷ್ಟು ಕುಟುಂಬಗಳು ಮತ್ತು ವಿವಾಹದ ಘಳಿಗೆಗೆ ೧೧ (೭.೩೩%) ರಷ್ಟು ಕುಟುಂಬಗಳು ಜಾತಕವನ್ನು ನೋಡುತ್ತಿರುವುದಕ್ಕೆ ಕಾರಣಗಳನ್ನು ನೀಡಿವೆ.

ಉಳಿದ ೪೮ (೩೨%) ರಷ್ಟು ಕುಟುಂಬಗಳು ಜಾತಕ ನೋಡದಿರಲು ಇಚ್ಚಿಸಿವೆ ಎಂಬ ಅಂಶ ಕಂಡಾಗ ಅದರ ಕಾರಣವನ್ನು ಅವಲೋಕಿಸಿದಾಗ ಹಿಂದಿನಿಂದ ಯಾರು ಜಾತಕ ನೋಡುತ್ತಿರಲಿಲ್ಲ. ಎಂಬ ಕಾರಣಕ್ಕಾಗಿ ೨೭ (೧೮%) ರಷ್ಟು ಕುಟುಂಬಗಳು ಕಾರಣ ನೀಡಿದರೆ ಅನ್ಯಜಾತಿಯವರ ಅನುಕರಣೆ ನಮ್ಮಲ್ಲಿ ಬಂದಿರುತ್ತದೆ ಎಂಬುದಾಗಿ ೧೮ (೧೨%) ರಷ್ಟು ಕುಟುಂಬಗಳು ಕಾರಣ ನೀಡಿವೆ. ಅದೇ ರೀತಿ ಆಧುನಿಕತೆ ಮತ್ತು ಪುರೋಹಿತಶಾಹಿ ನೀತಿಯ ಹಿನ್ನೆಲೆಯಲ್ಲಿ ನಾವು ಜಾತಕ ನೋಡುತ್ತಿಲ್ಲವೆಂಬ ಕಾರಣವನ್ನು ೦೩ (೨%) ಕುಟುಂಬಗಳು ಅಭಿಪ್ರಾಯ ಪಡುತ್ತವೆ.

ಉಡುಪಿ ಜಿಲ್ಲೆಯ ಮರಾಟಿ ನಾಯ್ಕ ಮತ್ತು ಮರಾಟಿ ಸಮುದಾಯಗಳ ತಿಳುವಳಿಕೆದಾರರ ಜಾತಕ ನೋಡಲು ಮತ್ತು ನೋಡದಿರಲು ಕಾರಣಗಳನ್ನು ಹೋಲಿಕೆ ಮಾಡಿದಾಗ ಇಲ್ಲಿ ಜಾತಕವನ್ನು ನೋಡಲು ಉಳಿದೆಲ್ಲ ಕಾರಣಗಳಿಗಿಂತ ಕಂಟಕಗಳನ್ನು ನಿವಾರಣೆ ಮಾಡಲು ಜಾತಕ ನೋಡಿದರೆ

ಒಳಿತು ಎಂದು ಹಾಗೂ ಉಳಿದ ಕಾರಣಗಳು ತುಂಬಾ ಕಡಿಮೆ ಪ್ರಮಾಣದಲ್ಲಿವೆ. ಜಾತಕ ನೋಡದಿರಲು ಕಾರಣಗಳಲ್ಲಿ ಅವರ ಹಿಂದಿನವರು ಯಾರು ನೋಡುತ್ತಿರಲಿಲ್ಲ ಹಾಗೂ ಬೇರೆ ವಿಷಯಗಳ ಹೋಲಿಕೆ ಮಾಡಿದಾಗ ಅನ್ಯಜಾತಿಯ ಅನುಕರಣೆ ಇದೆ. ಆಧುನಿಕ ಕಾಲದಲ್ಲಿ ಜಾತಕ ನೋಡುವುದು ಸರಿಯಲ್ಲವೆಂದು ಯಾರು ಕೂಡ ಸಮೀಕ್ಷೆಯಲ್ಲಿ ಮಾಹಿತಿ ನೀಡಿಲ್ಲ.

ತಿಳುವಳಿಕೆದಾರರ ವಿವಾಹ ವಿಧಾನಗಳ ವಿವರ

ಪ್ರತಿಯೊಂದು ಜಾತಿ, ಸಮುದಾಯ, ಬುಡಕಟ್ಟುಗಳಲ್ಲಿ ತಮ್ಮದೇ ಆದಂತಹ ವಿವಾಹದ ವಿಧಾನಗಳನ್ನು ಹೊಂದಿದ್ದು, ಈ ಸಮುದಾಯಗಳಲ್ಲಿ ಗುರಿಕಾರರು, ತಂದೆ ತಾಯಿ, ಬಂಧು ಬಳಗದವರು ಮುಖ್ಯ ಪಾತ್ರ ವಹಿಸುತ್ತಾರೆ. ಆದರೆ ಇಂದು ಅನೇಕ ಬದಲಾಣೆಗಳಾಗಿವೆ. ಬ್ರಾಹ್ಮಣರ ಮೂಲಕ ವೈದಿಕ ಪದ್ಧತಿಯು ಹೆಚ್ಚಾಗಿ ಎಲ್ಲ ಸಮುದಾಯಗಳಲ್ಲಿ ಕಂಡುಬರುತ್ತಿದೆ. ಮರಾಟಿ ನಾಯ್ಕ ಮತ್ತು ಮರಾಟಿ ಸಮುದಾಯಗಳಲ್ಲಿ ಅಧ್ಯಯನಕ್ಕೊಳಪಟ್ಟ ತಿಳುವಳಿಕೆದಾರರು ತಮ್ಮ ಮದುವೆ ಸಂದರ್ಭದಲ್ಲಿ ಯಾವ ವಿಧಾನದ ಮೂಲಕ ಅಂದರೆ ಶಾಸ್ತ್ರೋಕ್ತವಾಗಿ, ಸರಳವಾಗಿ, ನೊಂದಣಿ ಮೂಲಕ ಅಂತರ್‌ಧರ್ಮಿಯ ಮತ್ತು ಪ್ರೇಮ ವಿವಾಹದ ಬಗ್ಗೆ ಮಾಹಿತಿಯನ್ನು ಕೇಳಲಾಯಿತು. ಆ ಮಾಹಿತಿಯನ್ನು ಈ ಕೆಳಗಿನ ಕೋಷ್ಟ ಸಂಖ್ಯೆ ೩.೫ರಲ್ಲಿ ನೀಡಲಾಗಿದೆ.

ಕೋಷ್ಟಕ: ೩.೫

ಅಧ್ಯಯನಕ್ಕೊಳಪಟ್ಟ ತಿಳುವಳಿಕೆದಾರರ ವಿವಾಹದ ವಿಧಾನಗಳ ವಿವರ

ಸಮುದಾಯದ ಹೆಸರು	ತಾಲೂಕಿನ ಹೆಸರು	ವಿವಾಹದ ವಿಧಾನ					
		ಶಾಸ್ತ್ರೋಕ್ತವಾಗಿ	ಸರಳ	ನೊಂದಣಿ	ಅಂತರ್ ಧರ್ಮಿಯ	ಪ್ರೇಮ ವಿವಾಹ	ಒಟ್ಟು
ಮರಾಟಿ ನಾಯ್ಕ	ಕುಂದಾಪುರ	೪೫	೦೪	–	–	೦೧	೫೦
	ಉಡುಪಿ	೪೩	೦೬	–	೦೧	–	೫೦
	ಕಾರ್ಕಳ	೩೯	೧೧	–	–	–	೫೦
	ಒಟ್ಟು	೧೨೭	೨೧	–	೦೧	೦೧	೧೫೦
	ಶೇಕಡವಾರು	**೮೪.೬೭**	**೧೪.೦೦**	**–**	**೦೦.೬೭**	**೦೦.೬೬**	**೧೦೦**
ಮರಾಟಿ	ಕಾರ್ಕಳ ತಾಲೂಕು						
	ಒಟ್ಟು	೧೨೪	೨೬	–	–	–	೧೫೦
	ಶೇಕಡವಾರು	**೮೨.೬೭**	**೧೭.೩೩**	**–**	**–**	**–**	**೧೦೦**

(• ಶಾಸ್ತ್ರೋಕ್ತ ಮದುವೆಯಾದ ನಂತರ ಎಷ್ಟೋ ವರ್ಷಗಳ ನಂತರ ವಿವಾಹ ನೋಂದಣಿ ಮಾಡಿರುತ್ತಾರೆ.)

ವಿವಾಹ ಪ್ರಕಾರಗಳಿಗೆ ಸಂಬಂಧಿಸಿದಂತೆ ಮಾಹಿತಿಯನ್ನು ಕುಂದಾಪುರ, ಉಡುಪಿ, ಕಾರ್ಕಳ ತಾಲೂಕುಗಳ ಮರಾಟಿ ನಾಯ್ಕ ಸಮುದಾಯದ ೧೫೦ ಅಧ್ಯಯನಕ್ಕೊಳಪಟ್ಟ ಕುಟುಂಬಗಳಲ್ಲಿ

ಶಾಸ್ತ್ರೋಕ್ತವಾಗಿ ಒಟ್ಟು ೧೨೭ (೮೪.೬೭%) ವಿವಾಹವಾದರೆ, ಸರಳವಾಗಿ ವಿವಾಹವನ್ನು ಮಾಡಿಕೊಂಡಿರುವ ಒಟ್ಟು ೨೧ (೧೪%) ಕುಟುಂಬಗಳು ಕಂಡುಬಂದಿವೆ. ನೊಂದಣಿ ವಿವಾಹಕ್ಕೆ ಸಂಬಂಧಿಸಿದಂತೆ ಯಾರು ಪ್ರತಿಕ್ರಿಯಿಸಿಲ್ಲ. ಅಂತರ್‌ಧರ್ಮಿಯ ವಿವಾಹವನ್ನು ಒಟ್ಟು ೧ (೦.೬೭%) ಕುಟುಂಬಗಳಲ್ಲಿ ಕಂಡರೆ ಪ್ರೇಮ ವಿವಾಹದಲ್ಲಿ ಒಟ್ಟು ೧ (೦.೬೬%) ಕುಟುಂಬ ಕಂಡು ಬರುತ್ತದೆ.

ಈ ವಿವಾಹ ಪ್ರಕಾರದ ಬಗ್ಗೆ ಮಾಹಿತಿಯನ್ನು ಕಾರ್ಕಳ ತಾಲೂಕಿನ ಮರಾಟಿ ಸಮುದಾಯದ ೧೫೦ ಕುಟುಂಬಗಳನ್ನು ಅವಲೋಕಿಸಿದಾಗ ಶಾಸ್ತ್ರೋಕ್ತವಾಗಿ ಒಟ್ಟು ೧೨೪ (೮೨.೬೭%) ವಿವಾಹವಾದರೆ ಒಟ್ಟು ೨೬(೧೭.೩೩%) ರಷ್ಟು ಕುಟುಂಬಗಳು ಸರಳ ವಿವಾಹವಾಗಿರುವುದು ಕಂಡು ಬರುತ್ತದೆ. ಈ ಸಮುದಾಯದಲ್ಲಿ ಅಂತರ್‌ಧರ್ಮಿಯ ಮತ್ತು ಪ್ರೇಮ ವಿವಾಹ ತೀರ ಕಡಿಮೆ ಎಂಬ ಅಂಶ ತಿಳಿದುಬಂದಿದೆ.

• ಉಡುಪಿ ಜಿಲ್ಲೆಯ ತಿಳುವಳಿಕೆದಾರರ ವಿವಾಹದ ಪ್ರಕಾರಗಳ ಕೋಷ್ಟಕದಲ್ಲಿ ಬರುವ ಮರಾಟಿ ನಾಯ್ಕ ಮತ್ತು ಮರಾಟಿ ಸಮುದಾಯಗಳ ವಿವಾಹಗಳ ಪ್ರಕಾರಗಳನ್ನು ತೌಲನಿಕವಾಗಿ ಗಮನಿಸಿದಾಗ ಸರಳ, ನೊಂದಣಿ, ಅಂತರ್‌ಧರ್ಮಿಯ ಹಾಗೂ ಪ್ರೇಮ ವಿವಾಹಗಳಿಂತ ಶಾಸ್ತ್ರೋಕ್ತವಾಗಿ ನಡೆದ ವಿವಾಹಗಳೇ ಹೆಚ್ಚಿನ ಪ್ರಮಾಣದಲ್ಲಿದ್ದು. ಕೇವಲ ಇತ್ತೀಚಿಗಷ್ಟೇ ಒಂದು ಪ್ರೇಮ ಮತ್ತು ಒಂದು ಅಂತರ್ ಧರ್ಮೀಯ ವಿವಾಹ ನಡೆದಿರುವುದು ಕಂಡು ಬರುತ್ತದೆ.

ಕೋಷ್ಟಕ: ೩.೬

ಅಧ್ಯಯನಕ್ಕೊಳಪಟ್ಟ ತಿಳುವಳಿಕೆದಾರರ ಸಮುದಾಯದಲ್ಲಿ ವಿವಾಹವನ್ನು ನೆರವರಿಸಿಕೊಡುವರ ವಿವರ

ಸಮುದಾಯದ ಹೆಸರು	ತಾಲೂಕು	ವಿವಾಹವನ್ನು ನೆರವೆರಿಸಿಕೊಡುವವರು			
		ಮನೆಯ ಯಜಮಾನ	ಹೆತ್ತವರು ಮತ್ತು ಜಾತಿಯ ಗುರಿಕಾರ	ಪುರೋಹಿತರು	ಒಟ್ಟು
ಮರಾಟಿ ನಾಯ್ಕ	ಕುಂದಾಪುರ	೦೩	೪೭	–	೫೦
	ಉಡುಪಿ	೦೫	೪೪	೦೧	೫೦
	ಕಾರ್ಕಳ	೦೬	೪೧	೦೩	೫೦
	ಒಟ್ಟು	೧೪	೧೩೨	೦೪	೧೫೦
	ಶೇಕಡವಾರು	**೦೯.೩೩**	**೮೮.೦೦**	**೦೨.೬೭**	**೧೦೦**
ಮರಾಟಿ	ಕಾರ್ಕಳ	೦೬	೧೪೨	೦೨	೧೫೦
	ಶೇಕಡವಾರು	**೦೪.೦೦**	**೯೪.೬೭**	**೦೧.೩೩**	**೧೦೦**

ಮೇಲ್ಕಂಡ ಕೋಷ್ಟಕ ಸಂಖ್ಯೆ ೩.೬ರಲ್ಲಿ ತಿಳುವಳಿಕೆದಾರರ ಕುಟುಂಬಗಳಲ್ಲಿ ವಿವಾಹ ನೆರವೇರಿಸುವವರ ವಿವರವನ್ನು ನೋಡಬಹುದಾಗಿದೆ. ಈ ವಿಷಯಕ್ಕೆ ಸಂಬಂಧಿಸಿದಂತೆ ಕುಂದಾಪುರ, ಉಡುಪಿ ಮತ್ತು ಕಾರ್ಕಳ ತಾಲೂಕುಗಳ ೧೫೦ ಮರಾಟಿ ನಾಯ್ಕ ಕುಟುಂಬಗಳನ್ನು ಈ ಸಮೀಕ್ಷೆಗೊಳಪಡಿಸಿದಾಗ ೧೪ (೯.೩೩%) ರಷ್ಟು ಕುಟುಂಬಗಳು ಮನೆಯ ಯಜಮಾನರು ವಿವಾಹವನ್ನು ನೆರವೇರಿಸುವುದು ಕಂಡುಬಂದರೆ, ಹೆತ್ತವರು ಮತ್ತು ಜಾತಿಯ ಗುರಿಕಾರರು ವಿವಾಹ ಮಾಡುವುದು ಎಂದು ೧೩೨ (೮೮%) ರಷ್ಟು ಕುಟುಂಬಗಳು ಅಭಿಪ್ರಾಯಪಟ್ಟಿರುವುದನ್ನು ಕಾಣಬಹುದು. ಅದೇ ರೀತಿ ೦೪ (೨.೬೭%) ರಷ್ಟು ಕುಟುಂಬಗಳು ಪುರೋಹಿತರಿಂದ ವಿವಾಹ ನೆರವೇರಿಸುವುದರ ಬಗೆಗೆ ಒಲವು ತೋರಿಸಿದ್ದಾರೆ.

ವಿವಾಹ ನೆರವೇರಿಸುವ ಬಗ್ಗೆ ಕಾರ್ಕಳ ತಾಲೂಕಿನ ೧೫೦ ಮರಾಟಿ ಕುಟುಂಬಗಳನ್ನು ಸಮೀಕ್ಷೆಗೊಳಪಡಿಸಿದಾಗ ೦೬ (೪%) ರಷ್ಟು ಕುಟುಂಬಗಳು ಮನೆಯ ಯಜಮಾನ ಮಾಡುವುದು ಎಂದು ಹೇಳಿದರೆ, ೧೪೨ (೯೪.೬೭%) ರಷ್ಟು ಕುಟುಂಬಗಳಲ್ಲಿ ಹೆತ್ತವರು ಮತ್ತು ಜಾತಿಯ ಗುರಿಕಾರರು ಮದುವೆ ನೆರವೇರಿಸುವವರು ಎಂದು ತಿಳಿಸಿದರೆ. ಇನ್ನುಳಿದ ೦೨ (೧.೩೩%) ಕುಟುಂಬಗಳಲ್ಲಿ ಪುರೋಹಿತರಿಂದ ವಿವಾಹ ನೆರವೇರಿಸುತ್ತೇವೆ ಎಂಬ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

• ಉಡುಪಿ ಜಿಲ್ಲೆಯ ಮರಾಟಿ ನಾಯ್ಕ ಮತ್ತು ಮರಾಟಿ ಸಮುದಾಯಗಳ ತಿಳುವಳಿಕೆದಾರರ ವಿವಾಹವನ್ನು ನೆರವೇರಿಸಿ ಕೊಡುವವರ ಬಗೆಗೆ ತೌಲನಿಕವಾಗಿ ಗಮನಿಸಿದಾಗ ಮನೆಯ ಯಜಮಾನನಿಗಿಂತ ಹೆತ್ತವರು ಮತ್ತು ಜಾತಿಯ ಗುರಿಕಾರರು ವಿವಾಹವನ್ನು ನೆರವೇರಿಸಿಕೊಡುವವರು ಎಂಬ ಹೇಳಿಕೆಗಳಿಗೆ ಹೆಚ್ಚಿನ ಮಹತ್ವ ನೀಡಿದ್ದಾರೆ.

ಪುರೋಹಿತರ ಅಗತ್ಯತೆಯ ಬಗೆಗಿನ ಅಭಿಪ್ರಾಯಗಳು

ಪ್ರಾಚೀನ ಕಾಲದಲ್ಲಿ ಪ್ರತಿಯೊಂದು ಜಾತಿ ಸಮುದಾಯಗಳು ತಮ್ಮದೇ ಆದ ವಿವಾಹ ಪದ್ಧತಿಯನ್ನು ಅನುಸರಿಸುತ್ತಿದ್ದರು. ಆ ಕಾಲದಲ್ಲಿ ಅರ್ಚಕರ ಅವಶ್ಯಕತೆಯೇ ಇರಲಿಲ್ಲ. ಅದಕ್ಕಿಂತ ಮುಖ್ಯವಾಗಿ ಪುರೋಹಿತರು ಕೆಳಜಾತಿಗಳ ವಿವಾಹ ನೆರವೇರಿಸಲು ಒಪ್ಪುತ್ತಿರಲಿಲ್ಲ. ಬಂಟರು ತಮ್ಮದೆಯಾದ ಜಾತಿಯ ಪದ್ದತಿಯಾದ 'ಬಂಟಧಾರೆ'ಯ ಮೂಲಕ ವಿವಾಹ ಮಾಡುತ್ತಿದ್ದರು. ರಾಮಕ್ಷತ್ರಿಯರು, ನೇಕಾರರು ಅಥವಾ ಸೆಟ್ಟಿಗಾರ, ಭಂಡಾರಿ (ಕ್ಷೌರಿಕ) ಕುಂಬಾರ, ಮಡಿವಾಳ ಮುಂತಾದ ಕುಶಲಕರ್ಮಿಗಳ ಜಾತಿಗಳ ವಿವಾಹದ ಕ್ರಿಯಾವಿಧಿಗಳನ್ನು ಅರ್ಚಕರು ನೇರವೇರಿಸುತ್ತಿರಲಿಲ್ಲ. ಕೆಳಜಾತಿಯ ಪ್ರಶ್ನೆ ಇನ್ನೂ ಚಿಂತಾಜನಕ. ಆಧುನಿಕತೆಯ ಇಂದಿನ ಪರಿಸರದಲ್ಲಿ ಅದರಲ್ಲೂ ಕರಾವಳಿ ಕರ್ನಾಟಕದ ಪ್ರದೇಶದಲ್ಲಿ ಅರ್ಚಕರು ವಿವಾಹ ನಡೆಸಲು ಅವಶ್ಯಕ ವ್ಯಕ್ತಿಗಳಲ್ಲಿ ಮೊದಲಿಗರಾಗಿದ್ದಾರೆ. ಇಂದು ಅನೇಕ ಸಮುದಾಯಗಳು ಪುರೋಹಿತರಿಂದಲೇ ಮದುವೆ ಕಾರ್ಯಸ ನಡೆಯಬೇಕು ಮತ್ತು ಅವರು ಇರಲೇಬೇಕೆಂಬ ಮನಸ್ಥಿತಿಗೆ ತಲುಪಿದ್ದಾರೆ. ಈ ವಿಷಯಕ್ಕೆ ಸಂಬಂಧಿಸಿದಂತೆ ತಿಳುವಳಿಕೆದಾರರ ಅಭಿಪ್ರಾಯಗಳನ್ನು ಕೋಷ್ಟಕ ಸಂಖ್ಯೆ ೩.೭ರಲ್ಲಿ ನೀಡಲಾಗಿದೆ.

ಕೋಷ್ಟಕ: ೩.೭

ವಿವಾಹ ನೆರವೇರಿಸಲು ಪುರೋಹಿತರ ಅಗತ್ಯತೆಯ ಬಗ್ಗೆ ತಿಳುವಳಿಕೆದಾರರ ಅಭಿಪ್ರಾಯಗಳ ವಿವರ

ಸಮುದಾಯದ ಹೆಸರು	ತಾಲೂಕು	ವಿವಾಹ ನೆರವೇರಿಸಲು ಪುರೋಹಿತರ ಅಗತ್ಯತೆ ವಿವರ					
		ಅಗತ್ಯತೆ ಎದೆ	ಶೇಕಡ	ಅಗತ್ಯತೆ ಇಲ್ಲ	ಶೇಕಡ	ಒಟ್ಟು	ಶೇಕಡ
ಮರಾಟಿ ನಾಯ್ಕ	ಕುಂದಾಪುರ	೩೮	೨೫.೩೩	೧೨	೦೮.೦	೫೦	೧೦೦%
	ಉಡುಪಿ	೪೨	೨೮.೦೦	೦೮	೫.೩೩	೫೦	೧೦೦%
	ಕಾರ್ಕಳ	೩೫	೨೩.೩೩	೧೫	೧೦.೦೦	೫೦	೧೦೦%
	ಒಟ್ಟು	೧೧೫	**೭೬.೬೭**	**೩೫**	**೨೩.೩೩**	೧೫೦	೧೦೦%
ಮರಾಟಿ	ಕಾರ್ಕಳ	–	–	–	–	–	–
	ಒಟ್ಟು	೧೩೬	೯೦.೬೭	೧೪	೦೯.೩೩	೧೫೦	೧೦೦%

ಮೇಲ್ಕಂಡ ಕೋಷ್ಟಕದಲ್ಲಿ ಸಮೀಕ್ಷೆಗೊಳಪಟ್ಟ ಸಮುದಾಯಗಳ ವಿವಾಹ ನೆರವೇರಿಸಲು ಪುರೋಹಿತರ ಅಗತ್ಯತೆಯ ಬಗ್ಗೆ ಇರುವ ವಿವರವನ್ನು ನೋಡಬಹುದಾಗಿದೆ. ಕುಂದಾಪುರ, ಉಡುಪಿ, ಕಾರ್ಕಳ ತಾಲೂಕುಗಳ ವ್ಯಾಪ್ತಿಯಲ್ಲಿ ಬರುವ ಮರಾಟಿ ನಾಯ್ಕ ಸಮುದಾಯದ ೧೫೦ ಕುಟುಂಬಗಳನ್ನು ಸಮೀಕ್ಷೆಗೊಳಪಡಿಸಿದಾಗ ಅವರ ಅಭಿಪ್ರಾಯದಲ್ಲಿ ೧೧೫ (೭೬.೬೭%) ರಷ್ಟು ಕುಟುಂಬಗಳು ಪುರೋಹಿತರಿಂದಲೇ ವಿವಾಹ ಕಾರ್ಯ ನೆರವೇರಿಸುವ ಅಗತ್ಯವಿದೆ ೩೫ (೨೩.೩೩%) ಕುಟುಂಬಗಳು ಪುರೋಹಿತರ ಅಗತ್ಯವಿಲ್ಲವೆಂದು ಹೇಳಿಕೆ ನೀಡಿವೆ.

ಪುರೋಹಿತರ ಅಗತ್ಯತೆಯ ಬಗೆಗೆ ಕಾರ್ಕಳ ತಾಲೂಕಿನ ಮರಾಟಿ ಸಮುದಾಯದ ೧೫೦ ಕುಟುಂಬಗಳಿಗೆ ಪ್ರಶ್ನೆಕೇಳಿದಾಗ ೧೩೬ (೯೦.೬೭%) ರಷ್ಟು ಕುಟುಂಬಗಳು ಪುರೋಹಿತರ ಅಗತ್ಯವಿದೆ ಎಂಬ ಅಭಿಪ್ರಾಯ ವ್ಯಕ್ತಪಡಿಸಿದರೆ ಉಳಿದ ೧೪ (೯.೩೩%) ರಷ್ಟು ಕುಟುಂಬಗಳು ಪುರೋಹಿತರು ನಮ್ಮ ಸಮುದಾಯದ ವಿವಾಹ ಮಾಡಲು ಅಗತ್ಯವಿಲ್ಲ ಎಂಬ ಹೇಳಿಕೆ ನೀಡಿದ್ದಾರೆ.

• ಉಡುಪಿ ಜಿಲ್ಲೆಯ ಮರಾಟಿ ನಾಯ್ಕ ಮತ್ತು ಮರಾಟಿ ಸಮುದಾಯಗಳ ವಿವಾಹ ನೆರವೇರಿಸಲು ಪುರೋಹಿತರ ಅಗತ್ಯತೆಯ ಬಗ್ಗೆ ತೌಲನಿಕವಾಗಿ ಗಮನಿಸಿದಾಗ ಪುರೋಹಿತರ ಅಗತ್ಯತೆಯ ಬಗ್ಗೆ ಹೆಚ್ಚಿನವರು ಒಲವು ತೋರಿಸಿದ್ದು ಮತ್ತು ಅಗತ್ಯತೆ ಇಲ್ಲ ಎಂಬ ಬಗ್ಗೆ ತುಂಬಾ ಕಡಿಮೆ ಕುಟುಂಬಗಳು ಅಭಿಪ್ರಾಯ ವ್ಯಕ್ತಪಡಿಸಿವೆ.

ಕೋಷ್ಟಕ: ೩.೮

ವಿವಾಹ ನೆರವೇರಿಸಲು ಪುರೋಹಿತರ ಅಗತ್ಯತೆಯ ಕುರಿತಾದ ವಿವರ

ಸಮುದಾಯದ ಹೆಸರು	ತಾಲೂಕು	ವಿವಾಹ ನೆರವೇರಿಸಲು ಪುರೋಹಿತರ ಅಗತ್ಯತೆಗೆ ಕಾರಣಗಳು				ಅಗತ್ಯತೆ ಇಲ್ಲವಾದಲ್ಲಿ ಕಾರಣಗಳು			
		ಪವಿತ್ರ ಎಂಬ ಭಾವನೆ	ಎಲ್ಲಾ ಜಾತಿಯವರು ಅನುಸರಿಸುತ್ತಾರೆ	ಸಂಪ್ರದಾಯ	ಒಟ್ಟು	ಮನೆಯ ಯಜಮಾನರೇ ಸಾಕು	ಗುರಿಗಾರರೇ ಸಾಕು	ಜಾತಿ ಸಂಪ್ರದಾಯದಂತೆ ಪುರೋಹಿತರಿಂದ	ಒಟ್ಟು
ಮರಾಟ ನಾಯ್ಕ	ಕುಂದಾಪುರ	೧೫	೧೯	೦೪	೩೮	೦೩	೦೫	೦೪	೧೨
	ಉಡುಪಿ	೨೭	೧೦	೦೫	೪೨	೦೨	೦೪	೦೨	೮
	ಕಾರ್ಕಳ	೨೪	೦೮	೦೩	೩೫	೦೪	೦೯	೦೨	೧೫
	ಒಟ್ಟು	೬೬	೩೭	೧೨	೧೧೫	೦೯	೧೮	೦೮	೩೫
	ಶೇಕಡವಾರು	**೫೭.೩೯**	**೩೨.೧೭**	**೧೦.೪೪**	**೧೦೦**	**೨೫.೭೧**	**೫೧.೪೩**	**೨೨.೮೬**	**೧೦೦**
ಮರಾಟ	ಕಾರ್ಕಳ	೭೭	೪೨	೧೭	೧೩೬	೦೮	೦೪	೦೨	೧೪
	ಶೇಕಡವಾರು	**೫೬.೬೨**	**೩೦.೮೮**	**೧೨.೫೦**	**೧೦೦**	**೫೭.೧೪**	**೨೮.೫೭**	**೧೪.೨೯**	**೧೦೦**

ಕೋಷ್ಟಕ ೩.೮ರಲ್ಲಿ ಸಮೀಕ್ಷೆಗೊಳಪಡಿಸಿದ ಕುಟುಂಬಗಳಲ್ಲಿ ವಿವಾಹ ನೆರವೇರಿಸಲು ಪುರೋಹಿತರ ಅಗತ್ಯತೆ ಇದೆಯಾ ಮತ್ತು ಇಲ್ಲವೇ ಎಂಬುದರ ಬಗೆಗಿನ ಕಾರಣಗಳ ಬಗೆಗೆ ವಿವರಗಳನ್ನು ಪಡೆಯಲಾಗಿದೆ. ಕುಂದಾಪುರ, ಉಡುಪಿ, ಕಾರ್ಕಳ ತಾಲೂಕುಗಳ ೧೫೦ ಮರಾಟಿ ನಾಯ್ಕ ಸಮುದಾಯದ ಕುಟುಂಬಗಳಲ್ಲಿ ಪುರೋಹಿತರ ಅಗತ್ಯತೆ ಬಗ್ಗೆ ಮತ್ತು ಅನಗತ್ಯತೆ ಬಗ್ಗೆ ಇರುವ ಕಾರಣಗಳನ್ನು ಕೇಳಿದಾಗ ಅಗತ್ಯತೆಗೆ ಪವಿತ್ರ ಎಂಬ ಭಾವನೆಯನ್ನು ೬೬ (೫೭.೩೯%) ಕುಟುಂಬಗಳು ವ್ಯಕ್ತಪಡಿಸಿದರೆ, ಎಲ್ಲಾ ಜಾತಿಯವರು ಅನುಸರಿಸುತ್ತಾರೆ ಎಂಬ ಕಾರಣದಿಂದ ೩೭ (೩೨.೧೭%) ಪುರೋಹಿತರನ್ನು ವಿವಾಹ ಕಾರ್ಯ ನೆರವೇರಿಸಲು ಬಯಸಿದ್ದೇವೆ ಎಂದು ಹೇಳಿದರೆ, ೧೨ (೧೦.೪೪%) ಕುಟುಂಬಗಳು ಸಂಪ್ರದಾಯದ ಕಾರಣದಿಂದ ಪುರೋಹಿತರಿಂದ ವಿವಾಹ ಕಾರ್ಯ ನೆರವೇರಿಸಲು ಬಯಸಿರುವುದು ಕಂಡು ಬರುತ್ತದೆ.

ಪುರೋಹಿತ ಅಗತ್ಯತೆಯನ್ನು ತಿರಸ್ಕರಿಸಿದ ೩೫ ಕುಟುಂಬಗಳಲ್ಲಿ ಕಾರಣಗಳನ್ನು ಕೇಳಿದಾಗ ೯ (೨೫.೭೧%) ರಷ್ಟು ಕುಟುಂಬಗಳು ಮನೆಯ ಯಜಮಾನರೇ ಸಾಕು ಎಂದರೆ ೧೮ (೫೧.೪೩%) ಕುಟುಂಬಗಳು ಗುರಿಗಾರರೇ ಸಾಕು ಎಂದು ಹೇಳಿಕೊಂಡಿವೆ. ಜಾತಿ ಸಂಪ್ರದಾಯದಲ್ಲಿ ಪುರೋಹಿತರಿಂದ ವಿವಾಹ ಕಾರ್ಯ ನೆರವೇರಿಸುವುದಕ್ಕೆ ಒಪ್ಪಿಗೆ ಇಲ್ಲವೆಂಬ ಕಾರಣದಿಂದ ೮ (೨೨.೮೬%) ಕುಟುಂಬಗಳು ಪುರೋಹಿತರ ಬೇಡ ಎಂಬ ಮಾಹಿತಿಯನ್ನು ನೀಡಿದ್ದಾರೆ.

ವಿವಾಹ ನೆರವೇರಿಸಲು ಪುರೋಹಿತರ ಅಗತ್ಯ ಮತ್ತು ಅನಗತ್ಯ ಎಂಬ ವಿಷಯಕ್ಕೆ ಸಂಬಂಧಿಸಿದಂತೆ ಕಾರ್ಕಳ ತಾಲೂಕಿನ ೧೫೦ ಮರಾಟಿ ಸಮುದಾಯದ ಕುಟುಂಬಗಳಲ್ಲಿ ಅಭಿಪ್ರಾಯಗಳನ್ನು ಕೇಳಿದಾಗ ಪವಿತ್ರ ಭಾವನೆಯೆಂಬ ಕಾರಣದಿಂದ ೭೭ (೫೬.೬೨%) ರಷ್ಟು ಕುಟುಂಬಗಳು ಪುರೋಹಿತರ ಅಗತ್ಯತೆ ಬಗೆಗೆ ತಿಳಿಸಿದರೆ, ಆಧುನಿಕ ಸಮಾಜದಲ್ಲಿ ಎಲ್ಲ ಸಮುದಾಯದವರು ಪುರೋಹಿತರನ್ನು ಕರೆಯುತ್ತಿದ್ದಾರೆ ಎಂಬ ಕಾರಣದಿಂದ ೪೨ (೩೦.೮೮%) ಕುಟುಂಬಗಳು ಪುರೋಹಿತರು ಬೇಕು ಎಂಬ ಮಾಹಿತಿ ನೀಡಿದ್ದಾರೆ. ೧೭ (೧೨.೫೦%) ಕುಟುಂಬಗಳು ಪುರೋಹಿತರು ಸಂಪ್ರದಾಯಿಕವಾಗಿ ವಿವಾಹ ಕಾರ್ಯವನ್ನು ನೇರವೇರಿಸುತ್ತಾರೆ. ಈ ಹಿನ್ನೆಲೆಯಲ್ಲಿ ಅವರು ಮದುವೆ ಕಾರ್ಯಕ್ಕೆ ಬೇಕು ಎಂದು ಹೇಳಿದ್ದಾರೆ. ವಿವಾಹ ನೆರವೇರಿಸಲು ಪುರೋಹಿತರು ಬೇಡವೆಂದು ೧೪ ಕುಟುಂಬಗಳು ನೀಡಿರುವ ಕಾರಣವನ್ನು ಅವಲೋಕಿಸಿದಾಗ ಮನೆಯ ಯಜಮಾನರೇ ಸಾಕು ಎಂದು ೮ (೫೭.೧೪%) ರಷ್ಟು ಕುಟುಂಬ ಅಭಿಪ್ರಾಯಪಟ್ಟರೇ, ಗುರಿಕಾರರೇ ಸಾಕು ಎಂದು ೦೪ (೨೮.೫೭%) ಕುಟುಂಬಗಳು ಕಾರಣ ನೀಡಿವೆ. ನಮ್ಮ ಸಮುದಾಯದ ಸಂಪ್ರದಾಯದಂತೆ ೨ (೧೪.೨೯%) ಕುಟುಂಬಗಳು ಪುರೋಹಿತರ ಬೇಡ ಎಂದು ಹೇಳಿಕೆ ನೀಡಿರುವುದನ್ನು ಗಮನಿಸಬಹುದು.

• ಉಡುಪಿ ಜಿಲ್ಲೆಯ ಮರಾಟಿ ನಾಯ್ಕ ಮತ್ತು ಮರಾಟಿ ಸಮುದಾಯಗಳ ೩೦೦ ಕುಟುಂಬಗಳ ವಿವಾಹ ನೆರವೇರಿಸಲು ಪುರೋಹಿತರ ಅಗತ್ಯತೆ ಇದೆಯೇ ಅಥವಾ ಇಲ್ಲವೇ ಎಂಬ ವಿಷಯಕ್ಕೆ ಸಂಬಂಧಿಸಿದಂತೆ ತೌಲನಿಕವಾಗಿ ಗಮನಿಸಿದಾಗ ವಿವಾಹ ನೆರವೇರಿಸಲು ಪುರೋಹಿತರ ಅಗತ್ಯತೆಯ ಹೆಚ್ಚು ಕಂಡು ಬಂದಿದ್ದು, ಅದಕ್ಕೆ ಎಲ್ಲಾ ಜಾತಿಯವರ ಅನುಕರಣೆ ಮತ್ತು ಪವಿತ್ರ ಎಂಬ ಭಾವನೆಗೆ ಹೆಚ್ಚು ಒತ್ತು ಕೊಟ್ಟಿರುವುದು ಕಂಡು ಬರುತ್ತದೆ ಹಾಗೂ ಅಗತ್ಯತೆ ಇಲ್ಲ ಎಂಬ ಹೇಳಿಕೆಗಳು ಕಡಿಮೆ ಪ್ರಮಾಣದಲ್ಲಿ ಇರುವುದು ಕಂಡು ಬರುತ್ತದೆ.

ಗುರಿಕಾರ ಪದ್ಧತಿ

ಮರಾಟಿ ನಾಯ್ಕ ಮತ್ತು ಮರಾಟಿಗರಲ್ಲಿ ಹುಟ್ಟಿನಿಂದ ಸಾವಿನ ತನಕ ಎಲ್ಲಾ ಕಾರ್ಯಗಳಿಗೆ ಗುರಿಕಾರರು ಇರಲೇಬೇಕು. ಹೀಗಾಗಿ ಸಾಮಾಜಿಕ, ಧಾರ್ಮಿಕ, ಸಾಂಸ್ಕೃತಿಕ ಜೀವನದಲ್ಲಿ ಗುರಿಕಾರರು ಹೆಚ್ಚಿನ ಪ್ರಾಮುಖ್ಯತೆಯನ್ನು ಹೊಂದಿದ್ದಾರೆ. ಎಲ್ಲರೂ ಅವರ ಮಾತಿನ ಪ್ರಕಾರವೇ ನಡೆದುಕೊಳ್ಳಬೇಕಾಗಿತ್ತು. ನಗರೀಕರಣ, ಆಧುನಿಕತೆ, ಆಧುನಿಕ ಶಿಕ್ಷಣ ಪದ್ಧತಿ, ಮುಂತಾದ ಕಾರಣಗಳಿಂದ ಗುರಿಕಾರರ ಮಹತ್ವ ಕಡಿಮೆಯಾಗುತ್ತಾ ಬಂದಿದೆ. ಇಂದು ಸಮುದಾಯಗಳಲ್ಲಿ ಅನೇಕ ಸಂಘ – ಸಂಸ್ಥೆಗಳು ಸ್ಥಾಪಿತಗೊಂಡು ಚುನಾಯಿತ ಅಧ್ಯಕ್ಷ ಮತ್ತು ಪದಾಧಿಕಾರಿಗಳನ್ನು ಹೊಂದಿ ಕೆಲವೊಂದು ಪ್ರದೇಶಗಳಲ್ಲಿ ಗುರಿಕಾರ ನಿರ್ವಹಿಸಬೇಕಾದ ಕಾರ್ಯವನ್ನು ಅಧ್ಯಕ್ಷರು ನಿರ್ವಹಿಸುತ್ತಿರುವುದು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಕಂಡುಬಂದಿದೆ. ಗ್ರಾಮಾಂತರದ ಅನೇಕ ಪ್ರದೇಶಗಳಲ್ಲಿ ಆಧುನಿಕ ವ್ಯವಸ್ಥೆಯಿಂದ ಜಾತಿ ಸಂಘಟನೆಯ ಅಧ್ಯಕ್ಷರು ಗುರಿಕಾರನ ಸ್ಥಾನವನ್ನು ತುಂಬಲು ಸಾಧ್ಯವಾಗಲಿಲ್ಲ. ಜಾತಿಗಳಿಗೆ ಸಂಬಂಧಿಸಿದ ಧಾರ್ಮಿಕ, ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಿರ್ವಹಿಸುವ ಸಂದರ್ಭದಲ್ಲಿ ಗುರಿಕಾರನ ಪಾತ್ರ ಇದ್ದರೂ, ಅದು ದೇವಸ್ಥಾನಗಳ ಜೀರ್ಣೋದ್ಧಾರ ಕಾರ್ಯಗಳ ಉಸ್ತುವಾರಿ ಇತ್ಯಾದಿಗಳನ್ನು ಜಾತಿ ಸಮಿತಿಯ ಅಥವಾ ಧಾರ್ಮಿಕ ಕ್ಷೇತ್ರದ ಅಧ್ಯಕ್ಷರು ನೋಡಿಕೊಳ್ಳುವುದು ಕಂಡುಬರುತ್ತದೆ. ಗುರಿಕಾರರ ಪದ್ಧತಿಗೆ ಸಂಬಂಧಿಸಿದಂತೆ ತಿಳುವಳಿಕೆದಾರರ ಅಭಿಪ್ರಾಯಗಳನ್ನು ಸಂಗ್ರಹಿಸಿ ಮಾಹಿತಿಯನ್ನು ಕೋಷ್ಟಕ ಸಂಖ್ಯೆ ೩.೯ರಲ್ಲಿ ನೀಡಲಾಗಿದೆ.

ಕೋಷ್ಟಕ: ೩.೯

ಅಧ್ಯಯನಕ್ಕೊಳಪಟ್ಟ ತಿಳುವಳಿಕೆದಾರರ ಗುರಿಕಾರ ಪದ್ಧತಿಯ ವಿವರ

ಸಮುದಾಯದ ಹೆಸರು	ತಾಲೂಕು	ಗುರಿಕಾರ ಪದ್ಧತಿ		ಒಟ್ಟು	ಗುರಿಕಾರ ಪದ್ಧತಿ ಅಸ್ತಿತ್ವದಲ್ಲಿರಲು ಕಾರಣಗಳು		
		ಇದೆ	ಇಲ್ಲ		ಹಿಂದಿನಿಂದಲೂ ನಡೆದುಕೊಂಡ ಬಂದಿರುವ ಸಂಪ್ರದಾಯ	ಜಾತಿಯ ಆಡಳಿತ ವ್ಯವಸ್ಥೆಯಾಗಿರುವುದು ಒಳ್ಳೆಯದು	ಒಟ್ಟು
ಮರಾಟಿ ನಾಯ್ಕ	ಕುಂದಾಪುರ	೪೮	೦೨	೫೦	೪೮	೦೨	೫೦
	ಉಡುಪಿ	೫೦	–	೫೦	೪೬	೦೪	೫೦
	ಕಾರ್ಕಳ	೪೫	೦೫	೫೦	೪೫	೦೫	೫೦
	ಒಟ್ಟು	೧೪೩	೦೭	೧೫೦	೧೩೯	೧೧	೧೫೦
	ಶೇಕಡವಾರು	**೯೫.೩೩**	**೦೪.೬೭**	**೧೦೦**	**೯೨.೬೭**	**೦೭.೩೩**	**೧೦೦**
ಮರಾಟಿ	ಕಾರ್ಕಳ ತಾ.	–	–	–	–	–	–
	ಒಟ್ಟು	೧೪೬	೦೪	೧೫೦	೮೩	೬೭	೧೫೦
	ಶೇಕಡವಾರು	**೯೭.೩೩**	**೦೨.೬೭**	**೧೦೦**	**೫೫.೩೩**	**೪೪.೬೭**	**೧೦೦**

ಸಮೀಕ್ಷೆಗೊಳಪಟ್ಟ ತಿಳುವಳಿಕೆದಾರರು ಸಮುದಾಯದಲ್ಲಿ 'ಗುರಿಕಾರ ಪದ್ಧತಿಯ ಮತ್ತು ಈ ಪದ್ಧತಿ ಮುಂದುವರಿಸಲು ಇರುವ ಕಾರಣಗಳನ್ನು ಗುರುತಿಸಲಾಗಿದೆ. ಕುಂದಾಪುರ, ಉಡುಪಿ, ಕಾರ್ಕಳ ತಾಲೂಕುಗಳ ವ್ಯಾಪ್ತಿಯಲ್ಲಿ ಬರುವ ೧೫೦ ಮರಾಟಿ ನಾಯ್ಕ ಸಮುದಾಯದ ಕುಟುಂಬಗಳನ್ನು ಸಮೀಕ್ಷೆಗೊಳಪಡಿಸಿದಾಗ ಒಟ್ಟು ೧೪೩ (೯೫.೩೩%) ಕುಟುಂಬಗಳು ಗುರಿಕಾರ ಪದ್ಧತಿಯನ್ನು ಮುಂದುವರಿಸುವುದರ ಬಗೆಗೆ ಒಲವು ತೋರಿಸಿದ್ದಾರೆ. ಅದಕ್ಕೆ ಸಂಬಂಧಿಸಿದ ಕಾರಣಗಳನ್ನು ಸೂಕ್ಷ್ಮವಾಗಿ ಅವಲೋಕಿಸಿದಾಗ ಹಿಂದಿನಿಂದಲೂ ನಡೆದುಕೊಂಡು ಬಂದಿರುವ ಸಂಪ್ರದಾಯವೆಂದು ೧೩೯ (೯೨.೬೭) ಕುಟುಂಬಗಳು ಹೇಳಿಕೊಂಡಿವೆ. ಜಾತಿಯ ಒಳಗೆ ಆಡಳಿತದ ವ್ಯವಸ್ಥೆ ಇರುವುದು ಒಳ್ಳೆಯದು ಎಂಬ ಕಾರಣದಿಂದ ೧೧ (೦೭.೩೩%) ಕುಟುಂಬಗಳು ಗುರಿಕಾರ ಪದ್ಧತಿ ಮುಂದುವರೆಯಬೇಕು ಎಂದು ಹೇಳಿವೆ. ಉಳಿದ ೦೭ (೪.೬೭%) ರಷ್ಟು ಕುಟುಂಬಗಳು ಗುರಿಕಾರ ಪದ್ಧತಿಯನ್ನು ಅನುಸರಿಸುತ್ತಿಲ್ಲವೆಂದು ಹೇಳಿಕೆ ನೀಡಿವೆ.

ಈ ಗುರಿಕಾರ ಪದ್ಧತಿ ಸಂಬಂಧಿಸಿದಂತೆ ಕಾರ್ಕಳ ತಾಲೂಕಿನ ೧೫೦ ಮರಾಟಿ ಸಮುದಾಯದ ಕುಟುಂಬಗಳನ್ನು ಸಮೀಕ್ಷೆಗೊಳಪಡಿಸಿದಾಗ ೧೪೬ (೯೭.೩೩%) ರಷ್ಟು ಕುಟುಂಬಗಳು ಗುರಿಕಾರ ಪದ್ಧತಿಯನ್ನು ಮುಂದುವರಿಸಿಕೊಂಡು ಹೋಗಬೇಕು ಎಂದು ತಿಳಿಸಿವೆ. ಅದಕ್ಕೆ ಸಂಬಂಧಿಸಿದ ಕಾರಣಗಳನ್ನು ಅಧ್ಯಯನ ಮಾಡಿದಾಗ ಈ ಸಂಪ್ರದಾಯ ಹಿಂದಿನಿಂದಲೂ ನಡೆದುಕೊಂಡು ಬಂದಿರುವಂತಹದ್ದು ಎಂದು ೮೩ (೫೫.೩೩%) ಕುಟುಂಬಗಳ ಅಭಿಪ್ರಾಯ, ೬೭ (೪೪.೬೭%) ರಷ್ಟು ಕುಟುಂಬಗಳು ಜಾತಿಯ ಒಳಗೆ ಆಡಳಿತ ವ್ಯವಸ್ಥೆ ಇರುವುದು ಒಳಿತು ಎಂದು ಹೇಳಿ ಗುರಿಕಾರ ಪದ್ಧತಿಯನ್ನು ಮುಂದುವರೆಸುವುದು ಸೂಕ್ತ ಎಂದು ಹೇಳಿಕೊಂಡಿವೆ. ೪ (೦೨.೬೭) ರಷ್ಟು ಕುಟುಂಬಗಳು ಗುರಿಕಾರ ಪದ್ಧತಿಯ ಅವಶ್ಯಕತೆ ಇಲ್ಲ ಎಂದು ಹೇಳಿಕೆ ನೀಡಿವೆ.

• ಉಡುಪಿ ಜಿಲ್ಲೆಯ ಮರಾಟಿ ನಾಯ್ಕ ಮತ್ತು ಮರಾಟಿ ಸಮುದಾಯಗಳ ಸಮೀಕ್ಷೆಗೊಳಪಟ್ಟ ತಿಳಿವಳಿಕೆದಾರರಲ್ಲಿ 'ಗುರಿಕಾರ ಪದ್ಧತಿ'ಯ ಮತ್ತು ಈ ಪದ್ಧತಿಯನ್ನು ಮುಂದುವರಿಕೆಗೆ ಸಂಬಂಧಿಸಿದ ಕಾರಣಗಳನ್ನು ತೌಲನಿಕವಾಗಿ ಗಮನಿಸಿದಾಗ ಗುರಿಕಾರ ಪದ್ಧತಿ ಇದೆ. ಇದು ಬೇಕು ಎಂದು ಹೇಳಿದವರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಗುರಿಕಾರರ ಪದ್ಧತಿ ಬೇಡ ಎಂದು ಬೆರಳೆಣಿಕೆಯಷ್ಟು ಜನರ ಅಭಿಪ್ರಾಯ. ಗುರಿಕಾರ ಪದ್ಧತಿಯು ಅಸ್ತಿತ್ವದಲ್ಲಿರಲು ಜಾತಿಯ ಒಳಗಿನ ಆಡಳಿತ ವ್ಯವಸ್ಥೆ ಹೆಚ್ಚು ಪರಿಣಾಮಕಾರಿಯಾಗಿದ್ದರಿಂದ ಹಿಂದಿನಿಂದಲೂ ನಡೆದುಕೊಂಡು ಬಂದಿದೆ. ಹೀಗಾಗಿ ಈ ಸಂಪ್ರದಾಯಕ್ಕೆ ಹೆಚ್ಚು ಪ್ರಾಧ್ಯಾನ್ಯತೆ ಕೊಟ್ಟಿರುವುದು ಕಂಡು ಬರುತ್ತದೆ.

ತಿಳುವಳಿಕೆದಾರರ ಮಕ್ಕಳ ವಿವಾಹದ ಬಗೆಗಿನ ಆಶಯ

ಹೆತ್ತವರು ಅಥವಾ ಪೋಷಕರು ತಮ್ಮ ಮಕ್ಕಳ ಮದುವೆಯನ್ನು ಯಾವ ರೀತಿ ಮಾಡಬೇಕೆಂಬ ಬಯಕೆ ತಮ್ಮದೇ ಆದ ಕಲ್ಪನೆ ಹಾಗೂ ಆಶಯಗಳನ್ನು ಹೊಂದಿರುತ್ತಾರೆ. ಕೆಲವು ಹೆತ್ತವರು ನಾವು ಹೇಳಿದಂತೆಯೇ ಆಗಬೇಕೆಂಬ ಮನೋಭಾವನೆ ಇಟ್ಟಿಕೊಂಡಿರುತ್ತಾರೆ. ಇನ್ನು ಕೆಲವರು ತುಂಬಾ ಉದಾರಿಗಳಾಗಿರುತ್ತಾರೆ. ಮತ್ತೆ ಕೆಲವರು ತುಂಬಾ ಸಂಪ್ರದಾಯಸ್ಥರಾಗಿರುತ್ತಾರೆ. ಈ ಬಗ್ಗೆ ಮರಾಟಿ ನಾಯ್ಕ ಮತ್ತು ಮರಾಟಿಗರು ಯಾವ ರೀತಿಯಲ್ಲಿ ಪ್ರತಿಕ್ರಿಯಿಸುತ್ತಾರೆ ಎಂಬುದನ್ನು ಈ ಕೆಳಗಿನ ಕೋಷ್ಟಕ ಸಂಖ್ಯೆ ೩.೧೧ರಲ್ಲಿ ನೀಡಲಾಗಿದೆ.

ಕೋಷ್ಟಕ: ೩.೧೦

ತಿಳುವಳಿಕೆದಾರರ ಮಕ್ಕಳ ವಿವಾಹದ ಬಗೆಗಿನ ಆಶಯಗಳ ವಿವರ

ಸಮುದಾಯದ ಹೆಸರು	ತಾಲೂಕು	ಮಾಹಿತಿದಾರರ ಆಶಯ					
		ಹಿರಿಯರು ಗೊತ್ತುಪಡಿಸಿದ ವಿವಾಹ	ಪ್ರೇಮ ವಿವಾಹ	ಸರಳ ವಿವಾಹ	ನೊಂದಾಯಿತ ವಿವಾಹ	ತಟಸ್ಥ	ಒಟ್ಟು
ಮರಾಟಿ ನಾಯ್ಕ	ಕುಂದಾಪುರ	೪೪	–	೦೩	–	೦೩	೫೦
	ಉಡುಪಿ	೩೯	೦೧	೧೦	–	–	೫೦
	ಕಾರ್ಕಳ	೩೪	–	೧೪	–	೦೨	೫೦
	ಒಟ್ಟು	೧೧೭	೦೧	೨೭	–	೦೫	೧೫೦
	ಶೇಕಡವಾರು	೭೮.೦೦	೦.೬೭	೧೮.೦೦	–	೦೩.೩೩	೧೦೦
ಮರಾಟಿ	ಕಾರ್ಕಳ	–	–	–	–	–	–
	ಒಟ್ಟು	೯೬	–	೪೩	–	೧೧	೧೫೦
	ಶೇಕಡವಾರು	೬೪.೦೦	–	೨೮.೬೭	–	೦೭.೩೩	೧೦೦

ಸಮೀಕ್ಷೆಗೊಳಪಟ್ಟ ತಿಳುವಳಿಕೆದಾರರ ಮಕ್ಕಳ ವಿವಾಹದ ಬಗ್ಗೆ ಅವರ ಆಶಯಗಳನ್ನು ಕೇಳಿದಾಗ ಕುಂದಾಪುರ, ಉಡುಪಿ ಮತ್ತು ಕಾರ್ಕಳ ತಾಲೂಕಿನಲ್ಲಿ ಬರುವ ಮರಾಟಿ ನಾಯ್ಕ ೧೫೦ ಕುಟುಂಬಗಳನ್ನು ಸಮೀಕ್ಷೆಗೊಳಪಡಿಸಿದಾಗ ೧೧೭ (೭೮%) ರಷ್ಟು ಕುಟುಂಬಗಳು ಹಿರಿಯರು ಗೊತ್ತುಪಡಿಸಿದ ವಿವಾಹವನ್ನು ಮಾಡುವ ಆಶಯ ವ್ಯಕ್ತಪಡಿಸಿದ್ದಾರೆ. ಸರಳ ವಿವಾಹಕ್ಕೆ ೨೭ (೧೮%) ರಷ್ಟು ಕುಟುಂಬಗಳು ಆಶಯ ವ್ಯಕ್ತಪಡಿಸಿದರೆ. ತಮ್ಮ ಮಕ್ಕಳ ವಿವಾಹದ ಕಾರ್ಯಕ್ಕೆ ತಟಸ್ಥ ನೀತಿಯನ್ನು ೦೫ (೩.೩೩%) ರಷ್ಟು ಕುಟುಂಬಗಳು ಅನುಸರಿಸಿರುವುದು ಕಂಡುಬಂದಿದೆ. ನೊಂದಾಯಿತ ವಿವಾಹಕ್ಕೆ ಸಮ್ಮತಿ ಇಲ್ಲದಿರುವುದು ಕಂಡುಬಂದಿದೆ.

ಸಮೀಕ್ಷೆಗೊಳಪಡಿಸಿದ ಮರಾಟಿ ಸಮುದಾಯದ ೧೫೦ ಕುಟುಂಬಗಳಲ್ಲಿ ೯೬ (೬೪%) ರಷ್ಟು ಕುಟುಂಬಗಳು ಹಿರಿಯರು ಗೊತ್ತುಪಡಿಸಿದ ವಿವಾಹದ ಬಗೆಗೆ ಆಶಯ ವ್ಯಕ್ತಪಡಿಸಿದರೆ, ೪೩ (೨೮.೬೭) ಕುಟುಂಬಗಳು ಸರಳ ವಿವಾಹಕ್ಕೆ ವ್ಯಕ್ತಪಡಿಸಿರುವುದು ಕಂಡುಬಂದಿದೆ. ತಟಸ್ಥವಾಗಿರುವ ತಮ್ಮ ಮಕ್ಕಳ ಮದುವೆ ವಿಚಾರದಲ್ಲಿ ಯಾವ ನಿರ್ಣಯವನ್ನು ಹೇಳದೆ ೧೧ (೭.೩೩) (೩.೩೩%) ರಷ್ಟು ಕುಟುಂಬಗಳನ್ನು ಕಾಣುತ್ತೇವೆ. ಇದರ ಜೊತೆಗೆ ಈ ಸಮುದಾಯದವರಿಗೆ ಪ್ರೇಮವಿವಾಹ ಮತ್ತು ನೊಂದಾಯಿತ ವಿವಾಹದಲ್ಲಿ ಅಸಕ್ತಿ ಇಲ್ಲದಿರುವುದು ಕಂಡು ಬರುತ್ತದೆ.

ಉಡುಪಿ ಜಿಲ್ಲೆಯ ಮರಾಟಿ ನಾಯ್ಕ ಮತ್ತು ಮರಾಟಿ ಸಮುದಾಯಗಳ ತಿಳುವಳಿಕೆದಾರರ ಮಕ್ಕಳ ವಿವಾಹದ ಬಗ್ಗೆ ಅವರ ಆಶಯಗಳನ್ನು ತೌಲನಿಕವಾಗಿ ನೋಡಿದಾಗ ಹಿರಿಯರು

ಗೊತ್ತುಪಡಿಸಿದ ವಿವಾಹಗಳು ಹೆಚ್ಚಾಗಿದ್ದು, ಯಾವುದೇ ಪ್ರೇಮ ವಿವಾಹ ಹಾಗೂ ನೊಂದಾಯಿತ ವಿವಾಹಗಳ ಬಗೆಗೆ ಅವರಲ್ಲಿ ಒಲವು ಕಾಣುವುದಿಲ್ಲ. ಮತ್ತು ಕೆಲವರು ಸರಳ ವಿವಾಹಗಳ ಬಗ್ಗೆ ತಮ್ಮ ಆಶಯವನ್ನು ವ್ಯಕ್ತಪಡಿಸಿರುವುದ್ದನ್ನು ಕಾಣಬಹುದು. ಪ್ರೇಮ ಮತ್ತು ರಿಜಿಸ್ಟರ್ ಮದುವೆಗೆ ಇವರ ಒಪ್ಪಿಗೆ ಇಲ್ಲ ಎಂದು ಹೇಳಿದ್ದಾರೆ.

ವರದಕ್ಷಿಣೆ

ವರದಕ್ಷಿಣೆ ಎಂಬುದು ಭಾರತದಲ್ಲಿ ಕಂಡು ಬರುವ ಒಂದು ವಿಶಿಷ್ಟ ಹಾಗೂ ವಿಚಿತ್ರವಾದ ಸಾಮಾಜಿಕ ಸಮಸ್ಯೆಯಾಗಿದೆ. ಈ ಸಮಸ್ಯೆ ಸಾಮಾಜಿಕ ಸ್ವರೂಪದ್ದಾಗಿದ್ದರೂ ಇದರ ಮುಖ್ಯ ಬಲಿಪಶುಗಳು ಸ್ತ್ರೀಯರೇ ಆಗಿದ್ದಾರೆ. ವಿವಾಹ ಸಂದರ್ಭದಲ್ಲಿ ವಧುವಿನ ಮನೆಯವರು ಸಂತೋಷದಿಂದ ಬಳುವಳಿಯ ರೂಪದಲ್ಲಿ ಒಂದಷ್ಟು ಹಣ ಅಥವಾ ಚಿನ್ನಾಭರಣ ನೀಡುತ್ತಿದ್ದ ಹಿಂದಿನ ಪದ್ಧತಿ ಈಗ ಮರೆಯಾಗಿದೆ. ಇಂದು ವರನು ಕೇಳಿದಷ್ಟು ಹಣ ಅಥವಾ ಚಿನ್ನಾಭರಣ ಕೊಡುವ ಪರಂಪರೆ ಪ್ರಾರಂಭವಾಗಿದೆ. ಹೆಣ್ಣಿನ ತಂದೆ ತಾಯಿಗಳು ವರದಕ್ಷಿಣೆ ಕೊಡುವ ಸಾಮರ್ಥ್ಯ ಇಲ್ಲದಿದ್ದರೂ, ಒತ್ತಾಯಕ್ಕೆ ಬಲಿ ಬಿದ್ದು ವರದಕ್ಷಿಣೆ ರೂಪದಲ್ಲಿ ಹಣ ಮತ್ತು ಬಂಗಾರ ಕೊಡುವಂತಹ ಪದ್ಧತಿ ಭಾರತದಲ್ಲಿ ವಿಕಾಸಗೊಂಡಿರುವುದನ್ನು ಎಲ್ಲ ಸಮುದಾಯಗಳಲ್ಲಿಯೂ ಕಾಣುತ್ತೇವೆ.

ಒಂದು ಅರ್ಥದಲ್ಲಿ ಹೇಳುವುದಾದರೆ ಸಾಮಾನ್ಯವಾಗಿ ಮದುವೆ ಆಗುವ ಹೆಣ್ಣು ತನ್ನ ಗಂಡನಿಗೆ ವಿವಾಹದ ನೆಪದಲ್ಲಿ ನೀಡುವ ಹಣ, ವಸ್ತುಗಳು ಮತ್ತು ಸಂಪತ್ತುಗಳು ವರದಕ್ಷಿಣೆ ಎನಿಸಿಕೊಳ್ಳುತ್ತವೆ. ಎನ್‌ಸೈಕ್ಲೋಪಿಡಿಯಾ ಬ್ರಿಟಾನಿಕ "ಸ್ತ್ರೀಯೊಬ್ಬಳು ಆಕೆಯ ವಿವಾಹ ಸಂದರ್ಭದಲ್ಲಿ ನೀಡಲಾಗುವ ಆಸ್ತಿಯೇ ವರದಕ್ಷಿಣೆ" (Dowry is the property that is given to a women at the time of her marriage) ವಿಸ್ತ್ರತವಾದ ಅರ್ಥದಲ್ಲಿ ವರದಕ್ಷಿಣೆ ಎಂದರೆ ವಿವಾಹದ ಸಂದರ್ಭದಲ್ಲಿ ವಧು, ವರ ಮತ್ತು ಆತನ ಬಂಧುಗಳು ಸ್ವೀಕರಿಸುವಂತಹ ಬಳುವಳಿಗಳು ಮತ್ತು ಬೆಲೆ ಬಾಳುವ ವಸ್ತುಗಳಾಗಿರುತ್ತವೆ.*

ಕಾನೂನಾತ್ಮಕವಾಗಿ ೧೯೬೧ರ ವರದಕ್ಷಿಣೆ ನಿಷೇಧ ಕಾಯ್ದೆಯ ಪ್ರಕಾರ ವರದಕ್ಷಿಣೆ ಅರ್ಥ ಈ ರೀತಿ ಇದೆ.

• ವಿವಾಹದ ಕಾರಣಕ್ಕಾಗಿ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಯಾವುದೇ ಒಂದು ಪಕ್ಷದವರಿಂದ ಇನ್ನೊಂದು ಪಕ್ಷದವರು ಯಾವುದೇ ಆಸ್ತಿ ಅಥವಾ ಮೌಲ್ಯಯುಕ್ತ ಭದ್ರತೆಯನ್ನು ಸ್ವೀಕರಿಸುವುದು.

• ಹೆಣ್ಣು ಗಂಡಿನ ಯಾವುದೇ ಕಡೆಯವರು ಆಸ್ತಿಯನ್ನು ಅಥವಾ ಸ್ವತ್ತನ್ನು ಕೊಡುವುದು ಮತ್ತು ಅದನ್ನು ಪಡೆದುಕೊಳ್ಳುವುದು.

• ವಿವಾಹದ ಸಲುವಾಗಿ ವಿವಾಹದ ಸಂದರ್ಭಗಳಲ್ಲಿ ಅಥವಾ ಅದಕ್ಕಿಂತ ಮುಂಚೆ ಅಥವಾ ನಂತರ ನೀಡುವ ಯಾವುದೇ ಸ್ವತ್ತು ಅಥವಾ ಮೌಲ್ಯವುಳ್ಳ ಭದ್ರತೆಯು ವರದಕ್ಷಿಣೆ ಎನಿಸಿಕೊಳ್ಳುತ್ತದೆ.

ಹೀಗೆ ವರದಕ್ಷಿಣೆ ನಿಷೇಧ ಕಾಯ್ದೆಯ ಪ್ರಕಾರ ವರದಕ್ಷಿಣೆ ಕೊಡುವುದು ಹಾಗೂ ಪಡೆದುಕೊಳ್ಳುವುದು ಎರಡೂ ಕೂಡ ಅಪರಾಧವಾಗಿದೆ. ವೇದ ಕಾಲದ ನಂತರದ ಅವಧಿಯಲ್ಲಿ ಹೆಣ್ಣು ಮಕ್ಕಳಿಗೆ

ಋತುಮತಿಯಾಗುವ ಮೊದಲೆ ಮದುವೆ ಮಾಡಿಕೊಡುವ ಪದ್ಧತಿ ಅಸ್ತಿತ್ವದಲ್ಲಿತ್ತು. ಇದರಿಂದಾಗಿ ಹೆಣ್ಣು ಮಕ್ಕಳ ತಂದೆ ತಾಯಿಯವರು ತುಂಬಾ ಒತ್ತಡಕ್ಕೆ ಒಳಗಾಗುತ್ತಿದ್ದರು. ಸರಿಯಾದ ವರ ಸಿಗದಿದ್ದಾಗ, ಅವರಿಗೆ ಹಣ, ಭೂಮಿ, ಸಂಪತ್ತು ಇತ್ಯಾದಿಗಳ ಆಸೆ ಅಮಿಷಗಳನ್ನು ತೋರಿಸಿ ಕನ್ಯೆಯೊಂದಿಗೆ ಹಣ, ಒಡವೆ ವಸ್ತುಗಳನ್ನು ಕೊಟ್ಟು ವಿವಾಹ ಮಾಡಲು ಪ್ರಾರಂಭಿಸಿದರು. ಕಾಲಾಂತರದಲ್ಲಿ ಇದರ ಲಾಭವನ್ನು ಪಡೆದುಕೊಂಡ ವರನ ಕಡೆಯವರು ಹೆಚ್ಚು ಹೆಚ್ಚು ಮೊತ್ತಕ್ಕೆ ಪೀಡಿಸಲು ಪ್ರಾರಂಭಿಸಿದರು. ಸಮಾಜದಲ್ಲಿ ಶ್ರೀಮಂತರು ಇದನ್ನು ನೀಡಿದರೆ ಬಡವರಿಗೆ ಇದನ್ನು ನೀಡಲು ಸಾಧ್ಯವಾಗದೆ. ಅವರ ಹೆಣ್ಣು ಮಕ್ಕಳ ವಿವಾಹ ಮಾಡುವುದು ತುಂಬಾ ಕಷ್ಟವಾಯಿತು. ಆದ್ದರಿಂದ ವರದಕ್ಷಿಣೆ ಒಂದು ಸಮಸ್ಯೆಯಾಗಿ ಮಾರ್ಪಾಟು ಹೊಂದಿದೆ ಎಂದು ಹೇಳಬಹುದು.

ವಸಾಹತುಶಾಹಿ ಕಾಲದಲ್ಲಿದ್ದಂತೆ ಕೃಷಿಯೇ ಸರ್ವಸ್ವವಾಗಿದ್ದ ಆರ್ಥಿಕ ವ್ಯವಸ್ಥೆ ಈಗ ಕಂಡುಬರುವುದಿಲ್ಲ. ಅದು ಕೃಷಿಯ ಜೊತೆಗೆ ವಿಶಾಲ ವ್ಯಾಪ್ತಿಯ ಕೃಷಿಯೇತರ ಉದ್ಯೋಗ ಮತ್ತು ವೃತ್ತಿಪರ ಉದ್ಯೋಗದ ಕ್ಷೇತ್ರವನ್ನು ಒದಗಿಸಿ ಕೊಟ್ಟಿದೆ. ಇದರಿಂದಾಗಿ ದೇಶಾದ್ಯಂತ ಲಕ್ಷಾಂತರ ವೈದ್ಯರು, ಎಂಜಿನಿಯರ್ಸ್, ತಂತ್ರಜ್ಞರು, ವಕೀಲರು, ಲೆಕ್ಕ ಪರಿಶೋಧಕರು, ವಿಶ್ವವಿದ್ಯಾಲಯ ಮತ್ತು ಕಾಲೇಜು ಪ್ರಾಧ್ಯಾಪಕರು ಸರ್ಕಾರಿ ಹಾಗೂ ಖಾಸಗಿ ಉದ್ಯಮೆಗಳು ಆಡಳಿತಾಧಿಕಾರಿಗಳು, ಕಾರ್ಯನಿರ್ವಹಣಾಧಿಕಾರಿಗಳು ಮುಂತಾದವರ ಸಂಖ್ಯೆ ಹೆಚ್ಚುತ್ತಲೆ ಬರುತ್ತದೆ. ಇಂದಿನ ಯುವಕರು ಉನ್ನತ ಶಿಕ್ಷಣದ ಜೊತೆಗೆ ಉತ್ತಮ ಆದಾಯ ನೀಡುವ ವಿವಾಹವೆಂಬ ಮಾರುಕಟ್ಟೆಯು ಅವರ ಬೆಲೆಯನ್ನು ಹಿಂದಿಗಿಂತಲೂ ಈಗ ಅಧಿಕಗೊಳಿಸಿದೆ. ಕುಟುಂಬಸ್ಥರು ಅಪೇಕ್ಷೆಪಡುವ ಯಾವಕನಿಗೆ ಮಗಳನ್ನು ಕೊಟ್ಟು ವಿವಾಹ ಮಾಡಬಯಸುವವರು ಇಂದು ಹಣದ ರೂಪದಲ್ಲಿ ಮಾತ್ರವಲ್ಲದೆ ವಸ್ತು ರೂಪ ಹಾಗೂ ಗೃಹಪಯೋಗಿ ವಸ್ತುಗಳನ್ನು ಕೂಡಾ ಅಂತಸ್ತಿಗೆ ತಕ್ಕಂತೆ ನೀಡಲು ಸಿದ್ಧವಾಗಿರಬೇಕಾಗಿದೆ. ಈ ನಿಟ್ಟಿನಲ್ಲಿ ಪ್ರೋ. ಕೆ.ಎಂ. ಕಪಾಡಿಯರವರು ತಿಳಿಸಿರುವಂತೆ 'ವರದಕ್ಷಿಣೆ ಮೊತ್ತವು ವರನ ತಂದೆಯ ಆರ್ಥಿಕ ಹಾಗೂ ಸಾಮಾಜಿಕ ಅಂತಸ್ತನ್ನೂ ವರನ ಕುಟುಂಬ ಸಾಮಾಜಿಕ ಸ್ಥಾನಮಾನವನ್ನು, ವರನ ಶೈಕ್ಷಣಿಕ ಮಟ್ಟವನ್ನು ಮತ್ತು ಗುಣ ಅರ್ಹತೆಗಳನ್ನು ಹೊಂದಿಕೊಂಡಿದೆ'. ಸಾಮಾನ್ಯವಾಗಿ ವಧುವಿನ ಮನೆಯಲ್ಲಿಯೇ ವಿವಾಹ ಕಾರ್ಯ ನಡೆಯುವುದರಿಂದ ವರನ ಕಡೆಯವರ ಅತಿಥಿ ಸತ್ಕಾರದ ಸಮಸ್ತ ಖರ್ಚನ್ನು ಕನ್ಯೆಯ ತಂದೆ ತಾಯಿಗಳೇ ನೋಡಿಕೊಳ್ಳಬೇಕಾಗುತ್ತದೆ. ವಧುವಿನ ಮನೆ, ದೇವಸ್ಥಾನ, ಛತ್ರ ಮತ್ತು ಸಭಾಭವನಗಳಲ್ಲಿ ಮದುವೆಯಾದರೂ ಆ ಖರ್ಚನ್ನು ಹುಡುಗಿಯ ತಂದೆಯೇ ನೀಡುವ ಸ್ಥಿತಿ ಬಂದಿದೆ.

ಇಂದು ವರದಕ್ಷಿಣೆಯು ಸಾಮಾಜಿಕ ಪಿಡುಗುಗಳಲ್ಲಿ ತನ್ನದೆ ಆದ ಸ್ಥಾನಮಾನವನ್ನು ಪಡೆದುಕೊಂಡಿದೆ. ಸಮಸ್ಯೆ ತೀವ್ರವಾದಂತೆಲ್ಲ ಈ ಸಮಸ್ಯೆ ನಿವಾರಿಸಲು ಅಸಾಧ್ಯವಾಗದ ಹಂತಕ್ಕೆ ತಲುಪಿದೆ. ಮರಾಟಿ ನಾಯ್ಕ ಮತ್ತು ಮರಾಟಿಗರು ಪ್ರಾರಂಭದ ಹಂತದಲ್ಲಿ ವಧುದಕ್ಷಿಣೆ ನೀಡುತ್ತಿದ್ದರು ಎಂಬುದನ್ನು ತಿಳುವಳಿಕೆದಾರರು ತಿಳಿಸಿದ್ದಾರೆ. ಇಂದು ವರದಕ್ಷಿಣೆಯು ಈ ಎರಡೂ ಸಮುದಾಯಗಳಲ್ಲಿ ಸಾಮಾಜಿಕ ಸಮಸ್ಯೆಯ ರೂಪ ಪಡೆಯದಿದ್ದರೂ ಅದು ಪ್ರಾರಂಭದ ಹಂತದಲ್ಲಿರುವುದನ್ನು ಗಮನಿಸಬಹುದು. ಪ್ರಸ್ತುತ ಅಧ್ಯಯನದಲ್ಲಿ ಈ ಬಗ್ಗೆ ಮಾಹಿತಿಯನ್ನು ಸಂಗ್ರಹಿಸಿ ಅದನ್ನು ಕೆಳಗಿನ ಕೋಷ್ಟಕ ಸಂಖ್ಯೆ ೩.೧೧ರಲ್ಲಿ ರೂಪದಲ್ಲಿ ನೀಡಲಾಗಿದೆ.

ಕೋಷ್ಟಕ: ೩.೧೧

ತಿಳುವಳಿಕೆದಾರರು ವರದಕ್ಷಿಣೆ ತೆಗೆದುಕೊಂಡಿರುವುದರ ಬಗೆಗಿನ ವಿವರ

ಸಮುದಾಯದವರ ಹೆಸರು ಮತ್ತು ತಾಲೂಕು	ವರದಕ್ಷಿಣೆ ತೆಗೆದುಕೊಂಡಿರುವುದು		ಯಾವ ರೂಪದ್ದು					
	ತೆಗೆದುಕೊಂಡಿರುತ್ತೇವೆ	ತೆಗೆದುಕೊಂಡಿರುವುದಿಲ್ಲ	ಒಟ್ಟು	ನಗದು	ಚಿನ್ನ	ಮದುವೆಯ ಖರ್ಚು	ನಿವೇಶನ	ಒಟ್ಟು
ಮರಾಟಿ ನಾಯ್ಕ								
ಕುಂದಾಪುರ	೧೩	೩೭	೫೦	೦೫	೦೮	–	–	೧೩
ಉಡುಪಿ	೧೪	೩೬	೫೦	೦೯	೦೫	–	–	೧೪
ಕಾರ್ಕಳ	೨೧	೨೯	೫೦	೧೪	೦೭	–	–	೨೧
ಒಟ್ಟು	೪೮	೧೦೨	೧೫೦	೨೮	೨೦	–	–	೪೮
ಶೇಕಡವಾರು	೩೨.೦೦	೬೮.೦೦	೧೦೦.೦೦	೫೮.೩೩	೪೧.೬೭	–	–	೧೦೦
ಮರಾಟಿ								
ಕಾರ್ಕಳ	೬೩	೮೭	೧೫೦	೧೨	೧೭	೩೪	–	೬೩
ಶೇಕಡವಾರು	೪೨.೦೦	೫೮.೦೦	೧೦೦	೧೯.೦೫	೨೬.೯೮	೫೩.೯೭	–	೧೦೦

ಕೋಷ್ಟಕ ಸಂಖ್ಯೆ ೩.೧೧ರಲ್ಲಿ ವರದಕ್ಷಿಣೆ ತೆಗೆದುಕೊಂಡಿರುವ ಮತ್ತು ಯಾವ ರೂಪದಲ್ಲಿ ವರದಕ್ಷಿಣೆ ಪಡೆದಿದ್ದಾರೆ ಎಂಬ ವಿಷಯದ ಬಗ್ಗೆ ಸಮೀಕ್ಷೆಗೊಳಪಟ್ಟವರಿಂದ ಮಾಹಿತಿ ಪಡೆಯಲಾಯಿತು.

ಕುಂದಾಪುರ, ಉಡುಪಿ, ಕಾರ್ಕಳ ತಾಲೂಕುಗಳ ಮರಾಟಿ ನಾಯ್ಕ ಸಮುದಾಯದಲ್ಲಿ ೧೫೦ ಕುಟುಂಬಗಳಲ್ಲಿ ಒಟ್ಟು ೪೮ (೩೨%/) ರಷ್ಟು ಕುಟುಂಬಗಳು ವರದಕ್ಷಿಣೆ ಪಡೆದರೆ ೧೦೨ (೬೮%) ಕುಟುಂಬಗಳು ಪಡೆದಿಲ್ಲವೆಂದು ಹೇಳಿಕೊಂಡಿವೆ. ವರದಕ್ಷಿಣೆ ಪಡೆದ ೪೮ (೩೨%) ಕುಟುಂಬಗಳಲ್ಲಿ ಅದರ ರೂಪವನ್ನು ಕೇಳಿದಾಗ ನಗದು ರೂಪದಲ್ಲಿ ೨೮ (೫೮.೩೩%) ಚಿನ್ನದ ರೂಪದಲ್ಲಿ ೨೦ (೪೧.೬೬%) ರಷ್ಟು ಕುಟುಂಬಗಳು ವರದಕ್ಷಿಣೆ ಪಡೆದಿರುವುದು ಗೋಚರಿಸುತ್ತದೆ.

ಈ ವಿಚಾರಕ್ಕೆ ಸಂಬಂಧಿಸಿದಂತೆ ೧೫೦ ಮರಾಟಿ ಸಮುದಾಯದ ಕುಟುಂಬಗಳಲ್ಲಿ ೬೩ (೪೨%) ರಷ್ಟು ಕುಟುಂಬಗಳು ವರದಕ್ಷಿಣೆ ಪಡೆದಿರುವುದು ಕಂಡುಬಂದಿದೆ. ಅದೇ ರೀತಿ ೮೭ (೫೮%) ರಷ್ಟು ಕುಟುಂಬಗಳು ವರದಕ್ಷಿಣೆ ಪಡೆದಿಲ್ಲವೆಂದು ಹೇಳಿವೆ. ವರದಕ್ಷಿಣೆ ಪಡೆದ ೬೩ (೪೨%) ರಷ್ಟು ಕುಟುಂಬಗಳಲ್ಲಿ ೧೯.೦೫% ರಷ್ಟು ಕುಟುಂಬಗಳು ನಗದು ರೂಪದಲ್ಲಿ ವರದಕ್ಷಿಣೆ ಪಡೆದರೆ, ಚಿನ್ನದ ರೂಪದಲ್ಲಿ ೧೭ (೨೬.೯೮%) ಮದುವೆಯ ಖರ್ಚಿನ ರೂಪದಲ್ಲಿ ೩೪(೫೩.೯೭%) ಕುಟುಂಬಗಳು ವರದಕ್ಷಿಣೆ ಪಡೆದಿರುವುದು ಕಂಡುಬರುತ್ತದೆ. ಇದರಿಂದ ವರದಕ್ಷಿಣೆ ಪಡೆಯುವ ಪ್ರಮಾಣದಲ್ಲಿ ಮರಾಟಿ ನಾಯ್ಕ ಮತ್ತು ಮರಾಟಿ ಸಮುದಾಯಗಳಲ್ಲಿ ಕಡಿಮೆ ಪ್ರಮಾಣದಲ್ಲಿರುವುದನ್ನು ನೋಡಬಹುದಾಗಿದೆ.

• ಉಡುಪಿ ಜಿಲ್ಲೆಯ ಮರಾಟಿ ನಾಯ್ಕ ಮತ್ತು ಮರಾಟಿ ಸಮುದಾಯಗಳ ತಿಳುವಳಿಕೆದಾರರು ವರದಕ್ಷಿಣೆ ತೆಗೆದುಕೊಂಡಿರುವುದರ ಮತ್ತು ಯಾವ ರೂಪದ್ದೆಂಬುದನ್ನು ಗಮನಿಸಿದಾಗ ವರದಕ್ಷಿಣೆ ತೆಗೆದುಕೊಂಡವರಿಗಿಂತ ತೆಗೆದುಕೊಳ್ಳದಿರುವವರ ಸಂಖ್ಯೆ ಹೆಚ್ಚಾಗಿರುವುದು ಕಂಡುಬರುತ್ತದೆ. ಅದರಲ್ಲಿ ನಗದಿಗಿಂತ ಚಿನ್ನದ ರೂಪದಲ್ಲಿ ತೆಗೆದುಕೊಂಡವರು ಹೆಚ್ಚಾಗಿ ಕಂಡುಬರುತ್ತಾರೆ. ಅದರಲ್ಲಿ ಮರಾಟಿ ಸಮುದಾಯದವರ ಹೆಚ್ಚು ಈ ಕಡಿಮೆ ಈ ಪದ್ಧತಿಗೆ ಒತ್ತು ಕೊಟ್ಟಂತೆ ಕಾಣಬಹುದು.

ತಿಳುವಳಿಕೆದಾರರು ವರದಕ್ಷಿಣೆ ಪಡೆಯಲು ಮತ್ತು ಪಡೆಯದಿರಲು ಕಾರಣಗಳು

ಮರಾಟಿ ನಾಯ್ಕ ಮತ್ತು ಮರಾಟಿ ಸಮುದಾಯದ ತಿಳುವಳಿಕೆದಾರರು ತಮ್ಮ ವಿವಾಹ ಸಂದರ್ಭ ಹಾಗೂ ವರದಕ್ಷಿಣೆ ಪಡೆಯಲು ಮತ್ತು ವರದಕ್ಷಿಣೆ ಪಡೆಯದಿರಲು ಹಲವಾರು ಕಾರಣಗಳನ್ನು ನೀಡಿದ್ದಾರೆ. ಅವುಗಳ ವಿವರಗಳನ್ನು ಕೋಷ್ಟಕ ಸಂಖ್ಯೆ ೩.೧೨ರಲ್ಲಿ ನಮೂದಿಸಲಾಗಿದೆ.

ಕೋಷ್ಟಕ: ೩.೧೨

ಮಾಹಿತಿದಾರರು ವರದಕ್ಷಿಣೆ ಪಡೆಯಲು ಮತ್ತು ಪಡೆಯದಿರಲು ಕಾರಣಗಳ ವಿವರ

ಸಮುದಾಯದವರ ಹೆಸರು ಮತ್ತು ತಾಲೂಕು	ತಿಳುವಳಿಕೆದಾರರು ವರದಕ್ಷಿಣೆ ಪಡೆಯಲು ಕಾರಣಗಳು					ವರದಕ್ಷಿಣೆ ಪಡೆಯದಿರಲು ಕಾರಣಗಳು					
	ಪಡೆಯದಿದ್ದರೆ ತಪ್ಪಾಗಿ ಅರ್ಥೈಸುತ್ತಾರೆ	ತೆಗೆದುಕೊಳ್ಳುವುದು ಲೋಕ ರೂಢಿ		ಆರ್ಥಿಕ ಮಟ್ಟ ಉತ್ತಮವಾಗಿಲ್ಲ	ಒಟ್ಟು	ವಧುವಿಗೆ ನೌಕರಿ ಇದೆ	ವಧುವಿನ ಕಡೆಯವರಿಗೆ ವರದಕ್ಷಿಣೆ ಶಿಕ್ಷೆ ಯಾಕೆ ಎಂಬ ಭಾವನೆ	ವಧುವಿಗೆ ಉತ್ತಮ ಶಿಕ್ಷಣ	ನಾವು ಆರ್ಥಿಕವಾಗಿ ಸ್ವಲ್ಪ ಚೆನ್ನಾಗಿರುವುದರಿಂದ	ನಮ್ಮಲ್ಲಿ ಹಿಂದಿನಿಂದಲೂ ವರದಕ್ಷಿಣೆ ಇಲ್ಲ	ಒಟ್ಟು
ಮರಾಟಿ ನಾಯ್ಕ											
ಕುಂದಾಪುರ	೦೧	೦೬	೦೨	೦೪	೧೩	೦೫	೦೨	೦೩	೦೪	೨೩	
ಉಡುಪಿ	೦೩	೦೫	೦೩	೦೩	೧೪	೦೪	೦೨	೦೬	೦೦	೨೪	
ಕಾರ್ಕಳ	೦೨	೦೮	೦೫	೦೬	೨೧	೦೧	೦೪	೦೯	೦೦	೧೫	
ಒಟ್ಟು	೦೬	೧೯	೧೦	೧೩	೪೮	೧೦	೦೮	೧೮	೦೪	೬೨	೧೦೨
ಶೇಕಡವಾರು	೪.೦೦	೧೨.೬೭	೬.೬೭	೮.೬೬	೩೨.೦೦	೬.೬೭	೦೫.೩೩	೧೨.೦೦	೦೨.೬೭	೪೧.೩೩	೬೮.೦೦
ಮರಾಟಿ											
ಕಾರ್ಕಳ (ಒಟ್ಟು)	೦೯	೧೪	೧೩	೨೭	೬೩	೧೬	೦೫	೧೩	೦೫	೪೮	೮೭
ಶೇಕಡವಾರು	೦೬.೦೦	೦೯.೩೩	೮.೬೭	೧೮.೦೦	೪೨.೦೦	೧೦.೬೭	೦೩.೩೩	೦೮.೬೭	೦೩.೩೩	೩೨.೦೦	೫೮.೦೦

ಆಧಾರ: ಮರಾಟಿ ನಾಯ್ಕ ೧೫೦ ಕುಟುಂಬಗಳು, ಮರಾಟಿ ೧೫೦ ಕುಟುಂಬಗಳ ಸಮೀಕ್ಷೆ. ಪ್ರಾಥಮಿಕ ಮಾಹಿತಿಗಳ ಆಧಾರದಲ್ಲಿ ರಚಿತವಾದ ಕೋಷ್ಟಕ

ಕುಂದಾಪುರ, ಉಡುಪಿ, ಕಾರ್ಕಳ ತಾಲೂಕುಗಳ ವ್ಯಾಪ್ತಿಯಲ್ಲಿ ಬರುವ ಮರಾಟಿ ನಾಯ್ಕ ಸಮುದಾಯದಲ್ಲಿ ಸಮೀಕ್ಷೆಗೊಳಪಟ್ಟ ೧೫೦ ಕುಟುಂಬಗಳಲ್ಲಿ ೪೮(೩೨%) ವರದಕ್ಷಿಣೆ ಪಡೆದಿರುವ ಕುಟುಂಬಗಳು ವರದಕ್ಷಿಣೆ ಪಡೆಯಲು ಆಗಿರುವ ಕಾರಣಗಳನ್ನು ಹೇಳಿವೆ. ಅದರಲ್ಲಿ ೬ (೪%) ರಷ್ಟು ಕುಟುಂಬಗಳು ವರದಕ್ಷಿಣೆ ಪಡೆಯದಿದ್ದರೆ, ತಪ್ಪಾಗಿ ಅರ್ಥೈಸುತ್ತಾರೆ ಎಂಬ ಕಾರಣಕ್ಕೆ ವರದಕ್ಷಿಣೆಯನ್ನು ಸ್ವೀಕರಿಸಿದ್ದೇವೆ ಎಂದು ಹೇಳಿದರೆ, ವರದಕ್ಷಿಣೆ ತೆಗೆದುಕೊಳ್ಳುವುದು ಲೋಕರೂಢಿ ಎಂಬ ಕಾರಣ ಹೇಳಿ ೧೯ (೧೨.೬೭%) ಕುಟುಂಬಗಳು ವರದಕ್ಷಿಣೆ ಪಡೆದಿವೆ. ೧೦ (೬.೬೭%) ರಷ್ಟು ಕುಟುಂಬಗಳು ವರದಕ್ಷಿಣೆಯನ್ನು ಸ್ವತಃ ಇಷ್ಟಪಟ್ಟು ಪಡೆದಿದ್ದಾರೆ. ಆರ್ಥಿಕಮಟ್ಟ ಉತ್ತಮವಾಗಿಲ್ಲವೆಂಬ ಕಾರಣದಿಂದ ೧೩ (೮.೬೬%) ರಷ್ಟು ಕುಟುಂಬಗಳು ವರದಕ್ಷಿಣೆ ಪಡೆದಿರುವುದು ಎಂದು ಕಂಡುಬಂದಿದೆ.

ವರದಕ್ಷಿಣೆ ಪಡೆಯದ ೧೦೨ ಮರಾಟಿ ನಾಯ್ಕ ಕುಟುಂಬಗಳಲ್ಲಿ ಕಾರಣ ಕೇಳಿದಾಗ ವಧುವಿಗೆ ನೌಕರಿ ಇದೆ ಎಂಬ ಕಾರಣವನ್ನು ೧೦ (೬.೬೭%) ರಷ್ಟು ಕುಟುಂಬಗಳು ಮಾಹಿತಿ ನೀಡಿದರೆ, ವರದಕ್ಷಿಣೆ ಶಿಕ್ಷೆ ಯಾಕೆ ಎಂಬ ಭಾವನೆಯಿಂದ ೮ (೫.೩೩%) ರಷ್ಟು ವರದಕ್ಷಿಣೆ ನೀಡಿಲ್ಲ. ವಧು ಉತ್ತಮ ಶಿಕ್ಷಣ ಪಡೆದದ್ದರಿಂದ ೧೮ (೧೨%) ರಷ್ಟು ಕುಟುಂಬಗಳು ವರದಕ್ಷಿಣೆ ಪಡೆದಿಲ್ಲವೆಂದು, ೪ (೨.೬೭%) ರಷ್ಟು ಕುಟುಂಬಗಳು ತಮ್ಮ ಆರ್ಥಿಕ ಮಟ್ಟ ಉತ್ತಮವಾಗಿದೆ ಎಂಬ ಕಾರಣಕ್ಕೆ ವರದಕ್ಷಿಣೆ ಪಡೆದಿಲ್ಲವೆಂದೂ, ಹಿಂದಿನಿಂದಲೂ ಆ ಸಂಪ್ರದಾಯವಿಲ್ಲ ಎಂಬ ಕಾರಣಕ್ಕೆ ೬೨ (೪೧.೩೩%) ರಷ್ಟು ಕುಟುಂಬಗಳು ವರದಕ್ಷಿಣೆ ಪಡೆದಿಲ್ಲ ಎಂದು ಹೇಳಿಕೊಂಡಿವೆ.

ಈ ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಕಾರ್ಕಳ ವ್ಯಾಪ್ತಿಯ ೧೫೦ ಮರಾಟಿ ಸಮುದಾಯದ ಕುಟುಂಬಗಳ ಸಮೀಕ್ಷೆಯಲ್ಲಿ ೬೩ (೪೨%) ರಷ್ಟು ವರದಕ್ಷಿಣೆ ಪಡೆದಿರುವ ಕುಟುಂಬಗಳಲ್ಲಿ ವರದಕ್ಷಣೆಯನ್ನು ಯಾವ ಕಾರಣಕ್ಕಾಗಿ ವರದಕ್ಷಿಣೆ ಪಡೆದಿದ್ದೀರಿ ಎಂದು ಕೇಳಿದಾಗ ವರದಕ್ಷಿಣೆ ಪಡೆಯದಿದ್ದರೆ ಜನರು ತಪ್ಪಾಗಿ ಅರ್ಥೈಸುತ್ತಾರೆ ಎಂದು ಹೇಳಿದರೆ, ೦೯ (೬%) ರಷ್ಟು ಕುಟುಂಬಗಳು ವರದಕ್ಷಿಣೆ ತೆಗೆದುಕೊಳ್ಳುವುದು ಲೋಕರೂಢಿ ಎಂಬ ಕಾರಣಕ್ಕೆ ಪಡೆದಿರುವೆವು ಎಂದು ೧೪ (೯.೩೩%) ಕುಟುಂಬಗಳು, ಆರ್ಥಿಕವಾಗಿ ದುರ್ಬಲವಾಗಿರುರುವುದರಿಂದ ೧೩ (೮.೬೭%) ಕುಟುಂಬಗಳು ಸ್ವತಃ ತಾವೇ ಇಷ್ಟಪಟ್ಟು ವರದಕ್ಷಿಣೆ ನೀಡುತ್ತೇವೆ ಎಂದು ಹೇಳಿದರೆ, ಆರ್ಥಿಕ ಮಟ್ಟ ಉತ್ತಮವಿಲ್ಲದ ಕಾರಣ ವರದಕ್ಷಿಣೆಯನ್ನು ೨೭ (೧೮%) ಕುಟುಂಬಗಳು ಪಡೆದಿರುವುದು ಕಂಡುಬಂದಿದೆ. ವರದಕ್ಷಿಣೆ ಪಡೆಯದ ೮೭ ಮರಾಟಿ ಕುಟುಂಬಗಳಲ್ಲಿ ಅದಕ್ಕೆ ಕಾರಣ ಕೇಳಿದಾಗ ವಧುವಿಗೆ ನೌಕರಿ ಇದೆ ಎಂದು ೧೬ (೧೦.೬೭%) ರಷ್ಟು ಕುಟುಂಬಗಳು, ವಧುವಿನ ಕಡೆಯವರಿಗೆ ವರದಕ್ಷಿಣೆ ಶಿಕ್ಷೆ ಯಾಕೆ ಎಂಬ ಭಾವನೆಯಿಂದ ೫ (೩.೩೩%) ರಷ್ಟು ಕುಟುಂಬಗಳು, ವಧುವಿಗೆ ಉತ್ತಮ ಶಿಕ್ಷಣ ನೀಡಿದ್ದಾರೆ. ಎಂಬ ಕಾರಣದಿಂದ ಪಡೆದಿಲ್ಲವೆಂದು, ೧೩ (೮.೬೭%) ರಷ್ಟು ಕುಟುಂಬಗಳು, ಆರ್ಥಿಕ ಸ್ಥಿತಿ ಉತ್ತಮವಾಗಿರುವುದರಿಂದ ೦೫ (೩.೩೩%) ರಷ್ಟು ಕುಟುಂಬಗಳು ಮತ್ತು ಹಿಂದಿನಿಂದಲೂ ವರದಕ್ಷಿಣೆ ಪಡೆಯುವ ಸಂಪ್ರದಾಯವಿಲ್ಲ ಎಂಬ ಕಾರಣದಿಂದ ೪೮ (೩೨%) ರಷ್ಟು ಕುಟುಂಬಗಳು ವರದಕ್ಷಿಣೆ ಪಡೆಯದಿರುವುದು ಕಂಡುಬಂದಿದೆ.

• ಉಡುಪಿ ಜಿಲ್ಲೆಯ ಮರಾಟಿ ನಾಯ್ಕ ಮತ್ತು ಮರಾಟಿ ಸಮುದಾಯಗಳ ವರದಕ್ಷಿಣೆ ಪಡೆಯಲು ಮತ್ತು ಪಡೆಯದಿರಲು ಕಾರಣಗಳನ್ನು ತುಲನಾತ್ಮಕವಾಗಿ ನೋಡಿದಾಗ ವರದಕ್ಷಿಣೆ ಪಡೆಯದಿರಲು ಕಾರಣಗಳೇ ಹೆಚ್ಚಾಗಿದ್ದು, ಅದಕ್ಕೆ ಅವರ ಆರ್ಥಿಕ ಸ್ಥಾನಮಾನ, ನೌಕರಿ, ಶಿಕ್ಷಣ ಮತ್ತು ನಮ್ಮ ಪರಂಪರೆಯಲ್ಲಿ ಯಾರು ವರದಕ್ಷಿಣೆಯನ್ನು ತೆಗೆದುಕೊಳ್ಳದೇ ಇರುವುದರಿಂದ ನಾವು ವರದಕ್ಷಿಣೆಯನ್ನು ತೆಗೆದುಕೊಳ್ಳುವುದಿಲ್ಲ ಎಂದು ಹೇಳಿದ್ದಾರೆ. ವರದಕ್ಷಿಣೆ ಪಡೆದವರು ಕಾರಣಗಳು ತುಂಬಾ ಕಡಿಮೆಯಾಗಿದ್ದು, ಅದರಲ್ಲಿ ಕೆಲವರು ಮಾತ್ರ ಅದು ಲೋಕ ರೂಢಿ ಎನ್ನುವ ಕಾರಣಗಳಲ್ಲಿ ತುಂಬಾ ವಿರಳವಾಗಿ ವರದಕ್ಷಿಣೆ ತೆಗೆದುಕೊಂಡವರು ಕಂಡುಬರುತ್ತಾರೆ.

ತಿಳುವಳಿಕೆದಾರರ ಮಕ್ಕಳ ವಿವಾಹದ ಸಂದರ್ಭದಲ್ಲಿ ವರದಕ್ಷಿಣೆಗೆ ಮಹತ್ವ ನೀಡುವ ವಿವರಗಳು

ಇಂದು ವರದಕ್ಷಿಣೆಯು ಬೃಹದಾಕಾರವಾಗಿ ಬೆಳೆದು ಹೆಮ್ಮರವಾಗಿದೆ. ಹೆಣ್ಣು ಹೆತ್ತ ತಂದೆ–ತಾಯಿಗಳ ನೆಮ್ಮದಿಯನ್ನು ಕೆಡಿಸಿ. ಉಸಿರು ಬಿಡಲು ಸಾಧ್ಯವಾಗದಂತಹ ಸ್ಥಿತಿಯನ್ನು ನಿರ್ಮಿಸಿದೆ. ಸಹೋದರಿಯರಿಗೆ ಗಂಡು ಹುಡುಕುವ, ಅವರಿಗೆ ವರದಕ್ಷಿಣೆ ಕೊಡುವ ಭರಾಟೆಯಲ್ಲಿ ಹೆಣ್ಣು ಮಕ್ಕಳ ಸಹೋದರರು ತಮ್ಮ ಆದರ್ಶಗಳನ್ನೆಲ್ಲಾ ಬಿಟ್ಟು ಅವರೂ ವರದಕ್ಷಿಣೆ ಪಡೆದು ಸಹೋದರಿಯರ ವಿವಾಹ ಮಾಡಿಸುವ ಸ್ಥಿತಿ ನಿರ್ಮಾಣವಾಗಿದೆ. ಇದರಿಂದಾಗಿ ಎಷ್ಟೋ ಮನೆಗಳಲ್ಲಿಯ ಗಂಡು ಮಕ್ಕಳು ವಿವಿಧ ನಗರ ಪ್ರದೇಶಗಳಿಗೆ ಹೋಗಿ ಅಲ್ಲಿ ಸಂಪಾದಿಸಿ ಸಹೋದರಿಯರ ವಿವಾಹ ಮಾಡಿಸುತ್ತಿದ್ದಾರೆ ಎಂಬುದಾಗಿ ಕ್ಷೇತ್ರಕಾರ್ಯ ಸಂದರ್ಭದಲ್ಲಿ ಎರಡು ಸಮುದಾಯದ ತಿಳುವಳಿಕೆದಾರರಲ್ಲಿ ಭಾವನೆ ವ್ಯಕ್ತವಾಗಿದೆ. ಪ್ರಸ್ತುತ ಸಂಶೋಧನೆಯಲ್ಲಿ ತಿಳುವಳಿಕೆದಾರರಿಂದ ತಮ್ಮ ಮಕ್ಕಳ ವಿವಾಹ ಸಂದರ್ಭದಲ್ಲಿ ವರದಕ್ಷಿಣೆಗೆ ಮಹತ್ವವನ್ನು ನೀಡುತ್ತೀರಾ ಎಂಬ ಪ್ರಶ್ನೆಯನ್ನು ಕೇಳಲಾಗಿದ್ದು, ಅವುಗಳಿಗೆ ಉತ್ತರವನ್ನು ನೀಡಿರುತ್ತಾರೆ. ಅವುಗಳ ವಿವರ ಕೋಷ್ಟಕ ಸಂಖ್ಯೆ ೩.೧೩ರಲ್ಲಿವೆ.

ಕೋಷ್ಟಕ: ೩.೧೩

ತಿಳುವಳಿಕೆದಾರರು ತಮ್ಮ ಮಕ್ಕಳ ವಿಶವಾಹ ಸಂದರ್ಭದಲ್ಲಿ ವರದಕ್ಷಿಣೆಯ ಬಗೆಗೆ ನೀಡಿರುವ ವಿವರ

ಸಮುದಾಯದ ಹೆಸರು	ತಾಲೂಕು	ವರದಕ್ಷಿಣೆಗೆ ಮಹತ್ವ ನೀಡುವ ವಿವರಗಳು				
		ಮಹತ್ವ ನೀಡುತ್ತೇವೆ	ಶೇಕಡ	ಮಹತ್ವ ನೀಡುವುದಿಲ್ಲ	ಶೇಕಡ	ಸಮೀಕ್ಷೆಗೊಳಪಟ್ಟ ಒಟ್ಟು ಸಂಖ್ಯೆ
ಮರಾಟಿ ನಾಯ್ಕ	ಕುಂದಾಪುರ	೨೧	೧೪.೦೦	೨೯	೧೯.೩೩	೫೦
	ಉಡುಪಿ	೧೩	೦೮.೬೭	೩೭	೨೪.೬೭	೫೦
	ಕಾರ್ಕಳ	೧೭	೧೧.೩೩	೩೩	೨೨.೦೦	೫೦
	ಒಟ್ಟು	೫೧	೩೪.೦೦	೯೯	೬೬.೦೦	೧೫೦
ಮರಾಟಿ	ಕಾರ್ಕಳ	೩೩	೨೨.೦೦	೧೧೭	೭೮.೦೦	೧೫೦.೦೦

ತಿಳುವಳಿಕೆದಾರರು ತಮ್ಮ ಮಕ್ಕಳ ವಿವಾಹ ಸಂದರ್ಭದಲ್ಲಿ ವರದಕ್ಷಿಣೆಯ ಮಹತ್ವದ ಬಗ್ಗೆ ನೀಡಿರುವ ವಿವರವನ್ನು ನೀಡಲಾಗಿದೆ. ಕುಂದಾಪುರ, ಉಡುಪಿ, ಕಾರ್ಕಳ ತಾಲೂಕುಗಳ ವ್ಯಾಪ್ತಿಯಲ್ಲಿ ಬರುವ ಮರಾಟಿ ನಾಯ್ಕ ಸಮುದಾಯದ ೧೫೦ ಸಮೀಕೆಗೊಳಪಟ್ಟ ಕುಟುಂಬಗಳಲ್ಲಿ ೫೧ (೩೪%) ರಷ್ಟು ಕುಟುಂಬಗಳು ತಮ್ಮ ಮಕ್ಕಳ ವಿವಾಹ ಸಂದರ್ಭದಲ್ಲಿ ವರದಕ್ಷಿಣೆಗೆ ಮಹತ್ವ ನೀಡುತ್ತೇವೆ ಎಂದು ತಿಳಿಸಿದರೆ, ೯೯ (೬೬%) ರಷ್ಟು ಕುಟುಂಬಗಳು ವರದಕ್ಷಿಣೆಗೆ ಮಹತ್ವ ನೀಡುವುದಿಲ್ಲ ಎಂದು ಹೇಳಿದ್ದಾರೆ.

ಮರಾಟಿ ಸಮುದಾಯದ ೧೫೦ ಕುಟುಂಬಗಳನ್ನು ಸಮೀಕ್ಷೆಗೊಳಪಡಿಸಿದಾಗ ೩೩ (೨೨%) ಕುಟುಂಬಗಳು ವರದಕ್ಷಿಣೆಗೆ ಮಹತ್ವ ನೀಡುತ್ತಿರುವ ಬಗೆಗೆ ತಿಳಿಸಿದರೆ ೧೧೭ (೭೮%) ಕುಟುಂಬಗಳು ವರದಕ್ಷಿಣೆಗೆ ಮಹತ್ವ ನೀಡುವುದಿಲ್ಲ ಎಂದು ಹೇಳಿಕೊಂಡಿವೆ.

• ಉಡುಪಿ ಜಿಲ್ಲೆಯ ಮರಾಟಿ ನಾಯ್ಕ ಮತ್ತು ಮರಾಟಿ ಸಮುದಾಯಗಳ ೩೦೦ ಕುಟುಂಬಗಳ ತಿಳುವಳಿಕೆದಾರರು ತಮ್ಮ ಮಕ್ಕಳ ವಿವಾಹ ಸಂದರ್ಭದಲ್ಲಿ ವರದಕ್ಷಿಣೆಗೆ ಮಹತ್ವ ನೀಡುವ ಬಗೆಗೆ ಮಾಹತಿ ಪಡೆದಾಗ ಮಹತ್ವ ನೀಡದಿರುವವರ ಸಂಖ್ಯೆ ಹೆಚ್ಚಾಗಿರುವುದು ಕಂಡುಬರುತ್ತದೆ.

ಕೋಷ್ಟಕ: ೩.೧೪

ತಿಳುವಳಿಕೆದಾರರು ಹೆಣ್ಣು ಮಕ್ಕಳ ಮದುವೆಯಲ್ಲಿ ವರದಕ್ಷಿಣೆ ನೀಡಲು ಮತ್ತು ಗಂಡು ಮಕ್ಕಳ ಮದುವೆಯಲ್ಲಿ ಪಡೆಯಲು ಇರುವ ಕಾರಣಗಳ ವಿವರ

ಸಮುದಾಯದ ಹೆಸರು	ತಾಲೂಕು	ಹೆಣ್ಣು ಮಕ್ಕಳಿಗೆ ವರದಕ್ಷಿಣೆ ನೀಡಲು ಕಾರಣ					ಗಂಡು ಮಕ್ಕಳಿಗೆ ವರದಕ್ಷಿಣೆ ಪಡೆಯಲು ಕಾರಣಗಳು					ಒಟ್ಟು
		ತಮ್ಮ ಹೆಣ್ಣು ಮಕ್ಕಳಿಗೆ ಕೊಡಬೇಕಾದ ಪರಿಸ್ಥಿತಿ ನಿರ್ಮಾಣ ಆಗಿದೆ	ಭಿನ್ನಾಭಿಪ್ರಾಯ ಬರಬಾರದೆಂಬ ಭಾವನೆಯಿಂದ ನೀಡುತ್ತೇವೆ	ಮಕ್ಕಳ ಮುಂದಿನ ಜೀವನ ಸುಖವಾಗಿರಬೇಕೆಂಬ ಆಶಯ	ಸಂಪ್ರದಾಯ ವಾಗಿದೆ	ಒಟ್ಟು	ಆರ್ಥಿಕವಾಗಿ ದುರ್ಬಲ	ಪ್ರತಿಷ್ಠೆಯಾಗಿದೆ	ವರನ ನೌಕರಿ	ಶಿಕ್ಷಣ	ಪಡೆಯದಿದ್ದರೆ ಹೆಣ್ಣಿನ ಕಡೆಯಿಂದ ಸಂಶಯದಿಂದ ನೋಡುವರು	
ಮರಾಟಿ ನಾಯ್ಕ	ಕುಂದಾಪುರ	೧೦	೨೩	೦೯	೦೮	೫೦	೧೩	೦೭	೧೨	೧೦	೦೮	೫೦
	ಉಡುಪಿ	೧೩	೧೭	೧೦	೧೦	೫೦	೦೪	೨೧	೦೮	೦೫	೧೨	೫೦
	ಕಾರ್ಕಳ	೧೬	೧೩	೧೪	೦೭	೫೦	೦೬	೨೪	೦೫	೦೨	೧೩	೫೦
	ಒಟ್ಟು	೩೯	೫೩	೩೩	೨೫	೧೫೦	೨೩	೫೨	೨೫	೧೭	೩೩	೧೫೦
	ಶೇಕಡವಾರು	೨೬	೩೫.೩೩	೨೨.೦೦	೧೬.೬೭	೧೦೦	೧೫.೩೩	೩೪.೬೭	೧೬.೬೭	೧೧.೩೩	೨೨.೦೦	೧೦೦
ಮರಾಟೆ	ಕಾರ್ಕಳ	೪೦	೩೭	೪೨	೩೧	೧೫೦	೫೧	೩೪	೨೭	೧೮	೨೦	೧೫೦
	ಶೇಕಡವಾರು	೨೬.೬೭	೨೪.೬೭	೨೮.೦೦	೨೦.೬೬	೧೦೦	೩೪.೦೦	೨೨.೬೭	೧೮.೦೦	೧೨.೦೦	೧೩.೩೩	೧೦೦

ಆಧಾರ: ಮರಾಟಿ ನಾಯ್ಕ ೧೫೦ ಕುಟುಂಬಗಳು, ಮರಾಟೆ ೧೫೦ ಕುಟುಂಬಗಳ ಸಮೀಕ್ಷೆ.ಪ್ರಾಥಮಿಕ ಮಾಹಿತಿಗಳ ಆಧಾರದಲ್ಲಿ ರಚಿತವಾದ ಕೋಷ್ಟಕ

ಕೋಷ್ಟಕ ೩.೧೪ರಲ್ಲಿ ತಿಳುವಳಿಕೆದಾರರ ಹೆಣ್ಣು ಮಕ್ಕಳ ಮದುವೆ ಸಂದರ್ಭದಲ್ಲಿ ವರದಕ್ಷಿಣೆ ನೀಡುವ ಮತ್ತು ಗಂಡು ಮಕ್ಕಳು ಪಡೆಯುವ ಸಾಮಾನ್ಯ ಕಾರಣಗಳ ಬಗೆಗೆ ತಿಳಿದುಕೊಳ್ಳಲಾಗಿದೆ.

ಈ ವಿಷಯಕ್ಕೆ ಸಂಬಂಧಿಸಿದಂತೆ ಕುಂದಾಪುರ, ಉಡುಪಿ, ಕಾರ್ಕಳ ತಾಲೂಕುಗಳ ವ್ಯಾಪ್ತಿಯಲ್ಲಿ ಬರುವ ೧೫೦ ಮರಾಟಿ ನಾಯ್ಕ ಕುಟುಂಬಗಳನ್ನು ಸಮೀಕ್ಷೆಗೊಳಪಡಿಸಿದಾಗ ಹೆಣ್ಣು ಮಕ್ಕಳ ಮದುವೆ ಸಂದರ್ಭದಲ್ಲಿ ತಮ್ಮ ಹೆಣ್ಣು ಮಕ್ಕಳಿಗೆ ವರದಕ್ಷಿಣೆ ಕೊಡಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ೩೯ (೨೬%) ರಷ್ಟು ಕುಟುಂಬಗಳು ತಿಳಿಸಿದರೆ, ಭಿನ್ನಾಭಿಪ್ರಾಯಗಳು ಬರಬಾರದೆಂಬ ಕಾರಣಕ್ಕಾಗಿ ವರದಕ್ಷಿಣೆ ನೀಡುತ್ತೇವೆ ಎಂದು ೫೩ (೩೫.೩೩%) ರಷ್ಟು ಕುಟುಂಬಗಳು, ಹೆಣ್ಣು ಮಕ್ಕಳ ಮುಂದಿನ ಜೀವನ ಸುಖವಾಗಿರಬೇಕೆಂಬ ಕಾರಣದಿಂದ ವರದಕ್ಷಿಣೆ ನೀಡುತ್ತೇವೆ ಎಂದು ೩೩ ಕುಟುಂಬಗಳು ತಿಳಿಸಿವೆ. (೨೨.೦೦%) ರಷ್ಟು ಕುಟುಂಬಗಳು ತಮ್ಮ ಹೆಣ್ಣು ಮಕ್ಕಳ ಮದುವೆ ಸಂದರ್ಭದಲ್ಲಿ ವರದಕ್ಷಿಣೆ ಅನಿವಾರ್ಯವಾಗಿ ನೀಡಬೇಕಾಗಿದೆ ಎಂಬ ಅಂಶ ಕಂಡುಬಂದಿದೆ. ವರದಕ್ಷಿಣೆ ನೀಡುವುದು ಸಂಪ್ರದಾಯ ಎಂಬ ಕಾರಣವನ್ನು ೨೫ (೧೬.೬೭%) ರಷ್ಟು ಕುಟುಂಬಗಳು ಹೇಳಿವೆ.

೧೫೦ ಮರಾಟಿ ನಾಯ್ಕ ಕುಟುಂಬಗಳಲ್ಲಿ ನಿಮ್ಮ ಗಂಡು ಮಕ್ಕಳ ಮದುವೆಗಳಲ್ಲಿ ವರದಕ್ಷಿಣೆ ಪಡೆಯಲು ಕಾರಣವೇನು ಎಂದು ಕೇಳಿದಾಗ ಆರ್ಥಿಕತೆ ದುರ್ಬಲವಾಗಿದೆ ಎಂದು ೨೩ (೧೫.೩೩%) ರಷ್ಟು ಕುಟುಂಬಗಳು ಹೇಳಿಕೆ ಕೊಟ್ಟರೇ, ಪ್ರತಿಷ್ಠೆ ಎಂಬ ಕಾರಣದಿಂದ ೫೨ (೩೪.೬೭%) ರಷ್ಟು ಕುಟುಂಬಗಳು ವರದಕ್ಷಿಣೆ ಪಡೆಯಲು ಕಾರಣ ಎಂದು ತಿಳಿಸಿವೆ. ಉಳಿದಂತೆ ವರನ ನೌಕರಿಯಿಂದ ೨೫ (೧೬.೬೭%) ರಷ್ಟು ಕುಟುಂಬಗಳು ವರದಕ್ಷಿಣೆ ಪಡೆದರೆ, ಕೀಳರಿಮೆ ಎಂಬ ಕಾರಣದಿಂದ ೧೭ (೧೧.೩೩%) ರಷ್ಟು ಕುಟುಂಬಗಳು ಮತ್ತು ೩೩ (೨೨%) ರಷ್ಟು ಕುಟುಂಬಗಳು ಪಡೆಯದಿದ್ದರೆ ಹೆಣ್ಣಿನವರು ಗಂಡಿನಲ್ಲಿ ಏನೊ ಸಮಸ್ಯೆ ಇರಬಹುದೆಂದು ಸಂಶಯದಿಂದ ನೋಡುತ್ತಾರೆ. ಈ ಕಾರಣಗಳಿಗೆ ವರದಕ್ಷಿಣೆ ಪಡೆಯುತ್ತೇವೆ ಎಂದು ಹೇಳಿರುವರು.

ಈ ವಿಷಯಕ್ಕೆ ಸಂಬಂಧಿಸಿದಂತೆ ೧೫೦ ಮರಾಟಿ ಸಮುದಾಯದ ಕುಟುಂಬಗಳನ್ನು ಸಮೀಕ್ಷೆಗೊಳಪಡಿಸಿದಾಗ ೪೦ (೨೬.೬೭%) ರಷ್ಟು ಕುಟುಂಬಗಳು ತಮ್ಮ ಹೆಣ್ಣು ಮಕ್ಕಳಿಗೆ ವರದಕ್ಷಿಣೆ ಕೊಡಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು, ಭಿನ್ನಾಭಿಪ್ರಾಯ ಬರಬಾರದೆಂದು ೩೭ (೨೪.೬೭%) ರಷ್ಟು ಕುಟುಂಬಗಳು ವರದಕ್ಷಿಣೆ ನೀಡುತ್ತಿವೆ. ಮಕ್ಕಳ ಮುಂದಿನ ಜೀವನ ಸುಖಕರವಾಗಿರಲಿ ಎಂದು ೪೨ (೨೮%) ರಷ್ಟು ಕುಟುಂಬಗಳು ವರದಕ್ಷಿಣೆ ನೀಡಲು ಕಾರಣಗಳನ್ನು ತಿಳಿಸಿದರೆ, ವರದಕ್ಷಿಣೆ ಸಂಪ್ರದಾಯವಾಗಿದೆ ಎಂಬ ಕಾರಣದಿಂದ ೩೧ (೨೦.೬೬%) ರಷ್ಟು ಕುಟುಂಬಗಳು ತಿಳಿಸಿವೆ.


ಅದೇ ರೀತಿ ಗಂಡು ಮಕ್ಕಳು ಈ ೧೫೦ ಮರಾಟಿ ಕುಟುಂಬಗಳಲ್ಲಿ ವರದಕ್ಷಿಣೆ ಪಡೆಯಲು ಇರುವ ಕಾರಣಗಳನ್ನು ನೋಡಿದರೆ ಆರ್ಥಿಕವಾಗಿ ದುರ್ಬಲವೆಂಬ ಕಾರಣಗಳಿಂದ ೫೧ (೩೪%) ರಷ್ಟು ಕುಟುಂಬಗಳು ವರದಕ್ಷಿಣೆ ಪಡೆದರೆ, ವರದಕ್ಷಿಣೆ ಪಡೆಯುವದು ಪ್ರತಿಷ್ಠೆ ಈ ಕಾರಣದಿಂದ ಪಡೆಯುತ್ತಿದ್ದೇವೆ. ೩೪ ಕುಟುಂಬಗಳು ಅಭಿಪ್ರಾಯ. ವರನಿಗೆ ನೌಕರಿ ಇದೆ ಎಂದು ೨೭ (೧೮%) ಕುಟುಂಬಗಳು ವರದಕ್ಷಿಣೆ ಪಡೆಯುತ್ತಿರುವುದು ಕಂಡು ಬಂದಿದೆ. ವರದಕ್ಷಿಣೆ ತೆಗೆದುಕೊಳ್ಳದಿದ್ದರೆ, ಕೀಳರಿಮೆ ಎಂದು ೧೮ (೧೨%) ರಷ್ಟು ಕುಟುಂಬಗಳು ಕಾರಣ ಕೊಟ್ಟರೆ ೨೦ (೧೩.೩೩%) ರಷ್ಟು ಕುಟುಂಬಗಳು ವರದಕ್ಷಿಣೆ ಪಡೆಯದಿದ್ದರೆ ಹೆಣ್ಣಿನವರು ಸಂಶಯದಿಂದ ನೋಡುತ್ತಾರೆ ಎಂಬ ಕಾರಣಗಳಿಂದ ವರದಕ್ಷಿಣೆ ಪಡೆಯುತ್ತೇವೆ ಎಂದು ಹೇಳಿದ್ದಾರೆ.

• ಉಡುಪಿ ಜಿಲ್ಲೆಯ ಮರಾಟಿ ನಾಯ್ಕ ಮತ್ತು ಮರಾಟಿ ಸಮುದಾಯಗಳ ಹೆಣ್ಣು ಮತ್ತು ಗಂಡು ಮಕ್ಕಳ ಮದುವೆ ಸಂದರ್ಭದಲ್ಲಿ ವರದಕ್ಷಿಣೆ ನೀಡಲು ಮತ್ತು ಪಡೆಯಲು ಕಾರಣಗಳನ್ನು ತುಲನಾತ್ಮಕವಾಗಿ ನೋಡಿದಾಗ ಹೆಣ್ಣು ಮಕ್ಕಳ ಮದುವೆ ನಂತರ ಯಾವುದೇ ಭಿನ್ನಾಭಿಪ್ರಾಯಗಳು ಬರಬಾರದೆಂಬ ಕಾರಣಗಳು ಹೆಚ್ಚಾಗಿದ್ದರೇ, ಗಂಡು ಮಕ್ಕಳ ವರದಕ್ಷಿಣೆ ಪಡೆಯಲು ಆರ್ಥಿಕ ಸಮಸ್ಯೆ ಮತ್ತು ನೌಕರಿ ಇರುವ ಕಾರಣದಿಂದ ಪಡೆಯುವುದು ಹೆಚ್ಚಿನ ಪ್ರಮಾಣದಲ್ಲಿ ಕಂಡುಬಂದಿದೆ.

ಕೋಷ್ಟಕ: ೩.೧೫

ಮರಾಟಿ ನಾಯ್ಕ ಮತ್ತು ಮರಾಟಿ ಸಮುದಾಯಗಳ ತಿಳುವಳಿಕೆದಾರರ ಕುಟುಂಬದ ಗಾತ್ರಗಳ ವಿವರ

ಸಮುದಾಯದ ಹೆಸರು	ತಾಲೂಕು	ಕುಟುಂಬದ ಗಾತ್ರ (ಸದಸ್ಯರ ಸಂಖ್ಯೆ) ವಿಧಗಳು ವಿವರ			
		(ವಿಭಕ್ತ) ೦೧-೦೪	(ಅವಿಭಕ್ತ) ೦೫-೦೮	(ವಿಸ್ತೃತ) ೦೯-೧೨	ಒಟ್ಟು
ಮರಾಟಿ ನಾಯ್ಕ	ಕುಂದಾಪುರ	೨೬	೨೧	೦೩	೫೦
	ಉಡುಪಿ	೩೦	೧೭	೦೩	೫೦
	ಕಾರ್ಕಳ	೨೧	೨೫	೦೪	೫೦
	ಒಟ್ಟು	೭೭	೬೩	೧೦	೧೫೦
	ಶೇಕಡವಾರು	೫೧.೩೩%	೪೨%	೦೬.೬೭%	೧೦೦%
ಮರಾಟಿ	ಕಾರ್ಕಳ ತಾ.	೧೧೩	೩೩	೦೪	೧೫೦
	ಶೇಕಡವಾರು	೭೫.೩೩%	೨೨%	೦೨.೬೭%	೧೦೦%



ಕುಂದಾಪುರ, ಉಡುಪಿ, ಕಾರ್ಕಳ ತಾಲೂಕಿನ ವ್ಯಾಪ್ತಿಯಲ್ಲಿ ಬರುವ ಮರಾಟಿ ನಾಯ್ಕ ಮತ್ತು ಮರಾಟಿ ಸಮುದಾಯಗಳ ಒಟ್ಟು ೩೦೦ ಕುಟುಂಬಗಳಲ್ಲಿ ಸಮೀಕ್ಷೆಗೊಳಪಟ್ಟ ಮರಾಟಿ ನಾಯ್ಕ ಮತ್ತು ಮರಾಟಿ ಸಮುದಾಯದ ತಿಳುವಳಿಕೆದಾರರ ಕುಟುಂಬದ ಗಾತ್ರಗಳನ್ನು ಗಮನಿಸಿದಾಗ, ಕುಂದಾಪುರ ತಾಲೂಕಿನಲ್ಲಿ ಮರಾಟಿ ನಾಯ್ಕರ ಕುಟುಂಬದ ಸಂಖ್ಯೆ ೧ ರಿಂದ ೪ರ ವರೆಗೆ ಒಟ್ಟು ೨೬ ಕುಟುಂಬಗಳು, ೫ ರಿಂದ ೮ರ ಒಟ್ಟು ೨೧ ಕುಟುಂಬಗಳು ಹಾಗೂ ವಿಸ್ತೃತ ೯ ರಿಂದ ೧೨ ಒಟ್ಟು ೩ ಕುಟುಂಬಗಳನ್ನು ಕಾಣಬಹುದು. ಹಾಗೆ ಉಡುಪಿ ತಾಲೂಕಿನಲ್ಲಿ ವಿಭಕ್ತ ೧ ರಿಂದ ೪ರ ವರೆಗಿನ ಒಟ್ಟು ೩೦ ಕುಟುಂಬಗಳು, ಅವಿಭಕ್ತ ೫–೮ರ ಒಟ್ಟು ೧೭ ಹಾಗೂ ವಿಸ್ತೃತ ೯–೧೨ರ ಒಟ್ಟು ೩ ಕುಟುಂಬಗಳನ್ನು ಕಾಣಬಹುದು. ಕಾರ್ಕಳ ತಾಲೂಕಿನಲ್ಲಿ ವಿಭಕ್ತ ೧–೪ರ ೨೧ ಕುಟುಂಬಗಳು, ಅವಿಭಕ್ತ ೫–೮ರ ಒಟ್ಟು ೨೫ ಕುಟುಂಬಗಳು ಹಾಗೂ ವಿಸ್ತೃತ ೯–೧೨ರ ಒಟ್ಟು ೪ ಕುಟುಂಬಗಳನ್ನು ಕಾಣಬಹುದು.

ಕಾರ್ಕಳ ತಾಲೂಕಿನ ಮರಾಟಿ ಸಮುದಾಯದ ವಿಭಕ್ತ ೧ ರಿಂದ ೪ರ ಒಟ್ಟು ೧೧೩ ಕುಟುಂಬಗಳು, ಅವಿಭಕ್ತ ೫–೮ರ ಒಟ್ಟು ೩೩ ಕುಟುಂಬಗಳು ಮತ್ತು ವಿಸ್ತೃತ ೯–೧೨ರ ಒಟ್ಟು ೪ ಕುಟುಂಬಗಳನ್ನು ಕಾಣಬಹುದಾಗಿದೆ.


• ಉಡುಪಿ ಜಿಲ್ಲೆಯ ಮರಾಟಿ ನಾಯ್ಕ ಮತ್ತು ಮರಾಟಿ ಸಮುದಾಯದ ಕುಟುಂಬದ ಗಾತ್ರಗಳ ಬಗೆಗೆ ತುಲನಾತ್ಮಕವಾಗಿ ಗಮನಿಸಿದಾಗ ಅವಿಭಕ್ತ ಮತ್ತು ವಿಸ್ತೃತ ಗಾತ್ರಕ್ಕಿಂತ ವಿಭಕ್ತ ಕುಟುಂಬಗಳ ಸಂಖ್ಯೆಯೇ ಹೆಚ್ಚಾಗಿ ಕಂಡು ಬರುತ್ತವೆ ಎಂದು ಹೇಳಬಹುದು.

ಕೋಷ್ಟಕ: ೩.೧೬

ಮರಾಟಿ ನಾಯ್ಕ ಮತ್ತು ಮರಾಟಿ ಸಮುದಾಯಗಳ ಕುಟುಂಬ ಸದಸ್ಯರುಗಳ ವಯೋಮಾನದ ವಿವರ

ಸಮುದಾಯದ ಹೆಸರು	ತಾಲೂಕುಗಳು	ವಯೋಮಾನದ ವಿವರ (ವರ್ಷಗಳಲ್ಲಿ)									
		೦೦-೦೬	೦೭-೧೭	೧೮-೨೫	೨೬-೩೫	೩೬-೪೦	೪೧-೫೦	೫೧-೬೦	೬೧-೮೦ ವರ್ಷ ಮೇಲ್ಪಟ್ಟ	೮೧ ವರ್ಷ ಮೇಲ್ಪಟ್ಟ	ಒಟ್ಟು
ಮರಾಟಿ ನಾಯ್ಕ	ಕುಂದಾಪುರ	೨೦	೪೦	೨೯	೪೮	೨೬	೩೫	೧೨	೨೬	೦೧	೨೩೭
	ಉಡುಪಿ	೧೬	೧೫	೩೦	೫೦	೧೯	೩೬	೩೦	೨೭	೦೧	೨೨೪
	ಕಾರ್ಕಳ	೧೭	೩೮	೩೪	೪೭	೨೩	೩೨	೨೭	೨೮	೦೨	೨೪೮
	ಒಟ್ಟು	೫೩	೯೩	೯೩	೧೪೫	೬೮	೧೦೩	೬೯	೮೧	೦೪	೭೦೯
	ಶೇಕಡವಾರು	೦೭.೪೮	೧೩.೧೨	೧೩.೧೨	೨೦.೪೫	೦೯.೫೯	೧೪.೫೩	೦೯.೭೩	೧೧.೪೨	೦.೫೬	೧೦೦
ಮರಾಟಿ	ಒಟ್ಟು	೨೩	೯೨	೮೮	೮೩	೬೫	೧೧೬	೭೮	೬೫	೦೮	೬೧೮
	ಶೇಕಡವಾರು	೦೩.೭೨	೧೪.೮೯	೧೪.೨೪	೧೩.೪೩	೧೦.೫೨	೧೮.೭೭	೧೨.೬೨	೧೦.೫೨	೦೧.೨೯	೧೦೦

ಆಧಾರ: ಮರಾಟಿ ನಾಯ್ಕ ೧೫೦ ಕುಟುಂಬಗಳು, ಮರಾಟಿ ೧೫೦ ಕುಟುಂಬಗಳ ಸಮೀಕ್ಷೆ. ಪ್ರಾಥಮಿಕ ಮಾಹಿತಿಗಳ ಆಧಾರದಲ್ಲಿ ರಚಿತವಾದ ಕೋಷ್ಟಕ



ಕುಂದಾಪುರ ತಾಲೂಕಿನಲ್ಲಿ ಮರಾಟಿ ನಾಯ್ಕ ಸಮುದಾಯದಲ್ಲಿ ಸಮೀಕ್ಷೆಗೊಳಪಟ್ಟ ಕುಟುಂಬಗಳ ಜನಸಂಖ್ಯೆಯನ್ನು ಗಮನಿಸಿದಾಗ ೬ ವರ್ಷದ ಒಳಗಿನವರು ೨೦ ಜನ, ೭ ರಿಂದ ೧೭ ವರ್ಷದ ಒಳಗೆ ೪೦ ಜನ ಹಾಗೆ ೧೮ ರಿಂದ ೨೫ ವರ್ಷದ ಒಳಪಟ್ಟವರು ೨೯ ಜನರಿದ್ದಾರೆ. ೨೬ ರಿಂದ ೩೫ ವರ್ಷದ ಒಳಗೆ ೪೮ ಜನ, ೩೬ ರಿಂದ ೪೦ ವರ್ಷದ ಒಳಗೆ ೨೬ ಜನ, ೪೧ ರಿಂದ ೫೦ ಮತ್ತು ಮುಂದುವರಿದ ಭಾಗ ೮೦ ವರ್ಷ ಮೇಲ್ಪಟ್ಟವರ ಸಂಖ್ಯೆ ೨೬ ಹಾಗೆ ೮೧ ವರ್ಷ ಮೇಲ್ಪಟ್ಟವರು ೧ ಒಟ್ಟು ೨೩೭ ಜನರಿದ್ದಾರೆ.

ಉಡುಪಿ ತಾಲೂಕಿನಲ್ಲಿ ಮರಾಟಿ ನಾಯ್ಕ ಸಮುದಾಯದವರ ಕುಟುಂಬಗಳ ಜನಸಂಖ್ಯೆಯನ್ನು ಗಮನಿಸಿದಾಗ ೬ ವರ್ಷದ ಒಳಗಿನವರು ೧೬ ಜನ, ೭ ರಿಂದ ೧೭ ವರ್ಷದ ಒಳಗೆ ೧೫ ಜನ ಹಾಗೆ ೧೮ ರಿಂದ ೨೫ ವರ್ಷ ಒಳಪಟ್ಟವರು ೩೦ ಜನರಿದ್ದಾರೆ. ೨೬ ರಿಂದ ೩೫ ವರ್ಷದ ಒಳಗೆ ೫೦ ಜನ, ೩೬ ರಿಂದ ೪೦ ವರ್ಷದ ಒಳಗೆ ೧೯ ಜನ, ೪೧ ರಿಂದ ೫೦ ವರ್ಷದ ಒಳಗೆ ೩೬ ಜನ, ೫೧ ರಿಂದ ೬೦ವರ್ಷ ಒಳಪಟ್ಟವರು. ೩೦, ೬೧ ರಿಂದ ೮೦ ವರ್ಷ ಮೇಲ್ಪಟ್ಟವರ ಸಂಖ್ಯೆ ೨೭ ಹಾಗೆ ೮೧ ವರ್ಷ ಮೇಲ್ಪಟ್ಟವರು ೧, ಒಟ್ಟು ೨೨೪ ಜನರಿದ್ದಾರೆ.

ಕಾರ್ಕಳ ತಾಲೂಕಿನಲ್ಲಿ ಮರಾಟಿ ನಾಯ್ಕ ಸಮುದಾಯದಲ್ಲಿ ಸಮೀಕ್ಷೆಗೊಳಪಡಿಸಿದ ಕುಟುಂಬಗಳ ಜನಸಂಖ್ಯೆ ವಿವರಗಳನ್ನು ಗಮನಿಸಿದಾಗ ೬ವರ್ಷದ ಒಳಗಿನವರು ೧೭ ಜನ, ೭ ರಿಂದ ೧೭ ವರ್ಷದ ಒಳಗೆ ೩೮ ಜನ ಹಾಗೆ ೧೮ ರಿಂದ ೨೫ ವರ್ಷದ ಒಳಪಟ್ಟವರು ೩೪ ಜನರಿದ್ದಾರೆ. ೨೬ ರಿಂದ ೩೫ ವರ್ಷದ ಒಳಗೆ ೪೭ ಜನ, ೩೬ ರಿಂದ ೪೦ ವರ್ಷದ ಒಳಗೆ ೨೩ ಜನ, ೪೧ ರಿಂದ ೫೦ ವರ್ಷದ ಒಳಗೆ ೩೨ ಜನ, ೫೧ ರಿಂದ ೬೦ ವರ್ಷ ಒಳಪಟ್ಟವರು ೨೭, ೬೧ ರಿಂದ ೮೦ ವರ್ಷ ಮೇಲ್ಪಟ್ಟವರ ಸಂಖ್ಯೆ ೨೮ ಹಾಗೆ ೮೧ ವರ್ಷ ಮೇಲ್ಪಟ್ಟವರು ೨, ಒಟ್ಟು ೨೪೮ ಜನರಿದ್ದಾರೆ.

ಕುಂದಾಪುರ, ಉಡುಪಿ, ಕಾರ್ಕಳ ತಾಲೂಕಿನ ಸಮೀಕ್ಷೆಗೊಳಪಡಿಸಿದ ಒಟ್ಟು ಮರಾಟಿ ನಾಯ್ಕ ಸಮುದಾಯದ ಜನ ಸಂಖ್ಯೆ ೬ ವರ್ಷದ ಒಳಗೆ ೫೩, ೭ ರಿಂದ ೧೭ ವರ್ಷದ ಒಳಗೆ ೯೩ ಜನ, ೧೮ ರಿಂದ ೨೫ ವರ್ಷದ ಒಳಗಿನವರು ೯೩ ಜನ, ೨೬ ರಿಂದ ೩೫ ವರ್ಷದ ಒಳಗೆ ೧೪೫

ಹಾಗೆ ೩೬ ರಿಂದ ೪೦ ವರ್ಷದ ಒಳಗೆ ೬೮ ಜನ, ೪೧ ರಿಂದ ೫೦ ವರ್ಷದ ಒಳಗೆ ೧೦೩ ಜನ, ೫೧ ರಿಂದ ೬೦ ವರ್ಷದ ಒಳಗೆ ೬೯, ೬೧ ರಿಂದ ೮೦ ವರ್ಷ ಮೇಲ್ಪಟ್ಟವರು ೮೧, ೮೧ ವರ್ಷದ ಮೇಲ್ಪಟ್ಟವರ ಸಂಖ್ಯೆ ೪, ಒಟ್ಟು ೭೦೯.


ಸಮೀಕ್ಷೆಗೊಳಪಟ್ಟ ಮರಾಟಿ ಸಮುದಾಯದ ಒಟ್ಟು ಜನಸಂಖ್ಯೆ ೬ ವರ್ಷದ ಒಳಗಿನವರು ೨೩, ೭ ರಿಂದ ೧೭ ವರ್ಷದ ಒಳಗೆ ೯೨ ಜನ, ೧೮ ರಿಂದ ೨೫ ವರ್ಷದ ಒಳಗೆ ೮೮ ಜನ, ೨೬ ರಿಂದ ೩೫ ವರ್ಷದ ಒಳಗೆ ೮೩ ಜನ, ೩೬ ರಿಂದ ೪೦ ವರ್ಷದ ಒಳಗೆ ೬೫ ಜನ, ೪೧ ರಿಂದ ೫೦ ವರ್ಷದ ಒಳಗೆ ೧೧೬ ಜನ, ೫೧ ರಿಂದ ೬೦ ವರ್ಷದ ಒಳಗೆ ೭೮ ಜನ, ಹಾಗೆಯೇ ೬೧ ರಿಂದ ೮೦ ವರ್ಷ ಮೇಲ್ಪಟ್ಟವರು ೬೫, ೮೧ ವರ್ಷದ ಮೇಲ್ಪಟ್ಟವರು ೮, ಒಟ್ಟು ಜನಸಂಖ್ಯೆ ೬೧೮.

• ಉಡುಪಿ ಜಿಲ್ಲೆಯ ಮರಾಟಿ ನಾಯ್ಕ ಮತ್ತು ಮರಾಟಿ ಸಮುದಾಯಗಳ ಕುಟುಂಬ ಸದಸ್ಯರುಗಳ ವಯೋಮಾನ ಕುರಿತು ಗಮನಿಸಿದಾಗ ೨೬ ರಿಂದ ೩೫ ವಯಸ್ಸಿನವರು ಹೆಚ್ಚಾಗಿ ಕಂಡುಬಂದಿದ್ದು, ೦೭ ರಿಂದ ೧೭ರ ವಯೋಮಾನದವರ ತುಂಬಾ ಕಡಿಮೆಯಾಗಿದ್ದು, ಅಷ್ಟೇ ಅಲ್ಲದೇ ೬೧–೮೦ ವಯೋಮಾನದವರೂ ಸಹ ಕಡಿಮೆ ಸಂಖ್ಯೆಯಲ್ಲಿರುವುದನ್ನು ಕಾಣಬಹುದು. ೮೧ ವರ್ಷ ಮೇಲ್ಪಟ್ಟವರು ಅತೀ ಕಡಿಮೆ ಇರುವುದು ತಿಳಿದುಬರುತ್ತದೆ.

ಕೋಷ್ಟಕ: ೪.೧೭

ಮರಾಟಿ ನಾಯ್ಕ ಮತ್ತು ಮರಾಟಿ ಸಮುದಾಯಗಳ ಕುಟುಂಬ ಸದಸ್ಯರುಗಳ ಲಿಂಗವಾರು ವಿವರ

ಸಮುದಾಯದ ಹೆಸರು	**ತಾಲೂಕು**	**ಲಿಂಗವಾರು ಹಂಚಿಕೆಯ ವಿವರ**		
		ಗಂಡಸರು	**ಹೆಂಗಸರು**	**ಒಟ್ಟು**
ಮರಾಟಿ ನಾಯ್ಕ	ಕುಂದಾಪುರ	೧೨೬	೧೧೧	೨೩೭
	ಉಡುಪಿ	೧೧೯	೧೦೫	೨೨೪
	ಕಾರ್ಕಳ	೧೨೭	೧೨೧	೨೪೮
	ಒಟ್ಟು	೩೭೨	೩೩೭	೭೦೯
	ಶೇಕಡವಾರು	**೫೨.೪೭**	**೪೭.೫೩**	೧೦೦
ಮರಾಟಿ	ಕಾರ್ಕಳ ತಾಲೂಕು	೩೦೬	೩೧೨	೬೧೮
	ಶೇಕಡವಾರು	**೪೯.೫೧%**	**೫೦.೪೯%**	೧೦೦



ಅಧ್ಯಯನಕ್ಕೊಳಪಡಿಸಿದ ಉಡುಪಿ ಜಿಲ್ಲೆಯ ಮರಾಟಿ ನಾಯ್ಕ ಮತ್ತು ಮರಾಟಿ ಸಮುದಾಯದ ಕುಟುಂಬ ಸದಸ್ಯರನ್ನು ಲಿಂಗಾವಾರು ಗಮನಿಸಿದಾಗ, ಮರಾಟಿ ನಾಯ್ಕರು ಕುಂದಾಪುರ ತಾಲೂಕಿನಲ್ಲಿ ಗಂಡಸರು ೧೨೬ ಮತ್ತು ಹೆಂಗಸರು ೧೧೧ರಂತೆ ಇದ್ದು, ಒಟ್ಟು ೨೩೭ ಸದಸ್ಯರನ್ನು ಹೊಂದಿದ್ದಾರೆ. ಹಾಗೆಯೇ ಉಡುಪಿ ತಾಲೂಕಿನಲ್ಲಿ ಗಂಡಸರು ೧೧೯ ಮತ್ತು ಹೆಂಗಸರು ೧೦೫ ರಂತಿದ್ದು, ಒಟ್ಟು ಸದಸ್ಯರ ಸಂಖ್ಯೆ ೨೨೪ ಆಗಿದೆ. ಹಾಗೆಯೇ ಕಾರ್ಕಳ ತಾಲೂಕಿನಲ್ಲಿ ಗಂಡಸರು ೧೨೭ ಮತ್ತು ಹೆಂಗಸರು ೧೨೧ರಂತೆ ಒಟ್ಟು ೨೪೮ ಸದಸ್ಯರನ್ನೊಳಗೊಂಡಿದೆ. ಕುಂದಾಪುರ, ಉಡುಪಿ ಮತ್ತು ಕಾರ್ಕಳ ತಾಲೂಕಿನಲ್ಲಿ ಒಟ್ಟು ಗಂಡಸರ ಸಂಖ್ಯಾ ಬಲವು ೩೭೨ ಮತ್ತು ಹೆಂಗಸರು ಸಂಖ್ಯಾ ಬಲವು ೩೩೭ ಇದ್ದು, ಒಟ್ಟು ಸದಸ್ಯರ ಸಂಖ್ಯೆ ೭೦೯ ಆಗಿರುತ್ತದೆ. ಇಲ್ಲಿ ಗಮನಿಸಬೇಕಾದ ಒಂದು ಅಂಶವೆಂದರೆ ಪ್ರತಿ ತಾಲೂಕಿನಲ್ಲಿಯೂ ಹೆಂಗಸರ ಸಂಖ್ಯಾ ಬಲವೂ ಗಂಡಸರಿಗಿಂತ ಕಡಿಮೆ ಇರುವುದು ಗೋಚರಿಸುತ್ತದೆ. ಶೇಕಡಾವಾರು ತಿಳಿಸುವುದಾದರೆ ಗಂಡಸರು ೫೨.೪೭% ಹಾಗೂ ಹೆಂಗಸರು ೪೭.೫೩% ಹಾಗೆಯೇ ಮರಾಟಿ ಸಮುದಾಯವನ್ನು ಗಮನಿಸಿದರೆ, ಕಾರ್ಕಳ ತಾಲೂಕಿನಲ್ಲಿ ಗಂಡಸರು ೩೦೬ ಹಾಗೂ ಹೆಂಗಸರು ೩೧೨ರಂತೆ ಸಂಖ್ಯಾ ಬಲ ಹೊಂದಿದ್ದು, ಒಟ್ಟು ೬೧೮ ಸದಸ್ಯರಿದ್ದಾರೆ. ಗಂಡಸರು ಶೇಕಡ ೪೯.೫೧% ಮತ್ತು ಹೆಂಗಸರು ೫೦.೪೯% ರಷ್ಟು ಇದ್ದಾರೆ. ಇಲ್ಲಿ ಮಾತ್ರ ಹೆಂಗಸರು ಗಂಡಸರಿಗಿಂತ ಸ್ವಲ್ಪ ಪ್ರಮಾಣದಲ್ಲಿ ತಮ್ಮ ಸಂಖ್ಯಾಬಲವನ್ನು ಹೆಚ್ಚಿಸಿಕೊಂಡಿದ್ದಾರೆ.

• ಉಡುಪಿ ಜಿಲ್ಲೆಯ ಮರಾಟಿ ನಾಯ್ಕ ಮತ್ತು ಮರಾಟಿ ಸಮುದಾಯಗಳ ೩೦೦ ಕುಟುಂಬಗಳ ಸದಸ್ಯರುಗಳ ಲಿಂಗವಾರು ಸಮೀಕ್ಷೆಯನ್ನು ಗಮನಿಸಿದಾಗ ಹೆಂಗಸರ ಲಿಂಗಾನುಪಾತಕ್ಕಿಂತ ಗಂಡಸರೇ ಹೆಚ್ಚಾಗಿ ಮರಾಟಿ ನಾಯ್ಕರಲ್ಲಿ ಕಂಡು ಬಂದರೆ ಮರಾಟಿಗರಲ್ಲಿ ಹೆಂಗಸರು ಹೆಚ್ಚಾಗಿ ಕಂಡುಬಂದಿರುವುದನ್ನು ಕಾಣುತ್ತೇವೆ.



ವಿಧವಾ ವಿವಾಹ

ಗಂಡ ಸತ್ತ ಹೆಂಗಸನ್ನು ವಿಧುವೆ ಎಂದೂ, ಹೆಂಡತಿ ಸತ್ತ ಗಂಡಸನ್ನೂ ವಿಧುರನೆಂದು ನಮ್ಮ ಸಮಾಜ ನೂರಾರು ವರ್ಷಗಳಿಂದ ಗುರುತಿಸುತ್ತಾ ಬಂದಿದೆ. ಆ ನಂಬಿಕೆಗೆ ಧರ್ಮಶಾಸ್ತ್ರಗಳ ಅನುಮೋದನೆ ಇದ್ದರೂ ಇವೆರಡೂ ಕೂಡಾ ಮನುಷ್ಯ ಕಲ್ಪಿಸಿಕೊಂಡಿದ್ದೆ ಹೊರತು ದೇವರ ಸೃಷ್ಟಿಯಲ್ಲ. ಇದು ಪುರುಷ ಪ್ರಾಬಲ್ಯ ಸಮಾಜದ ನಿರೂಪಣೆಯೇ ವಿನಃ ಬೇರೆನಿಲ್ಲ. ಮನುಮಹರ್ಷಿ ತನ್ನ ಗ್ರಂಥದಲ್ಲಿ "ಸತಿಯಾದವಳಿಗೆ ಪತಿಯೇ ಪರ ದೈವ"ವೆಂದು ಹೇಳಿದನಲ್ಲದೆ. ಪತಿಯಾದವನಿಗೆ ಸತಿಯೇ ಪರದೈವ ಎಂದು ಹೇಳದಿರುವುದು ಒಂದು ದುರಂತ. ಗಂಡ ಸತ್ತ ಬಳಿಕ ಆಕೆಯ ಬಾಳಿಗೆ ಅರ್ಥವಿಲ್ಲ, ಶೋಭೆಯಿಲ್ಲ ಎಂಬುದಾಗಿ ಇಂದಿಗೂ ಇರುವ ನಂಬಿಕೆ. ಗಂಡ ಸತ್ತ ಬಳಿಕ ಮಂಗಳ ಕಾರ್ಯಗಳಲ್ಲಿ ಹೆಣ್ಣಿನ ಮುಖ ನೋಡುವುದು ಅನಿಷ್ಠ ನಿಷಿದ್ಧ ಎಂದಿದೆ. ಆದರೆ ಈ ನಿಷೇಧ ಹೆಂಡತಿ ಸತ್ತ ಗಂಡನಿಗೆ ಅನ್ವಯಿಸದು. ವಾಸ್ತವವಾಗಿ ಮತ್ತು ಸಾಂಸಾರಿಕವಾಗಿ ಗಮನಿಸಿದಲ್ಲಿ ಗಂಡನನ್ನು ಕಳೆದುಕೊಂಡ ಹೆಣ್ಣು ಮತ್ತು ಹೆಂಡತಿಯನ್ನು ಕಳೆದುಕೊಂಡ ಗಂಡು ಇಬ್ಬರೂ ಕೂಡಾ ಸಮಾನ ದುಃಖಿಗಳು ಮತ್ತು ಸಮಾನ ಕೌಟುಂಬಿಕ ಕೊರತೆಯುಳ್ಳವರು. ಆದರೆ ಈ ಸಂಬಂಧಿತ ಎಲ್ಲಾ ಕಟ್ಟುಪಾಡುಗಳನ್ನು, ನಿಷೇಧಗಳನ್ನು ಮತ್ತು ನಿರ್ಬಂಧನೆಗಳನ್ನು ಹೆಣ್ಣಿಗೆ ಮಾತ್ರ ಸಮಾಜ ಸೀಮಿತಗೊಳಿಸಿದೆ. ಗಂಡ ಸತ್ತಿರುವವಳು ದೇವತಾ ಸೇವೆ, ಪೂಜೆ, ಪುರಸ್ಕಾರ, ದೇವತಾ ಅರ್ಚನೆ, ಹೋಮ ಹವನಾದಿ ದೇವತಾ ಕಾರ್ಯಗಳನ್ನು ಮಾಡಬಾರದು ಹಾಗೂ ಸಮಾರಂಭದಲ್ಲಿ ಭಾಗವಹಿಸಬಾರದು. ವ್ಯಕ್ತಿಗೆ ಜನ್ಮ ನೀಡಿದ ಅಲ್ಲದೆ ಮಾತೃ ಸ್ವರೂಪಿಯಾಗಿರುವ ಹೆಣ್ಣನ್ನು ವಿಧವೆಯ ನೆಲೆಯಲ್ಲಿ ಕೆಲವೊಂದು ಕಟ್ಟುಪಾಡುಗಳನ್ನು ವಿಧಿಸಿ ಆಕೆಯನ್ನು ಅಸ್ಪ್ರಶ್ಯರಂತೆ ಕಂಡಿರುವುದು ಸಾಮಾಜಿಕ ವಿಡಂಬನೆ ಮತ್ತು ದುರಂತವೇ ಸರಿ. ದಾಂಪತ್ಯದಿಂದ ಉಂಟಾಗುವ ವಂಶಾಭಿವೃದ್ಧಿಗೆ ಗಂಡ ಹೆಂಡತಿಯರಿಬ್ಬರೂ ಸಮಾನ ಶಕ್ತಿಗಳು ಆದರೆ, ಗಂಡ ಸತ್ತ ಬಳಕೆ ಹೆಂಡತಿ ನಿಕೃಷ್ಟಳು, ವಿಧವೆ. ಇಲ್ಲಿ ಗಂಡಸಿಗೆ ಒಂದು ನ್ಯಾಯ ಮತ್ತು ಹೆಂಡತಿಗೆ ಮತ್ತೊಂದು ನ್ಯಾಯ ಎಂಬಂತಿದೆ. ಈ ಹಿನ್ನೆಲೆಯಲ್ಲಿ ವಿಧವೆ, ವಿಧುರ ಎಂಬ ಎರಡೂ ಪದಗಳು ಅರ್ಥಹೀನವಾದದ್ದು, ಮರಾಟಿ ನಾಯ್ಕ ಮತ್ತು ಮರಾಟಿಗರಲ್ಲಿ ಈ ಹಿಂದೆ ಬಾಲ್ಯವಿವಾಹ ಪದ್ಧತಿ ಇತ್ತು ಎಂಬುದಾಗಿ ತಿಳುವಳಿಕೆದಾರರು ತಿಳಿಸಿರುತ್ತಾರೆ. ಈ ಪದ್ಧತಿಯ ಕಾರಣ ಹೆಚ್ಚಿನ ಹೆಣ್ಣು ಮಕ್ಕಳು ಬೇರೆ ಬೇರೆ ಕಾರಣದಿಂದಾಗಿ ವಿಧುವೆಯರಾಗುತ್ತಿದ್ದರು. ಮರಾಟಿ ನಾಯ್ಕ ಸಮುದಾಯದಲ್ಲಿ ಹಲವಾರು ವರ್ಷಗಳಿಂದ ವಿಧುವಾ ವಿವಾಹಕ್ಕೆ ನಿಷೇಧವಿರುವುದಾಗಿ ತಿಳಿಸಿದ್ದರೂ. ಕಾಲ ಬದಲಾದಂತೆ ಬಾಲ್ಯ ವಿವಾಹ ಪದ್ಧತಿ ಕಣ್ಮರೆಯಾಗಿ ಆಧುನಿಕ ಆರೋಗ್ಯ ಕ್ರಮಗಳು ಮತ್ತು ಸಂಸ್ಥೆಗಳು ಗಂಡು ಹೆಣ್ಣಿನ ಆಯಸ್ಸನ್ನು ಹೆಚ್ಚಿಸುತ್ತಿವೆ. ಏನೇ ಆದರೂ ಇಂದಿಗೂ ಕೆಲವು ಹೆಣ್ಣು ಮಕ್ಕಳು ವಿಧುವೆಯರಾಗುತ್ತಿದ್ದು, ಅವರಿಗೆ ಬಹಳ ಅಪರೂಪ ಎಂಬಂತೆ ಅಲ್ಲಲ್ಲಿ ಮರುವಿವಾಹಗಳು ಜರುಗುತ್ತಿವೆ. ಇಂತಹ ವಿಧವೆಯವರಿಗೆ 'ಕೈಪತ್ತವುನಿ' (ಕೈ ಹಿಡಿಸುವುದು) ಎಂಬ ಸಂಪ್ರದಾಯದಂತೆ ಇನ್ನೊಂದು ವಿವಾಹ ಮಾಡಿಸುತ್ತಾರೆ ಎಂಬುದಾಗಿ ತಿಳುವಳಿಕೆದಾರರು ತಿಳಿಸಿರುವರು. ಇತ್ತೀಚೆಗೆ 'ಕೈಪತ್ತವುನ' ಸಂಪ್ರದಾಯ ಕಡಿಮೆಯಾಗಿ ಶಾಸ್ತ್ರೋಕ್ತವಾಗಿಯೇ ವಿವಾಹಗಳು ಜರಗುತ್ತಿವೆ. ಅಲ್ಲದೆ ಇನ್ನೂ ಸ್ವಲ್ಪ ವಯಸ್ಸಾದ ಮಕ್ಕಳು ಇರುವಂತಹ ವಿಧವೆಯರು ವಿವಾಹವಾಗಲು ಇಚ್ಚಿಸುತ್ತಿಲ್ಲ.

ವಿಧವಾ ವಿವಾಹದ ಬಗ್ಗೆ ತಿಳುವಳಿಕೆದಾರರ ಅಭಿಪ್ರಾಯ ಕೇಳಿದಾಗ ಕೋಷ್ಟಕ ಸಂಖ್ಯೆ ೩.೧೮ರಲ್ಲಿ ಅಭಿಪ್ರಾಯವನ್ನು ವ್ಯಕ್ತಪಡಿಸಿರುತ್ತಾರೆ.

ಕೋಷ್ಟಕ: ೩.೧೮

ತಿಳುವಳಿಕೆದಾರರ ಸಮುದಾಯದಲ್ಲಿ ವಿಧವೆಯವರ ಮರುಮದುವೆಗೆ ಸಂಬಂಧಿಸಿದ ವಿವರ

ಸಮುದಾಯದ ಹೆಸರು	ತಾಲೂಕು	ವಿಧವಾ ವಿವಾಹದ ಬಗ್ಗೆ ಮಾಹಿತಿದಾರರ ಪ್ರತಿಕ್ರಿಯೆ			
		ಮರುಮದುವೆ ಮಾಡಬೇಕು	ಮರುಮದುವೆ ಮಾಡಬಾರದು	ತಟಸ್ಥ	ಒಟ್ಟು
ಮರಾಟಿ ನಾಯ್ಕ	ಕುಂದಾಪುರ	೪೮	–	೦೨	೫೦
	ಉಡುಪಿ	೫೦	–	–	೫೦
	ಕಾರ್ಕಳ	೪೪	೦೧	೦೫	೫೦
	ಒಟ್ಟು	೧೪೨	೦೧	೦೭	೧೫೦
	ಶೇಕಡವಾರು	**೯೪.೬೭**	**೦.೬೭**	**೪.೬೬**	**೧೦೦**
ಮರಾಟಿ	ಉಡುಪಿ ಜಿಲ್ಲೆಯ, ಕಾರ್ಕಳ ತಾಲೂಕು				
	ಒಟ್ಟು	೧೩೬	೦೫	೦೯	೧೫೦
	ಶೇಕಡವಾರು	**೯೦.೬೭**	**೦೩.೩೩**	**೦೬.೦೦**	**೧೦೦**

ತಿಳುವಳಿಕೆದಾರರು ತಮ್ಮ ಸಮುದಾಯದಲ್ಲಿ ವಿಧವೆಯರ ಮರುವಿವಾಹದ ಬಗ್ಗೆ ತಮ್ಮ ಅಭಿಪ್ರಾಯವನ್ನು ತಿಳಿಸಿದ್ದಾರೆ. ಕುಂದಾಪುರ, ಉಡುಪಿ, ಕಾರ್ಕಳ ತಾಲೂಕುಗಳ ೧೫೦ ಮರಾಟಿ ನಾಯ್ಕ ಕುಟುಂಬದವರನ್ನು ಸಮೀಕ್ಷೆಗೆ ಒಳಪಡಿಸಿದಾಗ ಒಟ್ಟು ೧೪೨ (೯೪.೬೭%) ರಷ್ಟು ಕುಟುಂಬಗಳು ವಿಧವೆಯರ ಮರುವಿವಾಹಕ್ಕೆ ಬೆಂಬಲ ಸೂಚಿಸಿದರೆ. ೧ (೦.೬೭%) ರಷ್ಟು ಕುಟುಂಬ ವಿಧವಿಯರ ಮರುವಿವಾಹಕ್ಕೆ ಬೆಂಬಲ ಸೂಚಿಸದಿರುವುದು ಕಂಡುಬಂದರೆ ಈ ವಿಷಯದಲ್ಲಿ ತನ್ನ ತಟಸ್ಥ ನೀತಿಯನ್ನು ೦೭ (೪.೬೬%) ಕುಟುಂಬಗಳು ಕಂಡುಕೊಂಡಿವೆ.

ವಿಧವೆಯರ ಮರುವಿವಾಹಕ್ಕೆ ಸಂಬಂಧಿಸಿದಂತೆ ಮರಾಟಿ ಸಮುದಾಯದ ೧೫೦ ಕುಟುಂಬಗಳಲ್ಲಿ ಕೇಳಿದಾಗ ಒಟ್ಟು ೧೩೬ (೯೦.೬೭%) ರಷ್ಟು ಕುಟುಂಬಗಳು ವಿಧವೆಯರ ಮರುವಿವಾಹಕ್ಕೆ ಬೆಂಬಲ ನೀಡಿದರೆ. ಮರು ಮದುವೆ ಮಾಡಬಾರದೆಂದು ೦೫ (೩.೩೩%) ರಷ್ಟು ಕುಟುಂಬಗಳು ತನ್ನ ಬೆಂಬಲ ನೀಡಿಲ್ಲ. ೦೯ (೬.೦೦) ರಷ್ಟು ಕುಟುಂಬಗಳು ತನ್ನ ತಟಸ್ಥ ನೀತಿಯನ್ನು ಕಾಯ್ದುಕೊಂಡಿವೆ.

ಈ ಸಮೀಕ್ಷೆಯಿಂದ ಸಮುದಾಯದ ವಿವಾಹದ ವಿಚಾರಧಾರೆ ಬದಲಾಗಿವೆ ಎಂಬುದನ್ನು ಗಮನಿಸಬಹುದು.

• ಉಡುಪಿ ಜಿಲ್ಲೆಯ ಮರಾಟಿ ನಾಯ್ಕ ಮತ್ತು ಮರಾಟಿ ಸಮುದಾಯಗಳ ಒಟ್ಟು ೩೦೦ ಕುಟುಂಬಗಳ ವಿಧವೆಯರ ಮರು ಮದುವೆಗೆ ಪ್ರತಿಕ್ರಿಯಿಸಿರುವುದನ್ನು ಗಮನಿಸಿದರೆ ಮರು ಮದುವೆ ಮಾಡಬಾರದು ಎನ್ನುವವರು ತೀರ ಕಡಿಮೆ ಪ್ರಮಾಣದಲ್ಲಿದ್ದಾರೆ.ಹಾಗೂ ಎಲ್ಲರೂ ಮರು ಮದುವೆಗೆ ಸಮ್ಮತಿಯನ್ನು ತೋರಿಸಿದ್ದು ಕಂಡುಬರುತ್ತದೆ.

ಮರಾಟಿ ನಾಯ್ಕ ಮತ್ತು ಮರಾಟ ಸಮುದಾಯಗಳಲ್ಲಿರುವ ವಿವಾಹ ನಿಷೇಧಗಳು

೧. ಮರಾಟಿಗ ಸಮುದಾಯದಲ್ಲಿ ಗಂಡು ಹೆಣ್ಣುಗಳ ವಿವಾಹವು 'ದೇವರ ಪ್ರಸಾದ' ಅಥವಾ ಶಕುನಗಳು ಶುಭ ಸಂದೇಶ ನೀಡಿದ್ದರೆ ಮದುವೆ ಮಾಡುವುದಿಲ್ಲ.

೨. ಜನನ, ಮರಣ, ಮುಟ್ಟು, ಸೂತಕದ ದಿನಗಳಲ್ಲಿ ಮದುವೆ ಕಾರ್ಯ ನಿಷೇಧವಾಗಿರುತ್ತದೆ.

೩. ಸಾಮಾನ್ಯವಾಗಿ ಗಂಡಿಗೆ ಮರು ಮದುವೆ ಮಾಡುವುದು ಕಂಡು ಬಂದಿದ್ದು, ಸ್ತ್ರೀಗೆ ಮರುಮದುವೆಗೆ ಸಂಬಂಧಿಸಿದಂತೆ ಚಿಂತನೆಗಳು ನಡೆಯುತ್ತಿರುವುದು ಕಂಡುಬರುತ್ತದೆ.

೪. ವಿಧುರ (ಹೆಂಡತಿ ಸತ್ತವ) ನಿಗೆ ಅಥವಾ ವಿಧುವೆಗೆ ಕನ್ಯಾದಾನದ ಆಚರಣೆ ಮಾಡುವ ಅಧಿಕಾರವಿಲ್ಲ.

೫. ಗಂಡು ಮತ್ತು ಹೆಣ್ಣಿಗೆ ಪ್ರಬಲವಾದ ದೈಹಿಕ ಅಂಗ ಊನವಾಗಿದ್ದಲ್ಲಿ ಉದಾಹರಣೆಗೆ ಕುಷ್ಠರೋಗ, ಮನೋರೋಗ, ಹುಚ್ಚು ಇತ್ಯಾದಿ ಇದ್ದಲ್ಲಿ ಮದುವೆಗೆ ಒಪ್ಪುವುದಿಲ್ಲ.

೬. ಒಂದೇ ಅಥವಾ ಸಮಾನ ಬಳಿಯವರನ್ನು ಅಣ್ಣ-ತಂಗಿಯರು ಮತ್ತು ಅವರು ರಕ್ತಸಂಬಂಧಿಕರಾಗುತ್ತಾರೆ ಎಂಬ ಭಾವನೆಯಿಂದ ಮದುವೆ ಏರ್ಪಡಿಸುವುದಿಲ್ಲ.

೭. ಬಳಿಗಳಲ್ಲಿ ಶ್ರೇಷ್ಠ, ನಿಕೃಷ್ಟ ಅಥವಾ ಉಚ್ಚ ಮತ್ತು ನೀಚ ಬಳಿಯಿರುವುದಾಗಿ ಎರಡು ಸಮುದಾಯಗಳಲ್ಲಿ ಕಂಡುಬಂದಿರುತ್ತದೆ.

೮. ಗಂಡಿನ ಮನೆಯಲ್ಲಿ ಆತನ ತಾಯಿ ತಂದೆ ಅಥವಾ ಹಿರಿಯರು ಮರಣ ಹೊಂದಿದಲ್ಲಿ ಮುಂದೆ ಒಂದು ವರ್ಷಗಳ ಕಾಲ ಗಂಡಸಿಗೆ ಮದುವೆ ಮಾಡಿಸುವುದಿಲ್ಲ. ಆದರೆ ಹೆಣ್ಣಿಗೆ ಮಾತ್ರ ಹೆತ್ತವರಲ್ಲಿ ಯಾರೇ ಸತ್ತರೂ ಒಂದು ವರ್ಷದೊಳಗೆ ಮದುವೆ ಮಾಡಿಸುವ ಕ್ರಮವಿದೆ. ಕೆಲವೊಮ್ಮೆ ಒಂದು ಅಮವಾಸ್ಯೆ, ಒಂದು ಹುಣ್ಣಿಮೆ, ಒಂದು ಸಂಕ್ರಮಣ ಕಳೆಯುವುದರೊಳಗೆ ಮದುವೆಯಾದಲ್ಲಿ ಅಂತಹ ಮದುವೆ ಉತ್ತಮ ಎಂಬ ನಂಬಿಕೆ ಎರಡು ಸಮುದಾಯದವರಲ್ಲಿದೆ. ಕನ್ಯಾದಾನದ ಪುಣ್ಯ ಫಲ ಸತ್ತವರಿಗೂ ಸಲ್ಲುತ್ತದೆ ಎಂಬ ನಂಬಿಕೆ ಮರಾಟಿಗರದ್ದು.

ಮರಾಟಿಗರ ಮದುವೆ ಆಚರಣೆಯಲ್ಲಿ ಗಮನಿಸಬಹುದಾದ ಅಂಶಗಳು

೧. ಮರಾಟಿ ಮತ್ತು ಮರಾಟಿ ನಾಯ್ಕರ ಮದುವೆ ಸಂಸ್ಕಾರದಲ್ಲಿ ಅನ್ಯಜಾತಿ ಹಾಗೂ ಜನಾಂಗದವರ ಪ್ರಭಾವ ಕಂಡುಬಂದರೂ ಅವರದ್ದೆ ಆದ ಕ್ರಮಗಳು ಸಾಕಷ್ಟು ಉಳಿದುಕೊಂಡಿದೆ.

೨. ಪುನರಾವರ್ತನೆಗೊಳ್ಳುವ ಸಂಬಂಧಗಳು ಈ ಎರಡೂ ಸಮುದಾಯದಲ್ಲಿ ಎದ್ದು ಕಾಣುತ್ತದೆ.

೩. ಮದುವೆಯ ಆಚರಣೆಯಲ್ಲಿ ಉಪಯೋಗಿಸುವ ಅಕ್ಕಿ ಮತ್ತು ತಾಂಬೂಲಕ್ಕೆ ಹೆಚ್ಚಿನ ಮಹತ್ವ ನೀಡಿರುವುದು ಸಾಂಸ್ಕೃತಿಕ ಸಂಬಂಧವನ್ನು ತೋರಿಸುತ್ತದೆ.

೪. ಇತ್ತೀಚಿನ ವರ್ಷಗಳಲ್ಲಿ ಅನ್ಯ ಸಂತಾನಗಳಲ್ಲಿ ದೂರದ ಸಂಬಂಧ ಏರ್ಪಡಿಸಿ ವಿಶಾಲವಾದ ಹಾಗೂ ವಿಸ್ತೃತವಾದ ಸಮಾಜ ರಚನೆ ಮಾಡುವುದನ್ನು ಗಮನಿಸಬಹುದು.

೫. ದೇವರು, ಗುರುಹಿರಿಯರು, ಗುರುಮಠ, ಕುಲಪುರೋಹಿತರು, ಗುರಿಕಾರರು ಅಥವಾ ಮೊಕ್ತೇಸರರು ಇವರೆಲ್ಲರಿಗೆ ನೀಡುವ ಸ್ಥಾನಮಾನವು ಮದುವೆಯಲ್ಲಿ ಸಂಪ್ರದಾಯಗಳಿಗೆ ಬದ್ಧರಾಗಿಯೂ ಕಾಲ ಮತ್ತು ದೇಶಕ್ಕನುಗುಣವಾಗಿ ಬದಲಾವಣೆ ಮಾಡುತ್ತಿರುವುದು ವ್ಯಕ್ತವಾಗುತ್ತದೆ.

೬. ಜೀವನದಲ್ಲಿ ಕಡ್ಡಾಯ ಮದುವೆ, ಹುಡುಗನಿಗೆ ಬಾಳೆ ಮದುವೆ ಸತ್ತವರಿಗೆ ಮದುವೆಯ ಕ್ರಮ, ಇವುಗಳಿಂದ ಮದುವೆಗೆ ಹೆಚ್ಚಿನ ಮಹತ್ವದ ಸ್ಥಾನಮಾನವನ್ನು ನೀಡುತ್ತಿರುವುದನ್ನು ಗಮನಿಸಬಹುದು.

ಮದುವೆ ಸಂಬಂಧಪಟ್ಟಂತೆ ಮರಾಟಿ ಮತ್ತು ಮರಾಟಿ ನಾಯ್ಕರು ಆಚರಣೆಗಳ ಸಂಹಿತೆಯನ್ನು ಹೊಂದಿರುವಂತೆ ನ್ಯಾಯ ವ್ಯವಸ್ಥೆ, ಗ್ರಾಮಾಡಳಿತ, ಕೂಡುಕಟ್ಟು, ಸ್ಥಾನಮಾನಗಳಿಗೆ ಸಂಬಂಧಿಸಿದಂತೆ ಆಡಳಿತ ಸಂಹಿತೆಯನ್ನು ಕೂಡಾ ಹೊಂದಿದ್ದಾರೆ. ಸಾಂಸ್ಕೃತಿಕವಾಗಿ ಮತ್ತು ಸಾಮಾಜಿಕವಾಗಿ ಈ ಎರಡೂ ಸಮುದಾಯಗಳನ್ನು ತೌಲನಿಕವಾಗಿ ಗಮನಿಸಿದಾಗ ಸ್ವಾಯತ್ತತೆಯಾದ ಸಮುದಾಯಗಳಾಗಿರುವುದು ಕಂಡುಬರುತ್ತದೆ.

ಮದುವೆ ಆಚರಣೆಯ ತಾತ್ವಿಕ ದೃಷ್ಟಿಕೋನ

ಮದುವೆ ಎಂಬುದು ಬದುಕಿನ ಅತ್ಯಂತ ಪ್ರಮುಖವಾದ ಆಚರಣೆಯ ಸಂಸ್ಕಾರವಾಗಿದೆ. ಮನುಷ್ಯನ ಸಾಮಾಜಿಕ ಹಾಗೂ ಧಾರ್ಮಿಕ ಜೀವನಕ್ಕೆ ಅನುಮತಿ ನೀಡುವ ಸಂಸ್ಕಾರವೂ ಆಗಿದೆ. ದಂಪತಿಗಳು ಸುಖ ಸಂತೋಷ ಮತ್ತು ನೆಮ್ಮದಿಯಿಂದ ಜೀವನ ನಡೆಸಿ ಇತರರಿಗೆ ಮಾರ್ಗದರ್ಶಕರಾಗಿ ಬಾಳಬೇಕೆಂಬ ದೃಷ್ಟಿಕೋನವನ್ನಿಟ್ಟುಕೊಂಡು ಮರಾಟಿಗರು ಮದುವೆ ನಡೆಸುವಾಗ ಅನೇಕ ಆಚರಣೆಗಳನ್ನು ಆಚರಿಸುತ್ತಾರೆ. ಮದುವೆಯಲ್ಲಿ ನಡೆಯುವ ಆಚರಣೆಗಳು ಅರ್ಥಪೂರ್ಣವಾಗಿವೆ. ಗಂಡು ಮತ್ತು ಹೆಣ್ಣಿನ ಸಂಬಂಧ ಅಧಿಕೃತಗೊಳಿಸುವ ಆಶಯಕ್ಕೆ ಪೂರಕವಾಗಿ ನೈತಿಕ ಮತ್ತು ಆರೋಗ್ಯಪೂರ್ಣವಾದ ಕುಟುಂಬದ ರಚನೆ ಮತ್ತು ಅದರ ಮುನ್ನಡೆಗೆ ಬೇಕಾದ ನೀತಿ ಸಂಹಿತೆಯನ್ನು ಮರಾಟಿ ಹಾಗೂ ಮರಾಟಿ ನಾಯ್ಕ ಹೊಂದಿದ್ದಾರೆ ಮತ್ತು ಅದನ್ನು ಜತನದಿಂದ ಕಾಪಾಡಿಕೊಂಡು ಬರುವ ಪ್ರಯತ್ನವನ್ನು ಮಾಡಿದ್ದಾರೆ ಎಂದು ಹೇಳಬಹುದು.

ಮದುವೆಯ ಸಂದರ್ಭದಲ್ಲಿ ಉಪಯೋಗಿಸುವ ವಿವಾಹ ಪರಿಕರಗಳಾದ ಧಾರೆಗಿಂಡೆ, ಗಿಂಡೆಯ ಒಳಗಡೆ ಪುಣ್ಯಾರ್ಚನೆಯ ನೀರು, ಅದರೊಳಗೆ ಇಡುತ್ತಿರುವ ನಾಣ್ಯ, ಮಾವಿನ ಎಲೆ, ಹಲಸಿನ ಎಲೆ, ಹಲಸಿನ ಕಟ್ಟಿಗೆ ಪವಿತ್ರ ಎಂಬ ಭಾವನೆ ಮತ್ತು ನಂಬಿಕೆ ಮರಾಟಿಗರಲ್ಲಿದೆ. ಮದುವೆಯ ದಿನದಂದು ಧಾರಾಕಲಶ ಮತ್ತು ಮಂಗಳಸೂತ್ರವನ್ನು ಸಮಸ್ತರಿಗೆ ಮುಟ್ಟಿಸುವ ಕ್ರಿಯೆ ಮತ್ತು ವಧುವೂ ದೀರ್ಘಕಾಲ ಸುಮಂಗಲಿಯಾಗಲೀ ಎಂಬ ಆಶಯ ವ್ಯಕ್ತಪಡಿಸುವುದು. ಇದೊಂದು ರೀತಿಯ ಸಾಮಾಜಿಕ ಅನುಮೋದನೆ (Social approval) ಆಗಿರುತ್ತದೆ. ಆದ್ದರಿಂದ ವಿವಾಹವು ಕೇವಲ ಜೈವಿಕ ಬಯಕೆಯಾದ ಲೈಂಗಿಕತೆಯನ್ನು ಮಾತ್ರ ಇಡೇರಿಸುವುದಲ್ಲದೆ, ಸಾಮಾಜಿಕ ಮಹತ್ವವನ್ನು ವಧುವರರು ಅರಿತುಕೊಳ್ಳಬಹುದು. ಇದು ಕೇವಲ ವೈದಿಕ ಅಥವಾ ಹಿಂದೂ ಪದ್ಧತಿ ಮಾತ್ರವಲ್ಲ ಸಮಸ್ತರಿಗೆ ಮಂಗಲಸೂತ್ರವನ್ನು ಮುಟ್ಟಿಸಿ ಆಶೀರ್ವಾದ ಪಡೆಯುವ ಪದ್ಧತಿಯ ಕ್ರೈಸ್ತ, ಮುಸಲ್ಮಾನರಲ್ಲಿಯೂ ಇದೆ. ಇದರ ಮುಖ್ಯ ಆಶಯ ದೀರ್ಘಕಾಲ ದಾಂಪತ್ಯ ಜೀವನವನ್ನು ನಡೆಸಲಿ ಎಂಬುದಾಗಿದೆ.

ವಿವಾಹ ಸಂದರ್ಭದಲ್ಲಿ ಉಪಯೋಗಿಸುವ ವೀಳ್ಯದೆಲೆ, ಅಡಿಕೆ, ಹಿಂಗಾರ, ಹೊದ್ಲು, ಜೇನು ತುಪ್ಪ ಮತ್ತಿತರ ವಿವಾಹಕ್ಕೆ ಸಂಬಂಧಿಸಿದ ಪರಿಕರಗಳು ಸಮೃದ್ಧಿ ಹಾಗೂ ಫಲವಂತತೆಯ ಸಂಕೇತವಾಗಿರುತ್ತವೆ. ಧಾರೆ ಎರೆಯುವಾಗ ಧಾರೆಯ ನೀರು ವಧು ವರರ ಅಂಗೈ ಕೆಳಗಡೆ ಹಿಡಿದ ಹರಿವಾಣಕ್ಕೆ ಬಿದ್ದ ನೀರನ್ನು ಹಾಗೂ ಸಂಗ್ರಹಿಸಿದ ನೀರನ್ನು ಫಲ ಬರುವ ಮರದ ಬುಡಕ್ಕೆ ಎರೆಯುವುದರ ಸಂಕೇತವು ಮುಂದೆ ಹೆಣ್ಣು ಶೀಘ್ರವಾಗಿ ಫಲವತಿಯಾಗಲೀ ಎಂಬ ಸಂದೇಶವಾಗಿದೆ. ಅವರ ಕೈಗಳಿಗೆ ಕಟ್ಟುವ ಕಂಕಣ ಧಾರೆಯ ಸಂಕೇತವಾಗಿರುವ ಅರಿಶಿಣ ಕೊಂಬು ಮತ್ತು ನೂಲು ದುಷ್ಟಶಕ್ತಿಗಳಿಗೆ ತಡೆಯಾಗಿಯೂ ಅದಕ್ಕೆ ಉಪಯೋಗಿಸುವ ಅರಿಶಿಣ ಕೊಂಬುಗಳು ಸಂತಾನ ಸೂಚಕವೂ ಆಗಿರುತ್ತವೆ.

ಅಲ್ಲದೆ ವಧುವರರು ಪರಸ್ಪರ ರಕ್ಷಣೆಯ ಪ್ರೀತಿ ವಾತ್ಸಲ್ಯದ ಸಂಕೇತವೂ ಕೂಡ ಆಗಿರುತ್ತದೆ. ಹೋಮ ಮಾಡುವ ಸಂದರ್ಭದಲ್ಲಿ ವಧುವರರ ಸೆರಗು ಮತ್ತು ಶಲ್ಯದ ತುದಿಗಳನ್ನು ಒಂದಾಗಿಸಿ ಗಂಟು ಹಾಕುವಲ್ಲಿ ಅವರ ದಾಂಪತ್ಯ ಜೀವನವು ಯಾವುದೇ ಕಾರಣದಿಂದ ಮುಂದೆ ವಿಚ್ಛೇದನೆ (ವಿಂಗಡಣೆ) ಅಥವಾ ಪರಿತ್ಯಾಗ ಆಗದಿರಲಿ ಎಂಬ ಆಶಯವನ್ನು ವ್ಯಕ್ತಪಡಿಸುವುದಾಗಿದೆ.

ವೈದಿಕ ಪದ್ಧತಿಯಾಗಿರುವ ಹೋಮವು ಇದೊಂದು ಗಣಹೋಮವಾಗಲೀ, ವಾಸ್ತು ಹೋಮವಾಗಲೀ ಅಲ್ಲ. ಈ ಹೋಮಕ್ಕೆ 'ಲಾಜಾ ಹೋಮ' ಎಂಬುದಾಗಿ ಕರೆಯುತ್ತಾರೆ. ಈ ಹೋಮಕ್ಕೆ ಉಪಯೋಗಿಸುವ ವಸ್ತುಗಳೆಲ್ಲವೂ ಆರೋಗ್ಯವರ್ಧಕ ಹಾಗೂ ಆರೋಗ್ಯ ರಕ್ಷಣೆಗೆ ಉಪಯೋಗವಾಗಿರುವಂತದ್ದಾಗಿವೆ.

ಅಗ್ನಿ ನಾರಾಯಣನ ಮೂಲಕ ದೇವತೆಗಳಿಗೆ ಹವಿಸ್ಸನ್ನು ಅರ್ಪಿಸಿ ಅವನ ಅನುಗ್ರಹ ಪಡೆದು ದೀರ್ಘಕಾಲಿಕ ದಾಂಪತ್ಯ ಜೀವನ ನಡೆಸುವ ಹಂಬಲವಿರುವುದರಿಂದ ಈ ಹೋಮಕ್ಕೆ ಪ್ರಾಶಸ್ತ್ಯ ನೀಡುವರು. ಅಲ್ಲದೆ ಚಪ್ಪರ ಇಳಿಸುವ ಆಚರಣೆಯ ಸಂದರ್ಭ ಚಪ್ಪರದಿಂದ ಸ್ವಲ್ಪ ದೂರ ಹೋಗಿ ಸೂರ್ಯನಿಗೆ ನಮಸ್ಕಾರ ಮಾಡುವುದು, ಅಗ್ನಿ ಮತ್ತು ಸೂರ್ಯದೇವ ಎರಡೂ ಕೂಡಾ ಶಾಶ್ವತವಾಗಿರುವಂತದ್ದು, ಈ ಶಾಶ್ವತತೆಯ ಸಂಕೇತದಿಂದಾಗಿ ವೈವಾಹಿಕ ಜೀವನವೂ ಕೂಡಾ ಶಾಶ್ವತವಾಗಿರಲೀ ಎಂಬ ನಂಬಿಕೆಯಾಗಿರುತ್ತದೆ. ವಿವಾಹ ಸಂದರ್ಭದಲ್ಲಿ ವಧುವು ಗೃಹಪ್ರವೇಶ ಮಾಡುತ್ತಿರುವ ಸಂದರ್ಭದಲ್ಲಿ ಉಪಯೋಗಿಸುವ ಅಕ್ಕಿಯನ್ನು ಮೆಟ್ಟಿ ಚೆಲ್ಲಿ ಒಳಪ್ರವೇಶಿಸುವುದು ಧಾನ್ಯಲಕ್ಷ್ಮೀಯು ಆ ಮನೆಯಲ್ಲಿ ಕಾಲೂರಲು ಹಾಗೂ ಅನ್ನದ ಬರಗಾಲ ಬಾರದಿರಲೀ ಎನ್ನುವ ಆಶಯ ವ್ಯಕ್ತಪಡಿಸುವ ಹಿನ್ನೆಲೆಯಲ್ಲಿದೆ ಎಂದು ಮರಾಟಿಗರು ತಿಳಿದಿದ್ದಾರೆ.

ಸೀಮಂತ ಕಾರ್ಯ

ಸೀಮಂತ ಕಾರ್ಯದ ಆಚರಣೆ ಎಲ್ಲಾ ಮತಧರ್ಮದವರಲ್ಲಿಯೂ ಕಂಡು ಬರುತ್ತದೆ. ಸೀಮಂತದ ಆಚರಣೆಯು ಗರ್ಭಿಣಿ ಸ್ತ್ರೀಗೆ ಸಂಬಂಧಿಸಿರುವುದೋ ಅಥವಾ ಗರ್ಭಸ್ಥ ಶಿಶುವಿಗೆ ನಡೆಯುವುದೋ ಎನ್ನುವ ವಿಚಾರಗಳಲ್ಲಿ ಭಿನ್ನಾಭಿಪ್ರಾಯಗಳಿವೆ. 'ಬಯಕೆ' ಬೈಕೆ, ಬಾಯಕೆ, ಭಾವುಕೆ ಇವುಗಳೆಲ್ಲಾ ಸಮನಾರ್ಥಕ ಪದಗಳು. ಬಯಕೆಯು ಗರ್ಭಿಣಿ ಸ್ತ್ರೀಯ ಆಸೆ ಆಕಾಂಕ್ಷೆ, ಮನೋರಥ, ಆಕೆಯ ಆಸೆಯನ್ನು ಈಡೇರಿಸುವ ಆಚರಣೆಯಾಗಿದೆ. ಸೀಮಂತದ ಆಚರಣೆಯಲ್ಲಿ ಬರುವ ಎಲ್ಲಾ ಕ್ರಿಯೆಗಳು. ಗರ್ಭಸ್ಥ ಶಿಶು ಮತ್ತು ತಾಯಿಗೆ ಸಂಬಂಧಿಸಿದವು ಎನ್ನುವುದರಲ್ಲಿ ಎರಡು ಮಾತಿಲ್ಲ.

ಮರಾಟಿ ನಾಯ್ಕ ಮತ್ತು ಮರಾಟಿಗರಲ್ಲಿ ನಡೆಯುವ ಬಯಕೆಯ ಆಚರಣೆ ಇಂತಿದೆ. "ಹೆಣ್ಣು ಗರ್ಭಧರಿಸಿದ ಏಳನೇ ತಿಂಗಳಲ್ಲಿ ಆಕೆಯ ತವರು ಮತ್ತು ಗಂಡನ ಮನೆಯವರು, ಹಾಗೂ ಹಿರಿಯರೆಲ್ಲ ಸೇರಿ ಕುಲ ಪುರೋಹಿತರಲ್ಲಿ ಅಥವಾ ಜೋಯಿಸರಲ್ಲಿ ತೆರಳಿ ಪರಸ್ಪರ ಸಮಾಲೋಚನೆ ನಡೆಸಿ ಒಂದು ಒಳ್ಳೆಯ ದಿನವನ್ನು ಬಯಕೆಯ ಆಚರಣೆಗೆ ಗೊತ್ತು ಪಡಿಸುತ್ತಾರೆ. ಈ ಆಚರಣೆಯ ಖರ್ಚನ್ನು ಸಾಮಾನ್ಯವಾಗಿ ಗಂಡನ ಮನೆಯವರೇ ವಹಿಸಿಕೊಳ್ಳುವರು. ಸ್ವಜಾತಿ ಬಂಧು–ಬಾಂಧವರಿಗೆ, ಇಷ್ಟ ಮಿತ್ರರಿಗೆ, ನೆರೆಹೊರೆಯವರಿಗೆ ಆಮಂತ್ರಣ ನೀಡುವರು. ಈ ಆಚರಣೆಯ ದಿನ ಹೆಣ್ಣಿನ ತವರು ಮನೆಯವರು ಗರ್ಭಿಣಿಯ ಅಭಿರುಚಿಗೆ ತಕ್ಕಂತೆ ತಿಂಡಿ ತಿನಿಸು, ಎರಡು ತೆಂಗಿನಕಾಯಿ, ಹೊದ್ಲು (ಪೊರಿ), ಅಡಿಕೆ ವೀಳ್ಯೆದೆಲೆ ಮುಖ್ಯವಾಗಿ ಹಿಂಗಾರದ ಹೂವು ಮತ್ತು ಇತರೆ ಹೂವುಗಳು, ಅವಲಕ್ಕಿ, ಬಾಳೆಹಣ್ಣು, ಬಳೆ, ಕುಂಕುಮ, ಕಾಡಿಗೆ, ಇತರೆ ವಸ್ತುಗಳನ್ನು ಹಿಡಿದುಕೊಂಡು ಮುಹೂರ್ತಕ್ಕೆ

ಮುಂಚಿತವಾಗಿ ಗಂಡನ ಮನೆಗೆ ಹೋಗುವರು. ಅಲ್ಲಿ ಅತಿಥಿ ಸತ್ಕಾರವಾದ ನಂತರ ಹೂವು, ಸೀರೆ ಕೊಡುವ ಕಾರ್ಯಕ್ರಮ ನಡೆಯುತ್ತದೆ. ಗಂಡನ ಮನೆಯವರು ತಂದಿರುವ ಹಸಿರು ಬಣ್ಣದ ಸೀರೆ, ರವಿಕೆ, ಹೂವು, ಬಳೆ, ಕುಂಕುಮ ಸಹಿತ ಜಾತೀಯ ಗುರಿಕಾರನ ಕೈಗೆ ನೀಡುವರು. ನೆರೆದ ಸಮಸ್ತರಿಗೆ ತೋರಿಸಿ ಕುಟುಂಬದ ಹಿರಿಯರ, ಗುರಿಕಾರರ ಸಮ್ಮುಖ ದೇವರಲ್ಲಿ ಪ್ರಾರ್ಥನೆ ಮಾಡಿ ಪರಿವಾರ ದೇವರನ್ನು ಸ್ಮರಿಸಿ, ಗ್ರಾಮ ದೇವರನ್ನು ಪ್ರಾರ್ಥಿಸುತ್ತಾ ಹೂ ಸೀರೆಯನ್ನು ಗರ್ಭಿಣಿಯ ತಾಯಿ (ಅತ್ತೆ) ಅಥವಾ ನಾದಿನಿಯ ಕೈಗೆ ನೀಡುವರು. ಇದನ್ನು ತುಳುವಿನಲ್ಲಿ 'ಪೂಸೀರೆಕೊರ್ಪಿನಿ"[೩೮] ಎಂದು ಕರೆಯುತ್ತಾರೆ.

ಗರ್ಭಿಣಿಯ ಶೃಂಗಾರ

ಗರ್ಭಿಣಿಯ ತಾಯಿ ಮತ್ತು ಮುತ್ತೈದೆಯರೆಲ್ಲ ಸೇರಿ ಗರ್ಭಿಣಿಯನ್ನು ಹಿಂಗಾರ ಹೂವಿನೊಂದಿಗೆ ವಧುವಿನಂತೆ ಸಿಂಗರಿಸುತ್ತಾರೆ. ಇಲ್ಲಿ ಗಮನಿಸಬೇಕಾದ ಅಂಶ ಫಲವಂತಿಕೆ, ಸಮೃದ್ಧಿ ಮತ್ತು ಸಂತಾನೋತ್ಪತ್ತಿಯ ಸಂಕೇತವಾಗಿರುವ ಇಡೀ ಹಿಂಗಾರ ಹೂವನ್ನು ಮುಡಿಸುವುದು ಮತ್ತು ಹಸಿರು ಬಣ್ಣದ ಸೀರೆಯನ್ನು ಉಡಿಸುವುದು ಕಂಡುಬರುತ್ತದೆ. ವಿವಿಧ ರೀತಿಯ ಹೂವು ಮತ್ತು ಆಭರಣಗಳಿಂದ ಅಲಂಕಾರ ಮಾಡಿ ಆಕೆಯನ್ನು ಸರ್ವಾಲಂಕಾರ ಭೂಷಿತಳನ್ನಾಗಿ ಮಾಡುತ್ತಾರೆ. ಹಿಂಗಾರದ ಒಳಗಡೆ ಇರುವ ಅಡಿಕೆ ಹೂವುಗಳು, ಚಿಕ್ಕ ಚಿಕ್ಕ ಕಾಯಿಗಳು ಸಂತಾನದ ಸಂಕೇತವೆಂಬ ನಂಬಿಕೆ. ಚಿಕ್ಕ ಚಿಕ್ಕ ಕಾಯಿಗಳು ಇಲ್ಲದೆ ಇರುವ ಹಿಂಗಾರವನ್ನು ಯಾವುದೇ ಶುಭ ಕಾರ್ಯಕ್ಕೆ ಬಳಸುವುದಿಲ್ಲ ಅದು ಬಂಜೆ ಎಂಬ ಭಾವನೆ ಇದೆ.

ಕ್ಷೇತ್ರಕಾರ್ಯ ಸಂದರ್ಭದಲ್ಲಿ ಕೆಲ "ಮರಾಟಿ ಕುಟುಂಬಗಳಲ್ಲಿ ಗರ್ಭಿಣಿ ಸ್ತ್ರೀಯ ಅಲಂಕಾರವಾದ ಬಳಿಕ ಆಕೆಯನ್ನು ಮನೆಯ ಮುಂಭಾಗಕ್ಕೆ ಮುತ್ತೈದೆಯರು ಕರೆದುಕೊಂಡು ಪೂರ್ವ ದಿಕ್ಕಿಗೆ ಮುಖ ಮಾಡಿ ನಿಲ್ಲಿಸುವರು. ಆಕೆಯ ಬಲಭಾಗದಲ್ಲಿ ಗಂಡಸರು ಹಾಗೂ ಎಡಭಾಗದಲ್ಲಿ ಹೆಂಗಸರು ಮಕ್ಕಳು ಸಾಲಾಗಿ ನಿಂತು ಗರ್ಭಿಣಿಯ ಕೈಗೆ ಅಕ್ಕಿ ಕಾಳನ್ನು ನೀಡುವರು. ಆಕೆಯ ಅತ್ತೆ, ನಾದಿನಿ, ನೆರೆದ ಸಮಸ್ತ ನೆಂಟರಿಷ್ಟರ ಅನುಮತಿಯನ್ನು ಪಡೆದು ಕೋಳಿ ಬಿಡುತ್ತೇನೆ ಎಂದು ಹೇಳಿ ಗರ್ಭಿಣಿ ಸ್ತ್ರೀಗೆ ಮೂರು ಬಾರಿ ನಿವಾಳಿಸಿ ಪೂರ್ವಾಭಿಮುಖವಾಗಿ ನೆಲದ ಮೇಲೆ ಬಿಡುವರು. ಈ ಸಂದರ್ಭದಲ್ಲಿ ಗರ್ಭಿಣಿಯು ಆ ಕೋಳಿಗೆ ಕೈಯಲ್ಲಿರುವ ಅಕ್ಕಿ ಕಾಳನ್ನು ಹಾಕುವಳು. ಈ ಕೋಳಿಯನ್ನು ಎಂದೂ ಕೊಲ್ಲದೆ ಎಚ್ಚರಿಕೆಯಿಂದ ನೋಡಿಕೊಳ್ಳುವರು. ಈ ಮಾಹಿತಿಯನ್ನು ಮರಾಟಿ ಸಮುದಾಯದ ಹಿರಿಯರು ನೀಡಿದ್ದಾರೆ"[೩೯]. ಇದರ ಮುಖ್ಯ ಉದ್ದೇಶ ಜೀವಕ್ಕೆ ಜೀವಿಯನ್ನು ಸಾಂಕೇತಿಕವಾಗಿ ಅರ್ಪಿಸುವುದು. ಕೆಟ್ಟಗಳಿಗೆ, ಅನಾಹುತಗಳು, ದೋಷಗಳು ತಪ್ಪಿ ಹೋಗಲಿ ಎಂಬುದು ಇದರ ಆಶಯವಾಗಿದೆ. ತಾತ್ವಿಕವಾಗಿ ಹೇಳುವುದಾದರೆ ಇದೊಂದು ರೀತಿಯ ಬಲಿಯಾಗಿದೆ ಎಂದು ಹೇಳಬಹುದು.

ಹೆಚ್ಚಿನ ಮರಾಟಿಗರ ಕುಟುಂಬಗಳ ಸೀಮಂತದ ಸಂದರ್ಭದಲ್ಲಿ ದೇವರ ಕೋಣೆ ಅಥವಾ ಮನೆಯ ಚಾವಡಿಯಲ್ಲಿ ಗರ್ಭಿಣಿ ಸ್ತ್ರೀಯನ್ನು ಮರದ ಮಣೆ ಅಥವಾ ಕುರ್ಚಿಯ ಮೇಲೆ ಕುಳ್ಳರಿಸುವರು. ಅವಳ ಎಡ ಮತ್ತು ಬಲಭಾಗದಲ್ಲಿ ಇಬ್ಬರು ಗಂಡು ಮತ್ತು ಹೆಣ್ಣು ಮಕ್ಕಳನ್ನು ಕುಳ್ಳರಿಸಿ (ಗಂಡನ ಮನೆಯ ಸಂಬಂಧಿಕರು ಮತ್ತು ಗರ್ಭವತಿಯ ಕಡೆಯ ಸಂಬಂಧಿತ ಮಕ್ಕಳು ಇರುವಂತೆ ನೋಡಿಕೊಳ್ಳುತ್ತಾರೆ) ತಂದಿರುವ ಎಲ್ಲಾ ಸಿಹಿ ತಿಂಡಿಗಳನ್ನು ಮತ್ತು ಹಣ್ಣು ಹಂಪಲು ಮತ್ತು

ಮಾಂಸಾಹಾರದ ಅಡುಗೆಯನ್ನು ದೊಡ್ಡ ಬಾಳೆ ಎಲೆಯಲ್ಲಿ ಬಡಿಸುತ್ತಾರೆ. ಈ ಎಲ್ಲಾ ಕಾರ್ಯವನ್ನು ಹೆಚ್ಚಾಗಿ ಅತ್ತೆ ಮತ್ತು ಮುತ್ತೈದೆಯರು ಮಾಡುವುದು ಕಂಡು ಬರುತ್ತದೆ. ಮೊದಲು ಅತ್ತೆ ಬಡಿಸಿದರೆ ನಂತರ ಐದು ಮಂದಿ ಮುತ್ತೈದೆಯರು ಐದ್ಯೆದು ಭಾರಿ ಸಿಹಿ ತಿಂಡಿಯನ್ನು ಗರ್ಭಿಣಿಗೆ ಬಡಿಸುತ್ತಾರೆ.

ಜಾತಿಯ ಮುಖಂಡರು, ಹಿರಿಯರು, ಕುಟುಂಬಸ್ಥರ ಸಮ್ಮುಖದಲ್ಲಿ ಗುರಿಕಾರನು ಗ್ರಾಮ ದೇವರು ಮಹಾಗಣಪತಿ ಹಾಗೂ ಕುಲದೇವರಿಗೆ ವಂದಿಸುತ್ತಾ ಅಲ್ಲಿ ಸೇರಿದ ಎಲ್ಲರ ಅನುಮತಿ ಪಡೆದು "ಗರ್ಭವತಿಗೆ ಯಾವುದೇ ತೊಂದರೆ ಇಲ್ಲದೆ ಸುಗಮವಾಗಿ ಹೆರಿಗೆ ಆಗಲಿ ಎಂದು ಪ್ರಾರ್ಥಿಸುತ್ತಾರೆ. ಅಲ್ಲದೆ ಗಂಡನ ಮನೆಯಲ್ಲಿ ಅಥವಾ ತವರು ಮನೆಗಾಗಲೀ ಯಾವುದೇ ರೀತಿಯ ಕಷ್ಟ ನಷ್ಟಗಳಾಗದೆ ಸುಗಮವಾಗಿ ಹೆರಿಗೆ ಆಗಿ ತಾಯಿ ಮಗು ಸುಖದಿಂದ ಇರಬೇಕು ಎಂದು ಈ ಸಂದರ್ಭದಲ್ಲಿ ಹರಕೆಗಳನ್ನು ಹೇಳಿಕೊಳ್ಳುತ್ತಾರೆ. ಇದರ ಸಂಕೇತವಾಗಿ ಐದು ಕಾಲು ರೂಪಾಯಿಯನ್ನು ಮುಡಿಪಾಗಿ ದೇವರ ಮಂಟಪದಲ್ಲಿ ಜಾಗರೂಕತೆಯಿಂದ ಎತ್ತಿ ಇಡುತ್ತಾರೆ"[೪೦]. ನಂತರ ಅಕ್ಕಿಕಾಳನ್ನು ಆಕೆಯ ತಲೆಯ ಮೇಲೆ ಹಾಕಿ ಸುಖ ಪ್ರಸವ ಆಗಲಿ ಎಂದು ಹರಸುವರು. ನಂತರ ಆಮಂತ್ರಿಕರಿಗೆ ಹಾಗೂ ಬಂಧು-ಬಾಂಧವರಿಗೆ ಊಟದ ವ್ಯವಸ್ಥೆ ಮಾಡುತ್ತಾರೆ.

ಮಡಿಲು ತುಂಬುವ ಆಚರಣೆ

ಗರ್ಭಿಣಿ ತನ್ನ ತಾಯಿಯ ಮನೆಗೆ ಹೊರಡುವುದಕ್ಕಿಂತ ಮೊದಲು ಗರ್ಭವತಿಗೆ ಮಡಿಲು ತುಂಬಿಸುವ ಪದ್ಧತಿ ಇದೆ. ಅವಳನ್ನು ಪೂರ್ವಾಭಿಮುಖವಾಗಿ ಕುಳ್ಳರಿಸಿ ಸೊಂಟಕ್ಕೆ ಬಿಳಿ ಬಟ್ಟೆ ಕಟ್ಟಿ ಅತ್ತೆ ಅಥವಾ ನಾದಿನಿ ಅಕ್ಕಿ, ಬೆಲ್ಲ, ಕಾಳು ಜೀರಿಗೆ, ಕರಿಮೆಣಸು, ಒಲೆಬೆಲ್ಲ, ಬೆಳ್ಳುಳ್ಳಿ, ಅರಿಶಿಣ ತುಂಡು ಇತ್ಯಾದಿ ವಸ್ತುಗಳನ್ನು ಉಡಿಯಲ್ಲಿ ತುಂಬುವರು. ಉಡಿ ತುಂಬುವ ವಸ್ತುಗಳೆಲ್ಲ ಹೆರಿಗೆ ಸಂದರ್ಭ ಮತ್ತು ಬಾಣಂತನಕ್ಕೆ ಅವಶ್ಯವಾದ ಔಷಧಿ ಸಾಮಾಗ್ರಿಗಳಾಗಿರುತ್ತವೆ. ಈ ಸಂದರ್ಭದಲ್ಲಿ ಮತ್ತೊಮ್ಮೆ ಗುರುಹಿರಿಯರು ಸಮ್ಮುಖದಲ್ಲಿ ಹಿರಿಯ ಮುಖಂಡರೊಬ್ಬರು ಆರೋಗ್ಯವಾಗಿ, ಸುಖವಾಗಿ ಪ್ರಸವವಾಗಿ ತೊಟ್ಟಿಲ ಮಗುವಿನೊಂದಿಗೆ ಬಾ ಎಂದು ಪ್ರಾರ್ಥಿಸಿ ಈಗಾಗಲೇ ಬೇಡಿಕೊಂಡಿರುವ ಹರಕೆಗಳನ್ನು ತೀರಿಸುತ್ತೇವೆ ಎಂದು ಪ್ರಾರ್ಥಿಸುತ್ತಾರೆ. ಈ ಸಮಯದಲ್ಲಿ ಗರ್ಭವತಿ ಹಿರಿಯರ ಮತ್ತು ಗಂಡನ ಪಾದ ಮುಟ್ಟಿ ನಮಸ್ಕರಿಸುತ್ತಾಳೆ. ಆಕೆಯನ್ನು ತವರು ಮನೆಯವರು ಕರೆದುಕೊಂಡು ಹೋಗುತ್ತಾರೆ.

ಬಯಕೆ ಅಥವಾ ಸೀಮಂತ ಆಚರಣೆಯು ಕುಡುಬಿಯ ಸಮುದಾಯದವರನ್ನು ಹೊರತುಪಡಿಸಿ ಈಗ ಕೆಲವು ಕಡೆ ಹಮ್ಮಿಕೊಳ್ಳುತ್ತಾರೆ. ಕುಡುಬಿ ಸಮುದಾಯದಲ್ಲಿ ಮದುವೆ ಆದ ನಂತರ ಕೊಟ್ಟ ಹೆಣ್ಣು ಕುಲದಿಂದ ಹೊರಗೆ ಎಂಬಂತೆ ಅವಳು ಚೊಚ್ಚಲ ಹೆರಿಗೆಗೂ ಕೂಡಾ ತವರು ಮನೆಗೆ ಬರುವ ಕ್ರಮ ಇಲ್ಲ. ಸಾಮಾನ್ಯವಾಗಿ ಉಳಿದ ಸಮುದಾಯಗಳಲ್ಲಿ ಉದಾಹರಣೆಗೆ ಮೊಗವೀರ, ಮೊಯಿಲಿ, ಕುಂಬಾರ, ಮಡಿವಾಳ, ರಾಮಕ್ಷತ್ರಿಯ, ಸೆಟ್ಟಿಗಾರ ಜಾತಿಗಳಲ್ಲಿ ಈ ಪದ್ಧತಿಗಳು ಹೆಚ್ಚಾಗಿ ಕಂಡುಬರುತ್ತದೆ. ಪದ್ಮಶಾಲಿ ಸಮಾಜದಲ್ಲಿ ಫಲವಂತಿಕೆಯ ಸಂಕೇತವಾಗಿ ಕೋಳಿ ಮೊಟ್ಟೆ ಬೇಯಿಸಿ ಅನ್ನದ ಜೊತೆ ಬಡಿಸುವ ಹಾಗೂ ಕೊಡುವ ಕ್ರಮ ಇದೆ. ಗರ್ಭಿಣಿಗೆ ಐದನೇ ತಿಂಗಳಲ್ಲಿ ಗಂಡನ ಮನೆಯಲ್ಲಿ ಹಾಗೂ ಏಳನೆಯ ತಿಂಗಳಲ್ಲಿ ಅವಳ ತವರು ಮನೆಯಲ್ಲಿ ಸಣ್ಣ ಬಯಕೆ ಆಚರಣೆ ಇದೆ. ಬಿಲ್ಲವರಲ್ಲಿ, ಮೊಯ್ಲಿ (ದೇವಾಡಿಗ) ಸಮುದಾಯದವರಲ್ಲೂ ಐದನೇ ತಿಂಗಳು ತಾಯಿ ಮನೆಯಲ್ಲಿ (ಕುಂದಾಪುರ ಪರಿಸರದಲ್ಲಿ) "ಉಂಬುಕೆ" ಎಂಬ ಆಚರಣೆ ಮಾಡಿ, ಏಳನೆಯ ತಿಂಗಳಲ್ಲಿ

ಗಂಡನ ಮನೆಯಲ್ಲಿ ಬಯಕೆ ಸೀಮಂತವನ್ನೂ ಆಚರಿಸುವ ಪದ್ಧತಿ ಇದೆ. ಸಾಮಾನ್ಯವಾಗಿ ಬೆಸ ತಿಂಗಳಲ್ಲಿ ಹೆಚ್ಚಾಗಿ ಈ ಆಚರಣೆ ಹಮ್ಮಿಕೊಳ್ಳುವುದು ಕಂಡುಬರುತ್ತದೆ"[೮೯].

ಈ ಆಚರಣೆಯ ಹಿಂದಿರುವ ತಾತ್ವಿಕತೆಯನ್ನು ಗಮನಿಸಿದರೆ ಗರ್ಭವತಿಯಾದ ಸ್ತ್ರೀಗೆ ವಿವಿಧ ರೀತಿಯ ಬಯಕೆಗಳಿರುತ್ತದೆ. ಪ್ರಾಚೀನ ಕಾಲದಲ್ಲಿ ಮಹಿಳೆಯರು ಪ್ರಸವ ಕಾಲದಲ್ಲಿ ಅಕಾಲಿಕ ಮರಣ ಅಪ್ಪುತ್ತಿದ್ದುದರಿಂದ ಧೈರ್ಯ ತುಂಬುವ ಮತ್ತು ಹಿತೋಪದೇಶ ಮಾಡುವ ಸಲುವಾಗಿ ಸೀಮಂತದ ಆಚರಣೆ ರೂಢಿಗೆ ಬಂದಿತು ಎಂದು ಹಿರಿಯರು ತಿಳಿಸುತ್ತಾರೆ.

ಮರಾಟಿ ಸಮುದಾಯದವರಲ್ಲಿ ಅಂತ್ಯ ಸಂಸ್ಕಾರದ ಆಚರಣೆಗಳು

ಮೃತ ವ್ಯಕ್ತಿಯ ಶವವನ್ನು ಚಾಪೆಯ ಮೇಲೆ ಒಂದು ಬಟ್ಟೆಯನ್ನು ಹಾಸಿ ಉತ್ತರ ದಕ್ಷಿಣಕ್ಕೆ ಮುಖ ಮಾಡಿ ನೆಲದಲ್ಲಿ ಮಲಗಿಸುತ್ತಾರೆ. ಶವದ ತಲೆಯನ್ನು ಉತ್ತರಕ್ಕೆ ಕಾಲನ್ನು ದಕ್ಷಿಣಕ್ಕೆ ಮಲಗಿಸಿ ಶವದ ಮೇಲೆ ಬಿಳಿ ಬಟ್ಟೆಯನ್ನು ಹೊದಿಸುತ್ತಾರೆ. ತಲೆಯ ಮೇಲೆ ಅರ್ಧಭಾಗಕ್ಕೆ ತೆಂಗಿನೆಣ್ಣೆ ಹಾಕಿ ಬಿಳಿ ಬಟ್ಟೆಯ ಬತ್ತಿಯನ್ನು ಇಟ್ಟು ದೀಪ ಮತ್ತು ಊದುಬತ್ತಿಯನ್ನು ಹಚ್ಚುತ್ತಾರೆ. ನಂತರ ಸಂಬಂಧಿಕರು ಬಂಧು-ಮಿತ್ರರು ಸೇರಿದ ಮೇಲೆ ಶವವನ್ನು ಕುಟುಂಬಸ್ಥರು ಹೊರಗೆ ತಂದು ಅಂಗಳದಲ್ಲಿ ಇಟ್ಟಿರುವ ಮರದ ಬೆಂಚಿನ ಮೇಲೆ ಉತ್ತರಕ್ಕೆ ತಲೆ ಮತ್ತು ದಕ್ಷಿಣಕ್ಕೆ ಕಾಲು ಮಾಡಿ ಮಲಗಿಸುವರು. ಮೃತ ವ್ಯಕ್ತಿಗೆ ಸಂಬಂಧಪಟ್ಟ ಮಕ್ಕಳು ಅಥವಾ ಹತ್ತಿರದ ಕುಟುಂಬಸ್ಥರು ಶವಕ್ಕೆ ನೀರು ಹಾಕಿ ತೆಂಗಿನೆಣ್ಣೆ, ಅರಿಶಿಣಪುಡಿ ಮತ್ತು ಸೀಗೆಕಾಯಿಯ ಪುಡಿಯನ್ನು ಹಚ್ಚಿ ನೀರು ಹಾಕಿ ಸಾಬೂನಿನಿಂದ ಸ್ನಾನ ಮಾಡಿಸುವರು. ಎಲ್ಲರೂ ಶವಕ್ಕೆ ಸ್ನಾನ ಮಾಡಿಸಿದ ನಂತರ ಹೆಂಡತಿ ಮಕ್ಕಳು ತೆಂಗಿನ ಎಳೆ ನೀರನ್ನು ಹಾಗೂ ಬಿಸಿ ನೀರನ್ನು ಶವಕ್ಕೆ ಹಾಕುತ್ತಾರೆ. ಇದೇ ಸಂದರ್ಭದಲ್ಲಿ ಬಿಸಿ ಮಾಡಿದ ಮಡಕೆಯನ್ನು ಕವಚಿ ಹಾಕುತ್ತಾರೆ. ಮೊದಲು ಶವದಲ್ಲಿದ್ದ ಬಟ್ಟೆ ತೆಗೆದು ಲಂಗೋಟಿ, ಬಿಳಿ ಧೋತಿ ಮತ್ತು ಅಂಗಿಯನ್ನು ತೊಡಿಸುತ್ತಾರೆ. ಹೆಂಗಸರಿಗೆ ಬಿದಿರಿನ ಚಟ್ಟದಲ್ಲಿ ಮಲಗಿಸುವರು. ಹೊಸ ಬೈರಾಸು ಮತ್ತು ಹೂಗಳನ್ನು ಹಾಕಿ ಬಾಯಿಗೆ ತುಳಸಿ ನೀರನ್ನು ಬಿಡುತ್ತಾರೆ. ಹಣೆಗೆ ಕುಂಕುಮವನ್ನಿಟ್ಟು ಬಾಯಿಗೆ ಎಲೆ ಅಡಿಕೆ ಇಡುತ್ತಾರೆ. ಶವವನ್ನು ಕೊಂಡೊಯ್ಯುವಾಗ ಮಕ್ಕಳು ಅಥವಾ ಕುಟುಂಬಸ್ಥರು ಹೊಸ ಮಡಕೆಯಲ್ಲಿ ಬೇಯಿಸಿದ ಮುಗುಲಕ್ಕಿ (ಅರೆ ಬೆಂದ ಅನ್ನ) ಮತ್ತು ಹೊಸ ಮಡಿಕೆಯಲ್ಲಿ ಲೋಬಾನದಿಂದ ಅಥವಾ ಊದುಬತ್ತಿಯಿಂದ ತಯಾರಿಸಿದ ಬೆಂಕಿಯನ್ನು ಹಿಡಿದುಕೊಂಡು ಸ್ಮಶಾನಕ್ಕೆ ಹೋಗುವರು. ಶವವನ್ನು ದಹನ ಮಾಡುವ ಅಥವಾ ಹೂಳುವ ಸ್ಥಳದಿಂದ ಸ್ವಲ್ಪ ದೂರದಲ್ಲಿ ಶವವನ್ನು ಕೆಳಗಿಳಿಸಿ ತಾವು ಕೊಂಡೊಯ್ದ ಅನ್ನವನ್ನು ಬಿಸಾಡುತ್ತಾ ಮೂರು ಸುತ್ತು ಬಂದು ಸ್ವಲ್ಪ ದೂರದಲ್ಲಿ ಅನ್ನದ ಮಡಿಕೆಯನ್ನು ಒಡೆದು ಹಾಕುತ್ತಾರೆ. ಶವವನ್ನು ಕಟ್ಟಿಗೆಯಿಂದ ತಯಾರಿಸಿದ ಚಟ್ಟಕ್ಕೆ ಮೂರು ಸುತ್ತು ಎಡದಿಂದ ಬಲಕ್ಕೆ ಸುತ್ತಿಸಿ ತಲೆಯನ್ನು ಉತ್ತರಕ್ಕೆ ಕಾಲನ್ನು ದಕ್ಷಿಣಕ್ಕೆ ಇಟ್ಟು ಮಕ್ಕಳು ಅಥವಾ ಕುಟುಂಬಸ್ಥರು ತೆಂಗಿನಗರಿಯಿಂದ ತಯಾರಿಸಿದ ಸೂಟಿಯಿಂದ ಮತ್ತೆ ಮೂರು ಸುತ್ತು ಹಿಮ್ಮುಖವಾಗಿ ಚಲಿಸಿ ಬೆಂಕಿಯನ್ನು ಇಡುತ್ತಾರೆ.

ಶವ ದಹನದ ನಂತರ ಮೂರನೇ ದಿನ ಸೂರ್ಯೋದಯಕ್ಕೆ ಮೊದಲು ಸತ್ತ ಮನೆಯಲ್ಲಿ ಮೂರು ಬೊಗಸೆ ಅಕ್ಕಿ ಹಾಕಿ ಅನ್ನ ತಯಾರಿಸಿ ಅದಕ್ಕೆ ಒಂದು ತುಂಡು ಕುಂಬಳಕಾಯಿ, ಒಂದು ಅಥವಾ ಮೂರು ಬಾಳೆಕಾಯಿ ಉಪ್ಪು ಹಾಕದೇ ಅನ್ನ ಬೇಯಿಸುತ್ತಾರೆ. ಮನೆಯ ಹಿರಿಯ ಮಹಿಳೆ ಮೂರು ಅಕ್ಕಿ ರೊಟ್ಟಿ ಮಾಡಿ ನೀಡುವಳು. ನಂತರ ಬಾಳೆಎಲೆ, ಗೋಮೂತ್ರ, ಗೋಮಯ, ಹಾಲು, ತುಳಸಿಗಿಡ, ಬಿಳಿ ಹೂವುಗಳು, ಎಳನೀರು, ಊದುಬತ್ತಿ, ನೀರು ಹಿಡಿದುಕೊಂಡು ಶವ ಸಂಸ್ಕಾರ

ಮಾಡಿದ ಸ್ಥಳಕ್ಕೆ ತೆಗೆದುಕೊಂಡು ಹೋಗುವರು. ಅಲ್ಲಿ ಬೂದಿಯನ್ನು ಕೂಡಿ ಹಾಕಿ ನೀರು ಹಾಕಿ ತುಳಸಿಗಿಡ ನೆಡುತ್ತಾರೆ. ನಂತರ ದಕ್ಷಿಣಕ್ಕೆ ಮುಖ ಮಾಡಿ ಬಾಳೆಎಲೆ ಹಾಕಿ ಮನೆಯಿಂದ ತಂದಿರುವ ಆಹಾರದ ಎಲ್ಲಾ ವಸ್ತುಗಳನ್ನು ಅದರಲ್ಲಿ ಬಡಿಸುವರು, ಎಳನೀರು, ಹೂವು, ನೀರು, ಬಾಳೆಹಣ್ಣು ಇಟ್ಟು ಊದುಬತ್ತಿಯಿಂದ ಆರತಿ ಮಾಡುವರು. ಮನೆಗೆ ಹಿಂತಿರುಗಿ ಹೋಗುವಾಗ ಒಂದು ಮಣ್ಣಿನ ಸಣ್ಣ ಮಡಿಕೆಯಲ್ಲಿ ಎಲುಬು ಇದ್ದ ಅಸ್ಥಿಯನ್ನು (ಬೂದಿ) ಹಾಕಿ ಆ ಮಡಿಕೆಯನ್ನು ಬಿಳಿ ಬೈರಾಸಿನಲ್ಲಿ ಕಟ್ಟಿ ಮನೆಗೆ ತಂದು ಮನೆಯ ಹೊರಗಡೆ ಹಾಳೆಮರ ಅಥವಾ ಹಲಸಿನಮರಕ್ಕೆ ಕಟ್ಟುವರು. ಈ ಒಟ್ಟು ಪ್ರಕ್ರಿಯೆಯನ್ನು ತುಳುವಿನಲ್ಲಿ 'ಧೂಳೊಪ್ಪ' ಎಂದು ಕರೆಯುವರು.

ಮರಾಟಿಗರಲ್ಲಿ ಏಳನೆಯ ಅಥವಾ ಒಂಭತ್ತನೆಯ ದಿನಕ್ಕೆ ಕ್ಷೌರಿಕನನ್ನು ಮನೆಗೆ ಕರೆಸಿ ನಿಧನ ಹೊಂದಿದ ವ್ಯಕ್ತಿಯ ಗಂಡು ಮಕ್ಕಳ ತಲೆ ಬೋಳಿಸುವರು ಮತ್ತು ಕುಟುಂಬದ ಪುರುಷರು ಕ್ಷೌರ ಮಾಡಿಸುವರು. ಅಂದು ಕ್ಷೌರಿಕನಿಗೆ ಬಿಳಿ ಬೈರಾಸು, ವೀಳ್ಯೆದೆಲೆ, ಅಡಿಕೆ ಒಂದು ಸೇರು ಅಕ್ಕಿ ಮತ್ತು ಕಾಣಿಕೆ ನೀಡುವುದನ್ನು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ತಿಳುವಳಿಕೆದಾರರು ಮಾಹಿತಿ ನೀಡಿದ್ದಾರೆ.

"ಹತ್ತನೆಯ ದಿನ ಮರಾಟಿ ಸಮುದಾಯದವರು ಸತ್ತ ವ್ಯಕ್ತಿಯ ಅಸ್ಥಿಯನ್ನು ಅರ್ಚಕರ ಮೂಲಕ ವಿಧಿ ವಿಧಾನಗಳೊಂದಿಗೆ ಹರಿಯುವ ನೀರಿನಲ್ಲಿ (ನದಿ ಅಥವಾ ಸಮುದ್ರ) ವಿಸರ್ಜನೆ ಮಾಡುವರು. ಹನ್ನೊಂದನೆಯ ದಿನ ಅರ್ಚಕರ ಮೂಲಕ ಮನೆ ಹಾಗೂ ದೈವ ದೇವರನ್ನು ಶುದ್ಧ ಮಾಡಿ ಮಧ್ಯಾಹ್ನ ಊಟಕ್ಕೆ ಮಾಡಿದ ಅನ್ನ ಪಲ್ಯ ಮತ್ತಿತರ ಸಿಹಿ ವಸ್ತುಗಳನ್ನು ಕಾಗೆಗೆ ಇಟ್ಟು, ನಂತರ ಊಟ ಮಾಡುತ್ತಾರೆ. ಹನ್ನೆರಡನೆಯ ದಿನ ಅರ್ಚಕರ ಮೂಲಕ ಹೋಮ ಮಾಡಿಸಿ ಪಿಂಡೀಕರಣ ಮಾಡಿ ಕುಟುಂಬದವರೆಲ್ಲ ಸೇರಿ, ಅಡುಗೆ ಮಾಡಿ ಸತ್ತವರಿಗೆ ಮನೆಯ ಒಳಗೆ ಬಡಿಸಿ ಎಳ್ಳು ನೀರನ್ನು ಬಿಡುವರು. ಅಂದು ಒಂದು ಬಾಳೆಎಲೆಯನ್ನು ಪೂರ್ವಕ್ಕೆ ಮುಖ ಮಾಡಿ ಹಾಕಿ ಅದಕ್ಕೆ ಆಹಾರ ಬಡಿಸಿ, ಹಾಲು ಬಿಡುವರು. ನಂತರ ಎಲೆಯನ್ನು ದನಕ್ಕೆ ಇಡುವರು. ಇನ್ನೊಂದು ಎಲೆಯನ್ನು ದಕ್ಷಿಣಕ್ಕೆ ಮುಖ ಮಾಡಿ ಹಾಕಿ ತಂಬಿಗೆಯಲ್ಲಿ ನೀರನ್ನೂ ಇಟ್ಟು, ಅದಕ್ಕೂ ಮಾಡಿದ ಅಡುಗೆಯನ್ನು ಬಡಿಸಿ ಎಳ್ಳು ನೀರನ್ನು ಕುಟುಂಬದ ಎಲ್ಲಾ ಸದಸ್ಯರು ಸೇರಿ ಬಿಡುತ್ತಾರೆ. ನಂತರ ಪೂರ್ವಕ್ಕೆ ಮುಖ ಮಾಡಿ ಹಾಕಿದ ಎಲೆಯನ್ನು ದನಕ್ಕೆ ಇಟ್ಟು ದಕ್ಷಿಣಕ್ಕೆ ಮುಖ ಮಾಡಿದ ಎಲೆಯನ್ನು ಕಾಗೆಗಳಿಗೆ ಇಟ್ಟು ಕಾಗೆ ಅಥವಾ ದನ ಮುಟ್ಟಿದ ಮೇಲೆ ಎಲ್ಲರೂ ಸೇರಿ ಊಟ ಮಾಡುತ್ತಾರೆ. ವ್ಯಕ್ತಿ ಸತ್ತ ದಿನದಿಂದ ಹನ್ನೆರಡನೆಯ ದಿನದ ಸಂಜೆಯವರೆಗೆ ಕುಟುಂಬದವರು ಮತ್ತು ಮನೆಯವರು ಮದ್ಯ ಮಾಂಸವನ್ನು ಸೇವಿಸುವಂತಿಲ್ಲ. ಮರಾಟಿಗರಲ್ಲಿ ಅಂದೇ ರಾತ್ರಿ ಸತ್ತವರಿಗೆ ಮಾಂಸದ ಊಟವನ್ನು ಮನೆಯಲ್ಲಿ ತಯಾರಿಸಿ ಬಡಿಸಿ ಇಡುವ ಕ್ರಮ ಇವರಲ್ಲಿದೆ. ಮತ್ತು ಮರಾಟಿಗರಲ್ಲಿ ಅವರವರ ಅನುಕೂಲಕ್ಕೆ ತಕ್ಕಂತೆ ಎಲ್ಲರನ್ನೂ ಕರೆದು ವೈಕುಂಠ ಸಮಾರಾಧನೆಯನ್ನು ಮಾಡುವುದು ಕಂಡು ಬಂದಿರುತ್ತದೆ."[೪೨]

ಮರಾಟಿ ಮತ್ತು ಮರಾಟಿ ನಾಯ್ಕ ಸಮುದಾಯಗಳಲ್ಲಿರುವ ಗಾದೆಗಳು

ಬ್ರಹ್ಮಾವರದಲ್ಲಿರುವ ಮಾಬುಕಳ ನದಿಯ ಉತ್ತರಕ್ಕಿರುವ ಗ್ರಾಮಾಂತರ ಪ್ರದೇಶದಲ್ಲಿ ಹಾಗೂ ಕುಂದಾಪುರ ತಾಲೂಕಿನ ಎಲ್ಲಾ ಪ್ರದೇಶಗಳಲ್ಲಿ ಕುಂದಾಪ್ರ ಕನ್ನಡ ಭಾಷೆ ಪ್ರಚಲಿತದಲ್ಲಿರುವುದರಿಂದ ಗ್ರಾಮಾಂತರ ಪ್ರದೇಶದಲ್ಲಿ ವಾಸವಿರುವ ಮರಾಟಿ ಮತ್ತು ಮರಾಟಿನಾಯ್ಕರು ಪ್ರಾದೇಶಿಕ ಭಾಷೆಯಿಂದ ಪ್ರಭಾವಿತಗೊಂಡು ಕೆಲವು ಶತಮಾನಗಳಿಂದ ಈ ಪ್ರದೇಶದಲ್ಲಿರುವುದರಿಂದ ಅವರ ಆಚಾರ-ವಿಚಾರ, ರೂಢಿ-ಸಂಪ್ರದಾಯ ಜೀವನ. ವಿಧಾನಗಳ ಮೇಲೆ ಪ್ರಭಾವ ಬೀರಿರುವುದರಿಂದ ಇಲ್ಲಿಯ

ಮರಾಟಿ ನಾಯ್ಕರು ತಮ್ಮಲ್ಲಿ ಕುಂದಾಪ್ರ ಭಾಷೆಯ ಗಾದೆಗಳನ್ನೆ ತಮ್ಮ ದಿನನಿತ್ಯದ ಜೀವನದಲ್ಲಿ ಉಪಯೋಗಿಸುತ್ತಿರುವುದು ಕಂಡುಬಂದಿರುತ್ತದೆ. ಅವು ಈ ಕೆಳಗಿನಂತಿವೆ.

ಗಾದೆಗಳು ನಮ್ಮ ಬದುಕಿನ ಅವಿಭಾಜ್ಯ ಅಂಗಗಳು. ಗಾದೆ ಇಲ್ಲದೆ ಭಾಷೆಯಿಲ್ಲ. ಗಾದೆ ಬಾರದ ಮನುಷ್ಯನಿಲ್ಲ. 'ವೇದ ಸುಳ್ಳಾದರೂ ಗಾದೆ ಸುಳ್ಳಾಗದು' ಎಂಬ ಮಾತಿನಂತೆ ಗಾದೆಗಳು ಸತ್ಯಕ್ಕೆ ಹಿಡಿದ ಕನ್ನಡಿಯಾಗಿವೆ. ಬಹುಶಃ ಗಾದೆ ಮುಟ್ಟದ ಬದುಕಿನ ಹಂತವಿಲ್ಲ. ಯಾವುದೇ ವಸ್ತುವಿಲ್ಲ. ಯಾವುದೇ ವಿಷಯವಿಲ್ಲ. ಗಾದೆಗಳು ಜನರಲ್ಲಿ ಜ್ಞಾನ ಮತ್ತು ವಿವೇಕವನ್ನು ಬೆಳೆಸುವ ಸಾಧನಗಳಾಗಿವೆ. ಈ ಗಾದೆಗಳು ಸಂಕ್ಷಿಪ್ತವೂ ಅರ್ಥವತ್ತಾಗಿಯೂ ಇದ್ದು ಕೇಳುವವರನಲ್ಲಿ ಗಾಢವಾದ ಪರಿಣಾಮವನ್ನು ಬೀರಲು ಶಕ್ತವಾಗಿದೆ. ಈ ರೀತಿಯ ಗಾದೆಗಳನ್ನು ತಿಳಿದುಕೊಂಡವ ಒಬ್ಬ ಉತ್ತಮ ವಾಗ್ಮಿಯೂ ಚಿಂತಕನೂ ಜ್ಞಾನಿಯೂ ಆಗುವನು. ವಿವಿಧ ಭಾಷೆಗಳಲ್ಲಿ ಈ ಗಾದೆಗಳು ಸೃಷ್ಟಿಯಾಗಿವೆ. ಅದೇ ರೀತಿ ಕುಂದಾಪುರ ಕನ್ನಡದಲ್ಲೂ ನೂರಾರು ಚುರುಕು ಮುಟ್ಟಿಸುವ ಗಾದೆಗಳು ಇವೆ. ಈ ಗಾದೆಗಳು ಸೃಷ್ಟಿಯಾಗಲು ಕಾರಣವೇನು? ನಡೆದ ಕಥೆಯೇನು? ಎಂದು ತಿಳಿಸಲು ಇಲ್ಲಿ ಕೆಲವನ್ನು ವಿಶ್ಲೇಷಿಸಲಾಗಿದೆ. ಅವುಗಳಲ್ಲಿ ಕೆಲವು ಹಾಸ್ಯಮಯವಾಗಿದ್ದರೆ, ಇನ್ನು ಕೆಲವು ಗಾದೆಗಳು ಕಟು ಸತ್ಯವನ್ನು ವಿಶಿಷ್ಟ ಶೈಲಿಯಲ್ಲಿ ನಿರೂಪಿಸುವುದನ್ನು ಗಮನಿಸಬಹುದು.

• ಬೇಡುಕ್ಕೆ ಬಂದವ ಬೆಂತಕ್ಕಿ ಬೇಕಂತ

ಒಬ್ಬಾತ ಬೇಡಲಿಕ್ಕೆ ಬಂದ ಭಿಕ್ಷುಕ ಮನೆಯವರನ್ನು ಅವರು ಯಾವುದೋ ಒಂದು ಬಗೆಯ ಅಕ್ಕಿಯನ್ನು ತಂದು ಭಿಕ್ಷುಕನಿಗೆ ಹಾಕಿದರು. ಕೊಟ್ಟದ್ದನ್ನೇ ತೆಗೆದುಕೊಳ್ಳುವುದನ್ನು ಬಿಟ್ಟು, ಒಂದು ವೇಳೆ ಆ ಭಿಕ್ಷುಕ ತನಗೆ ಬೇಕಾದ ಬೆಂತಕ್ಕಿಯನ್ನೇ (ಬೆಳ್ತಿಗೆ ಅಕ್ಕಿ) ಕೇಳಿದರೆ ಹೇಗಿರಬೇಡ? ಈ ರೀತಿ ಕೆಲವರು ತಮ್ಮ ಸ್ಥಿತಿಯನ್ನು ಪರರ ಒಳ್ಳೆಯ ಸ್ವಭಾವವನ್ನು ನೋಡದೇ ತಮ್ಮ ಸ್ವಾರ್ಥ ಸಾಧಿಸಿಕೊಳ್ಳಲು ಬಯಸಿದಾಗ ಈ ಗಾದೆ ಬಳಕೆಯಾಗುತ್ತದೆ. ಈ ಗಾದೆಯ ಅರ್ಥವನ್ನೇ ಕೊಡುವ ಇನ್ನೊಂದು ಗಾದೆಯೆಂದರೆ, 'ದಾನಕ್ಕೆ ದನ ಕೊಟ್ರೆ, ಹಲ್ ಎಣಿಸ್ತಾ'.ಒಬ್ಬನಿಗೆ ದಾನವಾಗಿ ದನವನ್ನು ಕೊಟ್ಟರು. ಆತ ಕೂಡಲೇ ಅದರ ಹಲ್ಲನ್ನು ಎಣಿಸತೊಡಗಿ ಅದು ಮುದಿಯೋ ಪ್ರಾಯದ್ದೋ ಎಂದು ನೋಡ ತೊಡಗಿದ. ಇಲ್ಲಿಯೂ ಕೂಡ ಆತನು ತನ್ನ ಸ್ವಾರ್ಥವನ್ನು ಸಾಧಿಸಲು ಪ್ರಯತ್ನಿಸುತ್ತಿದ್ದಾನೆ.

• ಬಾವಿಗೆ ಬಿದ್ರ ಬಾಂಚೋತ್ ಬಿಡ

ಒಬ್ಬನು ನಡೆದುಕೊಂಡು ಹೋಗುತ್ತಿರುವಾಗ ಆಕಸ್ಮಿಕವಾಗಿ ಕಟ್ಟೆಯಿಲ್ಲದ ಬಾವಿಯಲ್ಲಿ ಬಿದ್ದನು. ಮೇಲೆ ಬರಲು ಆತನಿಂದ ಸಾಧ್ಯವಾಗಲೇ ಇಲ್ಲ. ಸಹಾಯಕ್ಕಾಗಿ ಕೂಗ ತೊಡಗಿದ. ಆತನ ಕೂಗು ಕೇಳಿ ದಾರಿಹೋಕನೊಬ್ಬ ಆ ಬಾವಿಯ ಬಳಿ ಬಂದನು. ಆಗ ಬಾವಿಗೆ ಬಿದ್ದ ವ್ಯಕ್ತಿಯು ಏಯ್ ಬಾಂಚೋತ್, ನನ್ನನ್ನು ಮೇಲೆತ್ತು ಎಂದ. ಸಹಾಯಕ್ಕಾಗಿ ಬಂದ ಆ ವ್ಯಕ್ತಿಗೆ ಸಿಟ್ಟು ಬಂದು ಈತನ ಮೇಲೊಂದು ಕಲ್ಲು ಹೊತ್ತು ಹಾಕಿ ಮುಂದೆ ಹೋದನು.ಹೀಗೆ ಕೆಲವರು ಕಷ್ಟದಲ್ಲಿದ್ದರೂ ದರ್ಪವನ್ನೆ ತೋರಿಸುತ್ತಾರೆ. ಪ್ರತಿಯೊಂದು ಕೆಲಸಕ್ಕೂ ಇತರರನ್ನು ಆಜ್ಞಾಪಿಸುತ್ತಾರೆ. ಈಗ ಈ ಗಾದೆ ಮಾತು ಹುಟ್ಟಿಕೊಂಡಿದೆ.

• ಕಲ್ತಿದ್ದ್ ಹೆಚ್ಚಾಯ್ತು: ಕಾಲ್ ಮೇಲೋಯ್ತು : ಗಾಳಿ ಬರ್‍ಕ; ಮನೆಗೆ ಹೋಯ್ಕ

ಹಿಂದೆ ಕುಂಟನೊಬ್ಬ ತನ್ನೆರಡು ಊರುಗೋಲುಗಳ ಆಧಾರದಿಂದ ಹೋಗುತ್ತಿರುವಾಗ ಮಾವಿನ ಮರದ ಮೇಲೆ ಹಣ್ಣನ್ನೊಂದು ಕಂಡನು. ಆಸೆ ತಾಳಲಾರದೆ ಆ ಮಾವಿನ ಹಣ್ಣನ್ನು ತೆಗೆಯಲು

ಪ್ರಯತ್ನಿಸಿದ. ಸಾಧ್ಯವಾಗಲಿಲ್ಲ, ಕೊನೆಗೆ ತನ್ನ ಒಂದು ಊರುಗೋಲನ್ನು ಎತ್ತಿ ಬೀಸಿದ. ಆದರೆ ಅದು ಮರದಲ್ಲಿ ಸಿಲುಕಿಕೊಂಡಿತು. ಅದನ್ನು ತೆಗೆಯಲು ಇನ್ನೊಂದು ಊರುಗೋಲು ಬಳಸಿ ಕೆಳಕ್ಕೆ ಬಿದ್ದ. ಈಗ ಎರಡೂ ಊರುಗೋಲುಗಳು ಮರಕ್ಕೆ ಸಿಲುಕಿಕೊಂಡವು. ಈಗ ಆ ಕೋಲು ಬೀಳಲು ಗಾಳಿಯನ್ನು ಕಾಯುತ್ತಾ ಕುಳಿತ. ಕೊನೆಗೆ ಗಾಳಿ ಬಂದು ಊರುಗೋಲುಗಳು ಕೆಳಕ್ಕೆ ಇದ್ದಾಗ ಮನೆಗೆ ಹೊರಟ.ಹೀಗೆ ಕೆಲವರು ಅತೀ ಬುದ್ಧಿವಂತಿಕೆಯಿಂದ ಸಂಕಷ್ಟಕ್ಕೆ ಸಿಲುಕುವ ಸಾಧ್ಯತೆಯಿದೆ. ಆಗ ಈ ಗಾದೆಯನ್ನು ಬಳಸುತ್ತಾರೆ.

ಮಲ್ಲಿಗೆ ಹೂವಿನ ದೆಸೆಯಿಂದ ಬಾಳೆ ಪಟ್ಟೆಗೆ ಗಿರಾಕಿ

ಮಲ್ಲಿಗೆ ಹೂವಿನ ಮಾಲೆಯನ್ನು ಸಾಮಾನ್ಯವಾಗಿ ಬಾಳೆಗಿಡದ ನೂಲಿನಿಂದ ಕಟ್ಟುತ್ತಾರೆ. ಮಲ್ಲಿಗೆ ಹೂವಾದರೂ ತನ್ನ ಸುವಾಸನೆಯಿಂದಾಗಿ ಎಲ್ಲರನ್ನೂ ತನ್ನತ್ತ ಆಕರ್ಷಿಸುತ್ತದೆ. ಆದರೆ ಬಾಳೆ ನೂಲನ್ನು ಯಾರೂ ಬಯಸುವುದಿಲ್ಲ. ಆದರೆ ಮಲ್ಲಿಗೆ ಮಾಲೆಯನ್ನು ಕೊಳ್ಳುವಾಗ ಬಾಳೆ ಪಟ್ಟೆಯನ್ನು ಕೊಳ್ಳಬೇಕು.ಈ ರೀತಿ ಜ್ಞಾನಿಗಳು ಸಜ್ಜನರ ಸಹವಾಸದಿಂದ ಅವರ ಸಹಚರರೂ ಗೌರವನ್ನು ಪಡೆಯುತ್ತಾರೆ.

- **ಪಾಪಿ ಹೋದಲ್ಲೆಲ್ಲಾ ಮುಂಗಾಲ್ ಗೆಂಟ್ ನೀರ್**

ಒಬ್ಬ ವ್ಯಕ್ತಿಯು ಹಲವು ಪಾಪ ಕಾರ್ಯಗಳನ್ನು ಮಾಡಿದ. ಅದರ ಫಲವಾಗಿ ಮುಂದೆ ಆತನಿಗೆ ನೂರಾರು ಕಷ್ಟಗಳ ಸರಮಾಲೆಯೇ ಬಂದಿತು. ಇದರಿಂದ ಜಿಗುಪ್ಸೆಗೊಂಡ ಆತ ನೀರಿಗೆ ಹಾರಿ ಆತ್ಮಹತ್ಯೆ ಮಾಡಿಕೊಳ್ಳಲು ನಿರ್ಧರಿಸಿದ. ಆದರೆ ಆತ ಎಲ್ಲಿ ಹೊಳೆ ಕೆರೆಗೆ ಹೋದರೂ ಅಲ್ಲಿ ಮುಂಗಾಲಿನವರೆಗೆ ಮಾತ್ರ ನೀರಿರುತ್ತಿತ್ತು. ಆತನಿಗೆ ಆತ್ಮಹತ್ಯೆ ಮಾಡಿಕೊಳ್ಳಲು ಆಗಲಿಲ್ಲ.ಈ ರೀತಿ ಒಬ್ಬ ವ್ಯಕ್ತಿಗೆ ಸಮಸ್ಯೆಗಳ ಸರಪಳಿಯಿಂದ ಹೊರ ಬರಲು ಆಗದೆ ಇದ್ದರೆ ಈ ಮಾತನ್ನು ಹೇಳುತ್ತಾರೆ.

- **ನೆರ್ಮನಿ ಹಾಳಾರೆ ಕರು ಕಟ್ಟುಕೆ ಜಾಗ ಅಂಬು ಜಾತಿ**

ಹಿಂದೆ ಒಂದು ಹಳ್ಳಿಯಲ್ಲಿ ಜೋರಾಗಿ ಮಳೆ ಬಂದಿದ್ದುದರಿಂದ ಮನೆಯೊಂದು ಮುರಿದು ಬಿತ್ತು. ಆದರೆ ಅವನ ನೆರೆಮನೆಯಾತನು ಈತನ ಸಹಾಯಕ್ಕೆ ಬರದೇ ನಮಗೆ ಕರು ಕಟ್ಟಲಿಕ್ಕೆ ಜಾಗ ದೊರೆಯಿತು ಎಂದು ಸಂತೋಷಪಟ್ಟನಂತೆ. ಮನೆಗೆ ಬೆಂಕಿ ಹಿಡಿದಾಗ ಅದರಲ್ಲೇ ರೊಟ್ಟಿ ಕಾಯಿಸುವ ಗುಣದವರು. ಇಂಥವರನ್ನು ಕಂಡು ಪರರ ಕಷ್ಟದಲ್ಲೂ ತಮ್ಮ ಸ್ವಾರ್ಥವನ್ನೇ ಕಾಣುವ ವ್ಯಕ್ತಿಗಳೆಂದು ಹೇಳಲು ಮೇಲಿನ ಮಾತನ್ನು ಬಳಸುತ್ತಾರೆ.

- **ಸುಮ್ಮೆತೀನ್ ಮಾಣಿ ಅಂದ್ರ್ ಓಣಿಮಕ್ಕಿ ಹಣ್ಣಲ್ಲಪ್ಪಯ್ಯ ಅಂದ**

ಸಂಸಾರವೆಂದ ಮೇಲೆ ಸುಳ್ಳು, ಮೋಸ ಎಲ್ಲಾ ಮಿಶ್ರವಾಗಿರುತ್ತದೆ. ಕೆಲವು ಪರಿಸ್ಥಿತಿಯಲ್ಲಿ ಸತ್ಯವನ್ನು ಮರೆ ಮಾಡುವುದು ಅನಿವಾರ್ಯವಾಗಿರುತ್ತದೆ. ಅಂತಹ ಸಂದರ್ಭದಲ್ಲಿ ಯಾರಾದರೊಬ್ಬರ ಮಾತಿನಿಂದ ಕಾರ್ಯ ಕೆಡುವುದಿದೆ. ಒಮ್ಮೆ ತಂದೆ ಮಗ ಸಂತೆಯಿಂದ ಮನೆಗೆ ಬರುತ್ತಿದ್ದರು. ಪಕ್ಕದ ಮನೆಯ ಓಣಿಯಲ್ಲಿ ಬರುತ್ತಿರುವಾಗ ಹಿತ್ತಲ ಮರದಿಂದ ಹಲಸಿನ ಹಣ್ಣನ್ನು ಕದ್ದು ತರುತ್ತಾರೆ. ಮನೆಯಲ್ಲಿ ಯಾರಿಗೂ ಕದ್ದು ತಂದ ವಿಷಯವನ್ನು ಹೇಳಬೇಡ ಎಂದು ಮಗನಿಗೆ ತಂದೆ ತಾಕೀತು ಮಾಡಿರುತ್ತಾನೆ. ಹಣ್ಣನ್ನು ತಿನ್ನುವಾಗ ಮನೆಯವರೆಲ್ಲಾ ಎಲ್ಲಿಯ ಹಣ್ಣು ಇದು ಎಂದು ಕೇಳುತ್ತಾರೆ. ತಂದೆ ಮಾತ್ರ ಮಗನಿಗೆ ಪದೇ ಪದೇ 'ಸುಮ್ಮನೆ ತಿನ್ಸ್ ಮಾಣಿಯಾ' ಎನ್ನುತ್ತಿರುತ್ತಾನೆ. ಮನೆಯವರು ಸಂತೆ ಹಣ್ಣು ಇರಬೇಕು ರುಚಿಯಾಗಿದೆ ಎನ್ನುತ್ತಾರೆ. ಆಗ ತಟ್ಟನೇ ಮಗ 'ಓಣಿಮಕ್ಕಿ ಹಣ್ಣುವೆ

ಅಪ್ಪಯ್ಯ' ಎನ್ನುತ್ತಾನೆ. ಮೊದಲೇ ಅವಿಭಕ್ತ ಕುಟುಂಬ, ಅಷ್ಟು ಜನರ ಮುಂದೆ ತಲೆ ತಗ್ಗಿಸುವ ಸರದಿ ತಂದೆಗಾಯಿತು.

• ಜನರತ್ರ ಇದ್ದ ಕಾಣ್ಕ; ನೀರಿನಾಳ ಇಳ್ದ ಕಾಣ್ಕ

ಜನರನ್ನು ಅವರ ಮುಖವನ್ನು ನೋಡಿ ಅಳೆಯುವುದಲ್ಲ ಸಭ್ಯನಂತೆ ಕಾಣುವ ಮುಖವಿರುವವನೇ ಆಗಲೀ, ವಿಕಾರವಾದ ಮುಖದವನೇ ಆಗಿರಲಿ ಅವನ ಬಳಿ ಕೆಲವು ಕಾಲ ಜೊತೆಯಾಗಿ ಇರಬೇಕು. ಆಗ ಮಾತ್ರ ಅವನ ನಿಜ ಸ್ವರೂಪದ ಅರಿವಾಗುತ್ತದೆ. ನಿಂತ ನೀರಾಗಲಿ, ಹರಿವ ನೀರಾಗಲಿ ಹೊರಗಿನಿಂದಲೇ ಅದರ ಆಳ ತಿಳಿಯುವುದು ಅಸಾಧ್ಯ. ನೀರಿನ ಆಳ ತಿಳಿಯಬೇಕಾದರೆ ಅದರಲ್ಲಿ ಇಳಿಯಬೇಕು. ಈ ರೀತಿ ಯಾರನ್ನೇ ಆಗಲಿ, ಪರೀಕ್ಷಿಸಿಯೇ, ಯೋಗ್ಯರೋ, ಅಯೋಗ್ಯರೋ ಎಂದು ನಿರ್ಧರಿಸಬೇಕು.

• ವಾದಿ ದೋಣಿ ಹತ್ತಿದ, ಸಾಕ್ಷಿ ನೀರಿಗ್ ಹಾರ್ದ

ಹಿಂದೆ ಒಬ್ಬ ವಾದಿಯು ನ್ಯಾಯಾಲಯದಲ್ಲಿ ಮೊಕದ್ದಮೆಯನ್ನು ಹೂಡಿದ್ದ. ವಿಚಾರಣೆಯ ದಿನದಂದು ಈ ವಾದಿ ಹಾಗೂ ಸಾಕ್ಷಿ ಇಬ್ಬರೂ ನ್ಯಾಯಾಲಯಕ್ಕೆ ಹೊರಟರು. ಮಾರ್ಗದಲ್ಲಿ ಒಂದು ನದಿಯನ್ನು ದಾಟಬೇಕಿತ್ತು. ನ್ಯಾಯಾಲಯದ ಸಮಯವು ಮೀರುತ್ತಿದ್ದರೂ ವಾದಿಯು ಸಾವಕಾಶವಾಗಿ ದೋಣಿಯನ್ನು ಹತ್ತಿದ. ಆದರೆ ಸಾಕ್ಷಿಯು ತಡವಾಗಬಾರದು ಎಂದು ನೀರಿಗೆ ಹಾರಿ ಈಜ ತೊಡಗಿದನಂತೆ.

ಈ ರೀತಿಯಲ್ಲಿ ಯಾವುದೇ ಸಂದರ್ಭದಲ್ಲಿ ತೊಂದರೆಗೊಳಗಾದವರು ಅಥವಾ ಅವಶ್ಯಕತೆಯಿರುವವರು ನಿಶ್ಚಿಂತರಾಗಿದ್ದರೂ ಅನಾವಶ್ಯಕವಾಗಿ ಇತರರು ಅವರ ಬಗ್ಗೆ ತಲೆಕೆಡಿಸಿಕೊಂಡಾಗ ಆ ಗಾದೆಯನ್ನು ಹೇಳುತ್ತಾರೆ.

• ಹಡಗು ತುಂಬಕ್ಹೋದವ ಬಂದ, ಹೊಟ್ಟೆ ತುಂಬಕ್ಹೋದವ ಬರಲಿಲ್ಲ

ಈ ಗಾದೆಯು ವಿಶಿಷ್ಟ ರೀತಿಯಲ್ಲಿ ಜೀವಿಗಳ ಹಸಿವಿನ ಸ್ವಭಾವವನ್ನು ತಿಳಿಸುತ್ತದೆ. ಎಷ್ಟೇ ದೊಡ್ಡ ಹಡಗು ಆಗಿದ್ದರೂ ಅದನ್ನು ತುಂಬಿಸಬಹುದು. ಆದರೆ ಹೊಟ್ಟೆಯ ವಿಷಯ ಹಾಗಲ್ಲ. ಎಷ್ಟೇ ಆಹಾರ ತಿಂದರೂ ಸ್ವಲ್ಪವೇ ಹೊತ್ತಿನಲ್ಲಿ ಹಸಿವು ಮರುಕಳಿಸುತ್ತದೆ ಎಂಬುದೇ ಇದರ ಗೂಡಾರ್ಥ.

• ಸರಿ ಸರಿ ಇದ್ರೆ ಪರಿ ಪರಿ ನೆಂಟ್ರು

ಒಬ್ಬ ದೊಡ್ಡ ಜಮೀನ್ದಾರನಿದ್ದ. ಈತನೆಂದರೆ ನೂರಾರು ಬಂಧುಗಳಿಗೆ ಅಚ್ಚುಮೆಚ್ಚು. ಆದರೆ ಒಮ್ಮೆ ಜಮೀನ್ದಾರನ ಬೆಳೆಯೆಲ್ಲಾ ರೋಗಕ್ಕೆ ತುತ್ತಾಗಿ ನಾಶವಾಯಿತು. ಮನೆ, ಉಗ್ರಾಣಗಳೂ ಆಕಸ್ಮಿಕವಾಗಿ ಬೆಂಕಿಗೆ ಆಹುತಿಯಾದವು. ಈಗ ಆತನು ನಿರ್ಗತಿಕನಾಗುವ ಸ್ಥಿತಿಗೆ ಬಂದನು. ಈ ಸಂದರ್ಭದಲ್ಲಿ ಜಮೀನ್ದಾರನ ಬಂಧುಗಳಾದರೂ ಈತನ ಸಹಾಯಕ್ಕೆ ಬರಲಿಲ್ಲ.ಈ ರೀತಿ ಧನ ಸಂಪತ್ತು ಇದ್ದರೆ ಅದು ನೆಂಟರನ್ನು ಆಕರ್ಷಿಸುತ್ತದೆ ಎಂಬ ವಿಷಯವು ಈ ಗಾದೆ ಮಾತಿನಲ್ಲಿ ಹೇಳಲ್ಪಟ್ಟಿದೆ.

• ಹರ್ಕೋರ್ ಕಾಯಿ ಕೋಯಿಕೋ ಬೀಳ್

ಚಾಡಿ ಮಾತು ಎನ್ನುವುದು ಕ್ರೂರ ವಿಷ. ಒಂದು ಸಂಸಾರವನ್ನು ಒಡೆದು ನುಚ್ಚು ನೂರು ಮಾಡಬಲ್ಲ ಶಕ್ತಿ ಚಾಡಿ ಮಾತಿಗಿದೆ. ಜೀವಿಗಳ ನರಮಂಡಲವನ್ನು ರಕ್ತನಾಳಗಳು ಹೇಗೆ ಆವರಿಸಿವೆಯೋ

ಹಾಗೆಯೇ ಮತ್ಸರ ಕೂಡ ಆವರಿಸಿದೆ. ಇತರರ ಏಳಿಗೆಯನ್ನು ಸಹಿಸದ ಕುಹಕಿಗಳು ಚಾಡಿ ಹೇಳುವುದರ ಮೂಲಕ ಆತ್ಮೀಯರ ನಡುವೆ ಬಿರುಗಾಳಿ ಎಬ್ಬಿಸುತ್ತಾರೆ. ಎರಡು ಪಕ್ಷದವರಿಗೂ ಒಳ್ಳೆಯವರಾಗಿ ಕಾಣಿಸಕೊಂಡು, ಅವರಿಬ್ಬರ ಆತ್ಮೀಯತೆ ದೂರ ಮಾಡುತ್ತಾರೆ. ಇದಕ್ಕೆ ಒಂದು ದೃಷ್ಟಾಂತ ಕಥೆ ಇದೆ. ಒಂದು ಮರದಲ್ಲಿ ಕಾಯಿ ಹಾಗೂ ಬೀಳು (ಬಳ್ಳಿ) ಬಹಳ ಅನ್ಯೋನ್ಯತೆಯಿಂದ ಇದ್ದವು. ದಾರಿಹೋಕನೊಬ್ಬನಿಗೆ, ಇವೆರಡರ ನಡುವೆ ಕಲಹ ಎಬ್ಬಿಸಿ ಅದರಿಂದ ತಾನು ಪ್ರಯೋಜನ ಪಡೆಯಬೇಕು ಎನಿಸಿತು. ಮೊದಲು ಬೀಳನ್ನು ಸಮೀಪಿಸಿದ. "ನಿನ್ನ ಆಯುಷ್ಯವೆಲ್ಲಾ ಕಾಯಿಯ ರಕ್ಷಣೆ ಮಾಡುವುದಲ್ಲೇ ಆಯಿತು. ಇನ್ನಾದರೂ ಎಚ್ಚೆತ್ತುಕೋ, ಕಾಯಿಯನ್ನು ಹರಿದು ಬಿಡು" ಎಂದ. ನಂತರ ಕಾಯಿಯ ಬಳಿಯ ಹೋಗಿ 'ಆ ಬೀಳು ಸದಾ ನಿನ್ನನ್ನು ಬಂಧನದಲ್ಲಿರಿಸಿಕೊಳ್ಳುತ್ತದೆ. ತನ್ನ ವೈಯ್ಯಾರದ ಮುಂದೆ ನಿನ್ನ ಚೆಲುವು ತೋರಬಾರದು ಎಂದು ಸದಾ ನಿನ್ನನ್ನು ಮುಚ್ಚಿಕೊಂಡಿರುತ್ತದೆ' ಎಂದ. ಕಾಯಿ ಬೀಳನ್ನು ಹರಿದು ಹಾಕಿತು. ಬೀಳು ಕಾಯನ್ನು ಕೊಯ್ದು ಹಾಕಿತು. ಎರಡು ಬಣಗಳು ನೆಲದಲ್ಲಿ ಬಿದ್ದು ಹೊರಳಾಡಿದಾಗ ದಾರಿ ಹೋಕ ಅದನ್ನೆಲ್ಲಾ ಒಟ್ಟುಗೂಡಿಸಿ ಕೊಂಡು ಮನೆಯ ಕಡೆ ನಡೆದ. ಎಷ್ಟೊಂದು ತಮಾಷೆಯಾಗಿದೆಯಲ್ಲವೆ? ಇಂತಹ ದಾರಿ ಹೋಕರು ನಮ್ಮ ಸಮಾಜದಲ್ಲಿ ತುಂಬಿಕೊಂಡಿದ್ದಾರೆ. ಅದಕ್ಕೆ ನಮ್ಮ ಹಿರಿಯರು ಹೇಳುವುದು. 'ಪ್ರತ್ಯಕ್ಷವಾಗಿ ಕಂಡರೂ ಪರಾಂಬರಿಸಿ ನೋಡು' ಎಂದು. ಇತರರ ಮಾತಿನ ಮೇರೆಗೆ ನಿರ್ಧಾರ ತೆಗೆದುಕೊಳ್ಳುವುದು ಅಪಾಯದ ಕೆಲಸ. ವಿಷಯಕ್ಕೆ ತಕ್ಕಂತೆ ಸಮಯಕ್ಕೆ ತಕ್ಕಂತೆ ಮಾತನಾಡುವವರನ್ನು ಕಂಡಾಗ ನಮ್ಮ ಜನ ಈ ಗಾದೆಯನ್ನು ಹೇಳುತ್ತಾರೆ.

ಕುಂದಾಪುರ ಗ್ರಾಮೀಣಾ ಪ್ರದೇಶದಲ್ಲಿ ಮರಾಟ ನಾಯ್ಕರು, ಬಳಸುವ ಇತರೆ ಗಾದೆಗಳು

- ಕೋಣನ ಮುಂದೆ ಕಿನ್ನುರಿ ಬಾರ್‍ಸದಂಗೆ
- ಕೂಳ ಕುತ್ತ, ಚಾ ಪಿತ್ತ ಅಂಬ್ರ
- ಮಂಗನ್ ಕೈಯಂಗ್ ಮಾಣಿಕ್ಯ ಕೊಟ್ಟಂಗೆ
- ಉಪ್ಪರಿಗೆ ಮನೆಯಾರು ಉಪ್ಪಿಲ್ಲದೆ ಉಣಲಾರ
- ದೇವ್ರು ಕೊಟ್ರೂ ಪೂಜಾರಿ ಕೊಡ
- ಉರಿತ್ ನೋವಿಗ್ ಉಪ್ಪ್ ತುಂಬುವರ್
- ಕೊಟ್ಟನ್ ಕ್ವಾಡಂಗಿ ತಕಂಡನ್ ವೀರಭದ್ರ
- ಅತಿಯಾಸಿ ಗತಿಗೇಡ್
- ಅಕ್ಕಿಕೊಟ್ಟು ಉಂಬೂಕೆ ಅಕ್ಕನ ಹಂಗೇನು?
- ಎತ್ತ್ ಏರಿಗೆಳಿತ್ ಕೋಣ ನೀರಿಗೆಳಿತ್
- ಹಳ್ಳಿ ದೇವ್‌ರಿಗೆ ಕೊಳ್ಳಿ ದೀಪ
- ಎಮ್ಮಿ ಮೇಲೆ ಮಳೆ ಬಿದ್ದಂಗೆ
- ಎಂಟು ವರ್ಷಕ್ಕೆ ನನ್ನ ಮಗ ದಂಟು ಅಂದ
- ಉಪ್ಪ್ ತಿಂದವ ನೀರು ಕುಡೀಕ್
- ಮುಂಗೈ ಆಡೂ ತಂಕ ಊರೆಲ್ಲಾ ನೆಂಟರು
- ಹುಟ್ಟ್ ಬುದ್ಧಿ ಘಟ್ಟ ಹತ್ರೂ ಬಿಡುದಿಲ್ಲಾ
- ಕರ್ಕರೆ ದೇವ್ರಿಗೆ ಮರನ ಜಾಗಂಟಿ
- ಎಣ್ಣೆ ನಾಯಿ ಸಂತಿಗೆ ಹೋದ್ ಹಾಂಗೆ
- ಮದಿ ಮಾಡಿ ಕಾಣ್ಕ, ಮನಿ ಕಟ್ಟಿ ಕಾಣ್ಕ
- ಮನಿಗ್ ಮಾರಿ ಊರಿಗ್ ಉಪ್ಕಾರಿ
- ಉಂಡ್ ಮನಿಗ್ ಗುಂಡ್ ಹೊಡು ಜಾತಿ
- ಆನಿ ಮೇಲೆ ಮಳಿ ಹೋಯ್ದಂಗೆ
- ಅಹಂಕಾರಕ್ಕೆ ಉದಾಸೀನವೇ ಮದ್ದ್
- ನಾಲಿಗೆ ಒಳ್ಳೆದಿದ್ರೆ ನಾಡೆಲ್ಲ ಒಳ್ಳೆದು
- ಬೊಗಳೂ ನಾಯಿ ಕಚ್ಚುದಿಲ್ಲೆ
- ಅಳಿಯ ಅಲ್ಲ ಮಗ್ಳ ಗಂಡ
- ಕೆರಿ ನೀರಿಗೆ ದೊಣ್ಣೆ
ನಾಯಕ್‌ನ್ ಅಪ್ಪಣೆಯಾ?
- ಏರಿದಷ್ಟೂ ಇಳೀಕೆ
- ಹೊಟ್ಟಿಗ್ ಹಿಟ್ಟಿಲ್‌ದಿದ್ರೂ ಜುಟ್ಟಿಗೆ ಮಲ್ಲಿಗೆ ಹೂ
- ಅಡಕೀಲಿ ಹೋದ ಮಾನ ಆನಿ ಕೊಟ್ಟರೂ ಬಾರ

- ಗಂಡ್ ಕೂತ್ ಕೆಡ್ತ್, ಹೆಣ್ಣ್ ತಿರುಗಿ ಕೆಡ್ತ್
- ತಲಿ ಹತ್ಕಂಡ್, ಬುಡಕಡು ಯಾಪಾರ
- ಗುಂಬಳಕಾಯಿ ಕಳ್ಳ ಅಂದರೆ ಹೆಗಲ್ ಮುಟ್ಟಿ ಕಂಡ್ ಕಂಡ
- ತೌಡ ತಿಂಬನ್ ಹ್ವಾರೆ ಉಮ್ಮಿತಿಂಬನ್ ಬತ್ತ
- ನಾಯಿ ಬಾಲಕ್ ನಳ್ಗಿ ಹಾಕ್ದಂಗ್
- ಎಲ್ರಿಕ್ಕಿಂತ ಮುಂದೆ ಹ್ವಾರೆ ಎಲು ಸತೆ ಸಿಗ
- ಮಾಯಿ ಕಣ್ಣಿಗ ಮರಿ, ತಲಿನ್ ಒಂದ್ ಹ್ವೊರಿ
- ಎಮ್ಮಿ ಹುಣ್ಣಿಗೆ ಎತ್ತಿಗ ಬರಿ
- ಗಂಡಂಗ್ಯಾ ಗಂಡಾಂತ್ರ ಹೆಂಡ್ತಿಗ್ಯಾ ದೇಶಾಂತ್ರ
- ಅಜ್ಜ ನಟ್ಟ ಆಲದಮರ ಅಂತೇಳಿ ನೇಣ ಹೈಕಂಬಕ್ಕ ಅತ್ತಾ
- ಆನಿ ಮೇಲ್ ಮಳಿ ಹೊಯ್ದಂಗೆ
- ಆನಿ ಕದ್ರು ಕಳ್ಳ ಅಡಕಿ ಕದ್ರು ಕಳ್ಳ
- ನೀನ್ ಅಂದ್ರ್ಯ, ನಿನ್ ಅಪ್ಪ ಅಂಬು ಜಾತಿ
- ಮನಿ ಮಜ್ಜಿಗೆ ತಕ್ಕಂಡ ಹೋಯಿ ಮರನಡಿ ಕುಡು ಜಾತಿ
- ಅಂತು ಇಂತು ಕುಂತಿ ಮಕ್ಕಳಿಗೆ ವನವಾಸು
- ಹ್ವೊಲಿಯಾ ಏನ್ ಬಲ್ಲ ಹಾಗಲ್ ಕಾಯಿ ಹುಳಿ
- ಉರಿತ್ ನೋವಿಗ್ಯಾ ಉಪ್ಪ ತುಂಬುವರ್
- ಹಾಸಿಗೆ ಇದ್ದಷ್ಟು ಕಾಲು ಚಾಚ್‌ಕು
- ನಾಯಿನ ದಂಡಿಗ್ ಹಾಕ್ರ ಹೇಸಿಗೆ ಕಂಡಲ್ಲ್ ಹಾರತ್ ಅಂಬ್ರ್
- ಹಣ ಇಲ್ಲದವ ಹೆಣಕ್ಕೆ ಸಮ
- ಕಾಸಿದ್ರೆ ಕೈಲಾಸ ಕಾಣಿ
- ಕೈ ಕೆಸರಾದ್ರೆ ಬಾಯಿ ಮೊಸರು
- ಅತ್ತೆಗೊಂದ್ ಕಾಲ, ಸೊಸೆಗೊಂದ್ ಕಾಲ
- ಮಡಿವಾಳ್ನ ಮಣ್ಕ ಕಚ್ಚಂಡ್ಹೋದಂಗೆ
- ಹೆಡ್ಡಂಗೆ ಒಂದ್ ಬದಿ, ಬುದ್ಧೊಂತಂಗೆ ಮೂರ್ ಬದಿ
- ಕೋಲ್ ಕೊಟ್ಟ್ ಬಡ್ಗಿ ತಿಂದಂಗಾಯ್ತ್
- ನಕ್ಕುಳ ಹೆಡಿ ಎತ್ರೆ ಎಷ್ಟ್ ಎತ್ತತ್ತ್
- ನೆಸಿ ಕೊಟ್ಟ ನಾಯಿ ನೆಸ್ಲ ನೆಕ್ಕತ್ತ
- ಮಕ್ಕಳ ಮಾಡದ್ ತಿಳಿಯ ಮಕ್ಕಿಗೆದ್ದಿ ಬೆಳದ್ ತಿಳಿಯ
- ಮನಿ ಮಜ್ಜಿಗಿ ತಕ್ಕಂಡ ಹೋಯಿ ಮರನಡಿ ಕುಡು ಜಾತಿ
- ನಂಟ ಬಂದ ಕೆಟ್ಟ ಮನಿ ಒಡಿಯ ಕೂಕಂಡ ಕೆಟ್ಟ
- ಓಡುಕ ಎಡಿದಿದ್ದನ ಒರಲ ಹೊತ್ಕಂಡ ಓಡ್ತ
- ಆರಕ್ಕೆ ಏರ ಮೂರಕ್ಕೆ ಇಳ
- ಹೆಡ್ ಹೆಣ್ತಿ ಮನಿಗ್ ಹೋದಂಗಾಯ್ತು
- ಅಪ್ಪನ್ ದೂಡಿ ಮಾಯ್ನಣ್ ಹೆಕಂಡ್ ತಿಂಬು ಜಾತಿ
- ಮಾಯಿ ಕಣ್ಣಿಗೆ ಮರಿ, ತಲಿಗ್ ಬಂದ್ ಹ್ವೊರಿ
- ಆರ್ತಿ ತಕ್ಕಂಡ್ರೆ ಗರ್ಮಿ, ತೀರ್ಥ ತಕ್ಕಂಡ್ರೆ ಸೀತು
- ಉಪ್ಪರಿಗೆ ಮನಿಯಾದ್ರು ಉಪ್ಪಿಲ್ಲದೆ ಉಣ
- ಎಲ್ಲಕ್ಕಿಂತ ಮುಂದೆ ಹ್ವಾರೆ ಎಲು ಸತೆ ಸಿಗ
- ಮಾಡಿದ್ದುಣ್ಣೊ ಮರಾಯ
- ಮೂರ್ತಿ ಚಿಕ್ಕದಾರೂ ಕೀರ್ತಿ ದೊಡ್ದು
- ಹಣ ಕಂಡ್ರೆ ಹೆಣ ಬಾಯಿ ಬಿಡುತ್ತಂಬ್ರು
- ದುಡ್ಡೇ ದೊಡ್ಡಪ್ಪ ಅಲ್ದ
- ಜನ ಮರ್‍ಳೋ ಜಾತ್ರೆ ಮರ್‍ಳೋ
- ಕುಂಬಾರಂಗೆ ವರ್ಷ ದೊಣ್ಣೆಗೆ ನಿಮಿಷ
- ಆಳಾಗಿ ದುಡ್ದವ ಅರಸಾಗಿ ಉಣ್ತಾ

- ಹುಟ್ ಗುಣ ಸುಟ್ಟರೂ ಬಿಡೂದಿಲ್ಲ
- ನೊಂದವರ ನೋವು ನೋಯದವರಿಗೆ ಎಂಥ ಗೊತಾತ್ತ್
- ಕಂಡ್ ತಿಳಿ ಮಾಡಿ ಕಲಿ
- ಮನಸ್ಸಿದ್ರೆ ಮಾರ್ಗ
- ರೋಗಿ ಬಯಸಿದ್ದೂ ಹಾಲು, ವೈದ್ಯ ಕೊಟ್ಟದ್ದೂ ಹಾಲು
- ಪ್ರೀತಿದ್ರೂ ನೀತಿ ಬಿಡಬಾರ್ದು
- ಮಕ್ಕಳಿದ್ರೆ ಮನೆ, ಒಕ್ಕಲಿದ್ರೆ ಊರು
- ಮಾತ್ ಆಡಿದ್ರೆ ಹೋಯ್ತ್, ಮುತ್ತು ಒಡೆದ್ರೆ ಹೋಯ್ತ್
- ಒಲ್ಲದ್ ಗಂಡಂಗೆ ಮೊಸರಂಗೆ ಕಲ್ಲು
- ಬೆಳೂ ಸಿರಿ ಮೊಳಕೆಯಂಗೇ
- ಹೇಳೂದು ಶಾಸ್ತ್ರ, ಹಾಕೂದು ಗಾಳ
- ಮಿಂಚಿ ಹೋದ ಕಾಲಕ್ಕೆ ಚಿಂತಿಸಿ ಫಲ ಇಲ್ಲ
- ಆಕಳು ಕಪ್ಪಾದರೆ ಹಾಲು ಕಪ್ಪಾ
- ಊರಿಗೆ ಅರಸ ಆದ್ರೂ ತಾಯಿಗೆ ಮಗ
- ಗಂಡ ಓಲೈಸಿದರೆ ಒಲಿ ಗುಂಡೆಲ್ಲ ಓಲೈಸು
- ತೀರ್ಕೊಂಡು ಬಂದ್ರು ಕರ್ಕೊಂಡು ಉಣ್ಣು
- ಹಾಳು ಹಂಪೆಗಿಂತ ತನ್ನ ಕೀಳು ಗೊಂಪೆ ಲೇಸು
- ಕದ್ದನಿಗೆ ಅಳ್ಳಳ್ಳಗ್ ಅತ್ತಂತ್
- ಅಂತೂ ಇಂತೂ ಕುಂತಿ ಮಕ್ಕಳಿಗೆ ರಾಜ್ಯ ಇಲ್ಲ
- ಅಡಿಕೇಲಿ ಹೋದ್ ಮಾನ ಆನೆ ಕೊಟ್ರೂ ಬಾರ
- ಆಯ ನೋಡಿ ಪಾಯ ಹಾಕು
- ಇಬ್ಬರ ಜಗಳ ಮೂರನೆಯವನಿಗ್ ಲಾಭ
- ಉಗುರಿನಿಂದ ಹೋಗುವುದಕ್ಕೆ ಕೊಡಲಿ ತಕಂಡಂಗೆ
- ಉಪ್ಪಿಗಿಂತ ರುಚಿ ಇತ್ತಾ, ತಾಯಿಗಿಂತ ಬಂಧು ಇತ್ತಾ
- ಹೆತ್ತವರಿಗೆ ಹೆಗ್ಣ ಮುದ್ದು
- ಗಾದೆ ಸುಳ್ಳಾದ್ರೂ ವೇದ ಸುಳ್ಳಾತ್ತಾ
- ಕಣ್ಣಾರೆ ಕಂಡ್ರೂ ಪರಾಮರ್ಶಿಸಿ ಕಾಣಕು
- ಉಕ್ಕಿದ ಹಾಲು ಒಲೆಪಾಲು
- ಆಚಿಮನಿ ಅಜ್ಜಿ ಸತ್ತರೆ ಕರಿನ ಕಟ್ಟುಕ ಜಾಗ ಆೖತ್
- ಹೆಣ್ಣಿದ್ದಮನಿ ಚಂದ, ಗಂಡಿದ್ದ ಹೊಲ ಚಂದ
- ಮಾತ್ ಬೆಳ್ಳಿ, ಮೌನ ಬಂಗಾರು
- ಕೈ ಕೆಸರಾದ್ರೆ ಬಾಯಿ ಮೊಸರು
- ಮಂತ್ರಕ್ಕೆ ಮಾವಿನ ಕಾಯಿ ಉದುರುತ್ತ
- ಅಕ್ಕನ ಚಿನ್ನವಾದ್ರೂ ಅಕ್ಕಸಾಲಿಗ ಬಿಡ
- ಊರ ಕಾಂಬ್ ಬದ್ಲು, ಊರ ದೇವಸ್ಥಾನ ಕಾಣಿ
- ವಿನಾಶ ಕಾಲಕ್ಕೆ ವಿಪರೀತ ಬುದ್ಧಿ
- ಅತಿ ಆಸಿ ಗತಿ ಗೇಡು
- ಕಾಯಕವೇ ಕೈಲಾಸ
- ಸುಮ್ಮೆ ಕೂತ್ರೆ ಮಂಡಿ ತುಂಬ ದೈವ ಹರೀತ್
- ಹಂಚಿ ಉಂಡ್ರೆ ಹಸಿ ಇಲ್ಲೆ
- ಓದಿ ಓದಿ ಪಂಡಿತನಾಗು, ಬೊಗ್ಗಿ ಬೊಗ್ಗಿ ಭಾಗವತನಾಗು
- ಅಂಗೈ ಹುಣ್ಣಿಗ್ ಕನ್ನಡಿ ಬೇಕಾ
- ಅಕ್ಕಿ ಮೇಲಾಸಿ ನೆಂಟ್ರ ಮೇಲೆ ಪ್ರೀತಿ
- ಅಲ್ಪರ ಸಂಗ ಅಭಿಮಾನ ಭಂಗ
- ಆಳಾಗಬಲ್ಲವ ಅರಸಾಗ್ ಬಲ್ಲ
- ಇಲ್ಲದವನಿಗೆ ಒಂದು ಚಿಂತಿ, ಇದ್ದವನಿಗೆ ನೂರು ಚಿಂತಿ
- ಎತ್ತು ಏರಿಗೆ ಎಳೆದ್ರೆ, ಕೋಣ ನೀರಿಗೆ ಎಳೀತು
- ಹತ್ತು ಕಟ್ಟೋ ಬದ್ಲು ಒಂದು ಮುತ್ತು ಕಟ್ಟು

- ತುಂಬಿದ ಕೊಡ ತುಳುಕೂದಿಲ್ಲೆ
- ದಂಡವೇ ದಶಗುಣ
- ಕೂತು ಉಂಡ್ರೆ ಕುಡಿಕಿ ಹೊನ್ನ ಸಾಲ
- ಬೊಗಳೂ ನಾಯಿ ಕಚ್ಚೂದಿಲ್ಲ
- ಸೊಕ್ಕದ್ದ್ ಒಕ್ಕತ್ತ್, ಒಕ್ಕದ್ ಒಲೆ ಹಾರತ್
- ಬಾಳು ಮಕ್ಕಳ್ ಹೇಲ್ ಕಂಡ್ರ ಗೊತಾತ್ತ್
- ಆಡು ಮುಟ್ಟದ್ ಸೊಪ್ಪಿಲ್ಲ ಗೌಡ ಹೋಗ್ದ
- ಕಹಿ ಉಂಡ್ರೇ ಕಲ್ಯಾಣದ ಮೆಟ್ಲು
- ತಾಳಿದವನ ಬಾಳಿಯಾನು
- ಆಡಿ ಬಿದ್ರು ಮೂಗ್ ಮೇಲೆ
- ಭಂಡ್ರ್ ಕೂಳಿಗ ಬರಗಾಲಿಲ್ಲ ತೊಂಡಿ ಹೂಗಿಗ ಪರಿಮಳಿಲ್ಲಾ
- ದೊಡ್ಡರ ಸಿಟ್ಟ್ ದುಡ್ಡೀಗ್ ಕೇಡ್, ಬಡವರ್ ಸಿಟ್ಟ್ ದವಡಿಗ್ ಕೇಡ್
- ಅಕ್ಕ ಸತ್ತರೆ ಅಮಾವಾಸ್ಯೆ ನಿಲ್ಲುದಿಲ್ಲೆ, ಅಣ್ಣ ಸತ್ತರೆ ಹುಣ್ಣಿಮೆ ನಿಲ್ಲುದಿಲ್ಲೆ
- ಸಾವಿರ ರೂಪಾಯಿ ಕೊಟ್ಟು ಎಮ್ಮಿ ತಂದಿನಂಬ್ರ, ಕರುಕೆ ಚಂಬಿಲ್ದೆ ಎಮ್ಮೆ ವಾಪಾಸ್ ಮಾಡಿನಂಬ್ರ
- ಉಂಡ್ಯಾ ಮಾಣಿಯಾ ಕೇಂಡ್ರ್ಯೆ, ಮುಂಡಾಸ್ ಮೂವತ್ತ ಮಳ ಅಂದ್ನಂಬ್ರ
- ಊಟ ಬಲ್ಲವಂಗೆ ರೋಗ ಇಲ್ಲ, ಮಾತು ಬಲ್ಲವಂಗೆ ಜಗಳ ಇಲ್ಲ
- ಕೇರೆ ತಿನ್ನುವ ಊರಿಗೆ ಹೋದ್ರೆ ನಡುವಿನ ತುಂಡಿಗೆ ಕೈ ನೀಡಕ್
- ಇದ್ದದ್ದ್ ಇದ್ದ್ ಹಾಂಗ್ ಹೇಳಿದ್ರೆ ಎದ್ದ್ ಬಂದ್ ಒದ್ದಿನಂಬ್ರ್
- ಹಲ್ಲ್ ಇದ್ದವನಿಗೆ ಕಡಲಿ ಇಲ್ಲ, ಕಡಲಿ ಇದ್ದವನಿಗೆ ಹಲ್ಲ್ ಇಲ್ಲ
- ಊರ್ ಮೇಲ್ ಊರ್ ಬಿದ್ರು ಬೋರ್ ಕಲ್ಲಾಂಗ್ ಇದ್ದ
- ಮನಿಗ್ ಮಾರಿ ಪರರಿಗೆ ಉಪಕಾರಿ
- ಜಾಣನಿಗೆ ಮಾತಿನ ಪೆಟ್ಟು, ಕೋಣನಿಗೆ ದೊಣ್ಣೆ ಪೆಟ್ಟು
- ಬರ್ತಾ ಬರ್ತಾ ರಾಯನ್ ಕುದ್ರಿ ಕತ್ತಿ ಆಯ್ತ್
- ಹೆಂಡ್ತಿನಾರು ಬಿಡ್ತ, ಕಲ್ತದ್ದ ಬಿಡೂದಿಲ್ಲ
- ಜೀವಿದ್ರ ಬೆಲ್ಲ ಬೇಡಿ ತಿನ್ಲಕ್
- ಆಪತ್ತಿಗಾದವನೇ ನಿಜ್‌ವಾದ ಗೆಳೆಯ
- ಸೋತ್ ಸೋಲೇ ಗೆಲುವಿನ ಸೋಪಾನ ಊರಿಲ್ಲ
- ಮಗ ಉಂಡ್ರೆ ಕೆಟ್ಟದ್ದಿಲ್ಲ ಮಳೆ ಬಂದ್ರ ಕೆಟ್ಟದ್ದಿಲ್ಲ
- ಕೋಟಿ ವಿದ್ಯೆಕ್ಕಿಂತ ಮೇಟಿ ವಿದ್ಯೆ ಮೇಲು
- ಯಾರ ತಕ್ಕ ಕೊಣದ್ರು ಕುಂಬಾರನ ತಕ್ಕ ಕೊಣುಕ ಎಡಿಯಾ
- ಕೆಲ್ಸಗಿಲ್ಸ ನನ್ನಿಂದೆಡಿಯಾ. ಉದ್ದಿನ ದೋಸೆಗೆ ನಾನೇ ಒಡಿಯ
- ನಾಯಿ ಹತ್ರ ಹೇಳ್ರೆ ನಾಯಿ ತನ್ನ ಬಾಲದ ಹತ್ರ ಹೇಳತಂಬ್ರ
- ಅರಮನೆ ಮುರಿದರೆ ಇರಲಕ್ಕ್ ನೆರಮನೆ ಮುರಿದರೆ ಇಪ್ಪುಕಾತಿಲ್ಲ
- ನಿಟ್ಗೆಡ್ ಹಿಡ್ದನಿಗ್ಯಾ ಗಾಳದಿ ಸೆಡಿ, ಕೊಳ್ ಹ್ವಾಡದ ನಿಗ್ಯಾ ಕೋಳಿ ಪಡಿ ಆಯಿಸು ತೀರ್ತಿನಿಗ್ಯಾ ಬ್ಯಾಂಟಿ
- ಬೆಳ್ಳಗಿರೂದೆಲ್ಲ ಹಾಲಲ್ಲ. ತೆಳ್ಳಗಿರೂದೆಲ್ಲ ನೀರಲ್ಲ, ಹೊಳೆಯುದೆಲ್ಲ ಚಿನ್ನ ಅಲ್ಲ
- ಆಡು ಮುಟ್ಟದ ಸೊಪ್ಪಿಲ್ಲ ಕಾರಂತ್ರು ಬರೀದ ಕಾದಂಬ್ರಿ ಇಲ್ಲ
- ಕನ್ನ ಹಾಕುವಾಗ ಸಿಕ್ ಬಿದ್ದ ಕಳ್ಳ ಕನ್ನ ಹಾಕೂದು ಕಲೀತಿದ್ದೆ ಅಂದ್‌ನಂತೆ
- ಕುಂತು ಕುಣಿಗಲ್ ಗೆದ್ರು, ನಿಂತು ಮಾಗಡಿ ಗೆದ್ರು, ಮಾತಿಲ್ದೆಗೆದ್ರು ಮಧುರೇನ
- ಹೇಳ್ರೆ ಅಪ್ಪ ಅಬ್ಬಿಗೆ ಹೊಡಿತ, ಹೇಳ್ದಿರೆ ಅಪ್ಪ ನಾಯಿ ತಿಂತ
- ಕೆಟ್ಟ ಮೇಲೆ ಬುದ್ದಿ ಬಂದ್ರ ಅಟ್ಟ ಮೇಲೆ ಒಲಿ ಊಡ್ದ

• ಇವತ್ತ್ ಕೊಟ್ಟನ್ ತಾಯಿ ತಂದೆ, ನಿನ್ನೆ
ಕೊಟ್ಟನ್ ತಾಯಿ ಗಂಡ

ಪ್ರಾಣಿ–ಪಕ್ಷಿ–ಕ್ರಿಮಿ–ಕೀಟ–ಗಿಡ–ಮರಗಳಿಗೆ ಸಂಬಂಧಿಸಿದ ನಂಬಿಕೆಗಳು

• ಪ್ರಾತಃಕಾಲದಲ್ಲಿ ಕಾಗೆ ಮನೆಯ ಎದುರಿನ ಮಾಡಿನಲ್ಲಿ ಹಾರಿ ಬಂದು ಕೂತು ಮೂರು ಬಾರಿ ಕೂಗಿದರೆ ಆ ದಿನ ನೆಂಟರು ಬರುತ್ತಾರೆ.

• ಬೆಕ್ಕನ್ನು ಕೊಂದರೆ, ಕೈ ಕುತ್ತಿಗೆ ನಡುಗಲು ಶುರುವಾಗುತ್ತದೆ.

• ಬೆಕ್ಕು ಕೊಂದವರು ಮನೆಯಲ್ಲಿ ಬಂಗಾರದ ಬೆಕ್ಕು ಮಾಡಿಸಿಟ್ಟರೂ ಪಾಪ ಕಳೆಯಲಾರದು.

• ಒಂದು ವಿಚಾರ ಮಾತನಾಡುತ್ತಿರುವಾಗ, ಹಲ್ಲಿ ಲೊಚಗುಟ್ಟಿದರೆ ಆ ಸಂಗತಿ ಸತ್ಯವಾಗುತ್ತದೆ.

• ಹಲ್ಲಿ ತಲೆಗೆ ಬಿದ್ದರೆ ಕೇಡು

• ಬೆಕ್ಕು ಅಡ್ಡ ದಾಟಿದರೆ, ಹೊರಟ ಕೆಲಸ ಆಗುವುದಿಲ್ಲ.

• ಎಳೆಯ ಮಕ್ಕಳು ಹೂವನ್ನು ಮೂಸದಂತೆ ನೋಡಿಕೊಳ್ಳಬೇಕು.

• ಕಾಗೆ, ಗೂಬೆ ಮನೆಯೊಳಗಡೆ ಬರಬಾರದು.

• ಮನೆಯಲ್ಲಿ ಗೆದ್ದಲು ಕಾಣಿಸಿಕೊಂಡರೆ ಪೂಜೆ ನೆರವೇರಿಸಬೇಕು.

• ಇರುವೆ ಗೂಡಿಗೆ ಅಕ್ಕಿ ಬೆಲ್ಲ ಹಾಕಿದರೆ ಪುಣ್ಯ ಬರುತ್ತದೆ.

• ಕೋತಿ ಸಾಯಿಸಿದರೆ ಕಾಶಿಗೆ ಹೋದರೂ ಪಾಪ ಕಳೆಯಲಾರದು.

• ಆಕಳ ಹೊಟ್ಟೆಯಲ್ಲಿ ದೇವತೆಗಳಿರುತ್ತಾರೆ. ಅದನ್ನು ಕೊಂದರೆ ನರಕಕ್ಕೆ ಹೋಗುವರು. ಆಕಳ ಮೂತ್ರವನ್ನು ಮುಂಜಾನೆಯೆದ್ದು ಕುಡಿದರೆ ಆರೋಗ್ಯಕ್ಕೆ ಒಳ್ಳೆಯದು. ಎಮ್ಮೆಯು ದೆವ್ವದ ಸಂಕೇತವೆಂದು ತಿಳಿಯುವರು. ದಾವಣಿ ಸುಳಿಯ ಎತ್ತು ದಾವಣಿಗೆ ಕಟ್ಟಿದರೆ ಮನೆಯ ಸಂಪತ್ತು ವೃದ್ಧಿಯಾಗುವುದು. ಒಂದು ಕೋಡಿನ ಎತ್ತು ಮನೆಯಲ್ಲಿರಬಾರದು. ಎರಡೂ ಎತ್ತುಗಳು ಒಂದೆ ಮಗ್ಗಲಿನಿಂದ ಮಲಗಿದ್ದು ಮುಂಜಾನೆ ಕಂಡರೆ ಪೂಜೆ ಸಲ್ಲಿಸಿ ತೆಂಗಿನಕಾಯಿ ಒಡೆದರೆ ಸಂಪತ್ತು ಸಿಗುವುದು. ಎತ್ತು (ಬಸವ) ಬಸವಣ್ಣನ ಪ್ರತಿರೂಪವಾದ ಕಾರಣಕ್ಕೆ ಅದನ್ನು ಕಾಲಿನಿಂದ ಒದೆಯಬಾರದು. ಎತ್ತುಗಳು ಸಾಗುವಳಿ ಮಾಡುವಂದಿನಿಂದ ಮನೆಯ ಸಂಪತ್ತು ವೃದ್ಧಿಯಾದದ್ದು ಕಂಡುಬಂದರೆ, ಅಂತಹ ಎತ್ತುಗಳು ಮಾರಾಟ ಮಾಡಬಾರದು. ಈ ಮೊದಲಾದ ನಂಬಿಕೆಗಳು ಪ್ರಾಣಿಗಳ ಮೇಲಿನ ಮಮತೆ ಅನುಕಂಪವನ್ನು ಸೂಚಿಸುತ್ತವೆ.

• ನಾಯಿಯು ದತ್ತಾತ್ರೇಯ ವಾಹನ. ಇದನ್ನು ಕಾಲಿನಿಂದ ಒದೆಯಬಾರದು. ನಡುರಾತ್ರಿಯಲ್ಲಿ ನಾಯಿಗಳು ಒಟ್ಟಿಗೆ ಬೊಗಳಿದರೆ ಯಾರಾದರೂ ಸಾಯುತ್ತಾರೆ.

• ಪ್ರಾಣಿ, ಪಕ್ಷಿ, ಕ್ರಿಮಿ ಕೀಟಗಳಲ್ಲಿನ ಭವಿಷ್ಯಗಳ ಬಹಳಷ್ಟಿವೆ. ಇದರಲ್ಲಿ ಶಕುನಗಳು ಸಾಮಾನ್ಯವಾಗಿ ಪ್ರಯಾಣಕ್ಕೆ ಸಂಬಂಧಿಸಿದವುಗಳು. ಪ್ರಯಾಣದ ವೇಳೆಯಲ್ಲಿ ರತ್ನ ಪಕ್ಷಿಯು ಎಡದಿಂದ ಬಲಕ್ಕೆ ಅಡ್ಡವಾಗಿ ಹಾರಿದರೆ ಶುಭ, ಹಾವು ಎಡದಿಂದ ಬಲಕ್ಕೆ ಬಂದರೆ ಒಳ್ಳೆಯದು. ಬಲದಿಂದ ಎಡಕ್ಕೆ ಬಂದರೆ ಕೆಟ್ಟದ್ದು. ನಾಗರಹಾವು ಕಾಣಿಸಿದರೆ ಶುಭ, ಹೆಡೆಯೆತ್ತಿ ಆಡುತ್ತಿದ್ದರೆ ಇನ್ನೂ ಶುಭ. ಗೂಬೆ ಕೂಗಿದರೆ ಅಪಶಕುನ, ಹಲ್ಲಿ ಬಲದಿಂದ ತಲೆಯ ಮೇಲೆ ನುಡಿದರೆ ಶುಭ, ಒಲೆಯಲ್ಲಿನ ಸೌದೆ ಊದಿದರೆ, ಆ ದಿನ ನೆಂಟರು ಆಗಮಿಸುವರು ಎಂಬ ನಂಬಿಕೆಗಳು ಹಲವು ಕಡೆ ರೂಢಿಯಲ್ಲಿವೆ.

• ನಾಗರಹಾವನ್ನು ಅರೆಜೀವ ಮಾಡಿ ಬಿಟ್ಟರೆ ಅದು ಹನ್ನೆರಡು ವರ್ಷದವರೆಗೆ ಸೇಡು ಸಾಧಿಸುತ್ತದೆ.

• ಗೂಬೆ ರಾತ್ರಿ ವಿಕಾರವಾಗಿ ಕೂಗುತ್ತಾ ಮನೆಯ ಸುತ್ತ ಹಾರಾಡಿದರೆ ಮನೆಯಲ್ಲಿ ಯಾರಾದರೂ ಸಾಯುತ್ತಾರೆ.

ಗಿಡ, ಮರ, ಹೂ, ಫಲಗಳಿಗೆ ಸಂಬಂಧಿಸಿದ ವಿಷಯಗಳು ಬರುತ್ತವೆ. ಫಲಕೊಡುವ ಮರವನ್ನು ಕಡಿಯಬಾರದು, ಅರಳಿಮರ, ತೆಂಗಿನಮರ ಕಡಿಯಬಾರದು ಇತ್ಯಾದಿ. ಇಂಥ ನಂಬಿಕೆಗಳಿಗೆ ಬಹುಶಃ ಅರಳಿಮರ ದೊಡ್ಡದಾಗಿದ್ದು ದಾರಿ ಹೋಕರಿಗೆ ನೆರಳನ್ನು ಕೊಡುತ್ತದೆ. ಫಲ ಬಿಡುವ ಮರ ಉತ್ಕೃಷ್ಟ ಹಣ್ಣುಗಳನ್ನು ನೀಡುತ್ತವೆ ಎಂಬುದು ಸತ್ಯಸಂಗತಿ. ಹಾಗಾಗಿ ಈ ನಂಬಿಕೆಗಳು ಆಚರಣೆಯಲ್ಲಿರುವುದು ಮಾನವ ಕುಲಕ್ಕೆ, ನಿಸರ್ಗಕ್ಕೆ ಒಳ್ಳೆಯದು.

ಸ್ತ್ರೀಗೆ ಸಂಬಂಧಿತ ನಂಬಿಕೆಗಳು

• ವಿವಾಹ ದಿನ ಮಳೆ ಬಂದರೆ ಗಂಡು ಅಥವಾ ಹೆಣ್ಣು ಅಕ್ಕಿ ಅಥವಾ ತೆಂಗಿನಕಾಯಿ ತಿಂದಿದ್ದಾರೆಂದು ನಂಬಿಕೆ.

• ಲಗ್ನ ಅಥವಾ ಕಂಕಣ ಕಟ್ಟಿಸಿದ ದಿನ ಮದುವೆ ಮುಗಿಯುವವರೆಗೆ ಮನೆಯಲ್ಲಿ ಮಾಂಸದಡಿಗೆ ಮಾಡಬಾರದು.

• ಮದುವೆಯಾದ ಐದು ದಿವಸಗಳು ಮನೆಯ ಹೊರಗಡೆ ಹೋಗಬಾರದು, ಹೋದರೆ ದೆವ್ವಗಳು ಮೈಯಲ್ಲಿ ಸೇರ್ಪಡೆಯಾಗುವವು.

• ಮದುವೆಯಾದ ಮೊದಲಿಗೆ ಮನೆಯ ದೇವರಿಗೆ ಕೈ ಮುಗಿಯಲು ಹೋಗಬೇಕು. ಹೋಗದಿದ್ದರೆ ಆ ದೇವರು ಆ ಮನೆತನಕ್ಕೆ ಕಾಟ ನೀಡುವ ಸಾಧ್ಯತೆಯಿದೆ.

• ಮನೆಯಲ್ಲಿ ತಂದೆ ಅಥವಾ ತಾಯಿ ತೀರಿಕೊಂಡರೆ, ಹೆಣ್ಣು ಮಕ್ಕಳಿಗೆ ಒಂದು ವರ್ಷದ ಒಳಗಡೆಯಲ್ಲಿಯೇ ಮದುವೆ ಮಾಡಬೇಕು. ಒಂದು ವೇಳೆ ಒಂದು ವರ್ಷವು ಮದುವೆಯಾಗದೆ ಇದ್ದರೆ, ಈ ಮದುವೆ ಮೂರು ವರ್ಷಗಳವರೆಗೆ ಮುಂದೂಡಬೇಕೆಂಬ ನಿಯಮವಿದೆ.

• ಮದುವೆಯಾದ ಕೆಲವು ತಿಂಗಳ ನಂತರ ಕಾರ ಹುಣ್ಣಿಮೆ ಬಂದರೆ ಆ ವರ್ಷದಲ್ಲಿ ಎತ್ತುಗಳಿಗೆ, ಮನೆಗೆ ಸುಣ್ಣ-ಬಣ್ಣಗಳಿಂದ ಅಲಂಕರಿಸಬಾರದು.

• ಮದುವೆಯಾದ ವರ್ಷ ಮನೆಕಟ್ಟಬಾರದು.

• ಬಾಣಂತಿ ಹೆಂಗಸು ರಾತ್ರಿ ಸಮಯದಲ್ಲಿ ಒಂಟಿಯಾಗಿ ಹೊರಗಡೆ ಹೋಗಬಾರದು.

• ಬಾಣಂತಿಯರ ಕಾಲು ದಾಟಬಾರದು. ದಾಟಿದರೆ ಮಕ್ಕಳಿಗೆ ಹಾಲು ಬರುವುದಿಲ್ಲ. ಕಾಲನ್ನು ಪುನಃ ದಾಟಬೇಕು.

• ಖಾಲಿ ತೊಟ್ಟಿಲನ್ನು ತೂಗಬಾರದು.

• ಮಗು ಮಲಗಿರುವಾಗ ಅದರ ಕಾಲು ದಾಟಿ ಹೋಗಬಾರದು.

• ಮಲಗುವಾಗ ಎಡ ಮಗ್ಗುಲಿಗೆ ಮಲಗಬೇಕು. ಏಳುವಾಗ ಬಲ ಮಗ್ಗುಲಲ್ಲಿ ಏಳಬೇಕು.

• ಮಗುವಿಗೆ ತಾಯಿಯು ಒಂದು ಮೊಲೆಯ ಹಾಲನ್ನು ಮಾತ್ರ ಕುಡಿಸಿ ನಿಲ್ಲಿಸಬಾರದು.

• ಊಟ ಮಾಡಿದ ಎಂಜಲನ್ನು ದಾಟಿ ಹೋಗಬಾರದು. ಎಂಜಲು ತಟ್ಟೆಯನ್ನು ಒಣಗಲು ಬಿಡಬಾರದು.

• ಹೆಣ್ಣು ಮಗಳು ತಾಯಿಗೆ ಆಧಾರ, ಮಗ ತಂದೆಗೆ ಆಧಾರ

ಅಡುಗೆ, ಊಟ ಮತ್ತು ಕೌಟುಂಬಿಕ ವಿಷಯಗಳಿಗೆ ಸಂಬಂಧಿಸಿರುವ ನಂಬಿಕೆಗಳು

ಊಟದ ತಟ್ಟೆಯನ್ನು ಕಾಲಿನಿಂದ ಒದೆಯಬಾರದು. ಊಟದ ಹಾಗೂ ಎಂಜಲು ತಟ್ಟೆಯನ್ನು ದಾಟಬಾರದು. ದಾಟಿದರೆ ಊಟ ಮಾಡಿದವರಿಗೆ ಹೊಟ್ಟೆ ನೋವು ಬರುತ್ತದೆ. ತುತ್ತು ತೂಕ ಮಾಡಬಾರದು. ಕುಟುಂಬದಲ್ಲಿ ಅನುಸರಿಸಬೇಕಾದ ನಿಯಮಗಳ ಬಗ್ಗೆ ಅದರ ಐಕ್ಯತೆಗೆ ಹಿರಿಕಿರಿಯರು ಅನುಸರಿಸಬೇಕಾದ ನಡತೆಯ ಬಗ್ಗೆ ಬಳಕೆಯ ವಸ್ತುಗಳ ಬಗ್ಗೆ ಇರುವ ನಂಬಿಕೆಗಳು

- ಉಂಡ ಮನೆಗೆ ಎರಡು ಬಗೆಯಬಾರದು.
- ತುಂಬಿದ ಕೆರೆಗೆ ಕಲ್ಲು ಎಸೆಯಬಾರದು.
- ಹಸಿದವನಿಗೆ ಅನ್ನ ಹಾಕಿದರೆ ಪುಣ್ಯ ಬರುತ್ತದೆ.
- ಬೇಸಿಗೆಯಲ್ಲಿ ನೀರಿನ ಅರವಟ್ಟಿಗೆ ಇಟ್ಟರೆ ಇಟ್ಟವನಿಗೆ ಪುಣ್ಯ ಲಭಿಸುವುದು ಎಂಬ ನಂಬಿಕೆಗಳು ನೀತಿ ಪ್ರಧಾನವಾಗಿದ್ದು, ಮಾನವೀಯತೆಯನ್ನು ಪ್ರತಿನಿಧಿಸುತ್ತದೆ.

"ನಂಬಿಕೆಗಳಿಂದ ಮಾನವನಿಗೆ ಉಪಕಾರವಾಗುವ ಸಂದರ್ಭಗಳಿದ್ದರೂ ಮುಗ್ಧರು ಅನೇಕ ಸಲ ಮೂಢನಂಬಿಕೆಗಳಿಂದ ತಮ್ಮ ಸರ್ವಸ್ವವನ್ನು ನಾಶ ಮಾಡಿಕೊಂಡವರೂ ಇದ್ದಾರೆ. ಯಾವ ನಂಬಿಕೆ ಎಷ್ಟು ಮೌಲ್ಯದ ನಂಬಿಕೆಯೆಂದು ಪ್ರಮಾಣಿಸಿ ನೋಡುವ ವೈಚಾರಿಕತೆಯ ಅಗತ್ಯವಿದೆ. ವೈಚಾರಿಕ ಹಿನ್ನೆಲೆಯಲ್ಲಿ ನಂಬಿಕೆಗಳನ್ನು ಒರೆಗೆ ಹಚ್ಚುವ, ವೈಜ್ಞಾನಿಕವಾಗಿ ತಿಳಿದುಕೊಳ್ಳುವ ಪ್ರಯತ್ನಗಳು ಆಗಾಗ ನಡೆದಿವೆ. ಜನಪದರ ಬದುಕಿನಲ್ಲಿ ಬೆರೆತುಕೊಂಡಿರುವ ಹಲವಾರು ನಂಬಿಕೆಗಳನ್ನು ಆಚರಣೆಗಳನ್ನು ಆಚರಿಸುವ ಪೂರ್ವದಲ್ಲಿ ನಂಬಿಕೆಯಿಂದ 'ಹರಕೆ' ಹೊತ್ತಿರುತ್ತಾರೆ. ಹರಕೆಗಳು ಧಾರ್ಮಿಕ, ಸಾಂಸ್ಕೃತಿಕ ವಲಯದಲ್ಲಿ ವೈಯಕ್ತಿಕವಾಗಿ ಹಾಗೂ ಸಾಮೂಹಿಕವಾಗಿ ಆಚರಿಸುವ ವಿಧಾನಗಳನ್ನು ಅಳವಡಿಸಿಕೊಂಡಿದ್ದಾರೆ.

ಮರಾಟಿ ಸಮುದಾಯದವರ ಇತರೆ ನಂಬಿಕೆಗಳು

- ಕೆಲಸ ಕಾರ್ಯಕ್ಕೆ ಹೊರಟಾಗ ಎಲ್ಲಿಗೆ ಎಂದು ಕೇಳದೆ, ದೂರ ಎಂದು ಕೇಳಬೇಕು.
- ಮನೆಯಿಂದ ಹೊರಟು ಹೋಗುವಾಗ, ಹೋಗುತ್ತೇನೆ ಎಂದು ಹೇಳದೆ, ಹೋಗಿ ಬರುತ್ತೇನೆ ಎನ್ನಬೇಕು.
- ಮೇಲುಗಣ್ಣಿನವನಿಗೆ ಭೂಮಿಯ ಒಳಪದರಿನ ನೀರು ಕಾಣಿಸುವುದು.
- ಆರು ಬೆರಳುಗಳಿದ್ದರೆ, ಮೇಲುಗಣ್ಣಿದ್ದರೆ ಅದೃಷ್ಟವಂತರು.
- ಮೂಗು ಉದ್ದವಿದ್ದರೆ ಪುಣ್ಯವಂತ, ಸಣ್ಣದಾಗಿದ್ದರೆ ಬುದ್ಧಿವಂತ, ಕಿವಿಗಳು, ಕೈಯ ಹಸ್ತಗಳು ಅಗಲವಾಗಿದ್ದರೆ ಸಮಾಜದಲ್ಲಿ ದೊಡ್ಡ ವ್ಯಕ್ತಿಯಾಗುವನು.
- ತಲೆ ದಪ್ಪವಾಗಿದ್ದರೆ – ಬುದ್ಧಿವಂತ.
- ಹಸ್ತದಲ್ಲಿ ಗರುಡ ಮಚ್ಚೆ ಇದ್ದವರನ್ನು ಹಾವು ಕಚ್ಚುವುದಿಲ್ಲ.
- ಎದೆಯ ಅಥವಾ ದೇಹದ ಬಲಭಾಗದಲ್ಲಿ ಸ್ತ್ರೀಯರಿಗೆ ಎಡಭಾಗದಲ್ಲಿ, ಮಚ್ಚೆ ಇದ್ದರೆ ಅದೃಷ್ಟವಂತರು.
- ದೇಹದಲ್ಲಿ ಆಗುವ ಆಕಸ್ಮಿಕ ಚಲನೆಯನ್ನು ಕುರಿತ ನಂಬಿಕೆಗಳಿಗೆ ಉದಾಹರಣೆಗಳೆಂದರೆ ಬಲಭುಜ ಹಾರಿದರೆ ಕೇಡು, ಹಣೆ ಅದುರಿದರೆ ಶುಭ, ಬೆನ್ನು ಹಾರಿದರೆ ಧನಲಾಭ, ಬಲಗಣ್ಣು ಹಾರಿದರೆ ಶುಭ, ಎಡಗಣ್ಣು ಹಾರಿದರೆ ಕೇಡು.

• ಗಂಡಸರಿಗೆ ತಲೆಯಲ್ಲಿ ಎರಡು ಸುಳಿಯಿದ್ದರೆ ಎರಡು ಮದುವೆಯ ಯೋಗ.

• ಹೆಣ್ಣು ನೋಡಲಿಕ್ಕೆ ಹೋಗುವಾಗ ಮೂರು ಜನ ಕೂಡಿ ಹೋಗಬಾರದು. ಒಂದು ಸಣ್ಣ ಕಲ್ಲನ್ನಾದರೂ ಹಿಡಿದುಕೊಳ್ಳಬೇಕು

• ರಾತ್ರಿ ಹೊತ್ತಲ್ಲಿ ಕನ್ನಡಿ ಕಾಣಬಾರದು. ಮುಂದೆ ವೇಶ್ಯೆ ಆಗಿ ಹುಟ್ಟುತ್ತಾರೆ.

• ಹೆಣ್ಣು ಮಕ್ಕಳ ತಲೆಗೆ ಕಬ್ಬಿಣ ತಗಲಿಸಬಾರದು.

• ತುಳಸಿ ಎಲೆಯನ್ನು ಮುಟ್ಟಿನ ಸಂದರ್ಭದಲ್ಲಿ ಹೆಣ್ಣು ಮಕ್ಕಳು ಕೊಯ್ಯಬಾರದು.

• ಮೂರು ಹೆಣ್ಣು ಹುಟ್ಟಿ ಒಂದು ಗಂಡು ಹುಟ್ಟಬಾರದು.

• ಏಳು ಗಂಡು ಹುಟ್ಟಿ ಒಂದು ಹೆಣ್ಣು ಹುಟ್ಟಬಾರದು

• ಋತುಮತಿಯಾದಾಗ ಮರುದಿನ ತಲೆಗೆ ಎಣ್ಣೆ ಹಾಕಬಾರದು.

• ವರ್ಷಕ್ಕೊಮ್ಮೆ ಬರುವ ಹಬ್ಬ ಹರಿದಿನಗಳಲ್ಲಿ ಮಕ್ಕಳನ್ನು ಹೊಡೆಯಬಾರದು.

• ದೇವರಿಗಾಗಿ ತಯಾರಿಸಿರುವ ಮೀಸಲು ಎಡೆಯನ್ನು ಇನ್ನೂ ಹಲ್ಲುಬಾರದ ಸಣ್ಣ ಹುಡುಗರು ತಿಂದರೆ ದೇವರು ಮುನಿಸಿಕೊಳ್ಳುವುದಿಲ್ಲ. ಹುಡುಗರು ದೇವರ ಸಮಾನವೆಂಬ ಭಾವನೆ ಜನತೆಯಲ್ಲಿದೆ.

• ಅಮವಾಸ್ಯೆಯ ದಿವಸ ಮನೆಯಲ್ಲಿ ಕಲಹವಾದರೆ ಆ ಮನೆತನಕ್ಕೆ ಕಾದಾಟ ಸಂಭವಿಸುವ ಸಾಧ್ಯತೆ ಹೆಚ್ಚು.

• ಕಾರ ಹುಣ್ಣಿಮೆಯ ದಿವಸ ಇನ್ನೊಬ್ಬರ ಕೂಡ ಜಗಳ ಮಾಡಿದರೆ ಆ ಮನೆತನ ನಾಶವಾಗುವುದು.

• ಮನೆಯ ತೊಲೆ ಒಂದು ಇರಬಾರದು. ಬೆಸ ಸಂಖ್ಯೆಯಲ್ಲಿದ್ದರೂ ಅವು ಜೋಡಿಯಾಗಿಯೇ ಇರಬೇಕು. ಮನೆಯಲ್ಲಿ ಸ್ಥಾಪಿಸಿರುವ ನಡುಗಂಬವು ದೇವರಾದ ಕಾರಣಕ್ಕೆ ಅದನ್ನು ಕಾಲಿನಿಂದ ಒದೆಯಬಾರದು, ದೇವರನ್ನು ಒದ್ದಂತೆ ಎಂಬ ನಂಬಿಕೆಯಿದೆ.

• ಮನೆಯ ತೊಲೆಯ ಕೆಳಗೆ ಮಲಗಿದರೆ ಕನಸುಗಳು ಜಾಸ್ತಿ.

• ಸಂಜೆಯಾದ ಮೇಲೆ ಮನೆಯಿಂದ ಹೊರಗಡೆ ಉಪ್ಪು, ಅರಿಶಿಣ, ಸೀಗೆಕಾಯಿ ಪುಡಿ, ಮಜ್ಜಿಗೆ ಕೊಡಬಾರದು, ಹೊತ್ತು ಮುಳುಗಿದ ಮೇಲೆ ಅಕ್ಕಿ ತಿನ್ನಬಾರದು. ಸೂರ್ಯ ಅಸ್ತಂಗತನಾಗುವ ಸಮಯದಲ್ಲಿ ಊಟ ಮಾಡಿದರೆ ಸಾಯುವ ಸಮಯದಲ್ಲಿ ಊಟ ಮಾಡಿದಂತೆ.

• ರಾತ್ರಿ ಹೊತ್ತು ಕಸ ಚೆಲ್ಲಬಾರದು, ಲಕ್ಷ್ಮೀ ಮನೆ ಬಿಡುತ್ತಾಳೆ.

• ಮನೆಯಲ್ಲಿನ ಕಸಬರಿಗೆ, ಒನಕೆ, ಮರ ದೇವರು ಆದ್ದರಿಂದ ಇವುಗಳನ್ನು ಕಾಲಿನಿಂದ ಒದೆಯಬಾರದು.

ಮರಾಟಿ ನಾಯ್ಕ ಮತ್ತು ಮರಾಟಿಗ ಸಮುದಾಯದವರಲ್ಲಿರುವ ನಂಬಿಕೆಗಳನ್ನು ಅಧ್ಯಯನದ ದೃಷ್ಟಿಯಿಂದ ಸ್ಥೂಲವಾಗಿ ವೈಜ್ಞಾನಿಕ, ಅವೈಜ್ಞಾನಿಕ ಎಂದು ವಿಭಜನೆಯಲ್ಲಿ ಎಲ್ಲ ತರಹದ ನಂಬಿಕೆಗಳನ್ನು ಸೇರಿಸಲು ಸಾಧ್ಯವಾಗುವುದಿಲ್ಲ. ಎಲ್ಲ ನಂಬಿಕೆಗಳಲ್ಲೂ ವೈಜ್ಞಾನಿಕ ಅಂಶ ದೊರೆಯುವುದಿಲ್ಲ. ವೈಜ್ಞಾನಿಕವಲ್ಲದ ಕೆಲವು ನಂಬಿಕೆಗಳಲ್ಲಿ ನಂಬಿಕೆ ಇಡುವುದರಿಂದ ಮಾನಸಿಕ ತೃಪ್ತಿಯಾದರೂ ದೊರೆಯಬಹುದು. ಉದಾಹರಣೆಗೆ ಪಿತೃಪಕ್ಷವನ್ನು ಆಚರಿಸುವುದರಿಂದ ಸತ್ತವರ ಆತ್ಮಕ್ಕೆ ಶಾಂತಿ ದೊರೆಯುತ್ತದೆ. ಅವರು ಪದೇ ಪದೇ ಪೀಡಿಸುವುದಿಲ್ಲ ಎಂದು ನಂಬುವುದರಲ್ಲಿ ವೈಜ್ಞಾನಿಕ ಸತ್ಯವಿಲ್ಲದಿದ್ದರೂ ಅಂಥ ಆಚರಣೆಯಿಂದ ಆಚರಿಸುವವನಿಗೆ ಮಾನಸಿಕ ಸಂತೃಪ್ತಿ ಮಾತ್ರ

ದೊರೆಯಬಹುದು. ಊಟಕ್ಕೆ ಕುಳಿತಾಗ ತಟ್ಟೆ ಅಥವಾ ಎಲೆಯ ಸುತ್ತಲೂ ನೀರನ್ನು ಚಿಮುಕಿಸಬೇಕು ಎಂಬ ನಂಬಿಕೆ. ಸಣ್ಣ ಕ್ರಿಮಿ ಕೀಟಗಳು ತಟ್ಟೆ (ಎಲೆ)ಯ ಬಳಿಗೆ ಹರಿದು ಬರುವುದನ್ನು ತಡೆಗಟ್ಟಬಹುದು. ಉಗುರು ನೀರಿಗೆ ಹಾಕಬಾರದು. ಹಾಕಿದರೆ ಉಗುರು ಸುತ್ತು ಬರುತ್ತದೆ. ಎಂಬಲ್ಲಿ ಉಗುರು ಒಂದು ವಿಷವಸ್ತು, ಅದರ ಸಂದುಗಳಲ್ಲಿ ಕೊಳೆ ಸೇರಿರುತ್ತದೆ. ಇದನ್ನು ಬೇರೆಯವರಿಗೆ ಹಾಕುವುದರಿಂದ ಅವರಿಗೆ ವಿಷಜಂತುಗಳನ್ನು ಪ್ರಸರಿಸಿದಂತೆ ಆಗುತ್ತದೆ. ಬೇರೆಯವರ ಚಪ್ಪಲಿಗಳನ್ನು ಮೆಟ್ಟಬಾರದು. ಬೇರೆಯವರ ಬಟ್ಟೆಗಳನ್ನು ಬಳಸಬಾರದು ಎಂಬಲ್ಲಿ ಚರ್ಮರೋಗವನ್ನು ತಡೆಗಟ್ಟಬಹುದು ಎಂಬ ಸತ್ಯವನ್ನು ಕಾಣುತ್ತೇವೆ. ಕೆಲವು ನಂಬಿಕೆಗಳಲ್ಲಿ ವೈದ್ಯಕೀಯ ಸಂಗತಿಗಳು ಅಡಕವಾಗಿವೆ. ಅಜೀರ್ಣದಿಂದ ಹೊಟ್ಟೆ ಉಬ್ಬಿಕೊಂಡರೆ, ನೋವು ಕಾಣಿಸಿದರೆ, (ಬೆಂಬೂದಿ) ಬೆಚ್ಚನೆಯ ಬೂದಿ ತಿಕ್ಕಿದರೆ ಸರಿಯಾಗುತ್ತದೆ ಎಂಬಲ್ಲಿ ಪಚನಕ್ರಿಯೆ ಚೇತನಗೊಂಡು ನೋವು ಕಡಿಮೆಯಾಗುತ್ತದೆ. 'ಅರದೆಲೆ' ನೋವು ಬಂದರೆ 'ಚಿಟಿಕೆ' (ಗಾಜಿನ ಬಳಿಯ ಚೂರಿನಿಂದ ಗಂಡಸ್ಥಲದ ನರಗಳನ್ನು ಸುಡುವುದು) ಹಾಕಿದರೆ ವಾಸಿಯಾಗುತ್ತದೆ ಎಂಬ ನಂಬಿಕೆ ಆಕ್ಯೂಪಂಕ್ಚರ ವೈದ್ಯಕೀಯ ಪದ್ಧತಿ ಪ್ರಯೋಗವಾಗಿದೆ. ನಿಗದಿಯಾಗದ ಜಾಗದಲ್ಲಿ 'ಚಿಟಿಕೆ' ಹಾಕುವುದರಿಂದ ನರದ ಮೇಲೆ ಒಂದೆಡೆಯೇ ಸಂಗ್ರಹವಾಗಿದ್ದ ವಿಷ ವಸ್ತುಗಳ ಕ್ರಿಯೆ ಬೇರೆಡೆಗೆ ಸಾಗಿ, ನೋವು ಕಡಿಮೆಯಾಗಬಹುದು.

೩.೧೨. ವಾರ್ಷಿಕಾವರ್ತನ ಆಚರಣೆಗಳು

ಪತ್ತನಾಜೆ

ಮೇಷ ಮಾಸದ ಹದಿನೆಂಟನೆಯ ದಿನಕ್ಕೆ ಮತ್ತು ಅದು ಕಳೆಯುವುದಕ್ಕೆ (ಪಗುಡು ಪದಿನೆಡಮ ಪೊಪಿನ) 'ಪತ್ತನಾಜೆ' ಎಂದು ಹೇಳುತ್ತಾರೆ. ಈ ದಿನವನ್ನು ರೈತರು ಬೀಜ ಬಿತ್ತನೆ ಮಾಡುವ ಶ್ರೇಷ್ಠ ದಿನವೆಂದು ಕರೆಯುತ್ತಾರೆ. ಪತ್ತನಾಜೆ ಕೂಡಾ ಹೀಗೆಯೇ ವೃಷಭ ಮಾಸದ ಹತ್ತನೆಯ ದಿನಕ್ಕೆ (ಮೇಷ ತಿಂಗಳಿನ ಹತ್ತನೆಯ ದಿನ) ಈ ದಿನವು ಆ ವರ್ಷಕ್ಕೆ ಪ್ರಾರಂಭವಾಗುವ ಮಳೆ ಜೋರಾಗಿ ಸುರಿಯಬಹುದೆಂಬ ವಿಶ್ವಾಸ ಕರಾವಳಿಯ ಜನಪದರಲ್ಲಿ ಇದೆ. ಒಂದು ವೇಳೆ ನಿರೀಕ್ಷಿಸಿದಷ್ಟು ಮಳೆ ಬಾರದಿದ್ದರೂ ಸ್ವಲ್ಪ ಹನಿ, ಹನಿಯಾದರೂ ಬಂದೀತೆಂಬ ನಂಬಿಕೆ ಇದೆ. (ಪತ್ತನಾಜೆಡು ಪತ್ತುಪನಿಬರ್ಸ ಆಂಡಲಾ ಬರಂದೆ ಪೊವಂದು) ಎನ್ನುವ ತುಳುವರ ನಂಬಿಕೆ. ಮುಂದೆ ಇದು ನಾಣ್ಣುಡಿಯಾಗಿ ಹುಟ್ಟಿಕೊಂಡಿರಬಹುದು. ಇದರಿಂದಾಗಿ 'ಪತ್ತನಾಜೆ' ಎಂದರೆ ಮಳೆಗಾಲದ ಪ್ರಾರಂಭವನ್ನು ಸೂಚಿಸುವ ಮೊದಲ ದಿನ. ಈ ಎರಡೂ ದಿನಗಳನ್ನು ಕರಾವಳಿಯ ಮರಾಟಿಗರು ನಿತ್ಯಕ್ಕಿಂತ ವಿಶೇಷವಾದ ಹಬ್ಬದ ದಿನವೆಂದು ಪರಿಗಣಿಸುತ್ತಾರೆ. ಅಲ್ಲದೆ ಕರಾವಳಿಯಲ್ಲಿ ವಾಸವಿರುವ ಮರಾಟಿ ಬೇಸಾಯಗಾರರು ಭೂತಗಳನ್ನು ಆರಾಧಿಸುವವರು. ತಾವು ನಂಬುತ್ತಿರುವ ದೈವಗಳಿಗೆ ನೀಡುವ ವೃಷಭ ಮಾಸದ ಅಗೆಲು ಸೇವೆ ಅಥವಾ 'ಬೇಷದ ಅಗೆಲು' ಎನ್ನುವರು. ಇಲ್ಲಿ ವ್ಯಕ್ತವಾಗುವುದು ತುಳುವರ ಸಂಸ್ಕೃತಿಯ ಭಾಗವಾಗಿರುವ ಪತ್ತನಾಜೆ ದಿನ ಮತ್ತು ಪಗ್ಗುಡು 'ಪದಿನೆಡ್ಮ ದಿನ' ಹಬ್ಬದ ದಿನದ ರೂಪವಾಗಿ ಮರಾಟಿ ಸಮುದಾಯದ ಮೇಲೆ ಪ್ರಭಾವ ಬೀರಿದೆ.

ಆಟಿದ ಅಮವಾಸ್ಯೆ (ಕರ್ಕಾಟಕ ಅಮವಾಸ್ಯೆ)

ಕರಾವಳಿಗರ ಜನಜೀವನದಲ್ಲಿ ಧಾರ್ಮಿಕ ಜೀವನದ ಪವಿತ್ರ ದಿನ. ಆಚರಣಾತ್ಮಕ ಹಬ್ಬಗಳ ತೀವ್ರತೆ ಹೆಚ್ಚುವುದು ಇಲ್ಲಿಂದಲೆ. "ಕರಾವಳಿಯ ಮರಾಟಿಗರನ್ನೊಳಗೊಂಡು ಆಟಿ ಅಮವಾಸ್ಯೆಯನ್ನು ವರ್ಷದ ಪ್ರಥಮ ಹಬ್ಬವೆಂದು ಪರಿಗಣಿಸಲಾಗುತ್ತಿದೆ. ಈ ದಿನ ಬೆಳಗಿನ ಜಾವ ಮನೆಯವರೆಲ್ಲ

ಎದ್ದೇಳುವುದಕ್ಕಿಂತ ಮುಂಚಿತವಾಗಿ ಯಾರ ಕಣ್ಣಿಗೂ ಬೀಳದಂತೆ ಬೇಸಾಯಗಾರನಾದ ಮರಾಟಿಗನು ತನ್ನ ಭತ್ತದ ಸಸಿಗಳು ತುಂಬಿರುವ ಗದ್ದೆಗಳಿಗೆ ಕಾಸರಕನ ಕೋಲುಗಳನ್ನು ಊರುತ್ತಾನೆ"[೪೩]. ಅದಕ್ಕಾಗಿ ಆತ ಅಮವಾಸ್ಯೆಯ ಹಿಂದಿನ ದಿನದ ಸಂಜೆಯ ವೇಳೆಗೆ ಅವುಗಳನ್ನು ಸಿದ್ಧಗೊಳಿಸಿರುತ್ತಾನೆ. ಬೆಳಗಾದ ಕೂಡಲೇ ತನ್ನ ಗದ್ದೆಗಳಲ್ಲಿ ಎಲೆಗಳುಳ್ಳ ಸಣ್ಣ ಸಣ್ಣ ಕೊಂಬೆಗಳಿಂದ ಕೂಡಿದ ಕೋಲುಗಳು ಕಾಣಿಸಿಕೊಳ್ಳುತ್ತವೆ. ಸಾಮಾನ್ಯವಾಗಿ ಮರಾಟಿ ಬೇಸಾಯಗಾರರು ಪುರಾಣದ ಬಲಿಚಕ್ರವರ್ತಿಯು ತನ್ನ ನಾಡಾದ ತುಳುನಾಡನ್ನು ಮತ್ತು ಭೂಮಿಯ ಮೇಲಿರುವ ತನ್ನ ಪ್ರಜೆಗಳ ಯೋಗಕ್ಷೇಮಗಳನ್ನು ವಿಚಾರಿಸಲು ತನ್ನ ಆಳುಗಳನ್ನು ಕಳುಹಿಸಿಕೊಡುವುದರ ಸಂಕೇತವೆಂದು ಭಾವಿಸುತ್ತಾರೆ.

"ಆಷಾಢ ಅಮವಾಸ್ಯೆಯ ದಿನ ಸೂರ್ಯ ಉದಯಿಸುವುದಕ್ಕಿಂತ ಮುಂಚಿತವಾಗಿ ಹಾಳೆ ಮರದ ಕಷಾಯವನ್ನು ಕುಡಿಯುವುದು ಸಂಪ್ರದಾಯ. ಎಲ್ಲಾ ರೀತಿಯ ಔಷಧೀಯ ಅಂಶಗಳನ್ನೊಳಗೊಂಡ ಗಿಡ ಮೂಲಿಕೆಗಳ ಸತ್ವಗಳು ಆ ದಿನಕ್ಕೆ ಹಾಳೆ ಮರದಲ್ಲಿ ಸೇರಿಕೊಂಡಿರುತ್ತವೆ. ಎಂಬುದು ಜನಪದರ ನಂಬಿಕೆ. ಆದುದರಿಂದ ಅದರ ಸಿಪ್ಪೆಯ ಕಷಾಯವನ್ನು ಆಟಿ ಅಮವಾಸ್ಯೆಯ ದಿನ ಕುಡಿದರೆ ಅದು ಸರ್ವ ರೋಗ ನಿವಾರಣೆಯಾಗುವುದೆಂಬುದು ನಂಬಿಕೆ. ಈ ಕಷಾಯಕ್ಕೆ ತುಳುವಿನಲ್ಲಿ 'ಪಾಲೆದ ಕೆತ್ತೆದ ಪೇರು' (ಹಾಳೆಯ ಮರದ ಸಿಪ್ಪೆಯ ಹಾಲು) ಎನ್ನುತ್ತಾರೆ. ಅಂದು ಮಧ್ಯಾಹ್ನಕ್ಕೆ ಹೆರೆದು ಹಾಕಿದ ತೆಂಗಿನ ಕಾಯಿ ಮಿಶ್ರಿತ ಬೆಳ್ತಿಗೆ ಅಕ್ಕಿಯ ಗಂಜಿ ಊಟ ಮಾಡುತ್ತಾರೆ. ಇದಕ್ಕೆ ತುಳುವಿನಲ್ಲಿ 'ತಾರಾಯಿದ ಗಂಜಿ' ಎಂದು ಕರೆಯುತ್ತಾರೆ. ಆಷಾಢ ಅಮವಾಸ್ಯೆಯೆಂದು ಸಮುದ್ರ ಸ್ನಾನ ಮಾಡಿದರೆ ಪಾಪ ಮುಕ್ತರಾಗುವರೆಂಬ ಭಾವನೆ ಎರಡೂ ಸಮುದಾಯದವರಲ್ಲಿರುವುದು ಕಂಡು ಬರುತ್ತದೆ."[೪೪]

ನಾಗರ ಪಂಚಮಿ

ನಾಗರಪಂಚಮಿಯಂದು ಎಲ್ಲೆಡೆ ನಾಗದೇವರಿಗೆ ತನು ಎರೆಯುವುದನ್ನು ಕಾಣುತ್ತೇವೆ. ತನು ಎರೆಯುವುದರಿಂದ ನಾಗದೇವರು ಸುಪ್ರೀತನಾಗಿ ಭಕ್ತರ ಇಷ್ಟಾರ್ಥವನ್ನು ಪೂರೈಸುವನೆಂಬ ನಂಬಿಕೆ ಹಾಸುಹೊಕ್ಕಾಗಿದೆ. 'ತನು' ಎಂದರೆ ದೇಹ. ತನು (ದೇಹ) ತಂಪಾಗಿರಲೆಂದು ನಾಗದೇವರಿಗೆ ಲಾವಂಚ, ಅರಿಶಿಣ ಮಿಶ್ರಿತ ಹಾಲಿನ ಅಭಿಷೇಕ ಮಾಡುತ್ತಾರೆ. ಅಕ್ಕಿ, ಹಣ್ಣು, ತೆಂಗಿನಕಾಯಿಯನ್ನು ಸಮರ್ಪಿಸುತ್ತಾರೆ. ಜೊತೆಗೆ ಕುಂದಾಪುರ ಪರಿಸರದಲ್ಲಿ ನಾಗ ದೇವರಿಗೆ ಬಾಳೆಹಣ್ಣಿನ ಗೊನೆಯನ್ನು ಅರ್ಪಿಸುವುದರಿಂದ 'ಹಣ್ಣುಗೊನೆ ತನು' ಎಂಬ ಪ್ರತೀತಿ ಇದೆ. ಕೆಲಪ್ರದೇಶಗಳಲ್ಲಿ ಹೆಂಗಸರೇ ಮಡಿಯುಟ್ಟು ನಾಗನಿಗೆ ಅರಿಶಿಣ, ಕುಂಕುಮವಿಟ್ಟು ಅವರೇ ತನು ಎರೆಯುವ ಸಂಪ್ರದಾಯವೂ ಇರುವುದು ಕಂಡು ಬರುತ್ತದೆ. ಭಕ್ತರ ತನುವಿನ ಆರೈಕೆಗಾಗಿ ನಾಗನಿಂದ ತನು ಎರೆದು ಬೇಡಿಕೊಳ್ಳುವುದು ಪರಂಪರೆಯಲ್ಲಿ ಬೆಳೆದು ಬಂದ ಸಂಪ್ರದಾಯ. ಹಿಂದೆ ಮುಂಜಾನೆ ಎದ್ದು ತಣ್ಣೀರಿನ ಸ್ನಾನ ಮಾಡಿ ಒದ್ದೆ ಬಟ್ಟೆಯುಟ್ಟು, ಮಡಿಯಲ್ಲಿ ನಾಗನಿಗೆ ತನು ಎರೆದು ಪೂಜಿಸಿದರೆ ಸಂತಾನಭಾಗ್ಯ ಇಲ್ಲದವರಿಗೆ ನಾಗಶಾಪ ವಿಮೋಚನೆಯಾಗಿ 'ಸಂತಾನ ಭಾಗ್ಯ' ಒದಗುವುದೆಂಬುದು ನಂಬುಗೆ. ಇಂತಹ ಹರಕೆ ಹೊರುತ್ತಿದ್ದರು. ಈಗ ಎಲ್ಲವೂ ತಿರುವು ಮುರುವು. ಎಲ್ಲರೂ ಕೂಡ ನಾಗರಪಂಚಮಿಯಂದು ತನು ಎರೆಯುತ್ತಾರೆ. ಮರಾಟಿಗರು ಬ್ರಾಹ್ಮಣರನ್ನು ಅಥವಾ ಪುರೋಹಿತರನ್ನು ಕರೆದು ಅವರಿಗೆ ತಮ್ಮ ಸ್ಥಿತಿ-ಗತಿಗನುಗುಣವಾಗಿ ದಕ್ಷಿಣೆಯನ್ನು ನೀಡಿ ತನು ಎರೆಯುತ್ತಾರೆ.

ನಾಗರಪಂಚಮಿಯಂದು ಮಾತ್ರವಲ್ಲದೆ ಬೇರೆ ದಿನಗಳಲ್ಲೂ ನಾಗನಿಗೆ ತನುವನ್ನು ಎರೆಯುತ್ತಾರೆ. ಅದರಲ್ಲೂ ಪ್ರತೀ ತಿಂಗಳ 'ಪಂಚಮಿ' ಮತ್ತು 'ಷಷ್ಠಿ' ದಿನ ತನು ಎರೆದರೆ ಮನೆಯಲ್ಲಿ ಶಾಂತಿ ಮತ್ತು ಸುಭೀಕ್ಷೆ ನೆಲೆಸುತ್ತದೆ. ಇಷ್ಟಾರ್ಥಗಳು ಈಡೇರುತ್ತವೆ ಎಂಬ ನಂಬಿಕೆ ಮರಾಟಿ ಮತ್ತು ಮರಾಟಿ

ನಾಯ್ಕರಲ್ಲಿದೆ. ತನು ಎರೆಯುವಾಗ, ಫಲಪುಷ್ಪಗಳನ್ನು ಸಮರ್ಪಿಸುವಾಗ ವಿಶೇಷವಾಗಿ ಕೇದಗೆ ಹೂವನ್ನು ಅರ್ಪಿಸುತ್ತಾರೆ. ಅದು ನಾಗದೇವರಿಗೆ ಪ್ರಿಯವಾದ ಹೂವು. ಈ ತನು ಎರೆಯುವುದರ ಮೂಲಕ ನಾಗದೋಷವನ್ನು ಪರಿಹರಿಸಿಕೊಳ್ಳಲು ಸಾಧ್ಯವಾಗುತ್ತದೆ ಎಂಬುದು ಪೂರ್ವಜರ ನಂಬಿಕೆ. ಬಡವರು ಈ ತನು ಎರೆಯುವುದರಿಂದಲೇ ತಮ್ಮ ದೋಷ ಪರಿಹರಿಸಿಕೊಳ್ಳುವರು. ಆದರೆ ಶ್ರೀಮಂತರು ವಿವಿಧ ರೀತಿಯ ಖರ್ಚುಗಳನ್ನು ಮಾಡಿ ವಿವಿಧ ಆಚರಣೆಗಳನ್ನು ಮಾಡುತ್ತಾರೆ. ಮುತ್ತೈದೆ ಭಾಗ್ಯ ಸಿಗುವುದು ಎಂಬ ನಂಬಿಕೆಯಿಂದ ಬಾಳೆಗೊನೆಯನ್ನು ನಾಗದೇವರಿಗೆ ಅರ್ಪಿಸಿ ತನು ಎರೆಯುತ್ತಾರೆ. ಮಹಿಳೆಯರು ಪುರೋಹಿತರ ಮೂಲಕ ಈ ಕಾರ್ಯ ಮಾಡಿಸುತ್ತಾರೆ. ಹೀಗೆ ನಾಗರಪಂಚಮಿಯಂದು ವಿಶೇಷವಾಗಿ ನಾಗನಿಗೆ ತನು ಎರೆಯುವ ಈ ಪ್ರಕ್ರಿಯೆ ಜನಜೀವನದಲ್ಲಿ ಹಾಸುಹೊಕ್ಕಾಗಿದೆ.

ತನು ಎರೆಯುವುದು ನಾಗದೇವರಿಗೆ ಇಷ್ಟವಾದ ಹರಕೆ. ಇದು ತೀರಾ ಬಡವನಿಂದ ಹಿಡಿದು ಶ್ರೀಮಂತರ ತನಕ ಮಾಡಬಹುದಾದ ಸುಲಭ ಹರಕೆ. ಹಿಂದೆ ನಾಗದೇವರ ದರ್ಶನದಲ್ಲಿ ದೇವರು ಹೇಳುವ ಹರಕೆ 'ನನ್ನನ್ನು ಭಕ್ತಿಯಿಂದ ನಂಬು. ವರ್ಷಕ್ಕೊಮ್ಮೆ ವೈಶಾಖ ಮಾಸದಲ್ಲಿ ತನು ಎರೆದು ಪ್ರಾರ್ಥಿಸಿಕೋ' ಅಂತ ಈಗ ದೇವರು ಹೈಟೆಕ್ ಹರಕೆಯನ್ನೇ ಕೇಳುತ್ತಿದೆ. ಚಿಲ್ಲರೆ ಮನುಷ್ಯರು ಕಡಿಮೆಯಾಗಿ ಎಲ್ಲರೂ ದೊಡ್ಡ ಮನುಷ್ಯರೇ ಆಗಿದ್ದಾರೆ. ಆದ್ದರಿಂದ "ತುಲಾಭಾರ",[೪೫] "ಆಶ್ಲೇಷ ಬಲಿ",[೪೬] "ನಾಗಸಂಸ್ಕಾರ",[೪೭] "ನಾಗಮಂಡಲ",[೪೮] ಚತ್ತುಪವಿತ್ರ ಹಾಗೂ ಅಷ್ಟಪವಿತ್ರ ನಾಗಮಂಡಲ ಹೀಗೆ ಭಾರೀ ಹರಕೆಯನ್ನೇ ಕೇಳುತ್ತಿದೆ. ತನುವಿನ ಹರಕೆ ಕಡಿಮೆಯಾಗುತ್ತಿದೆ. ಜನರು ಅದನ್ನೇ ದೊಡ್ಡತನದಿಂದ ಒಪ್ಪುತ್ತಾರೆ. ಇವತ್ತು ಹರಕೆ ಸಲ್ಲಿಸುವುದರಲ್ಲಿಯೂ ಒಂದು ರೀತಿಯ ಪೈಪೋಟಿ, ಸ್ಥಾನಮಾನ ಕಂಡು ಬರುತ್ತದೆ. ಇದು ದೇವರಿಗೆ ಪ್ರೀತಿಯೋ ಅಥವಾ ಮಾಡುವವರ ಪ್ರೀತಿಗೋ ಗೊತ್ತಿಲ್ಲ.

ಸೋಣ ಸಂಕ್ರಮಣ (ಸಿಂಹ ಸಂಕ್ರಮಣ) (ಸೋಣ ತಿಂಗಳು)

ಸಿಂಹ ಸಂಕ್ರಾಂತಿಗೆ ಸರಿಯಾಗಿ ಕಾಲಿಡುವ ಸೋಣ ತಿಂಗಳು ವರ್ಷದಲ್ಲಿಯೇ ಪುಣ್ಯದ ತಿಂಗಳು ಎಂಬುವ ನಂಬಿಕೆ. ಕರಾವಳಿಯ ತುಳು ಜನರಲ್ಲಿರುವಂತೆ, ಮರಾಟಿ ನಾಯ್ಕ ಮತ್ತು ಮರಾಟಿ ಎರಡೂ ಸಮುದಾಯದಲ್ಲಿದೆ. ಸಿಂಹ ಸಂಕ್ರಮಣದಂದು ಬಲಿಚಕ್ರವರ್ತಿಯಿಂದ ಆದೇಶಿತಳಾದ ಆತನ ತಾಯಿ ಪ್ರಜೆಗಳನ್ನು ನೋಡುವ ಸಲುವಾಗಿ ಸಿಂಹ ಸಂಕ್ರಮಣದಂದು ಭೂಲೋಕಕ್ಕೆ ಬರುತ್ತಾಳೆಂದು ನಂಬುತ್ತಾರೆ. ಅಲ್ಲದೆ ತುಳುವರಲ್ಲಿ ಆಟಿ ತಿಂಗಳನ್ನು ಹೊರಗೆ ಹಾಕುವುದು ಅಥವಾ ತುಳುವಿನಲ್ಲಿ 'ಆಟಿ ಪಿದಯಿಪಾಡುನು' ಎನ್ನುವ ಕ್ರಿಯೆಯೊಂದು ಈ ಸಿಂಹ ಸಂಕ್ರಾಂತಿ ದಿನದಂದು ನಡೆಯುವುದು. ಅಂದು ಮನೆಯೊಳಗಿನ ಎಲ್ಲಾ ವಸ್ತುಗಳನ್ನು ಹೊರ ಹಾಕಿ ನಂತರ ಅವುಗಳನ್ನೆಲ್ಲಾ ತೊಳೆದು ಸ್ವಚ್ಛಗೊಳಿಸಿ ಬಳಿಕ ಮನೆಯೊಳಗೆ ಆ ಮೊದಲಿನಂತೆಯೇ ಇಟ್ಟುಕೊಳ್ಳುತ್ತಾರೆ. ಆಷಾಢ ತಿಂಗಳನ್ನು ಬೀಳ್ಕೊಟ್ಟು ಪುಣ್ಯದ ತಿಂಗಳೆಂದು ತಿಳಿಯಲಾದ ಸೋಣ ತಿಂಗಳನ್ನು ಬರಮಾಡಿಕೊಳ್ಳುವ ಸಾಂಕೇತಿಕ ಕ್ರಿಯೆ ಇದಾಗಿದೆ. ಆದ್ದರಿಂದ ಈ ತಿಂಗಳನ್ನು ಭಕ್ತಿ, ಶ್ರದ್ದೆ ಸಂಭ್ರಮಗಳಿಂದ ಸ್ವಾಗತಿಸುವ ಕ್ರಿಯೆ ಸಂಕ್ರಾಂತಿ ದಿನ ಕಾಣಿಸಿಕೊಳ್ಳುವುದು.

ವಾರ್ಷಿಕ ನೇಮ, ಸಂಕ್ರಮಣ ಪೂಜೆ, ನಡಾವಳಿ, ಜಾತ್ರೆಗಳು, ಬಂಡೀ ಉತ್ಸವ ಇತ್ಯಾದಿಗಳನ್ನು ಬಾಗಿಲು ಹಾಕಲ್ಪಟ್ಟ ದೈವ ದೇವರುಗಳ ಗುಡಿಗೋಪುರಗಳೆಲ್ಲಾ ಹೊಸದಾಗಿ ಬಾಗಿಲು ತೆರೆದುಕೊಂಡು ಪೂಜೆ ಆರಾಧನೆಗೆ ಸಿದ್ಧಗೊಳ್ಳುತ್ತವೆ. ಮುಂದೆ ತಿಂಗಳು ವರ್ಷವಿಡೀ ನಿರಂತರ ಅರ್ಚನೆ ಆರಾಧನೆ ನಡೆಯುತ್ತವೆ. ಸೋಣ ತಿಂಗಳಿನ ಮೂವತ್ತು ದಿನಗಳು ಮರಾಟಿ ನಾಯ್ಕ ಮತ್ತು ಮರಾಟಿಗರ

ಸಮುದಾಯಕ್ಕೆ ಹಾಗೂ ಹಿಂದೂಗಳಿಗೆ ಪವಿತ್ರವಾದ ತಿಂಗಳಾಗಿದೆ. ಈ ದಿನಗಳಲ್ಲಿ ದೈವಿಕ ಕಾರ್ಯಗಳನ್ನು ಭಕ್ತಿ ಶ್ರದ್ಧೆಗಳಿಂದ ಆಚರಿಸುವರು. ಮರಾಟಿ ನಾಯ್ಕ ಮತ್ತು ಮರಾಟಿಗರು ತಮ್ಮ ಮನೆಯಲ್ಲಿರುವ ದೈವ ದೇವರುಗಳಿಗೆ, ತಮ್ಮ ಜಮೀನಿನ ಗುಡ್ಡದಲ್ಲಿರುವ ಮನೆ ದೈವಗಳಿಗೆ ಈ ಸಂಕ್ರಾಂತಿಯಿಂದ ಪ್ರಾರಂಭಿಸಿ ಮುಂದಿನ ಕನ್ಯಾ ಸಂಕ್ರಮಣ ಪ್ರವೇಶದ ವರೆಗೆ ಇಡೀ ತಿಂಗಳು ಸಂಜೆ ಸೂರ್ಯಾಸ್ತದ ಹೊತ್ತಿಗೆ ದೀಪ ಹಚ್ಚಿ ಆರತಿ ಮಾಡಿ ಅವರು ದೈವ ದೇವರುಗಳನ್ನು ಪ್ರಾರ್ಥಿಸಿಕೊಳ್ಳುವರು. ಇದರಿಂದಾಗಿ ಕಷ್ಟಗಳು ದೂರವಾಗಿ ತಮ್ಮ ಇಷ್ಟಾರ್ಥಗಳು ನೆರವೇರುವುದೆಂಬ ನಂಬಿಕೆ ಈ ಸಮುದಾಯದವರಲ್ಲಿದೆ.

ಪುದ್ದಾರ್ (ಮರಾಟಿಗರು ಆಚರಿಸುತ್ತಿರುವ 'ಹೊಸ್ತು' ಅಥವಾ 'ಪುದ್ದಾರ್')

"ಉಡುಪಿ ಜಿಲ್ಲೆಯ ಕಾರ್ಕಳ ಪರಿಸರದಲ್ಲಿ ವಾಸಿಸುತ್ತಿರುವ ಮರಾಟಿ ಮತ್ತು ಮರಾಟಿ ನಾಯ್ಕರು ಸಾಮಾನ್ಯವಾಗಿ ತುಳುವಿನಲ್ಲಿ 'ಪುದ್ದಾರ್' ಎಂದು ಅಥವಾ 'ಇಲ್ಲು ದಿಂಜಾವುನಿ' ಮತ್ತು ಬ್ರಹ್ಮಾವರ, ಕುಂದಾಪುರ ತಾಲೂಕಿನಲ್ಲಿ ವಾಸಿಸುತ್ತಿರುವ ಮರಾಟಿ ನಾಯ್ಕರು 'ಹೊಸ್ತು' ಎಂಬುದಾಗಿ ಹೇಳುತ್ತಾರೆ"[೪೯]. ಮರಾಟಿ ಸಮುದಾಯದವರು ಆಚರಿಸುತ್ತಿರುವ ಮನೆ ತುಂಬಿಸುವುದು ಅಥವಾ ಹೊಸ ಅಕ್ಕಿಯ ಊಟದ (ಹೊಸ್ತು / ಪುದ್ದಾರ್) ಆಚರಣೆಯು ಪ್ರಾದೇಶಿಕವಾಗಿ ಭಿನ್ನತೆಯಿಂದ ಕೂಡಿದ್ದರೂ ಮೂಲ ಆಶಯ ಒಂದೇ ಆಗಿರುತ್ತದೆ ಎಂದು ಹೇಳಬಹುದು.

ಮರಾಟಿಗರು ತಾವು ಬೆಳೆಸಿದ ಎಣಿಲು ಬೆಳೆಯ ಭತ್ತದ ತೆನೆಗಳನ್ನು ಮನೆಯಲ್ಲಿ ಭಕ್ತಿ ಶ್ರದ್ಧೆಯಿಂದ ಭಾವಾನಾತ್ಮಕವಾಗಿ ಆಚರಿಸುತ್ತಿರುವ ಕ್ರಿಯೆ ಇದಾಗಿದೆ. ಭತ್ತದ ತೆನೆಗಳನ್ನು ಮನೆ ತುಂಬಿಸುವ ಹಿಂದಿನ ದಿನ ಸೂರ್ಯಾಸ್ಥದ ನಂತರ ನಸುಗತ್ತಲೆಯಲ್ಲಿ ಭತ್ತದ ತೆನೆಗಳನ್ನು ಕೊಯ್ದು (ಬೇಸಾಯಗಾರನಲ್ಲದಿದ್ದರೂ) ಮನೆಯ ಹೊರಗೆ ಒಂದು ಕಡೆ ಸಂಗ್ರಹಿಸಿ ಇಡಲಾಗುವುದು. ಅದರ ಜೊತೆಗೆ ಹಲಸು, ಮಾವು ಮತ್ತು ಬಿದಿರಿನ ಎಲೆಗಳು, ತುಂಬೆ ಮತ್ತು ಇತರೆ ಹೂವುಗಳು ಹಾಗೂ 'ದಡ್ಡಾಲು' ಎಂಬ ಮರದ ಒಂದಿಷ್ಟು ನಾರನ್ನೂ ಕೂಡ ಸೇರಿಸಿ ಜಾಗೃತೆಯಿಂದ ಇಡುತ್ತಾರೆ.

"ಮರುದಿನ ಬೆಳಿಗ್ಗೆ ಮನೆಯ ಯಜಮಾನ ಸ್ನಾನ ಮಾಡಿ (ಯಜಮಾನ ಇಲ್ಲದಿದ್ದರೆ ಹಿರಿಯ ಗಂಡು ಮಕ್ಕಳು) ಮಹೂರ್ತಕ್ಕೆ ಸರಿಯಾಗಿ ತೆನೆಗಳ ಕಟ್ಟು ತಂದು ತುಳಸಿಕಟ್ಟೆಯ ಮುಂಭಾಗದಲ್ಲಿ ಮರದ ಮಣೆಯ ಮೇಲೆ ಇಡುವನು. ನಂತರ ಒಂದು ಎಳನೀರಿನ ಕಾಯಿಗೆ ತೂತು ಮಾಡಿ ಇಟ್ಟು ಜೊತೆಯಲ್ಲಿ ಹರಿವೆ, ಕೆಸು, ಮುಳ್ಳು ಸೌತೆ, ವೀಳ್ಯದೆಲೆ, ಅಡಿಕೆ, ತೇದ ಗಂಧವನ್ನಿಟ್ಟು, ತೆಂಗಿನಕಾಯಿ ಒಡೆದು ಅದರ ಎರಡು ಹೋಳುಗಳನ್ನು (ಗಡಿ) ಇಟ್ಟು ತೆನೆಗಳ ಕಟ್ಟಿನ ಮೇಲಿರಿಸಿ ಅದರ ಮೇಲೆ ಹಾಲು ಮತ್ತು ನೀರನ್ನು ಎರೆಯುವನು. ನಂತರ ಧೂಪದ ಆರತಿ, ಅಗರಬತ್ತಿಯಿಂದ ಪೂಜೆ ಮಾಡಿ ದೇವರನ್ನು ಪ್ರಾರ್ಥಿಸಿ ಅಕ್ಷತೆ ಹಾಕಿ, ಯಜಮಾನನ ಸಂಸಾರ ಸಮೇತ ಸಾಷ್ಟಾಂಗ ನಮಸ್ಕಾರ ಮಾಡುವರು. ಯಜಮಾನ ಅದನ್ನು ತಲೆ ಮೇಲೆ ಎತ್ತಿಕೊಂಡು ಮನೆ ಪ್ರವೇಶಿಸುವ ಮುಖ್ಯ ದ್ವಾರದ ಮೆಟ್ಟಿಲಿನ ಪಕ್ಕದಲ್ಲಿದ್ದ ತಂಬಿಗೆ ನೀರನ್ನು ಮನೆಯೊಡತಿ ಕಾಲಿಗೆ ಹಾಕುವಳು. ನಂತರ ಒಳಪ್ರವೇಶಿಸಿ ದೇವರ ಕೋಣೆಯೊಳಗೆ ಇಟ್ಟು ಪುನಃ ಆರತಿ ಮಾಡಿ ಎಲ್ಲರೂ ಮತ್ತೊಮ್ಮೆ ನಮಸ್ಕರಿಸಿ, ಅದರಲ್ಲಿಟ್ಟಿರುವ ಪ್ರಸಾದ ರೂಪವಾದ ಗಂಧವನ್ನು ದೇವರ ಸ್ಮರಣೆಯೊಂದಿಗೆ ಹಣೆಗೆ ಹಚ್ಚಿಕೊಳ್ಳುವರು. ನಂತರ ತೆನೆಗಳ ಕಟ್ಟನ್ನು ಬಿಚ್ಚಿ ಎಲ್ಲರೂ ಸೇರಿ ಒಂದೆರಡು ಹಲಸಿನ, ಮಾವಿನ ಮತ್ತು ಬಿದಿರಿನ ಎಲೆಗಳನ್ನು ಸೇರಿಸಿ ತೆನೆಯೊಂದಿಗೆ ಚಿಕ್ಕ ಚಿಕ್ಕ ಕಟ್ಟುಗಳನ್ನು ಕಟ್ಟಿ ಮನೆಯ ಕಂಬಗಳಿಗೆ, ದೈವ ದೇವರ ಮಂಚಗಳಿಗೆ, ಬಾಗಿಲು ಕಿಟಕಿಗಳಿಗೆ, ಹಟ್ಟಿ, ಬಾವಿ ಮತ್ತು ಕೃಷಿಕರಾಗಿದ್ದಲ್ಲಿ ನೇಗಿಲ ಮತ್ತು

ನೊಗಗಳಿಗೆ ಇತ್ತೀಚೆಗೆ ವಾಹನಗಳಿಗೆ ಮನೆಯಲ್ಲಿರುವ ಬೇಸಾಯದ ಪರಿಕರಗಳಿಗೆ ಕಟ್ಟುತ್ತಾರೆ. ಇಲ್ಲಿಗೆ ಮನೆ ತುಂಬಿಸುವ ಕಾರ್ಯ ಮುಗಿಯುತ್ತದೆ”[೫೦].

ಕೃಷಿಯಲ್ಲಿ ತೊಡಗಿಕೊಂಡ ಮರಾಟಿ ಸಮುದಾಯಗಳು ಈ ಆಚರಣೆಯನ್ನು ಅತ್ಯಂತ ಶ್ರದ್ಧೆ ಭಕ್ತಿಯಿಂದ ಆಚರಿಸುತ್ತಿರುವುದು ಕಂಡು ಬರುತ್ತದೆ. ಭತ್ತದ ತೆನೆಗೆ ಎಲ್ಲರೂ ಅಂದು ಅನ್ನ ಬ್ರಹ್ಮನಿಗೆ ಭಯ, ಭಕ್ತಿಗಳ ನಮಸ್ಕರಿಸಿ ನಾವ್ಯಾರು ನಿನಗಿಂತ ದೊಡ್ಡವರಲ್ಲ ನೀನೆ ಪರಮಪೂಜ್ಯನೂ ಮತ್ತು ಪವಿತ್ರನೂ ಎನ್ನುವ ದೀನಭಾವ ಕಂಡುಬರುತ್ತದೆ. ಭತ್ತದ ತೆನೆಗೆ ಇಡುವ ಎಳನೀರು, ತೆಂಗಿನಕಾಯಿ, ಹೊಸತಾಗಿ ಬೆಳೆದಿರುವ ತರಕಾರಿ, ಮುಳ್ಳು ಸೌತೆ, ಹರಿವೆ, ಮಂತಾದವು ಧನಧಾನ್ಯ ಸಮೃದ್ಧಿಯಾಗಿ ನಾವೆಲ್ಲರೂ ಸುಖ ಸಂತೋಷವಾಗಿರಬೇಕೆಂಬ ಭಾವನೆಯ ಪ್ರತೀಕ, ಹಲಸಿನ ಮತ್ತು ಮಾವಿನ ಮರದ ಎಲೆಯು ಶುಭ ಸಂಕೇತ, ಹಾಲು ಮತ್ತು ನೀರು ಇವೆರಡೂ ಪರಸ್ಪರ ಅನ್ಯೋನ್ಯತೆಯ ಮತ್ತು ಸಂಬಂಧಗಳ ಮತ್ತು ಅಮರತ್ವದ ಸಂಕೇತ. (ಮಾನವನ ಸಂಬಂಧವು ಹಾಲು ಮತ್ತು ನೀರಿನಂತೆ ಇರಲಿ) ಇಲ್ಲಿ ಅರ್ಪಿಸುವ ತುಂಬೆ ಹೂವು ಈಶ್ವರ ದೇವರಿಗೆ ಪ್ರೀತಿ. ಸಾಮಾನ್ಯವಾಗಿ ಜ್ಯೋತಿಷ್ಯರು ಅಷ್ಟಮಂಗಲ ಪ್ರಶ್ನೆ ಮತ್ತು ಆರೂಢ ಪ್ರಶ್ನೆಗಳಲ್ಲಿ ತುಂಬೆ ಹೂವಿಗೆ ವಿಶೇಷ ಪ್ರಾತಿನಿಧ್ಯ ನೀಡಿರುವರು. ಆರತಿ ದೀಪ ಪೂಜೆ ಕತ್ತಲಿನಿಂದ ಬೆಳಕಿನತ್ತ ಪಯಣ ಎಂಬ ಪ್ರತೀಕ. ಒಟ್ಟಿನಲ್ಲಿ ಅನ್ನಬ್ರಹ್ಮನ ಆರಾಧನೆಯಿಂದಾಗಿ ಮನೆ ತುಂಬಿಸುವುದೆಂದರೆ ಬಡತನವನ್ನು ಹೊಗಲಾಡಿಸಿದಂತೆ ಎಂದು ಮರಾಟಿಗಳು ಅರ್ಥೈಸಿಕೊಳ್ಳುವರು.

ಹೊಸ ಅಕ್ಕಿ ಊಟವೂ ಹಾಗೆಯೇ. ಅದು ಪರಮ ಸಂತೋಷದ ದಿನ. ತಾವು ಬೆಳೆದ ಬೆಳೆಯನ್ನು ದೇವರು ತಮ್ಮ ಹಸಿವಿಗೆ ಅನುಗ್ರಹಿಸಿದನೆಂಬ ಸಂತೃಪ್ತ ಭಾವ ಮರಾಟಿ ಬೇಸಾಯಗಾರರಲ್ಲಿದೆ. “ಈ ಹೊಸ ಅಕ್ಕಿಯ ಪ್ರಥಮ ಊಟಕ್ಕೆ ‘ಪುದ್ದರ್’ ಎಂದು ಹೆಸರು. ‘ಹೊಸತು’ ಎನ್ನುವುದು ಈ ಶಬ್ದದ ಸಾಂಕೇತಿಕ ಅರ್ಥ. ಇಲ್ಲಿ ಎಲ್ಲವೂ ಹೊಸತು. ಮರಾಟಿಗರು ಮಳೆಗಾಲದಲ್ಲಿ ಬೆಳೆಯುವ ಹಲವಾರು ಬಗೆಯ ತರಕಾರಿಗಳಿಂದ ವಿವಿಧ ರೀತಿಯ ಪಲ್ಯಗಳಿಂದ ಕೂಡಿದ ಹೊಸ ಊಟ ಸಿದ್ಧವಾಗುತ್ತದೆ. ಸಾಮಾನ್ಯವಾಗಿ ಮುಳ್ಳು ಸೌತೆ, ಅಲಸಂದೆ, ಬೆಂಡೆ, ಹೀರೆ, ಹಾಗಲ, ಪಡುವಲ, ಹರಿವೆ, ಕೆಸು ಮುಂತಾದ ತರಕಾರಿಗಳಿಂದ ಹತ್ತು ಹದಿನೆಂಟು ಬಗೆಯ ಪಲ್ಯಗಳನ್ನು ಈ ಊಟಕ್ಕಾಗಿ ಸಿದ್ಧಪಡಿಸಲಾಗುತ್ತದೆ. ಮರಾಟಿಗರು ಹೊಸ ಅಕ್ಕಿ ಊಟಕ್ಕೆ ಮಾಡಿದಷ್ಟು ವಿವಿಧ ಬಗೆಯ ಪಲ್ಯಗಳನ್ನು ವರ್ಷದ ಬೇರೆ ಯಾವುದೇ ಊಟಕ್ಕೂ ಮಾಡುವುದಿಲ್ಲ. ಒಂದು ಮನೆಯ ಊಟದಿಂದ ಮತ್ತೊಂದು ಮನೆಯ ಊಟಕ್ಕೆ ಸಾಮಗ್ರಿಗಳ ಸಂಖ್ಯೆ ಹೆಚ್ಚುತ್ತಾ ಹೋಗುತ್ತದೆ. ಮನೆಯವರ ಸಂತೋಷ ಉತ್ಸಾಹಗಳ ಸಂಭ್ರಮವೇ ಇದಕ್ಕೆ ಕಾರಣ. ಹೊಸ ಅಕ್ಕಿ ಊಟ ಕೇವಲ ಮನೆಯವರಿಗೆ ಮಾತ್ರ ಸೀಮಿತವಾಗಿರುವುದಿಲ್ಲ. ಹೊಸ ಅಕ್ಕಿಯ ಊಟ ಇದೆಯೆಂದಾದರೆ ಆ ಮನೆಯವರು ತಮಗೆ ಬೇಕಾದ ಇತರೆ ಎಲ್ಲಾ ಮನೆಯವರನ್ನು ಆಮಂತ್ರಿಸುತ್ತಾರೆ. ಅದೇ ರೀತಿ ಇತರೆ ಮನೆಯವರು ಕೂಡ. ಈ ಸಂಭ್ರಮ ಹೆಚ್ಚಾಗಿ ರಾತ್ರಿ ನಡೆಯುವುದು. ಮಧ್ಯಾಹ್ನವೂ ನಡೆಯುತ್ತದೆ. ತಮಗೆ ಆಪ್ತರಾಗಿರುವ ಊರಿನ ಹಲವಾರು. ಜನರೊಡನೆ ಕೂಡಿ ಊಟ ಮಾಡುವರು. ಈ ಭೋಜನದ ಮೊದಲ ಪಂಕ್ತಿಯಲ್ಲಿ ‘ಪುದ್ದರ್’ ಮನೆಯ ಯಜಮಾನನಿರುತ್ತಾನೆ. ನಂತರ ಆತನ ಮನೆಯವರಿರುತ್ತಾರೆ. ಮನೆಯೊಡತಿ ಮೊದಲು ಯಜಮಾನನಿಗೆ ಊಟ ಬಡಿಸಬೇಕೆನ್ನುವುದು ಸಂಪ್ರದಾಯ. ಆದ್ದರಿಂದ ಆಕೆ ಅನ್ನದ ಪಾತ್ರೆಯನ್ನು ಹಿಡಿದುಕೊಂಡು ಬಂದು ಆತನ ಎಲೆಯ ಮುಂದಿಟ್ಟು ಅನ್ನ ತುಂಬಿದ ಸಟ್ಟುಗವನ್ನು ಮೂರು ಬಾರಿ ಊಟದೆಲೆಯ ಮೇಲಿರಿಸುವಳು. ಆಗ

ಆತನು ಸಟ್ಟುಗದಲ್ಲಿರುವ ಅನ್ನಕ್ಕೆ ಹಾಗೂ ಅಲ್ಲಿ ಉರಿಯುತ್ತಿರುವ ದೀಪಕ್ಕೆ ಕೈಮುಗಿದು, ಅಕ್ಷತೆ ಹಾಕಿ ದೇವರನ್ನು ಪ್ರಾರ್ಥಿಸಿ, ಅನ್ನವನ್ನು ಸಟ್ಟುಗದಿಂದ ತನ್ನ ಎಲೆಗೆ ಜಾರಿಸುವನು. ಇದೇ ರೀತಿ ಆತನ ಮನೆಯವರು ಮಾಡುತ್ತಾರೆ. ಪಲ್ಯಗಳನ್ನೆಲ್ಲ ಬಡಿಸಿದ ಬಳಿಕ ಎಲ್ಲರೂ ಊಟದ ಎಲೆಗೆ ಸಾಮೂಹಿಕವಾಗಿ ಕೈಹಾಕುವುದು ಪದ್ಧತಿ. ಎಲ್ಲರೂ ಹೊಸ ಅನ್ನಕ್ಕೆ ಕೈ ಮುಗಿದೇ ಊಟ ಪ್ರಾರಂಭಿಸುವರು. ಊಟ ಮುಗಿದು ಏಳುವಾಗಲೂ ಎಲ್ಲರೂ ಒಟ್ಟಾಗಿ ಏಳುಬೇಕು. ಬೇಗ ಊಟ ಮುಗಿಸಿದವರು ಯಾರೂ ಪಂಕ್ತಿಯಿಂದ ಮೊದಲು ಏಳುವಂತಿಲ್ಲ. ಇದು ಹೊಸ ಅಕ್ಕಿ ಊಟದ ನಿಯಮ. ಆ ದಿನದ ಊಟಕ್ಕೆ ಪಾಯಸವನ್ನು ಮಾಡಿರುತ್ತಾರೆ. ಹೊಸ ಅನ್ನದ ಮೇಲೆ ದಪ್ಪ ಸಾಂಬಾರು ಹರಿವೆ ಮತ್ತು ಕೆಸುಗಳದ್ದೇ ಆಗಿರಬೇಕು ಹಾಗೂ ಹೊಸ ಅಕ್ಕಿಯ ಆ ದಿನದ ಊಟಕ್ಕೆ 'ತಿಮರೆ'ದ ಚಟ್ನಿ ಕಡ್ಡಾಯವಾಗಿ ಇರಲೇಬೇಕು. 'ಪುದ್ದರ್' ಊಟಕ್ಕೆ ಮಾಂಸದ ಊಟ ನಿಷಿದ್ಧ. ಸಾಮಾನ್ಯವಾಗಿ ಮನೆ ತುಂಬಿಸಿದ ದಿನವೇ ಹೊಸ ಅಕ್ಕಿಯ ಊಟವೂ ನಡೆಯುತ್ತದೆ. ಕೆಲ ಕಡೆ ಪ್ರತ್ಯೇಕ ಪ್ರತ್ಯೇಕವಾಗಿ ನಡೆಯುವುದು. ಹೊಸ ಬೆಳೆಯನ್ನು ಮನೆಗೆ ತುಂಬಿಸಿದ ಮತ್ತು ಹೊಸ ಅಕ್ಕಿ ಊಟ ಮಾಡಿದ ದಿನ ಮನೆಯವರು ಮನೆಯಿಂದ ಹೊರಗಿನ ವ್ಯಕ್ತಿಗಳಿಗೆ ವಸ್ತು, ಒಡವೆ, ಧನ-ಧಾನ್ಯಗಳನ್ನು ಕೊಡುವುದಿಲ್ಲ. ಭಿಕ್ಷುಕರು ಭಿಕ್ಷೆಗೆ ಬಂದರೆ ಅವರಿಗೆ ಭಿಕ್ಷೆಯನ್ನೂ ಕೊಡದೆ ಮರುದಿನ ಬರುವಂತೆ ಸೂಚಿಸುವರು. ಹಾಗೆ ಕೊಟ್ಟರೆ ತಮ್ಮ ಮನೆಯ ಭಾಗ್ಯ, ಅದೃಷ್ಟ ತಮ್ಮನ್ನು ಬಿಟ್ಟು ಹೋಗುತ್ತದೆ ಎಂಬ ಬಲವಾದ ನಂಬಿಕೆ ಇವರಲ್ಲಿದೆ. ಬೆಳೆಯನ್ನು ಮನೆ ತುಂಬಿಸುವ ಮತ್ತು ಹೊಸ ಅಕ್ಕಿ ಊಟದಲ್ಲಿರುವ ನಿಯಮಗಳನ್ನು ಮರಾಟಿ ನಾಯ್ಕರು ಹಾಗೂ ಮರಾಟಿಯವರು ಕಟ್ಟುನಿಟ್ಟುಗಳಿಂದ ಪಾಲಿಸುವರು"[೫೧]. ಮನೆ ತುಂಬಿಸುವ ಕ್ರಿಯೆಯಲ್ಲಿ ದೇವರ ಮತ್ತು ತಮ್ಮ ದೈವಗಳ ಅನುಗ್ರಹವನ್ನು ಬೇಡುತ್ತಾ ಆ ಶಕ್ತಿಗಳಿಗೆ ಅವರು ಶರಣಾಗುವರು.

ಶ್ರೀಕೃಷ್ಣ ಜನ್ಮಾಷ್ಟಮಿ

ಶ್ರೀ ಕೃಷ್ಣ ಜನ್ಮಾಷ್ಟಮಿ ಇತರೆ ಹಿಂದೂಗಳಂತೆಯೇ ಇತ್ತೀಚೆಗೆ ಮರಾಟಿ ನಾಯ್ಕ ಮತ್ತು ಮರಾಟಿ ಸಮುದಾಯದವರಿಗೂ ಬಹುಪ್ರಿಯವಾದ ಹಬ್ಬವಾಗಿದೆ. ಶ್ರೀ ವಿಷ್ಣುವಿನ ಎಂಟನೆಯ ಅವತಾರ ದ್ವಾಪರಯುಗದ ಪುರುಷನಾಗಿ ಮೆರೆದವನು ಶ್ರೀಕೃಷ್ಣ. ರಕ್ಕಸರ ಸೊಕ್ಕು ಅಡಗಿಸಿದ ವೀರ ಶ್ರೀಕೃಷ್ಣ. ಪಾಂಡವರಿಗೆ ರಕ್ಷಣೆ ನೀಡಿದವ. ಕಾಳಿಂಗನನ್ನು ಮರ್ದಿಸಿದ ಸಾಹಸಿ. ತನ್ನ ತಾಯಿಗೆ ಬಾಯಿಯೊಳಗೆ ಮೂರು ಲೋಕಗಳನ್ನು ತೋರಿಸಿವ ಭಗವದ್ಗೀತೆ ಸಂದೇಶವನ್ನು ಸಾರಿದ ಶ್ರೀಕೃಷ್ಣ ಎಂದ ಎಲ್ಲರೂ ಅವನ ಗುಣಗಾನ ಮಾಡುವರು. ಶ್ರೀಕೃಷ್ಣನ ಜನ್ಮ ಜಯಂತಿಯನ್ನು ಪ್ರತಿ ವರ್ಷ ಶ್ರಾವಣ ಮಾಸ ಬಹುಳ ಪಕ್ಷ ಅಷ್ಟಮಿ ತಿಥಿಯಂದು ಆಚರಿಸುವರು. ವಿಶ್ವದ ಹಲವು ಕಡೆಗಳಲ್ಲಿ ಭಾಗವತ ಪಂಥದವರು (ಇಸ್ಕಾನ್) ಈ ಹಬ್ಬವನ್ನು ಆಚರಿಸುತ್ತಾರೆ. ಕರಾವಳಿಯಲ್ಲಿ ಶ್ರೀಕೃಷ್ಣ ಪರಮಾತ್ಮನ ಜನ್ಮ ಜಯಂತಿಯನ್ನು ಶ್ರೀಕೃಷ್ಣ ಅಷ್ಟಮಿ ಅಥವಾ ಶ್ರೀಕೃಷ್ಣ ಜಯಂತಿ ಅಥವಾ ಶ್ರೀಕೃಷ್ಣ ಗೋಕುಲಾಷ್ಟಮಿ ಎಂದು ಕರೆಯುವರು.

ಮರಾಟಿ ನಾಯ್ಕ ಮತ್ತು ಮರಾಟಿ ಸಮುದಾಯದವರು ಉಡುಪಿ ಶ್ರೀಕೃಷ್ಣನ ಪ್ರಭಾವದಿಂದ ಮತ್ತು ತಿರುಪತಿ ವೆಂಕಟರಮಣ ಭಕ್ತರಾಗಿರುವುದರಿಂದ ಶ್ರೀಕೃಷ್ಣ ಜಯಂತಿಗೆ ಮಹತ್ವ ನೀಡಿರುವುದು ಕಂಡುಬರುತ್ತದೆ. ಕೃಷಿ ಕೆಲಸಗಳಿಗೆ ಅಂದು ಬಿಡುವು ಇರುತ್ತದೆ. ಧಾರ್ಮಿಕ ದೃಷ್ಟಿಯಿಂದ ಈ ಹಬ್ಬವನ್ನು ಮನೆಯವರೆಲ್ಲ ಉಪವಾಸದಿಂದ ಆಚರಣೆ ಮಾಡುವರು. ಸ್ತ್ರೀಯರು ಮಡಿಯಿಂದ, ನಾನಾ ಬಗೆಯ ಸಿಹಿ ತಿಂಡಿಗಳನ್ನು ತಯಾರಿಸುವರು. ಚಂದ್ರೋದಯಕ್ಕೆ ಸರಿಯಾಗಿ ಮನೆಯ ಯಜಮಾನ ಮಡಿಯನ್ನುಟ್ಟು ತುಳಸಿಕಟ್ಟೆಯ ಬಳಿ ಮರದ ಮಣೆಯನ್ನಿಟ್ಟು ಮನೆಯವರನ್ನೆಲ್ಲಾ

ಸೇರಿಸಿ ತುಳಸಿಕಟ್ಟೆಯ ಬಳಿ, ಶ್ರೀಕೃಷ್ಣನ ಭಾವಚಿತ್ರವನ್ನಿಟ್ಟು ತುಳಸಿಕಟ್ಟೆಯನ್ನು ವಿವಿಧ ಹೂವುಗಳಿಂದ ಸಿಂಗರಿಸಿ ಸಾಂಪ್ರಾದಾಯಿಕವಾಗಿ ಪೂಜೆ ಮಾಡುವನು. ಕಾರ್ಕಳದಲ್ಲಿ ವಾಸವಿರುವ ಕೆಲ ಮನೆಗಳಲ್ಲಿ ಭಾಗವತ ಪ್ರವಚನ, ಭಜನೆ, ಹರಿಕಥೆ ನಡೆಸುತ್ತಾರೆ. ಅಷ್ಟಮಿಯಂದು ರಾತ್ರಿ ಭೋಜನದ ವೇಳೆಯವರೆಗೆ 'ಚೆನ್ನಮಣೆ' ಆಟ ಆಡುವ ಸಂಪ್ರದಾಯವಿತ್ತು ಎಂಬುದಾಗಿ ಕ್ಷೇತ್ರಕಾರ್ಯ ಸಂದರ್ಭದಲ್ಲಿ ತಿಳುವಳಿಕೆದಾರರು ಹೇಳುತ್ತಾರೆ. ಮರು ದಿನ ಊರಿನ ಶ್ರೀಕೃಷ್ಣ ಮಂದಿರದಲ್ಲಿ ನಡೆಯುವ ಮೊಸರು ಕುಡಿಕೆ ಉತ್ಸವದಲ್ಲಿ ಪ್ರೇಕ್ಷಕರಾಗಿ ಭಾಗವಹಿಸುವರು. ಗ್ರಾಮಾಂತರ ಭಾಗದಲ್ಲಿ ಗಂಡಸರು ತೆಂಗಿನಕಾಯಿ ಜೂಜಾಟ, ಕಲ್ಲು ಎತ್ತುವಿಕೆ ಮೊದಲಾದ ಜನಪದ ಆಟಗಳಲ್ಲಿ ಭಾಗವಹಿಸುವರು.

ಹೊಟ್ಟೆಗೆ ಹಿಟ್ಟು ಇಲ್ಲದೆ ಎಷ್ಟೆ ಕಷ್ಟದಲ್ಲಿದ್ದರೂ ಶ್ರೀಕೃಷ್ಣಾಷ್ಟಮಿಯನ್ನು ಊರಲ್ಲಿ ಎಲ್ಲರೂ ಆಚರಿಸುತ್ತಾರೆ. ದೇವರು ಜನಿಸಿದ ದಿನ ಹೊಟ್ಟೆಗಿಲ್ಲದೆ ಯಾರು ಕಷ್ಟಪಡಬಾರದೆಂಬ ಸಂದೇಶ ಇದರ ಹಿಂದಿದೆ. ಅದಕ್ಕಾಗಿಯೇ ಗ್ರಾಮಾಂತರ ಪ್ರದೇಶದಲ್ಲಿ ಇಂದೂ ಕೂಡ 'ಅಷ್ಟಮಿಯ ಮರ್ಯಾದೆ' ಕೊಡುವುದು ಎನ್ನುವ ಸಂಪ್ರದಾಯ ಊರಲ್ಲಿದೆ. ಬಡತನದಲ್ಲಿ ಬಳಲುತ್ತಿರುವ ಅನೇಕ ಕುಟುಂಬಗಳಿಗೆ ಅಷ್ಟಮಿ ಹಬ್ಬದ ಆಚರಣೆಗೆ ಇದರಿಂದ ಸಾಕಷ್ಟು ಸಹಾಯವಾಗುತ್ತಿತ್ತು. ಗೇಣಿಗಾರಿಕೆ ಚಾಲ್ತಿಯಲ್ಲಿದ್ದ. ಕಾಲದಲ್ಲಿ ಭೂ ಮಾಲಕರು ತಮ್ಮ ಗೇಣಿ ಒಕ್ಕಲು ಮತ್ತು ಬಿಡಿ ಒಕ್ಕಲುಗಳಿಗೆ ಇದನ್ನು ನೀಡುತ್ತಿದ್ದರು. ಗೇಣಿ ಒಕ್ಕಲುಗಳು ಸಹ ಊರಿನ ಬಡ ಜನರಿಗೆ ಅಷ್ಟಮಿ ಮರ್ಯಾದೆ ಸಲ್ಲಿಸುತ್ತಿದ್ದರು. ಒಂದು ಸೇರು ಅಕ್ಕಿ, ಒಂದು ಅಥವಾ ಎರಡು ತೆಂಗಿನಕಾಯಿ, ಸೌತೆ ಮತ್ತಿತರ ತರಕಾರಿಗಳನ್ನು ತಮ್ಮ ಮನೆಗೆ ಅಷ್ಟಮಿ ಮರ್ಯಾದೆಗಾಗಿ ಬರುವ ಪ್ರತಿಯೊಬ್ಬರಿಗೂ ಕೊಡುತ್ತಿದ್ದರು. ಬೇಸಾಯದ ಕೆಲಸಗಳಿಗೆ ನೆರವಾಗುವ ಆಳುಗಳಿಗೆ, ಕುಶಲಕರ್ಮಿಗಳಿಗೆ ಅಷ್ಟಮಿ ಮರ್ಯಾದೆ ಕೊಡುತ್ತಿದ್ದರು. ಇದು ಪರಂಪರೆಯಿಂದ ಪಾಲಿಸಿಕೊಂಡು ಬಂದಿರುವ ಸಂಪ್ರದಾಯವಾಗಿದೆ.

ಶ್ರೀ ಗಣೇಶ ಚತುರ್ಥಿ

ಮರಾಟಿಗರಿಗೆ ಚೌತಿಯು ಸಂಭ್ರಮದ ಹಬ್ಬ. ಭಯ ಭಕ್ತಿ ವಿಧಿ ವಿಧಾನಗಳಿಂದ ಮರಾಟಿಗರು ತಮ್ಮ ಮನೆಯ ಒಳಗೆ ಮತ್ತು ಹೊರಗೆ ಶುದ್ಧ ಮಾಡಿ ಮನೆಯವರೆಲ್ಲ ಶುಚಿಯಾಗಿ, ಮನೆಯ ಮುಂದೆ ರಂಗೋಲಿ ಹಾಕಿ, ಮಾವಿನ ಎಲೆಯ ತೋರಣ ಕಟ್ಟುವರು. ಗಣೇಶನ ಪೂಜೆಗೆ ಗರಿಕೆ ಹುಲ್ಲು, ಹಿಂಗಾರ, ಮಲ್ಲಿಗೆ, ಸಂಪಿಗೆ, ಕರವೀರ ಹೀಗೆ ಬಗೆ ಬಗೆಯ ಫಲ ಪುಷ್ಪಗಳನ್ನು ತರುತ್ತಾರೆ. ಅಲ್ಲದೆ ವಿವಿಧ ಬಗೆಯ ತಿಂಡಿಯನ್ನು ತಯಾರಿಸುವರು. ಕೆಲವು ಕಡೆ ಈ ಎರಡೂ ಸಮುದಾಯದವರು ತಮ್ಮ ಆರ್ಥಿಕ ಸ್ಥಿತಿಗೆ ಅನುಗುಣವಾಗಿ ತಮ್ಮ ಮನೆಗಳಲ್ಲಿ ಗಣಹೋಮ ಮಾಡಿಸುವರು. ಈ ಆರಾಧನೆಯನ್ನು ಇಂದಿಗೂ ಕೆಲವು ಕಡೆ ನಿಷ್ಠೆ ಹಾಗೂ ಭಕ್ತಿಯಿಂದ ನಡೆಸಿಕೊಂಡು ಬರುತ್ತಿದ್ದಾರೆ. ಗಣೇಶನನ್ನು ಒಂದು ವರ್ಷ ಪೂಜಿಸಿ ಅದನ್ನು ನಿಲ್ಲಿಸಬಾರದು. ಅಕಸ್ಮಾತ್ ನಿಲ್ಲಿಸಿದರೆ ತಮಗೆ ಕೆಡುಕು ಬರುವುದೆಂಬ ಭಯ ಇದೆ. ಪರಾಪರಾನುಗತವಾಗಿ ಪೂಜಿಸಿಕೊಂಡು ಬರುತ್ತಿದ್ದವರು ಮಾತ್ರ ಚೌತಿಯ ದಿನ ಗಣಪತಿಯ ಆರಾಧನೆ ಮಾಡುತ್ತಿರುವುದು ಕಂಡು ಬರುತ್ತದೆ. ಗಣೇಶನ ಹಬ್ಬದ ಆಚರಣೆ ಮಾಡದೇ ಇರುವವರು ಬಗೆ ಬಗೆಯ ಕಡಬು, ತಿಂಡಿ ತಿನಿಸುಗಳನ್ನು ಸಿದ್ಧಪಡಿಸಿ ಸಾಂಕೇತಿಕವಾಗಿ ಈ ಹಬ್ಬವನ್ನು ಆಚರಿಸುವರು. ಮರಾಟಿಗರ ಗಣಪತಿಯ ಆರಾಧನೆಯಲ್ಲಿ ವಿಗ್ರಹ ಪೂಜೆ ಇರುವುದಿಲ್ಲ ಅದಕ್ಕೆ ಬದಲಾಗಿ ತುಳಸಿಕಟ್ಟೆಯ ಮುಂದೆ ಮರದ ಪೀಠ ಹಾಕಿ ಅದರ ಮೇಲೆ ಒಂದು ಜೊತೆ ಬಾಳೆ ದಿಂಡು ಇಟ್ಟು, ಬಾಳೆ ಎಲೆಗಳಲ್ಲಿ ಒಂದು ಸೇರಿ ಬೆಳ್ತಿಗೆ ಅಕ್ಕಿ ಹಾಕಿ, ಅದರ ಮೇಲೊಂದು ಜುಟ್ಟು ಇರುವ ತೆಂಗಿನಕಾಯಿಯನ್ನಿಟ್ಟು, ಗಣಪತಿಯನ್ನು ಪ್ರತಿಷ್ಠಾಪಿಸುವರು.

ವಿನಾಯಕನಿಗೆ ಕಬ್ಬು ಪ್ರಿಯವಾಗಿರುವುದರಿಂದ ನಾಲ್ಕು ಕೊಬ್ಬಿನ ಗಳಗಳನ್ನ ತುಳಸಿಕಟ್ಟೆಯ ನಾಲ್ಕುನ್ನು ಮೂಲೆಗಳಲ್ಲಿ ಕಂಬಗಳಂತೆ ನೆಡುತ್ತಾರೆ. ಕಬ್ಬಿನ ತುದಿಯನ್ನು ಜೋಡಿಸಿ, ಒಳ ಅಂತರವಿರುವಂತೆ ಹಗ್ಗ ಅಥವಾ ಬಾಳೆಯ ಹಗ್ಗದಿಂದ ಕಟ್ಟಿ ಮಾವಿನ ಮತ್ತು ಹಲಸಿನ ಎಲೆಗಳನ್ನು ಆ ಹಗ್ಗಗಳಿಗೆ ತೂಗು ಹಾಕುವರು. ವಿವಿಧ ಫಲಪುಷ್ಪಗಳಿಂದ ಮಂಟಪಾಕೃತಿಯಲ್ಲಿ ತುಳಸಿಕಟ್ಟೆಯನ್ನು ಸಿಂಗರಿಸುವರು. ಇದಕ್ಕೆ 'ಗಣಪತಿ ಮಂಟಪ' ಎಂದು ಕರೆಯುವರು. ಕೆಲವು ಕಡೆ ಶೃಂಗಾರಕ್ಕಾಗಿ ಏಳೆಂಟು ಬಗೆಯ ದವಸ ಧಾನ್ಯಗಳ ಎಳೆಯ ಸಸಿಗಳನ್ನೂ ಬೆಳೆಸುತ್ತಿದ್ದರು. ಮುಖ್ಯವಾಗಿ ಭತ್ತ, ಹೆಸರು, ಹುರುಳಿ, ಮೆಂತೆ, ಉದ್ದು, ರಾಗಿ, ಗೋಧಿ ಧಾನ್ಯಗಳನ್ನು ಭಿತ್ತಿ ಇವುಗಳ ಸಸಿಗಳನ್ನು ಪಡೆಯುತ್ತಿದ್ದರು. ಕೃಷ್ಣಾಷ್ಟಮಿ ಕಳೆದು ನಾಲ್ಕೈದು ದಿನಗಳ ನಂತರ ಧಾನ್ಯಗಳನ್ನು ಭಿತ್ತನೆ ಮಾಡುವರು. ಹದಗೊಳಿಸಿದ ಮಣ್ಣಿನಲ್ಲಿ ಈ ಧಾನ್ಯಗಳನ್ನು ಭಿತ್ತಿ ಗಾಳಿ ಸೋಂಕದಂತೆ ಭಿತ್ತನೆ ಜಾಗಕ್ಕೆ ಮಣ್ಣಿನ ಪಾತ್ರೆಗಳನ್ನು ಕೌಚಿ ಹಾಕಿ ಅದನ್ನು ಮುಚ್ಚುತ್ತಿದ್ದರು. ಇದಕ್ಕೆ ತುಳುವಿನಲ್ಲಿ 'ಚೌತಿಗೂ ಪೂಭಿತ್ತು ಪಾಡುನಿ' ಚೌತಿಗೆ ಹೂ ಬೀಜ ಹಾಕುವುದು ಎಂದು ಹೇಳುವರು. ಚೌತಿ ದಿನ ಈ ಮಣ್ಣಿನ ಪಾತ್ರೆಗಳನ್ನು ಮೇಲಕ್ಕೆ ಎತ್ತಿದಾಗ ಕೋಮಲವಾದ ನೂರಾರು ಸಸಿಗಳು ಕಾಣಿಸಿಕೊಳ್ಳುತ್ತವೆ. ಅವುಗಳಿಂದ ಹೂವಿನ ಮಾಲೆ ಮಾಡಿ ತುಳಸಿಕಟ್ಟೆಯನ್ನು ಶೃಂಗಾರ ಮಾಡುತ್ತಾರೆ. ಧಾನ್ಯಗಳ ಈ ಎಳೆಯ ಸಸಿಗಳನ್ನೂ ಹೂಗಳೆಂದು ಪರಿಗಣಿಸಲಾಗುತ್ತದೆ. ಚೌತಿಯ ದಿನ ಗಣಪತಿಯ ಆರಾಧನೆಗೆ ಮಲ್ಲಿಗೆ ಹಾಗೂ ಇತರೆ ಹೂವುಗಳಿಗಿಂತ ಈ ಧಾನ್ಯದ ಸಸಿಗಳು ಶ್ರೇಷ್ಠ ಎನ್ನುವ ಭಾವನೆ ಇವರಲ್ಲಿದೆ. ಹೀಗೆ ಮಾಡಿ ಆರಾಧಿಸಿದರೆ ಗಣಪತಿಯು ತಮ್ಮ ಧನ-ಧಾನ್ಯ ಸಂಪತ್ತು ನಮ್ಮನ್ನು ಅಭಿವೃದ್ಧಿಗೊಳಿಸಿ ಅನುಗ್ರಹಿಸುವನೆಂಬ ಅಚಲವಾದ ನಂಬಿಕೆ ಮರಾಟಿಗರಲ್ಲಿದೆ. ಗಣಪತಿಗೆ ಪ್ರಿಯವಾದ, ಕಡಬು, ಉಂಡೆ, ಚಕ್ಕುಲಿ, ಕೋಡುಬಳೆ ಮುಂತಾದ ತಿಂಡಿಗಳನ್ನೆಲ್ಲ ನಿಷ್ಠೆಯಿಂದ, ಭಕ್ತಿಯಿಂದ ಮನೆಯ ಹೆಂಗಸರೇ ಸಿದ್ಧಪಡಿಸುವರು. ಅವುಗಳನ್ನೆಲ್ಲ ತುಳಸಿಕಟ್ಟೆಯ ಮುಂಭಾಗದಲ್ಲಿ ಪ್ರತಿಷ್ಠಾಪಿಸಲಾದ ಗಣಪತಿಯ ಮುಂದೆ ಇಡುವರು. ಜೊತೆಗೆ ಕಬ್ಬು, ಬೆಲ್ಲ, ಅವಲಕ್ಕಿ, ತೆಂಗಿನಕಾಯಿಯಿಂದ ಸಿದ್ಧಪಡಿಸಿದ ಪ್ರಸಾದವನ್ನು ಇಡುವರು. ಇದಕ್ಕೆ ತುಳುವಿನಲ್ಲಿ 'ಚೌತಿ ಬಳಸುನಿ' (ಚೌತಿ ಬಡಿಸುವುದು) ಎನ್ನುತ್ತಾರೆ. ಈ ಪ್ರಸಾದ ಮಾಡುವವ ಹಿಂದಿನ ದಿನದ ರಾತ್ರಿಯಿಂದ ಉಪವಾಸ ವೃತದಲ್ಲಿರುತ್ತಾನೆ. ಅವನು ಚೌತಿಯಂದು ಸ್ನಾನ ಮಾಡಿ ಬೆಳಿಗ್ಗೆ ಮಡಿಯಿಂದ ದೇವರಿಗೆ ಅರ್ಪಿಸುವ ಪ್ರಸಾದ ಮತ್ತು ಪೂಜಾ ಪರಿಕರಗಳನ್ನು ಸಿದ್ಧಪಡಿಸಿಕೊಂಡು ಗಣಪತಿಯ ಆರಾಧನೆಗೆ ತೊಡಗುವವನು.

ಮರಾಟಿ ಸಮುದಾಯದವರಲ್ಲಿ ಗಣಪತಿಯ ಆರಾಧನೆಯು ಭಯ ಭಕ್ತಿ ವಿಧಿ-ನಿಯಮಗಳ ಮೂಲಕ ನಡೆಯುತ್ತದೆ. ಸ್ಥಾಪನೆಗೊಂಡ ಗಣಪತಿಯ ಮುಂದೆ ಕಜ್ಜಾಯ ಮತ್ತು ಪ್ರಸಾದಗಳನ್ನು ಇಟ್ಟು ಮನೆಯವರೆಲ್ಲ ಸೇರಿ ನಮ್ಮ ಸಂಕಷ್ಟಗಳನ್ನು ದೂರ ಮಾಡಿ ನಮಗೆ ಅಭಿವೃದ್ಧಿಯನ್ನು ಕೊಟ್ಟು ನಮ್ಮನ್ನು ಅನುಗ್ರಹಿಸಬೇಕೆಂದು ಪ್ರಾರ್ಥಿಸಿಕೊಳ್ಳುವರು. ಬಳಿಕ ಪ್ರಸಾದದ ಕಜ್ಜಾಯವನ್ನು ತಮ್ಮ ಮನೆಯ ದೈವ ಅಥವಾ ದೇವರ ಗುಡಿಗೆ ಅರ್ಪಿಸಿ ಅಲ್ಲಿಯೂ ಪೂಜೆ ಸಲ್ಲಿಸಿ ಪ್ರಾರ್ಥಿಸುವರು.

ಮರಾಟಿ ನಾಯ್ಕ ಮತ್ತು ಮರಾಟಿ ಸಮುದಾಯ ಮತ್ತು ಇತರೆ ಹಿಂದೂಗಳು ಶ್ರೀ ಗಣೇಶ ಚೌತಿ ಹಬ್ಬವನ್ನ ಆಚರಿಸುವಲ್ಲಿ ಕೆಲವೊಂದು ಸಾಮ್ಯತೆ ಮತ್ತು ಭಿನ್ನತೆಗಳು ಕಂಡುಬರುತ್ತವೆ. ಮರಾಟಿಗರೂ ಕೂಡಾ ಇತರೆ ಹಿಂದೂಗಳಂತೆ ಗಣಪತಿಯ ಹಬ್ಬದ ಆಚರಣೆ ಮಾಡುವರು. ಹಬ್ಬದ ಆಚರಣೆಯ ಕ್ರಮ ಮಾತ್ರ ಭಿನ್ನವಾಗಿದೆ. ಕರಾವಳಿಯ ಹಲವು ಕಡೆ ಮತ್ತು ಮಹಾರಾಷ್ಟ್ರದಲ್ಲಿ ಶ್ರೀ ಗಣೇಶನ ಮೃತ್ತಿಕಾ (ಮಣ್ಣಿನ) ಮೂರ್ತಿ ತರಿಸಿ ದೇವರ ಪೀಠದಲ್ಲಿ ಶಾಸ್ತ್ರೋಕ್ತವಾಗಿ ಪ್ರತಿಷ್ಠಾಪಿಸಿ ಗೌರಿ ತದಿಗೆಯಿಂದ ೩, ೫, ೭ ದಿನಗಳ ವರೆಗೆ ವಿವಿಧ ರೀತಿಯಿಂದ ಅರ್ಚನೆ ಮಾಡಿ ಕೆರೆ, ನದಿ

ಜಲಾಶಯಗಳಲ್ಲಿ ವಿಸರ್ಜಿಸುವರು. ಸಾರ್ವಜನಿಕರು ಶ್ರೀ ಗಣೇಶೋತ್ಸವಗಳನ್ನು ಆಚರಿಸಿ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವರು. ಗೌರಿ ಮತ್ತು ಗಣೇಶನಿಗೆ ಜೊತೆಯಾಗಿ ಪೂಜೆ ಮಾಡುವುದು ಕಂಡುಬರುವುದು. ಮಲೆನಾಡು ಮತ್ತು ಅರೆಮಲೆನಾಡು ಪ್ರದೇಶಗಳಲ್ಲಿ ಗಣೇಶನ ಮೂರ್ತಿಯನ್ನು ಸಗಣಿಯಿಂದ ಸಿದ್ಧಪಡಿಸಿ ಹಬ್ಬವನ್ನು ಆಚರಿಸುವರು. ವೈದಿಕ ಸಂಪ್ರದಾಯಸ್ಥರು ಪ್ರತಿ ಪಕ್ಷದ ಚತುರ್ಥಿಯಂದು ಶ್ರೀ ಗಣೇಶನಿಗೆ ವಿಶೇಷ ಪೂಜೆ ಸಲ್ಲಿಸುವರು. ಈ ಕ್ರಮ ಮರಾಟಿ ನಾಯ್ಕ ಮತ್ತು ಮರಾಟಿಗರಲ್ಲಿ ಇಲ್ಲ.

ತುಲಾ ಸಂಕ್ರಮಣ (ಕಾವೇರಿ ಸಂಕ್ರಾಂತಿ)

"ವರ್ಷವೊಂದರಲ್ಲಿ ಬರುವ ಹನ್ನೆರಡು ಸಂಕ್ರಾಂತಿಗಳ ಪೈಕಿ ತುಳುವಿನ 'ಕನ್ಯಾ' ತಿಂಗಳು ಮುಗಿದು 'ಬೊಂತೆಲು' ತಿಂಗಳು ಕಾಲಿರಿಸುವ ಮುನ್ನಾ ದಿನವನ್ನು 'ತಲಕಾವೇರಿ ಸಂಕ್ರಮಣ' ಎನ್ನುವರು. ಸೌರಮಾನ ಪದ್ಧತಿಯನ್ನು ಅನುಸರಿಸುವ ಸಮುದಾಯದವರು ಮತ್ತು ಇತರೆ ಆಸ್ತಿಕ ಜನರು ತುಲಾ ಸಂಕ್ರಮಣ ಆಚರಿಸುವರು. ತಮಿಳುನಾಡಿನಲ್ಲಿರುವ ಕೊಡಗಿನ ಸಂಪ್ರದಾಯಸ್ಥರು ಮತ್ತು ಬೇಸಾಯಗಾರರು 'ಕಾವೇರಿ ಸಂಕ್ರಮಣ' ಎನ್ನುವರು. ತುಲಾ ಸಂಕ್ರಮಣದಂದೇ ಕೊಡಗಿನ ತಲಾ ಕಾವೇರಿಯಲ್ಲಿ 'ತೀರ್ಥೋದ್ಭವ' ಆಗುವುದರಿಂದ ಕಾವೇರಿ ಸಂಕ್ರಮಣ ಎಂಬುದಾಗಿ ಕರಾವಳಿ ಮತ್ತು ಕೊಡಗಿನಲ್ಲಿ ಈ ಹಬ್ಬವನ್ನು ಸಂಭ್ರಮದಿಂದ ಆಚರಿಸುವರು. ಆಸ್ತಿಕರು ಇದನ್ನು 'ಪುಣ್ಯಜಲ್' ಅಥವಾ 'ತೀರ್ಥ' ಎಂದು ಪರಿಗಣಿಸುತ್ತಾರೆ."[೫೨] ಈ ನದಿಯ ಉಗಮಸ್ಥಾನದಲ್ಲಿ ತುಲಾ ಸಂಕ್ರಮಣದಂದು 'ತೀರ್ಥೋದ್ಭವ'ವಾಗುವುದೆಂಬ ನಂಬಿಕೆಯಿಂದ ಸಾವಿರಾರು ಯಾತ್ರಿಕರು ತಲಾ ಕಾವೇರಿಗೆ ಬಂದು ದರ್ಶನ ಪಡೆಯುವರು.

ಕಾವೇರಿ ಸಂಕ್ರಮಣದಂದು ಕೃಷಿಯಲ್ಲಿ ತೊಡಗಿಕೊಂಡ ಮರಾಟಿಗರು ಯಾವುದೇ ಕಾರಣಕ್ಕೂ ತಮ್ಮ ಗದ್ದೆಗಳಲ್ಲಿ ಉಳುಮೆ ಮಾಡುವುದಿಲ್ಲ. ಭತ್ತಕ್ಕೆ ಸಂಬಂಧಿಸಿದ ಕೆಲಸಗಳಲ್ಲಿ ತೊಡಗುವುದಿಲ್ಲ. ಅಂದು ತಮ್ಮ ಮನೆಯ ಭತ್ತವು ಕೊಡಗಿನ ತಲಾಕಾವೇರಿಯನ್ನು ಹೋಗಿ ಸೇರುತ್ತದೆ ಎಂಬ ನಂಬಿಕೆ. ಇತರೆ ಸಮುದಾಯದಲ್ಲಿ ಇರುವಂತೆಯೇ ಮರಾಟಿ ನಾಯ್ಕ ಮತ್ತು ಮರಾಟಿಗರಲ್ಲಿದೆ. ಇದಕ್ಕಾಗಿಯೇ ಇವರು ತಮ್ಮ ಮನೆಯಲ್ಲಿರುವ ಭತ್ತದ ರಾಶಿಗೆ ಚೂರಿ ಮುಳ್ಳು, ಕಬ್ಬಿಣದ ತುಂಡನ್ನ ಮತ್ತು ಬೊಲ್‌ಕಲ್ಲನ್ನು ಇಡುತ್ತಾರೆ. ಈ ಮೂರು ವಸ್ತುಗಳು ತಮ್ಮ ಮನೆಯ ಅಂಗಳದಲ್ಲಿದ್ದ ಭತ್ತದ ರಾಶಿಯು ಕೊಡಗಿನ ತಲಾಕಾವೇರಿಗೆ ಹರಿದು ಹೋಗದಂತೆ ತಡೆಯುತ್ತದೆ ಎಂಬ ನಂಬಿಕೆ ಇವರಲ್ಲಿದೆ. ಭತ್ತದ ರಾಶಿಯಿಂದ ಹೊರ ಹೋಗುವುದು ಮೇಲ್ನೋಟಕ್ಕೆ ತಿಳಿಯದಿದ್ದರೂ ಅಗೋಚರವಾದ ಸ್ಥಿತಿಯಲ್ಲಿ ಅದು ಹೋಗುತ್ತದೆ ಎಂಬ ಆಧ್ಯಾತ್ಮಿಕ ನಂಬಿಕೆ ಇಲ್ಲದೆ. ಅದಕ್ಕಾಗಿ ಈ ರೀತಿ ಬಂದೋಬಸ್ತಿನ ಕ್ರಿಯೆ ಮಾಡುವರು. ಸಾಮಾನ್ಯವಾಗಿ ಈ ದಿನ ಕರಾವಳಿ ಭಾಗದ ಹೆಚ್ಚಿನ ಸಮುದಾಯದವರು 'ಮಣ್ಣಿ' ಎಂಬ ಮೃದುವಾದ (ಇಬ್ಬನಿ ಹಿಟ್ಟು) ತಿಂಡಿಯನ್ನು ತಯಾರಿಸುವುದಲ್ಲದೆ ಈ ದಿನ ಹುಟ್ಟಿದ ಮಕ್ಕಳಿಗೂ ಕೂಡ ಕಾವೇರಿ, ಕರಿಯಪ್ಪ, ಮುಂತಾದ ಹೆಸರನ್ನು ಇಡುವ ಸಂಪ್ರದಾಯ ಬೆಳೆದು ಬಂದಿದೆ.

ಬೇಸಾಯಗಾರರು ಅಂದು ಭಿತ್ತನೆ ಬೀಜದ ಮಡಿಗಳನ್ನು ಕಟ್ಟಿ ಅಟ್ಟಕ್ಕೆ ಹಾಕುವ ಪದ್ಧತಿ ಪ್ರಚಲಿತದಲ್ಲಿದೆ. ಅಂದು ಸೂರ್ಯದೇವನಿಗೆ ವಂದಿಸಿ ಕುಲದೇವರನ್ನು ಆರಾಧಿಸಿ, ಕಾವೇರಿ ಮಾತೆಯನ್ನು ನೆನಪಿಸಿ ಹಬ್ಬದ ಊಟ ಮಾಡುತ್ತಾರೆ. ಮಂಗಳೂರು ಪ್ರದೇಶದ ವ್ಯವಸಾಯಗಾರರು ನೆಲ್ಲಿ ತೀರ್ಥಸ್ನಾನಕ್ಕೆ ಹೋಗುವರು.

ಈ ಆರಾಧನೆಯಲ್ಲಿ ವ್ಯಕ್ತವಾಗುವ ತತ್ವವೇನೆಂದರೆ ಇದು ಒಂದು ನದಿಯ ಆರಾಧನೆ, ಎರಡನೆಯದಾಗಿ ಸೂರ್ಯನ ಆರಾಧನೆ. ನದಿಗಳು ರೈತರ ಜೀವನಾಡಿ, ನಾಗರಿಕತೆ ಮತ್ತು ಸಂಸ್ಕೃತಿಗಳು ನದಿ ತೀರದಲ್ಲಿ ಬೆಳೆದು ಬಂದಿವೆ ಎಂಬುದು ಇತಿಹಾಸಗಾರರ ಅಭಿಪ್ರಾಯ. ನದಿ ತಟದಲ್ಲಿ ವಾಸಿಸುವ ರೈತರು ನದಿಗಳನ್ನು ಪೂಜಿಸುವ ಕ್ರಮ ಅನಾದಿ ಕಾಲದಿಂದಲು ನಡೆದು ಬಂದಿದೆ. ಅದರಲ್ಲೂ ಗಂಗೆ, ಯಮುನಾ, ಗೋದಾವರಿ, ನರ್ಮದಾ, ಸರಸ್ವತಿ, ಸಿಂಧೂ, ಕಾವೇರಿಯಂತಹ ನದಿಗಳು ಹಿಂದೂ ದೇವ ದೇವತೆಗಳ ವಿಹಾರದ ಸ್ಥಾನಗಳಾಗಿವೆ. ಋಷಿ ಮುನಿಗಳ ನೆಲೆಗಳೆಂಬ ಐತಿಹ್ಯಗಳಿಂದ ಕೂಡಿ ಧಾರ್ಮಿಕವಾಗಿ ಮಹತ್ವ ಪಡೆದಿವೆ.

ಎರಡನೆಯದಾಗಿ ಸೌರಮಾನ ಪದ್ಧತಿಯವರು ಸೂರ್ಯನ ಆರಾಧಕರು. ಸಮಗ್ರ ಭಾರತದಲ್ಲಿ ಹಾಗೂ ಇತರೆ ದೇಶಗಳಾದ ಥಾಯ್ಲೆಂಡ್, ಅಮೇರಿಕಾ, ಕೊಲಂಬಿಯಾ, ಬ್ರಿಜೆಲ್, ಆಫ್ರಿಕಾ, ಯುಥಿಯೋಫಿಯಾ, ನೈಜೆರಿಯಾ, ಜಾಂಬಿಯ್, ಬರ್ಮಾ, ಜಪಾನ್ ಮುಂತಾದ ರಾಷ್ಟ್ರಗಳಲ್ಲಿಯ ಬುಡಕಟ್ಟುಗಳು ಸೂರ್ಯನು ತುಲಾ ರಾಶಿಯನ್ನು ಪ್ರವೇಶಿಸುವ ದಿನವನ್ನು ಹಬ್ಬವನ್ನಾಗಿ ಆಚರಿಸುವರು. ಕೇರಳ, ತಮಿಳುನಾಡು, ಕರ್ನಾಟಕ ಆಸ್ತಿಕ ವರ್ಗದವರಿಗೆ ಕಾವೇರಿ ನದಿಯ ನೀರು ತೀರ್ಥ ಎಂಬ ನಂಬಿಕೆ ಇದೆ. ಮಾತ್ರ ಪ್ರಧಾನವಾದ ಸಮುದಾಯವಾಗಿರುವ ಬಂಟ, ಬಿಲ್ಲವ, ಮೊಗೇರರು ಅಂದು ಸಾಮಾನ್ಯವಾಗಿ ಬಾಳೆ ಎಲೆಯಲ್ಲಿ ಆಹಾರ ಬಡಿಸಿ ಗತಿಸಿದ ಹಿರಿಯರಿಗೆ ಸಮರ್ಪಿಸುವರು. ಈ ವಿಷಯವನ್ನು ಗಮನಿಸಿದಾಗ ಬೇಸಾಯ ವೃತ್ತಿಯಲ್ಲಿ ನಿರತ ಮರಾಟಿ ನಾಯ್ಕ ಮತ್ತು ಮರಾಟಿಗರು ಭೂಮಿ, ನದಿ ಮತ್ತು ಸೂರ್ಯನನ್ನು ವಂದಿಸುವ ಮತ್ತು ಕೃತಘ್ನತೆಯನ್ನು ಸಲ್ಲಿಸುವ ದಿನವನ್ನು ಹಬ್ಬವನ್ನಾಗಿ ಆಚರಿಸುತ್ತಾರೆಂದು ಹೇಳಬಹುದು. ಕೃಷಿ ಕಾರ್ಯಕ್ಕೆ ನದಿ, ನೀರು, ಸೂರ್ಯ, ಭೂಮಿ ಇವು ನೇರ ಸಂಪರ್ಕದ ನೆಲೆಗಳು. ಆದ್ದರಿಂದ ತುಲಾ ಸಂಕ್ರಮಣಕ್ಕೆ ಮಹತ್ವ ನೀಡಿರುತ್ತಾರೆ.

ದಸರಾ

ಅಶ್ವೀಜ ಮಾಸದ ಪಾತ್ಯ ತಿಥಿಯಿಂದ ನವಮಿಯವರೆಗೆ ಆದಿಶಕ್ತಿ ದುರ್ಗಾಮಾತೆಯನ್ನು ಪೂಜಿಸುವ ಒಂಬತ್ತು ದಿನಗಳ ವರೆಗೆ ನವರಾತ್ರಿ ಹಬ್ಬವನ್ನು ಆಚರಿಸುತ್ತಾರೆ. ಈ ದಿನಗಳಲ್ಲಿ ಶಕ್ತಿ ದೇವತೆಯನ್ನು ಆರಾಧನೆ ಮಾಡುತ್ತಿರುವ ಮರಾಟಿ ಸಮುದಾಯದವರಾದ ಮರಾಟಿ ನಾಯ್ಕ ಮತ್ತು ಮರಾಟಿಗರು ಭಯ ಭಕ್ತಿಯಿಂದ ದೇವಿಯನ್ನು ಆರಾಧಿಸುತ್ತಿರುವುದು ಮತ್ತು ದೇವಿ ಸನ್ನಿಧಿಗಳಿಗೆ ಹೋಗಿ ದರ್ಶನ ಪಡೆದು ಸೇವೆ ಸಲ್ಲಿಸುತ್ತಿರುವನ್ನು ಎರಡು ಸಮುದಾಯದ ತಿಳುವಳಿಕೆದಾರರು ತಿಳಿಸಿರುವರು.

ಮರಾಟಿ ನಾಯ್ಕರು ಉಡುಪಿ ಜಿಲ್ಲೆಯಾದ್ಯಂತ ತಮ್ಮ ಜಾತಿಯ ಗದ್ದುಗೆ ದೇವಸ್ಥಾನ, ಭಜನಾ ಮಂದಿಗಳಲ್ಲಿ ಪ್ರತಿದಿನ ಸಾಯಂಕಾಲ ಭಜನೆಯೊಂದಿಗೆ ಪ್ರಾರಂಭಿಸಿ, ಮಹಾಮ್ಮಾಯಿಯ ಕಲಶ ಸ್ಥಾಪಿಸಿ ಧಾರ್ಮಿಕ, ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಾರೆ. ವಿಜಯ ದಶಮಿಯ ಮುಂಚಿನ ದಿವಸ ಕಲಶ ಇಳಿಸುವ ಕಾರ್ಯವನ್ನು ನಡೆಸಿಕೊಂಡು ಬಂದಿರುವುದಾಗಿ ಹಾಗೂ ವಿಜಯದಶಮಿಯಂದು ಚಂಡಿಕಾ ಹೋಮ ಮಾಡುವುದಾಗಿ ತಿಳುವಳಿಕೆದಾರರು ತಿಳಿಸಿರುವರು. ಕಾರ್ಕಳದಲ್ಲಿ ವಾಸಿಸುತ್ತಿರುವ ಮರಾಟಿ ಸಮುದಾಯದವರು ಹಿರಿಯಂಗಡಿ ಶ್ರೀದುರ್ಗಾಪರಮೇಶ್ವರಿ ದೇವಸ್ಥಾನದಲ್ಲಿ ಮತ್ತು ಮುಲ್ಕಿ ಹೊಬಳಿಯಲ್ಲಿ ದುರ್ಗಾ ಪೂಜೆ, ಲಲಿತ ಪಂಚಮಿ, ದುರ್ಗಾಷ್ಟಮಿ, ಮಹಾನವಮಿಯಂದು ಆಯುದ ಪೂಜೆ ಸಪ್ತಶಕ್ತಿ ಪರಾಯಣ ಮತ್ತು ಚಂಡಿಕಾ ಯಾಗವನ್ನು ವಿಶೇಷವಾಗಿ ಆಚರಿಸುತ್ತಾರೆ.

ಮರಾಟಿ ಸಮುದಾಯದವರ ದೇವಸ್ಥಾನಗಳಲ್ಲಿ ಪುರೋಹಿತರಿಂದ ದೇವಿಗೆ ವಿಶೇಷ ಪೂಜೆ, ಬ್ರಾಹ್ಮಣ ಸುವಾಸಿನಿಯರ ಪೂಜೆ, ದುರ್ಗಾ ನಮಸ್ಕಾರ ಪೂಜೆ, ಅನ್ನ ಸಂತರ್ಪಣೆ ನಡೆಸುತ್ತಾರೆ. ಅಲ್ಲದೆ ಮಕ್ಕಳಿಗೆ ಅಕ್ಷರಾಂಭ, ಕಿವಿ ಚುಚ್ಚುವುದು ಅಭಿವೃದ್ಧಿ ಕಾರ್ಯಗಳಿಗೆ ಶಂಕು ಸ್ಥಾಪನೆ, ಮತ್ತು ಮರಾಟಿಗರು ವೈಯಕ್ತಿಕವಾಗಿ ಗೃಹ ಪ್ರವೇಶ ಕಾರ್ಯವನ್ನು ಮಾಡುತ್ತಾರೆ. ವಿಜಯದಶಮಿಯಂದು ಮಾಡುವ ಕಾರ್ಯಗಳಿಗೆ ಮುಹೂರ್ತ ನೋಡಬೇಕಾಗಿಲ್ಲ ಎಂಬ ನಂಬಿಕೆ ಈ ಎರಡು ಸಮುದಾಯದವರಲ್ಲಿದೆ.

ದುಷ್ಟಶಕ್ತಿಯ ವಿರುದ್ಧ ಶಿಷ್ಟ ಶಕ್ತಿ ವಿಜಯ ಸಾಧಿಸಿದ ದಿನವೆಂದು ನಂಬುವರು. ಅವರ ದೃಷ್ಟಿಯಲ್ಲಿ ತ್ರೇತಾಯುಗದಲ್ಲಿ ಶ್ರೀ ರಾಮಚಂದ್ರ ದುಷ್ಟ ರಾಕ್ಷಸ ರಾವಣನನ್ನು ವಧಿಸಿದ ದಿನ, ರಾವಣನೊಂದಿಗೆ ಶ್ರೀರಾಮನು, ಲಕ್ಷ್ಮಣ ಮತ್ತು ಕಪಿ ಸೇನೆಯ ಸಹಕಾರದೊಂದಿಗೆ ಯುದ್ದ ಮಾಡುವಾಗ ಒಂಬತ್ತು ದಿನ ದುರ್ಗಿಯನ್ನು ಪೂಜಿಸಿದನಂತೆ, ಆಕೆಯ ಅನುಗ್ರಹದಿಂದ ಹತ್ತನೆಯ ದಿನ ಯುದ್ದದಲ್ಲಿ ರಾವಣನ ನಾಶ ಮಾಡಿ ರಾಮ ವಿಜಯ ಸಾಧಿಸಿದ. ಪಾಂಡವರು ಅಜ್ಞಾತವಾಸ ಮುಗಿಸಿ, ನಂತರ ವಿಜಯದಶಮಿಯಂದು ಶಸ್ತ್ರಾಸ್ತ್ರಗಳನ್ನು ಹೊರಗೆ ತೆಗೆದು ಮೊದಲಿನಂತೆ ಲೋಕೋತ್ತರ ಸಾಹಸದಿಂದ ವಿಜೃಭಿಸಿದರಂತೆ, ಅಲ್ಲದೆ ಸಕಲ ಕಾರ್ಯಗಳ ಸಿದ್ದಿಗೆ ಇದು ಪ್ರಶಸ್ತ ಮೂಹೂರ್ತ ಎಂದು ನಂಬಿದ್ದಾರೆ. ಈ ದಿನವೇ ದೇವಿಯು ಮಹಿಷಾಸುರ, ಶುಂಭ ನಿಶುಂಭರನ್ನು ಜಯಿಸಿದ ದಿನ, ಷಣ್ಮುಖ ತಾರಕಾಸುರನನ್ನು ಕೊಂದ ದಿನ. ವ್ಯಾಪಾರ, ಉದ್ಯೋಗ, ವಿದ್ಯಾರಾಂಭ ಮೊದಲಾದ ಕಾರ್ಯಗಳನ್ನು ಈ ದಿನ ಆರಂಭಿಸಿದರೆ. ಜಯ ನಿಶ್ಚಿತ ಎಂಬ ಭಾವನೆ ಮರಾಟಿ ಮತ್ತು ಮರಾಟಿ ನಾಯ್ಕ ಸಮುದಾಯದವರಲ್ಲಿದೆ.

ಮರಾಟಿಗರು ಆಚರಿಸುತ್ತಿರುವ ಮಹಾನವಮಿ, ಮಿಜಯದಶಮಿಯನ್ನು ಅವಲೋಕಿಸಿದಾಗ ನವರಾತ್ರಿಯು ಶಕ್ತಿ ದೇವತಾರಾಧನೆ ಹಾಗೂ ಮನುಷ್ಯನಲ್ಲಿ ತನ್ನ ತಾಮಸ, ರಾಜಸ ಗುಣಗಳ ಮೇಲೆ ಸಾತ್ವಿಕ ಗುಣಕ್ಕೆ ಪ್ರಾಧ್ಯಾನತೆ ನೀಡಬೇಕು. ಇಲ್ಲಿ ಪೂಜೆಗೊಳ್ಳುವ ಮಹಾಕಾಳಿ ತಾಮಸಗುಣಕ್ಕೂ, ಮಹಾಲಕ್ಷ್ಮೀ ರಾಜಸಗುಣಕ್ಕೂ, ಮಹಾಸರಸ್ವತಿಯ ಸಾತ್ವಿಕ ಗುಣಕ್ಕೆ ಸಂಕೇತವಾಗಿದ್ದಾರೆ. ದುಷ್ಟ ಶಕ್ತಿಯು ಶಿಷ್ಟಶಕ್ತಿಯನ್ನು ತುಳಿಯಲು ಯತ್ನಿಸಿದಾಗ ಆ ಮೂಲಕ ಹೋರಾಟ ನಡೆಸಿದರೆ, ಶಿವ ಶಕ್ತಿಗೆ ಜಯ ನಿಶ್ಚಿತ ಎಂಬುದೇ ನವರಾತ್ರಿ ತಾತ್ವಿಕತೆ ಆಗಿರುತ್ತದೆ ಎಂಬ ನಂಬಿಕೆ ಜನಪದರದ್ದಾಗಿದೆ.

ದೀಪವಾಳಿ (ಬಲೀಂದ್ರ ಆರಾಧನೆ)

ಕೃಷಿ ಸಮುದಾಯವು ಭಕ್ತಿ ಗೌರವಗಳಿಂದ ಆರಾಧಿಸುವ ಹಬ್ಬ ಬಲೀಂದ್ರ, ನಿರ್ದಿಷ್ಟ ರೂಪವಿಲ್ಲದ, ಬಹುತ್ವವನ್ನು ಸಂಕೇತಿಸುವ ಶುದ್ಧ ಸಸ್ಯಾಹಾರಿ ಎಡೆ ಸ್ವೀಕರಿಸುವ ದೈವ. ಈ ದೈವದ ಆರಾಧನೆ ಅವಿಭಜಿತ ದಕ್ಷಿಣ ಕನ್ನಡ, ಉಡುಪಿ ಹಾಗೂ ಮಲೆನಾಡುಗಳಲ್ಲಿ ಕಂಡು ಬರುತ್ತದೆ. ಬಲೀಂದ್ರನನ್ನು ಕೃಷಿ ರಾಜ್ಯದ ಚಕ್ರವರ್ತಿ ಎಂದೇ ಭಾವಿಸಲಾಗುತ್ತಿದೆ.

ಬಲೀಂದ್ರನಿಗೆ (ಬಲಿಚಕ್ರವರ್ತಿಗೆ) ತುಳುವಿನಲ್ಲಿ 'ಭೂಮಿಪುತ್ರ' ಎಂದು ಕರೆಯುವರು. ದೀಪಾವಳಿ ಹಬ್ಬದಂದು ಬಲಿಯು ತನ್ನ ರಾಜ್ಯವನ್ನು ನೋಡಿ ಹೋಗುತ್ತಾನೆಂದು ನಂಬಲಾಗುತ್ತದೆ. ಕತ್ತಲ ರಾತ್ರಿಯಲ್ಲಿ ಬರುವ ಬಲಿಯನ್ನು ಸಾಲುದೀಪ ಬೆಳಗುವುದರೊಂದಿಗೆ ಸಾಂಕೇತಿಕವಾಗಿ ಸ್ವಾಗತಿಸುತ್ತಾರೆ. ಫಲಪುಷ್ಪ, ದೀಪಗಳು ಕೃಷಿ ಕಾರ್ಯ ಚಟುವಟಿಕೆಗಳ ಮೇಲೆ ಕಾಳಜಿ ವಹಿಸುವಂತೆ ಎಚ್ಚರಿಸುವ ಸಂದೇಶವು ಈ ಆಚರಣೆಯ ಅಂತರ್ಯದೊಳಗೆ ಅಡಗಿದೆ.

ಕನ್ನಡ ವಿಷಯ ವಿಶ್ವಕೋಶದಲ್ಲಿ ಬಲಿಯ ಬಗೆಗೆ ನೀಡಿದ ವಿವರಗಳು ಹೀಗಿವೆ. ಬಲಿ ಚಕ್ರವರ್ತಿಯನ್ನು ವಿಷ್ಣುವು ವಾಮನ ಅವತಾರದಿಂದ ಪಾತಾಳಕ್ಕೆ ತುಳಿದ ದಿನ. ಪ್ರಹ್ಲಾದ ರಾಜನ ಮೊಮ್ಮಗ, ಬಲಿ ಇಂದ್ರನಿಂದ ಹತನಾಗಿ, ಶುಕ್ರಚಾರ್ಯನ ಮೃತ ಸಂಜೀವಿನಿಯಿಂದ ಬದುಕಿ, ವಿಶ್ವಜಿತ್ತೆಂಬ ಯಾಗವನ್ನು ಮಾಡಿ, ಅಗ್ನಿದೇವನ ಮೂಲಕ ರಥಾಶ್ವಧ್ವಜಗಳನ್ನು ತನ್ನ ಪಿತಾಮಹನಾದ ಪ್ರಹ್ಲಾದನಿಂದ ದಿವ್ಯ ಧನುಸ್ಸನ್ನು, ಅಕ್ಷಯ ಬತ್ತಳಿಕೆನ್ನು ಪಡೆದು, ಇಂದ್ರನ ಮೇಲೆ ಯುದ್ಧ ಮಾಡಿ ಅವನನ್ನು ಸೋಲಿಸಿ ಸ್ವರ್ಗವನ್ನು ವಶಪಡಿಸಿಕೊಂಡ. ನಂತರ ಬ್ರಹ್ಮಾದಿಗಳ ಮೊರೆಯನ್ನು ಕೇಳಿ ವಿಷ್ಣು ಅದಿತಿ ದೇವಿ ವಾಮನ ರೂಪದಿಂದ ಅವತರಿಸಿ, ಉಪನಯನಾನಂತರ ಬಲಿ ಚಕ್ರಾವರ್ತಿಯಲ್ಲಿಗೆ ಬಂದು, ಮೂರು ಅಡಿ ಭೂಮಿಯನ್ನು ಬೇಡಿದನು. ಈ ಸಂದರ್ಭದಲ್ಲಿ ಶುಕ್ರಚಾರ್ಯರು ವಿರೋಧಿಸಿದರು. ಆದರೆ ಬಲಿ ಅವರ ಮಾತನ್ನು ಕೇಳದೇ ಮೋಸ ಹೋಗುತ್ತಾನೆ. ಬಲಿ, ವಾಮನನಿಗೆ ಮೂರು ಅಡಿ ಸ್ಥಳ ನೀಡಲು ಸಿದ್ಧನಾಗುತ್ತಾನೆ. ಅದರಂತೆ ವಾಮನ ಒಂದು ಹೆಜ್ಜೆಯನ್ನು ಭೂಮಿಯ ಮೇಲು, ಇನ್ನೊಂದು ಹೆಜ್ಜೆಯನ್ನು ಆಕಾಶದ ಮೇಲು ಇಟ್ಟು ಅಳೆದು, ಮೂರನೇ ಹೆಜ್ಜೆಯನ್ನು ಬಲಿಯ ತಲೆಯ ಮೇಲೆ ಇರಿಸಿ, ಆತನನ್ನು ಪಾತಾಳಕ್ಕೆ ತಳ್ಳುವನು. ಬಲಿಯ ಬೇಡಿಕೆಯಂತೆ ವರ್ಷದಲ್ಲಿ ಮೂರು ದಿನಗಳು ಪಾತಾಳದಲ್ಲಿ ಸಕಲ ವೈಭವವನ್ನು ಅನುಭವಿಸುತ್ತ ಇಂದ್ರ ಪದವಿಯನ್ನು ಪಡೆಯಲು ಹಾಗೆಯೇ ವರ್ಷದಲ್ಲಿ ಮೂರು ದಿನ ತನ್ನ ರಾಜ್ಯವನ್ನು ನೋಡುವ ಅವಕಾಶವನ್ನು ಮಹಾವಿಷ್ಣು ಅವನಿಗೆ ಕರುಣಿಸುತ್ತಾನೆ.

ಬಲೀಂದ್ರ ರಾಜನ ತಾಯಿ ಪ್ರಜೆಗಳನ್ನು ನೋಡಲು ಸೋಣ ತಿಂಗಳ (ಸಿಂಹ ಸಂಕ್ರಾಂತಿ)ಲ್ಲಿ ಬಲಿ ಚಕ್ರವರ್ತಿ ಆದೇಶದಂತೆ ಭೂಲೋಕಕ್ಕೆ ಬರುತ್ತಾಳೆ ಎಂಬ ನಂಬಿಕೆ ಮರಾಟಿಗರಲ್ಲಿದೆ. ಕರ್ಕಾಟಕ ಮಾಸದ ಅಮವಾಸ್ಯೆ ದಿನದಂದು ಆಟಿದ ಅಮವಾಸ್ಯೆ ಬೇಸಾಯಗಾರ ಭತ್ತದ ಸಸಿಗಳಿಂದ ತುಂಬಿದ ತನ್ನ ಗದ್ದೆಗಳಿಗೆ ಕಾಸರ್ಕದ ಕೋಲುಗಳನ್ನು ಊರುತ್ತಿದ್ದಾಗ, ಆತನ ಗದ್ದೆಗಳಲ್ಲಿ ಎಲೆಗಳುಳ್ಳ ಸಣ್ಣ ಸಣ್ಣ ಟಿಸಿಲುಗಳಿಂದ ಕೂಡಿದ ಕೋಲುಗಳು ಕಾಣಿಸಿಕೊಳ್ಳುತ್ತವೆ. ಒಂದು ಕಾಲಕ್ಕೆ ಪುರಾಣದ ಬಲಿಚಕ್ರವರ್ತಿಯು ಈ ತುಳುನಾಡನ್ನು ಆಳಿದ್ದು, ಆತನು ಭೂಮಿಯ ಮೇಲಿರುವ ತನ್ನ ಪ್ರಜೆಗಳ ಯೋಗಕ್ಷೇಮವನ್ನು ವಿಚಾರಿಸಲು ತನ್ನ ಆಳುಗಳನ್ನು ಕಳುಹಿಸಿಕೊಡುವುದರ ಸಂಕೇತವಾಗಿ ಆಚರಿಸುವ ಆಚರಣೆಯೇ ಕಾಸರ್ಕದ ಕೋಲೂರುವ ಈ ಕ್ರಿಯೆ ಎಂದು ಜನಪದರು ನಂಬಿದ್ದಾರೆ.

ವ್ಯವಸಾಯಕ್ಕೆ ಬಳಸುವ ವಸ್ತುಗಳು, ಗೃಹಪಯೋಗಿ ವಸ್ತುಗಳಾದ ಒನಕೆ, ಕಡಗೋಲು, ಮೊರ, ಗೆರಸಿ, ಸಾರಣಿಗೆ, ಬೀಸುವ ಕಲ್ಲು, ಕಡೆಯುವ ಕಲ್ಲು, ಕತ್ತಿಗಳು, ಕೊಳಗ, ತಕ್ಕಡಿ ಇತ್ಯಾದಿಗಳಲ್ಲದೇ ಬೇಟೆಯ ಸಾಧನಗಳಾದ ಕೋವಿ, ಭರ್ಚಿ, ಈಟಿ, ಕತ್ತಿ ಮುಂತಾದ ವಸ್ತುಗಳನ್ನು ತೊಳೆದು, ಒರಸಿ, ಮನೆಯ ಜಗುಲಿಯಲ್ಲಿ ಒಂದೆಡೆ ಓರಣವಾಗಿ ಇಡುತ್ತಾರೆ. ಅವುಗಳಿಗೆ ಶೇಡಿಮಣ್ಣು, ಕೆಮ್ಮಣ್ಣುಗಳಿಂದ ಪಟ್ಟೆ ಬರೆಯುತ್ತಾರೆ. ಬಲೀಂದ್ರನ ಮೇಲು ಚಪ್ಪರವನ್ನು ಅಂಬಾಡಿ ಎಲೆ, ಮಾವು, ಹಲಸು, ಏಲಕ್ಕಿ ಕರೆ, ಪಚ್ಚೆತೆನೆ, ಅಡಿಕೆ ಹಿಂಗಾರ, ನೆಲ್ಲಿಸೊಪ್ಪು, ಬಾಳೆಗೊನೆ, ಸೌತೆಕಾಯಿ, ತೆಂಗಿನಕಾಯಿ, ಅಡಿಕೆಕಾಯಿ, ಕಕ್ಕೆಕಾಯಿ, ಲಿಂಬೆಕಾಯಿ, ಕಿತ್ತಳೆ ಸೊಪ್ಪು, ಹಲಸಿನ ಸೊಪ್ಪು, ಹಲಸಿನ ಕಾಯಿ, ಲಿಂಬೆ ಸೊಪ್ಪು, ಉತ್ತರಾಣಿ ಹೂವು ಅಲ್ಲದೇ ವಿವಿಧ ಬಗೆಯ ಹೂವುಗಳಿಂದ ಶೃಂಗರಿಸುತ್ತಾರೆ. ಉಪಕರಣಗಳ ಎದುರು ಬಾಳೆಯ ಎಲೆಯ ಮೇಲೆ ಸಗಣಿಯ ಸಣ್ಣ ವೇದಿಕೆ ನಿರ್ಮಿಸಿ, ಕಲಶ ಪ್ರತಿಷ್ಠಾಪಿಸುತ್ತಾರೆ. ಕಲಶದ ಒಂದು ಮಗ್ಗುಲಲ್ಲಿ ಸಗಣಿಯಿಂದ ಮಾಡಿದ ಬೆನಕನನ್ನು, ಇನ್ನೊಂದು ಭಾಗದಲ್ಲಿ ಉರಿಯುತ್ತಿರುವ ಹಣತೆಯನ್ನು ಇಡುತ್ತಾರೆ. ಹೊಲ, ತೋಟಗಳೇ ಬಲೀಂದ್ರ ದೈವದ ರಾಜ್ಯವೆಂದು

ಭಾವಿಸುತ್ತಾರೆ. ಸಸ್ಯ, ಜಲ, ಮಣ್ಣು ಹಾಗೂ ದೀಪಗಳು ಬಲೀಂದ್ರನನ್ನು ಸಂಕೇತಿಸುವುದರೊಂದಿಗೆ ಆಹಾರೋತ್ಪಾದನೆಯ ಬಹುಮುಖ್ಯ ಅಂಶಗಳ ಬಗೆಗಿನ ಜ್ಞಾನದ ಕಡೆಗೆ ಬೆಳಕು ಚೆಲ್ಲಿವೆ.

ಮರಾಟಿ ನಾಯ್ಕರು ಬಲೀಂದ್ರನನ್ನು ವಿಶೇಷವಾಗಿ ಪೂಜಿಸುತ್ತಾರೆ. ಮನೆಯ ಯಜಮಾನ ದೀಪಾವಳಿಯ ಅಮವಾಸ್ಯೆ ಊಟ ಮಾಡುವುದರೊಂದಿಗೆ ಹಬ್ಬಕ್ಕೆ ಚಾಲನೆ ನೀಡುತ್ತಾನೆ. ಅಂದು ಹಾಲೆಮರದಿಂದ ಮೂರು ಕವಲುಗಳಿರುವ ಎರಡು ಕೊಂಬೆಗಳನ್ನು ಕತ್ತರಿಸಿ ತರುತ್ತಾರೆ. ತಮ್ಮ ಮನೆಯ ತುಳಸಿಕಟ್ಟೆಯ ಬಲಭಾಗದಲ್ಲಿ ನೆಟ್ಟು, ಹೂವು, ಹೂವಿನ ಮಾಲೆಗಳಿಂದ ಅಲಂಕರಿಸಿ, ಅದರ ತುತ್ತ ತುದಿಗೆ ಛತ್ರಿಯೊಂದನ್ನು ಕಟ್ಟುತ್ತಾರೆ. ಬಲೀಂದ್ರನನ್ನು ವಿಶೇಷವಾಗಿ ಚೆಂಡು ಹೂ, ಪಾದೆ ಹೂ ಹಾಗೂ ಅಂಬಳಕಾಯಿ ಸರಗಳಿಂದ ಅಲಂಕರಿಸುವುದು ರೂಢಿ. ಬಲೀಂದ್ರನ ಎದುರಲ್ಲಿ ಎಲೆಯ ಮೇಲೆ ಬೆಳ್ತಿಗೆ ಅಕ್ಕಿ ಹಾಗೂ ತೆಂಗಿನ ಕಾಯಿಗಳನ್ನು ಇಟ್ಟು ಕೋಲು ದೀಪಗಳಿಂದ ಬೆಳಗುತ್ತಾರೆ.

ಎರಡನೇ ದಿನ ತಮ್ಮ ಆರಾಧ್ಯ ದೈವಗಳಾದ ಪಂಜುರ್ಲಿ, ಅಣ್ಣಪ್ಪನಿಗೆ ತಂಬಿಲ ಕೊಡುತ್ತಾರೆ. ಅಲ್ಲದೇ ಎಡೆ ಹಾಕಿ ಕೋಳಿಗಳನ್ನು ಬಲಿ ನೀಡಿ ಪ್ರಾರ್ಥಿಸಿಕೊಳ್ಳುತ್ತಾರೆ. ಅಂದು ದನಕರುಗಳಿಗೆ ತಿನ್ನಲು ಕಟಾವು ಮಾಡಿದ ಗದ್ದೆಯ ಒಡ್ಡನ್ನು ಹಸಿರು ಹುಲ್ಲಿನ ಜೊತೆ ಸೇರಿಸಿ ಹಾಕುತ್ತಾರೆ. ಈ ಬಗೆಯ ತಿನಿಸನ್ನು ಉಳಿದ ದಿನಗಳಲ್ಲಿ ಹಾಕುವುದಿಲ್ಲ.

ದೀಪಾವಳಿಯನ್ನು 'ಪರ್ಬೊ' ಎಂದು ಕರೆಯುತ್ತಾರೆ. ತಮ್ಮ ದೈವಗಳಿಗೆ ದೀಪ ಬೆಳಗಿ ಅವರನ್ನು ತೃಪ್ತಿಪಡಿಸಿ, ಧನ್ಯರಾಗುವ ವಿಶಿಷ್ಟ ಹಬ್ಬವಾಗಿ ಆಚರಿಸುತ್ತಾರೆ. "ಇತರೆ ಎಲ್ಲಾ ಹಬ್ಬ-ಹರಿದಿನಗಳಲ್ಲಿ ದೀಪವಿಟ್ಟು ಆಚರಿಸಿದರೂ, ದೀಪಾವಳಿಯ ದೀಪಕ್ಕೆ ವಿಶೇಷ ಮಹತ್ವ, ಮೆರಗು ಇರುವುದು ಈ ಆಚರಣೆಯ ಮೂಲಕ ವ್ಯಕ್ತವಾಗುತ್ತದೆ. ದೀಪಾವಳಿ ಅಮವಾಸ್ಯೆ ಇವರ ಪಾಲಿನ ವಿಶೇಷ ಅಮವಾಸ್ಯೆಗಳಲ್ಲಿ ಒಂದು. ಈ ಹಬ್ಬ ಇನ್ನು ಒಂದು ವಾರವಿರುವಾಗಲೇ ಈ ಹಬ್ಬದ ತಯಾರಿ ಆರಂಭವಾಗುತ್ತದೆ. ಮನೆ ಹಾಗೂ ಸುತ್ತಲಿನ ಪರಿಸರ ಸ್ವಚ್ಛಗೊಳಿಸುವಿಕೆಯಿಂದ ಹಿಡಿದು ಎತ್ತು, ದನಕರುಗಳನ್ನು ಚೆನ್ನಾಗಿ ತೊಳೆದು ಸ್ವಚ್ಛವಾದ ಹುಲ್ಲು-ಆಹಾರ ಹಾಕುವುದೇ ಹಬ್ಬದ ಒಂದು ಭಾಗ". ಅಂದು ರಾತ್ರಿ ಕುಟುಂಬದ ಸದಸ್ಯರೆಲ್ಲರು ಸ್ನಾನ ಮುಗಿಸಿ, 'ಬಲೀಂದ್ರನ ಕೂಗಲು' ಸಿದ್ಧತೆ ನಡೆಸುತ್ತಾರೆ. ತುಳುವಿನಲ್ಲಿ 'ಮರ ಆಳುನೆ' ಎಂದು ಕರೆಯುತ್ತಾರೆ. ಅಂಗಳದ ತುಳಸಿಯ ಕಟ್ಟೆಯ ಪಕ್ಕ ಪ್ರತಿಷ್ಠಾಪಿಸಿದ ಬಲೀಂದ್ರನ ಪೂಜೆಗೆ ಸಿದ್ಧತೆ ಮಾಡಿಕೊಂಡು ಮನೆಯವರೆಲ್ಲ ಸೇರುತ್ತಾರೆ. ಮನೆಯ ಯಜಮಾನ ಹಾಡಿನ ಮೂಲಕ ಬಲೀಂದ್ರನನ್ನು ಕರೆಯುತ್ತಾನೆ.

'ಆಟಿದ ಪುಣ್ಣಮೆ ಏಳರೆ ಸಂಕ್ರಾಂತಿ ದೀಪಾವಳಿ ಕೊಡಿಪರ್ಬ
ಆ ಊರ್ದ ಪೊಲಿ ಕೊಣಲ, ಈ ಊರ್ದ ಬಲಿ ಕೊಂಡೊಲ
ನಿನ್ನ ರಾಜ್ಯ ವೈಭವೊನು ಸೂವರ ಬಲಿ ಬಲೀಂದ್ರ ಹರಿಯೋಹರಿ'

ಎಂದು ಹೇಳಿದಾಗ ಮನೆಯ ಸದಸ್ಯರೆಲ್ಲ ಬಲೀಂದ್ರನ ಮರಕ್ಕೆ ಅಕ್ಷತೆ ಹಾಕಿ 'ಕೂ....' ಎನ್ನುತ್ತಾರೆ. ಹೀಗೆ ಮೂರು ಬಾರಿ ಅಕ್ಷತೆ ಹಾಕಿ 'ಕೂ...' ಎನ್ನುತ್ತಾರೆ. ನಂತರ ಪಟಾಕಿಗಳನ್ನು ಸಿಡಿಸಿ ಆನಂದಿಸುತ್ತಾರೆ.

ಗೋಪೂಜೆಯ ದಿನ ಬಲೀಂದ್ರವನ್ನು ವಿಶೇಷವಾಗಿ ಪೂಜಿಸುವ ಪದ್ಧತಿ ಇದೆ. ಅಂದು ಅವರು ದನಕರುಗಳನ್ನು ಪೂಜಿಸುತ್ತಾರೆ. ಗೆರಸೆಯಲ್ಲಿ ಭತ್ತ, ಕುಂಕುಮ, ಆರತಿ, ಬಾಳೆಹಣ್ಣು, ತೆಂಗಿನೆಣ್ಣೆ, ಅವಲಕ್ಕಿ ಜೊತೆಗೆ ಇಡ್ಲಿ, ದೋಸೆ ಇತ್ಯಾದಿಗಳನ್ನು ಇಟ್ಟುಕೊಂಡು ಹಟ್ಟಿಗೆ ಹೋಗುತ್ತಾರೆ. ಹಟ್ಟಿಯ

ಬಾಗಿಲಿಗೆ ಹಾಲೆ ಮರದ ಮೂರು ಕವಲಿರುವ ಚಿಕ್ಕ ಕೊಂಬೆಯನ್ನು ಕಟ್ಟಿರುತ್ತಾರೆ. ಅದರಲ್ಲಿ ದೀಪ ಬೆಳಗುತ್ತಾರೆ. ಇದೇ ರೀತಿ ಗದ್ದೆಗಳಿಗೂ, ಅಡಿಕೆ ತೋಟಗಳಿಗೂ ನೆಡುತ್ತಾರೆ. ಹಟ್ಟಿಯಲ್ಲಿರುವ ಪ್ರತಿಯೊಂದು ದನ–ಕರು–ಎತ್ತುಗಳಿಗೂ ಹೆಂಗಸರು ಆರತಿ ಎತ್ತಿ "ಕಲ್ಲಾಡಿತ ಪಂತಿ ಮಗ, ಮಲ್ಲಾಡಿತ ಪೇರ್ ಮಗ, ತುಡಾರ್ ಬಾಳ್ ಮಗ ಬಾಳ್"[೫೩] (ಕಲ್ಲಾಡಿಯ ಹುಲ್ಲು ಮಗ, ಮಲ್ಲಾಡಿಯ ಹಾಲು ಮಗ, ದೀಪ ಮಗ ದೀಪ, ಬಾಳಿರಿ ಮಗ ಬಾಳಿರಿ) ಎಂದು ತುಳುವಿನಲ್ಲಿ ಹೇಳುತ್ತಾರೆ. ನಂತರ ನೈವೇದ್ಯವನ್ನು ತಿನ್ನಲು ಕೊಡುತ್ತಾರೆ. ಮಾರನೇ ದಿನ ದನಕರುಗಳ ಕೊರಳಿಗೆ ಚೆಂಡು ಹೂ ಇನ್ನಿತರ ಹಾರಗಳಿಂದ ಶೃಂಗರಿಸುತ್ತಾರೆ. ಅಲ್ಲದೇ ಅಂದು ರಾತ್ರಿ ಹಟ್ಟಿಯಲ್ಲಿ ದೀಪ ಬೆಳಗುತ್ತಾರೆ. ಬಲೀಂದ್ರ ಮರದ ಬುಡದಲ್ಲಿ ಮಣೆಯ ಮೇಲೆ ಅವಲಕ್ಕಿ, ಎಳನೀರು ಇತ್ಯಾದಿ ಇಡುತ್ತಾರೆ.

ನಾಲ್ಕನೇ ದಿನ ಬೆಳಿಗ್ಗೆ ಬಲೀಂದ್ರನ ಮರವನ್ನು ಕಿತ್ತು ಹರಿಯುವ ನೀರಿನಲ್ಲಿ ಬಿಟ್ಟು ಬರುತ್ತಾರೆ. ಬಲೀಂದ್ರ ಮಾಡಲು ಹಾಲೆ ಮರದ ಕೊಂಬೆ ಉಪಯೋಗಿಸುತ್ತಾರೆ. ಸೂತಕವಿದ್ದವರು ಮರ ಹಾಕುವುದಿಲ್ಲ. ಎಲ್ಲೆಲ್ಲೋ ಸಮೃದ್ಧಿ ಎನ್ನುವುದನ್ನು "ಪರ್ಬ ಗದ್ದಲ ಬಜಿಲ್ ಮುಕ್ಕೊಂಡೆ" (ದೀಪಾವಳಿ ಗದ್ದಲದಲ್ಲಿ ಅವಲಕ್ಕಿಯನ್ನು ಮುಕ್ಕಿ ತಿಂದೆ) ಎನ್ನುವ ಗಾದೆಯ ಮಾತು ಹಬ್ಬದ ಜನಪ್ರಿಯತೆಗೆ ಹಿಡಿದ ಕನ್ನಡಿಯಾಗಿದೆ.

ಹೀಗೆ ಬಲೀಂದ್ರ ಆಹಾರ ಉತ್ಪತ್ತಿಯ ಮತ್ತು ಸಂರಕ್ಷಣೆಯಲ್ಲಿ ಬಳಕೆಯಾಗುವ ಉಪಕರಣಗಳ ಗುಚ್ಚ. ಕೃಷಿಯ ಮೂಲ ಪ್ರೇರಕ, ಪೋಷಕ ಆಗಿರುತ್ತಾನೆ ಎಂಬುದಾಗಿ ಮರಾಟಿ ನಾಯ್ಕರು ಮತ್ತು ಮರಾಟಿಗರು ನಂಬುವರು.

ಬಲಿಯನ್ನು ಪೂಜಿಸುವ ದಿನ ಅವನ ಕೋಟೆಯ ಪ್ರತಿಕೃತಿಯನ್ನು ಪೂಜಿಸುವುದು ರೂಢಿಯಲ್ಲಿದೆ. ಬಲಿಯ ಸಲುವಾಗಿ ಸಗಣಿಯಿಂದ ಕೆರಕಲು ಹುಡುವುದೇ ಕೋಟೆಯ ಪ್ರತಿಕೃತಿ ಎನ್ನಲಾಗುತ್ತದೆ. ದೀಪಾವಳಿಯ ಮೂರು ದಿನ ದೀಪ ಬೆಳಗಿಸಿ ಭಕ್ತಿಯಿಂದ ಪೂಜಿಸುವವರ ಮನೆ, ಮನಗಳಲ್ಲಿ ಆರೋಗ್ಯ, ಐಶ್ವರ್ಯ ತುಂಬಿರುತ್ತವೆಂದು ನಂಬುತ್ತಾರೆ. ಮೂಲತಃ ಕೃಷಿ ದೈವವಾಗಿರುವ ಬಲೀಂದ್ರನ ಬಗೆಗೆ ಪುರಾಣಗಳಿವೆ, ಕಥೆಗಳಿವೆ, ಐತಿಹ್ಯಗಳಿವೆ, ನಂಬಿಕೆಗಳಿವೆ.

ಬಲೀಂದ್ರ ಭೂಮಿಯನ್ನು ನೋಡಲು ಬರುವ ಮೂರು ದಿನಗಳನ್ನು ಸಂಭ್ರಮದಿಂದ ಆಚರಿಸುತ್ತಾರೆ. ನರಕ ಚತುರ್ದಶಿಯಿಂದ ಬಲಿಪಾಡ್ಯದವರೆಗೆ ನಡೆಯುವ ಹಬ್ಬಗಳಲ್ಲಿ ಬಲಿಯು ರಾಜ್ಯದ ಸಮೃದ್ಧಿಯನ್ನು ನೆನಪಿಸಿಕೊಳ್ಳುತ್ತಾನೆ. ಬಲಿ ಚಕ್ರವರ್ತಿ ಕೃಷಿ ಪದ್ಧತಿಗೆ ಮೂಲ ಪ್ರೇರಕನೂ, ಪೋಷಕನೂ ಆಗಿರುವನೆಂದು ನಂಬಲಾಗಿದೆ. ಅವನ ಸ್ವಾಗತಕ್ಕೆ ಮೂರು ದಿನವೂ ದೀಪ ಬೆಳಗುವ ಪದ್ಧತಿ ಬಂದಿದೆಯೆಂದು, ಆ ಮೂಲಕ ಮಹಾಲಕ್ಷ್ಮೀ ದೀಪ ಬೆಳಗುವ ಮನೆ–ಮನಗಳಲ್ಲಿ ಶಾಶ್ವತವಾಗಿ ನೆಲೆಸುತ್ತಾಳೆಂದು ನಂಬಲಾಗಿದೆ.

ಪಂಚಮಿ ವೃತ (ಸುಬ್ರಮಣ್ಯ ಷೃಷ್ಠಿ)

ಕಾಸರಗೋಡು, ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆ ಸೇರಿ ಈ ಮೂರು ಜಿಲ್ಲೆಗಳು ಪ್ರಾಚೀನ ಪುರಾಣ ಕಾಲದಲ್ಲಿ ನಾಗಲೋಕವಾಗಿತ್ತು ಎನ್ನುವ ನಂಬಿಕೆ ಇಂದಿಗೂ ಈ ಭಾಗದ ಜನರಲ್ಲಿ ಉಳಿದುಕೊಂಡಿದೆ. ಹೀಗಾಗಿ ಕರಾವಳಿ ಪ್ರದೇಶದಲ್ಲಿ ನಾಗನೇ ಕುಟುಂಬ ಮೂಲಗಳಿಗೆ ಸಂಬಂಧಿಸಿದಂತೆ ಪ್ರಮುಖ ಆರಾಧ್ಯ ದೇವರು. ಕರಾವಳಿ ಪ್ರದೇಶದಲ್ಲಿ ನಾಗನನ್ನು ವರ್ಷದಲ್ಲಿ ಎರಡು ಸಲ ಬಹಳ ಭಯ ಭಕ್ತಿಯಿಂದ ಆರಾಧಿಸುವರು.

ಕರ್ಕಾಟಕ ಮಾಸದ ಅಮವಾಸ್ಯೆಯಿಂದ ಪ್ರಾರಂಭವಾಗುವ ಶುಕ್ಲ ಪಕ್ಷದ ಐದನೇ ದಿನ ನಾಗರ ಪಂಚಮಿ ಪ್ರಸಿದ್ಧವಾದ ಪಂಚಮಿ. ಈ ದಿನ ನಾಗನಿಗೆ ಹಾಲೆರೆಯುವ ಮೂಲಕ ತಂಬಿಲ ಎನ್ನುವ

ಸಾಮಾನ್ಯ ನಾಗ ಪೂಜೆ ನಡೆಯುತ್ತದೆ. ಈ ದಿನ ಊರಿನ ಅಥವಾ ಕುಟುಂಬಗಳಿಗೆ ಸೇರಿದ ನಾಗಬನ ಆಲಡೆ, ಬ್ರಹ್ಮಸ್ಥಾನ, ಬೆರ್ಮೆರೆಗುಂಡ, ನಾಗನಕಟ್ಟೆ, ಚಿತ್ತೇರಿ ನಾಗಪ್ರಧಾನ ದೇವಾಲಯಗಳಲ್ಲಿ ಹಾಲೆಯುವ ಕಾರ್ಯ ನಡೆಯುತ್ತದೆ.

ವೃಶ್ಚಿಕ ಮಾಸ ಅಮವಾಸ್ಯೆಯ ನಂತರ ಶುಕ್ಲಪಕ್ಷದ ಪಂಚಮಿ ಮತ್ತು ಷೃಷ್ಠಿ ದಿನಗಳಂದು ನಾಗಾರಾಧನೆ ವಿಶೇಷ ನಡೆಯುತ್ತದೆ. ನಾಗರ ಪಂಚಮಿ ದಿನದಂದು ಪಂಚಮಿ ವೃತ ಕೈಗೊಳ್ಳುವ ಸಂಪ್ರದಾಯವಿಲ್ಲ. ಈ ದಿನ ಸುಬ್ರಮಣ್ಯ ಜಾತ್ರೆ ನಡೆಯುತ್ತದೆ. ವೃಶ್ಚಿಕ ಮಾಸದಲ್ಲಿ ಬರುವ ಷೃಷ್ಠಿಯ ಪಂಚಮಿ ವೃತವನ್ನು ಆಚರಿಸುವ ಸಂಪ್ರದಾಯವಿದೆ. ವ್ಯಕ್ತಿಯೊಬ್ಬನಿಗೆ ನಾಗಬಾಧೆ ಇದ್ದರೆ. ಅದರ ಪರಿಹಾರಕ್ಕಾಗಿ ಮತ್ತು ನಾಗನ ಅನುಗ್ರಹಕ್ಕೆ ಈ ವೃತವನ್ನು ಕೈಗೊಳ್ಳಲಾಗುತ್ತದೆ. ಮರಾಟಿ ನಾಯ್ಕ ಮತ್ತು ಮರಾಟಿಗರು ತಮಗೆ ನಾಗದೋಷ ಇದೆ ಎಂದು ಭಾವಿಸಿ ಬಹಳ ಶ್ರದ್ಧೆ ಭಯ ಭಕ್ತಿಗಳಿಂದ ಪಂಚಮಿ ವೃತವನ್ನು ಆಚರಿಸುತ್ತಾರೆ. ಉಡುಪಿ ಜಿಲ್ಲೆಯ ಸುಬ್ರಮಣ್ಯ ದೇವಸ್ಥಾನಕ್ಕೆ ಪ್ರಸಿದ್ಧ ಪಡೆದ ಕಾಳಾವರ ಮಹಾಲಿಂಗೇಶ್ವರ ಮತ್ತು ಸುಬ್ರಮಣ್ಯ ದೇವರ ದರ್ಶನ ಮಾಡುತ್ತಾರೆ. ಮಂಗಳೂರು, ಸುಳ್ಯ, ಪುತ್ತೂರು ಭಾಗದಲ್ಲಿ ವಾಸಿಸುತ್ತಿರುವ ಮರಾಟಿಗರು, ನಾಗನೆಂದು ಪ್ರಸಿದ್ಧಿ ಪಡೆದಿರುವ ಸುಳ್ಯದ ಸುಬ್ರಮಣ್ಯನ ದರ್ಶನ ಪಡೆಯುತ್ತಾರೆ. ಪಂಚಮಿ ವೃತ ಆಚರಿಸುವ ಮುಂಚಿನ ಐದು ದಿನಗಳ ಮೊದಲೇ ಮಾಂಸಾಹಾರ ಸೇವನೆ ತ್ಯಜಿಸುವರು. ಪಂಚಮಿಯ ಹಿಂದಿನ ದಿನದ ರಾತ್ರಿಯಿಂದ ಉಪವಾಸವಿದ್ದು, ಪಂಚಮಿಯ ದಿನ ಸೂರ್ಯೋದಯಕ್ಕೆ ಸರಿಯಾಗಿ ಸ್ನಾನ ಮಾಡಿ ಮಡಿಯುಟ್ಟು ಕೆರೆಯ ಬದಿಯ ಅಥವಾ ನದಿ ತೀರದ ನೆರಳಿರುವ ಸ್ಥಳವೊಂದನ್ನು ವೃತಾಚರಣೆಗೆ ಆಯ್ಕೆ ಮಾಡುವರು. ಆ ಸ್ಥಳವನ್ನು ಶುದ್ಧಗೊಳಿಸಿ, ನಂತರ ವೃತನಿಷ್ಠರು ತುದಿಯುಳ್ಳ ತುಂಡು ಬಾಳೆಎಲೆ ಮೇಲೆ ಒಂದು ಸೇರಿನಷ್ಟು ಬೆಳ್ತಿಗೆ ಅಕ್ಕಿ ಇಟ್ಟು, ಅದರ ಮೇಲೊಂದು ತೆಂಗಿನಕಾಯಿ, ಎಳನೀರು, ಹಿಂಗಾರ ಮಲ್ಲಿಗೆ ಹೂವನ್ನಿರಿಸಿ ದೀಪ ಹಚ್ಚಿ ನಾಗನನ್ನು ಪ್ರತಿನಿಧಿಸುವ ದೇವರ ಪ್ರತಿಷ್ಠೆ ಮಾಡಿ ಪ್ರಾರ್ಥನೆ ಸಲ್ಲಿಸುವರು. ಆ ಬಳಿಕ ಮಧ್ಯಾಹ್ನದ ಹೊತ್ತಿಗೆ ವೃತ ಹಿಡಿದವರೇ ಅಲ್ಲಿಯೇ ಬೆಳ್ತಿಗೆ ಅಕ್ಕಿಯ ಅನ್ನವನ್ನು ಸಿದ್ಧಪಡಿಸಿ ಒಂದು ಮುಷ್ಠಿ ಅನ್ನ ದೀಪ ಸಮೇತ ಬಾಳೆ ಎಲೆಯ ಮೇಲಿಟ್ಟು, ನಾಗನಿಗೆ ತರ್ಪಣವನ್ನು ಕೆರೆಯ ನೀರಿನ ಮೇಲೆ ತೇಲಿ ಬಿಡುತ್ತಾರೆ. ನಂತರ ವೃತಾಧಾರಿಗಳು ಊಟ ಮಾಡುತ್ತಾರೆ. ಬೆಳ್ತಿಗೆ ಅನ್ನದ ಊಟಕ್ಕೆ ಉಪ್ಪು, ಸಿಹಿ ಸೇರಿಸಬಾರದು ಮತ್ತು ಬೇರೆ ಪದಾರ್ಥ ಪಲ್ಯಗಳನ್ನು ಉಪಯೋಗಿಸಬಾರದೆದು ಎಂಬುದು ಈ ವೃತದ ನಿಯಮ. ಅಂದು ರಾತ್ರಿ ವೃತಾಧಾರಿಗಳು ಉಪವಾಸವಿರಬೇಕೆಂಬುದು ವೃತಾಚರಣೆಯ ಪದ್ಧತಿ. ಆದರೆ ವೃದ್ಧರು, ಅನಾರೋಗ್ಯವಂತರು, ಬಾಲಕರು ಹಸಿವಿನಿಂದ ಬಳಲಿದರೆ ಎಳೆನೀರು ಕುಡಿಯಬಹುದು. ಮರುದಿನ ಬೆಳಿಗ್ಗೆ (ಷೃಷ್ಠಿ) ಸುಬ್ರಮಣ್ಯ ದೇವಾಲಯಗಳಲ್ಲಿ ನಾಗಭಕ್ತರು ಸ್ವೀಕರಿಸಿದ ಪ್ರಸಾದದ ಎಂಜಲು ಎಲೆಗಳ ಮೇಲೆ ಭಕ್ತರು ಮಡೆಸ್ನಾನ (ಉರುಳ ಸೇವೆ) ಮಾಡಿದ ಬಳಿಕ ಮಧ್ಯಾಹ್ನ ಬೂದು ಕುಂಬಳಕಾಯಿ ಮತ್ತು ಬಾಳೆಗಿಡದ ಊಟ ಮಾಡಿ ವೃತವನ್ನು ಕೊನೆಗೊಳಿಸುತ್ತಾರೆ.

ಈ ವೃತವನ್ನು ಗಮನಿಸಿದಾಗ ಗತಿಸಿದ ಹಿರಿಯ, ಕಿರಿಯ ವ್ಯಕ್ತಿಗಳಿಗೆ ಆಚರಿಸುವ ಶುದ್ಧ ಕ್ರಮವಾಗಿರುತ್ತದೆ. ಇದೊಂದು ಪಿತೃ ಆರಾಧನೆಗೆ ಸಮಾನ. ಮನುಷ್ಯರ ಉತ್ತರ ಕ್ರಿಯೆಯ ಭೋಜನಕ್ಕೆ ಬಳಸುವ ತರಕಾರಿಗಳಾದ ಬಾಳೆಕಾಯಿ, ಬಾಳೆದಿಂಡು, ಬೂದು ಕುಂಬಳಕಾಯಿಯನ್ನು ಇಲ್ಲಿಯೂ ಉಪಯೋಗಿಸುವುದರಿಂದ ಈ ಪಂಚಮಿ ವೃತದ ವಿಧಿ ವಿಧಾನಗಳು ಸರ್ಪ ಶುದ್ಧವೆ ಆಗಿದೆ ಎಂದು ತಿಳುವಳಿಕೆದಾರರು ಅಭಿಪ್ರಾಯಪಡುತ್ತಾರೆ.

ಕೆಡ್ಡಸ

ಪ್ರತಿ ವರ್ಷ ಮಕರ ಮಾಸ ಇಪ್ಪತ್ತೇಳನೆಯ ದಿನದಿಂದ ಪ್ರಾರಂಭಗೊಂಡು ಮೂರು ದಿನಗಳ ವರೆಗೆ ಕುಂಭ ಮಾಸ ಪ್ರವೇಶದ ತನಕ ಕರಾವಳಿ ಪ್ರದೇಶದಲ್ಲಿ ಮರಾಟಿ ಸಮುದಾಯವನ್ನೊಳಗೊಂಡು ಹಿಂದೂ ಸಮಾಜದವರೆಲ್ಲ ಕೆಡ್ಡಸ ಹಬ್ಬದ ಆಚರಣೆ ಮಾಡುತ್ತಾರೆ. ಈ ದಿನಗಳಲ್ಲಿ ಭೂ ಮಾತೆಯನ್ನು ಹೆಣ್ಣೆಂದು ಭಾವಿಸಿ ಹಲವು ಜನಪದರು ಪ್ರಥಮ ಕೆಡ್ಡಸ, ಮಧ್ಯ ಕೆಡ್ಡಸ, ಕೊನೆ ಕೆಡ್ಡಸ ಆಚರಿಸುವರು. ನಾಲ್ಕನೆಯ ದಿನದಂದು ಭೂ ದೇವಿಯನ್ನು ಅಲಂಕಾರಗೊಳಿಸುವ ಆಚರಣೆ ಕಂಡುಬರುತ್ತದೆ.

ಈ ದಿನಗಳಲ್ಲಿ ಭೂದೇವಿಯು ಪುಷ್ಪವತಿಯಾಗಿರುತ್ತಾಳೆ ಎನ್ನುವ ನಂಬಿಕೆ ಜನಪದಲ್ಲಿದೆ. ಆಕೆಗೂ ಸಾಮಾನ್ಯ ಹೆಣ್ಣಿನಂತೆ ರಜಸ್ವಲೆಯಾಗುತ್ತದೆ ಎಂಬ ಕಲ್ಪನೆಯ ಹಿನ್ನೆಲೆಯಲ್ಲಿ ಮೂರು ಅಥವಾ ನಾಲ್ಕು ದಿನಗಳ ಆಚರಣೆ ಮಾಡುತ್ತಾರೆ. ಕೆಡ್ಡಸ ಹಬ್ಬವು ಪ್ರಕೃತಿಯ ಫಲವಂತಿಕೆಯ ಸಂಕೇತ ಹಾಗೂ ಋತುಪರಿವರ್ತನೆಯ ಸಂಧಿಕಾಲ ಆಗಿರುತ್ತದೆ. ಈ ದಿನಗಳಲ್ಲಿ ಪೂರ್ವ ದಿಕ್ಕಿನಿಂದ ವಿಶೇಷವಾದ ತಂಪುಗಾಳಿ ಬೀಸತೊಡಗುತ್ತದೆ. ಇದನ್ನು ತುಳು ಜನಪದರು 'ಕೆಡ್ಡಸದ ಗಾಳಿ' ಎಂದು ಕರೆಯುತ್ತಾರೆ. ಕರಾವಳಿಯಲ್ಲಿ ದವಸ ಧಾನ್ಯಗಳನ್ನು ಕೊಯ್ದು ಉರಿ ಬಿಸಿಲಿನಿಂದ ಭೂಮಿಯ ಮೇಲ್ಪದರ ಒಣಗಿ ಮುಂದಿನ ಬೀಜ ಬಿತ್ತನೆಯ ಕೆಲಸಕ್ಕೆ ಕೃಷಿಕರು ಮಳೆಯ ನಿರೀಕ್ಷೆಯಲ್ಲಿರುತ್ತಾರೆ. ಅಲ್ಲದೆ ಉತ್ತರಾಯಣ ಪುಣ್ಯಕಾಲದ ಪ್ರವೇಶವಾಗುವ ಕಾಲ. ಉತ್ತರಾಯಣ ಕಾಲದಲ್ಲಿ ಪ್ರತಿಯೊಂದು ಕೆಲಸ ಪ್ರಾರಂಭಿಸಲು ಶುಭ ಸಮಯ ಎಂಬುದು ಜನರ ನಂಬಿಕೆ.

"ಭೂಮಿಯನ್ನು ಹೆಣ್ಣಿಗೆ ಹೋಲಿಸಿ ಆಚರಿಸುವ ಈ ಹಬ್ಬ ಸ್ತ್ರೀ ಪ್ರಧಾನವಾದ ಹಬ್ಬ. ಕರಾವಳಿಯ ಹಲವು ಸಮುದಾಯಗಳು ತಮ್ಮ ಮನೆಯಂಗಳದ ಒಂದು ಕಡೆ ಸೆಗಣಿಯಿಂದ ಸಾರಿಸಿ ಜೇಡಿ ಮಣ್ಣಿನ ಪುಡಿಯಿಂದ ವೃತ್ತವೊಂದನ್ನು ಬರೆದು, ಅದರ ಮೇಲೆ ಬಳಿಯ ಮಡಿ ಬಟ್ಟೆ, ಗೆಜ್ಜೆಕತ್ತಿ, ಹಿಡಿಸೂಡಿ (ತೆಂಗಿನಸೋಗೆಯ ಹಸಿಕಡ್ಡಿ) ಕನ್ನಡಿ, ಬಾಚಣಿಗೆ, ಕರಿಮಣಿ ಇತ್ಯಾದಿ ಸ್ತ್ರೀ ಸಂಬಂಧಿತ ಒಡವೆ ವಸ್ತುಗಳನ್ನು ಇಟ್ಟು ಭೂದೇವಿಯನ್ನು ಸೃಷ್ಟಿಸುತ್ತಾರೆ. ವಿಶೇಷವಾಗಿ ಕುಚಲಕ್ಕಿ, ಹುರುಳಿ, ಕಡಲೆ, ಹೆಸರು, ತೆಂಗಿನಕಾಯಿಯ ಚೂರುಗಳನ್ನು ಬೆರಸಿ ಒಂದು ಬಾಳೆ ಎಲೆಯಲ್ಲಿ ತಾವು ರಚಿಸಿರುವ ವೃತ್ತದ ಮೇಲಿಟ್ಟು ಭೂದೇವಿಗೆ ಸಾಷ್ಟಾಂಗ ನಮಸ್ಕಾರ ಮಾಡುತ್ತಾರೆ. ಈ ವಿಶೇಷವಾದ ಕಜ್ಜಾಯಕ್ಕೆ 'ಕುಡುವರಿ' ಎಂದು ಹೆಸರು. ದೀಪಾವಳಿಗೆ ಅವಲಕ್ಕಿ ಇರುವಂತೆ ಕೆಡ್ಡಸಕ್ಕೆ 'ಕುಡುವರಿ' ಹೆಸರುವಾಸಿ. ಈ ಆಚರಣೆಯನ್ನು ಕೆಡ್ಡಸದ ಮೊದಲನೆ ದಿನ ಆಚರಿಸುವುದರಿಂದ ತುಳುವಿನಲ್ಲಿ 'ಸುರುಕೆಡ್ಡಸ' ಎಂದು, ಎರಡನೇ ಕೆಡ್ಡಸದ ದಿನ ಗಂಡಸರು ಪ್ರಾಣಿ ಪಕ್ಷಿಗಳ ಅಥವಾ ಮೀನಿನ ಬೇಟೆಗೆ ಹೋಗುತ್ತಾರೆ. ಸಾಮಾನ್ಯವಾಗಿ ಈ ದಿನ ಪ್ರಾಣಿ, ಪಕ್ಷಿ ಅಥವಾ ಮೀನಿನಿಂದ ತಯಾರಿಸಿದ ಆಹಾರವನ್ನು ಕಡ್ಡಾಯವಾಗಿ ಮಾಡುವರು. 'ಕೆಡ್ಡಸದ ದಿನಗಳಲ್ಲಿ ಪ್ರಾಣಿ ಪಕ್ಷಿಗಳಿಗೆ ಜ್ವರ ಬರುವುದೆಂದು ಜನಪದರ ನಂಬಿಕೆ. ಆದ್ದರಿಂದ ಕೆಡ್ಡಸದ ಬೇಟೆ ಅತಿ ಸುಲಭವಾಗುವುದು ಎನ್ನುವರು. ಇದನ್ನು 'ಕೆಡ್ಡಸದ ಬೊಂಟೆ' (ಬೇಟೆ) ಎಂದು ಕರೆಯುತ್ತಾರೆ. ಮೂರನೆಯ ದಿನ ಮುತ್ತೈದೆಯರು ಸ್ನಾನ ಮಾಡಿ ಮಡಿ ಬಟ್ಟೆಯುಟ್ಟು ಮೊದಲ ದಿನ ರಚಿಸಿದ ವೃತ್ತದ ಒಳಗೆ ಜೊತೆಗೆ ತಾವು ಸಂಕಲ್ಪಿಸಿರುವ ಭೂಮಾತೆಯ ಸಂಕೇತಿಸಿರುವ ಸ್ಥಳದಲ್ಲಿ, ಈ ಹಿಂದೆ ಇಟ್ಟಿರುವ ವಸ್ತುಗಳನ್ನು ತೆಗೆದು ಅದೇ ಜಾಗದಲ್ಲಿ ಹಲಸಿನ ಮತ್ತು ಮಾವಿನ ಮರದ ಎಲೆಗಳನ್ನು ಅಡಿಕೆ, ವೀಳ್ಯದೆಲೆ, ಅರಿಶಿಣ, ಕುಂಕುಮ, ತೆಂಗಿನೆಣ್ಣೆ ಮತ್ತು ಕಾಡಿಗೆಗಳನ್ನು ಇಡುವರು. ನಾಲ್ಕನೆಯ ದಿನ ವೃತ್ತದಲ್ಲಿರುವ ಪರಿಕರಗಳನ್ನು ತೆಗೆದು ನೀರಿಗೆ ಹಾಕುತ್ತಾರೆ. ಮತ್ತು ಆ ಸ್ಥಳವನ್ನು ಶುದ್ಧಗೊಳಿಸುತ್ತಾರೆ. ಹೂ, ಗಂಧ, ದೀಪ, ಧೂಪ, ವೀಳ್ಯದೆಲೆ, ವಸ್ತ್ರ, ಕೈಗನ್ನಡಿ ಭೂಮಿ ದೇವಿಗೆ ಅಲಂಕಾರಕ್ಕಾಗಿ ಇಡುತ್ತಾರೆ ಮತ್ತು ಸಾಂಪ್ರದಾಯಿಕವಾಗಿ ಪೂಜೆ ಸಲ್ಲಿಸುತ್ತಾರೆ. ಹಬ್ಬದ

ಮೂರು ಹಸಿಯನ್ನು ಕಡಿಯಬಾರದು, ಒಣಕಲನ್ನು ಮುರಿಯಕೂಡದು. ಭೂಮಿಯನ್ನು ಯಾವುದೇ ಕಾರಣಕ್ಕೆ ಅಗೆಯಬಾರದೆಂಬ ನಿಷೇಧವಿದೆ. ಈ ಹಬ್ಬದ ಹಿನ್ನೆಲೆಯಲ್ಲಿದೆ. ಅಲ್ಲದೆ ಪ್ರಕೃತಿಯಲ್ಲಿ 'ಮಂಡದೆ' ಎಂಬ ಹಕ್ಕಿಗಳಿಗೆ ಈ ಸಮಯದಲ್ಲಿ ಜ್ವರ ಬರುತ್ತದೆ ಎಂಬ ನಂಬಿಕೆ ಇದೆ. ಇದೇ ಹಬ್ಬದ ಸಂದರ್ಭದಲ್ಲಿ ಜನಪದರು 'ರೊಟ್ಟಿ ಪಾಯಸ' ಎಂಬ ವಿಶೇಷ ಅಡುಗೆ ಮಾಡುವರು"[೫೪].

ಈ ಆಚರಣೆ ಕೃಷಿ ಪ್ರಧಾನವಾದ ಮತ್ತು ಮಾತೃ ಪ್ರಧಾನವಾದ ಸಮುದಾಯದ ಆಚರಣೆಯಾಗಿ ಕಂಡುಬರುತ್ತದೆ. ಈ ಆಚರಣೆ ಮರಾಟಿ ನಾಯ್ಕ ಮತ್ತು ಮರಾಟಿ ಸಮುದಾಯಗಳ ಮೇಲೆ ಪ್ರಭಾವ ಬೀರಿರುವುದನ್ನು ಕಾಣುತ್ತೇವೆ. ಭೂದೇವಿಗೆ ಬಡಿಸುವ ಆಹಾರ, ಅಲ್ಲಿಡುವ ಪರಿಕರಗಳು ಹಾಗೂ ಅವಳಿಗೆ ಅರ್ಪಿಸುವ ವಸ್ತುಗಳು ಫಲವಂತಿಕೆಯ, ಗರ್ಭಧಾರಣೆಯ ಬಯಕೆಗಳ ಸಂಕೇತವಾಗಿರುತ್ತದೆ. ಕರಾವಳಿಯ ಇತರೆ ರೈತ ವರ್ಗದವರಂತೆ ಮರಾಟಿ ನಾಯ್ಕರು ಮತ್ತು ಮರಾಟಿಗರು ಕೆಡ್ಡಸ ಹಬ್ಬ ಆಚರಿಸುವುದು ಕಂಡುಬರುತ್ತದೆ.

ಭೂಮಿಯನ್ನು ಹೆಣ್ಣೆಂದು ಕಲ್ಪಿಸಿ ಆಕೆ ಬೆಳೆ ಫಲಗಳನ್ನೂ ನೀಡುವವಳು. ಸಾಮಾನ್ಯವಾಗಿ ಹೆಣ್ಣು ಮುಟ್ಟಾಗಿ ನಾಲ್ಕನೆ ದಿನದಂದು ಗರ್ಭಧಾರಣೆಗೆ ಸಿದ್ಧವಾಗುವಳು ಎಂಬ ನಂಬಿಕೆ ಜನಪದರಲ್ಲಿದೆ. ಈ ಆಚರಣೆಯ ಹಿನ್ನೆಲೆಯಲ್ಲಿ ಭೂಮಿ ಎಂಬ ಸ್ತ್ರೀಯು 'ರಜಸ್ವಲೆ' ಯಾಗಿ ಸೃಷ್ಟಿ ಕಾರ್ಯಕ್ಕೆ ಸಿದ್ಧಳಾಗುವಳು. ಭೂಮಿಯು ಗರ್ಭ ಕ್ಷೇತ್ರವಾಗುತ್ತದೆ. ಕ್ಷೇತ್ರಕ್ಕೆ ಬೀಜದ ಅಗತ್ಯತೆ ಇದೆ. ಬೇಟೆ ಎಂಬ ಮೂಲಕ ಭೂಮಿದೇವಿಯ ಮೇಲೆ ಗಂಡಸು ತನ್ನ ಪುರುಷತ್ವದ ಅಟ್ಟಹಾಸ ಬೀರುವನು. ಮುಂದೆ ಭೂದೇವಿಯು ನೀಡುವ ಬೆಳೆಗೆ ತೊಡಕಾಗಲಿರುವ ಪ್ರಾಣಿ ಪಕ್ಷಿಗಳ ದಮನ ಮಾಡುವನು. ಪುರುಷನ ಪೌರುಷಕ್ಕೆ ಮೆಚ್ಚುವ ಭೂಮಿ ಪುರುಷನ ವಶವಾಗುತ್ತಾಳೆ. ಪ್ರಕೃತಿಯು ಗರ್ಭಧಾರಣೆಗೆ ಸಿದ್ಧಳಾಗುತ್ತಾಳೆ. ಪುರುಷ ಬೀಜ ಬಿತ್ತುತ್ತಾನೆ, ಭೂಮಿದೇವಿಯು ಸಸ್ಯಶ್ಯಾಮಲೆಯಾಗುತ್ತಾಳೆ. ಭಾರತೀಯ ಸಂಸ್ಕೃತಿಯು ಫಲವಂತಿಕೆಯ ಆಚಾರ ವಿಚಾರಗಳಿಗೆ ಹೆಚ್ಚು ಮಹತ್ವ ನೀಡುವುದರಿಂದ ಈ ಹಬ್ಬವು ಅರ್ಥಗರ್ಭಿತವಾದದ್ದು, ಅಲ್ಲದೇ ಈ ಹಬ್ಬದ ಆಚರಣೆಯ ಸಂದರ್ಭದಲ್ಲಿ ಜನರು ವಿಧಿಸುವ ವಿಧಿ ನಿಷೇದಗಳಿಂದ ಭೂಮಿಯನ್ನು ಅಗೆಯಬಾರದು, ಉಳುಮೆ ಮಾಡಬಾರದು ಹಸಿ ಗಿಡಮರ ಕಡಿಯಬಾರದು ಒಣ ಗಿಡಮರಗಳನ್ನು ಮುರಿಯಬಾರದು ಎಂಬ ನಿಷೇಧವು ಭೂಮಾತೆ 'ರಜಸ್ವಲೆ'ಯಾಗಿರುವ ಸಂದರ್ಭದಲ್ಲಿ ಆಕೆಗೆ ಆಯಾಸ, ಬಳಲಿಕೆ, ನೋವು ಆಗದಿರಲಿ ಎಂಬ ಆಶಯದಿಂದ ಸಾಮಾಜಿಕ ಕಟ್ಟುಕಟ್ಟಲೆಯನ್ನು ಅನುಸರಿಸುವುದು ಕಂಡುಬರುವುದು. ಈ ಆಚರಣೆ ಮುತ್ತೈದೆ ಸ್ತ್ರೀಯರಿಗೆ ನೀಡುವ ಗೌರವದ ಆಚರಣೆ ಆದಾಗಿದೆ.

ಶಿವರಾತ್ರಿ

ಮರಾಟಿಗರು ಹೆಚ್ಚಾಗಿ ಶೈವಭಕ್ತರು. ಶಿವರಾತ್ರಿ ಆಚರಣೆಯಲ್ಲಿ ವಿಶೇಷ ಆಸಕ್ತಿ ಕಂಡುಬರುತ್ತದೆ. ಬಡತನದಿಂದ ಕೃಷ್ಣಾಷ್ಟಮಿ ಹಬ್ಬವನ್ನು ಆಚರಿಸಲು ಸಾಧ್ಯವಾಗದಿದ್ದ ಮಹಿಳೆಯೊಬ್ಬಳು ತನ್ನ ಮಗನನ್ನೇ ಅಡವಿಟ್ಟು ದುಡ್ಡು ಪಡೆದು ಹಬ್ಬವನ್ನಾಚರಿಸಿದಳು ಎಂಬ ನಂಬಿಕೆ ಕರಾವಳಿ ಜನತೆಯಲ್ಲಿದೆ. ಹೀಗೆ ಅಡವಿಟ್ಟ ಮಗನನ್ನು ಮುಂದಿನ ಶಿವರಾತ್ರಿವರೆಗೂ ಆಕೆಗೆ ಬಿಡಿಸಲು ಸಾಧ್ಯವಾಗಲಿಲ್ಲ. ಆಗ ಅವಳು ಶಿವರಾತ್ರಿ ದಿನ ಅನ್ಯರ ಸಂಪತ್ತನ್ನು ಕದ್ದು ಆಕೆ ಮಗನನ್ನು ಅಡವಿನಿಂದ ಬಿಡಿಸಿಕೊಂಡು ಹಬ್ಬವನ್ನು ಆಚರಿಸಿದಳೆಂದು ಪ್ರತೀತಿ. ಇದರಿಂದಾಗಿ ಶಿವರಾತ್ರಿಯ ದಿನ ಕದ್ದರೆ ದೋಷವಿಲ್ಲವೆಂದು ಹೇಳಲಾಗುತ್ತದೆ. ಆದರೆ ಯಾವ ಧರ್ಮಶಾಸ್ತ್ರದ ಕಟ್ಟುಪಾಡುಗಳಿಂದಲೂ ಇದನ್ನು ಸಮರ್ಥಿಸಲು ಸಾಧ್ಯವಾಗುವುದಿಲ್ಲ.

ಶಿವರಾತ್ರಿಯಲ್ಲಿ ಶಿವನ ಆರಾಧನೆ, ಆರ್ಚನೆಗಳಿಗೆ ವಿಶೇಷವಾದ ಪುಣ್ಯ ದಿನ. ಇಲ್ಲಿ ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರಗಳಿಗೆ ಜಾಗವಿಲ್ಲ. ಮನುಷ್ಯನ ಮನಸ್ಸು ಶಿವಧ್ಯಾನಸ್ಥವಾಗಿರಬೇಕೆನ್ನುವುದೇ ಇಲ್ಲಿಯ ಮುಖ್ಯ ಸಂದೇಶ. ಅದಕ್ಕಾಗಿಯೇ ಶಿವರಾತ್ರಿಯಂದು ಧ್ಯಾನ, ವೃತ, ಶಿವಾರ್ಚನೆ, ಜಾಗರಣೆ, ಉಪವಾಸ ನಡೆಯುತ್ತವೆ. ಹೆಚ್ಚಿನ ಸಂಖ್ಯೆಯಲ್ಲಿ ಮರಾಟಿ ನಾಯ್ಕರು ಮತ್ತು ಮರಾಟಿಗರೂ ಶಿವ ದೇವಾಲಯಕ್ಕೆ ಹೋಗಿ ಪೂಜೆ, ಪ್ರಾರ್ಥನೆಗಳನ್ನು ಸಲ್ಲಿಸಿ, ತೀರ್ಥಪ್ರಸಾದಗಳನ್ನು ತಮ್ಮ ಮನೆಗೆ ತಂದು, ತಮ್ಮ ಮನೆಯ ದೈವದ ಗುಡಿಗಳನ್ನು ಶುದ್ಧೀಕರಿಸುವುದು ಕ್ಷೇತ್ರಕಾರ್ಯ ಸಂದರ್ಭ ಕಂಡುಬಂದಿದೆ. ಅನೇಕರು ಉಪವಾಸ ಕೈಗೊಳ್ಳುತ್ತಾರೆ. ಅಂದು 'ಸಾರ್ಣಿದಡ್ಯೆ' ಎನ್ನುವುದು ಮರಾಟಿಗರಿಗೂ ಶಿವರಾತ್ರಿಯ ಹಬ್ಬದ ವಿಶೇಷ ಕಡುಬು.

ಯುಗಾದಿ

ತುಳು ನಾಡಿನ ಜನರು ವರ್ಷವನ್ನು ಸೌರಮಾನ ದಿನದಿಂದ ಲೆಕ್ಕಹಾಕುವರು. ಮೀನು ಮಾಸ ಮೇಷ ಮಾಸ ಪ್ರಾರಂಭದ ಸಂಕ್ರಮಣ ತುಳುವಿನ ಲೆಕ್ಕಚಾರದಂತೆ ಹೊಸ ವರ್ಷದ ಪ್ರಥಮ ತಿಂಗಳು 'ಪಗ್ಗು ತಿಂಗಳು' ಬರುವ ಸಂಕ್ರಮಣ ಸೌರಮಾನ ವರ್ಷಾರಾಂಭ. ಮರಾಟಿ ಮತ್ತು ಮರಾಟಿ ನಾಯ್ಕರು ಚಂದ್ರಮಾನ ಯುಗಾದಿಯನ್ನು ಆಚರಿಸುವರು. ಯುಗಾದಿಯಂದು ಬೆಳಿಗ್ಗೆ ಬೇಗನೆ ಎದ್ದು ಎಲ್ಲರು ಸ್ನಾನ ಮಾಡಿ ಹೊಸ ಬಟ್ಟೆ ಧರಿಸುವ ಸಾಂಪ್ರದಾಯ ಇದೆ. ಅಲ್ಲದೆ ವರ್ಷದ ಫಲ ಓದುವ ಕ್ರಮ ಇದೆ. ಬೆಳಿಗ್ಗೆ ಗಣಪತಿ ಆರಾಧನೆಗಾಗಿ ದೀಪ ಹಚ್ಚಿ ಮನೆಯ ಕುಟುಂಬದ ಸದಸ್ಯರೆಲ್ಲರು ಕೈಮುಗಿಯುತ್ತಾರೆ. ಕಿರಿಯರು ಹಿರಿಯರ ಪಾದ ಮುಟ್ಟಿ ಆರ್ಶಿವಾದ ಪಡೆಯುವ ಸಂಪ್ರದಾಯವಿದೆ. ಅಂದು ಬೇವು ಬೆಲ್ಲ ತಿನ್ನುವ ಪದ್ಧತಿ ಇದೆ. ಮರಾಟಿಗರಲ್ಲಿ ಹಲವಾರು ವ್ಯವಸಾಯಗಾರರು ಬೀಜದ ಮುಹೂರ್ತ ಮಾಡುತ್ತಾರೆ. ಗದ್ದೆಯ ಒಂದು ಮೂಲೆಯಲ್ಲಿ ಹಾರೆಯಿಂದ ಮಣ್ಣನ್ನು ಹದ ಮಾಡಿ ಒಂದು ಬೊಗಸೆ ಭತ್ತವನ್ನು ಹಾಕಿ, ನೀರು ಚುಮಿಕಿಸಿ ಪೂಜೆ ಮಾಡುವರು. ಮುಂದೆ ಬೆಳೆಯನ್ನು ನೋಡಿಕೊಂಡು ತಮ್ಮ ಬೆಳೆಗೆ ಸಾಕಾಗುವಷ್ಟು ಬೀಜವನ್ನು ಹಾಕುತ್ತಾರೆ. ಮಳೆಗಾಲದ ನಾಲ್ಕು ತಿಂಗಳು ಬೇಕಾಗುವ ಎಲ್ಲ ಸಿದ್ಧತೆಗಳನ್ನು ಮಾಡುವರು. ಕಟ್ಟಿಗೆ ಸಂಗ್ರಹ, ಉಪ್ಪಿನ ಕಾಯಿ, ಸಂಡಿಗೆ, ಹಪ್ಪಳ, ನೀರುಪ್ಪಡ್(ಹೆಬ್ಬಲಸನ್ನು ಉಪ್ಪು ನೀರಿನಲ್ಲಿ ಹಾಕುವುದು) ಇವೆಲ್ಲವನ್ನು ಮಳೆಗಾಲದ ಮುಂಚೆ ಸಿದ್ಧಪಡಿಸಿಕೊಳ್ಳುತ್ತಾರೆ. ಆಧುನಿಕತೆಯ ಪ್ರಭಾವದಿಂದಾಗಿ ಈ ಎಲ್ಲ ಆಚರಣೆಗಳು ನಿಧಾನವಾಗಿ ತನ್ನ ಮಹತ್ವವನ್ನು ಕಳೆದುಕೊಳ್ಳುತ್ತಿವೆ. ಮುಲ್ಕಿ ಹೋಬಳಿಯ ಮರಾಟಿ ಸಮುದಾಯದವರು ಯುಗಾದಿಯನ್ನು 'ಗುಡಿ ಪಾಡ್ಯ' ಹಬ್ಬವೆಂದು ಕರೆಯುವರು. ಮಹಾರಾಷ್ಟ್ರದಿಂದ ವಲಸೆ ಬಂದಿರುವ ಅನೇಕ ಸಮುದಾಯದವರು ಉದಾ: ಗೌಡ ಸಾರಸ್ವತ ಬ್ರಾಹ್ಮಣರು, ಸಾರಸ್ವತರು ಚಂದ್ರಮಾನ ಯುಗಾದಿಯನ್ನು ಆಚರಿಸುವರು.

ವರ್ಷಾರಾಂಭದ ಮೊದಲನೆಯ ದಿನವನ್ನು ಸಂಭ್ರಮದಿಂದ ಸ್ವಾಗತಿಸಿ ಈ ಹಬ್ಬ ಆಚರಿಸುವುದನ್ನು ಗಮನಿಸಬಹುದು. ಅಲ್ಲದೆ ಭೂಮಿಯ ಉಪಕಾರವನ್ನು ಸ್ಮರಿಸುವ ಸಾಂಸ್ಕೃತಿಕ ಅಂಶಗಳು ಈ ಹಬ್ಬದಲ್ಲಿ ಕಂಡುಬರುತ್ತದೆ.

ಕೊನೆ ಟಿಪ್ಪಣಿಗಳು

೧. ಹೂ ಮುಡಿಸುವ ಶಾಸ್ತ್ರ: ಗರ್ಭಿಣಿ ಸ್ತ್ರೀಗೆ ಐದು ತಿಂಗಳು ತುಂಬಿದ ಬಳಿಕ ಅವಳ ತಾಯಿ ಮನೆಯವರು 'ಉಂಬುಕೆ' ಮಾಡುವ ಆಚರಣೆಯ ಸಂದರ್ಭ ಗರ್ಭಿಣಿಯ ಗಂಡನ ಮನೆಯವರು ಅವರ ಕುಟುಂಬಿಕರು ಸೇರಿ ಮುಖ್ಯವಾಗಿ ಹೆಂಗಸರು ಬಸುರಿಗೆ ಹೂವು ಮುಡಿಸುವುದು.

೨. ಉಂಬುಕೆ: ಗರ್ಭಿಣಿಯ ಸ್ತ್ರೀಗೆ ಐದು ತಿಂಗಳು ತುಂಬಿದ ಬಳಿಕ ಆತಳ ತಾಯಿ ಮನೆಯವರು ಮಾಡುವ ಆಚರಣೆ ಅಂದು ವಿಶೇಷವಾಗಿ ಅರಿಶಿಣ ಎಲೆಯಲ್ಲಿ ಕಡುಬು (ತಿಂಡಿ) ಮಾಡುವರು, ಆ ಕಡುಬು (ಸೆಖೆಟ್ಟು) ಒಡೆಯಬಾರದು ಎಂಬ ನಂಬಿಕೆ ಇದೆ.

೩. ಸೀಮಂತ/ಬಯಕೆ:ಬಯಕೆ(ಕಳುಸದ) ಗರ್ಭಿಣಿ ಸ್ತ್ರೀಯ ಆಸೆಗಳನ್ನು ಈಡೇರಿಸುವ ಆಚರಣೆ, ಸೀಮಂತಕಾರ್ಯCeremony of Parting the Hair

ಸೀಮಂತೋನ್ಯಯನ: ಗರ್ಭಿಣಿ ಸ್ತ್ರೀಯ ಶೀರದ ಮಧ್ಯದಲ್ಲಿ ಬಗತಲೆ ಬಿಡಿಸುವುದು

ಬಯಕೆ, ಬಯ್ಕೆ, ಬವುಕೆ(ಕುಂದಾಪುರಕನ್ನಡ)-ಸಮಾನಾರ್ಥಕ, ಪದಗಳೂ ಪ್ರಯೋಗದಲ್ಲವೆ.

೪. ತಿಳುವಳಿಕೆದಾರರು, ಶ್ರೀಮತಿ ಸುಶೀಲ ಬ್ಯಾ, ಅಮಾವಾಸೆ, ಬೈಲು ಕುಂದಾಪುರ

೫. ಅದೇ.

೬. ಅದೇ.

೭. ೭ ರಿಂದ ೧೦ರ ವರೆಗಿನ ಮಾಹಿತಿಯನ್ನು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಸಂಗ್ರಹಿಸಲಾಗಿದೆ.

(ಅ) ತಿಳುವಳಿಕೆದಾರರು ಶ್ರೀಮತಿ ಕಲ್ಯಾಣಿ ಬ್ಯಾ ಪ್ರಾಯ ೮೧, ಅಲ್ಲಿ ಪಾದೆ, ಮುಲ್ಕಜಮಾಡ ಸರಪಾಡಿ, ಬಂಟ್ವಾಳ.

(ಆ) ತಿಳುವಳಿಕೆದಾರರು, ಶ್ರೀಮತಿ ಸುಗಂದಿ ಕರ್ಮಳ ಪ್ರಾಯ೬೦ ಅಮಾವಾಸೆ ಬೈಲ, ಶಂಕರನಾರಾಯಣ, ಕುಂದಾಪುರ

(ಇ) ತಿಳುವಳಿಕೆದಾರರು, ಶ್ರೀಮತಿ ಗೌರಿ ಬ್ಯಾ ಪ್ರಾಯ ೬೨ ಶಂಕರನಾರಾಯಣ, ಕುಂದಾಪುರ

(ಈ) ತಿಳುವಳಿಕೆದಾರರು, ಶ್ರೀಮತಿ ಜಲಜ ಪ್ರಾಯ ೪೮-ಶಂಕರ ನಾಯರಾಯಣಕುಂದಾಪುರ

೧೧. ಚನ್ನೇದ ಬಳ್ಳಿ (ಚೆನ್ನೇದ ಬೂರು ತುಳು): ಜನಪದರು ಪ್ರೇತ, ಪಿಶಾ, ದುಷ್ಟಶಕ್ತಿಗಳನ್ನು ನಿಗ್ರಹಿಸುವ ಶಕ್ತಿ ಈ ಬಳ್ಳಿಗಿದೆ. ಮಗುವಿಗೆ ದೋಷತಾಗುವುದಿಲ್ಲ ಎಂಬ ನಂಬಿಕೆ ಬ್ರಾಹ್ಮಣೇತರರು ಗೃಹ ಪ್ರವೇಶದಂದು ಹೊಸ ಮನೆಯ ಸುತ್ತಲು ಈ ಬಳ್ಳಿಯನ್ನು ಕಟ್ಟುತ್ತಾರೆ.

೧೨. ವೈದ್ಯಗುರು ಎಮ್. ಆರ್. ಭಟ್ (ಅನು) ಸುಶ್ರುತ ಸಂಹಿತಾ ಪುಟ, ೧೧೨.

೧೩. ಕ್ಷೇತ್ರಕಾರ್ಯ ಸಂದರ್ಭದಲ್ಲಿ ಪಡೆದ ಮಾಹಿತಿ. ಈ ಆಚರಣೆಯನ್ನು ಶ್ರೀಕ್ಷೇತ್ರ ಗಣೇಶಪುರ ಮಹಾಗಣಪತಿ ದೇವಸ್ಥಾನ ಕಾಟಿಪಳ್ಳ-ಮಂಗಳೂರು, ಶ್ರೀ ಅಂಬಾ ಭವಾನಿ ಭಜನಾ ಮಂಡಳಿ ಎಡಪದವು, ಮೂಡಬಿದರೆಯಲ್ಲಿ ಅವಲೋಕಿಸಿರುವೆನು.

೧೪. ಮರಾಟಿಗಳಲ್ಲಿರುವ ಅನ್ನಪ್ರಾಶನ ಸಂಸ್ಕಾರವು ವೈದಿಕ ಪದ್ಧತಿಯ ಹಿನ್ನೆಲೆಯಲ್ಲಿ ನಡೆಯುತ್ತಿದೆ.

(ಅ) ಶಂಕರನಾರಾಯಣ ಭಟ್ಟ: ೧೯೮೫, ಅನ್ನಪ್ರಾಶನ ಸಂಸ್ಕಾರ, ಸನಾತನ ಸಂಸ್ಕಾರಗಳು.

(ಆ) Rajbali Pandey, " Hindu Samskras, Socio-Religious Study of The Hindu Sacrraments", ೧೯೮೭, page-೯೦.

೧೫. ರಸಿಕಪುತ್ತಿಗೆ: ೧೯೮೭, ಆಚಾರಗಳು, ನಂಬಿಕೆ ಮತ್ತು ನಡವಳಿಕೆ, ಪುಟ-೧೧೮.

೧೬. ವೈದ್ಯಗುರು ಎಮ್.ಆರ್. ಭಟ್ಟ (ಅನು) ಸುಶ್ರುತ ಸಂಹಿತಾ ಪುಟ-೧೧೮

೧೭. ಅದೇ, ಪುಟ-೧೨೦.

೧೮. ತಿಳುವಳಿಕೆದಾರರು, ಶ್ರೀ ಜಗದೀಶ ಅಚಾರ್ಯ, ಶ್ರೀ ದುರ್ಗಾಜ್ಯುಡೆಲ್ಲರ್ಸ್, ಗಣೇಶಪುರ ಕಾಟಪಳ್ಳ

೧೯. ತಿಳುವಳಿಕೆದಾರರು, ಶ್ರೀ ರುಕ್ಕಯ್ಯ ನಾಯ್ಕ ಪ್ರಾಯ ೮೪, ಮರಕಡ ಮಂಗಳೂರು (ಮಹಾಮ್ಮಾಯಿ ದೇವರ ದರ್ಶನ ಪ್ರಾತಿ).

೨೦. ೨೦ ರಿಂದ ೨೩ ಕೃತಿಗಳಲ್ಲಿ ಹೆಚ್ಚಿನ ಮಾಹಿತಿ ಇರುವುದು.

Abbe. J. A. Dubois, ೧೯೦೬, Hindu Monury and Customs. .
Bhattacharya N N, 1968," Indian Puberty Rites",
Srinivas M. N. 1965, Religion and Society Among the Coorgs of South India P-೮೧.

೨೩. ತಿಳುವಳಿಕೆದಾರರು ಶ್ರೀ ಬಾಬು ನಾಯ್ಕ ಗುರುಪುರ ಮಂಗಳೂರು ತಾಲೂಕು.

೨೪. ಹೆಚ್ಚಿನ ವಿವರಗಳಿಗಾಗಿ ವಿವೇಕ ರೈ, ತುಳು ಜಾನಪದ ಸಾಹಿತ್ಯ, ಅಮೃತ ಸೋಮೇಶ್ವರ, "ತುಳು ಬದುಕು-ಕೆಲವು ಮುಖಗಳು ಮತ್ತು ತುಳು ಜಾನಪದ ಕೆಲವು ನೋಟಗಳು.

೨೫. ತಿಳುವಳಿಕೆದಾರರು, ಪಕೀರ ನ್ವಾಕ(ಮೇಸ್ತ್ರಿ) ಕಾರ್ಕಳ ಹಿರಿಯಂಗಡಿ, ದುರ್ಗಾಯಲಯ

೨೬. ತಿಳುವಳಿಕೆದಾರರು, ಶ್ರೀಧರ ನಾಯ್ಕ-ಹಟ್ಟಿಯಂಗಡಿ, ಕುಂದಾಪುರ ಶ್ರೀನಿವಾಸ ಮರಾಟಿ, ಜನ್ನಾಲೆ, ಕಂಡ್ಲೂರು ಕುಂದಾಪುರ ತಾಲೂಕು

೨೭ ಈ ಕ್ರಿಯಾ ವಿಧಿಯನ್ನು ಅವಲೋಕಿಸಿರುವುದು

೧. ಶ್ರೀ ಕಟೀಲು ದುರ್ಗಾ ಪರಮೇಶ್ವರೀ ದೇವಸ್ಥಾನದಲ್ಲಿ

೨. ಶ್ರೀ ಕ್ಷೇತ್ರ ಗಣೇಶಪುರ ಮಹಾ ಗಣಪತಿ ದೈವಸ್ಥಾನ ಕಾಟಿಪಳ್ಳ
ಹೆಚ್ಚಿನ ಮಾಹಿತಿಗಾಗಿ

೧. Rajbali Pandey, ೧೯೮೭, " Hindu Samskras, Socio-Religious Study of The Hindu Sacrraments", page-೧೦೮

೨. ಅದೇ ಪುಟ-೩೬,

೨೮. ತಿಳುವಳಿಕೆದಾರರು, ಶ್ರೀ ನರಸಿಂಹ ಉಪಾಧ್ಯಾಯ: ಪ್ರಧಾನ ಅರ್ಚಕರು, ಕಾಟಿಪಡಿ-ಕೈಕಂಬ ಶ್ರೀ ಸುನೀಲ್ ಭಟ್ಟ, ಪ್ರಧಾನ ಅರ್ಚಕರು, ಶ್ರೀಕ್ಷೇತ್ರ ಗಣೇಶಪುರ

೨೯. Bhattacharya N N, 1968," Indian Puberty Rites", page-೦೬-೦೮,

೩೦. ಚೆಡುನಾವ್ ನಾಲ್ಗೆ: (ಮರಾಠಿ ಕೊಂಕಣಿ ಭಾಷೆ) ಹೆಣ್ಣು ಜೀವನದಲ್ಲಿ ಮೊಟ್ಟ ಮೊದಲ ಬಾರಿಗೆ ರಜೋದರ್ಶನವಾಗುವುದು.

೩೧. ಪೊಣ್ಣು ಪೊಂಜೋವ್ ಆಯೋಲು ಪೋನ್ನು ಪೊಣ್ಜೇವಾಯಲ್ ಹೆಣ್ಣುತನದ ಶಾಸ್ತ್ರ/ ಕ್ರೀಯೋಚರಣೆ. ಮದಿಮೊಲಮದ್ಯೆ-ಹೆಣ್ಣು ಹೆಂಗಸಳಾದ ಸಂದರ್ಭ ಮಾಡುವ ಕ್ರಿಯೊಚರಣೆ.

೩೨. ತಿಳುವಳಿಕೆದಾರರು, (ಅ) ಪದ್ಮ ಬ್ವಾ ಪ್ರಾಯ ೭೨, ಶಂಕರನಾರಾಯಣಕುಂದಾಪುರ

(ಆ)ಶ್ರಿಮತಿ ಸುಲೋಚನಾ ಗಣಪತಿ ನಾಯ್ಕ, ಶಂಕರನಾರಾಯಣ ಕುಂದಾಪುರ.

೩೩. ಗಣಪತಿ ಸುತ್ಯೆ, ಮಹಾ ಗಣಪತಿ ದೇವರ ಸಂಕೇತವೆಂದು ಬಾವಿಸಿ. ಒಂದು ಎಲೆ ಅಥವಾ ಹರಿವಾಣದಲ್ಲಿ ಬೆಳ್ತಕ್ಕಿ, ತೆಂಗಿನಕಾಯಿ, ಬೀಳ್ಳದೆಲೆ, ಅಡಿಕೆ, ಹೂವು ಇಡುವ ಕ್ರಿಯಾಚರಣೆ,

೩೪. ತಿಳುವಳಿಕೆದಾರರು, ಶ್ರೀಮತಿ ಗಂಗುಬ್ಯಾ ಅಜ್ಜರಕಾಡು, ಉಡುಪಿ

೩೫. ತಿಳುವಳಿಕೆದಾರರು, ಶ್ರೀಮತಿ ಅನ್ನಪೋಣೇಶ್ವರಿ ನಾಯಕ್‌ದೊಡ್ಡಣಗುಡ್ಡೆ, ಉಡುಪಿ, ಪೂರಕ ಮಾಹಿತಿ–ಶ್ರೀ ಸುನಿಲ್ ಭಟ್, ಪ್ರಧಾನ ಅರ್ಚಕರು, ಶ್ರೀಮಹಾಗಣಪತಿ ದೇವಸ್ಥಾನ–ಕಾಟಿಪಳ **ಕಂಶಸ್ನಾನ:** ನಿರ್ದಿಷ್ಟವಾದ ಶುಭಮುಹೂರ್ತ ದಿನದಂದು, ಹಾಗೂ ಫಳಿಗೆಯಲ್ಲಿ ಪುಣ್ಯಹ: ತೀರ್ಥದಿಂದ ಸಾಂಕೇತಿಕವಾಗಿ ಸನಾನ ಮಾಡುವುದು ಋತು ಶಾಂತಿಹೋಮ ಮಾಡಿ.

೩೬. ವಿವೇಕ ರೈ, ೧೯೮೫, ತುಳು ಜಾನಪದ ಸಾಹಿತ್ಯ, ಪುಟ– ೧೨೫.

೩೭. ನಂಜಮಣ್ಣಿ ಎಂ., ೧೯೭೧, ಸಾಮಾಜಿಕ ಮಾನವಶಾಸ್ತ್ರ, ಪುಟ, ೭–೮,

೩೮. ಪೂಸೀರೆ ಕೊರ್ಪುನಿ.

೩೯. ತಿಳುವಳಿಕೆದಾರರು ಕೋಳಿ ಬಿಡುವ ಆಚರಣೆ ಕುರಿತು: ಶ್ರೀ ಚಂದ್ರನಾಯ್ಕ, ಗುಡ್ಡೆಅಂಗಡಿ, ನಾಟೆಕಲ್ಲು, ಉಳಿಯ ಕಕ್ಕೆ ಪದವು ಇವರು. ಮಾಹಿತಿ ನೀಡಿರುವವರು.

೪೦. ತಿಳುವಳಿಕೆದಾರರು, ಶ್ರೀ ನಾರಾಯಣ ನಾಯ್ಕ

೪೧. ತಿಳುವಳಿಕೆದಾರರು: ಶ್ರೀಮತಿ ಹರ್ಷಿಕಾ, ಪ್ರಾಧ್ಯಾಪಕರು, ಭಂಡಾರ್‌ಕಾರ್ಸ್ ಕಾಲೇಜು, ಕುಂದಾಪುರ.

೪೨. ತಿಳುವಳಿಕೆದಾರರು, ಕಾರ್ಕಳ ಮರಾಟಿ ಸಮುದಾಯದವರ ಆಡಳಿತ ಮೋಕ್ತೆಸರ ಮತ್ತು ಸದಸ್ಯರು

ಶ್ರೀ ಸಂತೋಷರಾವ್, ಕಾಳಿಕಾಂಬಾ ದೇವಸ್ಥಾನದ ಹತ್ತಿರ, ಕಾರ್ಕಳ,

ಶ್ರೀ ಪಾಂಡುರಂಗ ಮುಲ್ಕಿ, ಅಚಾರಿಬೆಟ್ಟು, ಮುಲ್ಕಿ ಹೇಬಳಿ, ಮಂಗಳೂರು

ಶ್ರೀ ರಮನಾಥ ರಾವ್ ಕಾಕಣ್ಣಿ, ಹಿರಿಯಂಗಡಿ, ಉಡುಪಿ ಜಿಲ್ಲೆ

೪೩. ಕಾಸರಕನ ಮರ: ಕರಾವಳಿ ಕರ್ನಾಟಕದಲ್ಲಿ ವಾಸವಿರುವ ತುಳು ಸಮುದಾಯದವರು ಈ ಮರಕ್ಕೆ 'ಕಾಯೆರು' ಎಂಬುದಾಗಿ ಕರೆಯುತ್ತಾರೆ. ಉಡುಪಿ ಜಿಲ್ಲೆಯ ದಕ್ಷಿಣಭಾಗದಲ್ಲಿ ಜನರು ಆಷಾಢ ತಿಂಗಳು ಮತ್ತು ಕುಂದಾಪುರ ಸುತ್ತಮುತ್ತಲಿನ ಸಮುದಾಯದವರು 'ಅಸಾಡಿ' ಎಂಬುದಾಗಿ ಕರೆಯುತ್ತಾರೆ (ಜುಲೈ, ಆಗಸ್ಟ್). ಸಾಮಾನ್ಯವಾಗಿ ಈ ಕಾಲದಲ್ಲಿ ಮನುಷ್ಯರಿಗೆ ಮತ್ತು ಬೆಳೆಗಳಿಗೆ ರೋಗ ಬರುವುದು. ಇದರ ನಿವಾರಣೆಗಾಗಿ ಕರಾವಳಿಯಲ್ಲಿ ಕೆಲವು ಸಂಪ್ರದಾಯಗಳನ್ನು ಆಚರಿಸುವ ಸಂದರ್ಭದಲ್ಲಿ ಕಾಸರಕನ ಮರ, ಎಲೆ ಇವುಗಳನ್ನು ಉಪಯೋಗಿಸುತ್ತಾರೆ.ಈ ತಿಂಗಳಲ್ಲಿ ಬರುವ ಅಮವಾಸ್ಯೆಯ ಬೆಳಗಿನ ಜಾವ ಭತ್ತದ ಗದ್ದೆಗೆ ಈ ಗಿಡದ ರೆಂಬೆಗಳನ್ನು ನೆಡುತ್ತಾರೆ. ಈ ರೆಂಬೆ ನೆಡುವ ಕ್ರಿಯೆಗೆ 'ಕಾಪು' (ರಕ್ಷಣೆ) ಎನ್ನಲಾಗುತ್ತದೆ. ಈ ರೀತಿ ಮಾಡುವುದರಿಂದ ಬೆಳೆಗೆಗಳಿಗೆ ಆವರಿಸಿರುವ ಹುಳದ ಕಾಟವನ್ನು ರಕ್ಷಿಸುತ್ತದೆ. ಜನಪದೀಯರು ಕಾಯೆರ್ ರೆಂಬೆ ನೆಡುವುದರಿಂದ ಸಮೃದ್ಧಿಯನ್ನು ತರುತ್ತದೆ ಎಂದು ನಂಬುವರು.

೪೪. ಹಾಳೆಮರ: ಸಂಸ್ಕೃತ ಭಾಷೆಯಲ್ಲಿ ಇದನ್ನು ಸಪ್ತವರ್ಣಿಮರ ಎಂದು ಕರೆಯುತ್ತಾರೆ. ಕರ್ಕಾಟಕ ಮಾಸ (ಆಷಾಢ ತಿಂಗಳು) ತುಳುವಿನಲ್ಲಿ ಆಟಿ ಕುಂದಾಪುರ ಭಾಷೆಯಲ್ಲಿ ಆಸಾಡಿ ಎಂದು ಕರೆಯುತ್ತಾರೆ. ಈ ತಿಂಗಳ ಅಮವಾಸ್ಯೆಯಂದು ಅನೇಕ ರೀತಿಯ ಔಷಧೀಯ ಅಂಶಗಳು ಇದರಲ್ಲಿ ಸೇರಿರುತ್ತದೆ ಎಂದು ಕರಾವಳಿಯ ಜನಪದರು ನಂಬುತ್ತಾರೆ. ಈ ಮರವು ಬ್ರಾಹ್ಮಣರು ಮತ್ತು ಬ್ರಾಹ್ಮಣೇತರ ಸಮುದಾಯದವರಿಗೆ ಪವಿತ್ರವಾಗಿದೆ. ಈ ಮರ ದುಷ್ಟಶಕ್ತಿಯನ್ನು ನಿಗ್ರಹಿಸುವ

ಸಾಮರ್ಥ್ಯ ಹೊಂದಿದೆ ಎಂದು ನಂಬುತ್ತಾರೆ. ಆದ್ದರಿಂದ ಜನಪದರು ಪ್ರೇತ ಪಿಶಾಚಿ ದುಷ್ಟಶಕ್ತಿಗಳನ್ನು ಬಂಧಿಸಿ ಹಾಳೆಮರದ ಬುಡದಲ್ಲಿ ಹೂತಿಡಲು ಈ ಮರವನ್ನು ಆಶ್ರಯಿಸುತ್ತಾರೆ. ಹೆರಿಗೆಯ ಸಂದರ್ಭದಲ್ಲಿ ತಾಯಿ ಮಗುವಿನ ಹೊಕ್ಕಳಬಳ್ಳಿ (ಶಿಶುವಿನ ನಾಳ ಮತ್ತು ಗರ್ಭಾಂಗು) ಇತ್ಯಾದಿ ವೈರಿಯ ಕೈಗೆ ಸಿಕ್ಕಿದ್ದಲ್ಲಿ ವೈರಿಯು ಮಂತ್ರವಾದಿಯ ಸಹಕಾರದಿಂದ ಮಾಟಮಂತ್ರ ಮಾಡುತ್ತಾನೆಂದು ಹಾಳೆ ಮರದ ಬುಡದಲ್ಲಿ ಹೂಳುವರು. ಮದುವೆಯ ಸಮಯದಲ್ಲಿ ಮಕರ ತೋರಣ ರಚಿಸಲು ದೀಪಾವಳಿ ಸಂದರ್ಭದಲ್ಲಿ ಬಲೀಂದ್ರ ಆರಾಧನೆಗಾಗಿ, ಸುದರ್ಶನ ಹೋಮದ ಸಂದರ್ಭದಲ್ಲಿ ದುಷ್ಟಶಕ್ತಿಗಳನ್ನು ಬಂಧಿಸಿಡಲು ಹಾಳೆಮರವನ್ನು ಉಪಯೋಗಿಸುತ್ತಾರೆ. ಈ ಮರ ಬಿಳಿಯ ಹಾಲಿನಂತಹ ರಸವನ್ನು ಸುರಿಸುವುದರಿಂದ ಔಷಧೀಯ ಗುಣವುಳ್ಳ ಮತ್ತು ವೃದ್ಧಿಯ ಸಂಕೇತ, ಸಂತಾನ ಸೂಚಕ, ದುಷ್ಟಶಕ್ತಿ ನಿವಾರಕ ಪವಿತ್ರ ಮರವಾಗಿದೆ.

೪೫. ತುಲಾಭಾರ: ಸಂತಾನಭಾಗ್ಯ, ಗ್ರಹಚಾರ, ರೋಗನಿವಾರಾಣರ್ಥವಾಗಿ ಹೇಳುವ ಹರಕೆಗಳು, ಹರಕೆ ಹೇಳಿಕೊಂಡಿರುವನಷ್ಟೇ ಭಾರವಿರುವ ವಸ್ತುಗಳಲ್ಲಿ ದೇವರ ಸನ್ನಿಧಿಯಲ್ಲಿ ತೂಕಮಾಡುವುದು(ಅಕ್ಕಿ, ಬೆಲ್ಲ, ಎಣ್ಣೆ, ತೆಂಗಿನಕಾಯಿ, ನಿಯೊಳ ಇತ್ಯಾದಿ ವಸ್ತುಗಳಿಂದ)

೪೬. ಅಶ್ಲೇಷ ಬಲಿ: ಗ್ರಹಚಾರ ವಿವಾರಣೆ, ಚರ್ಮವಾಧಿ ನಿವಾರಣೆಗಾಗಿ ನಡೆಸುವ ಸೇವೆ ಅಥವಾ ಹರಕೆ, ಅಶೇಷವಾದ ನಾಗ ಸಂತತಿಯನ್ನು ಕರೆದು ಬಲಿ ಪ್ರದಾನಮಾಡಿ ಪೂಜಿಸುವುದಕ್ಕೆ ಅಶ್ಲೇಷ ಬಲಿ.

೪೭. ನಾಗ ಸಂಸ್ಕಾರ: ಇದನ್ನು ಸರ್ಪ ಸಂಸ್ಕಾರ ಎಂಬುದಾಗಿಯೂ ಕರೆಯುತ್ತಾರೆ. ಮೃತ ಸರ್ಪದ ಅಪರ ಸಂಸ್ಕಾರ ರೂಪದ ಕ್ರಿಯಾಚಾರಣೆ,

೪೮. ನಾಗ ಮಂಡಲ: ನಾಗಾರಾಧನೆಯ ಬೇರೆ ಬೇರೆ ಪ್ರಕಾರಗಳಲ್ಲಿ ನಾಗಮಂಡಲವೂ ಒಂದು, ವೈಭಯುತವಾಗಿ ನಡೆಯುವ ಆಚರಣೆಯಾಗಿದೆ. ಈ ಆರಾಧನೆಯನ್ನು ಕುಂದಾಪುರ ಪ್ರದೇಶದಲ್ಲಿ ಹೊಡಿ(ಹುಡಿ) ಸೇವೆ ಅಥವಾ ಮಂಡ್ಲ ಭೋಗ ಅಥವಾ ಮಂಡಲ ಸೇವೆ ಎಂಬುದಾಗಿ ಕರೆಯುತ್ತಾರೆ.ಹೆಚ್ಚಿನ ವಿವರಕ್ಕಾಗಿ, ಡಾ. ಎ. ವಿ. ನಾವಡ: ಕರಾವಳಿ ಕರ್ನಾಟಕದ ನಾಗಾರಾಧನೆ.

೪೯. ಹೊಸ್ತು: ತುಳು–ಪುಡ್ದಾರ್, ಇಲ್ಲ್ ಹಿಜಾವುದಿ ಕುಂದಾಪುರ ಸುತ್ತ ಮುತ್ತ ಪ್ರದೇಶದಲ್ಲಿ 'ತೆನೆಕಟ್ಟುವ ಹಬ್ಬಕ್ಕೆ' ಹೊಸ್ತು ಎಂದು ಕರೆಯುತ್ತಾರೆ.

೫೦. ತಿಳುವಳಿಕೆದಾರರು, ಶ್ರೀಮತಿ ಜಾನಕಿ ನಾಯ್ಕ, ಬಸ್ರೂರು, ಜನತಾಕಾಲೋನಿ,ಕುಂದಾಪುರ

೫೧. ತಿಮರೆ: ತಿಮರೆ: ಬೇಸಾಯದ ಗದ್ದೆಗಳ ಅಂಚಿನಲ್ಲಿ (ಪುಣಿ) ತೆಳುವಾದ ಚಿಕ್ಕ ಚಿಕ್ಕ ಎಲೆಗಳನ್ನು ಹೊಂದಿರುವ ನೂಲಿನಂತಿರುವ ಬಳ್ಳಿಯಲ್ಲಿ ಬೆಳೆಯುವ ಸಸ್ಯಜಾತಿ. ಇದನ್ನು "ಬ್ರಾಹ್ಮಿ" ಎಂತಲೂ ಮತ್ತು "ಒಂದೆಲಗ" ಎಂದೂ ಕರೆಯುವರು. ಸ್ಮರಣಶಕ್ತಿಗೆ ಇದು ತುಂಬಾ ಸಹಕಾರಿ ಎನಿಸಿದ ಸಸ್ಯ

೫೨. ಪುಣ್ಯಜಲ ಅಥವಾತೀರ್ಥ, ತಿಳುವಳಿಕೆದಾರರು: ಶ್ರೀ ಪದ್ಮನಾಭ ಭಟ್, ಅರ್ಚಕರು, ಕಾವೇರಿತೀರ್ಥೋದ್ಭವ ಸನ್ನಿಧಿ

೫೩. ಗೋಪೂಜೆ ಮತ್ತು ಬಲೀಂದ್ರಆರಾಧನೆ: ಶ್ರೀ ಪಾಂಡುರಂಗ, ಮರಾಟಿ ಸಮುದಾಯದ ಸಾಮಾಜಿಕಕಾರ್ಯಕರ್ತ, ಮುಲ್ಕಿ ಅಂಚೆ ಕಛೇರಿ ನೌಕರರು, ಮುಲ್ಕಿ ಇವರ ಮನೆಯಲ್ಲಿ ಬಲೀಂದ್ರನ ಆರಾಧನೆ, ಗೋಪೂಜೆ, ಅವಲೋಕಿಸಿರುವುದು.

೫೪. ತಿಳುವಳಿಕೆದಾರರು ಶ್ರೀ ಚಂದ್ರ ಶೇಖರ ಸುವರ್ಣ, ಮಾಲಕರು, ಸುವರ್ಣ ಆರ್ಟ್ಸ್, ಮುಲ್ಕಿ

ಅಧ್ಯಾಯ : ನಾಲ್ಕು.....

ಮರಾಟಿ ಸಮುದಾಯಗಳಲ್ಲಿ ಕುಲಬಳಿ ಪದ್ಧತಿ

ಅಧ್ಯಾಯ : ನಾಲ್ಕು
ಮರಾಟಿ ಸಮುದಾಯಗಳಲ್ಲಿ ಕುಲಬಳಿ ಪದ್ಧತಿ

ಪೀಠಿಕೆ

ಒಂದು ಸಮುದಾಯದ ಸಂಸ್ಕೃತಿಯನ್ನು ಗುರುತಿಸುವಲ್ಲಿ ಬಳಿಗಳು ಮುಖ್ಯ ಪಾತ್ರವಹಿಸುತ್ತವೆ. ಸಮುದಾಯದ ಸಂಸ್ಕೃತಿ ರೂಪಗೊಳ್ಳುವಲ್ಲಿ ಬಳಿಗಳು ಅವಶ್ಯವಾಗಿವೆ. ಮರಾಟಿ ಮತ್ತು ಮರಾಟಿ ನಾಯ್ಕ ಕುಡುಬಿ, ಕುಣುಬಿ ಹೀಗೆ ಪ್ರತಿಯೊಂದು ಮನೆತನವೂ ತನ್ನದೇ ಆದ ಒಂದು ಬಳಿಯನ್ನು ಹೊಂದಿರುತ್ತದೆ. ಆ ಬಳಿಗಳು ಸೃಷ್ಟಿಯಾಗಬೇಕಾದರೆ ತನ್ನದೇ ಆದ ವಿಶಿಷ್ಟ ಹಿನ್ನೆಲೆಯನ್ನು ಹೊಂದಿರುತ್ತವೆ. ಬಳಿಗಳ ಮೂಲಕವೇ ಸಮುದಾಯದ ರಕ್ತ ಸಂಬಂಧಗಳನ್ನು ನಿರ್ಧರಿಸಲಾಗುತ್ತದೆ. ಕುಲ–ಬಳಿಗಳ ಆಧಾರದ ಮೇಲೆಯೇ ವಿವಾಹ, ಮನೆದೇವರು, ವೃತ್ತಿ, ಸಂಸ್ಕೃತಿ, ಮೂಲ ಪುರುಷ, ಇತಿಹಾಸ, ಆಚಾರ–ವಿಚಾರಗಳು ಬೆಳೆದುಕೊಂಡು ಬಂದಿರುತ್ತವೆ. ಪ್ರಾಚೀನ ಕಾಲದಿಂದಲೂ ಕುಲ, ಬಳಿಗಳು ಪ್ರಚಲಿತದಲ್ಲಿರುವುದನ್ನು ಕಾಣುತ್ತೇವೆ.

ಮರಾಟಿ ಮತ್ತು ಮರಾಟಿ ನಾಯ್ಕ ಇವರಲ್ಲಿ ತಂದೆಯ ವಂಶದ (ಬಳಿಯ) ಮೂಲಕವೇ ರಕ್ತ ಸಂಬಂಧವನ್ನು ಗುರುತಿಸಿಕೊಳ್ಳುತ್ತಾರೆ. ಮುಖಾಮುಖಿ ನೇರ ಸಂಬಂಧಗಳನ್ನು ಹೊಂದಿರುವ ಸಮೂಹದವರನ್ನು ಪ್ರಾಥಮಿಕ ರಕ್ತ ಸಂಬಂಧಿಗಳು ಎಂದು ಕರೆಯುವರು. ಪ್ರಾಥಮಿಕ ಬಂಧುಗಳು ರಕ್ತ ಸಂಬಂಧಿಕರಾಗುತ್ತಾರೆ. ಒಂದೇ ಕುಲ ಅಥವಾ ಬಳಿಯವರು ಯಾವುದೇ ಪ್ರದೇಶದಲ್ಲಿ ವಾಸಿಸುತ್ತಿದ್ದರೂ ಅವರು ರಕ್ತ ಸಂಬಂಧಿಗಳಾಗಿರುತ್ತಾರೆ ಎಂಬ ತಿಳುವಳಿಕೆ ಈ ಸಮುದಾಯಗಳಲ್ಲಿದೆ. ಪುರುಷನ ಸಂತತಿಯ ಆಧಾರದ ಮೇಲೆ ಕುಲ, ಬಳಿ, ಗೋತ್ರ, ಮನೆತನವನ್ನು ಗುರುತಿಸಲಾಗುವುದು. ಅಣ್ಣ–ತಮ್ಮ, ಅಕ್ಕ–ತಂಗಿ, ಅಜ್ಜ–ಅಜ್ಜಿ, ಚಿಕ್ಕಪ್ಪ, ದೊಡ್ಡಪ್ಪ, ಚಿಕ್ಕಮ್ಮ–ದೊಡ್ಡಮ್ಮ ಮುಂತಾದವು ಒಂದೇ ರಕ್ತ ಸಂಬಂಧಿಗಳು ಎನ್ನಿಸಿಕೊಳ್ಳುತ್ತವೆ.

ದಕ್ಷಿಣ ಭಾರತದ ದ್ರಾವಿಡ ಸಮುದಾಯಗಳಲ್ಲಿ ಬಹುತೇಕ ಆದಿವಾಸಿ ಸಂಸ್ಕೃತಿಯ ಕುರುಹುಗಳಿವೆ. ಬಳಿ ಅಥವಾ ಬರಿ ಎನ್ನುವುದು ದ್ರಾವಿಡ ಭಾಷೆಯ ಪದವಾಗಿದೆ. ಇದಕ್ಕೆ ಇಂಗ್ಲೀಷ್‌ನಲ್ಲಿ Clan (ಕುಲ) ಎನ್ನುತ್ತಾರೆ. ಬರಿಯು ಜಾತಿ ವ್ಯವಸ್ಥೆಗಿಂತಲೂ ಹಿಂದಿನದು. ಜಾತಿಯ ಉಗಮ ವೃತ್ತಿಯ ಹಿನ್ನೆಲೆಯಿಂದ ಬಂದಿರುವುದು ಎಂದರೆ ವರ್ಣ ವ್ಯವಸ್ಥೆಯ ನಂತರ ಹುಟ್ಟಿಕೊಂಡಿರುವುದು. ಮೂಲನಿವಾಸಿಗಳಿಗೆ ಜಾತಿಧರ್ಮವಿಲ್ಲ. ಅವರನ್ನು ಬುಡಕಟ್ಟು ಜನ, ಆದಿವಾಸಿಗಳು, ವನವಾಸಿಗಳು, ಮೂಲನಿವಾಸಿಗಳು ಎಂದು ಕರೆಯಲಾಗಿದೆ. ಮಹಾತ್ಮಗಾಂಧಿಯವರು ಇವರನ್ನು ಗಿರಿಜನ ಎಂದು ಕರೆದರು. ದ್ರಾವಿಡರು ಆದಿವಾಸಿಗಳಾಗಿದ್ದ ಸಂದರ್ಭದಲ್ಲಿ ಒಂದೇ ಕುಟುಂಬವಾಗಿ ವಾಸಿಸುತ್ತಿದ್ದರೆಂದು

ಅಧ್ಯಯನಗಳು ಹೇಳುತ್ತವೆ. ಒಂದೇ ಕುಟುಂಬದಲ್ಲಿರುವವರು ರಕ್ತಸಂಬಂಧಿಗಳಾಗಿರುವುದರಿಂದ ಅವರ ಮಧ್ಯೆ ವಿವಾಹವಾಗಬಾರದೆಂಬ ಕಾರಣಕ್ಕಾಗಿ ಬಳಿ ಅಥವಾ ಬರಿಯನ್ನು ಆದಿವಾಸಿಗಳ ಪೂರ್ವಜರು ಹುಟ್ಟು ಹಾಕಿದರು. ಇದು ವಿಶೇಷವಾಗಿ ಅಳಿಯ ಸಂತಾನದ ಸಮುದಾಯಗಳಲ್ಲಿ ಕಂಡುಬರುತ್ತದೆ. ಇಂದಿಗೂ ಬಳಿಯು ವೈವಾಹಿಕ ನಿರ್ಬಂಧವನ್ನೇ ಹೇರುತ್ತದೆ. ಜಾತಿಯಲ್ಲಿ ಒಳಬಾಂಧವ್ಯವಾದರೆ ಬಳಿಯ ಹೊರಬಾಂಧವ್ಯವನ್ನು ಕಾಪಾಡಬೇಕು.

ಖ್ಯಾತ ಇತಿಹಾಸಕಾರ ಪಾದೂರು ಗುರುರಾಜ ಭಟ್ ಅವರು ತನ್ನ 'ತುಳುನಾಡಿನ ಇತಿಹಾಸ ಮತ್ತು ಸಂಸ್ಕೃತಿ' (೧೯೭೫) ಎಂಬ ಸಂಶೋಧನಾ ಪ್ರಬಂಧದಲ್ಲಿ ತುಳುನಾಡಿನ ೪೨ ಬರಿಗಳನ್ನು ಪಟ್ಟಿ ಮಾಡಿದ್ದಾರೆ. ಬೆಂಗಳೂರಿನ ಇಂದಿರಾ ಹೆಗ್ಡೆ ತಮ್ಮ ಪಿಎಚ್.ಡಿ. ಸಂಶೋಧನಾ ಪ್ರಬಂಧದಲ್ಲಿ ೬೧ ಬರಿಗಳನ್ನು ವಿಶ್ಲೇಷಣೆ ಮಾಡಿದ್ದಾರೆ. ಅವುಗಳಲ್ಲಿ ೫೫ ಬರಿಗಳು ಶಿಲಾ ಶಾಸನಗಳಲ್ಲಿ ದಾಖಲಾಗಿವೆ ಎಂದು ವರದಿ ಮಾಡಿದ್ದಾರೆ.

ಮರಾಟಿ ಸಮುದಾಯಗಳಾದ ಮರಾಟಿ ನಾಯ್ಕ, ಮರಾಟಿ ಮತ್ತು ಕುಡುಬಿ ಒಟ್ಟು ೩ ಸಮುದಾಯಗಳಲ್ಲಿ ಒಟ್ಟು ೪೫೦ ಕುಟುಂಬಗಳನ್ನು ಸಮೀಕ್ಷೆ ಮಾಡಿದ್ದು, ಬಳಿಗಳವಾರು ಹಂಚಿಕೆ ಮಾಡಿದ್ದು, ಬಳಿ ನೋಡುವುರ ಬಗ್ಗೆ ಅಭಿಪ್ರಾಯ ಸಂಗ್ರಹಿಸಿದ್ದು, ಬಳಿ ನೋಡಲು ಕಾರಣಗಳನ್ನು ಕೊನೆಗೆ ಅವುಗಳ ವೈಶಿಷ್ಟ್ಯವನ್ನು ಪಟ್ಟಿಮಾಡಿ ವಿಶ್ಲೇಷಿಸಲಾಗಿದೆ.

೪.೧. ಬಳಿ (ಬರಿ), ಬೆಡಗು, ಗೋತ್ರ (ಕುಲ, ವಂಶ) ಪರಿಕಲ್ಪನೆಗಳ ಅರ್ಥ)

ಬಳಿ, ಬರಿ (ತುಳುಪದ) ಕುಲ ಗೋತ್ರ ಮುಂತಾದ ಪದಗಳು 'ವಂಶದ ಅರ್ಥ'ವನ್ನು ಸೂಚಿಸುವ ಪದಗಳು ರೂಢಿಯಲ್ಲಿವೆ. ಬ್ರಾಹ್ಮಣೇತರರು ಕುಲ, ಬರಿ, ಬಳಿ, ವಂಶ, ಕುಳಿ ಎಂದು ಕರೆಯುತ್ತಾರೆ. ಬ್ರಾಹ್ಮಣರು 'ಗೋತ್ರ' ಎನ್ನುತ್ತಾರೆ. ವಿದ್ವಾನ್ ರಂಗನಾಥ ಶರ್ಮ ಅವರು ಗೋತ್ರ, ಕುಲ, ವಂಶ, ಬಳಿ, ಬರಿ, ಬೆಡಗು, ಕುಳಿ ಮುಂತಾದ ಎಲ್ಲಾ ಪದಗಳ ಅರ್ಥ ಒಂದೇ ಎನ್ನುತ್ತಾರೆ.

೪.೨. ಬರಿ / ಬಳಿ ಪದದ ಅರ್ಥ

'ಬರಿ' ಎಂಬುದು ತುಳು ಭಾಷೆಯ ಪದವಾಗಿದೆ. ಇದನ್ನು ಕನ್ನಡದಲ್ಲಿ 'ಬಳಿ' ಎನ್ನುವರು. ಬಳ್ಳಿ ಎಂಬುದರಿಂದ ಬಳಿ ಪದ ವ್ಯುತ್ಪತ್ತಿಯಾಗಿರಬೇಕು. "ಕುಟುಂಬದ ಒಳಗಿನ ಶಾಖೆಗಳನ್ನು ಗುರುತಿಸುವಾಗ ಈ ಶಾಖೆಯ ಮೂಲ ಹೆಸರು ಹೇಳಿ ಆಕೆಯ ಆತನ ನಂತರದವರಿಗೆ ಇರುವ ಬಂಧುತ್ವ ಅಥವಾ ಕೊಂಡಿಯನ್ನು ತಿಳಿಸಲು 'ಬರಿ' ಅಥವಾ 'ಬಳ್ಳಿ' ಎಂದಿರಬಹುದು. ಕಾಯಿಗೂ ಬಳ್ಳಿಗೂ ಅಥವಾ ಕಾಯಿಗೂ ಮರಕ್ಕೂ ಇರುವ ಕೊಂಡಿ"[೧]. ತುಳು ನಿಘಂಟುನಲ್ಲಿ 'ಬರಿ' ಎನ್ನುವ ಪದಕ್ಕೆ ಈ ರೀತಿ ಅರ್ಥವನ್ನು ನೀಡಿರುತ್ತಾರೆ. "ಬರಿ ಅಂದರೆ Bari, ಬಳಿ, ಕುಲ, ಗೋತ್ರ, ವಂಶ, descent, clam, lineage, race, family, kith and kin etc".[೨] ಕನ್ನಡದಲ್ಲಿ ಬಳಿ ಎಂಬುದಾಗಿ, ತಮಿಳು ಮತ್ತು ಮಲಯಾಳಂ "ವಲಿ" ಎಂಬುದಾಗಿ ಕರೆಯುವರು. "ಡಿ.ಕೆ. ಭಾರಧ್ವಾಜ್ ಅವರ 'Standard Dictionary'– ೨೦೦೭ ಯಲ್ಲಿ descending stop, way down, sinking in scale, sudden attack, lineage ಇಳಿತ, ಪತನ, ಅವನತಿ, ಇಳಿಕಲು, ಅವರೋಹಣ, ಥಟ್ಟನೆಯ ಆಕ್ರಮಣ, ಕುಲ, ಗೋತ್ರ, ಸಂತಾನ, ಸಂತತಿ, ವಂಶಾನುಪ್ರಾಪ್ತಿ, ವಂಶ ಎಂಬ ಅರ್ಥವನ್ನು ಕೂಡ ನೀಡಿದ್ದಾರೆ".[೩] "ತುಳು ನಿಘಂಟಿನಲ್ಲಿ 'ಬರಿ' ಎಂಬ ಶಬ್ದಕ್ಕೆ ಸಂಬಂಧಿಸಿದಂತೆ ಬಳಕೆಯಲ್ಲಿರುವ ಕೆಲವು ಪದಗಳು ಶಬ್ದಗಳು ಈ ರೀತಿಯೂ ಇರುತ್ತವೆ. ಬರಿಕುಂಟು –(Bari Kuntu) ಮೃತ ವ್ಯಕ್ತಿಗೆ (ಹೆಣಕ್ಕೆ) ಆತನ

ಕುಟುಂಬದವರು ಬಿಳಿ ಬಟ್ಟೆ ಹೊದಿಸುವ ಆಚರಣೆ. ಮೃತನ ಕುಟುಂಬದ ಸದಸ್ಯರಿಗೆ (ಮಕ್ಕಳು) ಕುಟುಂಬದ ಹಿರಿಯರು ಮೃತದಿನದಂದು ಸಾಂಕೇತಿಕವಾಗಿ ಕುತ್ತಿಗೆಗೆ ಹಾಕುವ ಬಟ್ಟೆ".[೪]

'ಬರಿ' ಪದದ ಅರ್ಥವನ್ನು ನಾವು ಸೂಚ್ಯವಾಗಿ ಈ ರೀತಿ ಅರ್ಥೈಸಿಕೊಳ್ಳಬಹುದು. 'ಬರಿ', ಸೀಮೆ, ಎಲ್ಲೆ, ಗಡಿ ಬುಡಕಟ್ಟು ಸಮುದಾಯ ತಮ್ಮ ಆದಿ ಮೂಲವನ್ನು ತಮ್ಮ ಕೌಟುಂಬಿಕ ಸಂಬಂಧಗಳನ್ನು ಗುರುತಿಸಲು ಇಂತಹ ವ್ಯವಸ್ಥೆಯನ್ನು ಮಾಡಿಕೊಂಡಿದ್ದಾರೆ ಎನ್ನಬಹುದು. ತುಳುವರ ಸಾಂಸ್ಕೃತಿಕ ಅವನ್ಯತೆಯ ಸಂಕೇತಗಳಾಗಿರುವ ಪಾಡ್ಡನ ಹಾಗೂ ಗಾದೆಗಳಲ್ಲಿ ಕೂಡ 'ಬಳಿ' ಯ ಪ್ರಸ್ತಾಪ ಬರುತ್ತದೆ. ಅವು ಈ ಕೆಳಗಿನಂತಿವೆ.

- ಆನನ ಪೊಣ್ಣನ ಬರಿಬನ್ನ ಕೇಂಡೆರ್ – (ಗಂಡಿನ ಹೆಣ್ಣಿನ ಬಳಿ, ಕುಲ ಇತ್ಯಾದಿ ಕೇಳಿದರು)
- ಬರಿ ಬಂದ್ರ ಕೇನರಿಜ್ಜೆ, ಜಾತಿ ನೀತಿ ತೂಯರಿಜ್ಜ (ಕುಲಗೋತ್ರ ಕೇಳಲಿಕ್ಕಿಲ್ಲ, ಜಾತಿನೀತಿ ನೋಡಲಿಕ್ಕಿಲ್ಲ)
- ನೀರೆಂಕ್ಲು ಪರೊಡಾಂಡ ಬರಿ ಬಾಂದ್ರ ಪಣೊಡಕ್ಕೆ ತಮೆರಿನ್ ತೆರಿಯಾಡು (ನಾವು ನೀರು ಕುಡಿಯಬೇಕಾದರೆ ನೀವು ಕುಲಗೋತ್ರ ಹೇಳುಬೇಕು, ನಿಮ್ಮ ಹೊಣೆಗಾರರು ಯಾರೆಂದು ಹೇಳಬೇಕು)
- ಒಂಜೆ ಬರಿತಾಕ್ಲೆಗ್ ಮದ್ಮೆ ಬಲ್ಲಿ – (ಒಂದೇ ಗೋತ್ರ / ಬಳಿಯವರಿಗೆ ಮದುವೆ ಆಗ ಕೂಡದು.)
- ಬರಿ ತೂದು ಪೊಣ್ಣು ಕೊಂಡರೊಡು. ಬೆರಿ ಬೊಟ್ಟುದು ಎರುದಪ್ಪೊಡು (ಕುಲ ನೋಡಿ ಹೆಣ್ಣು ತರಬೇಕು ಬೆನ್ನು ತಟ್ಟಿ ಎತ್ತನ್ನು ಗದ್ದೆ ಹೂಳಬೇಕು.)
- ಸುಲಿ ತೂದು ಎರು ದೆತೊನೊಡು, ಬರಿ ತೂದು ಪೊದು ಮಲ್ಪೊಡು (ಸುಳಿ ನೋಡಿ ಎತ್ತು ತೆಗೆದುಕೊಳ್ಳಬೇಕು, ವಂಶ ನೋಡಿ ಹೆಣ್ಣು ತರಬೇಕು)

"ಬಳಿ ಪದ್ದತಿಯ ಆಚರಣೆಯ ಬಗ್ಗೆ ನಮಗೆ ಯಾವುದೇ ರೀತಿಯ ಲಿಖಿತ ಮಾಹಿತಿಗಳು ಕಂಡುಬರುವುದಿಲ್ಲ. ಆದರೂ ಭೂತಳ ಪಾಂಡ್ಯನು ಈ ಬಳಿ ಪದ್ಧತಿಯನ್ನು ಜಾರಿಗೆ ತಂದನೆಂದು ಐತಿಹ್ಯವಿದೆ. ಈ ಪದ್ದತಿಗೆ ರಾಜಕೀಯವಾಗಿ ಅಧಿಕೃತ ಮುದ್ರೆಯನ್ನು ಆತನು ನೀಡಿ ಬಳಿ ಪದ್ಧತಿಯನ್ನು ಸಾರ್ವತ್ರಿಕಗೊಳಿಸಿ ಸಮಾಜದ ಎಲ್ಲಾ ಸಮುದಾಯದವರೂ ಈ ಪದ್ಧತಿಯನ್ನು ಅನುಸರಿಸುವಂತೆ ಮಾಡಿದನು. ಬಳಿ ಪದ್ದತಿಯು ಹೊರ ಬಾಂಧವ್ಯ ವಿವಾಹ (Exogamy)"[೫]ಪದ್ಧತಿಯನ್ನು ಒಳಗೊಂಡಿದೆ. ಈ ಬಳಿ ಪದ್ಧತಿಯು ಬುಡಕಟ್ಟು ಕುಟುಂಬಗಳಲ್ಲಿ ಕಂಡು ಬರುವ ಪ್ರಾಚೀನ ಪದ್ಧತಿಯಾಗಿದೆ. ಕರಾವಳಿ ಪ್ರದೇಶದ ದಕ್ಷಿಣಕ್ಕೆ ಇರುವ ಸಮುದಾಯಗಳಾದ ಮುಗೇರ, ಮುಂಡಾಲ, ಬಾಕುಡ, ಮನ್ಸ, ಮೇರ, ಕೊರಗ, ನಲಿಕೆ ಮುಂತಾದ ಸಮುದಾಯಗಳಲ್ಲಿ ಕನಿಷ್ಟ ಹದಿನಾರು ಬಳಿಗಳು ಪ್ರಧಾನವಾಗಿರುತ್ತವೆ. ಮಾತೃವಂಶೀಯ ಕುಟುಂಬ ಪದ್ಧತಿಗಳನ್ನು ಇವರಲ್ಲಿ ಕಾಣಬಹುದು. ಬಳಿ ಎನ್ನುವುದು "ಒಂದು ಜಾತಿಯ ಒಳಗಡೆ ಇರುವ ಸಾಮಾಜಿಕ ರಕ್ತಸಂಬಂಧಿಗಳ ಬಂಧುತ್ವದ ಗುಂಪು ಎನ್ನಬಹುದು." ಇದು ಒಂದು ಕುಟುಂಬ ಅಥವಾ ವಂಶಾವಳಿಯೂ ಅಲ್ಲ. ಯಾಕೆಂದರೆ ಬೇರೆ ಬೇರೆ ಹೆಸರಿನ ಹಲವು ಬಳಿಗಳು ಒಂದು ಜಾತಿ ಎಂಬ ಕಕ್ಷೆಯ ಒಳಗಡೆ ಬರುತ್ತದೆ. ಕನಿಷ್ಟ ಎರಡು ಬಳಿಗಳು ಒಂದು ಕುಟುಂಬದ ಚೌಕಟ್ಟಿನ ಒಳಗೆ ಬರುತ್ತದೆ. ಜೊತೆಗೆ ಬಳಿಯು "ಕುಲ ಲಾಂಛನವನ್ನು" (Totemism) ಕೂಡ ಹೊಂದಿರುತ್ತದೆ.

೪.೩. ಬೆಡಗು

ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯಲ್ಲಿ ಬಳಿ ಅಥವಾ ತುಳು ಭಾಷಾ ಪದವಾದ ಬರಿ ಪ್ರಚಲಿತದಲ್ಲಿದ್ದರೆ, ಕರಾವಳಿ ಕರ್ನಾಟಕದ ಬುಡಕಟ್ಟು ಗುಣಲಕ್ಷಣವುಳ್ಳ ಸಮುದಾಯಗಳಲ್ಲಿ ಮಾತ್ರ

ಮೂಲೀಯ ಬಂಧುತ್ವದ ಪರಿಕಲ್ಪನೆಗೆ ಬೆಡಗು ಎಂದು ಕರೆಯುತ್ತಾರೆ. ಬ್ರಾಹ್ಮಣ ಕ್ಷತ್ರಿಯ ವಂಶದ ಸಮುದಾಯದವರು ಗೋತ್ರ ಎಂಬುದಾಗಿ ಕರೆಯುತ್ತಾರೆ. ಬೆಡಗು – ಬಳಿ ಪರಿಕಲ್ಪನೆಗಿಂತ ಭಿನ್ನವಾಗಿಲ್ಲ. ಬೆಡಗು ಎನ್ನುವ ಪದವು ಬುಡ, ಬಳ್ಳಿ, ಕುಲ ಮುಂತಾದ ಹೆಸರುಗಳಿಂದಲೂ ಕರೆಯಲಾಗುತ್ತದೆ. ಇದರ ಅರ್ಥ 'ಮೂಲ' ಎಂದಾಗುತ್ತದೆ. ಉತ್ತರ ಕನ್ನಡದ ಅನೇಕ ಸಮುದಾಯಗಳಲ್ಲಿ ಮಾತೃ ಮೂಲದ ವಂಶಪದ್ಧತಿಯಲ್ಲಿ ಹೆಣ್ಣಿನಿಂದಲೇ ಕುಲದ ಹೆಸರು ಮುಂದುವರಿಯುತ್ತದೆ. ಉದಾ: "ಹಸಲರಲ್ಲಿ ಬಳಿಗಳನ್ನು ಗೊತ್ತು ಮಾಡುವುದು ತಾಯಿ, ಸೋದರ ಮಾವ ಇವರ ಮೂಲಕ ಇವರಲ್ಲಿ ಇಪ್ಪತ್ಮೂರು ಬಳಿಗಳನ್ನು ಗುರುತಿಸಿದ್ದಾರೆ. ಬೆತ್ತ ಬಳಿ, ಆನೆ ಬಳಿ, ಶೇಂದಿ ಬಳಿ, ಕಿನ್ನಿಗೇರ್ ಬಳಿ, ಚಲ್ಯೇರ ಬಳಿ, ಕುಮುದೇನ ಬಳಿ, ಮದಮೇದನ ಬಳಿ, ನಾಡೇರ್ ಬಳಿ, ಶಿರಿನ ಬಳಿ, ಬಾಲೆ ಬಳಿ, ಗಂಗರ ಬಳಿ, ಹೊಲೇನ ಬಳಿ, ಕೊಳಗ ಬಳಿ, ದಂಡಿಗನ ಬಳಿ, ಶೆಟ್ಟಿ ಬಳಿ, ಹದಿಲಿಗೆ ಬಳಿ, ಕುಂದಲಿ ಬಳಿ, ಮಲ್ಲಿಗೆ ಬಳಿ, ಕಾಡಾಚಿ ಬಳಿ, ಕುಳ್ಳಿಗೆ ತೋಳನ ಬಳಿ, ಶಿವನ ಬಳಿ, ಕನ್ನೆ ಬಳಿ ಇತ್ಯಾದಿ"[೬]. ಗೊಂಡ ಸಮುದಾಯದಲ್ಲಿರುವ ಬಳಿಯನ್ನು ಈ ರೀತಿಯಾಗಿ ಗುರುತಿಸಬಹುದು. "ಅಜ್ಜರಬಳಿ, ಆನ್‌ಬಳಿ, ಸೆಟ್ಟಿ ಬಳಿ, ದೆವತ್ರಬಳಿ, ಸಿರಿನ್‌ಬಳಿ, ಹೊನ್‌ಬಳಿ, ತೊಳರ ಬಳಿ, ಗಂಗ್ರಬಳಿ, ಕಾಯಿ ಬಳಿ, ಮಲ್ಲಿಗೆ ಬಳಿ, ನಾಗ ಬಳಿ ಇತ್ಯಾದಿ ಹೆಸರುಗಳಿವೆ".[೭]

ಬೆಡಗುಗಳು ಸಾಮಾಜಿಕ ಸಂಘಟನೆಯನ್ನು ಬಿಗಿಯಾಗಿಡುವುದಕ್ಕೆ ಸಹಕಾರಿಯಾಗುತ್ತದೆ. ಇವು ನಾಗರಿಕ ಮತ್ತು ಸಂಸ್ಕೃತಿಯ ವಿಕಾಸದ ಚಾರಿತ್ರಿಕ ಹೆಜ್ಜೆ ಗುರುತುಗಳು. ಪ್ರಾಚೀನ ಕಾಲದಿಂದಲೂ ಮಾನವ ಆಚಾರ – ವಿಚಾರ, ನಂಬಿಕೆ – ನಿಷೇದ. ವಿಧಿ–ವಿಧಾನಗಳನ್ನು ಅನುಸರಿಸುತ್ತ ಬಂದಿದ್ದಾನೆ. ಪ್ರತಿಯೊಂದು ಮನೆತನದ ಚರಿತ್ರೆಯನ್ನು ಬೆಡಗುಗಳ ಮೂಲಕ ತಿಳಿದುಕೊಳ್ಳಬಹುದು. ಬುಡಕಟ್ಟು ಸಮುದಾಯಗಳು ತಮ್ಮ ರಕ್ತ ಸಂಬಂಧವನ್ನು ಏರ್ಪಡಿಸಿಕೊಳ್ಳಬೇಕೆಂದರೆ ಬೆಡಗು ಅಥವಾ ಬಳಿಗಳು ಮುಖ್ಯವಾಗಿರುತ್ತದೆ.

೪.೪. ಗೋತ್ರ

ಮಾತೃಪ್ರಧಾನ ವ್ಯವಸ್ಥೆ ಪ್ರಾಚೀನ ಕಾಲದ ಬಂಧುತ್ವ ವ್ಯವಸ್ಥೆಯಾದರೆ 'ಪಿತೃ ಪ್ರಧಾನ ವ್ಯವಸ್ಥೆಯು' ಆಧುನಿಕ ನಾಗರಿಕತೆಯ ಬೆಳವಣಿಗೆಯಾದಂತೆ ಪುರುಷ ಪ್ರಧಾನ ಸಮಾಜವೊಂದು ರೂಪಿಸಿದ ಬಂಧುತ್ವದ ರೂಪವಾಗಿದೆ. ಆದ್ದರಿಂದ ಗೋತ್ರವು ಪಿತೃಪ್ರಧಾನ ವ್ಯವಸ್ಥೆಯು ರೂಪಿಸಿದ ಬಂಧುತ್ವ ವ್ಯವಸ್ಥೆ. ಬಳಿ ಪದ್ಧತಿಯು ಪ್ರಾಣಿ ಪಕ್ಷಿ, ಪ್ರದೇಶ, ಅತಿಮಾನವ ಶಕ್ತಿಯ ಮೂಲದಿಂದ ಗುರುತಿಸಿರುವುದಾದರೆ ಗೋತ್ರ ಪದ್ಧತಿಯು ಮನುಷ್ಯ ಅಥವಾ ಋಷಿ ಮೂಲದಿಂದ ಬಂಧುತ್ವವನ್ನು ಗುರುತಿಸುವ ಪದ್ಧತಿಯಾಗಿದೆ.

ವಿದ್ವಾನ್ ರಂಗನಾಥ ಶರ್ಮರು ಗೋತ್ರದ ಬಗ್ಗೆ ಈ ರೀತಿಯಾಗಿ ತಿಳಿಸಿರುವರು. "ಧರ್ಮಶಾಸ್ತ್ರದ ಪ್ರಕಾರ ಋಷಿ ಮೂಲದ ಗೋತ್ರಗಳು ಒಟ್ಟು ಎಂಟು. ಸಪ್ತಋಷಿಗಳೂ ಹಾಗೂ ಆಗಸ್ತ್ಯ ಸೇರಿ ಎಂಟು ಮಂದಿಯಾಗುತ್ತಾರೆ. ವಶಿಷ್ಠ, ವಿಶ್ವಮಿತ್ರ, ಜಮದಗ್ನಿ, ಭಾರಧ್ವಾಜ, ಗೌತಮ, ಅತ್ರಿ, ಕಶ್ಯಪ ಇವರು ಸಪ್ತಋಷಿಗಳು. ಅಗಸ್ತ್ಯನೂ ಗೋತ್ರ ಪ್ರವರ್ತಕನಾದ್ದರಿಂದ ಒಟ್ಟು ಎಂಟು ಗೋತ್ರಗಳು ಇವೆ. ಇವು ಮೂಲ ಗೋತ್ರಗಳು ಇವರು ಗೋತ್ರ ಪ್ರವರ್ತಕರು. ೮ ಮಂದಿ ಗೋತ್ರ ಪ್ರವರ್ತಕರ ಹೆಸರಾಂತ ಮಕ್ಕಳು, ಮೊಮ್ಮಕ್ಕಳ ಹೆಸರಿನಲ್ಲಿ ಅಥವಾ ಅವರ ವಂಶದಲ್ಲಿ ಪ್ರಸಿದ್ಧರಾದವರ ಹೆಸರಿನಲ್ಲಿ ಗೋತ್ರವನ್ನು ಗುರುತಿಸುವ ಸಂಪ್ರದಾಯವಿದೆ. ಈ ಕ್ರಮವನ್ನು 'ಪ್ರವರ' ಎಂದು ಕರೆಯುತ್ತಾರೆ.

ಉದಾ: ಜಮದಗ್ನಿಯ ಮಗ ಅಂಗಿರಸನೂ ಪ್ರಸಿದ್ಧವಾದುದರಿಂದ ಅವನ ಮೂಲಕ ವಂಶ ಗುರುತಿಸುವ ಕ್ರಮ ಇದೆ. ಶಾಸ್ತ್ರಕಾರರು ಒಟ್ಟು ೪೯ ಗೋತ್ರಗಳನ್ನು ತಿಳಿಸಿರುತ್ತಾರೆ".[೮] ವೇದಾಧ್ಯಯನದ ಕಾಲಕ್ಕೆ ಪ್ರವರವನ್ನು ಹೇಳಿಕೊಂಡು ಮೂಲ ಗೋತ್ರವನ್ನು ಹೇಳುವುದು ಸಂಪ್ರದಾಯವಾಗಿರುತ್ತದೆ. ಋಗ್ವೇದದಲ್ಲಿ ಗೋತ್ರವೆಂದರೆ 'ಒಂದು ಆವರಣದಲ್ಲಿರುವ ಗೋ ಸಮೂಹ' ಎಂದು ಹೇಳಲಾಗಿದೆ. ಗೌರೀಶ ಕಾಯ್ಕಿಣಿಯವರ ಪ್ರಕಾರ "ಗೋತ್ರ ಎಂದರೆ ಕೊಟ್ಟಿಗೆ' ಅಥವಾ ಗೋವುಗಳನ್ನು ಕಟ್ಟುವಂತಹ ಸ್ಥಳ. ಒಂದೇ ಗೋತ್ರದಲ್ಲಿರುವ ಒಳಗದವರು ಅಣ್ಣ-ತಮ್ಮಂದಿರು ಆಗುತ್ತಾರೆ. ಸಹೋದರ-ಸಹೋದರಿಯವರಾಗುತ್ತಾರೆ. ಆದ್ದರಿಂದ ಸಗೋತ್ರ ವಿವಾಹ ನಿಷೇಧ".[೯]

೪.೫. ಮರಾಟಿ ಸಮುದಾಯಗಳ ಬಳಿಗಳ ಸ್ವರೂಪ

ಕುಡುಬಿಯರ ಬಳಿಗಳು

ಕುಡುಬಿಯರು ಕರ್ನಾಟಕದ ಕರಾವಳಿ ಪ್ರದೇಶದಲ್ಲಿ ವಾಸವಿದ್ದು, ಉಡುಪಿ ಜಿಲ್ಲೆಯ ಕುಂದಾಪುರ, ಉಡುಪಿ, ಕಾರ್ಕಳ ತಾಲೂಕುಗಳಲ್ಲಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ತಾಲೂಕು ಮತ್ತು ಬಂಟ್ವಾಳ ತಾಲೂಕಿನ ಕೆಲವೊಂದು ಗ್ರಾಮಗಳಲ್ಲಿ ಸಾಂದ್ರವಾಗಿ ವಾಸವಿದ್ದಾರೆ. ಇವರು ಗೋವಾ ಪ್ರದೇಶಕ್ಕೆ ಸೇರಿದ ಮೂಲ ನಿವಾಸಿಗಳ ಗುಂಪಿಗೆ ಸೇರಿದವರಾಗಿದ್ದಾರೆ.

ಕುಡುಬಿಯರಲ್ಲಿ ಗೋವಾಕುಡುಬಿ, ಕೊಡಿಯಾಲ, ನಾಡ, ಕುಮೇರಿ, ಆರೆ, ಜೋಗಿ ಕುಡುಬಿಯರೆಂಬ ಆರು ಒಳಪಂಗಡಗಳಿವೆ. ಇವರುಗಳಲ್ಲಿ ಗೋವಾ ಮತ್ತು ಕೊಡಿಯಾಲ ಕುಡುಬಿಯರಲ್ಲಿ ಎರಡು ಮುಖ್ಯ ಒಳಪಂಗಡಗಳಿವೆ. ಉತ್ತರ ಕನ್ನಡ ಜಿಲ್ಲೆಯಲ್ಲಿ ಕುಡುಬಿಯರನ್ನು 'ಅಟ್ಟೆ ಕುಣುಬಿ'ಯರೆಂದು ಕರೆಯುತ್ತಾರೆ. ಈ ಎಲ್ಲಾ ಒಳಪಂಗಡಗಳು ಇವರು ಹಿಂದಿನ ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನೆಲೆ ನಿಂತ ನಂತರ ರಚನೆಗೊಂಡಿದ್ದಾಗಿದೆ ಎಂಬುದನ್ನು ಸೂಚಿಸುತ್ತದೆ. ಪಿತೃ ಪ್ರಧಾನ ಅವಿಭಕ್ತ ಕುಟುಂಬ ಮತ್ತು ವಿಸ್ತರಿತ ಕುಟುಂಬಗಳು ಇವರಲ್ಲಿ ಕಾಣುವ ಮುಖ್ಯ ಕುಟುಂಬ ಪ್ರಕಾರವಾದರೂ ಅವುಗಳು ಇಂದು ಸಣ್ಣ ಅಣು ಕುಟುಂಬಗಳಾಗಿ ಬದಲಾವಣೆಗೊಳ್ಳುತ್ತಿವೆ. ಇವರಲ್ಲಿ ಇಂದಿಗೂ ಸಂಪ್ರದಾಯದಂತೆ ಪ್ರಾಚೀನ ಹೆಸರುಗಳು ಕಂಡುಬರುತ್ತದೆ. ಇವರಲ್ಲಿ ಹಲವಾರು 'ಬಳಿ' ಎಂಬ ಕುಲಗಳಿದ್ದು ವಿವಾಹವು ಬಳಿಗಳ ಹೊರಗೆ ನಡೆಯುತ್ತದೆ. ಹೆಚ್ಚಿನ ಬಳಿಗಳು ಕುಲ ಲಾಂಛನದ (Totemism) ಲಕ್ಷಣಗಳು ಹೊಂದಿರುತ್ತವೆ. ಒಂದೇ ಬಳಿಯವರ ವಿವಾಹವು ನಿಷಿದ್ದವಾಗಿದ್ದು, ಅವರೆಲ್ಲಾ ಒಂದೇ ವಂಶಕ್ಕೆ ಸೇರಿದವರು ಎಂದು ನಂಬಲಾಗಿರುತ್ತದೆ.

ಡಾ. ಅಭಯ್ ಕುಮಾರ್ ಅವರ "ಕುಡುಬಿಯವರು" ಎಂಬ ಲೇಖನದಲ್ಲಿ "ಗೋವಾ ಕುಡುಬಿ ಬುಡಕಟ್ಟು ಸಮುದಾಯದಲ್ಲಿ ಪಿತೃಪ್ರಧಾನ ವ್ಯವಸ್ಥೆಯಿರುವುದರಿಂದ ತಂದೆಯಿಂದ ಮಗನಿಗೆ / ಮಗಳಿಗೆ ಬಳಿಯ ಮುಂದುವರಿಕೆಯಾಗುತ್ತದೆ. ಅವರು ೩೬ ಬಳಿಗಳನ್ನು ಗುರುತಿಸಿದ್ದಾರೆ."[೧೦] "ಡಾ. ವೈ. ರವೀಂದ್ರನಾಥ ರಾವ್ ಅವರು ಕರಾವಳಿಯಲ್ಲಿ ವಾಸ್ತವ್ಯವಿರುವ ಕುಡುಬಿ ಸಮುದಾಯಗಳಲ್ಲಿ ೮೦ ಕ್ಕಿಂತ ಹೆಚ್ಚಿನ ಬಳಿಗಳಿವೆ ಎಂಬುದಾಗಿ ತಿಳಿಸಿದ್ದಾರೆ."[೧೧] ಡಾ.ಎ.ವಿ. ನಾವಡ ಅವರು "ಕುಡುಬಿ"ಯವರು ಎಂಬ ಲೇಖನದಲ್ಲಿ "ಹದಿನಾರು ಬಳಿಗಳನ್ನು ದಾಖಲಿಸಿದ್ದಾರೆ. ಕಡ್ಕಾರ್, ಕುತ್ಕಾರ್, ಮೊಕ್ಕಾರ್, ಕದ್ಕಾರ್, ಹುಣ್ಸ್‌ಕಾರ್, ಒಗಣೆಕಾರ್, ಮಟ್ಕಾರ್, ಜುತ್ತಾರ್, ಗಣ್ಕಾರ್, ತೋಡ್ಕಾರ್, ಬಟ್ಕಾರ್, ದನ್ಕಾರ್, ಪತ್ಕಾರ್, ನಾಯ್ಕರ್, ಬಾಸ್ಕಾರ್, ಮಲ್ಲಾರ್. ಇವರಲ್ಲಿ ಹುಣ್ಸೆಕಾರ್ ಬಳಿ ಶ್ರೇಷ್ಠರೆಂಬ ಅಭಿಪ್ರಾಯವಿದೆ. ಈ ಬಳಿಯ ಕುಟುಂಬಕ್ಕೆ ಹೆಣ್ಣು ಕೊಡುವುದಕ್ಕೂ ತರುವುದಕ್ಕೂ

ಹೆಚ್ಚಿನ ಉತ್ಸಾಹವಿರುತ್ತದೆ ಎಂಬುದಾಗಿ ಅಭಿಪ್ರಾಯಪಟ್ಟಿದ್ದಾರೆ. ಇವರ ಮದುವೆಯಲ್ಲಿ 'ಬಳಿ' ಅತ್ಯಂತ ನಿರ್ಣಾಯಕ ಅಂಶ. ಧಾರೆಯ ಸಂದರ್ಭದಲ್ಲಿ 'ರಾಯಬಡಿ'ಯಾದವನು ವಧೂವರರ ಬಳಿಗಳನ್ನು ಗಟ್ಟಿಯಾಗಿ ಎಲ್ಲರಿಗೆ ಕೇಳುವಂತೆ ಘೋಷಿಸಬೇಕಾಗುತ್ತದೆ. ಅಲ್ಲದೆ ಇವರು ಪಿತೃಪ್ರಧಾನ, ಪಿತೃ ಮೂಲೀಯ ಹಾಗೂ ಪಿತೃವಂಶೀಯ ಕುಟುಂಬ ವ್ಯವಸ್ಥೆಯನ್ನು ಹೊಂದಿದವರಾಗಿದ್ದಾರೆ. ಹೀಗಾಗಿ ಹೆಣ್ಣು ಸಾಮಾಜಿಕವಾಗಿ ಕುಟುಂಬದಲ್ಲಿ ಯಾವುದೇ ಸ್ಥಾನಮಾನ ಹೊಂದಿಲ್ಲ."[೧೨] ನನ್ನ ಲೇಖನ "ಸಾಮಾಜಿಕ ಬದಲಾವಣೆಯಲ್ಲಿ ಕುಡುಬಿ ಬುಡಕಟ್ಟು ಸಮುದಾಯ' – ಒಂದು ಸಮಾಜಶಾಸ್ತ್ರೀಯ ಅಧ್ಯಯನ – ಉಡುಪಿ ಜಿಲ್ಲೆಯ ಕುಂದಾಪುರ ತಾಲೂಕಿನ ಆಯ್ದ ಗ್ರಾಮಗಳನ್ನು ಅನುಲಕ್ಷಿಸಿ ಎಂಬ ಲೇಖನದಲ್ಲಿ ಅರವತ್ತು ಕುಡುಬಿ ಕುಟುಂಬಗಳಲ್ಲಿ ಒಟ್ಟು ೨೦ ಬಳಿಗಳ ಮಾಹಿತಿಗಳು ದೊರೆತಿದೆ. ಅವುಗಳಾವುದೆಂದರೆ ೧) ಹುಣ್ಸೆಕಾರ್ ೨) ಬಾಸ್ಕರ್ ೩) ಕಡ್ಕಾರ್ ೪) ಗೂಗ್ಗೂಲ್‌ಕಾರ್ ೫) ಕುತ್ಕಾರ್ ೬) ತೋಡ್ಕಾರ್ ೭) ಪತ್ತ್‌ಕಾರ್ ೮) ನಾಯ್ಕರ್ ೯) ವಾಘನ್‌ಕಾರ್ ೧೦) ದುಕ್ಕಾರ್ ೧೧) ಮೊರ್ಕರ್ ೧೨) ಕೆಲ್ಕರ್ ೧೩) ಹಾತ್ಕಾರ್ ೧೪) ಡೇವಿಡ್ಕರ್ ೧೫) ಕಾಜ್ಕಾರ್ ೧೬) ಭರಂಕಾರ್ ೧೭) ರಾಯ್ಕರ್ ೧೮) ದೊಂಡಿಕ್ಕಾರ್ ೧೯) ಜಟ್ಟಿಕಾರ್ ೨೦) ದೇವಸ್‌ಗಾರ್ ೨೧) ಶಿವಗಣ್ ೨೨) ಕೊಚ್ಚಿಕಾರ್."[೧೩]

ಮೇಲಿನ ಎಲ್ಲಾ ಬಳಿ ಒಂದಲ್ಲೊಂದು ಪ್ರಾಣಿ, ಪಕ್ಷಿ, ನಿರ್ಜೀವ ವಸ್ತು, ನಿರ್ದಿಷ್ಟ ಪ್ರದೇಶ, ಅಧಿಕಾರ, ಸಾಮರ್ಥ್ಯ ಸಂಸತ್ತು ಇತ್ಯಾದಿಗಳನ್ನು ಸಂಕೇತಿಸುತ್ತದೆ.

ಮರಾಟಿಗರಲ್ಲಿ ಬಳಿ

ಮರಾಟಿ ಬುಡಕಟ್ಟಿನವರನ್ನು ತುಳುವರು ಮತ್ತು ಸ್ಥಳೀಯರು 'ಆರೆಮರಾಟಿ', ಕಾಡುಮರಾಟಿ, ಕನಡೇರು, ಕ್ಷತ್ರಿಯ ಮರಾಟಿ, ಮರಾಠೇರು, ಮರಾಠಿ, ಮರಾಠ ಎಂಬ ಪದಗಳಿಂದ ಕರೆಯುವರು. ಇವರು ತಮ್ಮ ಹೆಸರುಗಳೊಂದಿಗೆ ಹೆಚ್ಚಾಗಿ ರಾವ್, ಜೀ, ಓಜೀ ಎಂತಲೂ ಕರೆಯುತ್ತಾರೆ. ಈ ಮೂರು ಪದಗಳು ಗೌರವ, ಮರ್ಯಾದೆ ಸೂಚಕ ಪದಗಳು ಅವರ ಹೆಸರಿನೊಂದಿಗೆ ಸಬಲೀಕರಣಗೊಂಡಿರುತ್ತದೆ. ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ತಾಲೂಕಿನ ಮುಲ್ಕಿ ಹೋಬಳಿಯ ಕವತ್ತಾರು, ಎಳತ್ತೂರು, ಕೊಲ್ಲೂರು, ಕುಕ್ಕಿಕಟ್ಟೆಯಲ್ಲಿ ೭೩ ಮನೆಗಳಿದ್ದು, ಉಡುಪಿ ಜಿಲ್ಲೆಯ ಕಾರ್ಕಳ ತಾಲೂಕಿನ ಹಿರೇಯಂಗಡಿ, ಜೋಡುಕಟ್ಟೆ, ಕುಂಟಲಪ್ಪಾಡಿ, ಕಾರ್ಕಳ ಪಟ್ಟಣ ಸಾಣೂರು ಗ್ರಾಮಗಳಲ್ಲಿ ಸುಮಾರು ೧೫೫ ಕುಟುಂಬಗಳು ವಾಸವಾಗಿರುವುದನ್ನು ಕ್ಷೇತ್ರಕಾರ್ಯದಲ್ಲಿ ಕಂಡುಕೊಂಡಿದ್ದೇನೆ. ಇವರಲ್ಲಿ ಬಳಿ ಪದ್ಧತಿ ಚಾಲ್ತಿಯಲ್ಲಿದೆ. ಸುಮಾರು ೯೬ ಬಳಿ ಇರುವುದೆಂದು ತಿಳುವಳಿಕೆದಾರರು ತಿಳಿಸಿರುವರು.

ಕ್ಷೇತ್ರಕಾರ್ಯ ಸಂದರ್ಭದಲ್ಲಿ "ಮರಾಟಿ ಸಮುದಾಯದಲ್ಲಿ ಬೆಡ್ಕಂ, ಅಸಲ್, ಬೇಡೇಕರ್, ಬೊಂಸ್ಲೆ, ಚವ್ಹಾನ/ಚವನ್, ಮೊರೆ, ದೇವಕರ, ಜಗತಾಪ, ಜಾದವ, ರಾಥೋಡ್, ಪವಾರ, ಸಿಂಧೆ, ಸೆಪ್ಪೇಕರ, ತಾಮಸ್, ಉಟ್ಟೇಕರ, ವಾಗ್ಮಾನ್, ವಿಡೆ ಮುಂತಾದ ೨೨ ಬಳಿಗಳು ದೊರೆತಿವೆ. ಇವುಗಳಲ್ಲಿ ವೈವಾಹಿಕ ಸಂಬಂಧ ಬೆಳೆಸುವಲ್ಲಿ ಸಹಕಾರಿಯಾಗಿದೆ."[೧೪]

ಮರಾಟಿ ನಾಯ್ಕರ ಬಳಿಗಳು

ಮರಾಟಿ ನಾಯ್ಕರಲ್ಲಿ ಬಳಿಗಳ ಬಗೆಗೆ ಅವರ ಸಮುದಾಯದ ಹಿರಿಯ ಗುರಿಕಾರರು ಪ್ರತಿಯೊಂದು ಬಳಿಯ ಬಗೆಗೆ ಮಾಹಿತಿಯನ್ನು ಸಾಮಾನ್ಯವಾಗಿ ತಿಳಿದುಕೊಂಡಿರುತ್ತಾರೆ. ಮರಾಟಿ ನಾಯ್ಕರಲ್ಲಿ

ಒಟ್ಟು ೪೭ ಬಳಿಗಳನ್ನು ಗುರುತಿಸಲಾಗಿದ್ದು ಅವುಗಳು ಹೀಗಿವೆ. ೧. ಧುಮಣ್, ೨. ಶಿಂದೇ/ಸಿಂಧ್ಯೆ, ೩. ಬಸೋ ೪. ತೋಳಾರ್, ೫. ಮೇಡಕರ್ / ಮಡಕರ್, ೬. ಪವಾರ್, ೭. ದುಮಳ್, ೮. ಮಂಡಾಕಾರ್, ೯. ನೆಯ್ಯಾರಿ, ೧೦. ಕಣ್ಣೀರಿ, ೧೧. ಶಿವ ಬಳಿ, ೧೨. ಗವಣಿಕಾರ್ / ಗವ್ಹಾಣ್, ೧೩. ಪನ್ ಸಮಕಾರ್ / ಪಳ್ ಸಂಕಾರ್, ೧೪. ಶಿಗೋಣ / ಶಿವಗಣ್, ೧೫. ಅಂದೇರಿ, ೧೬. ಸಾವಂತ, ೧೭. ದೇವಾಳ, ೧೮. ಚವಣ, ೧೯. ಮೊಗೆ, ೨೦. ಬಿಸೋ ಬಳಿ, ೨೧. ದಾಸಂಚೆ/ಚಿ/ದಾಸವ್, ೨೨. ಗುರುವ್, ೨೩. ಡೆವೆಡ್‌ಕಾರ್, ೨೪. ದಣಿ / ದನಿ, ೨೫. ದೊರೆಗಾರ್, ೨೬. ಕೇಳ್‌ಕಾರ್, ೨೭. ಇರ್ಮಳ್, ೨೮. ಜೋಷಿ, ೨೯. ಶೀಂಬೆಗಾರ್, ೩೦. ಬರನ್‌ಕಾರ್, ೩೧. ಮಾಯಿಲ್ ಬಳಿ, ೩೨. ಸಾಂತು ಬಳಿ, ೩೩. ದಬ್ಬಾಳ್‌ಕಾರ್, ೩೪. ಭಾಸ್ಕರ್, ೩೫. ಗೋರೆಲೆ / ಗೋರ್ಲೆ, ೩೬. ಬಡೆಕಾರ್ / ಬಡೆಗಾರ್, ೩೭. ಗೊಳಂಬಳಿ, ೩೮. ವಾಳಂಬೆ ಬಳಿ, ೩೯. ಸಂಕೋಲ್ / ಸಂಕೋಳ್, ೪೦. ಟೀಕ / ತೀಕ ಬಳಿ, ೪೧. ಜಂಬೋಲಿ, ೪೨. ಕೋಂತ್ರ, ೪೩. ಪಡುವಳ್ ಕಾರ್, ೪೪. ಸಾಲ್ಯಾನ್ / ಸಾಲ್ವೆ, ೪೫. ಭೂಮಿ, ೪೬. ಶೇಡೆಗಾರ್, ೪೭. ಗೊತ್ತಿಲ್ಲ.

ಕುಂಬ್ರಿ ಮರಾಠಿಗರ ಬಳಿಗಳು

ಕುಂಬ್ರಿ ಮರಾಠಿಗರು ಉತ್ತರ ಕನ್ನಡ ಜಿಲ್ಲೆಯ ಕುಮಟಾ, ಅಂಕೋಲಾ, ಸಿದ್ಧಾಪುರ, ಹೊನ್ನಾವರ, ಯಲ್ಲಾಪುರ ಹಾಗೂ ಭಟ್ಕಳ ತಾಲೂಕುಗಳಲ್ಲಿ ಸಾಂದ್ರವಾಗಿ ಕಂಡುಬರುತ್ತಾರೆ. ಕುಂಬ್ರಿ ಮರಾಠಿಗರು ತಮ್ಮ ತಮ್ಮ ಗುಂಪುಗಳಿಗೆ ಒಂದೊಂದು ಸಂಕೇತದ ಮೂಲಕ ಗುರುತಿಸಿಕೊಂಡು ಬಂದಿರುವುದು ಕ್ಷೇತ್ರಕಾರ್ಯ ಸಂದರ್ಭದಲ್ಲಿ ಕಂಡುಕೊಂಡಿರುವೆನು. ಪ್ರಕೃತಿಯಲ್ಲಿ ಕಂಡ ಪ್ರಾಣಿ ಪಕ್ಷಿ, ಗಿಡ ಮರ ಬಳ್ಳಿಗಳನ್ನು ಗುರುತಿಸಿ ಅವುಗಳಿಂದಲೇ ತಮ್ಮ ಗುಂಪಿನ ಸಂಕೇತವನ್ನಾಗಿ ನಿರ್ಧರಿಸಿಕೊಂಡಿರುತ್ತಾರೆ. ಇವರ ಬಳಿಗಳಿಂದ ಅವರು ಉತ್ಪಾದಿಸುತ್ತಿರುವ ಉತ್ಪನ್ನಗಳು, ಕುಲವೃತ್ತಿಗಳು, ವಾಸಿಸುತ್ತಿದ್ದ ಮತ್ತು ವಾಸಿಸುತ್ತಿರುವ ಮೂಲ ನೆಲೆ, ಕುಂಬ್ರಿ ಸಮುದಾಯದ ಮನೋಭಾವ, ಆರಾಧನಾ ಮನೋಭಾವ, ಕುಲದ / ವಂಶದ ಸ್ವರೂಪ, ಅವರುಗಳು ವಾಸಿಸುತ್ತಿರುವ ಸುತ್ತಲಿನಲ್ಲಿರುವ ಪ್ರಾಣಿ, ಪಕ್ಷಿ, ಮರ, ಗಿಡಗಳ ಬಗ್ಗೆ ಪವಿತ್ರ ಭಾವನೆ ಇತ್ಯಾದಿಗಳು ವ್ಯಕ್ತವಾಗುತ್ತದೆ. ಕುಂಬ್ರಿ ಮರಾಠಿಗರಲ್ಲಿ ಈ ಕೆಳಗಿನ ಬಳಿಗಳು ಗುರುತಿಸಲಾಗಿದೆ.

"೧) ಕುಂಬಾರಾಜೆ ೨) ಮುಂಡಿಗೆಕಾರ ೩) ಸೊಡೊನ್‌ಕಾರ ೪) ಹಳಿಯ ೫) ಪಾರ್ದಿ ೬) ತೆಲೆಯ ೭) ಗೊವೊಳಕಾರ ೮) ಆಗ್ರಕಾರ ೯) ಗಾವಡೆಕಾರ ೧೦) ಪೂಜಾರೆಕಾರ ೧೧) ದರ್ಪೆ ೧೨) ಬಾರಿಯ ೧೩) ಪಡಗಾವಡೆ ೧೪) ಭಂಡಾರ್ಯಾಚೆ ೧೫) ಚೌಕೆಕಾರ ೧೬) ರಾಣಿ ೧೭) ಸೊನಾರಾ ೧೮) ಹುಂಡಳೆಕಾರ ೧೯) ಹಳದೆಯಾಚೆ ೨೦) ಧುರೆಯೆಟೆ ೨೧) ಬಡೊನೆಕಾರ ೨೨) ಬೆಳ್ಳೆಕಾರ ೨೩) ತಮಾನೆಕಾರ ೨೪) ವಾಣಿಯಾಚೆ ೨೫) ವಂಜಾರ್ಯಾಟೆ ೨೬) ಮೆಡೆಕಾರ ೨೭) ಆದ್ಲೆಕಾರ ೨೮) ಕೊಳಸೋಣಕಾರ ೨೯) ದಾಬೊಳೆಕಾರ ೩೦) ವಾಂಡ್ರೆ ೩೧) ಫಕನೆ ೩೨) ಗಾಂವಕರ ೩೩) ನೆವಾಳೆ ೩೪) ಚಿಂಬೆಟೆ ೩೫) ತೆದಮಾಟೆ ೩೬) ಖಾಂದಾರ್ಯಾಟೆ ೩೭) ಸಿತ್ರೆ ೩೮) ಕಾಸಡೆಕಾರ ೩೯) ತಿಂಗಡೆಟೆ ೪೦) ಚುಣೆಕಾರ ೪೧) ಸೆಂಗಾಳ ೪೨) ಮುಪ್ಪಿಲಕಾರ ೪೩) ಧಾಪಳೆಕಾರ ೪೪) ಬುವೆಕಾರ ೪೫) ಸೆನವೆ ೪೬) ಶಾಸಸ್ಯಾಚೆ ೪೭) ಬಾಪಟಕಾರ ೪೮) ಘಾಟಕ ೪೯) ಮಂಚೆಕಾರ ೫೦) ಜಾಂತೆಕಾರ ೫೧) ರಾಮಾನ್ಯೆ"[೧೫]

ಸಮೀಕ್ಷೆಗೊಳಪಡಿಸಿರುವ ಮರಾಟಿ ನಾಯ್ಕ, ಮರಾಟಿ, ಕುಡುಬಿ ಸಮುದಾಯದ ಕುಟುಂಬಗಳಲ್ಲಿ ಬಳಿಗಳ ವಿವರ

ಮರಾಟಿನನಾಯ್ಕ ಮತ್ತು ಮರಾಟಿಗರು ಬಳಿಯನ್ನು ತಮ್ಮ ವಂಶದ ಮೂಲ ಎಂಬುದಾಗಿ ತಿಳಿದುಕೊಂಡಿದ್ದಾರೆ. ಇವುಗಳು ತಮ್ಮ ವಂಶದ ಮೂಲ ಪುರುಷರುಗಳ ಮೂಲಕ ತಮ್ಮ ಆರಾಧ್ಯ ದೇವರುಗಳ ಮೂಲಕ, ಸಸ್ಯ, ಪ್ರಾಣಿ ಮುಂತಾದವುಗಳ ಮೂಲಕವು ಗುರುತಿಸುವುದು ಕಂಡುಬರುತ್ತದೆ. ಇತರೆ ಸಮುದಾಯದವರಲ್ಲಿದ್ದಂತೆಯೇ ಇವರಲ್ಲಿಯು ಸಹ ಒಂದೇ ಬಳಿಯವರ ನಡುವೆ ವಿವಾಹ ನಿಷೇಧವಾಗಿರುತ್ತದೆ. ಕಾರಣ ಮರಾಟಿ ಸಮುದಾಯದಲ್ಲಿ ಕೂಡ ಒಂದೇ ವಂಶಕ್ಕೆ ಸೇರಿದವರು ಸಹೋದರ–ಸಹೋದರಿಯರಾಗುತ್ತಾರೆ ಅಲ್ಲದೇ ಈ ಬಳಿಗಳ ಹೆಸರುಗಳು ವೈವಿಧ್ಯಮಯವಾಗಿದ್ದು, ಬೇರೆ ಬೇರೆ ಪ್ರದೇಶಗಳಲ್ಲಿ ಬೇರೆ ಬೇರೆ ರೀತಿಯಲ್ಲಿರುವುದು ಕಂಡುಬಂದಿರುತ್ತದೆ. ಒಂದೇ ಬಳಿಯನ್ನು ಕೂಡ ಬೇರೆ ಬೇರೆ ರೀತಿಯಲ್ಲಿ ಉಚ್ಚರಿಸಿರುವುದು ಕೂಡ ಕಂಡುಬರುತ್ತದೆ. ಆದ್ದರಿಂದ ಇಲ್ಲಿ ಸಮೀಕ್ಷೆಗೊಳಪಟ್ಟ ತಿಳುವಳಿಕೆದಾರರು ತಮ್ಮ ಬಳಿಯನ್ನು ಹೇಗೆ ತಿಳಿಸಿದ್ದಾರೋ ಅದೇ ರೀತಿಯಲ್ಲಿ ಕೋಷ್ಟಕ ಸಂಖ್ಯೆ ೪.೧ರಲ್ಲಿ ಯಥಾವತ್ತಾಗಿ ನೀಡಲಾಗಿದೆ.

ಕೋಷ್ಟಕ: ೪.೧

ಅಧ್ಯಯನಕ್ಕೊಳಪಟ್ಟ ಮರಾಟ ನಾಯ್ಕ, ಕುಡುಬಿ ಮತ್ತು ಮರಾಟಿ ಸಮುದಾಯದ ತಿಳುವಳಿಕೆದಾರರ ಬಳಿಗಳ ವಿವರ

ಸಮುದಾಯದಗಳ ಹೆಸರು		ಬಳಿಗಳ ವಿವರಗಳು	ತಾಲೂಕಿನ ಕುಟುಂಬಗಳ ಸಂಖ್ಯಾ ವಿವರ			ಒಟ್ಟು	ಶೇಕಡವಾರು
			ಕುಂದಾಪುರ	ಉಡುಪಿ	ಕಾರ್ಕಳ		
ಅ) ಮರಾಟಿ ನಾಯ್ಕ							
	೧.	ಧುಮಣ್	೦೧	–	–	೦೧	೦೦.೬೭
	೨.	ಶಿಂದೇ/ಸಿಂಧ್ಯೆ	೦೧	–	೦೨	೦೩	೦೨.೦೦
	೩.	ಬಸೋ	೦೨	೦೫	–	೦೭	೦೪.೬೭
	೪.	ತೋಳಾರ್	೦೨	–	–	೦೨	೦೧.೩೩
	೫.	ಮೇಡಕರ್ / ಮಡಕರ್	೦೧	–	–	೦೧	೦೦.೬೭
	೬.	ಪವಾರ್	೦೬	–	–	೦೬	೦೪.೦೦
	೭.	ದುಮಳ್	೦೬	–	೦೩	೦೯	೦೬.೦೦
	೮.	ಮಂಡಾಕಾರ್	೦೨	–	–	೦೨	೦೧.೩೩
	೯.	ನೆಯ್ಯಾರಿ	೦೧	–	–	೦೧	೦೦.೬೭
	೧೦.	ಕಣ್ಣೀರಿ	೧೦	೦೪	–	೧೪	೦೯.೩೩
	೧೧.	ಶಿವ ಬಳಿ	೦೩	–	–	೦೩	೦೨.೦೦
	೧೨.	ಗವಣಿಕಾರ್ /ಗವ್ಹಾಣ್	೦೩	೦೭	೦೨	೧೨	೦೮.೦೦

	೧೩.	ಪನ್ ಸಮಕಾರ್ /ಪಳ್ ಸಂಕಾರ್	೦೧	–	–	೦೧	೦೦.೬೭
	೧೪.	ಶಿಗೋಣ /ಶಿವಗಣ್	೦೧	೧೦	೦೩	೧೪	೦೯.೩೩
	೧೫.	ಅಂದೇರಿ	೦೧	–	೦೨	೦೩	೦೨.೦೦
	೧೬.	ಸಾವಂತ	೦೧	–	–	೦೧	೦೦.೬೭
	೧೭.	ದೇವಾಳ	೦೧	–	–	೦೧	೦೦.೬೭
	೧೮.	ಚವಣ	೦೧	–	–	೦೧	೦೦.೬೭
	೧೯.	ಮೊಗೆ	೦೧	–	–	೦೧	೦೦.೬೭
	೨೦.	ಬಿಸೋ ಬಳಿ	೦೧	–	೦೧	೦೨	೦೧.೩೩
	೨೧.	ದಾಸಂಚೆ/ಚಿ /ದಾಸವ್	–	೦೨	೦೧	೦೩	೦೨.೦೦
	೨೨.	ಗುರುವ್	–	೦೬	–	೦೬	೦೪.೦೦
	೨೩.	ಡೆವೆಡ್‌ಕಾರ್	–	೦೧	–	೦೧	೦೦.೬೭
	೨೪.	ದಣಿ / ದನಿ	–	೦೨	–	೦೨	೦೧.೩೩
	೨೫.	ದೊರೆಗಾರ್	–	೦೪	೦೧	೦೫	೦೩.೩೩
	೨೬.	ಕೇಳ್‌ಕಾರ್	–	೦೧	–	೦೧	೦೦.೬೭
	೨೭	ಇರ್ಮಳ್	–	೦೧	೦೧	೦೨	೦೧.೩೩
	೨೮.	ಜೋಷಿ	–	೦೧	–	೦೧	೦೦.೬೭
	೨೯.	ಶೀಂಬೆಗಾರ್	–	೦೧	–	೦೧	೦೦.೬೭
	೩೦.	ಬರನ್‌ಕಾರ್	–	೦೨	–	೦೨	೦೧.೩೩
	೩೧.	ಮಾಯಿಲ್ ಬಳಿ	–	೦೧	–	೦೧	೦೦.೬೭
	೩೨.	ಸಾಂತು ಬಳಿ	–	–	೦೨	೦೨	೦೧.೩೩
	೩೩.	ದಬ್ಬಾಳ್‌ಕಾರ್	–	–	೦೨	೦೨	೦೧.೩೩
	೩೪.	ಭಾಸ್ಕರ್	–	–	೦೨	೦೨	೦೧.೩೩
	೩೫.	ಗೋರೆಲೆ/ಗೋರ್ಲೆ	–	–	೦೨	೦೨	೦೧.೩೩
ಮರಾಟಿ ನಾಯ್ಕ	೩೬.	ಬಡೆಕಾರ್/ ಬಡೆಗಾರ್	–	–	೦೭	೦೭	೦೪.೬೭
	೩೭.	ಗೊಳಂಬಳಿ	–	–	೦೧	೦೧	೦೦.೬೭
	೩೮.	ವಾಳಂಬೆ ಬಳಿ	–	–	೦೧	೦೧	೦೦.೬೭
	೩೯.	ಸಂಕೋಲ್ / ಸಂಕೋಳ್	–	–	೦೪	೦೪	೦೨.೬೭

	೪೦.	ಟೀಕ/ತೀಕ ಬಳಿ	–	–	೦೨	೦೨	೦೧.೩೩
	೪೧.	ಜಂಬೋಲಿ	–	–	೦೧	೦೧	೦೦.೬೭
	೪೨.	ಕೋಂತ್ರ	–	–	೦೧	೦೧	೦೦.೬೭
	೪೩.	ಪಡುವಳ್ ಕಾರ್	–	–	೦೨	೦೨	೦೧.೩೩
	೪೪.	ಸಾಲ್ಯಾನ್/ಸಾಲ್ವೆ	–	–	೦೧	೦೧	೦೦.೬೬
	೪೫.	ಭೂಮಿ	–	–	೦೧	೦೧	೦೦.೬೬
	೪೬.	ಶೇಡೆಗಾರ್	–	–	೦೨	೦೨	೦೧.೩೩
	೪೭	ಗೊತ್ತಿಲ್ಲ	೦೪	೦೨	೦೩	೦೯	೦೬.೦೦
		ಒಟ್ಟು	೫೦	೫೦	೫೦	೧೫೦	೧೦೦
ಆ) ಮರಾಟಿ	೧.	ಮೋರೆ	–	–	೨೫	೨೫	೧೬.೬೭
	೨.	ಜಾದವ್	–	–	೧೯	೧೯	೧೨.೬೬
	೩.	ಪವಾರ್	–	–	೧೧	೧೧	೦೭.೩೩
	೪.	ಕರ್ಮೊರೆ	–	–	೦೨	೦೨	೦೧.೩೩
	೫.	ಸಿಂಧೆ	–	–	೦೩	೦೩	೦೨.೦೦
	೬.	ಜಗತಾಪ / ಜಗತಾಪ್	–	–	೦೧	೦೧	೦೦.೬೭
	೭.	ಹರಿಯಾರ್ / ಹರ್‌ಹರ್ / ಹರಿಹರ	–	–	೦೬	೦೬	೦೪.೦೦
	೮.	ಲಾಡ್	–	–	೦೫	೦೫	೦೩.೩೩
	೯.	ವೀಡೆ	–	–	೧೦	೧೦	೦೬.೬೬
	೧೦.	ಬಹುಮಾನ್	–	–	೦೨	೦೨	೦೧.೩೩
	೧೧.	ಬೋಂಸ್ಲೆ	–	–	೦೨	೦೨	೦೧.೩೩
	೧೨.	ಕವಡೆ	–	–	೨೯	೨೯	೧೯.೩೩
	೧೩.	ಸಪ್ಪೇಕಾರ್	–	–	೦೪	೦೪	೦೨.೬೭
	೧೪.	ಅಸ್ಟಲ್	–	–	೦೨	೦೨	೦೧.೩೩
	೧೫.	ರಾಜಪಾಡೆ	–	–	೦೧	೦೧	೦೦.೬೭
	೧೬.	ಸೂರೆ / ಸೂರ್ಯೆ / ಸೂರ್ಯ ಬಳಿ	–	–	೦೭	೦೭	೦೪.೬೭
	೧೭.	ಉಚೇಕಾರ್ / ಉಚೆಲ್‌ಕಾರ್	–	–	೧೦	೧೦	೦೬.೬೭

	೧೮.	ಥಾಮಸ್	–	–	೦೪	೦೪	೦೨.೬೭
	೧೯.	ಧರೆಕಾರ್	–	–	೦೧	೦೧	೦೦.೬೭
	೨೦.	ಭಾವರ್	–	–	೦೩	೦೩	೦೨.೦೦
	೨೧.	ಸಂಜೆಕಾಡನ್	–	–	೦೧	೦೧	೦೦.೬೭
	೨೨.	ಕಡಿಲ್‌ಕಾರ್	–	–	೦೧	೦೧	೦೦.೬೭
	೨೩.	ಬಳಿ ಗೊತ್ತಿಲ್ಲದವರು	–	–	೦೧	೦೧	೦೦.೬೭
		ಒಟ್ಟು	–	–	೧೫೦	೧೫೦	೧೦೦

ಸಮುದಾಯದಗಳ ಹೆಸರು		ಬಳಿಗಳ ವಿವರಗಳು	ತಾಲೂಕಿನ ಕುಟುಂಬಗಳ ಸಂಖ್ಯಾ ವಿವರ			ಒಟ್ಟು	ಶೇಕಡವಾರು
			ಕುಂದಾಪುರ	ಉಡುಪಿ	ಕಾರ್ಕಳ		
ಇ) ಕುಡುಬಿ							
	೧.	ವಾಗಣ್‌ಕಾರ್	೦೧	೦೫	೦೧	೦೭	೦೪.೬೭
	೨.	ದೂಕ್ಕರ್ / ದುಕ್ಕಾರ್	೦೧	೦೨	೦೨	೦೫	೦೩.೩೩
	೩.	ನಕ್ಕಾರ್ / ನೌಕ್ಕಾರ್	೦೧	೦೨	–	೦೩	೦೨.೦೦
	೪.	ಮೇಟ್‌ಕ್ಕಾರ್	೦೩	೦೩	೦೧	೦೭	೦೪.೬೭
	೫.	ಕಡ್‌ಕಾರ್ ಬಳಿ	೦೧	೦೩	೦೨	೦೬	೦೪.೦೦
	೬.	ಬಸ್ಕಾರ್	೦೩	೦೧	–	೦೪	೦೨.೬೭
	೭.	ಕುತ್‌ಕಾರ್	೦೧	೦೨	೦೬	೦೯	೦೬.೦೦
	೮.	ಖಡ್‌ಕ್ಕರ್	–	೦೧	–	೦೧	೦೦.೬೭
	೯.	ರಾಯ್ಕರ್ / ರೈಕಾರ್	೦೧	೦೧	೦೧	೦೩	೦೨.೦೦
	೧೦.	ಭಟ್ಕಾರ್ / ಭಟ್‌ಕಾರ್	೦೧	೦೧	–	೦೨	೦೧.೩೩
	೧೧.	ಮುಕ್ಕಾರ್	೦೩	೦೪	–	೦೭	೦೪.೬೭
	೧೨.	ಪತ್ಕಾರ್	೦೫	೦೩	೦೨	೧೦	೦೬.೬೭
	೧೩.	ಹುಣ್ಸ್‌ಕಾರ್	೦೧	೦೪	೦೧	೦೬	೦೪.೦೦
	೧೪.	ಸಂತಬಳಿ / ಸಂತ್ಕಾರ್	–	೦೪	೦೨	೦೬	೦೪.೦೦

	೧೫.	ಮೊರ್‌ಕ್ಕಾರ್ / ಮೊರ್ಕರ್	೦೧	೦೨	೦೩	೦೬	೦೪.೦೦
	೧೬.	ಕದ್ಕಾರ್	೦೩	೦೧	೦೨	೦೬	೦೪.೦೦
	೧೭.	ಕೆಲ್ಕಾರ್	೦೧	೦೧	೦೧	೦೩	೦೨.೦೦
	೧೮.	ವಾರೆಕ್ಕಾರ್ / ನರೆಕಾರ್	–	೦೧	೦೧	೦೨	೦೧.೩೩
	೧೯.	ಕಡ್ಕೆರ್	–	೦೧	೦೧	೦೨	೦೧.೩೩
	೨೦.	ಗಣ್‌ಕಾರ್	೦೧	೦೨	೦೫	೦೮	೦೫.೩೩
	೨೧.	ನೈವ್‌ಕಾರ್	೦೪	೦೧	೦೪	೦೯	೦೬.೦೦
	೨೨.	ಮೊಲ್ಕ್‌ರ್ / ಮೊರ್ಕ್‌ರ್	–	೦೧	೦೨	೦೩	೦೨.೦೦
	೨೩.	ಅಮ್‌ಕ್ಕಾರ್	೦೪	೦೧	–	೦೫	೦೩.೩೩
	೨೪.	ತೊಡ್ಕಾರ್ ಬಳಿ	೦೧	೦೧	೦೧	೦೩	೦೨.೦೦
	೨೫.	ನಕ್ಕಾರ್	೦೧	೦೧	–	೦೨	೦೧.೩೩
	೨೬.	ಬಗಣಕ್ಕಾರ್	–	೦೧	–	೦೧	೦೦.೬೭
	೨೭	ದನ್ಕರ್	–	–	೦೨	೦೨	೦೧.೩೩
	೨೮.	ಮೇಸ್ತ ಬಳಿ	೦೨	–	೦೧	೦೩	೦೨.೦೦
	೨೯.	ಮೇಡ್‌ಕ್ಕಾರ್	೦೧	–	–	೦೧	೦೦.೬೭
	೩೦.	ಭರಮ್‌ಕಾರ್	೦೨	–	೦೧	೦೩	೦೨.೦೦
	೩೧.	ಗುಡಿಕ್ಕಾರ್	೦೨	–	೦೧	೦೩	೦೨.೦೦
	೩೨.	ಭಳ್ಳೆಕ್ಕಾರ್ / ಬೊಲೆಕ್ಕಾರ್	೦೧	–	೦೩	೦೪	೦೨.೬೭
	೩೩.	ನಾಯ್ಕರ್ ಬಳಿ	೦೧	–	೦೧	೦೨	೦೧.೩೩
	೩೪.	ಸನ್ಕರ್	೦೧	–	೦೧	೦೨	೦೧.೩೩
	೩೫.	ಬಗಣಕ್ಕಾರ್	೦೨	–	೦೧	೦೩	೦೨.೦೦
	೩೬.	ಮಡ್‌ಕಟ್ ಬಳಿ	–	–	೦೧	೦೧	೦೦.೬೭
		ಒಟ್ಟು	೫೦	೫೦	೫೦	೧೫೦	೧೦೦

ಕುಂದಾಪುರ, ಉಡುಪಿ, ಕಾರ್ಕಳದಲ್ಲಿನ ಮರಾಟಿ ನಾಯ್ಕ ಮತ್ತು ಕಾರ್ಕಳ ತಾಲೂಕಿನಲ್ಲಿರುವ ಮರಾಟಿ ಸಮುದಾಯದ ಕುಟುಂಬದ ಬಳಿಗಳ ವಿವರವಾಗಿದ್ದು, ಅದರಲ್ಲಿ ಮರಾಟಿ ನಾಯ್ಕರ ಬಳಿಯ ಬಗೆಗಿನ ಸಮೀಕ್ಷೆ ಈ ತರನಾಗಿದೆ. ಧುಮಣ್ ಎನ್ನುವ ಬಳಿಯು ಶೇ. ೦೦.೬೭% ಇದ್ದು, ಕುಂದಾಪುರದಲ್ಲಿ ೦೧ ಕುಟುಂಬವಿದೆ. ಉಡುಪಿ ಹಾಗೂ ಕಾರ್ಕಳದಲ್ಲಿ ಈ ಬಳಿಯ ಕುಟುಂಬ ಕಂಡುಬಂದಿಲ್ಲ. ಈ ಮೂರು ತಾಲೂಕಿನಲ್ಲಿ ಒಟ್ಟು ೧ ಕುಟುಂಬ ವಾಸಿಸುತ್ತಿದೆ. ಶಿಂಧೇ ಎನ್ನುವ

ಬಳಿಯು ಶೇಕಡಾವಾರು ೦೨.೦೦% ಇದ್ದು, ಕುಂದಾಪುರದಲ್ಲಿ ೦೧ ಕುಟುಂಬವಿದ್ದು, ಉಡುಪಿಯಲ್ಲಿ ಕಂಡುಬಂದಿಲ್ಲ. ಹಾಗೂ ಕಾರ್ಕಳದಲ್ಲಿ ೦೨ ಕುಟುಂಬಗಳಿವೆ. ಈ ಮೂರು ತಾಲೂಕಿನಲ್ಲಿ ಒಟ್ಟು ೩ ಕುಟುಂಬಗಳು ವಾಸಿಸುತ್ತಿವೆ. ಬಸೋೀ ಎನ್ನುವ ಬಳಿಯು ಶೇಕಡಾವಾರು ೦೪.೬೭% ಇದ್ದು, ಕುಂದಾಪುರದಲ್ಲಿ ೦೨ ಹಾಗೂ ಉಡುಪಿಯಲ್ಲಿ ೦೫ ಕುಟುಂಬಗಳು ವಾಸಿಸುತ್ತಿವೆ. ಕಾರ್ಕಳದಲ್ಲಿ ಕಂಡುಬಂದಿಲ್ಲ. ಮೂರು ತಾಲೂಕಿನಲ್ಲಿ ಒಟ್ಟು ೭ ಕುಟುಂಬ ಕಂಡುಬಂದಿವೆ. ತೋಳಾರ್ ಎನ್ನುವ ಬಳಿಯು ಶೇ. ೦೧.೩೩% ಇದ್ದು, ಕುಂದಾಪುರದಲ್ಲಿ ೦೨ ಕುಟುಂಬಗಳು ವಾಸಿಸುತ್ತಿವೆ. ಉಡುಪಿ ಹಾಗೂ ಕಾರ್ಕಳದಲ್ಲಿ ಕಂಡುಬಂದಿಲ್ಲ. ಒಟ್ಟು ೦೨ ಕುಟುಂಬಗಳು ಕುಂದಾಪುರ ಲಾಲೂಕಿನಲ್ಲಿ ವಾಸಿಸುತ್ತಿದ್ದಾರೆ. ಮೇಡ್ಕರ್ ಅಥವಾ ಮಡಕರ್ ಎನ್ನುವ ಬಳಿಯು ಶೇ. ೦.೬೭% ಇದ್ದು, ಕುಂದಾಪುರದಲ್ಲಿ ೦೧ ಕುಟುಂಬವಿದ್ದು, ಉಡುಪಿ ಮತ್ತು ಕಾರ್ಕಳದಲ್ಲಿ ಕಂಡುಬಂದಿಲ್ಲ. ಮೂರು ತಾಲೂಕಿನಲ್ಲಿ ಒಟ್ಟು ೧ ಕುಟುಂಬ ವಾಸಿಸುತ್ತಿದೆ. ಪವಾರ್ ಎನ್ನುವ ಬಳಿಯು ಶೇ. ೦೪.೦೦% ಇದ್ದು, ಕುಂದಾಪುರದಲ್ಲಿ ೬ ಕುಟುಂಬಗಳಿವೆ. ಉಡುಪಿ ಹಾಗೂ ಕಾರ್ಕಳದಲ್ಲಿ ಕಂಡುಬಂದಿಲ್ಲ. ಒಟ್ಟು ೬ ಕುಟುಂಬಗಳು ಈ ಮೂರು ತಾಲೂಕಿನಲ್ಲಿ ವಾಸಿಸುತ್ತಿದ್ದಾರೆ. ಧುಮಳ್ ಎನ್ನುವ ಬಳಿಯು ಶೇ. ೦೬.೦೦% ಇದ್ದು ಕುಂದಾಪುರದಲ್ಲಿ ೬ ಉಡುಪಿಯಲ್ಲಿ ಕಂಡುಬಂದಿಲ್ಲ. ಕಾರ್ಕಳದಲ್ಲಿ ೩ ಕುಟುಂಬಗಳಿದ್ದು, ಈ ಮೂರು ತಾಲೂಕಿನಲ್ಲಿ ಒಟ್ಟು ೯ ಕುಟುಂಬಗಳು ವಾಸಿಸುತ್ತಿವೆ. ಮಂಡಾಕರ್ ಬಳಿಯು ಶೇ. ೧.೩೩% ಇದ್ದು, ಕುಂದಾಪುರದಲ್ಲಿ ೨ ಕುಟುಂಬಗಳಿವೆ. ಉಡುಪಿ ಹಾಗೂ ಕಾರ್ಕಳದಲ್ಲಿ ಕಂಡುಬಂದಿರುವುದಿಲ್ಲ. ಈ ಮೂರು ತಾಲೂಕಿನಲ್ಲಿ ಒಟ್ಟು ೨ ಕುಟುಂಬಗಳು ವಾಸಿಸುತ್ತಿವೆ. ನೆಯ್ಯಾರಿ ಬಳಿಯು ಶೇ. ೦.೬೭% ಹೊಂದಿದೆ. ಕುಂದಾಪುರದಲ್ಲಿ ೧ ಕುಟುಂಬ ಕಂಡುಬಂದಿದ್ದು, ಉಡುಪಿ ಮತ್ತು ಕಾರ್ಕಳದಲ್ಲಿ ಕಂಡುಬಂದಿಲ್ಲ. ಈ ಮೂರು ತಾಲೂಕಿನಲ್ಲಿ ಒಟ್ಟು ೧ ಕುಟುಂಬ ವಾಸಿಸುತ್ತಿದೆ. ಕಣ್ಣೀರಿ ಬಳಿಯು ಶೇ. ೯.೩೩% ಇದ್ದು, ಕುಂದಾಪುರದಲ್ಲಿ ೧೦ ಕುಟುಂಬಗಳು ದೊರಕಿದ್ದು, ಉಡುಪಿಯಲ್ಲಿ ೪ ಕುಟುಂಬಗಳು ದೊರಕಿವೆ. ಕಾರ್ಕಳದಲ್ಲಿ ಈ ಕುಟುಂಬ ಕಂಡುಬಂದಿಲ್ಲ. ಈ ಮೂರು ತಾಲೂಕುಗಳಲ್ಲಿ ಒಟ್ಟು ೧೪ ಕುಟುಂಬಗಳು ದೊರಕಿವೆ. ಶಿವ ಬಳಿಯು ಶೇಕಡಾವಾರು ೦೨.೦೦% ಇದ್ದು, ಕುಂದಾಪುರದಲ್ಲಿ ೦೩ ಕುಟುಂಬಗಳು ದೊರಕಿದ್ದು, ಉಡುಪಿ ಹಾಗೂ ಕಾರ್ಕಳದಲ್ಲಿ ಕಂಡುಬಂದಿಲ್ಲ. ಈ ಮೂರು ತಾಲೂಕಿನಲ್ಲಿ ಒಟ್ಟು ೩ ಕುಟುಂಬಗಳು ವಾಸಿಸುತ್ತಿವೆ. ಗವಣಿಕಾರ್‌ಯು ಶೇಕಡಾವಾರು ೦೮.೦೦ ಇದ್ದು, ಕುಂದಾಪುರದಲ್ಲಿ ೩ ಕುಟುಂಬಗಳು ವಾಸಿಸುತ್ತಿವೆ. ಉಡುಪಿಯಲ್ಲಿ ೭ ಕುಟುಂಬಗಳು ವಾಸಿಸಿದ್ದು ಕಾರ್ಕಳದಲ್ಲಿ ೨ ಕುಟುಂಬಗಳು ದೊರೆತಿವೆ. ಮೂರು ತಾಲೂಕಿನಲ್ಲಿ ಒಟ್ಟು ೧೨ ಕುಟುಂಬಗಳು ಸಮೀಕ್ಷೆಯಲ್ಲಿ ಕಂಡುಬಂದಿವೆ. ಪನ್ ಸಮಾಕಾರ್ / ಪಳ್‌ಸಹಾರ್ ಬಳಿಯು ಶೇ. ೦.೬೭% ಇದ್ದು, ಕುಂದಾಪುರದಲ್ಲಿ ೧ ಕುಟುಂಬವಿದೆ. ಉಡುಪಿ ಹಾಗೂ ಕಾರ್ಕಳದಲ್ಲಿ ಈ ಕುಟುಂಬಗಳು ಕಂಡುಬಂದಿಲ್ಲ. ಹೀಗಾಗಿ ಈ ಬಳಿಯು ಮೂರು ತಾಲೂಕುಗಳಲ್ಲಿ ೧ ಕುಟುಂಬ ವಾಸಿಸಿದ್ದಾರೆ ಎಂಬುದು ಸಮೀಕ್ಷೆಯಲ್ಲಿ ತಿಳಿಸಲಾಗಿದೆ. ಶಿಗೋಣ / ಶಿವಗಣ್ ಈ ಬಳಿಯು ಶೇ. ೦೯.೩೩ ಇದ್ದು, ಕುಂದಾಪುರದಲ್ಲಿ ೧ ಕುಟುಂಬ ವಾಸಿಸಿದ್ದು, ಉಡುಪಿಯಲ್ಲಿ ೧೦ ಕುಟುಂಬಗಳು ಕಂಡುಬಂದಿವೆ. ಹಾಗೂ ಕಾರ್ಕಳದಲ್ಲಿ ೩ ಕುಟುಂಬಗಳು ಕಂಡುಬಂದಿವೆ. ಈ ಮೂರು ತಾಲೂಕುಗಳಲ್ಲಿ ಒಟ್ಟು ೧೪ ಕುಟುಂಬಗಳು ಕಂಡುಬಂದಿದೆ. ಅಂದೇರಿ ಬಳಿಯು ಶೇ. ೦೨.೦೦% ಇದ್ದು, ಕುಂದಾಪುರದಲ್ಲಿ ೧ ಕುಟುಂಬ ನೆಲೆಸಿದ್ದು, ಉಡುಪಿಯಲ್ಲಿ ಈ ಬಳಿಯ ಕುಟುಂಬ ಕಂಡು ಬಂದಿರುವುದಿಲ್ಲ. ಹಾಗೂ ಕಾರ್ಕಳದಲ್ಲಿ ೨ ಕುಟುಂಬಗಳು ವಾಸಿಸುತ್ತಿವೆ. ಒಟ್ಟು ೩ ಕುಟುಂಬಗಳು ಈ ತಾಲೂಕುಗಳಲ್ಲಿ ವಾಸಿಸುತ್ತಿವೆ. ಒಟ್ಟು ೩ ಕುಟುಂಬಗಳು ಈ ತಾಲೂಕುಗಳಲ್ಲಿ ನೆಲೆಸಿದ್ದಾರೆ.

ಸಾವಂತ ಬಳಿಯು ಶೇ. ೦.೬೭% ಇದ್ದು, ಕುಂದಾಪುರದಲ್ಲಿ ೧ ಕುಟುಂಬ ಕಂಡುಬಂದಿದ್ದು, ಉಡುಪಿ ಹಾಗೂ ಕಾರ್ಕಳದಲ್ಲಿ ಕಂಡುಬಂದಿಲ್ಲ. ಈ ಮೂರು ತಾಲೂಕುಗಳಲ್ಲಿ ಒಟ್ಟು ೧ ಕುಟುಂಬ ಕಂಡುಬಂದಿದೆ. ದೇವಾಳ ಬಳಿಯು ಶೇ. ೦.೬೭% ಇದ್ದು, ಕುಂದಾಪುರದಲ್ಲಿ ೧ ಕುಟುಂಬ ದೊರಕಿದೆ. ಉಡುಪಿ ಹಾಗೂ ಕಾರ್ಕಳದಲ್ಲಿ ಕಂಡುಬಂದಿಲ್ಲ. ಈ ಮೂರು ತಾಲೂಕುಗಳಲ್ಲಿ ಒಟ್ಟು ೧ ಕುಟುಂಬ ದೊರಕಿದೆ. ಚವಣಾ ಬಳಿಯು ಶೇ. ೦.೬೭% ಇದ್ದು, ಕುಂದಾಪುರದಲ್ಲಿ ೦೧ ಕುಟುಂಬವಿದೆ. ಉಡುಪಿ ಹಾಗೂ ಕಾರ್ಕಳದಲ್ಲಿ ಕಂಡುಬಂದಿಲ್ಲ. ಈ ಮೂರು ತಾಲೂಕುಗಳಲ್ಲಿ ಒಟ್ಟು ೧ ಕುಟುಂಬ ವಾಸಿಸುತ್ತಿದೆ. ಮೊಗೆ ಬಳಿಯು ಶೇ. ೦.೬೭% ಇದ್ದು, ಕುಂದಾಪುರದಲ್ಲಿ ಒಂದು ಕುಟುಂಬವಿದ್ದು, ಉಡುಪಿ ಹಾಗೂ ಕಾರ್ಕಳದಲ್ಲಿ ಕಂಡುಬಂದಿಲ್ಲ. ಮೂರು ತಾಲೂಕಿನಲ್ಲಿ ಒಟ್ಟು ೧ ಕುಟುಂಬ ವಾಸವಿದೆ. ಬಿಸೋ ಬಳಿಯು ಶೇಕಡಾವಾರು ೦೧.೩೩% ಇದ್ದು, ಕುಂದಾಪುರದಲ್ಲಿ ೧ ಕುಟುಂಬ ವಾಸವಿದೆ. ಉಡುಪಿಯಲ್ಲಿ ಕಂಡುಬಂದಿಲ್ಲ ಹಾಗೂ ಕಾರ್ಕಳದಲ್ಲಿ ಒಂದು ಕುಟುಂಬ ವಾಸವಿದೆ. ದಾಸಂಜೆ / ಚಿ / ದಾಸವ್ ಬಳಿಯು ಶೇ. ೦೨.೦೦% ಇದ್ದು, ಕುಂದಾಪುರದಲ್ಲಿ ಕಂಡುಬಂದಿಲ್ಲ. ಉಡುಪಿಯಲ್ಲಿ ೨ ಕುಟುಂಬಗಳು ವಾಸವಿದ್ದು, ಕಾರ್ಕಳದಲ್ಲಿ ೧ ಕುಟುಂಬ ವಾಸವಿದೆ. ಈ ತಾಲೂಕುಗಳಲ್ಲಿ ಒಟ್ಟು ವಾಸವಿರುವ ಕುಟುಂಬ ೩ ಗುರುವ್ ಬಳಿಯು ಶೇ. ೦೪.೦೦% ಇದ್ದು ಕುಂದಾಪುರದಲ್ಲಿ ಯಾವುದೇ ಕುಟುಂಬ ವಾಸವಾಗಿರುವುದಿಲ್ಲ. ಉಡುಪಿಯಲ್ಲಿ ೬ ಕುಟುಂಬಗಳು ವಾಸವಾಗಿದ್ದು, ಕಾರ್ಕಳದಲ್ಲಿ ಕಂಡುಬಂದಿಲ್ಲ. ಈ ಮೂರು ತಾಲೂಕುಗಳಲ್ಲಿ ಒಟ್ಟು ವಾಸವಾಗಿರುವ ಕುಟುಂಬಗಳು ೬, ಡೆವೆಡ್‌ಕಾರ್ ಬಳಿಯು ಶೇಕಡಾವಾರು ೦.೬೭% ಇದ್ದು, ಕುಂದಾಪುರದಲ್ಲಿ ಯಾವುದೇ ಕುಟುಂಬ ವಾಸವಾಗಿರುವುದಿಲ್ಲ. ಉಡುಪಿಯಲ್ಲಿ ಒಂದು ಕುಟುಂಬ ವಾಸವಾಗಿದ್ದು, ಕಾರ್ಕಳದಲ್ಲಿ ಯಾವುದೇ ಕುಟುಂಬ ಕಂಡುಬಂದಿಲ್ಲ. ಈ ತಾಲೂಕುಗಳಲ್ಲಿ ಒಟ್ಟು ೧ ಕುಟುಂಬ ವಾಸವಿದೆ. ಉಡುಪಿಯಲ್ಲಿ ೨ ಕುಟುಂಬ ವಾಸವಾಗಿದ್ದು, ಈ ಬಳಿಯ ವಾಸ ಕುಟುಂಬ ಒಟ್ಟು ೨ ಆಗಿದೆ. ದೊರೆಗಾರ್ ಬಳಿಯು ಶೇ. ೦೩.೩೩% ಆಗಿದ್ದು, ಕುಂದಾಪುರದಲ್ಲಿ ಯಾವುದೇ ಕುಟುಂಬ ನೆಲೆಸಿರುವುದಿಲ್ಲ. ಉಡುಪಿಯಲ್ಲಿ ೪ ಕುಟುಂಬಗಳು ವಾಸವಾಗಿದ್ದು, ಕಾರ್ಕಳದಲ್ಲಿ ೧ ಕುಟುಂಬ ವಾಸವಿದೆ. ಒಟ್ಟು ೫ ಕುಟುಂಬಗಳು ವಾಸವಿರುವುದು ಕೇಳಕಾರ್ ಬಳಿಯು ಶೇ. ೦.೬೭ ಇದ್ದು ಕುಂದಾಪುರದಲ್ಲಿ ಯಾವುದೇ ಕುಟುಂಬ ವಾಸವಾಗಿರುವುದಿಲ್ಲ. ಉಡುಪಿಯಲ್ಲಿ ೧ ಕುಟುಂಬ ಕಂಡುಬಂದಿದ್ದು, ಕಾರ್ಕಳದಲ್ಲಿ ಯಾವುದೇ ಕುಟುಂಬ ವಾಸವಾಗಿಲ್ಲ. ಈ ಮೂರು ತಾಲೂಕುಗಳಲ್ಲಿ ಒಟ್ಟು ಒಂದು ಕುಟುಂಬ ವಾಸವಾಗಿದೆ. ಇರ್ಮಳ್ ಬಳಿಯು ಶೇ. ೦೧.೩೩% ಇದ್ದು ಕುಂದಾಪುರದಲ್ಲಿ ಯಾವುದೇ ಕುಟುಂಬ ಕಂಡುಬಂದಿಲ್ಲ. ಉಡುಪಿಯಲ್ಲಿ ಒಂದು ಕುಟುಂಬ ವಾಸವಾಗಿದ್ದು, ಕಾರ್ಕಳದಲ್ಲಿ ೧ ಕುಟುಂಬ ವಾಸವಾಗಿದೆ. ಈ ಮೂರು ತಾಲೂಕುಗಳಲ್ಲಿ ಒಟ್ಟು ೨ ಕುಟುಂಬಗಳು ವಾಸವಿದೆ. ಜೋಷಿ ಬಳಿಯು ಶೇ. ೦.೬೭% ಇದ್ದು, ಕುಂದಾಪುರ ಹಾಗೂ ಕಾರ್ಕಳದಲ್ಲಿ ಯಾವುದೇ ಕುಟುಂಬ ವಾಸವಿಲ್ಲ. ಉಡುಪಿಯಲ್ಲಿ ೧ ಕುಟುಂಬ ವಾಸವಿದ್ದು, ಈ ಮೂರು ತಾಲೂಕುಗಳಲ್ಲಿ ಒಟ್ಟು ೧ ಕುಟುಂಬ ಕಂಡುಬಂದಿದೆ. ಶಿಂಬೆಗಾರ್ ಬಳಿಯು ಶೇ. ೦.೬೭% ಇದ್ದು, ಕುಂದಾಪುರ ಹಾಗೂ ಕಾರ್ಕಳದಲ್ಲಿ ಯಾವುದೇ ಕುಟುಂಬ ಕಂಡುಬಂದಿಲ್ಲ. ಉಡುಪಿಯಲ್ಲಿ ೧ ಕುಟುಂಬ ನೆಲೆಸಿದ್ದು, ಇದರ ಒಟ್ಟು ನೆಲೆಸಿರುವ ಸಂಖ್ಯೆ ೧ ಆಗಿದೆ. ಬರನ್‌ಕಾರ್ ಶೇ. ೦೧.೩೩% ಇದ್ದು, ಇದು ಕೂಡ ಕುಂದಾಪುರ ಹಾಗೂ ಕಾರ್ಕಳದಲ್ಲಿ ಯಾವುದೇ ಕುಟುಂಬ ವಾಸವಾಗಿಲ್ಲ. ಉಡುಪಿಯಲ್ಲಿ ೨ ಕುಟುಂಬಗಳು ದೊರಕಿದ್ದು, ಈ ಬಳಿಯ ಒಟ್ಟು ವಾಸವಿರುವ ಕುಟುಂಬ ೨ ಆಗಿದೆ. ಮಾಯಿಲ್

ಬಳಿ ಶೇ. ೦.೬೭% ಇದ್ದು, ಕುಂದಾಪುರ ಹಾಗೂ ಕಾರ್ಕಳದಲ್ಲಿ ಯಾವುದೇ ಕುಟುಂಬ ವಾಸವಿಲ್ಲ. ಉಡುಪಿಯಲ್ಲಿ ೧ ಕುಟುಂಬ ವಾಸವಿದ್ದು, ಇದರ ವಾಸವಿರುವ ಒಟ್ಟು ಕುಟುಂಬ ೧ ಆಗಿದೆ. ಸಾಂತು ಬಳಿ ಶೇ. ೦೧.೩೩% ಇದ್ದು, ಕುಂದಾಪುರದಲ್ಲಿ ಹಾಗೂ ಉಡುಪಿಯಲ್ಲಿ ಯಾವುದೇ ಕುಟುಂಬ ವಾಸವಿರುವುದಿಲ್ಲ. ಕಾರ್ಕಳದಲ್ಲಿ ಒಟ್ಟು ೨ ಕುಟುಂಬ ವಾಸವಿದ್ದು, ಈ ಬಳಿಯ ಒಟ್ಟು ವಾಸವಿರುವ ಸಂಖ್ಯೆ ೨ ಆಗಿದೆ. ದಬ್ಬಾಳ್‌ಕಾರ್ ಬಳಿಯು ಶೇ. ೦೧.೩೩% ಇದ್ದು, ಕುಂದಾಪುರದಲ್ಲಿ ಹಾಗೂ ಉಡುಪಿಯಲ್ಲಿ ಯಾವುದೇ ಕುಟುಂಬ ಕಂಡು ಬರುವುದಿಲ್ಲ. ಕಾರ್ಕಳದಲ್ಲಿ ಒಟ್ಟು ೨ ಕುಟುಂಬಗಳು ವಾಸವಿದ್ದು, ಇದರ ಒಟ್ಟು ಸಂಖ್ಯೆಯು ಕೂಡ ೨ ಆಗಿದೆ. ಭಾಸ್ಕರ್ ಬಳಿಯು ಶೇ. ೦೧.೩೩% ಇದ್ದು ಕುಂದಾಪುರ ಹಾಗೂ ಉಡುಪಿಯ ಯಾವುದೇ ಕುಟುಂಬ ಕಂಡುಬಂದಿಲ್ಲ. ಕಾರ್ಕಳದಲ್ಲಿ ೨ ಕುಟುಂಬಗಳು ವಾಸವಿದ್ದು, ಇದರ ಒಟ್ಟು ಸಂಖ್ಯೆ ೨ ಆಗಿದೆ. ಗೋರೆಲ್ (ಗೋರ್ಲೆ) ಬಳಿಯು ಶೇ. ೦೧.೩೩% ಇದ್ದು, ಕುಂದಾಪುರ ಹಾಗೂ ಉಡುಪಿಯ ಯಾವುದೇ ಕುಟುಂಬ ಕಂಡುಬಂದಿಲ್ಲ. ಕಾರ್ಕಳದಲ್ಲಿ ೨ ಕುಟುಂಬಗಳು ವಾಸವಿದೆ. ಇದರ ಒಟ್ಟು ಸಂಖ್ಯೆ ೨ ಆಗಿದೆ. ಬಡೆಕಾರ್ ಬಳಿಯು ಬಡೆಗಾರ್ ಎಂತಲೂ ಕರೆಯುತ್ತಾರೆ. ಇದು ಶೇ. ೦೪.೬೭% ಇದು ಕುಂದಾಪುರ ಹಾಗೂ ಉಡುಪಿಯಲ್ಲಿ ಯಾವುದೇ ಕುಟುಂಬ ಕಂಡುಬಂದಿಲ್ಲ. ಕಾರ್ಕಳದಲ್ಲಿ ೭ ಕುಟುಂಬಗಳು ವಾಸವಿದ್ದು, ಇದರ ಒಟ್ಟು ಸಂಖ್ಯೆ ಆಗಿದೆ. ಗೊಳಂಬಳಿಯು ಶೇ. ೦.೬೭% ಇದ್ದು, ಕುಂದಾಪುರ ಹಾಗೂ ಉಡುಪಿಯಲ್ಲಿ ಯಾವುದೇ ಕುಟುಂಬ ವಾಸವಿಲ್ಲ. ಕಾರ್ಕಳದಲ್ಲಿ ೧ ಕುಟುಂಬ ವಾಸವಿದ್ದು ಇದರ ಒಟ್ಟು ವಾಸವಿರುವ ಸಂಖ್ಯೆ ೧ ಆಗಿದೆ. ವಾಳಿಂಬೆ ಬಳಿಯು ಶೇ. ೦.೬೭% ಇದ್ದು, ಇದು ಕೂಡ ಕುಂದಾಪುರ ಹಾಗೂ ಉಡುಪಿಯಲ್ಲಿ ಯಾವುದೇ ಕುಟುಂಬ ವಾಸವಿರುವುದಿಲ್ಲ. ಕಾರ್ಕಳದಲ್ಲಿ ಒಂದು ಕುಟುಂಬ ವಾಸವಿದ್ದು, ಈ ಬಳಿಯ ಒಟ್ಟು ಸಂಖ್ಯೆ ೧ ಆಗಿದೆ. ಸಂಕೋಲ್ / ಸಂಕೋಳ್ ಬಳಿಯು ಶೇ. ೦೨.೬೭% ಇದ್ದು, ಕುಂದಾಪುರ ಹಾಗೂ ಉಡುಪಿಯ ಯಾವುದೇ ಕುಟುಂಬ ಕಂಡು ಬಂದಿಲ್ಲ. ಕಾರ್ಕಳದ ೪ ಕುಟುಂಬಗಳು ವಾಸವಿದ್ದು, ಈ ಬಳಿಯ ಒಟ್ಟು ಸಂಖ್ಯೆ ೪ ಆಗಿರುತ್ತದೆ. ಟೀಕಾ ತೀಕ ಬಳಿಯು ಶೇ. ೧.೩೩% ಇದ್ದು, ಕುಂದಾಪುರ ಹಾಗೂ ಉಡುಪಿಯಲ್ಲಿ ಯಾವುದೇ ಕುಟುಂಬ ವಾಸವಿರುವುದಿಲ್ಲ. ಕಾರ್ಕಳದಲ್ಲಿ ೨ ಕುಟುಂಬಗಳು ವಾಸವಿದ್ದು, ಇದರ ಒಟ್ಟು ವಾಸ ಕುಟುಂಬ ೨ ಆಗಿದೆ. ಜಂಬೋಲಿ ಬಳಿಯು ಶೇ. ೦.೬೭% ಇದ್ದು, ಕುಂದಾಪುರ ಹಾಗೂ ಉಡುಪಿಯಲ್ಲಿ ಯಾವುದೇ ಕುಟುಂಬ ಕಂಡುಬಂದಿಲ್ಲ. ಕಾರ್ಕಳದಲ್ಲಿ ೧ ಕುಟುಂಬ ವಾಸವಿದ್ದು, ಇದರ ಒಟ್ಟು ವಾಸವಿರುವ ಕುಟುಂಬ ೧ ಆಗಿದೆ. ಕೋಂತ್ರಾ ಬಳಿಯು ಶೇ. ೦.೬೭% ಇದ್ದು, ಕುಂದಾಪುರ ಹಾಗೂ ಉಡುಪಿಯಲ್ಲಿ ಯಾವುದೇ ಕುಟುಂಬ ಕಂಡುಬಂದಿಲ್ಲ. ಕಾರ್ಕಳದಲ್ಲಿ ಒಂದು ಕುಟುಂಬ ವಾಸವಿದ್ದು, ಇದರ ಒಟ್ಟು ಸಂಖ್ಯೆ ೧ ಆಗಿದೆ. ಪಡುವಳ್‌ಕಾರ್ ಬಳಿಯು ಶೇ. ೧.೩೩% ಇದ್ದು, ಕುಂದಾಪುರ ಹಾಗೂ ಉಡುಪಿಯಲ್ಲಿ ಯಾವುದೇ ಕುಟುಂಬ ಕಂಡುಬಂದಿಲ್ಲ. ಕಾರ್ಕಳದಲ್ಲಿ ೨ ಕುಟುಂಬಗಳು ವಾಸವಿದ್ದು, ಈ ಬಳಿಯ ಒಟ್ಟು ವಾಸವಿರುವ ಕುಟುಂಬ ೨ ಆಗಿದೆ. ಸಾಲಿಯಾನ್ / ಸಾಲ್ವೆ ಬಳಿಯು ಶೇ. ೦.೬೬% ಇದ್ದು, ಕುಂದಾಪುರ ಹಾಗೂ ಉಡುಪಿಯಲ್ಲಿ ಯಾವುದೇ ಕುಟುಂಬವಿರುವುದಿಲ್ಲ. ಕಾರ್ಕಳದಲ್ಲಿ ಒಂದು ಕುಟುಂಬವಿದ್ದು, ಇದು ಒಟ್ಟು ಸಂಖ್ಯೆ ೧ ಆಗಿದೆ.

ಭೂಮಿ ಬಳಿಯು ಶೇ. ೦.೬೬% ಇದ್ದು, ಕುಂದಾಪುರ ಹಾಗೂ ಉಡುಪಿಯಲ್ಲಿ ಯಾವುದೇ ಕುಟುಂಬವಿರುವುದಿಲ್ಲ. ಕಾರ್ಕಳದಲ್ಲಿ ಒಂದು ಕುಟುಂಬವಿದ್ದು, ಇದರ ಒಟ್ಟು ಸಂಖ್ಯೆ ೧ ಆಗಿದೆ. ಶೇಡೆಗಾರ್ ಬಳಿಯು ಶೇ. ೦೧.೩೩% ಇದ್ದು, ಕುಂದಾಪುರ ಹಾಗೂ ಉಡುಪಿಯಲ್ಲಿ ಯಾವುದೇ ಕುಟುಂಬ ಕಂಡುಬಂದಿರುವುದಿಲ್ಲ. ಕಾರ್ಕಳದಲ್ಲಿ ೨ ಕುಟುಂಬಗಳು ವಾಸವಿದ್ದು, ಇದರ ಒಟ್ಟು ವಾಸ ಕುಟುಂಬ ೨ ಆಗಿದೆ. ಹಾಗೆ ಯಾವ ಬಳಿಗೆ ಸೇರಿರುತ್ತೇವೆ ಎಂದು ತಿಳಿಯದೇ ಇರುವ ಕುಟುಂಬವು ಶೇ. ೦೬.೦೦% ಇದ್ದು, ಕುಂದಾಪುರದಲ್ಲಿ ೪ ಕುಟುಂಬಗಳಿದ್ದು ಉಡುಪಿಯಲ್ಲಿ ೨ ಕುಟುಂಬಗಳಿವೆ. ಹಾಗೆ ಕಾರ್ಕಳದಲ್ಲಿ ೩ ಕಂಡುಬಂದಿದೆ. ಇದರ ಒಟ್ಟು ಸಂಖ್ಯೆ ೯ ಆಗಿದೆ.

ಕೋಷ್ಟಕವನ್ನು ಗಮನಿಸಿದಾಗ ತಿಳಿಯುವ ಅಂಶವೇನೆಂದರೆ ಮರಾಟಿ ನಾಯ್ಕ ಬಳಿಗಳಿಗೆ ಸಂಬಂಧಿಸಿ ೧೫೦ ಕುಟುಂಬಗಳಲ್ಲಿ ೪೬ ಬಳಿಗಳು ಇರುವುದು ಕಂಡುಬಂದಿರುತ್ತದೆ.

ಮರಾಟಿ

ಮರಾಟಿ ಸಮುದಾಯದ ಬಳಿಯ ಸಮೀಕ್ಷೆ ಈ ತರನಾಗಿದೆ. ಮರಾಟಿ ಸಮುದಾಯದ ಬಳಿಗಳಲ್ಲಿ ಮೋರೆ ಬಳಿಯು ಶೇಕಡಾವಾರು ೧೬.೬೭% ಇದ್ದು, ಇದರ ಒಟ್ಟು ವಾಸದ ಕುಟುಂಬಗಳು ೨೫ ಆಗಿರುತ್ತದೆ. ಜಾದವ್ ಬಳಿಯು ಶೇ. ೧೨.೬೬% ಇದ್ದು, ಇದರ ಒಟ್ಟು ಕುಟುಂಬಗಳು ೧೯ ಆಗಿದೆ. ಪವಾರ್ ಬಳಿಯು ಶೇ. ೦೭.೩೩% ಇದ್ದು ಇದರ ಒಟ್ಟು ವಾಸದ ಕುಟುಂಬಗಳು ೧೧ ಆಗಿದೆ. ಕರ್ಮೋರೆ ಬಳಿಯು ಶೇ. ೦೧.೩೩% ಇದ್ದು, ಇದರ ಒಟ್ಟು ಸಂಖ್ಯೆ ೦೨ ಆಗಿದೆ. ಸಿಂಧೆ ಬಳಿಯು ಶೇ. ೦೨.೦೦% ಇದ್ದು ಇದರ ಒಟ್ಟು ಸಂಖ್ಯೆ ೩ ಆಗಿದೆ. ಜಗತಾಪ ಬಳಿಯು ಶೇ. ೦.೬೭% ಇದ್ದು, ಇದರ ಒಟ್ಟು ವಾಸವಿರುವ ಕುಟುಂಬ ೧ ಆಗಿದೆ. ಹರಿಯಾರ್/ಹರಿಹರ್/ಹರಿಹರ ಬಳಿಯು ಶೇ. ೦೪.೦೦% ಇದ್ದು, ಇದರ ಒಟ್ಟು ವಾಸವಿರುವ ಕುಟುಂಬಗಳು ೬ ಆಗಿರುತ್ತದೆ. ಲಾಡ್ ಎನ್ನುವ ಬಳಿಯು ಶೇ. ೦೩.೩೩% ಇದ್ದು, ಇದರ ಒಟ್ಟು ವಾಸವಿರುವ ಕುಟುಂಬಗಳು ೦೫ ಆಗಿವೆ. ವೀಡೆ ಬಳಿಯು ಶೇ. ೦೬.೬೬% ಇದ್ದು, ಇದರ ಒಟ್ಟು ಕುಟುಂಬ ೧೦ ಆಗಿದೆ. ಬಹುಮಾನ್ ಬಳಿಯು ಶೇ. ೦೧.೩೩% ಇದ್ದು, ಇದರ ವಾಸವಿರುವ ಒಟ್ಟು ಕುಟುಂಬಗಳು ೦೨, ಬೋಂಸ್ಲೆ ಶೇ. ೦೧.೩೩% ಇದ್ದು, ಇದರ ವಾಸವಿರುವ ಒಟ್ಟು ಕುಟುಂಬಗಳು ೨, ಕವಡೆ ಬಳಿಯು ಶೇ. ೧೯.೩೩% ಇದ್ದು, ಇದರ ಒಟ್ಟು ಕುಟುಂಬಗಳು ೨೯, ಸಪ್ಪೆಕಾರ್ ಬಳಿಯು ಶೇ. ೦೨.೬೭% ಇದ್ದು, ಇದರ ಒಟ್ಟು ಕುಟುಂಬಗಳು ೪. ಅಸ್ಪಲ್ ಬಳಿಯು ಶೇ. ೦೧.೩೩% ಇದ್ದು ಒಟ್ಟು ೦೨ ಕುಟುಂಬಗಳು ವಾಸವಿದೆ. ರಾಜಪಾಡೆ ಶೇ. ೦.೬೭% ಇದ್ದು ಇದರ ಒಟ್ಟು ಕುಟುಂಬ ೦೧ ಆಗಿದೆ. ಸೂರೆ / ಸೂರ್ಯೆ / ಸೂರ್ಯ ಬಳಿ ಶೇ. ೦೪.೬೭% ಇದ್ದು, ಇದರ ಒಟ್ಟು ವಾಸವಿರುವ ಕುಟುಂಬಗಳು ೦೭ ಆಗಿವೆ. ಊಚೆಕಾರ್ / ಊಚೆಲ್‌ಕಾರ್ ಶೇ. ೦೬.೬೭% ಇದ್ದು, ಇದರ ಒಟ್ಟು ವಾಸವಿರುವ ಕುಟುಂಬಗಳು ೧೦, ಥಾಮಸ್ ಬಳಿಯು ಶೇ. ೦೨.೬೭% ಇದ್ದು, ಇದರ ಒಟ್ಟು ಕುಟುಂಬಗಳು ೪, ಧರೆಕಾರ್ ಬಳಿಯು ಶೇ. ೦.೬೭% ಇದ್ದು, ಈ ಬಳಿಯು ಒಟ್ಟು ವಾಸವಿರುವ ಕುಟುಂಬ ೧, ಭಾವರ್ ಬಳಿಯು ಶೇ. ೨.೦೦% ಇದ್ದು, ಸಜೆಕಾಡನ್ ಬಳಿಯ ಮಾಹಿತಿ ಇಲ್ಲ ಇದರ ಒಟ್ಟು ವಾಸವಿರುವ ಕುಟುಂಬಗಳು ೩, ಸಂಜ್‌ಕಾಪನ್ ಬಳಿಯು ಶೇ. ೦.೬೭% ಇದ್ದು, ಈ ಬಳಿಯು ಒಟ್ಟು ವಾಸವಿರುವ

ಕುಟುಂಬ ೧, ಕಡಿಲ್‌ಕಾರ್ ಬಳಿಯು ಶೇ. ೦.೬೭% ಇದ್ದು ಇದರ ಒಟ್ಟು ೧ ಕುಟುಂಬವಿದೆ. ಯಾವುದೇ ಬಳಿ ಗೊತ್ತಿಲ್ಲದವರು ಶೇ. ೦.೬೭ ಇದ್ದು, ಇವರು ವಾಸವಿರುವ ಒಟ್ಟು ಕುಟುಂಬ ೧ ಆಗಿದೆ.

ಈ ಮರಾಟಿ ಸಮುದಾಯದ ಕೋಷ್ಟಕವನ್ನು ಗಮನಿಸಿದಾಗ ಇವರ ಒಟ್ಟು ೧೫೦ ಕುಟುಂಬಗಳಲ್ಲಿ ೨೨ ಬಳಿಗಳು ಕಂಡುಬಂದಿರುತ್ತವೆ.

ಕುಡುಬಿ ಸಮುದಾಯ

ಕುಡುಬಿ ಸಮುದಾಯಕ್ಕೆ ಸಂಬಂಧಿತ ಬಳಿಯನ್ನು ಗಮನಿಸಿದ್ದಾಗ ಉಡುಪಿ ಜಿಲ್ಲೆಯ ಕಾರ್ಕಳ, ಉಡುಪಿ ಮತ್ತು ಕುಂದಾಪುರ ತಾಲೂಕಿನಲ್ಲಿ ತಲಾ ೫೦ ಕುಟುಂಬಗಳಂತೆ ಒಟ್ಟು ಜಿಲ್ಲೆಯಿಂದ ೧೫೦ ಕುಟುಂಬಗಳನ್ನು ಆಯ್ಕೆ ಮಾಡಲಾಗಿತ್ತು. ವಾಗಣ್‌ಕಾರ್ ಬಳಿಯವರು ಜಿಲ್ಲೆಯಲ್ಲಿ ೧೫೦ ಕುಟುಂಬಗಳಲ್ಲಿ ಅಧ್ಯಯನದಲ್ಲಿ ಒಟ್ಟು ೦೭ ಬಳಿಗಳು ಕಂಡುಬಂದಿರುತ್ತವೆ. ದುಕ್ಕಾರ್ ಬಳಿಯ ಕುಟುಂಬಗಳು ೦೫, ನೌಕಾರು ಬಳಿಯ ೦೩ ಕುಟುಂಬಗಳು, ಮೇಡ್‌ಕ್ಕಾರ್ / ಮೆಟ್‌ಕ್ಕಾರ್ ಬಳಿಯವರ ೦೭ ಕುಟುಂಬಗಳು, ಕಡ್‌ಕಾರ್ ಬಳಿಯ ೦೬ ಕುಟುಂಬಗಳು, ಬಸ್ಕಾರ್ ಬಳಿಯ ೦೪ ಕುಟುಂಬಗಳು, ಕುತ್‌ಕ್ಕಾರ್ ಬಳಿಯ ೦೯ ಕುಟುಂಬಗಳು, ಖಡಕ್ಕಾರ್ ಬಳಿಯ ೦೧ ಕುಟುಂಬ, ರಾಯ್ಕರ್ ಬಳಿಯ ೦೧ ಕುಟುಂಬ, ಭಟ್ಕಾರ್ ಬಳಿಯ ೦೨ ಕುಟುಂಬಗಳು, ಮುಕ್ಕಾರ್ ಬಳಿಯ ೦೭ ಕುಟುಂಬಗಳು, ಪತ್ಕಾರ್ ಬಳಿಯ ಒಟ್ಟು ೧೦ ಕುಟುಂಬಗಳು, ಹುಣ್ಸಕಾರ್ ೦೬ ಕುಟುಂಬಗಳು, ಸಂತಬಳಿ ಅಥವಾ ೦೬ ಕುಟುಂಬಗಳಲ್ಲಿ, ಮೊರಕ್ಕಾರ್ ಬಳಿಯು ೦೬ ಕುಟುಂಬಗಳಲ್ಲಿ, ಕದ್ಕಾರ್ ೦೬ ಕುಟುಂಬಗಳಲ್ಲಿ, ಕೆಲ್ಕಾರ್ ಬಳಿಯ ೦೩ ಕುಟುಂಬಗಳು, ನರೆಕ್ಕಾರ್ ಬಳಿಯ ೦೨ ಕುಟುಂಬಗಳು, ಕಡ್ಕೆರ್ ಬಳಿಯ ೦೨ ಕುಟುಂಬಗಳು, ಗಣ್‌ಕಾರ್ ಬಳಿಯ ೦೮ ಕುಟುಂಬಗಳು, ನೈವ್‌ಕಾರ್ ಬಳಿಯ ೦೯ ಕುಟುಂಬಗಳು, ಮೊರ್ಕರ್ / ಮೊಲ್ಕಾರ್ ಬಳಿಯ ೦೩ ಕುಟುಂಬಗಳು, ಅಮ್‌ಕ್ಕಾರ್ ಬಳಿಯ ೦೫ ಕುಟುಂಬಗಳು, ತೋಡ್ಕಾರ್ ಬಳಿಯು ೦೩ ಕುಟುಂಬಗಳಲ್ಲಿ ನೆಕ್ಕಾರ್ ಬಳಿಯ ೦೨ ಕುಟುಂಬಗಳು, ಬಗಣಕ್ಕಾರ್ ಬಳಿಯ ೦೧ ಕುಟುಂಬಗಳು, ದನ್ಕಾರ್ ಬಳಿಯು ೦೨ ಕುಟುಂಬಗಳಲ್ಲಿ, ಮೇಸ್ತ ಬಳಿಯು ೦೩ ಕುಟುಂಬಗಳಲ್ಲಿ ಮೆಡ್‌ಕ್ಕಾರ್ ಬಳಿಯ ೦೧ ಕುಟುಂಬ, ಭರಮ್‌ಕಾರ್ ಬಳಿಯ ೦೩ ಕುಟುಂಬಗಳು, ಗುಡಿಕ್ಕಾರ್ ಬಳಿಯು ೦೩ ಕುಟುಂಬಗಳು, ಬೊಲೆಕ್ಕಾರ್ ಬಳಿಯ ೦೪ ಕುಟುಂಬಗಳು, ನಾಯ್ಕರ ಬಳಿಯ ೦೨ ಕುಟುಂಬಗಳು, ಸನ್ಕರ್ ಬಳಿಯು ೦೨ ಕುಟುಂಬಗಳು, ಬಗಣಕ್ಕಾರ್ ಬಳಿಯ ೦೩ ಕುಟುಂಬಗಳು, ಮಡ್‌ಕಟ್ ಬಳಿಯ ೦೧ ಕುಟುಂಬಗಳು ಕಂಡುಬರುತ್ತದೆ.

ಕುಡುಬಿ ಸಮುದಾಯಕ್ಕೆ ಸಂಬಂಧಪಟ್ಟ ಬಳಿಗಳನ್ನು ಅವಲೋಕಿಸಿದ್ದಾಗ ಉಡುಪಿ ಜಿಲ್ಲೆಯ ಕುಡುಬಿ ಸಮುದಾಯದ ೧೫೦ ಕುಟುಂಬಗಳನ್ನು ಸಮೀಕ್ಷೆಗೊಳಪಡಿಸಿದಾಗ ಒಟ್ಟು ೩೬ ವಿವಿಧ ಬಳಿಗಳು ಕಂಡುಬಂದಿರುತ್ತವೆ. ಅಧ್ಯಯನಕ್ಕೊಳಪಡಿಸಿದ ಮರಾಟಿ ಸಮುದಾಯಗಳಲ್ಲಿ ಮರಾಟಿ ಸಮುದಾಯದ ಕೆಲವೊಂದು ಬಳಿಗಳು ಮರಾಟಿ ನಾಯ್ಕ ಸಮುದಾಯದ ಕುಟುಂಬದಲ್ಲಿ ಕಂಡುಬರುತ್ತದೆ. ಕೋಷ್ಟಕವನ್ನು ಅವಲೋಕಿಸಿದಾಗ ಒಂದು ನಿರ್ದಿಷ್ಟವಾದ ಮರಾಟಿ ಸಮುದಾಯವು ಆರಂಭಿಕ ಹಂತದಲ್ಲಿ ಕೆಲವೊಂದು ಸೀಮಿತ ಬಳಿಗಳಿದ್ದು, ಕಾಲಾಂತರದಲ್ಲಿ ಬೆಳವಣಿಗೆಯಾಗುತ್ತಾ ಬಂದಾಗ ಅನೇಕ ಬಳಿಗಳು ಹುಟ್ಟಿಕೊಂಡಿರುವುದನ್ನು ಗಮನಿಸಬಹುದು.

ಕೋಷ್ಟಕ: ೪.೨

ಬಳಿ ನೋಡುವುದರ ಬಗ್ಗೆ ತಿಳುವಳಿಕೆದಾರರ ಅಭಿಪ್ರಾಯದ ವಿವರಗಳು

ಸಮುದಾಯದ ಹೆಸರು ಮತ್ತು ತಾಲೂಕು	ಅಭಿಪ್ರಾಯದ ಹಂಚಿಕೆ					
ಮರಾಟಿನಾಯ್ಕ	ನೋಡುತ್ತೇವೆ	ಶೇಕಡವಾರು	ನೋಡುವುದಿಲ್ಲ	ಶೇಕಡವಾರು	ಒಟ್ಟು ಅಭಿಪ್ರಾಯ	ಶೇಕಡವಾರು
ಕುಂದಾಪುರ	೪೮	೩೨	೦೨	೧.೩೩	೫೦	೧೦೦.೦೦
ಉಡುಪಿ	೪೬	೩೦.೬೭	೦೪	೨.೬೭	೫೦	೧೦೦.೦೦
ಕಾರ್ಕಳ	೪೮	೩೨	೦೨	೧.೩೩	೫೦	೧೦೦.೦೦
ಒಟ್ಟು	೧೪೨	೯೪.೬೭	೦೮	೦೫.೩೩	೧೫೦	೧೦೦.೦೦
ಮರಾಟಿ	೧೩೯	೯೨.೬೭	೧೧	೦೭.೩೩	೧೫೦	೧೦೦.೦೦
ಕಾರ್ಕಳ ತಾಲೂಕು						

ಕೋಷ್ಟಕ ಸಂಖ್ಯೆ ೪.೨ರಲ್ಲಿ ಬಳಿ ನೋಡುವ ಪದ್ಧತಿಯ ಬಗ್ಗೆ ತಿಳುವಳಿಕೆದಾರರ ಅಭಿಪ್ರಾಯಗಳನ್ನು ಸಂಗ್ರಹಿಸಲಾಗಿದೆ. ಸಮೀಕ್ಷೆಗೊಳಪಟ್ಟ ಕುಂದಾಪುರ, ಉಡುಪಿ ಮತ್ತು ಕಾರ್ಕಳ ತಾಲೂಕುಗಳ ಮರಾಟಿ ನಾಯ್ಕ ಸಮುದಾಯದ ೧೫೦ ಕುಟುಂಬಗಳಲ್ಲಿ ಬಳಿ ನೋಡುವ ಪದ್ಧತಿ ಬಗ್ಗೆ ಅಭಿಪ್ರಾಯವನ್ನು ಕೇಳಿದಾಗ ಒಟ್ಟು ೧೪೨ (೯೪.೬೭%) ರಷ್ಟು ಕುಟುಂಬದವರು ವಿವಾಹಕ್ಕೆ ಬಳಿಯನ್ನು ನೋಡುತ್ತೇವೆ. ಎಂದರೆ ಒಟ್ಟು ೦೮ (೦೫.೩೩%) ರಷ್ಟು ಕುಟುಂಬಗಳು ತಾವು ಬಳಿಯನ್ನು ನೋಡುದಿಲ್ಲವೆಂಬ ಹೇಳಿಕೆಗಳು ಕಂಡುಬಂದಿವೆ.

ವಿವಾಹಕ್ಕೆ ಬಳಿ ನೋಡುವ ಕುರಿತು ಬರುವ ಮರಾಟಿ ಸಮುದಾಯದ ೧೫೦ ಕುಟುಂಬಗಳನ್ನು ಸಮೀಕ್ಷೆಗೆ ಒಳಪಡಿಸಿದರೆ ಒಟ್ಟು ೧೩೯ (೯೨.೬೭%) ರಷ್ಟು ಮಂದಿ ಬಳಿಯನ್ನು ವಿವಾಹಗಳಲ್ಲಿ ನೋಡುತ್ತೇವೆ ಎಂದು ತಿಳಿಸಿರುವುದು ಕಂಡುಬಂದಿದೆ. ಅದರಂತೆ ಉಳಿದ ೧೧ ಕುಟುಂಬಗಳು (೭.೩೩%) ರಷ್ಟು ತಾವು ಬಳಿಯನ್ನು ತಮ್ಮ ವಿವಾಹಕ್ಕೆ ನೋಡುದಿಲ್ಲವೆಂಬುದರ ಬಗ್ಗೆ ತಿಳಿಸಿದ್ದಾರೆ. ಹಾಗಾಗಿ ಈ ಬಳಿ ನೋಡುವ ಪದ್ಧತಿಯು ತನ್ನ ಪ್ರಭಾವವನ್ನು ಹೆಚ್ಚಿನ ಪ್ರಮಾಣದಲ್ಲಿರುವುದನ್ನು ಮರಾಟಿ ನಾಯ್ಕ ಮತ್ತು ಮರಾಟಿ ಸಮುದಾಯದ ಕಾಣಬಹುದಾಗಿದೆ. ಉಡುಪಿ ಜಿಲ್ಲೆಯ ಮರಾಟಿ ನಾಯ್ಕ ಮತ್ತು ಮರಾಟಿ ಸಮುದಾಯಗಳ ಒಟ್ಟು ೧೫೦ ಕುಟುಂಬಗಳ ಬಳಿ ನೋಡುವುದರ ಬಗೆಗೆ ತಿಳುವಳಿಕೆದಾರರ ಅಭಿಪ್ರಾಯಗಳನ್ನು ತೌಲನಿಕವಾಗಿ ಗಮನಿಸಿದಾಗ ಪ್ರತಿಶತ ೯೦% ರಷ್ಟು ಕುಟುಂಬಗಳು ಬಳಿ ನೋಡುವ ವಿಚಾರಕ್ಕೆ ಒಲವು ತೋರಿಸಿದರೇ, ನೋಡುವುದಿಲ್ಲ ಎನ್ನುವವರ ಪ್ರಮಾಣ ತುಂಬಾ ಕಡಿಮೆ ಇದ್ದು ಎರಡು ಸಮುದಾಯಗಳಲ್ಲಿ ಸಮವಾಗಿದನ್ನು ಕೋಷ್ಟಕದಲ್ಲಿ ಕಾಣಬಹುದು.

ಕೋಷ್ಟಕ: ೪.೩

ಬಳಿಗಳನ್ನು (ಬೆಡಗು) ನೋಡುವುದರ ಬಗೆಗಿನ ಕಾರಣ ಕುರಿತು ತಿಳುವಳಿಕೆದಾರರ ಅಭಿಪ್ರಾಯಗಳ ವಿವರಗಳು

ಸಮುದಾಯದ ಹೆಸರು ಮತ್ತು ತಾಲೂಕು	ಬಳಿ ನೋಡುವುದರ ಕಾರಣಗಳ ಹಂಚಿಕೆಯ					
ಮರಾಟಿ ನಾಯ್ಕ	ಒಂದೇ ಬಳಿಯವರಾದರೆ ಸಹೋದರ – ಸಹೋದರಿಯಾಗುತ್ತಾರೆ	ಹಿಂದಿನಿಂದಲೂ ನಡೆದು ಬಂದ ಸಂಪ್ರದಾಯ	ಬೇರೆ ಬೇರೆ ಬಳಿಯಾದರೆ ಒಳ್ಳೆಯದು	ವೈಜ್ಞಾನಿಕತೆಯ ನಂಬಿಕೆ	ಬಳಿ ನೋಡುವವರ ಒಟ್ಟು ಸಂಖ್ಯೆ	ಸಮೀಕ್ಷೆಗೊಳಪಟ್ಟ ಒಟ್ಟು ಸಂಖ್ಯೆ
ಕುಂದಾಪುರ	೩೭	೦೫	೦೫	೦೧	೪೮	೫೦
ಉಡುಪಿ	೩೪	೦೪	೦೬	೦೨	೪೬	೫೦
ಕಾರ್ಕಳ	೩೦	೦೬	೦೫	೦೭	೪೮	೫೦
ಒಟ್ಟು	೧೦೧	೧೫	೧೬	೧೦	೧೪೨	೧೫೦
ಶೇಕಡವಾರು	೭೧.೧೩	೧೦.೫೬	೧೧.೨೭	೭.೦೪	–	೧೦೦.೦೦
ಮರಾಟಿ						
ಕಾರ್ಕಳ ತಾಲೂಕು						
ಒಟ್ಟು	೭೬	೩೮	೨೦	೧೬	೧೫೦	೧೫೦.೦೦
ಶೇಕಡವಾರು	**೫೦.೬೭**	**೨೫.೩೩**	**೧೩.೩೩**	**೧೦.೬೭**	**೧೦೦.೦೦**	**೧೦೦.೦೦**

ಸಮೀಕ್ಷೆಗೊಳಪಟ್ಟ ಮರಾಟಿನಾಯ್ಕ ಮತ್ತು ಮರಾಟಿ ಸಮುದಾಯಗಳ ವಿವರವನ್ನು ನೋಡಿದಾಗ ಕುಂದಾಪುರ, ಉಡುಪಿ, ಕಾರ್ಕಳ ತಾಲೂಕುಗಳ ವ್ಯಾಪ್ತಿಯಲ್ಲಿ ಬರುವ ಮರಾಟಿ ನಾಯ್ಕ ಸಮುದಾಯದ ಒಟ್ಟು ೧೫೦ ಕುಟುಂಬಗಳಲ್ಲಿ ಒಟ್ಟು ೧೦೧ (೭೧.೧೩%) ರಷ್ಟು ಕುಟುಂಬಗಳು ಒಂದೇ ಬಳಿಯಾದರೆ ಸಹೋದರ ಮತ್ತು ಸಹೋದರಿಯಾಗುತ್ತಾರೆ ಎಂಬ ಕಾರಣ ತಿಳಿಸಿದರೆ, ೧೫ (೧೦.೫೬%) ರಷ್ಟು ಕುಟುಂಬಗಳು ಹಿಂದಿನಿಂದಲೂ ನಡೆದು ಬಂದ ಸಂಪ್ರದಾಯವೆಂಬ ಕಾರಣಕ್ಕಾಗಿ ಬಳಿಯನ್ನು ನೋಡುತ್ತಿರುವುದಾಗಿ ತಿಳಿಸದರೆ, ಬೇರೆ ಬಳಿಯಾದರೆ ಒಳ್ಳೆದು ಎಂಬ ಕಾರಣದಿಂದ ಮತ್ತು ೧೬ (೧೧.೨೭%) ರಷ್ಟು ಕುಟುಂಬಗಳು ಅಭಿಪ್ರಾಯ ವ್ಯಕ್ತಪಡಿಸಿರುತ್ತಾರೆ. ವೈಜ್ಞಾನಿಕತೆಯ ನಂಬಿಕೆಯ ಕಾರಣದಿಂದ ಬಳಿಯನ್ನು ನೋಡುವವರು ೧೦ (೭.೦೪%) ರಷ್ಟು ಕುಟುಂಬಗಳು ಕಂಡುಬರುತ್ತದೆ.

ಈ ವಿಷಯಕ್ಕೆ ಸಂಬಂಧಿಸಿದಂತೆ ಕಾರ್ಕಳ ತಾಲೂಕಿನ ವ್ಯಾಪ್ತಿಯಲ್ಲಿ ಬರುವ ಮರಾಟಿ ಸಮುದಾಯದ ೧೫೦ ಕುಟುಂಬಗಳಲ್ಲಿ ಅಭಿಪ್ರಾಯವನ್ನು ಕೇಳಿದಾಗ ಒಟ್ಟು ೭೬ (೫೦.೬೭%) ರಷ್ಟು ಕುಟುಂಬಗಳು ಒಂದೇ ಬಳಿಯಾದರೆ ಸಹೋದರ - ಸಹೋದರಿಯಾಗುತ್ತಾರೆ ಎಂಬ ಕಾರಣ ತಿಳಿಸಿದರೆ, ೩೮ (೨೫.೩೩%) ಕುಟುಂಬಗಳು ಹಿಂದಿನಿಂದಲೂ ಬಂದ ಸಂಪ್ರದಾಯ. ಆ ಕಾರಣದಿಂದ ಬಳಿ ನೋಡುತ್ತೇವೆ. ಬೇರೆ ಬೇರೆ ಬಳಿಯಾದರೆ ಒಳ್ಳೆಯದೆಂದು ೨೦ (೧೩.೩೩%) ಕುಟುಂಬಗಳು ಅಭಿಪ್ರಾಯ ತಿಳಿಸಿದರೆ, ವೈಜ್ಞಾನಿಕತೆಯ ನಂಬಿಕೆಯ ಕಾರಣದಿಂದ ೧೬ (೧೦.೬೭%) ಕುಟುಂಬದವರು ಬಳಿ ನೋಡುತ್ತಿರುವುದಾಗಿ ಹೇಳಿಕೊಂಡಿವೆ.

ಉಡುಪಿ ಜಿಲ್ಲೆಯ ಮರಾಟಿನಾಯ್ಕ ಮತ್ತು ಮರಾಟಿ ಸಮುದಾಯಗಳ ಒಟ್ಟು ೩೦೦ ಕುಟುಂಬಗಳ ಬಳಿ (ಬೆಡಗು) ನೋಡುವುದರ ಕಾರಣಗಳ ಬಗ್ಗೆ ಸಮೀಕ್ಷೆಗೊಳಪಟ್ಟ ತಿಳುವಳಿಕೆದಾರರ ಅಭಿಪ್ರಾಯಗಳನ್ನು ಹೋಲಿಕೆ ಮಾಡಿದಾಗ ಒಂದು ವೇಳೆ ಬಳಿ ಒಂದೇ ಆದರೇ ಸಹೋದರ-ಸಹೋದರಿಯಾಗುತ್ತಾರೆ ಎಂಬ ಕಾರಣಗಳನ್ನು ತಿಳಿಸಿದರೆ, ಬಳಿಗಳನ್ನು ನೋಡುವುದು ಪರಂಪರಾನುಗತವಾಗಿ ಬಂದ ಪದ್ಧತಿ ಮತ್ತು ವೈಜ್ಞಾನಿಕತೆಗೆ ಮತ್ತು ಅದರಲ್ಲಿ ನಂಬಿಕೆ ಉಳ್ಳವರು ತುಂಬಾ ಕಡಿಮೆ ಪ್ರಮಾಣದಲ್ಲಿ ಕಂಡುಬಂದಿದೆ. ಬೇರೆ ಬೇರೆ ಬಳಿ ಇದ್ದರೇ ಒಳ್ಳೆಯದು ಎನ್ನುವ ಅಭಿಪ್ರಾಯ ಕೆಲವರದ್ದು ಆಗಿರುವುದನ್ನು ಗಮನಿಸಬಹುದು.

ಪ್ರಸ್ತುತ ಅಧ್ಯಯನದಲ್ಲಿ ಕೋಷ್ಟಕ ೪.೩ ಅವಲೋಕಿಸಿದಾಗ ಎಲ್ಲಾ ಬಳಿಗಳಲ್ಲೂ ತಿಳುವಳಿಕೆದಾರರು ಸಮಾನವಾಗಿ ಹಂಚಿಕೆಯಾಗಲಿಲ್ಲ ಕಾರಣ ಈ ಅಧ್ಯಯನಕ್ಕೆ ಉಡುಪಿ ಜಿಲ್ಲೆಯ ಎಲ್ಲಾ ಗ್ರಾಮ ಮತ್ತು ನಗರ ಪ್ರದೇಶಗಳು ಒಳಪಡದೆ, ಕೆಲವು ಗ್ರಾಮಗಳು ಒಳಪಟ್ಟಿರುವುದರಿಂದ ಹಾಗೂ ಬಳಿಗಳು ಪ್ರದೇಶಕ್ಕನುಗುಣವಾಗಿ ಬೇರೆ ಬೇರೆಯಾಗಿರುವುದರಿಂದ ಎಲ್ಲಾ ಬಳಿಗಳಲ್ಲೂ ತಿಳುವಳಿಕೆದಾರರು ಸಮಾನವಾಗಿ ಹಂಚಿಕೆಯಾಗಿಲ್ಲ. ಹೆಚ್ಚಿನ ತಿಳುವಳಿಕೆದಾರರು ವಿಭಕ್ತ ಕುಟುಂಬದ ಹಿನ್ನೆಲೆ ಬಂದಿರುವುದಾಗಿದ್ದು, ಕೆಲವೊಮ್ಮೆ ಮನೆಯಲ್ಲಿ ಯಾರು ಹಿರಿಯರು ಇಲ್ಲದಿರುವುದು ಇದಕ್ಕೆ ಕಾರಣವಾಗಿದೆ. ಜೊತೆಗೆ ಇತ್ತೀಚೆಗೆ ಬಳಿ ನೋಡುವ ಸಂಪ್ರದಾಯ ಕಡಿಮೆಯಾಗುತ್ತಿರುವುದರಿಂದ ಒಂದೇ ಬಳಿಯ ವಿವಾಹದ ಸಂದರ್ಭದಲ್ಲಿ ಮಾತ್ರ ಉಪಯೋಗವಾಗುವುದು ಎಂಬ ನಂಬಿಕೆ ಹಾಗೂ ಬಳಿಗಳನ್ನು ತಿಳಿದುಕೊಂಡು ಏನಾಗಬೇಕು ಎಂಬ ಮನೋಭಾವ ಮತ್ತು ಉದಾಸೀನತೆ ಇದಕ್ಕೆ ಕಾರಣವಾಗಿದೆ.

೪.೬. ಬಳಿಗಳ ವಿಶಿಷ್ಟತೆ ಹಾಗೂ ತಾತ್ವಿಕತೆ

ಮರಾಟಿ ಸಮುದಾಯಗಳಲ್ಲಿ ದೇವರ ಮತ್ತು ದೇವಸ್ಥಾನಗಳ ಮೂಲಗಳಿಂದ ಬಂದ ಬಳಿಗಳು

ಕ್ರ.ಸಂ.	ಮರಾಟಿ/ಮರಾಟಿನಾಯ್ಕ ಸಮುದಾಯಗಳ ಸಂಬಂಧಿತ ಬಳಿಗಳು	ಬಳಿಗಳ ಅಧಿದೇವತೆಗಳು
೧.	೧. ಅಂದೇರಿ, ೨. ಇರ್ಮಾಳ್ ೩. ಗೌಂವುತ್ದೆಕಾರ್ ೪. ಜೋಗಲೆ ೫. ಜಾಂಪ್ಲಿ ೬. ಡಾಂಗೆಕಾರ್ ೭. ದುನಗೆ (ದುಂಗೆ) ೮. ಪಿಂದನ್‌ಕಾರ್	ಜ್ಯೋತಿಭಾ ಮರಾಟಿ ನಾಯ್ಕ ಸಮುದಾಯದಲ್ಲಿ ಅನೇಕ ಬಳಿಗಳಿಗೆ ಅದಿದೇವತೆ ಜ್ಯೋತಿಭಾ ಅಥವಾ ಜೋತಿಬಾ. ಕೊಲ್ಹಾಪುರಕ್ಕೆ ಹತ್ತಿರವಿರುವ ಗ್ರಾಮ (ವಾಡಿ) ರತ್ನಗಿರಿ (ಜ್ಯೋತಿಭಾನ ಬೆಟ್ಟ) ಜೋತಿಬಾ ಗುಡ್ಡದಲ್ಲಿ ಇರುವ ಜ್ಯೋತಿಬಾ ಎಂಬ ದೇವರು. ಜ್ಯೋತಿಬಾ ಮರಾಟಿನಾಯ್ಕ ಸಮುದಾಯದವರಿಗಲ್ಲದೇ ಇತರ ಅನೇಕ ಜಾತಿ ಸಮುದಾಯಗಳಿಗೆ ಕುಲದೇವರು ಎಂದು ಪೂಜಿಸುತ್ತಿದ್ದಾರೆ. ಖಂಡೋಬಾನ ಹಾಗೆಯೇ ಜೋತಿಬಾನೂ ಕೂಡ ಲೋಕ ಪ್ರಸಿದ್ಧ ಮತ್ತು ಆತನಿಗೆ ಸಾರ್ವತ್ರಿಕ ಕೀರ್ತಿ ಬಂದಿದೆ. ಈತನಿಗೆ "ರವಳನಾಥ" ಎಂಬ ಹೆಸರು ಕೂಡ ಇದೆ. ಗೋಮಂತಕ ಹಾಗೂ ದಕ್ಷಿಣ ಕೊಂಕಣ ಭಾಗದಲ್ಲಿನ ಪ್ರಸಿದ್ಧ ದೇವರೇ "ರವಳನಾಥ". ಕರಾವಳಿ ಕರ್ನಾಟಕ ಭಾಗದಲ್ಲಿರುವ ಭೈರವನಂತೆಯೇ ಆ ಕಡೆ ರವಳನಾಥನೂ ಹಳ್ಳಿಹಳ್ಳಿಗಳಲೆಲ್ಲ ವ್ಯಾಪಿಸಿರುವ ದೇವರಾಗಿದ್ದಾನೆ. ಅಲ್ಲಿಯ ಜನರು ಆರಾಧಿಸುತ್ತಿರುವ ಪ್ರಕಾರ ಆತ "ಕ್ಷೇತ್ರಪಾಲಕ ದೇವ". ಅಲ್ಲದೆ, ಜೋತಿಬಾನಿಗೆ ಕೇದಾರ, ಕೇದಾರನಾಥ, ಕೇದಾರೇಶ್ವರ ಅಥವಾ ಕೇದಾರಲಿಂಗ ಎಂಬ ಹೆಸರುಗಳುಂಟು. "ಕೇದಾರಲಿಂಗವೂ ಜ್ಯೋತಿರ್ಲಿಂಗಗಳಲ್ಲಿ ಒಂದಾಗಿರುವುದರಿಂದ ಕೇದಾರಲಿಂಗವನ್ನು ಜ್ಯೋತಿರ್ಲಿಂಗ ಎಂಬುದಾಗಿ ಕರೆಯಲಾಗುತ್ತಿತ್ತು. ಈ ಜ್ಯೋತಿರ್ಲಿಂಗದಿಂದಲೇ ರೂಢಿಗೆ "ಜೋತಿಬಾ" ಎಂಬ ಹೆಸರು ಬಂದಿದೆ. ಜೋತಿಬಾನ ಪೂಜಾರಿ / ಕುಲಗುರು 'ಗುರುವ'. ಈ ದೇವರಿಗೆ ಯಾತ್ರೆ (ವಾರಿ) ಹೋಗುವ ವ್ರತವನ್ನು ಅನೇಕರು ಕೈಗೊಳ್ಳುವುದುಂಟು. ಜೋತಿಬಾನ ಉಪಾಸನೆಯಲ್ಲಿ ಭಂಡಾರ (ಅರಿಷಿಣ) ಮತ್ತು ಗುಲಾಬಿ ಕುಂಕುಮ (ಗುಲಾಲ್) ಉತ್ತತ್ತಿ ಮತ್ತು ಕೊಬ್ಬರಿಗೆ ವಿಶೇಷ

		ಮಹತ್ವ ಇದೆ. ಇತನಿಗೆ ಹೆಚ್ಚು ಪ್ರಿಯವಾದುದೆಂದರೆ ದವಣ. 'ಯಮಾಯಿ'ವೆಂಬ ಜನಪದ ದೇವಿಯೇ ಆತನ ಪತ್ನಿ"[೧೬] ಈ ಜೋತಿಬಾನ ಆರಾಧನೆಯ ಹಿನ್ನೆಲೆಯಲ್ಲಿ ಕರಾವಳಿ ಕರ್ನಾಟಕದ ಹೆಚ್ಚಿನ ಮರಾಟಿನಾಯ್ಕ ಸಮುದಾಯಗಳು ರತ್ನಾಗಿರಿಯ ಜೋತಿಬಾನ ಬೆಟ್ಟವು ಮೂಲಸ್ಥಾನದಿಂದ ಹೊರಟು ಮುಂದೆ ಗೋಮಂತಕ ಹಾಗೂ ದಕ್ಷಿಣ ಕೊಂಕಣ ಭಾಗಕ್ಕೆ ವಲಸೆ ಬಂದು ಕಾಲಂತರದಲ್ಲಿ ಬಾಹ್ಯ ಒತ್ತಡಗಳಿಂದಾಗಿ ಉತರ ಕನ್ನಡ, ಉಡುಪಿ ಹಾಗೂ ಕುಂದಾಪುರ ಭಾಗಗಳಿಗೆ ಬಂದಿರಬಹುದು.
೨.	೧. ಅಪಟ್‌ಕಾರ್ ೨. ಕುಂತ್ರಿ (ಕೋತಾರೆ) ೩. ಕೊಂತ್ರಿ (ಕೊತಾರ್) ೪. ಕೋಸುಬ್ ೫. ಗುಮ್ಮೆಕಾರ್ ೬. ಗೋರ್ಲೆ (ಗೋರೆ) ೭. ಜಾಮುರ್ಲೆ (ಚಾಂಬಳೆ) ೮. ಜುವರ್ ೯. ಡಾಬಲೆ / ಡಾಬಲ್‌ಕಾರ್ ೧೦. ತೆಡೆಲ್‌ಕಾರ್ ೧೧. ದಾಮ್ಮಿ (ದಾಮಣೆ) ೧೨. ಧೀಖೆ (ತಾಕೆ)	ಇಲ್ಲಿಯ ೧೨ ಬಳಿಗಳು ಜೋಗೇಶ್ವರಿಯನ್ನು ತಮ್ಮ ಕುಲದೈವವಾಗಿ ಆರಾಧಿಸುತ್ತಿರುವುದು ಕಂಡು ಬರುತ್ತದೆ.
೩.	೧. ಅಡ್ಕೆಲೆಕಾರ್ ೨. ಅಂದ್ರೆ ೩. ಕಂಚೆ ಬಳಿ (ಕೋಟೆಕಾರ್) ೪. ಭುಜಬಲೆ (ಗಿಜಬೋಲೆ) ೫. ಗೋರೆ ೬. ಚಂದನ್ (ಚಾಂದಣ್) ೭. ದಾಸೋವ್ ಬಳಿ ೮. ಧುಮಳ (ದುಮಾಲೆ) ೯. ನವತಿ ಬಳಿ ೧೦. ನಾಗಣಿ ಬಳಿ ೧೧. ಪವಾರ್ ೧೨. ಬೋಂಸ್ಲೆ (ಬೋಸಲೆ) ೧೩. ಬಪಟ್‌ಕಾರ್ ೧೪. ಬೀಂಸೆ ೧೫. ಬಾತ್ರ (ಬೋತರ್) ೧೬. ಲಾಡ್ ೧೭. ಸಾಕಳೆ (ಸಾಂಕಲ್‌ಕಾರ್) ೧೮. ಗಾವಣೆ /ಗಾವ್ಣೆ/ಗವಾಣಿಕರ್ (ಗವ್ಹಾಣ್) ೧೯. ಖಾಂಡೇಕಾರ್ ೨೦. ತೆಲ್‌ಪನ್‌ಕಾರ್ ೨೧. ಭೀಷ್ಮ	ಮರಾಟಿ ಸಮುದಾಯಗಳಲ್ಲಿ ಕಂಡು ಬರುವ ೨೧ ಬಳಿಗಳು ಭವಾನಿ, ತುಳಜಾ ಭವಾನಿ, ಜಗದಾಂಬಾ ಭವಾನಿ ಮತ್ತು ಜ್ವಾಲಾಮುಖಿಯನ್ನು ಕುಲದ ಅಧಿದೇವತೆಯಾಗಿ ಆರಾಧಿಸುವುದುಂಟು

೪.	೧. ಜೋಷಿ ೨. ಬೋಯಿಟ್ / ಬೋಟೆಕಾರ್ ೩. ಸಾಲವೆ (ಸಾಲವೆ) ೪. ಸಾಳ ಬಳಿ ೫. ಸಾಲ್ಯ ಬಳಿ ೬. ಶಿಮೋಡ್‌ಕಾರ್	ಮಹದೇವ: ವಿಜಯನಗರ ಸಾಮ್ರಾಜ್ಯದ ಘೋಷಣೆ "ಜೈ ವೀರೂಪಾಕ್ಷ" ಎಂಬುದಾದರೆ ಮರಾಠರ ಸೈನ್ಯದ ಜಯಘೋಷ 'ಹರ್‌ಹರ್ ಮಹಾದೇವ'. ಸಾಮಾನ್ಯವಾಗಿ ಬೆಟ್ಟಗುಡ್ಡಗಳ ಕಡಿದಾದ ಪ್ರದೇಶದಲ್ಲಿ ಅವಿತು ಕುಳಿತು 'ಗೆರಿಲ್ಲಾ ಯುದ್ಧ' ಮಾಡುವುದರಲ್ಲಿ ನಿಪುಣರು. ಇದು ಶಿವಾಜಿಯ ರಣ ಯಶಸ್ಸುಗಳಿಗೆ ಕಾರಣವಾದ ಅಂಶವಾಗಿರುತ್ತದೆ. ಇದರಿಂದ ವ್ಯಕ್ತವಾಗುದೇನೆಂದರೆ ಮರಾಟಿಗರು ಶಿವನ ಆರಾಧಕರು ಮತ್ತು ಶೈವ ಪಂಥದವರಾಗಿರಬಹುದು ಎಂದು ತಿಳಿದುಬರುತ್ತದೆ. ಶಿಖರ ಸಿಂಗಣಾಪುರದ ಶಂಭು ಮಹಾದೇವನ ಒಂದು ರೂಪವು ಆಗಿರಬಹುದು. ಆತನ ಸ್ಮರಣೀಯ ಆಯಘೋಷೆ 'ಹರಹರ ಮಹಾದೇವ'. ಇಂದಿಗೂ ಇದು ತುಂಬಾ ಪ್ರಚಲಿತದಲ್ಲಿದೆ. ಮಹದೇವನನ್ನು ಮರಾಟಿಗರ ಆರು ಬಳಿಯವರು ತಮ್ಮ ಕುದೇವರಾಗಿ ಆರಾಧಿಸುತ್ತಿರುವುದು ಕಂಡುಬರುತ್ತದೆ.
೫	೧. ಅಡನಲ್‌ಕಾರ್ ೨. ಕಣೇರಿ (ಕಿರಾಣಿ) ೩. ದೋರೆಕಾರ್ / ದರೆಕಾರ್ ೪. ನವೇರಿ ೫. ಪನಸಮ್‌ಕಾರ್ ೬. ಪಿಕಳೆ (ಪೀತಮ್‌ಕಾರ್) ೭. ಭುತೆ ೮. ಮಿರ್ದೊಳ್‌ಕಾರ್ ೯. ಮೊರೆ ೧೦. ಮೋಹಿತೆ ೧೧. ಸಾತ್‌ಪುತೆ (ಸಾತಪೆ) ೧೨. ಸಿರ್ಕೆ	ಮರಾಟಿಗರಲ್ಲಿರುವ ೧೨ ಬಳಿಗಳ ಅಧಿದೇವತೆಯಾಗಿ ಗಣಪತಿಯನ್ನು ಆರಾಧಿಸುತ್ತಿರುವುದು ಕಂಡುಬರುತ್ತದೆ.
೬	೧. ಅಂಬೆಲ್ಕಾರ್ (ಅಂಬೆರಾವ್) ೨. ಕರಂಬೆ (ಕರ್‌ಭೆ) ೩. ದೋಪಡೇ	ಮರಾಟಿ ಸಮುದಾಯಗಳಲ್ಲಿರುವ ೩ ಬಳಿಯವರು ಭೈರವನನ್ನು ಕುಲದೈವವಾಗಿ ಆರಾಧಿಸುತ್ತಿರುವುದು ತಿಳಿಯುತ್ತದೆ.
೭	೧. ಕಾಡೆಕಾರ್ ೨. ಕುಳಿಯ ಖುಳ ೩. ಗುರುವ್ (ಗುರ್ಮೆ) ೪. ಚಾಂಬುರ್ಣ (ಭಾಂಭುರ್ಡೆ) ೫. ಜಾಂಬರ್ಣ ೬. ನಾಡವ್‌ಕಾರ್ (ನಾಡು) ೭. ಪೆಜ್ಜೆ (ಬರ್ಝು)	ಮರಾಟಿ ಸಮುದಾಯಗಳಲ್ಲಿರುವ ೭ ಬಳಿಯವರು ಪ್ರಭಾಕರ ಎಂಬ ಅಧಿದೇವರನ್ನು ಆರಾಧಿಸುತ್ತಿರುವುದು ತಿಳಿಯುತ್ತದೆ.
೮	೧. ಗವಾಲ್ಕರ್ (ಗವಳಿ)	ಕವಾಲ್ಕರ್ (ಗವಳಿ) ಬಳಿಯವರು ಕಾತ್ಯಾಯಿನಿ ಎಂಬ ದೈವವನ್ನು ಕುಲದೇವತೆಯಾಗಿ ಆರಾಧಿಸುತ್ತಿರುವುದು ತಿಳಿದುಬರುತ್ತದೆ.

೯	೧. ದಳವಿ ೨. ಮಂಜರ್‌ಕಾರ್ / ಮಂಟೆಕಾರ್ ೩. ಸಿಂಧೆ ೪. ಸೇಡೆಕಾರ್ (ರವಡೆ)	ಮರಾಟಿಗರಲ್ಲಿರುವ ೪ ಬಳಿಯ ಕುಟುಂಬಗಳು ಕಾಳಿಕಾದೇವಿ ಅಥವಾ ಮಹಾಕಾಳಿಯನ್ನು ತಮ್ಮ ಕುಲದ ಅಧಿದೇವತೆಯಾಗಿ ಆರಾಧಿಸುತ್ತಿರುವುದು ಕಂಡು ಬರುತ್ತದೆ.
೧೦	೧. ಭರಣ್‌ಕಾರ್ ೨. ಮಾಯಿಲೆ (ಮಾಹಳ್) ೩. ಸಾವಂತ ೪. ಪಡುವಳ್‌ಕಾರ್	ಮರಾಟಿಗರ ನಾಲ್ಕು ಬಳಿಯ ಕುಲದೈವ ಬ್ರಹ್ಮನಾಥ ಎಂಬುದು ಕಂಡು ಬಂದಿದೆ.
೧೧	ಘೋರ್ಪಡೆ	ಖಂಡೇರಾವ್/: 'ಮರಾಟಿಯ ವಸ್ತ್ರ ಸೂಚಕ ಪದ. ಮರಾಟಿಗರು ವಸ್ತ್ರದಿಂದ ಮಾಡಿದ ಮುಖದ ದೇವರು ಎಂದು ಕರೆಯುವರು. ಇತನನ್ನು ಅನೇಕರು ಮಲ್ಹಾರಿ ದೇವರು, ಮೊಳಚೆ, ಮಾರ್ತಾಂಡ ಎಂಬುದಾಗಿ ಕರೆಯುತ್ತಾರೆ ಎಂಬುದಾಗಿ ತಿಳುವಳಿಕೆದಾರರು ತಿಳಿಸಿರುವರು. ಇವೆಲ್ಲವು ಶಿವನ ರೂಪ ಎಂದು ತಿಳಿಸಿರುತ್ತಾರೆ."[೧೭] ಈತನನ್ನು ಶಿವನ ಅಥವಾ ಭೈರವನ ಅವತಾರ ಎಂಬುದಾಗಿ ನಂಬುವರು. ಘೋರ್ಪಡೆ ಬಳಿಯವರು ಈ ದೈವವನ್ನು ಕುಲದ ಅಧಿದೇವತೆಯಾಗಿ ಸ್ವೀಕರಿಸಿರುವರು.
೧೨	ಧ್ವನಿ (ಧನೀಕ)	ಮರಾಟಿಗರಲ್ಲಿ ಧ್ವನಿ (ಧನೀಕ) ಬಳಿಯ ಕುಟುಂಬಗಳು ವಿಷ್ಣುನಾರಾಯಣನನ್ನು ಕುಲದ ದೈವವಾಗಿ ಆರಾಧಿಸುವರು.
೧೩	೧. ಚವಾಣ್ ೨. ಗಾವ್ಣೆ ೩. ದೊರ್ರೈಕಾರ್ ೪. ಬಡೇಕಾರ್ / ಬಡೆಕರ್ ೫. ದಾಂಬ್ರೆ (ತಾಂಬೆ)	ಮರಾಟಿಗರ ೫ ಬಳಿಯ ಕುಟುಂಬಗಳು 'ಜ್ವಾಲಾಮುಖಿ' ದೈವವನ್ನು ತಮ್ಮ ಕುಲದ ದೈವವಾಗಿ ಸ್ವೀಕರಿಸಿರುವುದು ಕಂಡು ಬರುತ್ತದೆ.
೧೪	ಬೆಟ್ಟಲ ಕುಂಟಿ	ಬೆಟ್ಟಲ ಕುಂಟಿ ಬಳಿಯವರು 'ಬೆಟ್ಟಲಿ' ಎಂಬ ದೈವವನ್ನು ಕುಲದ ಅಧಿದೇವತೆಯಾಗಿ ಸ್ವೀಕರಿಸಿರುವರು.
೧೫	ಜೆಟ್ಟಿಗಾರ್/ ಜಟ್ಟಿಗ/ ಜಟ್ಕರ್	ಕುಂದಾಪುರ ಸುತ್ತಮುತ್ತಲು ಕ್ಷೇತ್ರ ರಕ್ಷಕ, ಕೃಷಿ ಕಾರ್ಯಗಳನ್ನು ರಕ್ಷಿಸುವ ದೇವತೆ ಜಟ್ಟಿಗ ಎಂಬುದಾಗಿ ಕರೆಯುವರು. ಜಟ್ಟಿಗನನ್ನು ಜಟ್ಟಿಗೇಶ್ವರ ಎಂಬುದಾಗಿ ಕರೆಯುವರು. ಈತ ಶಿವನ ಅಂಶ ಎಂಬುದಾಗಿ ಜನಪದರು ನಂಬುವರು. ಈ ಗಂಡು ದೇವರನ್ನು ಮರಾಟಿಗರು ತಮ್ಮ ಬಳಿಯ ದೈವ ಎಂದು ಗುರುತಿಸಿಕೊಂಡಿರುವುದನ್ನು ಇಲ್ಲಿ ಕಾಣಬಹುದು.

೧೬	ಸಿಮಂತಿ ಬಳಿ/ ಸಿರಿ ಮಂಕಿ	ಶ್ರೀನಾರಾಯಣ ಅಥವಾ ವಿಷ್ಣುವನ್ನು ಸಿರಿಮಂಕಿ ಎಂಬುದಾಗಿ ಕರೆಯುವರು. ಸಿರಿಮಂಕಿ ಕುಲ ಬಳಿಯವರಿಗೆ ಶ್ರೀನಾರಾಯಣ ಅಧಿದೇವತೆ ಆರಾಧಿಸುತ್ತಿರುವುದು ಕಂಡು ಬಂದಿದೆ.
೧೭	ಶಿವಗಣ/ಶಿಗೋಣ್	ಮರಾಟಿಗರಲ್ಲಿ ಕಂಡುಬರುವ ಶಿವಗಣ/ಶಗೋಣ್ ಬಳಿಯ ಕುಟುಂಬಗಳು ಶಿವನನ್ನು ಕುಲದ ಅಧಿದೈವವಾಗಿ ಆರಾಧಿಸುವರು.
೧೮	ಭುತೇ / ಗುರುವ್	ಮರಾಟಿ ನಾಯ್ಕ ಸಮುದಾಯದಲ್ಲಿ "ಭುತೇ" ಎಂದರೆ ಗೊಂದೋಳು ಪೂಜೆ ಆರಾಧನೆಯಲ್ಲಿ ಪರಿಚಾರಕ ವರ್ಗದವರು. ಪೂಜೆಯ ಸಂದರ್ಭದಲ್ಲಿ ದರ್ಶನ ಪಾತ್ರಿ (ಪರಶುರಾಮ) ಮತ್ತು ಹಾಡುಗಾರ, ಅಗ್ನಿ ಕುಣಿತದಲ್ಲಿ ಭಾಗವಹಿಸುವವರು. ಭುತೇ ಎಂದು ಕರೆಯುವರು. ಈ ಎರಡು ಬಳಿಗಳು ಮರಾಟಿ ನಾಯ್ಕ ಮತ್ತು ಮರಾಟಿ ಸಮುದಾಯದವರಲ್ಲಿದೆ. ಮರಾಟಿಗರು ಸರ್ವೇ ಸಾಮಾನ್ಯವಾಗಿ ಶಿವ, ದುರ್ಗ, (ಪಾರ್ವತಿ) ಸ್ಕಂದ, ಗಣಪತಿ ದೇವ ದೇವತೆಯರನ್ನು ಆರಾಧಿಸುತ್ತಿರುವುದು ಕಂಡು ಬಂದಿರುತ್ತದೆ. ಈ ದೇವತೆಗಳನ್ನು ಪೂಜಿಸಲು 'ಗುರುವ' ಮತ್ತು 'ಭುತೆ'ಯವರಿದ್ದರು. ಈ ಎರಡು ವರ್ಗದವರು ಅರ್ಚಕರಾಗಿದ್ದು, ಗುರುವೆಯವರು ರುದ್ರಾಕ್ಷಿ ಧಾರಿಗಳಾಗಿದ್ದರೆ. ಭುತೆಯವರು ಕವಡೆಯ ಸರಗಳನ್ನು ಧರಿಸುವರು. ಕೆಲವೊಂದು ಮರಾಟಿಗರು ತಮ್ಮ ಮನೆಯಲ್ಲಿ ಶಂಖ/ಕವಡೆಯನ್ನು ಆರಾಧಿಸುತ್ತಿರುವುದು ಕ್ಷೇತ್ರಕಾರ್ಯ ಸಂದರ್ಭದಲ್ಲಿ ಕಂಡುಬಂದಿದೆ. (ಚಿತ್ರ : ನೋಡಿ) ಅಲ್ಲದೆ ಗೋವಾದ ಅನೇಕ ದೇವಸ್ಥಾನಗಳಲ್ಲಿ ಈಗಲು ಸಹ ಅರ್ಚನೆ ಮಾಡುವವರನ್ನು 'ಗುರುವೆ'ಯವರು ಎಂದು ಕರೆಯುವವುದು ರೂಢಿಯಲ್ಲಿದೆ. ಗೊಂದೋಳು ಪೂಜೆಯ ಸಂದರ್ಭದಲ್ಲಿ ಪ್ರಧಾನ ದರ್ಶನ ಪಾತ್ರಿ (ಪರಶುರಾಮ)ಯವರೊಂದಿಗೆ ಸಹಕರಿಸುವ ಎಲ್ಲಾ ಸಹಾಯಕರನ್ನು ಭುತೆಯವರೆಂದು ಕರೆಯುವರು.
೧೯	ಭಂಡಾರಾಂಚೆ / ಭಂಡಾರ್ಯಾಟೆ	ಕುಂಬ್ರಿ ಮರಾಟಿ ಮತ್ತು ಮರಾಟಿ ನಾಯ್ಕರಲ್ಲಿ ಭಂಡಾರ್ಯಾಚೆ ಬಳಿಗಳು ಕಂಡುಬಂದಿರುತ್ತದೆ. ಕೊಂಕಣಿ ಮರಾಟಿಗರಲ್ಲಿ ಭಂಡಾರ್ಯಾಚೆ ಎಂಬುದರ ಅರ್ಥವನ್ನು

		ವಿಚಾರಿಸಿದಾಗ ಭಂಡಾರವೆಂಬುದು ಹುತ್ತಕ್ಕೆ ಸಂಬಂಧಿಸಿದ್ದು, 'ನಾಗನ ಹುತ್ತ'ಕ್ಕೆ ಭಂಡಾರ, ಭಂಡಾರಮ್ಮ ಎಂಬುದಾಗಿ ತಿಳಿಸಿರುವರು. ಭಂಡಾರವೆಂಬುದು (ಪ್ರಸಾದಕ್ಕೆ)ವಿಭೂತ ಅಥವಾ ಕುಂಕುಮದ ಹೆಸರಾಗಿದೆ. ಅಲ್ಲದೆ ಭಂಡಾರ ಹಚ್ಚುವುದು ಎಂಬುದಾಗಿ ಕೂಡ ಅರ್ಥವಿದೆ. ಇದನ್ನು ಅವರು ಕುಲದ ದೈವವಾಗಿ ಸ್ವೀಕರಿಸಿರುವುದು ತಿಳಿಯುತ್ತದೆ.
ಮರಾಟಿ ಸಮುದಾಯಗಳ ಮನೆತನಗಳಿಗೆ ಹೊಂದಿಕೊಂಡು ಬಂದಿರುವ ಬಳಿಗಳು		
ಕ್ರ.ಸಂ.	**ಮರಾಟಿ/ಮರಾಟಿನಾಯ್ಕ ಸಮುದಾಯಗಳ ಸಂಬಂಧಿತ ಬಳಿಗಳು**	**ಮನೆತನಗಳಿಗೆ ಹೊಂದಿಕೊಂಡು ಬಂದಿರುವ ಬಳಿಗಳು**
೧	ಘೋರ್ಪಡೆ ಬಳಿ	ಬೋಂಸ್ಲೆ ಮತ್ತು ಘೋರ್ಪಡೆ ಕುಲಗಳು ಒಂದೇ ಮೂಲದಿಂದ ಬಂದಥಹ ಬಳಿಗಳು ಕವಲುಗಳಾಗಿ ಒಡೆದು ಮಹಾರಾಷ್ಟ್ರದಲ್ಲಿ ಒಂದು ಬಳಿಯವರು (ಬೋಂಸ್ಲೆ / ಬೋಸಲೆ) ಹಾಗೂ ಕರ್ನಾಟಕದಲ್ಲಿ ಇನ್ನೊಂದು (ಘೋರ್ಪಡೆ) ಎಂದು ಬೇರು ಬಿಟ್ಟು ಇತಿಹಾಸದಲ್ಲಿ ತಮ್ಮದೇ ಆದ ಛಾಪು ಮೂಡಿಸಿರುವುದ್ದನ್ನು ಗಮನಿಸಬಹುದು. ಮರಾಠಿ ಭಾಷೆಯಲ್ಲಿ 'ಉಡ' ವನ್ನು 'ಘೋರ್ಪಡೆ' ಎಂದು ಕರೆಯುತ್ತಾರೆ. ಕರಣಸಿಂಗ ಮತ್ತು ಆತನ ವಂಶಸ್ಥರು ಮುಧೋಳದಲ್ಲಿ ಆಳ್ವಿಕೆ ಮಾಡುತ್ತಿರು. ಈತನ ಮಗ ಭೀಮಸೇನನು ತನ್ನ ಎದುರಾಳಿಗಳನ್ನು ಸದೆಬಡೆಯಲು ಸೇನಾ ಕಾರ್ಯದಲ್ಲಿ ತುಂಬಾ ಚಾಣಾಕ್ಷನಾಗಿದ್ದು ಹಾಗೂ ಮುಂಗೋಪಿಯಂತೆಯು ಇಗಿದ್ದುದರಿಂದ ದೈತ್ಯಕಾರದಲ್ಲಿ ಮುನ್ನುಗ್ಗುವ ಕುತಂತ್ರಿಯಾಗಿದ್ದನು. ಹಾಗಾಗೀ ತನ್ನ ಚಾಕ್ಷುತ ಬುದ್ಧಿ ಉಪಯೋಗಿಸಿ ಕೋಟೆ ಹತ್ತಲು 'ಉಡವನ್ನು' ಬಳಸಿದನೆಂದು ಇದರಿಂದ ಅವನಿಗೆ ಹೋರಾಟದಲ್ಲಿ ಜಯ ಲಭಿಸಿತೆಂದು. ಈ ಕಾರಣದಿಂದ ಇವರ ವಂಶಸ್ಥರಿಗೆ 'ಬೋಸಾಜಿ' ಜೊತೆಗೆ ಘೋರ್ಪಡೆ ಎಂಬ ನಾಮದೇಯವು ಚಲಾವಣೆಗೆ ಬಂದಿತೆಂದು. ಇಡೀ ವಂಶಾವಳಿಯನ್ನು ಪ್ರಸ್ತುತ ಘೋರ್ಪಡೆ ಎಂದೇ ಕರೆಯುವುದು ರೂಢಿಯಲ್ಲಿದೆ. ಅಥವಾ ಚಾಲ್ತಿಯಲ್ಲಿದಿದ್ದು ಕಂಡು ಬರುತ್ತದೆ.




೨	ರಾಣಾಕುಲ	ರಾಣಾ ಎಂಬುದು ರಜಪೂತ ಅರಸರ ಬಿರುದು. ರಾಣಾ ಎಂದರೆ 'ದೊರೆ', ಪ್ರಮುಖ ಮುಖ್ಯಸ್ಥ ರಾಜ ಎಂದು ಅರ್ಥೈಸಬಹುದಾಗಿದೆ. ರಜಪೂತರಲ್ಲಿ ಬಹುಪಾಲು ತಮ್ಮ ಹೆಸರಿನ ಪೂರ್ವ ಪದವು ರಾಣಾ ಆಗಿರುತ್ತದೆ. (ರಾಣಾ ಪ್ರತಾಪ ಸಿಂಹ) ನಂತರದಲ್ಲಿ ಅವರ ನಿರ್ದಿಷ್ಟ ಹೆಸರು ಸೂಚಿಸುತ್ತಾರೆ. ಇದರಿಂದ ಅವರ ಪೂರ್ಣ ಹೆಸರು ರಾಣಾ ಸೇರಿಯೇ ಉಲ್ಲೇಖಿಸಲ್ಪಡುತ್ತದೆ. "ಮಧ್ಯಕಾಲೀನ ಭಾರತದ ರಜಪೂತ ರಾಜವರ್ಗದವರು, ರಾಜನ ಪರಿವಾರದವರು ಮತ್ತು ಪ್ರಮುಖ ವ್ಯಕ್ತಿಗಳ ಹೆಸರಿನ ಮುಂದೆ ರಾಣಾ ಎಂದು ಸೇರಿರುವುದರಿಂದ ಅದಕ್ಕೊಂದು ಅರ್ಥ ಪ್ರಾಪ್ತವಾಗಿದೆ. ಒಟ್ಟಿನಲ್ಲಿ ರಾಣಾ ಎಂದರೆ ರಾಜ ಪರಿವಾರದ ಎತ್ತರದ ವ್ಯಕ್ತಿ, ಗೌರವಪೂರ್ವಕ ವ್ಯಕ್ತಿ ಹಾಗೂ ಗಣ್ಯ ವ್ಯಕ್ತಿ ಎಂಬುದು ಸ್ಪಷ್ಟವಾಗುತ್ತದೆ. ರಾಜನಾದ ಮೇಲೆ ಮಹಾರಾಣಾ ಎಂದು ಕರೆಯುವುದು ರಜಪೂತರ ಇತಿಹಾಸದಿಂದ ತಿಳಿದು ಬರುತ್ತದೆ. ಮುಧೋಳ ಘರಾಣೀದ ಮೂಲಪುರುಷರು ಮೇವಾಡದಿಂದ ದೆಹಲಿ ಕಡೆಗೆ ವಲಸೆ ಬಂದು ಜಹಗೀರು ಪಡೆದು ತಮ್ಮ ಶಕ್ತಿ ಸಾಮರ್ಥ್ಯಗಳೊಂದಿಗೆ ಯುದ್ಧದಲ್ಲಿ ರಾಜನಿಗೆ ಸೈನಿಕ ಸೇವೆ ಸಲ್ಲಿಸಿ ನಿಕರವಾದ ನಿಕಟ ಬಾಂಧವ್ಯವನ್ನು ಹೊಂದಿದ್ದರೆಂದು ಅಲ್ಲದೇ ರಾಜನ ರಕ್ಷಣೆಗಾಗಿ ಪ್ರಾಣಾರ್ಪಣೆ ಮಾಡಲು ಸಿದ್ಧ ಎಂಬುದಕ್ಕೆ ಅನೇಕ ಹೋರಾಟಗಳು ಸಾಕ್ಷಿಯಾಗಿದೆ. ಸುಮಾರು ಎಂಟು ತಲೆಮಾರುಗಳವರೆಗೆ ರಾಣಾ ಎಂಬ ಕುಲದೊಂದಿಗೆ ಮಧ್ಯಕಾಲೀನ ಅವಧಿಯಿಂದ ಗುಲಬರ್ಗಾ ಬಹುಮನಿ ಸುಲ್ತಾನವರೆಗೆ ನಡೆದುಕೊಂಡು ಬಂದಿದ್ದು, ಅವರ ವಂಶಾವಳಿಯಿಂದ ತಿಳಿದು ಬರುತ್ತದೆ."[೧೮]
೩	ಶಿಂಧೆ ಮತ್ತು ಚವ್ಹಾಣ	ಹತ್ತನೆಯ ಶತಮಾನದ ಶಾಸನಗಳಲ್ಲಿಯೇ ಶಿಂಧೆ ಎಂಬ ಹೆಸರು ಇದೆ ಎಂಬುದಾಗಿ ಶ್ರೀ ಭಾಸ್ಕರ ರಾವ್ ಜಾದವ ತಮ್ಮ ಮರಾಠಿ 'ಅಣೆ ತ್ಯಾಂಚೀ ಭಾಷಾ' ಎಂಬ ಕೃತಿಯಲ್ಲಿ ಅಭಿಪ್ರಾಯಪಡುತ್ತಾರೆ. ಆ ಕಾಲದ ಕವಿಗಳು ಸಿಂಧೂನದಿಯೊಂದಿಗೆ 'ಶಿಂಧೆ' ಹೆಸರಿನ ಸಂಬಂಧವನ್ನು ಕಲ್ಪಿಸಿದಾಗಿದೆ. ಅಲ್ಲದೆ ಈ ಹೆಸರು ಬಂದಿರುವುದು




		ಸಿಂಧ್ ಪ್ರಾಂತ್ಯದಿಂದಾಗಿ ಎಂಬುದಾಗಿ ಅವರ ಅಭಿಪ್ರಾಯ. ಅವರ ಕುಲದೇವರು 'ಜೋತ'. ಜೋತ ಅಂದರೆ ನೇಗಿಲು. 'ಚಾಂಗಭಲಾ' ಎಂಬುದು ಜೋತ ದೇವರ ಜಾತ್ರೆಯೆಂದು ಮಾಡುವ ಉದ್ಘೋಷಣೆ. ಸಿಂಧ್ ಪ್ರಾಂತದಲ್ಲಿ 'ಚಾಂಗಭಲಾ' ಎಂಬ ಶಬ್ದಕ್ಕೆ ಹೇಗೆ? ಏನು? ಚೆನ್ನಾಗಿರುವಿರಲ್ಲಾ? ಎಂಬ ಅರ್ಥವಂತೆ. ಯಾವುದೇ ಜಾತಿ ಧರ್ಮಕ್ಕೆ ಸೇರಿದವರಾಗಿದ್ದರೂ, ಸರಿಯೇ ಇಬ್ಬರು ಸಿಂಧಿಯರು ಪರಸ್ಪರ ಎದುರಾದಾಗ ಒಬ್ಬರೊಬ್ಬರು ಹಾರೈಸುವುದು 'ಚಾಂಗಭಲಾ' ಎಂಬುದಾಗಿ ಗೌರವಿಸುತ್ತಾರೆ.
೪	ಡೋಣಿ–ಡಾಂಗೆ ಬಳಿಗಳು	ಡಾಂಗೆ ಎನ್ನುವುದು ಮರಾಟಿ ನಾಯ್ಕ ಮತ್ತು ಮರಾಟಿ ಎರಡು ಸಮುದಾಯದವರಲ್ಲಿ ಈ ಬಳಿಗಳಿವೆ. "'ಡಾಂಗೆ' ಮತ್ತು ಡೋಣಿ ಮನೆತನದಲ್ಲಿ ಅನೇಕ ಶೂರವೀರರು ಜನಿಸಿ ಮರಾಠಾ ಸಾಮ್ರಾಜ್ಯಕ್ಕೆ ಸೇವೆ ಸಲ್ಲಿಸಿರುತ್ತಾರೆ. ಅಲ್ಲದೇ ಶಿವಾಜಿ ಮಹಾರಾಜರ ವಿರುದ್ಧ ವಿಜಾಪುರದ ಸುಲ್ತಾನರ ಪರವಾಗಿ ಹೋರಾಡಿದ ವೀರರಲ್ಲಿ ರವಿರಾವ್‌ಡೋಣೆ"[೧೯] ಒಬ್ಬರು ಎಂದು ತಿಳಿಯುತ್ತದೆ.
೫	ಬೋಸಲೆ	ಬೋಸಲೆ ಎಂಬುದು ಶಿವಾಜಿ ವಂಶಸ್ಥರ ಕುಲನಾಮವಾಗಿದೆ. ಡಾ.ರಾ.ಚಿಂ. ಡೇರೆಯವರು ಮತ್ತು ಶಿವರಾಂ ಏಕನಾಥ ಭಾರದೆ, ಲಕ್ಷ್ಮಣಗೋವಿಂದ ಘಾಣೇಕರ, ಡಾ. ಇರಾವತಿ ಕರ್ವೆ ಮುಂತಾದವರು "ಬೋಸಲೆಗಳು ಕರ್ನಾಟಕದ ಹೊಯ್ಸಳಯಾದವರೇ ಆಗಿದ್ದರುಎಂದು ಪ್ರತಿಪಾದಿಸಿದ್ದಾರೆ"[೨೦] "ಹೊಯ್ಸಳ ಕುಲನಾಮವು ತಮಿಳು ಮತ್ತು ಸಂಸ್ಕೃತ ಶಿಲಾಲೇಖಗಳಲ್ಲಿ 'ಹೊಸಲ' ಎಂದು ನಮೂದಿಸಿದ್ದಾರೆ ಎಂಬುದಾಗಿ ಅಭಿಪ್ರಾಯ ಪಡುತ್ತಾರೆ. 'ಹೊಸಲ' ಎಂಬುವುದು ಕುರುಬರ ಒಂದು ಬೆಡಗು. ಹೊಯ್ಸಳರು ತಮ್ಮನ್ನು ಯಾದವರೆಂದು ಕರೆದರೂ, ಹೊಯ್ಸಳರಿಂದಲೇ ಬೋಸಲೆ ಆದದೆಂದು ಎಂಬುದಾಗಿ ಅಭಿಪ್ರಾಯಪಡುತ್ತಾರೆ".[೨೧]
೬	ಸಿಂಧೆ, ಗಾಯಕ್ವಾಡ, ಹೋಳ್ಕರ	"ಮರಾಠ ಸೈನ್ಯದಲ್ಲಿ ಪ್ರಮುಖ ಹುದ್ದೆಗಳಲ್ಲಿ ಸಿಂಧೆ, ಗಾಯಕ್ವಾಡ, ಹೋಳ್ಕರಅಪ್ರತಿಮ ಶೂರರಾಗಿದ್ದರು. ಮೂಲತವಾಗಿಇವರು ಪಶುಪಾಲಕರು ಅಥವಾ

		ದನಗಾರರೆಂಬುದಾಗಿ"[೨೨] ಮರಾಟಿ ಸಮುದಾಯದ ಮೂಲ ಬಳಿಗಳಾಗಿವೆ ಎಂಬುದಾಗಿ ವಾಸುದೇವರಾವ್ ಲಿಂಗೋಚೀ ಬಿರ್ಜೆ ಅಭಿಪ್ರಾಯಪಡುತ್ತಾರೆ. ಸಂಶೋಧಕ ಡಾ. ಗುಂಥರ್, ಡಿ. ಸೋಂಥಾಯವರ್ ನದಿಯ (ನೀರೆ) ಕೊಳಗಳಗಳಲ್ಲಿ ವಾಸಿಸುವ ಅನೇಕ ಪ್ರಸಿದ್ಧ ಮರಾಟಿ ಬಳಿ/ಕುಲಗಳ ಮೂಲ ಪಶುಪಾಲ ವರ್ಗಗಳಾಗಿತ್ತು. ಕಾಲಾಂತರದಲ್ಲಿ ಕೃಷಿಕರಾಗಿ ಸ್ಥಿರನೆಲೆಗಳಲ್ಲಿ ನಿಂತ ದನಗಾರ ಕುಣುಬಿ–ಮರಾಟಿದವರು ಎಂಬುದಾಗಿ ಅಭಿಪ್ರಾಯ ಪಡುತ್ತಾರೆ. ಸಮೀಕ್ಷೆಗೊಳಪಟ್ಟ ಮರಾಟಗರಲ್ಲಿ ಹೊಳ್ಕರ ಬಳಿಯವರು ಕಂಡುಬಂದಿದ್ದಾರೆ. ಇವರು ಕೂಡ ಮರಾಠ ಸಾಮ್ರಾಜ್ಯಕ್ಕೆ ಅಡಿಗಲ್ಲು ಹಾಕಿದವರ ಮನೆತನದವರಾಗಿರುವರು. ಮರಾಠ ಸಾಮ್ರಾಜ್ಯದ ಪೇಶ್ವೆಗಳ ಸೇನಾಧಿಪತಿಗಳಲ್ಲಿಯೇ ಅತ್ಯಂತ ಶೂರ ಸೇನಾಪತಿಯಾಗಿದ್ದನು ಎಂದು ತಿಳಿಯುತ್ತದೆ.
೭	ರಾವ್ ಕುಲನಾಮ	ಮರಾಟಿಗರ ಹೆಸರಿನ ಮುಂದೆ 'ರಾವ್' ಎಂಬುದಾಗಿ ಕಂಡು ಬಂದಿದೆ. ಪೇಶ್ವೆಯವರ ಆಡಳಿತ ಅವಧಿಯಲ್ಲಿ ಹನ್ನೆರಡು ಮಂದಿ ಶೂರರೂ ವೀರರೂ ಆಗಿರುವ "ಬಾರಾರಾವ್" ಎಂಬವರಿದ್ದರು. ಅವರಿಗೆ ಬೇರೆ ಬೇರೆ ಊರುಗಳಲ್ಲಿ ವತನಗಾರಿಕೆ ಇತ್ತು.
೮	ಜಾದವ ಕುಲನಾಮ	ಜಾದವ ಬಳಿ ಮರಾಟಿ ನಾಯ್ಕರು ಮತ್ತು ಮರಾಟಿ ಸಮುದಾಯವರೆಡರಲ್ಲೂ ಕಂಡುಬಂದಿದೆ. ಅಲ್ಲದೇ ಜಾದವವೆಂಬ ಬಳಿಯು ಧನಗಾರ ಕುರುಬ ಮತ್ತು ಮರಾಠಿ, ಕುಣುಬಿ, ಲಂಬಾಣಿ ಸಮುದಾಯಗಳಲ್ಲೂ ಕಂಡು ಬಂದಿದೆ.
೯	ಸೋನಾರ್ ಕುಲಬಳಿ	ಸೋನಾರ್ ಅಥವಾ ಅಕ್ಕಸಾಲಿಗರು. ಮಹಾರಾಷ್ಟ್ರದ ರಾಧಾನಗರಿ ಹಾಗೂ ಕೊಲ್ಲಾಪುರದಲ್ಲಿ ವಾಸಿಸುತ್ತಿರುವರು. ರೇಷ್ಮೆ ವಸ್ತ್ರ ಮತ್ತು ಸೀರೆಗಳಿಗೆ ಚಿನ್ನದ ಎಳೆಗಳನ್ನು ಕೂರಿಸುವುದರಲ್ಲಿ ನಿಪುಣರು. ಅತ್ಯಂತ ಆಕರ್ಷಕವಾಗಿ ಮತ್ತು ರತ್ನ ಪೋಣಿಸಿ ಕಸೂತಿ ಮಾಡುವವರು. ಮಹಾರಾಷ್ಟ್ರದ ಪೈಠಣವು ಶಾತವಾಹನರ ಕಾಲದಲ್ಲಿ ಪ್ರಮುಖ ವಾಣಿಜ್ಯ ಕೇಂದ್ರವಾಗಿ ಮೆರೆಯುತ್ತಿದ್ದ


		ಕಾಲಕ್ಕೆ ಇವರು ಗುಜರಾತಿನಿಂದ ವಲಸೆ ಬಂದು, ಪುಣೆಯಲ್ಲಿ ಬೀಡು ಬಿಟ್ಟರು.
೧೦	ಲಾಡ ಕುಲ ಬಳಿ	'ಲಾಟ' ಪದದಿಂದ 'ಲಾಡ' ಎಂಬ ಪದ ಉಂಟಾಗಿದೆ. ಗುಜರಾತಿ ಭಾಷೆಯಲ್ಲಿ 'ಅಲೆ' ಎಂಬ ಪದಕ್ಕೆ 'ಲಾಟೋ' ಎಂದೂ, ಮರಾಠಿಯಲ್ಲಿ 'ಲಾಟಾ' (Waves) ಎಂದೂ, ಕೊಂಕಣಿಯಲ್ಲಿ 'ಲಾರಾ' ಎಂದು ಕರೆಯಲಾಗಿದೆ. ಹೀಗೆ ಹೆಚ್ಚು ಅಲೆಗಳುಳ್ಳ ಪ್ರದೇಶ 'ಲಾಟಾ' ಆಗಿದ್ದು, ಆ ವ್ಯಾಪ್ತಿಯ ನಾಡು 'ಲಾಟದೇಶ'ವಾಗಿದೆ. ಮಹಾರಾಷ್ಟ್ರದಲ್ಲಿ 'ಲಾಡ'ರ ಹೆಸರಿಗೆ ಅನೇಕ ಊರುಗಳಿವೆ. ಲಾಡಗಂಜ್, ಲಾಡೇಗಾಂವ್, ಲಾಡಕರಾಂಜಾ, ಲಾಟೂರ್ ಮುಂತಾದವುಗಳು ಒಟ್ಟಿನಲ್ಲಿ 'ಲಾಟ'ರ ಉಗಮಸ್ಥಾನ ಗುಜರಾತ್ ಆಗಿರುತ್ತದೆ. ಅಲ್ಲಿಂದ ಅನೇಕ ರಾಜಕೀಯ ವಿಪ್ಲವಗಳಿಂದ ಲಾಟರು ಭಾರತದ ಇತರೆ ಭಾಗಗಳಿಗೆ ವಿಸ್ತರಿಸಿ ನೆಲೆ ನಿಂತರು.
೧೧	ಪಾಟೀಲ್ ಕುಲಬಳಿ	ಪಾಟೀಲ್ ಅಥವಾ ಒಕ್ಕಲಿಗ ಮತ್ತೊಂದು ಮರಾಠಿ ಸಮುದಾಯ ಮುಖ್ಯ ಪಂಗಡ. ಇವರು ವ್ಯವಸಾಯ ವೃತ್ತಿಯನ್ನು ಅನುಸರಿಸುತ್ತಾರೆ. ನೆಲೆನಿಂತ ಕೃಷಿಕ ವರ್ಗದವರು. ಇವರು ಸತಾರ, ಸಾಂಗ್ಲಿ, ಕೊಲ್ಹಾಪುರ ಮುಂತಾದ ಹರಡಿದ್ದಾರೆ. ಸಾಹು ಮಹಾರಾಜರ ಬಳಿ ಸೈನಿಕ ವೃತ್ತಿ ಮಾಡುತ್ತಿದ್ದರು. ನಂತರದ ಕಾಲವಧಿಯಲ್ಲಿ ಇವರ ಶೌರ್ಯ ಸಾಹಸಗಳನ್ನು ಗಮನಿಸಿ ದೊರೆ. ಸಾಹುವಿನಿಂದ ಜಮೀನು ದತ್ತಿಯಾಗಿ ಪಡೆದು ವ್ಯವಸಾಯ ವೃತ್ತಿಯನ್ನು ಆರಂಭಿಸಿದರು. ಮಹಾರಾಷ್ಟ್ರದ ಜೆಜೂರಿ ಎಂಬಲ್ಲಿರುವ 'ಖಂಡೋಬಾ' ಅಥವಾ ಮೈಲಾರಲಿಂಗ ಇವರ ಆರಾಧ್ಯ ದೈವ. ಮರಾಠ ಲಾಡ್‌ರಲ್ಲಿ 'ಗೋಸಾವಿ' ಲಾಡರು, ಇವರು ಮಹಾರಾಷ್ಟ್ರದ ಸತಾರ ಜಿಲ್ಲೆಯಲ್ಲಿ ಹೆಚ್ಚಾಗಿ ಹರಡಿರುವರು. 'ಗೋಸಾವಿ' ಎಂಬ ಪದವು 'ಗೋಸ್ವಾ' ಎಂದರೆ ಗೋವುಗಳ ಒಡೆಯ ಎಂಬ ಅರ್ಥದಲ್ಲಿ ಕೂಡಿದೆ. ಇವರ ಕುಲದೈವ ಜ್ಯೋತಿಭಾ ಹಾಗೂ ತುಳಜಾ ಭವಾನಿ.

ಸಸ್ಯ ಸಂಬಂಧಿತ ಬಳಿಗಳು

ಮರಾಟಿ/ಮರಾಟಿ ನಾಯ್ಕ ಸಮುದಾಯಗಳ ಸಂಬಂಧಿತ ಬಳಿಗಳು	ವಿವರಣೆ	ಕನ್ನಡ/ಇಂಗ್ಲೀಷ್/ಸಸ್ಯ /ಶಾಸ್ತ್ರೀಯ ಪದಗಳ ಉಪಯೋಗ/ಬಳಕೆ
ಪೂಂಗರದನ್ನ	ಈ ಬಳಿಯು ಸಸ್ಯ ಮೂಲವನ್ನು ಹೊಂದಿರುವುದ್ದನ್ನು ಗಮನಿಸಬಹುದು. ಹೊಂಗಾರಕನ ಮರವು ಮುಳ್ಳಿನಿಂದ ಕೂಡಿದೆ. ಈ ಬಳಿಯ ಹೆಂಗಸರು ಜೋರು ಸ್ವಭಾವದವರು ಎಂಬುದಾಗಿ ನಂಬುವರು.	 ಹೊಂಗಾರು
ಆರ್ತೆರ್ದಿನ	ಅತ್ತಿಯಮರವನ್ನು ತಮ್ಮ ಕುಲ ಲಾಂಛನವನ್ನಾಗಿ ಬಳಸಿಕೊಂಡ ಜನರನ್ನು ಆರ್ತರ್ದನಕುಲು ಎನ್ನುತ್ತಾರೆ.	 ಅತ್ತಿಮರ
ಮುಂಡೋದ್‌ದನ್ನ	ಈ ಸಸ್ಯಕ್ಕೆ ತುಳುವಿನಲ್ಲಿ 'ಮುಂಡೇವು' ಎಂದು ಕರೆಯುತ್ತಾರೆ. ಚಾಪೆ ಹೆಣೆಯಲು ಇದನ್ನು ಉಪಯೋಗಿಸುತ್ತಾರೆ. ಕೃಷಿ ಸಂಬಂಧಿಯಾದ ಬಳಿಯಾಗಿದೆ.	 ಮುಂಡವು ಮರ
ಮುಂಚಿರ್ದನ್ನ	ಈ ಕುಲ ಬಳಿಯು ಸಸ್ಯ ಸಂಬಂಧಿ ಪದವಾದ ಮೆಣಸಿನ ಕಾಯಿ ಅಥವಾ ಮೆಣಸಿನ ಗಿಡವನ್ನು ತಮ್ಮ ಕುಲಸಂಬಂಧಿ ಪದವಾಗಿ ಬಳಸಿಕೊಂಡಿದ್ದಾರೆ.	 ಮೆಣಸಿನ ಗಿಡ,
ಪಾಲೆದನ್ನ	ಈ ಕುಲ ಬಳಿಯು ಸಸ್ಯ ಸಂಬಂಧಿ ಪದವಾದ ಹಾಲೆಮರ ಎಂಬ ಪರದ ಹೆಸರನ್ನು ಬಳಸಿರುತ್ತಾರೆ. ಇದು ಒಂದು ಔಷಧಿ ಸಸ್ಯವಾಗಿದ್ದು ಇದನ್ನು ವರ್ಷದ ಕೆಲವು ದಿನಗಳಲ್ಲಿ ವಿಶೇಷವಾಗಿ ಇದರ ತೊಗಟೆಯ ಹಾಲನ್ನು ತೆಗೆದು ಔಷಧಿಯಾಗಿ ಬಳಸುತ್ತಾರೆ.	 ಹಾಳೆಮರ
ಪೊನ್ನುದನ್ನ	(ಹೊನ್ನೆಯ ಮರ) ಪೂರ್ವ ಕಾಲದಲ್ಲಿ ಹೊನ್ನಮರದ ಕಾಯಿಯಿಂದ ಎಣ್ಣೆ ತಯಾರಿಸಿ ದೀಪ ಹಚ್ಚಲು ಉಪಯೋಗಿಸುತ್ತಿದ್ದರು. ಅಲ್ಲದೆ ಈ	 ಹೊನ್ನೆಮರ

	ಎಣ್ಣೆಯನ್ನು ಬಾಣಂತಿಯ ಸ್ನಾನಕ್ಕೆ ಮೊದಲು ಮೈಗೆ ಹಚ್ಚಲು ಉಪಯೋಗಿಸುತ್ತಾರೆ.	
ಕರೆಂಬರನ್ನಾಯ	ಕರೆಂಬನ್ನಾಯ ಬಳಿಯವರು ಕಬ್ಬನ್ನು ತಮ್ಮ ಕುಲದ ಸಂಕೇತವಾಗಿ ಬಳಸಿದ್ದಾರೆ ಎಂದು ಹೇಳಬಹುದು. ಕಬ್ಬು	
ಇಟ್ಟೋವ್‌ದನ	ಇಟ್ವೋವ್‌ದನ ಬಳಿಯವರು ಇಟೆವು ಮರವನ್ನು ತಮ್ಮ ಕುಲಚಿನ್ಹೆಯಾಗಿ ಬಳಸಿರಬಹುದು.	ಇಟ್ಟೆವು ಮರ
ಕುಮೇರ್‌ದನ್ನು	(ಕೂರ್ಮೆರ್) ಮುಗೇರ ಸಮುದಾಯದವರಲ್ಲಿ ಈ ಬಳಿಯು ಶ್ರೇಷ್ಠವಾಗಿದೆ. ಈ ಬಳಿಯನ್ನು ಮದುವೆಗೆ ಪ್ರಥಮ ಪ್ರಾಶಸ್ತ್ಯ ನೀಡುತ್ತಾರೆ. ಬಹುಶಃ ಕುಮೇರ್ ಬೆಳೆ ಬೆಳೆಯಲೂ ಆರಂಭಿಸಿದ ಕುಟುಂಬದವರನ್ನು ಕುಮೇರ್ ಎಂದು ಕರೆಯ ತೊಡಗಿರಬಹುದು.	
ಕುಕ್ಕನ್ನಾಯ	ಕುಕ್ಕನ್ನಾಯ ಬಳಿಯವರು ಮಾವಿನ ಮರವನ್ನು ತಮ್ಮ ಕುಲದ ಸಂಕೇತವಾಗಿ ಬಳಸಿರುವ ಸಾಧ್ಯತೆ ಇದೆ. **ಮಾವಿನ ಮರ, Mango Tree**	
ಚಾರ್ಪಾಚಿತನ್ನ	ಚಾರ್ಪಾ ಚಿತನ್ನ ಬಳಿಯವರು ತಾಳೆಮರವನ್ನು ತಮ್ಮ ಕುಲದ ಸಂಕೇತವಾಗಿ ಬಳಸಿರುವರು. ತಾಳೆಮರ	
ಮಾದರ್ನಕಲು	'ಮಾದೆರ್' ಎನ್ನುವುದು ಬುಟ್ಟಿ ಹೆಣೆಯಲು ಉಪಯೋಗಿಸುವ ಒಂದು ಬಳ್ಳಿಯಾಗಿದೆ. ಈ ಸಸ್ಯವನ್ನು ತಮ್ಮ ಬಳ್ಳಿಯನ್ನಾಗಿ ಆಚರಣೆಗೆ ತಂದಿರುವ ಮೊಗೇರರು ಮಾದೆರ್ ಬಳಿಯವರು ಸಾಧು ಸ್ವಭಾವದವರು ಎನ್ನುತ್ತಾರೆ.	ಮಾದಿರಬಳ್ಳಿ
ಮಲ್ಲಿಗೆ ಬಳಿ/ ನಾಗಬಳಿ	ಸಸ್ಯವರ್ಗಕ್ಕೆ ಸೇರಿರುವ ಬಳಿಯಾಗಿರುತ್ತದೆ. ಮರಾಟಿ ಸಮುದಾಯದವರಲ್ಲದೆ ಇತರೆ ಮಲ್ಲಿಗೆ ಬಳ್ಳಿ ಗಿಡ	

	ಸಮುದಾಯದವರಾದ ಮುಖ್ಯವಾಗಿ ಕರಾವಳಿ ಪ್ರದೇಶದಲ್ಲಿ ವಾಸವಿರುವ ಹಸಲರಲ್ಲಿ ಜಾಜಿ ಬಳಿಯು ಗೊಂಡರಲ್ಲಿ ಜಾಜಿ ಮತ್ತು ಮಲ್ಲಿಗೆ ಬಳಿಯು ಕಂಡುಬಂದಿದೆ. ತಾವು ಆರಾಧಿಸುತ್ತಿರುವ ದೇವ ದೇವತೆಯವರಿಗೆ ಅಲಂಕಾರಕ್ಕಾಗಿ ಉಪಯೋಗಿಸುವರು. ಅಲ್ಲದೆ ಇವುಗಳಲ್ಲಿ ಎರಡು ವಿಧಗಳು ಕಂಡುಬಂದಿದೆ. ಉದಾ: ಭಟ್ಕಳ ಮತ್ತು ಮಂಗಳೂರು, ಮಲ್ಲಿಗೆ ಈ ಬಳಿಯು ಪ್ರಾಣಿ ಮೂಲದ ಬಳಿ. ನಾಗ ಬಳಿ / ಮಲ್ಲಿಗೆ ಬಳಿ ಮತ್ತು ಜಾಜಿ ಬಳಿಯು ಮರಾಟಿಗರು ಕರಾವಳಿ ಕರ್ನಾಟಕದ ಪ್ರದೇಶಕ್ಕೆ ಬಂದ ನಂತರದ ಹಂತದಲಿಸೀ ಬಳಿ ಬಂದಿರಬಹುದು. ಗೊಂಡ, ಹಸಲರು, ಬಂಟ, ಜೈನ ಜಾತಿಯ ಜನರಲ್ಲಿ ಈ ಬಳಿಯು ಕಂಡುಬಂದಿದೆ. ಮರಾಟಿಗರು ಈ ಪ್ರದೇಶದ ಸಮುದಾಯದರೊಂದಿಗೆ ಕೃಷಿ ಕಾರ್ಯದಲ್ಲಿ ತೊಡಗಿಸಿಕೊಂಡ ಮೇಲೆ ಅದೇ ಬಳಿಯನ್ನು ಇಟ್ಟುಕೊಂಡಿರಲೂಬಹುದು.
ಜಾಜಿ ಬಳಿ	ಈ ಬಳಿಯು ಸಸ್ಯ ಮೂಲದ ಬಳಿ. ಈ ಕುಲಬಳಿಯು ಕುಡುಬಿ ಸಮುದಾಯದಲ್ಲಿ ಮಾತ್ರವಲ್ಲದೆ ಗೊಂಡ ಸಮುದಾಯದಲ್ಲಿ, ಹಾಗೂ ಬಂಟ ಸಮುದಾಯದವರಲ್ಲಿಯೂ ಕಂಡುಬಂದಿರುತ್ತದೆ.  **ಜಾಜಿ ಬಳ್ಳಿ ಗಿಡ,**
ಕೇಲ್ಕರ್	ಕುಡುಬಿ ಭಾಷೆಯಲ್ಲಿ 'ಕೇಲ್' ಎಂದರೆ ಬಾಳೆಹಣ್ಣು / ಬಾಳೆಗಿಡ. ಇವರಲ್ಲಿ ಕೆಲವು ಕುಲಗಳನ್ನು ಬಾಳೆಗಿಡಕ್ಕೆ ಸಂಕೇತಿಸುತ್ತಾರೆ. ಧಾರ್ಮಿಕ ಕಾರ್ಯಗಳಿಗೆ ಉಪಯೋಗಿಸುತ್ತಾರೆ.  **ಬಾಳೆ ಗಿಡ**
ಗೂಗ್ಗುಲ್ಕರ್	ಕುಡುಬಿ ಭಾಷೆಯಲ್ಲಿ 'ಗುಗ್ಗುಲ' ಎಂದರೆ ಧೂಪದ ಹುಡಿಯ ಮರ. ತುಳು ಭಾಷೆಯಲ್ಲಿ 'ತಂದೋಳಿಗೆದ ಮರ'. ಇದೊಂದು ಕಾಡು ಉತ್ಪತ್ತಿಯ ಮರ ಧೂಪದ ಹುಡಿ  **ಗುಗ್ಗುಲ ಮರ,**



	ತಯಾರಿಸುತ್ತಾರೆ. ಈ ಮರವನ್ನು ಔಷಧಕ್ಕಾಗಿ ಹಾಗೂ ವ್ಯಾಕ್ಸ್ ಮಾಡಲು ಉಪಯೋಗಿಸುತ್ತಾರೆ.
ಓಲೆಕಾರ್	ಸಸ್ಯವರ್ಗಕ್ಕೆ ಸೇರಿರುವ ಲೆಂಜಿರ್‌ಮರ ಅಥವಾ ಲೆಂಜಿರ್ ಹೂವು. ಈ ಮೂಲದಿಂದ ಬಂದಿರುವುದು, ಇದು ಕಾಡು ಹಾಗೂ ನಾಡಿನಲ್ಲಿ ಬೆಳೆಯುವ ಇದರಲ್ಲಿ ಅತ್ಯಂತ ಪರಿಮಳವುಳ್ಳ ಹೂವಾಗಿರುತ್ತದೆ. ಮರವೂ ಕೂಡ ಗಟ್ಟಿಯಾಗಿರುತ್ತದೆ. ಕಿಟಕಿ ವೋಪುಗಾಗಿ ಉಪಯೋಗಿಸುತ್ತಾರೆ. ಕಾಡಿನಲ್ಲಿ ಬೆಳೆಯುವ ಮರವಾದ್ದರಿಂದ ಕಾಡಿಗೂ ಮತ್ತು ಮರಾಟಿ ಸಮುದಾಯದವರಿಗೂ ಇರುವ ಸಂಬಂಧವನ್ನು ಸೂಚಿಸುತ್ತದೆ.  **ಲೆಂಜಿರ್ ಮರ, ಮಿನುಸೂಪಸ್ ಇಲಿಂಗಿ**
ಸೆರೆಂಗಿಕರ್	ಮರಾಟಿ ಕೊಂಕಣಿ ಭಾಷೆಯಲ್ಲಿ ಸುರಗಿ, ಸುರಂಗಿ ಎಂಬುದಾಗಿ ಕರೆಯುತ್ತಾರೆ. ಮರಾಟಿ ಸಮುದಾಯದವರು ಹೋಳಿ ಕುಣಿತದ ಸಂದರ್ಭದಲ್ಲಿ ಹೆಚ್ಚಾಗಿ ಉಪಯೋಗಿಸುವುದು ಕಂಡುಬಂದಿದೆ. ಕುಡುಬಿಯವರ ವಿವಾಹಕ್ಕೆ ಕನಿಷ್ಟ ಪಕ್ಷ ಸಾಂಕೇತಿಕವಾಗಿಯಾದರೂ ಅಬ್ಬಳಿಗೆ / ಅಬ್ಬ ಮಲ್ಲಿಗೆ ಬೇಕಾಗುತ್ತದೆ. ಸೆರಂಗಿಕ್ಕಾರ್ ಬಳಿಯವರು ಈ ಹೂವಿನ ಮೂಲಕ ಗುರುತಿಸಿಕೊಂಡಿರುತ್ತಾರೆ.  **ಸುರಗಿ ಅಬ್ಬಳಿಗೆ ಹೂವಿನ ಗಿಡ**
ಕಾರ್‌ಕರ್	ಕುಡುಬಿ ಭಾಷೆಯಲ್ಲಿ 'ಕಾಜ್' ಎಂದರೆ ಗೇರುಹಣ್ಣು / ಗೇರುಮರ. ಕುಂದಾಪುರ ಪ್ರದೇಶದ ವ್ಯಾಪ್ತಿಯಲ್ಲಿ ಕುಂದಾಪುರ ಕನ್ನಡ ಭಾಷೆಯ 'ಗೋಂಬೀಜ' ಎನ್ನುವರು ಇವರ ಅಭಿಪ್ರಾಯದಲ್ಲಿ ಗೋವಾದಿಂದ ವಲಸೆ ಬರುವಾಗ ತಮ್ಮೊಂದಿಗೆ ಕರಾವಳಿ ಭಾಗಕ್ಕೆ ಗೇರುಬೀಜ ತೆಗೆದುಕೊಂಡು ಬಂದಿರುತ್ತಾರೆ. ಈ ಹಿನ್ನೆಲೆಯಲ್ಲಿ ಅವರ ಕೆಲವೊಂದು ಕುಲಗಳಿಗೆ ಕಾಜ್ಕಾರ್ ಎಂಬುದಾಗಿ ಇಟ್ಟುಕೊಂಡಿದ್ದಾರೆ ಎಂದು ಹೇಳುತ್ತಾರೆ.  **ಗೇರುಮರ, Cashewnut Tree**
ಮೇಟಕರ್	ಈ ಬಳಿಯವರ ಮೂಲವನ್ನು ಅಡಿಕೆ ಮರದಿಂದ ಗುರುತಿಸಿರಬಹುದು.


	ಅಡಿಕೆಮರದ ಹಿಂಗಾರವನ್ನು ಶುಭ ಕಾರ್ಯಕ್ರಮಕ್ಕೆ ಉಪಯೋಗಿಸುವರು. ಹಿಂಗಾರವು ಮತ್ತು ತೆಂಗಿನಮರದ ಹೂವುಗಳೆರಡೂ ಸಮೃದ್ಧಿ ಮತ್ತು ಫಲವಂತಿಕೆಯ ಲಕ್ಷಣವಾಗಿರುತ್ತದೆ.	 **ಅಡಿಕೆ ಮರ,** Areca Tree
ಮೇಡಿರ್‌ಕರ್	ಈ ಬಳಿಯವರು ತಮ್ಮನ್ನು ತಾವು ತೆಂಗಿನಮರದ ಮೂಲಕ ಗುರುತಿಸಿಕೊಂಡಿರುವರು. ಈ ಮರವನ್ನು ಕಲ್ಪವೃಕ್ಷ ಎಂದು ಕರೆಯುತ್ತಾರೆ. ಬಹುಉಪಯೋಗಿ ಮರವೂ ಹೌದು. ಪ್ರತಿಯೊಂದು ಭಾಗವು ಉಪಯೋಗಕ್ಕೆ ಬರುತ್ತದೆ. ಶುಭ-ಅಶುಭ ಕಾರ್ಯಕ್ಕೆ ಹುಟ್ಟಿನಿಂದ ಸಾಯುವ ತನಕ ಈ ಮರದ ವಸ್ತುಗಳೆಲ್ಲವನ್ನು ಉಪಯೋಗಿಸುತ್ತಾರೆ.	 **ತೆಂಗಿನ ಮರ, Cocanut Tree,**
ಅಂಬಲೆಕ್ಕಾರ್/ಆಮಕರ್	ಮರಾಟಿ ಕೊಂಕಣಿ ಭಾಷೆಯಲ್ಲಿ ಅಂಬೆ (Ambe) ಎಂದರೆ ಮಾವಿನಮರ. ಈ ಮರದ ಹಣ್ಣು, ಕಾಯಿಯು ಬಹು ಉಪಯೋಗಿ. ಮರಾಟಿನಾಯ್ಕ, ಕುಡುಬಿ, ಕುಣುಬಿ (ಮರಾಟಿಗರು) ಮಾವಿನ ಮಿಡಿಯನ್ನು ಉಪ್ಪಿನಕಾಯಿಗೆ ಹೆಚ್ಚಾಗಿ ಉಪಯೋಗಿಸುತ್ತಾರೆ. **ಮಾವು, Mango, Mangilfera**	 **ಮಾವಿನ ಮರ,** 
ನೋಪಡ್‌ಕರ್	ಮರಾಟಿ ಕೊಂಕಣಿಯವರು ಮುಖ್ಯವಾಗಿ ಕುಡುಬಿಯವರ ಬಳಿಯು ಕರಂಡೆ ಸಸಿಯಿಂದ ಗುರುತಿಸಿರುವರು. ಈ ಮುಳ್ಳು ಇರುವ ಗಿಡದಲ್ಲಾಗುವ ಕರಂಡೆ ಕಾಯಿಯನ್ನು ಉಪ್ಪಿನಕಾಯಿಗಾಗಿ ಉಪಯೋಗಿಸುವರು.	
ಕನಪಟನ್ನ	ಇದೊಂದು ಹಾಲು ಬರುವ ಮರವಾಗಿರುತ್ತದೆ. ಇದರ ಹಾಲು ಮೈಗೆ ತಾಗಿದರೆ ಅಲರ್ಜಿಯಂತಹ ತೊಂದರೆಗಳು ಕಾಣುತ್ತದೆ. ವಿಷ್ಣುಮೂರ್ತಿ ದೈವದ ಕೋಲದ ಸಂದರ್ಭ ನಡೆಯುವ 'ಮೇಲೇರಿ'ಗೆ ಬೆಂಕಿ ಕೊಡಲು ಈ ಮರವನ್ನು ಉಪಯೋಗಿಸುತ್ತಾರೆ.	**ಈ ಮರದ ಛಾಯಾಚಿತ್ರ ಲಭ್ಯವಾಗಿಲ್ಲ**



ಪ್ರಾಣಿ ಸಂಬಂಧಿತ ಬಳಿಗಳು


ಮರಾಟಿ/ಮರಾಟಿ ನಾಯ್ಕ ಸಮುದಾಯಗಳ ಸಂಬಂಧಿತ ಬಳಿಗಳು	ವಿವರಣೆ	ಕನ್ನಡ/ಇಂಗ್ಲೀಷ್/ಪ್ರಾಣಿ /ಶಾಸ್ತ್ರೀಯ ಪದಗಳ ಉಪಯೋಗ/ಬಳಕೆ
ಚಾಲಿಯನ್ನು	ಮೂಲತಃ ಈ ಬಳಿಯವರು ನೇಯ್ಗೆ ವೃತ್ತಿಯವರಿರಬೇಕು. ನೇಕಾರರಾಗಿದ್ದ ಕಾರಣ ಇವರ ಬಳಿಯನ್ನು ಜೇಡನಿಗೆ ಹೋಲಿಕೆ ಮಾಡಿರಬಹುದು. ಜೇಡನ ಬಲೆ ನೇಯುವ ಗುಣವನ್ನು ನೋಡಿಕೊಂಡು ಚಾಲಿಯ ಬಳಿಯನ್ನು ಮಾಡಿರಬೇಕು. ಕಾಲಾಂತರದಲ್ಲಿ ಸಾಲಿಯಾನ್ ಆಗಿರಬಹುದು.	 **ಜೇಡ, Spider**
ಅಲಂಕನ್ನ		**ಇರುವೆಭಕ್ಷಕ, Indian Phagoline, ಆ್ಯಂಟಲೋಫ್, ಪಿಲೋಡೂಟಸ್**
ಆನೆದನ್ನ/ಹತ್ಕಾರ್ /ಹಾತ್ಕಿರ್	ಕುಡುಬಿಯವರ ಭಾಷೆಯಲ್ಲಿ ಹಾಲೆ ಅಂದರೆ 'ಆನೆ'. ಇವರಲ್ಲಿ ಹಲವಾರು ಕುಟುಂಬಗಳು ಆನೆಯ ಮೂಲವನ್ನು ಸಂಕೇತಿಸುತ್ತಾರೆ. **ಆನೆ, Elephant, ಎಲಿಫಸ್ ಮಾಕ್ಸಿಮಸ್**	
ಕೋರಿ ಬನ್ನಾಯ	ಕೋರಿ ಬನ್ನಾಯ ಬಳಿಯವರು ಹುಂಜವನ್ನು ತಮ್ಮ ಕುಲದ ಲಾಂಚನವನ್ನಾಗಿ ಬಳಸಿರಬಹುದು. **ಹುಂಜ, Cock,**	
ಕುಂಡಚ್ಚ	ಮುಗೇರ ಸಮುದಾಯದವರಲ್ಲಿರುವ ಕುಂಡಚ್ಚ ಮತ್ತು ಚಾಲಿಯನ್ನ ಬಳಿಯವರು ಪ್ರಾಣಿ ಸಂಬಂಧಿತ ಬಳಿಯಾಗಿರುತ್ತದೆ. ಅಳಿಲನ್ನು ಈ ಬಳಿಯ ಜನರು ಸಂಕೇತವಾಗಿರಿಸಿಕೊಂಡಿದ್ದಾರೆ. ಸಾಧು ಸ್ವಭಾವದ, ನಿರುಪದ್ರವಿಯಾದ ಅಳಿಲನ್ನು ತಮ್ಮ ಬಳಿಯನ್ನಾಗಿ ಮಾಡಿಕೊಂಡು ಮುಗೇರರು ಅನುಸರಿಸುತ್ತಾ ಬಂದಿದ್ದಾರೆ.	 **ಅಳಿಲು,**


ಕುದುರೆನ್ನಾಯ	ಕುದುರೆನ್ನಾಯ ಬಳಿಯವರು ಕುದರೆಯನ್ನು ಕುಲದ ಸಂಕೇಥವಾಗಿ ಬಳಸುತ್ತಿರುವುದನ್ನು ಗಮನಿಸಬಹುದು.	
ಪಿಲಿಬನ್ನಾಯ /ವಾಘನ್‌ಕಾರ್	ಕುಡುಬಿ ಕೊಂಕಣಿ ಭಾಷೆಯಲ್ಲಿ 'ವಾಘ್' ಅಂದರೆ ಹುಲಿ. ಶಕ್ತಿದೇವತೆಯ ವಾಹನ ಎಂಬುದಾಗಿ ನಂಬುತ್ತಾರೆ. **ಹುಲಿ, Tiger, Panthera tigris**	
ಮೋರೆ/ ಮೊರ್ಕರ್ ಬಳಿ	ಕುಡುಬಿ ಭಾಷೆಯಲ್ಲಿ 'ಮೊರ್' ಎಂದರೆ ನವಿಲು. ನವಿಲನ್ನು ಕೊಲ್ಲುವುದು ನಿಷೇದ. ಕುಡುಬಿಯವರ ಪೂರ್ವಜರು ಗೋವಾದಲ್ಲಿರುವಾ ಆರಾಧಿಸುತ್ತಿದ್ದ ದೇವರುಗಳಿಗೆ ಸಂಬಂಧಿಸಿದ್ದಂತಹದ್ದು ಎಂಬುದಾಗಿ ತಿಳುವಳಿಕೆದಾರರು ತಿಳಿಸಿರುವರು. ಸುಬ್ರಮಣ್ಯ / ಕಾರ್ತಿಕೇಯ ದೇವರ ವಾಹನ ಎಂಬುದಾಗಿ ನಂಬುವರು. ಆದ್ದರಿಂದ ಮೋರ್‌ಕ್ಕಾರ್ ಕುಲದವರು ನವಿಲನ್ನು ಕೊಲ್ಲಬಾರದು. ಸಹಜವಾಗಿ ಸತ್ತಿರುವ ನವಿಲನ್ನು ಉಪಯೋಗಿಸಿ ಎಣ್ಣೆ ತೆಗೆಯಬೇಕು ಮತ್ತು ಹಲವಾರು ಔಷಧ ತಯಾರಿಸಲು ಉಪಯೋಗಿಸುತ್ತಾರೆ.	 **ನವಿಲು,**
ಡೇವಿಡ್ಕರ್‌ಬಳಿ	ಕುಡುಬಿಯರ ಮೌಖಿಕ ಭಾಷೆಯಲ್ಲಿ ಡೇವಿಡ್ ಎಂದರೆ ಕೆರೆಹಾವು, ಉರಗ, ಸರ್ಪ. ಕೆಲವೊಂದು ಕುಲಗಳು ನಾಗನಿಗೆ ಸಂಕೇತಿಸುತ್ತಾರೆ.	 **ಕೆರೆಹಾವು**
ಕೊಲ್‌ಕ್ಕರ್	ಈ ಬಳಿಯು 'ಕಾಡು ಹಂದಿಗೆ ಹೊಂದಿಕೊಂಡು ಬಂದಿರುವುದು ಕೂಲ್ ಅಥವಾ ದುಕ್ಕಾರ್ ಎಂದು ಕರೆಯುವರು. ಮರಾಟಿ ನಾಯ್ಕರು ಕುಡುಬಿಯವರು ಕಾಡುಹಂದಿಯನ್ನು ಬೇಟೆಯಾಡುವ ಪದ್ದತಿ ಇರುವುದಾಗಿ ತಿಳಿಸಿರುವರು. ಮರಾಟಿ ಸಮುದಾಯದ ಕೆಲವೊಂದು ವರ್ಗದ	 **ನಾಡುಹಂದಿ**

	ಜಾತಿಯವರಿಗೂ ಮತ್ತು ಅವರ ಆಹಾರ ಪದ್ಧತಿಗೂ ಸಂಬಂಧವನ್ನು ನಿರ್ಧರಿಸುತ್ತದೆ. ಈ ಬಳಿಯವರನ್ನು ಕುಡುಬಿಯವರು ದಿಕ್ಕಾರ್ / ದುಕ್ಕಾರ್ ಬಳಿಯವರು ಎಂಬುದಾಗಿ ಕರೆಯುವರು.	
ಮಾಲಿಯ್ಕಾರ್	ಮರಾಟಿ ಕೊಂಕಣಿ ಭಾಷೆಯಲ್ಲಿ ಮಾಲಿಕ್ಕಾರ್‌ರೆಂದರೆ "ಮೊಲ ಮೀನು" ಒಂದು ಹೊಸ ರೀತಿ ಮೀನು ಎಂಬುದಾಗಿ ನಂಬುತ್ತಾರೆ.	 REBA CARP ಮಾಲಮೀನು
ದುಕ್ಕಾರ್‌ಬಳಿ	ಕುಡುಬಿ ಭಾಷೆಯಲ್ಲಿ 'ದುಕ್ಕಾರ್' ಎಂದರೆ 'ಹಂದಿ'. ಹಂದಿಯನ್ನು ಬೇಟೆಯಾಡುವುದು ಮರಾಟಿ ನಾಯ್ಕ, ಕುಂಬ್ರಿ, ಕುಣುಬಿ ಮತ್ತು ಕುಡುಬಿಯವರಲ್ಲಿ ಸಾಮಾನ್ಯವಾಗಿದೆ. ಭೈರವ ಆರಾಧನೆಯ ಸಂದರ್ಭದಲ್ಲಿ ಹಂದಿಯನ್ನು ಅರ್ಪಿಸುವುದು ಹಾಗೂ ಗೋಂದಲ ಪೂಜೆ ಸಂದರ್ಭದಲ್ಲಿ ಹಂದಿ ಬಲಿಕೊಡುವ ಸಂಪ್ರದಾಯವಿದೆ. ಅಲ್ಲದೆ 'ಹಂದಿ'ಯ ಮಾಂಸವನ್ನು ಸಾಮೂಹಿಕವಾಗಿ ಅಡುಗೆ ಮಾಡಿ ಸ್ವೀಕರಿಸುವುದು ಮರಾಟಿನಾಯ್ಕರ ಸಂಪ್ರದಾಯವಾಗಿದೆ.	 ಕಾಡುಹಂದಿ,
ಕುತ್ಕಾರ್	ಕುಡುಬಿಯವರ ಮೌಖಿಕ ಭಾಷೆಯಲ್ಲಿ 'ಕುತ್ಕಾರ್' ಅಂದರೆ ನಾಯಿ. ವಿವಾಹ ಸಂದರ್ಭದಲ್ಲಿ ಅಕ್ಕಿಯ ಹಿಟ್ಟಿನಲ್ಲಿ ಪ್ರಾಣಿ ಪಕ್ಷಿಗಳ ಚಿತ್ರವನ್ನು ಅಥವಾ ಮೂರ್ತಿಗಳನ್ನು ಇಟ್ಟು ಪೂಜಿಸುತ್ತಿದ್ದರು ಎಂಬುದಾಗಿ ಮಾಹಿತಿದಾರರು ತಿಳಿಸಿದ್ದಾರೆ.	 ನಾಯಿ, ಕಾನಿಸ್ ಲೋಪಸ್ ಫ್ಯಾಮಿಲಿರಿಸ್
ಸಾನ್ಸಕ್ಕಾರ್	ಮರಾಟಿ ಸಮುದಾಯ ಬಳಿಯು ಪ್ರಾಣಿ ವರ್ಗಕ್ಕೆ ಸೇರಿರುವ 'ಮೊಲ' ದಿಂದ ಬಂದಿರುವುದಾಗಿ ತಿಳಿಸಿರುವರು. 'ಸೋನ್ಸ್' ಎಂದರೆ ಮೊಲ. ಮರಾಟಿ ನಾಯ್ಕ, ಮರಾಟಿ, ಕುಡುಬಿ ಸಮುದಾಯದವರು ಬೇಟೆಯಾಡುವ ಪ್ರಾಣಿಗಳಲ್ಲೊಂದಾಗಿದೆ. ಅಲ್ಲದೆ ಕುಡುಬಿಯವರ ವಿವಾಹ ಸಂದರ್ಭದಲ್ಲಿ ಅಕ್ಕಿಯ ಹಿಟ್ಟಿನಿಂದ	



	ಪ್ರಾಣಿ ಪಕ್ಷಿಗಳನ್ನು ಬಿಡಿಸುವ ಸಂದರ್ಭದಲ್ಲಿ ಮೊಲಕ್ಕೆ ಪ್ರಾಮುಖ್ಯತೆಯ ನೀಡುತ್ತಾರೆ. ಹೋಳಿಹಬ್ಬದ ಸಂದರ್ಭದಲ್ಲಿ ಮೊಲವನ್ನು ಬೇಟೆಯಾಡುತ್ತಾರೆ. ಕೊನೆಯ ಪಕ್ಷ ಕೆಲವೊಂದು ಮೊಲವನ್ನು ದೇವತೆಗೆ ಬಲಿ ನೀಡಿ, ರಕ್ತ ತರ್ಪಣೆಯಾಗಬೇಕು ಎಂಬ ನಂಬಿಕೆ ಮರಾಟಿಗರದ್ದು.	
ಸಾಲ್ಪೆ / ಸಾಲವೊ	ಮರಾಟಿ ಕೊಂಕಣಿ ಭಾಷೆಯಲ್ಲಿ 'ಸಾಲ್' ಅಂದರೆ ಮುಳ್ಳುಹಂದಿ. ಈ ಬಳಿಯವರು ಮುಳ್ಳುಹಂದಿಯನ್ನು ಕುಲ ಚಿಹ್ನೆಯಾಗಿ ಉಪಯೋಗಿಸುವರು. ಒಟ್ಟಿನಲ್ಲಿ ಮರಾಟಿಗರು ಕಾಡುಹಂದಿ, ಮುಳ್ಳುಹಂದಿಯನ್ನು ಬೇಟೆಯಾಡಿ, ದೇವರಿಗೆ ಸಮರ್ಪಿಸಿ, ಆಹಾರವಾಗಿ ಉಪಯೋಗಿಸುವರು. ನಾಡಹಂದಿಯನ್ನು ಬಲಿ ನೀಡುವ ಪದ್ಧತಿಯು ಉಂಟು. ಪ್ರಾಚೀನ ಕಾಲದಲ್ಲಿ ಕಾಡುಹಂದಿಯನ್ನು ಬಲಿಕೊಡುತ್ತಿದ್ದರು.	
ನಿರ್ಜೀವ ವಸ್ತುಗಳ ಮೂಲದಿಂದ ಬಂದಿರುವ ಬಳಿಗಳು		
ಮರಾಟಿ/ಮರಾಟಿ ನಾಯ್ಕ ಸಮುದಾಯಗಳ ಸಂಬಂಧಿತ ಬಳಿಗಳು	**ವಿವರಣೆ**	**ಕನ್ನಡ/ಇಂಗ್ಲೀಷ್/ಪ್ರಾಣಿ/ ಶಾಸ್ತ್ರೀಯ ಪದಗಳ ಉಪಯೋಗ/ಬಳಕೆ**
ಬೆತ್ತಕಾರ್	ಮರಾಟಿ ಸಮುದಾಯದವರು ಕಾಡಂಚಿನಲ್ಲಿ, ಬೆಟ್ಟಗುಡ್ಡದಲ್ಲಿ ದೊರೆಯುವ ವಿವಿಧ ರೀತಿಯ ಬೆತ್ತಗಳಿಂದ ಕರಕುಶಲ ವಸ್ತುಗಳನ್ನು ತಯಾರಿಸುವರು. ಬೆತ್ತದ ಮೂಲಕ ತಮ್ಮ ಕುಲ ಬಳಿಯನ್ನು ಗುರುತಿಸಿರುವುದು ಕಂಡುಬರುತ್ತದೆ. ಕರಕುಶಲ ವಸ್ತುಗಳನ್ನು ತಯಾರು ಮಾಡಲು ಮಾತ್ರವಲ್ಲದೆ ಮಹಾಮ್ಮಾಯಿ ದರ್ಶನ ಪಾತ್ರಿಯ ಕೈಯಲ್ಲಿರುವ ಆಯುಧದ ಸಂಕೇತವಾಗಿ ಬೆತ್ತವನ್ನು ಹಿಡಿದುಕೊಂಡಿರುವರು.	 **ಬೆತ್ತ,**
ನಾರಿಕರ್/ ನಾರ್ಲೆಕ್ಕಾರ್	ಮರಾಟಿ ಕೊಂಕಣಿ ಭಾಷೆಯಲ್ಲಿ 'ನಾರೆಲ್' ಎಂದರೆ ತೆಂಗಿನಕಾಯಿ. ನಾರೆಕಾರ್ ಕುಲಬಳಿಯು ತೆಂಗಿನಕಾಯಿಗೆ ಸಂಬಂಧಿಸಿದ ಬಳಿಯಾಗಿರುತ್ತದೆ. ನಾರೆಲ್	

	ಪವಿತ್ರವಾಗಿರುವುದು. ಹೆಚ್ಚು ಧಾರ್ಮಿಕ, ಸಾಮಾಜಿಕ ಕಾರ್ಯಗಳಿಗಾಗಿ ಉಪಯೋಗಿಸುತ್ತಿರುವ ಫಲವಾಗಿದೆ. ಈ ಬಳಿಯು ಕುಂಬ್ರಿ ಮರಾಟಿ ಮತ್ತು ಕುಡುಬಿ ಸಮುದಾಯಗಳಲ್ಲಿ ಕಂಡುಬಂದಿರುತ್ತದೆ.	ತೆಂಗಿನಕಾಯಿ, **Cocanut, Cocos nucifera**
ಪಾನಿಲಿಕರ್	ಮರಾಟಿ ಕೊಂಕಣಿ ಭಾಷೆಯಲ್ಲಿ 'ಪನ್ನಿಲ್' ಎಂದರೆ ಬಾಚಣಿಗೆ. ನೂರಾರು ವರ್ಷಗಳಿಂದ ಬಾಚಣಿಗೆಯು ಬಹು ಉಪಯೋಗಿ ವಸ್ತುವಾಗಿರುತ್ತದೆ. **ಬಾಚಣಿಕೆ, Comb**	
ಮುಕ್ಕಾರ್	ಮರಾಟಿ ನಾಯ್ಕ ಮತ್ತು ಕುಡುಬಿ ಭಾಷೆಯಲ್ಲಿ 'ಮುಕ್ಕಾರ್' ಎಂದರೆ 'ಪಣಿ' ಕೃಷಿಗೆ ಉಪಯೋಗವಾಗುವ ಒಂದು ಸಾಧನ. ಪ್ರಾಚೀನ ಕಾಲದಲ್ಲಿ ಕೃಷಿಗಾಗಿ ಮತ್ತು ಇತರ ಉದ್ದೇಶಗಳಿಂದ ನೀರನ್ನು ಎತ್ತಿ ಮತ್ತೊಂದು ಕಡೆಗೆ ಹರಿಯಲು ಬಿಡಬೇಕಾಗುತ್ತದೆ. ತುಳುನಾಡು ಪ್ರದೇಶದಲ್ಲಿ ಸಂಪ್ರದಾಯಿಕ ವ್ಯವಸ್ಥೆಯನ್ನು 'ಪಣಿ' ಎಂಬುದಾಗಿ ಕರೆಯುತ್ತಿದ್ದರು.	 ಪಣೆ, ಕೆಳಗಿನಿಂದ ನೀರು ಎತ್ತುವ ವ್ಯವಸ್ಥೆ
ಮಡಕೆಕಾರ್/ಮೆಡಿಕ್ಕಾರ್	ಈ ಕುಲ ಬಳಿಯವರು ಮಣ್ಣಿನ ಮಡಕೆಯ ಮೂಲಕ ತಮ್ಮನ್ನು ತಾವು ಗುರುತಿಸಿಕೊಳ್ಳುತ್ತಿರುವರು. ಮರಾಟಿ ಕೊಂಕಣ್ಣಿ ಭಾಷೆಯಲ್ಲಿ 'ಮೆಡಿಕೆ' ಎಂದರೆ ಮಣ್ಣಿನ ಮಡಕೆ.	 ಮಣ್ಣಿನ ಮಡಕೆ,
ಕೋಸ್ಕರ್	ಮರಾಟಿ ಕೊಂಕಣಿ ಭಾಷೆಯಾದ 'ಕೇಶ್' ಎಂಬ ಶಬ್ದದಿಂದ ಬಂದಿರುತ್ತದೆ. ಇದರ ಅರ್ಥ ಕೂದಲು (ತಲೆಕೂದಲು) ಈ ಬಳಿಯ ಅದಿ ದೇವತೆ 'ಗಿಡುಗ'. ಹಕ್ಕಿಯಗರಿಗೆ ಕೇಶ್ ಎಂಬುದಾಗಿ ಕರೆದಿರಬಹುದು. ಹಕ್ಕಿಯ/ಗಿಡುಗನ ಗರಿಯನ್ನು ಹೋಳಿ ಕುಣಿತಕ್ಕೆ ಪೇಟ / ತುರಾಯಿಗೆ ಉಪಯೋಗಿಸುತ್ತಾರೆ. ಗರಿ ಅವರಿಗೆ ಪವಿತ್ರವಾಗಿರುತ್ತದೆ.	 ಕೂದಲು,
ಕೊಂಡೂಡಿಗಾರ್	ಮರಾಟಿ ಕೊಂಕಣಿ ಭಾಷೆಯ "ಕೊಂಡೋಡಿ" ಎಂಬ ಶಬ್ದದಿಂದ	

	ಬಂದಿರುತ್ತದೆ. ದವಸಧಾನ್ಯವನ್ನು ಅಳತೆ ಮಾಡುವ ಒಂದು ರೀತಿಯ ಮಾಪನವಾಗಿರುತ್ತದೆ. ಮುಖ್ಯವಾಗಿ ಸೇರು, ಪಾವು, ನಾಲ್ಕು ಪಾವುಗಳನ್ನು ಅಳತೆ ಮಾಡಲು ಒಂದು ಸೇರನ್ನು ಉಪಯೋಗಿಸುತ್ತಾರೆ.	 **ಷೇರು,**
ಗೂಲ್ಕರ್	ಮೀನು ಬೇಟೆಗಾಗಿ ಉಪಯೋಗಿಸುತ್ತಿರುವ ಒಂದು ರೀತಿಯ ಸಾಧನ. ಬೆತ್ತದಿಂದ ಮೀನು ಹಿಡಿಯಲು ಬೇಕಾದ ವಿವಿಧ ಸಾಧನವನ್ನು ಮಾಡುವರು. **(ಮೀನು ಹಿಡಿಯುವ ಸಾಧನ),**	 **ಕುತ್ತರಿ**
ದುವಗಾರ್	ಬೆಟ್ಟ ಪರ್ವತದಲ್ಲಿ ಅಂಚಿನಲ್ಲಿ ವಾಸಿಸುತ್ತಿರುವ ಮರಾಟಿ ಸಮುದಾಯದವರಿಗೆ ಕಾಣುತ್ತಿರುವ ಮಂಜು ಪವಿತ್ರವಾಗಿರುತ್ತದೆ. ಪ್ರಕೃತಿ ಸಹಜವಾಗಿರುವ "ಮಂಜು" ವಿನ ಮೂಲಕ ಕುಲ ಬಳಿಯನ್ನು ಗುರುತಿಸುವುದು ಕಂಡುಬರುತ್ತದೆ. ಕುಡುಬಿ ಸಮುದಾಯದವರು ತಮ್ಮ ಬಳಿಯನ್ನಾಗಿ ಗುರುತಿಸಿರುವರು.	 **ಮಂಜು (ಇಬ್ಬನಿ),**
ದುಮಲೆಗಾರ್	ದೂಮ್ಲೆಗಾರ್ ಬಳಿಯವರು ಭತ್ತದ ಹೊಟ್ಟನ್ನು (ಉಮಿ) ಕುಲಬಳಿಯಾಗಿ ಉಪಯೋಗಿಸುವರು. ಭತ್ತವನ್ನು ಬೇಯಿಸುವಾಗ ಭತ್ತದ ಹೊಟ್ಟಿನಿಂದ ಬೆಂಕಿ ಮಾಡುವರು. ಅಲ್ಲದೆ ಪಶು ಆಹಾರವಾಗಿ ಕೂಡ ಉಪಯೋಗಿಸುವರು ಭತ್ತ ಮತ್ತು ಮನುಷ್ಯನಿಗೆ ಇರುವ ಸಂಬಂಧವನ್ನು ತಿಳಿಸುತ್ತದೆ. ಭತ್ತದಿಂದ, ಅಕ್ಕಿ, ತೌಡು, ಉಮಿ, ಪ್ರತಿ ಭಾಗವು ಉಪಯೋಗಿಸುತ್ತಿರುವುದು ಕಂಡುಬರುತ್ತದೆ.	 **ಭತ್ತದ ಹೊಟ್ಟು,**
ಪತ್ತ್‌ಕರ್	ಮರಾಟಿ ಭಾಷೆಯಲ್ಲಿ 'ಪತ್ತರ್' ಎಂದರೆ ಕಲ್ಲು ಅಥವಾ 'ಬಂಡೆ' ಎಂಬುದು. ಈ ಕುಲಬಳಿಯ ಜನರು ಒಂದು ಕಪ್ಪು ಅಥವಾ	

	ಕೆಂಪು ಕಲ್ಲಿನ ಕೆಲಸದ ಮೂಲದಿಂದ ಬಂದಿದೆ. ಎಂದು ಹೇಳುವರು. ಈ ಬಳಿಯವರು ಕಲ್ಲು ಕೊರೆಗಳಲ್ಲಿ ಕೂಲಿ ಕೆಲಸ ಮಾಡುವವರಾಗಿರಬಹುದು. ಇಂದೂ ಕೂಡ ಅನೇಕ ಮರಾಟಿ ನಾಯ್ಕ, ಮರಾಟಿ ಕುಡುಬಿ ಸಮುದಾಯದವರು ಕಪ್ಪು ಅಥವಾ ಕೆಂಪು ಕಲ್ಲಿನ ಕೋರೆಗಳಲ್ಲಿ ಕೂಲಿ ಕಾರ್ಮಿಕರಾಗಿ ದುಡಿಯುತ್ತಿರುವುದು ಕಂಡು ಬರುತ್ತದೆ. ಮರಾಟಿಗರ ಈ ಬಳಿಯ ಕಸುಬು ಮೂಲದಿಂದ ಬಂದಿರುವುದಾಗಿರಬಹುದು.	 ಕಲ್ಲು
ಜೂವಾಂಗಾರ್	ಮರಾಟಿ ಕೊಂಕಣಿ ಅಥವಾ ಕುಡುಬಿ ಭಾಷೆಯಲ್ಲಿ 'ಜೂವಾ' (Zoova) ಎಂದರೆ 'ನೊಗ' ಅಥವಾ ನೇಗಿಲು. ಕೃಷಿಯ ಉಪಕರಣಗಳಲ್ಲಿ ಭೌತಿಕ ವಸ್ತು ನೊಗ ಅಥವಾ ನೇಗಿಲು.	 ನೊಗ
ಧನಗಾರ್/ಧನಕ್ಕಾರ್	ಮರಾಟಿ ಕೊಂಕಣಿ ಭಾಷೆಯಲ್ಲಿ ಧನಕಾರ್ ಎಂದರೆ ಧನವಂತ, ಶ್ರೀಮಂತ ಅಥವಾ ಸಂಪತ್ತು ಹೊಂದಿರುವ ವ್ಯಕ್ತಿ ಎಂಬುದಾಗಿ ಕರೆಯುವರು. ಈ ಬಳಿಯ ಮೂಲವು ಸಂಪತ್ತಿನಿಂದ ಬಂದಿರುವ ಸಾಧ್ಯತೆ ಹೆಚ್ಚಾಗಿರುತ್ತದೆ.	 ಸಂಪತ್ತು
ಗನ್‌ಕಾರ್/ಗಾನ್‌ಕ್ಕಾರ್	ಮರಾಟಿ ಕೊಂಕಣಿ ಭಾಷೆಯಲ್ಲಿ 'ಗಾನ' ಎಂದರೆ ಹಾಡು. ಮರಾಟಿ ನಾಯ್ಕ ಮತ್ತು ಕುಡುಬಿ ಸಮುದಾಯದಲ್ಲಿ ಗೊಂದೋಳು ಪೂಜೆ ಅಥವಾ ಹೋಳಿ ಕುಣಿತದ ಸಂದರ್ಭದಲ್ಲಿ ಹಾಡನ್ನು ಹಾಡುತ್ತಿರುವುದು ಕಂಡುಬರುತ್ತದೆ. ಈ ಹಿನ್ನೆಲೆಯಿಂದ ಬಂದಿರುವ ಸಾಧ್ಯತೆ ಇದೆ.	 ಹಾಡುಗಾರ
ಪಾಂಚ್‌ಬಳಿ	ಈ ಕುಲಬಳಿಯವರು ಐದು ಸಂಖ್ಯೆಯ ಮೂಲಕ ಗುರುತಿಸಿಕೊಳ್ಳುವರು. ಪ್ರಾಚೀನ ಕಾಲದಲ್ಲಿ ಐದು ಬಳಿಗಳ ಸಮೂಹ ಕೂಡಿಕೊಂಡಿರುತ್ತದೆ ಎಂಬುದಾಗಿ ಮಾಹಿತಿದಾರರು ತಿಳಿಸಿರುವರು. ಆದರೆ ಈ ಐದು ಬಳಿಗಳ ಯಾವುವು ಎಂಬುದಾಗಿ ಅವರಿಗೆ ಮಾಹಿತಿಯಿಲ್ಲ.	 ೫ ಐದು ಬಳಿ

ಸಂತಕರ್/ಸಾಂತ್‌ಕಾರ್	ಮರಾಟಿ ಕೊಂಕಣಿ ಮಿಶ್ರಿತ ಭಾಷೆಯಲ್ಲಿ 'ಸಾಂತ್' ಎಂಬ ಪದದ ಅರ್ಥ 'ಹುಲ್ಲು' ಅಥವಾ ಒಂದು ರೀತಿಯಾದ 'ಎಲೆ' ಎಂಬುದಾಗಿ ತಿಳಿಸಿರುವರು. ಈ ಎಲೆಯಿಂದ ಪಣೋಲಿ (ತುಳು) ಭಾಷೆ ಎಂಬುದಾಗಿ ಕರೆಯುವರು. ಇದರ ಮೂಲಕ ಮಳೆಯಿಂದ ತಾತ್ಕಾಲಿಕವಾಗಿ ರಕ್ಷಿಸಿಕೊಳ್ಳಲು ಸಾಧ್ಯವಿರುವುದು ಇನ್ನು ಕೆಲವರು 'ಸಾಂತ್' ಎಂದರೆ ಸನ್ಯಾಸಿ, ತ್ಯಾಗ ಜೀವಿ ಎಂಬುದಾಗಿ ಕರೆಯುವರು.	 **ಹುಲ್ಲು**
ಕುಂಚೆಕಾರ್/ ಕುಂಚೆಕ್ಕಾರ್ /ಕುಂಬೆಕಾರ್	ಈ ಪದವು ಮರಾಟಿ ಮಿಶ್ರಿತ ಕೊಂಕಣಿ ಭಾಷೆಯಲ್ಲಿ ಕುಂಚೆ ಅಥವಾ ಕುಂಬಿ ಎಂಬ ಪದದಿಂದ ಬಂದಿರುತ್ತದೆ ಎಂಬುದಾಗಿ ತಿಳಿಸಿರುವರು. 'ಕುಂಚೆ' ಎಂದರೆ ಪಕ್ಷಿಗಳ 'ಗರಿ' ಎಂಬ ಅರ್ಥವಾಗಿರುತ್ತದೆ. ಸಾಮಾನ್ಯವಾಗಿ ಪಕ್ಷಿಗಳ ಗರಿಯನ್ನು ಹೋಳಿ ಕುಣಿತದ ಸಂದರ್ಭದಲ್ಲಿ ಉಪಯೋಗಿಸುವರು. ನೃತ್ಯಗಾರರು ಈ ಹಿನ್ನೆಲೆಯಿಂದ ಕುಂಚೆಕ್ಕಾರ್ ಬಳಿಯವರು ತಮ್ಮನ್ನು ಗುರುತಿಸಿಕೊಳ್ಳುವರು.	 **ನವಿಲುಗರಿ,**
ಮೌಕ್ಕಾರ್	ಈ ಬಳಿಯವರು 'ಜೇನು' (ಜೇನುತುಪ್ಪ) ವಿನ ಹಿನ್ನೆಲೆಯಿಂದ ಬಂದಿರುವ ಸಾಧ್ಯತೆ ಜಾಸ್ತಿ ಇರುತ್ತದೆ. ಜೇನು ಸಂಗ್ರಹಿಸುವುದು ಬುಡಕಟ್ಟು ಸಮುದಾಯದ ಪ್ರಾಚೀನ ಸಂಪ್ರದಾಯ ಬದ್ಧ ಕಸುಬು. ಈ ವೃತ್ತಿಯ ಹಿನ್ನೆಲೆಯಿಂದ ಬಂದಿರುವ ಸಾಧ್ಯತೆ ಇದೆ.	 **ಜೇನುತುಪ್ಪ**
ತೋಡಕರ್	ತೋಡಕರ ಬಳಿಯನ್ನು ಹೊದೋಟದ ಸಂಕೇತವಾಗಿ ಬಳಸುತ್ತಿರುವುದು ಮರಾಟಿ ಸಮುದಾಯಗಳಲ್ಲಿ ಕಂಡು ಬರುತ್ತದೆ. **ಹೂದೋಟ**	
ಅಲ್ಕೇಗಾರ್/ಕಣೇರಿ	ಮರಾಟಿನಾಯ್ಕ ಸಮುದಾಯದಲ್ಲಿ ಕಣೇರಿ ಬಳಿ ಪ್ರಚಲಿತದಲ್ಲಿ ಅಧ್ಯಯನದ ಸಂದರ್ಭದಲ್ಲಿ ಕಣೇರಿ ಬಳಿಯ ಮೂಲ ಕಿರಾಣಿ ಅಂಗಡಿಯಿಂದ ಗುರುತಿಸಲ್ಪಡುತ್ತದೆ. ಈ ಕುಲದ ಅಧಿದೇವತೆ ಗಣಪತಿ ಎಂಬುದಾಗಿ ತಿಳಿಸಿರುವರು.	 **ಕಿರಾಣಿ ಅಂಗಡಿ,**

ಭರಮ್‌ಕಾಂ/ಬರನ್‌ಕಾರ್	ಭಂಕಾರ್ ಮರಾಟಿ ಕೊಂಕಣಿ ಭಾಷೆಯಲ್ಲಿ ಭರಂ ಅಥವಾ ಭರನ್ ಎಂದರೆ 'ಗೌರವ' ಘನತೆ ಎಂಬುದಾಗಿ ಕರೆಯುತ್ತಾರೆ. ಈ ಕುಲಬಳಿಯು ಗೌರವಾನ್ವಿತ ಕೌಟುಂಬಿಕ ಹಿನ್ನೆಲೆಯುಳ್ಳವರು ಎಂದು ಹೇಳುವರು.	ಘನತೆ
ಧೋಗರ್/ಡೊಂಗ್ರೆಕ್ಕಾರ್	ಈ ಕುಲಬಳಿಯು ಅರಣ್ಯ ಪ್ರದೇಶದ ಮೂಲದಿಂದ ಬಂದಿರುವುದಾಗಿದೆ. ಗುಡ್ಡಗಾಡು ಪ್ರದೇಶ, ಪರ್ವತ, ಬೆಟ್ಟ ಎಂಬುದಾಗಿ ಕೂಡ ಕರೆಯುವರು. ಈ ಕುಲಬಳಿಯ ಸಮುದಾಯದ ಜನರು ಗುಡ್ಡಗಾಡು ಅಥವಾ ಅರಣ್ಯ ಪ್ರದೇಶದ ವಾಸವಿರುವುದಾಗಿ ತಿಳಿದುಕೊಂಡಿರುವರು.	 ಅರಣ್ಯ ಪ್ರದೇಶ,
ಗುಡಿಯಕಾರ್/ ಗೊಡಿಯಕ್ಕಾರ್	ಈ ಕುಲ ಬಳಿಯವರು 'ಗೊಡಿಯ' ಮತ್ತು ಗುಡಿಯ ಎಂಬುದರಲ್ಲಿ ಗುರುತಿಸಿಕೊಂಡಿರುವರು. ಗೊಡಿಯ / ಗುಡಿಯ ಎಂದರೆ ಬೆಟ್ಟ, ಗುಡ್ಡ, ಪರ್ವತ ಎಂಬುದಾಗಿ ಕರೆಯುವರು. ಆದ್ದರಿಂದ ಈ ಕುಲಬಳಿಯವರು ಬೆಟ್ಟದ ಅಂಚಿನಲ್ಲಿ ವಾಸಿಸುವವರು. ನಾಗರಿಕ ಪ್ರದೇಶದಿಂದ ದೂರವಿರುವವರು ಎಂಬುದಾಗಿ ಇತರ ಸ್ವ-ಸಮಾಜದ ಬಂಧುಗಳು ಕರೆಯುವರು.	
ಉಣ್ಸೆಕ್ಕಾರ್	ಮರಾಟಿ ಕೊಂಕಣಿ ಸಮುದಾಯದ 'ಉಣ್ಸೆ' ಅಂದರೆ ಹತ್ತೊಂಬತ್ತು ಎಂದು ಹೇಳುವರು. ೧೯ ಬಳಿಗಳ ಸಮೂಹವು ಆಗಿರಬಹುದು. ಅವುಗಳು ಯಾವುದು ಎಂಬುದು ಮರಾಟಿ ಕುಡುಬಿ ಸಮುದಾಯದ ಜನರಿಗೆ ಗೊತ್ತಿಲ್ಲ.	**19**
ಗಡಿಕಾರ್	ಗಡಿಕಾರ್ ಬಳಿಯವರು ತಮ್ಮ ಕುಲದ ಲಾಂಚನವಾಗಿ 'ಜಾದುಗಾರ' ನನ್ನ ಪಡೆದಿರುವ ಸಾಧ್ಯತೆ ಇದೆ.	
ನೆವೂಕ್ಕಾರ್	ಈ ಕುಲಬಳಿಯವರು ನೇಯ್ಗಿ ವೃತ್ತಿಯಿಂದ ಬಂದಿರುವುದು ಎಂಬುದಾಗಿ ನಂಬಿಕೊಂಡು ಬಂದಿರುವರು. ನೇಯ್ಗಿ / ನೇವೂ ಎಂಬುದು ಸಾಮಾನ್ಯವಾಗಿ ನೇಕಾರಿಕೆಯ ವೃತ್ತಿಯಿಂದ ಬಂದಿರುವುದಾಗಿ ತಿಳಿಸಿರುವುದಲ್ಲದೆ ನಿವ್ವಾ	

	ಎಂಬುದು ಕೂಡ ಪದ ಬಳಸಿರುವರು. ಅಂದರೆ 'ಹೊಸತು' ಎಂಬ ಅರ್ಥ ಕೂಡವಿರುವುದಾಗಿ ತಿಳಿಸಿರುವರು. ಆದ್ದರಿಂದ ಈ ಕುಲಬಳಿಯವರು ನಿಶಿತ್ವವಾದ ಅರ್ಥ ತಿಳಿದುಕೊಳ್ಳಲು ಕಷ್ಟ. ನಾಯ್ಕರ್, ರಾಯ್ಕರ್, ನಾಟೇಕಾರ್ ಮುಂತಾದ ಕುಲ ಬಳಿಗಳು ಕೂಡ ಕಂಡುಬಂದಿರುತ್ತದೆ.
ತೋಳಾರ ಬಳಿ / ತೋಳಹರ	ಕ್ಷೇತ್ರಕಾರ್ಯ ಸಂದರ್ಭದಲ್ಲಿ ಮರಾಟಿ ನಾಯ್ಕ ಮತ್ತು ಕುಡುಬಿಗಳಲ್ಲಿ ತೋಳಾರ ಬಳಿಯು ಕಂಡುಬಂದಿರುತ್ತದೆ. ಬಂಟ ಮತ್ತು ಜೈನ ಸಮುದಾಯದವರಿಗೆ ಈ ಬಳಿಯು ಪ್ರಚಲಿತದಲ್ಲಿರುತ್ತದೆ. ಜೈನರ ತೋಳಹರ ಆಳ್ವಿಕೆಯ ವ್ಯಾಪ್ತಿಯಲ್ಲಿ ಒಳಗೊಂಡಿರುತ್ತದೆ.
ಸಾಳ್ವಬಳಿ / ಸಾಲಿ ಬಳಿ	ಈ ಬಳಿಯ ಮರಾಟಿ ನಾಯ್ಕ, ಕುಡುಬಿ, ಮರಾಟಿ ಮೂರು ಸಮುದಾಯದವರಲ್ಲೂ ಕಂಡುಬರುತ್ತದೆ. ಸಾಲಿಯ ವಂಶದಲ್ಲಿ ಸಂತಾನ ಹೆಚ್ಚು ಎನ್ನುತ್ತಾರೆ ಜನಪದರು. ಸಾಲಿಯ ಮತ್ತು ಸಾಳುವ ವಂಶ. ಹೀಗೆ ಹಲವು ಸಮುದಾಯದವರು ಗುರುತಿಸಲಾಗುತ್ತಿದೆ. ಡಾ। ಸೂರ್ಯನಾಥ ಕಾಮತ್ ಅವರ ಪ್ರಕಾರ ವಿಜಯನಗರವನ್ನು ಆಳಿದವರು ಸಾಳುವ ವಂಶದವರು. ಸಾಲಿಯ ಬಳಿಯವರು ಜೇಡವನ್ನು ಕೊಲ್ಲಬಾರದೆಂಬ ನಂಬಿಕೆ ಇದೆ. ದೇವಾಂಗ ಮತ್ತು ಸೆಟ್ಟಿಗಾರರು ವಿಜಯನಗರ ಅರಸರ ಕಾಲದಲ್ಲಿ ತುಳುನಾಡಿಗೆ ಬಂದವರೆಂಬ ನಂಬಿಕೆ ಇದೆ. ಕೊರಗರಲ್ಲಿ ಬಿಲ್ಲವರಲ್ಲಿ ಮತ್ತು ಮೊಗವೀರರಲ್ಲಿ ಸಾಲಿಯ ಬಳಿ ಇದೆ.

ಬಳಿ ಮೂಲಕ ಗುಣ ಸ್ವಭಾವ ನಡವಳಿಕೆಗಳನ್ನು ನಿರ್ಧರಿಸುವುದು

- ಮರಾಟಿ ನಾಯ್ಕರಲ್ಲಿ ಸಾಲ್ಸೆಗಾರ ಬಳಿಯ ಕುಟುಂಬಗಳಲ್ಲಿ ಗಂಡ ಬೇಗನೆ ಸಾಯುತ್ತಾರೆ ಸಾಲಗಾರನಾಗುತ್ತಾನೆ.
- ದುಮಾಳಿಯ ಬಳಿಯವರು ಬೆಳವಣಿಗೆ ಹೊಂದುವುದಿಲ್ಲ.

ಕೆಲವೊಂದು ಬಳಿಗಳಲ್ಲಿ ವೈವಾಹಿಕ ಸಂಬಂಧ ಏರ್ಪಡುವುದಿಲ್ಲ (ನಿಷಿದ್ಧ)

- ಮರಾಟಿ ನಾಯ್ಕ ಸಮುದಾಯದವರಲ್ಲಿ ಬಡೆಗಾರ್ ಬಳಿಯವರು ದುವಾಲಿಯ ಬಳಿಯರ ಮಧ್ಯೆ ವಿವಾಹ ಸಂಬಂಧ ಏರ್ಪಡುವುದಿಲ್ಲ.

ಪ್ರಥಮ ಪ್ರಾಶಸ್ತ್ಯದಲ್ಲಿ ಸಂಬಂಧ ಏರ್ಪಡು ಬಳಿಗಳು

- ಬಡೆಗಾರ ಮತ್ತು ಲಾಂಜಗಾರ
- ಪೆನ್‌ಕ್ಲೆಗಾರ ಮತ್ತು ಸಾಲ್ವೆಗಾರ

೧.೧೩. ಬಳಿಗೆ ಸಂಬಂಧಿಸಿದ ನಿಷೇದ ಮತ್ತು ನಂಬಿಕೆಗಳು

- ಅಕ್ಕ – ತಂಗಿಯರ ಮಕ್ಕಳೊಂದಿಗೆ ವಿವಾಹ ಸಂಬಂಧ ನಡೆಯುವುದಿಲ್ಲ. ಇವರೊಳಗೆ ಸಂಬಂಧ ನಡೆದರೆ ಕುಟುಂಬ ನಾಶವಾಗುತ್ತದೆ. ಒಂದೇ ಕುಟುಂಬದ ಒಳಗೆ ಸಂಬಂಧ ನಡೆಯಬಾರದು ಎಂಬ ಕಾರಣಗಳಿಂದಲೇ ಹಿರಿಯರು ರಕ್ತ ಸಂಬಂಧಗಳನ್ನು ಗುರುತಿಸುವುದಕ್ಕೋಸ್ಕರ 'ಬಳಿ'ಗಳನ್ನು ಸ್ವಿಕರಿಸಿದರು.

• ಒಂದೇ ಬಳಿಯೊಳಗೆ ಮದುವೆಯಾದವರಿಗೆ ಶಿಕ್ಷೆ, ತಪ್ಪು ದಂಡ ವಿಧಿಸುತ್ತಿದ್ದರು.

• ಒಂದೇ ಬಳಿಯೊಳಗೆ ಮದುವೆಯಾದರೆ ಗಂಡು ಹೆಣ್ಣು ಸಾಯುತ್ತಾರೆ. ಮಕ್ಕಳಾದರೂ ಹೆಚ್ಚು ಕಾಲ ಬಾಳುವುದಿಲ್ಲ ಎಂಬ ನಂಬಿಕೆ ಪ್ರಚಲಿತದಲ್ಲಿದೆ.

• ಪೊದು ಕಡಿದ್ ಪೋಪುಂಡು ಪೊದು ನಡಪುಜಿ (ನೆಂಟಸ್ತಿಕೆ ಬಿಟ್ಟು ಹೋಗುತ್ತದೆ. ನೆಂಟಸ್ತಿಕೆ ಆಗುವುದಿಲ್ಲ.)

ಕೊನೆ ಟಿಪ್ಪಣಿಗಳು

೧. ಇಂದಿರಾ ಹೆಗ್ಡೆ, ೨೦೦೪, ಬಂಟರು ಸಮಾಜೋ ಸಾಂಸ್ಕೃತಿಕ ಅಧ್ಯಯನ, ಪುಟ–೨೭

೨. ಉಪಾಧ್ಯಾಯ ಯು.ಪಿ., ತುಳು ನಿಘಂಟು ಸಂಪುಟ ಗೋವಿಂದ ಪೈ ಸಂಶೋಧನಾ ಕೇಂದ್ರ, ಉಡುಪಿ.

೩. ಡಿ. ಕೆ. ಭಾರಧ್ವಾಜ್, ೨೦೦೭, ಸ್ಟಾಂಡರ್ಡ್ ಡಿಕ್ಷನರಿ, ಪುಟ–೮೧

೪. ಬರಿ ಕುಂಟ, ಕ್ಷೇತ್ರಕಾರ್ಯ ಸಂಬಂಧ್ಧದ ಅವಲೋಕನ ಬ್ರಾಹ್ಮಣ ಮತ್ತು ಶೂದ್ರರ ಶವ ತೆಗೆಯುವಾಗ ಸ್ನಾನ ಮಾಡುವುದರ ಪೂರ್ವದಲ್ಲಿ ಊರಿನ/ಜಾತಿಯ ಗುರಿಕಾರ ಮೃತನ ಮಕ್ಕಳ ಹೆಗಲಿಗೆ ಶವಕ್ಕೆ ಹಾಕಿದ ಬಿಳಿಬಟ್ಟೆಯನ್ನು ಮಕ್ಕಳ ಹೆಗಲಿಗೆ ಹಾಕುವ ಬಟ್ಟೆ.

೫. Endogamy, ಹೊರಬಾಂಧವ್ಯ (ವಿವಾಹ ಕಾಲದಲ್ಲಿಒಬ್ಬ ವ್ಯಕ್ತಿ ತನ್ನ ಬಳಿಯ ಹೊರತಾಗಿ ಬೇರೊಂದು ಬಳಿಯಿಂದ ತನ್ನ ಜೀವನ ಸಂಗಾತಿಯನ್ನು ಆಯ್ಕೆ ಮಾಡುವ ನಿಯಮ.

೬. ಮಾಹಿತಿದಾರರು, ಶ್ರೀ ಗೋಪಾಲಕೃಷ್ಣ, ಕೊಲ್ಲೂರು ದೇವಸ್ಥಾನದ ಹತ್ತಿರ, ಕೊಲ್ಲೂರು ಕುಂದಾಪುರ.

೭. ತಿಳುವಳಿಕೆದಾರರು, ಶ್ರೀ ಸೋಮಯ್ಯ ಗೊಂಡ, ಭಟ್ಕಳ (ಬೆಳಂದೂರ ಹತ್ತಿರ) ಉತ್ತರ ಕನ್ನಡ ಜಿಲ್ಲೆ ಮತ್ತು ಡಾ. ಜಿ. ಎಂ ಗೊಂಡ, ಪ್ರಾಂಶುಪಾಲರು, ಭಂಡಾರ್‌ಕಾರ್ಸ್ ಪ.ಪೂ. ಕಾಲೇಜು, ಕುಂದಾಪುರ.

೮. ಡಾ. ಇಂದಿರಾ ಹೆಗಡೆ, ೨೦೦೪, ಮರಾಟಿಗರ ಒಂದು ಸಾಮಾಜೋಸಾಂಸ್ಕೃತಿಕ ಅಧ್ಯಯನ, ಪುಟ, ೧೦೫.

೯. ಉದ್ಧೃತ, ಡಾ. ಬಿ. ಕುಸುಮ ವಿ. ಪೈ., ೨೦೦೩ ಕರಾವಳಿ ಕರ್ನಾಟಕ ಗೌಡ ಸಾರಸ್ವತ ಬ್ರಾಹ್ಮಣರ ಸಂಸ್ಕೃತಿ–ಒಂದು ಅಧ್ಯಯನ ಪು,೮೮–೧೦೪.

೧೦. ಅಭಯ ಕುಮಾರ, ಡಾ. ವಾಮನ ನಂದಾವರ(ಸಂ), ಕುಡುಬಿಯರು, 'ಕರಾವಳಿ ಆಚರಣೆಗಳು', ಭಾಗ–೧, ಕೌಕ್ರಾಡಿ, ಪು–೧೬೫–೧೯೯,

೧೧. ವೈ. ರವೀಂದ್ರ ರಾವ್, ೨೦೦೨, ಟ್ರೈಬಲ್ ಟ್ರಡಿಷನ್ ಎಂಡ್ ಚೇಂಜ್, ಎ ಸ್ಟಡೀ ಆಫ್ ಕುಡುಬಿಸ್ ಇನ್ ಸೌತ್ ಇಂಡಿಯ, ಪು, ೬೮–೮೦.

೧೨. ಎ. ವಿ. ನಾವಡ, ೨೦೧೩, ಕುಡುಬಿಯರು, ತುಳು ಪೊಲಿ. ಪು, ೩೧೫–೩೧೫.

೧೩. ರಾಮಚಂದ್ರ, 'ಸಾಮಾಜಿಕ ಬದಲಾವಣೆಯಲ್ಲಿ ಕುಡುಬಿ ಬುಡಕಟ್ಟು ಸಮುದಾಯ': ಒಂದು ಸಮಾಜಶಾಸ್ತ್ರ ಅಧ್ಯಯನ, ಪುಟ–೧೪.

೧೪. ತಿಳುವಳಿಕೆದಾರರು, ಶ್ರೀ ಪಾಂಡುರಂಗ, ಅಂಚೆ ಕಛೇರಿ ನೌಕರರು-ಮುಲ್ಕಿ ಸಾಮಾಜಿಕ ಕಾರ್ಯಕರ್ತರು.

೧೫. ವೆಂಕಟೇಶ ಲಂಬೋದರ ನಾಯಕ, ಕುಂಬ್ರಿ ಮರಾಟಿಗರ ಸಾಮಾಜಿಕ ಸಂಕಥನ (ಅಪ್ರಕಟಿತ ಪಿಎಚ್ ಡಿ. ಮಹಾಪ್ರಬಂಧ), ಪುಟ-೧೨೮-೧೨೯.

೧೬. ವಿಠಲರಾವ್, ಟಿ. ಗಾಯಕ್ವಾಡ್, ೨೦೧೩, (ಅನು), (ಮೂಲ), ರಾಮಚಂದ್ರ ಚಿಂತಾಣಿ ಡೇರಿ, ಲಜ್ಜಾಗೌರಿ ಪುಟ-೧೩೪-೧೬೨

೧೭. ತಿಳುವಳಿಕೆದಾರರು, ಶ್ರೀ ಪ್ರಕಾಶ್ ರಾವ್ ಜಾದವ್ ಕಾರ್ಕಳ

೧೮. ಸಂಗಮೇಶ ಕಲ್ಯಾಣಿ, ಘೋರ್ಪಡೆ ಘರಾಣ, ಪುಟ- ೭

೧೯. ಅದೇ ಪುಟ-೯೮

೨೦. ಅಂಗದಹಳ್ಳಿ ಹಾಲಪ್ಪ, ಹಾಲುಮತ ಸಂಸ್ಕೃತಿ-ರಾ.ಚಿ. ಡೇರೆ ಅವರ ಚಿಂತನೆಗಳು, ಪುಟ-೯೯

೨೧. ಅದೇ ಪುಟ-೧೦೦

೨೨. ಅದೇ ಪುಟ- ೯೮

ಅಧ್ಯಾಯ : ಐದು.....

ಮರಾಟಿ ನಾಯ್ಕ ಮತ್ತು ಮರಾಟಿ (ಮರಾಠ) ಸಮುದಾಯದ ಆರ್ಥಿಕ ಮತ್ತು ಶೈಕ್ಷಣಿಕ ಸ್ಥಿತಿಗಳ ತೌಲನಿಕ ಅಧ್ಯಯನ

೫.೧. ಮರಾಟಿಗರ ಕೃಷಿ
೪.೨. ಮರಾಟಿಗರು ಬೆಳೆಯುವ ಬೆಳೆಗಳು
೪.೩. ಮರಾಟಿಗರ ಕಸುಬುಗಳು
೫.೪. ಮರಾಟಿಗರ ಮನೆಯ ಸ್ವರೂಪ ಮತ್ತು ಒಡೆತನ
೫.೫. ಶೈಕ್ಷಣಿಕ ಸ್ಥಿತಿ-ಗತಿಗಳ ತೌಲನಿಕ ಅಧ್ಯಯನ

ಅಧ್ಯಾಯ : ಐದು

ಮರಾಟಿ ನಾಯ್ಕ ಮತ್ತು ಮರಾಟಿ ಸಮುದಾಯದ ಆರ್ಥಿಕ ಮತ್ತು ಶೈಕ್ಷಣಿಕ ಸ್ಥಿತಿಗಳ ತೌಲನಿಕ ಅಧ್ಯಯನ

ಜಗತ್ತಿನಲ್ಲಿರುವ ಯಾವುದೇ ಒಬ್ಬ ವ್ಯಕ್ತಿಯ ಮತ್ತು ಸಮುದಾಯದ ಆರ್ಥಿಕ ಸ್ಥಿತಿಯು ಆತನ ಜೀವನ ಮತ್ತು ಸಮುದಾಯದ ಸ್ಥಾನಮಾನಗಳಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ವ್ಯಕ್ತಿ ಸಮಾಜದಲ್ಲಿ ಯಾವ ರೀತಿಯಲ್ಲಿ ಆರ್ಥಿಕ ಸಂಪತ್ತನ್ನು ಹೊಂದಿದ್ದಾನೆ ಎಂಬುದರ ಮೇಲೆಯೇ ಅವಲಂಬಿಸಿರುತ್ತದೆ. ಇದು ಆತನ ಸಾಮಾಜಿಕ ಅಂತಸ್ತಿನ ಮೇಲೂ ಪರಿಣಾಮ ಬೀರುತ್ತದೆ. ಬುಡಕಟ್ಟು ಸಮುದಾಯಗಳ ಆರ್ಥಿಕ ಸ್ಥಿತಿಗತಿಗಳನ್ನು ಗಮನಿಸಿದರೆ ಅವರ ಆದಾಯ, ಜೀವನಮಟ್ಟ, ವಸತಿ ಮತ್ತು ನೈರ್ಮಲ್ಯ, ಭೂಮಿಯ ಒಡೆತನ ಮತ್ತು ಆರೋಗ್ಯ ಸ್ಥಿತಿಗತಿಗಳ ವಿಷಯದಲ್ಲಿ ಬುಡಕಟ್ಟು ಸಮುದಾಯೇತರರಿಗೆ ಹೋಲಿಸಿದರೆ ಇವರು ಬಹಳಷ್ಟು ಹಿಂದುಳಿದ್ದಾರೆ ಎಂಬುದಾಗಿ ಕ್ಷೇತ್ರಕಾರ್ಯ ಸಂದರ್ಭದಲ್ಲಿ ಗಮನಿಸಿರುವೆನು.

ಬ್ರಿಟಿಷರು ಬರುವುದಕ್ಕಿಂತ ಪೂರ್ವದಲ್ಲಿ ಅಥವಾ ವಸಾಹತುಶಾಹಿ ಕಾಲದ ಅವಧಿಯಲ್ಲಿ ಗಮನಿಸಿದರೆ ದೇಶದ ಅನೇಕ ಬುಡಕಟ್ಟು ಸಮುದಾಯಗಳು ಒಂದಲ್ಲ ಒಂದು ರೀತಿಯಲ್ಲಿ ಆರ್ಥಿಕತೆಯಲ್ಲಿ ವಂಚಿತರಾಗಿ ಬೇರೆಯವರ ಅಧೀನದಲ್ಲಿ ಇರುತ್ತಿದ್ದರಷ್ಟೆ ಅಲ್ಲ, ಮೇಲ್ವರ್ಗದವರು ಬುಡಕಟ್ಟು ಸಮುದಾಯಗಳ ಭೂಮಿಯನ್ನು ಆಕ್ರಮಿಸಿಕೊಂಡು ಅವರ ಭೂಮಿಯಲ್ಲಿಯೇ ಇವರುಗಳನ್ನು ಜೀತಾದಾಳುಗಳನ್ನಾಗಿಸಿ ದುಡಿಸಿಕೊಳ್ಳುತ್ತಾ ಬಂದಿದ್ದ ಘಟನೆಗಳನ್ನು ನಾವು ನೆನಪಿಸಿಕೊಳ್ಳಬಹುದಾಗಿದೆ.

ದೇಶದಲ್ಲಿ ಆರ್ಥಿಕವಾಗಿ ಬುಡಕಟ್ಟು ಸಮುದಾಯದವರು ಪರಿವರ್ತನೆ ಹಾದಿಯಲ್ಲಿದ್ದಾರೆ ಎಂಬುದನ್ನು ಗಮನಿಸುವುದೂ ಕೂಡಾ ಅಷ್ಟೇ ಮುಖ್ಯ. ಬುಡಕಟ್ಟು ಪ್ರದೇಶಗಳಿಗೆ ಸಂಬಂಧಿಸಿರುವ ಬುಡಕಟ್ಟುಗಳಿಗೋಸ್ಕರ ಇರುವ ಕಲ್ಯಾಣ ಕಾರ್ಯಕ್ರಮಗಳು ಮತ್ತು ಸಮುದಾಯ ಅಭಿವೃದ್ಧಿ ಯೋಜನೆಗಳ ವಿವಿಧ ಕಾರ್ಯಕ್ರಮಗಳು ಹಾಗೂ ಅವುಗಳ ಅನುಷ್ಠಾನ, ನಗರೀಕರಣ, ಶಿಕ್ಷಣ, ಸಾರಿಗೆ, ಸಂಪರ್ಕ ಮತ್ತು ಸಂವಹನ, ವಾಣಿಜ್ಯ ಬ್ಯಾಂಕುಗಳ ಸ್ಥಾಪನೆ, ಸಹಕಾರ, ಮರಾಟ ವ್ಯವಸ್ಥೆ ಹಾಗೂ ಸರ್ಕಾರೇತರ ಸೇವಾ ಸಂಸ್ಥೆಗಳು ಪ್ರಕಲ್ಪಗಳು ಮತ್ತು ನಿಯೋಗಗಳು ಈ ಬುಡಕಟ್ಟು ಸಮುದಾಯಗಳ ಆರ್ಥಿಕ ಜೀವನದಲ್ಲಿ ಸ್ವಲ್ಪ ಬದಲಾವಣೆಯನ್ನು ತಂದಿರುವುದನ್ನು ಗಮನಿಸಬಹುದು. ಆದರೆ ಈ ಯೋಜನೆ ಮತ್ತು ಕಾರ್ಯಕ್ರಮಗಳನ್ನು ಸಮಗ್ರ ದೃಷ್ಟಿಯಿಂದ ಅವಲೋಕಿಸಿದಾಗ ಅದರ ಒಟ್ಟಾರೆ ಪರಿಣಾಮವು ನಾವು ನಿರೀಕ್ಷಿಸಿದಷ್ಟು ಉತ್ತೇಜನಕಾರಿಯಾಗಿಲ್ಲ. ವಿದ್ಯಾರ್ಥಿ ಮತ್ತು

ರಾಯ್‌ರವರ ಅಭಿಪ್ರಾಯವೇನೆಂದರೆ 'ಸ್ಥಳೀಯ ಮಟ್ಟದಲ್ಲಿ ವೇಗದಲ್ಲಿ ಬದಲಾಗುತ್ತಿರುವ ಕಾರಣ ಬುಡಕಟ್ಟು ಆರ್ಥಿಕತೆಯಲ್ಲಿ ಸರಳ ಮತ್ತು ನಿಖರವಾದ ಬದಲಾವಣೆಯ ಪ್ರವೃತ್ತಿಯನ್ನು ಕಂಡು ಹಿಡಿಯುವುದು ತುಂಬಾ ಕಷ್ಟ. ಆದರೆ ಬದಲಾವಣೆಯ ಗುರುತಿಸುವಿಕೆಗೆ ಉತ್ತಮ ಮಾರ್ಗವೇನೆಂದರೆ ವಿವಿಧ ಹೊಸ ಆರ್ಥಿಕ ಚಟುವಟಿಕೆಗಳು ಮತ್ತು ಬೆಳವಣಿಗೆಗಳನ್ನು ಒಂದು ಕಡೆ ಪರಿಗಣಿಸುವುದಲ್ಲದೆ ಮತ್ತೊಂದೆಡೆ ಹೊರ ಹೊಮ್ಮಿದ ಅನೇಕ ಆರ್ಥಿಕ ಅಂಶಗಳ ವಿವರಣೆಗಳಿವೆ' ಎಂದಿದ್ದಾರೆ.

ಭಾರತೀಯ ಸಮಾಜದಲ್ಲಿ ಶ್ರೇಷ್ಠ ಮತ್ತು ನಿಕೃಷ್ಟ ಎಂಬ ಸಾಮಾಜಿಕ ಏಣಿಶ್ರೇಣಿ ವ್ಯವಸ್ಥೆ ಇದ್ದಂತೆಯೇ ಆರ್ಥಿಕತೆಯಲ್ಲಿಯೂ ಶ್ರೀಮಂತ, ಮಧ್ಯಮ ಮತ್ತು ಬಡವ ಎಂಬ ಏಣಿಶ್ರೇಣಿ ಇರುವುದು ಸಹಜ. ಈ ಹಿನ್ನೆಲೆಯಲ್ಲಿ ಭಾರತದಲ್ಲಿ ಬಂಡವಾಳ ಯಾವ ರೀತಿ ಕ್ರೋಢೀಕರಣವಾಗಿರುತ್ತದೆ ಎಂಬುದರ ಬಗ್ಗೆ ಯಾವುದನ್ನು ಮಾತನಾಡದೆ ನಮ್ಮ ಕಣ್ಣ ಮುಂದೆ ಇರುವ ವ್ಯವಸ್ಥೆಯನ್ನು ನಾವು ಸಾರ್ವತ್ರಿಕವಾಗಿ ಒಪ್ಪಿಕೊಳ್ಳುತ್ತಾ ಬಂದಿರುವೆವು. ಅನೇಕ ಬುಡಕಟ್ಟುಗಳು ಒಂದು ನಿರ್ದಿಷ್ಟವಾದ ಭೂ ಪ್ರದೇಶವನ್ನು ತನ್ನದು ಅಥವಾ ನಮ್ಮದೂ ಎಂದುಕೊಂಡು ಒಂದು ಕಡೆ ಭದ್ರವಾಗಿ ನೆಲೆ ನಿಂತು ತಮ್ಮದೇ ಆದ ಆರ್ಥಿಕತೆಯನ್ನು ರೂಢಿಸಿಕೊಂಡು ಜೀವನವನ್ನು ಸಾಗಿಸುತ್ತಿದ್ದಾರೆ. ಇನ್ನೊಂದು ಕಡೆ ಒಂದು ಕಡೆ ನೆಲೆ ನಿಲ್ಲದೆ ಅಲೆಮಾರಿಗಳಾಗಿ, ಅರೆ-ಅಲೆಮಾರಿಗಳಾಗಿ ಊರಿಂದ ಊರಿಗೆ ವಲಸೆ ಹೋಗುತ್ತಾ ಆರ್ಥಿಕವಾಗಿ ಅಭಿವೃದ್ಧಿ ಸಾಧಿಸಿಕೊಳ್ಳದೆ ಅತ್ಯಂತ ಹೀನ ಸ್ಥಿತಿಯಲ್ಲಿ ಬದುಕುತ್ತಿರುವ ಬುಡಕಟ್ಟುಗಳನ್ನು ಕೂಡ ನೋಡಬಹುದು. ಮರಾಟಿ ನಾಯ್ಕ ಮತ್ತು ಮರಾಟಿ ಸಮುದಾಯ ಆರ್ಥಿಕ ಸಮಸ್ಯೆಯಾಗಿ ಯಾವಾಗ ಅವರು ಮಹಾರಾಷ್ಟ್ರದ ರತ್ನಗಿರಿ, ಕರಾಡ, ಪುಣೆ, ಕೋಲ್ಹಾಪುರ, ಸೋಲಾಪುರ ಮತ್ತು ಗೋವಾದಿಂದ ವಲಸೆ ಬಂದಿದ್ದಾರೋ ಅಂದಿನಿಂದಲೇ ಬದುಕಿನಲ್ಲಿ ಆರ್ಥಿಕ ಸ್ಥಿತ್ಯಂತರಕ್ಕೆ ಒಳಗಾಗಿದ್ದಾರೆ.

ಗೋವಾದಲ್ಲಿ ಪೋರ್ಚುಗೀಸ್ ಮತಾಂತರದ ಬಲತ್ಕಾರಕ್ಕೆ ಸಿಲುಕಿದ ಹಿಂದೂ ಮತ್ತು ಹಿಂದೂಯೇತರರು ಕರಾವಳಿ ಕರ್ನಾಟಕಕ್ಕೆ ವಲಸೆ ಬಂದು ಹವ್ಯಕ, ಕರಾಡ ಬ್ರಾಹ್ಮಣರ, ನಾಡವರ ಮತ್ತು ಮೇಲ್ಜಾತಿಯ ಬಂಟರ, ಕೊಂಕಣಸ್ಥರ ಮನೆಗಳಲ್ಲಿ ಹಾಗೂ ಅವರ ತೋಟದಲ್ಲಿ ಕೆಲಸದ ಆಳುಗಳಾಗಿ ಸೇರಿಕೊಂಡು ನಿತ್ಯದ ಹೊಟ್ಟೆಪಾಡನ್ನು ನೀಗಿಸಿಕೊಳ್ಳುತ್ತಿದ್ದರು. ನಂತರ ಇವರ ಹೆಸರಿಗೆ ತಕ್ಕಂತೆ (ಕುಂಬ್ರಿ, ಕುಣುಬಿ, ಅಟ್ಟೆಕುಣುಬಿ, ಅರೆ ಮರಾಟಿ, ಕುಡುಬಿ) ಕುಮೇರಿ ಕೃಷಿಯ ಅನುಭವವಿದ್ದಿದ್ದರಿಂದ ಕಾಡಿನ ಒಳ ಪ್ರದೇಶದಲ್ಲಿ ಕಾಡು ಮತ್ತು ಪರ್ವತದ ಅಂಚಿನಲ್ಲಿ, ಬೆಟ್ಟದ ತಪ್ಪಲಿನಲ್ಲಿ ಎತ್ತರ ಪ್ರದೇಶದಿಂದ ನೀರು ಧುಮುಕುವಂತ ಸ್ಥಳಗಳ ಕೆಳಗೆ ಗಿಡಗಳನ್ನು ಕಡಿದು ಕೃಷಿ ಮಾಡಲು ಪ್ರಾರಂಭಿಸಿರುವುದನ್ನು ಗಮನಿಸಬಹುದು. ಉತ್ತರ ಕನ್ನಡ ಜಿಲ್ಲೆಯಲ್ಲಿ ಬೃಹತ್ ಪ್ರಮಾಣದ ಉದ್ಯಮಗಳು, ಅಣೆಕಟ್ಟು ನಿರ್ಮಾಣದ ಸಮಯದಲ್ಲಿ ಮತ್ತೆ ಅರಣ್ಯವನ್ನು ಸೇರಿ ಹೊಸದಾದ ಊರನ್ನು ನಿರ್ಮಿಸಿಕೊಂಡರು ಈ ಹಿನ್ನೆಲೆಯಲ್ಲಿ ಹೆಚ್ಚಿನ ಮರಾಟಿಗರು ಗದ್ದೆಯನ್ನು ಉಳುಮೆ ಮಾಡುತ್ತಿದ್ದರೂ ಸಹ ಶ್ರಮಕ್ಕೆ ತಕ್ಕ ಫಲ ಸಿಗುತ್ತಿಲ್ಲ ಎಂಬ ದುಃಖ ಒಂದು ಕಡೆಯಾದರೆ ಮತ್ತೊಂದು ಕಡೆ ಕೃಷಿ ಮಾಡುವ ಗದ್ದೆಗಳ ಪಹಣಿ ಪತ್ರ (ಆರ್.ಟಿ.ಸಿ) ಸ್ವಂತ ಹೊಲ ಅಥವಾ ಗದ್ದೆಯ ಹಕ್ಕುಪತ್ರ ದೊರೆತಿಲ್ಲ ಎಂಬ ದುಃಖದ ನಡುವೆ ಇವರು ಆರ್ಥಿಕವಾಗಿ ಅಭದ್ರತೆ ಹೊಂದಿದ್ದಾರೆ.

ಇಂದಿಗೂ ಮರಾಟಿ ಸಮುದಾಯವು ಸಾಂಪ್ರಾದಾಯಿಕ ರೀತಿಯ ಕೃಷಿಯನ್ನೇ ತಮ್ಮ ಜೀವನದ ವೃತ್ತಿಯನ್ನಾಗಿ ಅನುಸರಿಸುತ್ತಿದ್ದಾರೆ. ಇದರಿಂದಾಗಿ ಇವರ ಆರ್ಥಿಕತೆಯನ್ನು ನಿರ್ಧರಿಸುವ ಮಾನದಂಡ ಕೃಷಿ, ಕೃಷಿ ಕೂಲಿ ಕಾರ್ಮಿಕತೆ, ಪಶುಸಂಗೋಪನೆ, ಕರಕುಶಲ ವಸ್ತುಗಳ ತಯಾರಿ, ಅರಣ್ಯೋತ್ಪನ್ನಗಳನ್ನು ಬಿಟ್ಟರೆ ಬೇರೆ ಯಾವುದೇ ಆಧುನಿಕ ವೃತ್ತಿಯನ್ನು ಅವಲಂಬಿಸದೇ ಪಾರಂಪರಿಕವಾಗಿ ಬಂದ ಕೃಷಿಯನ್ನು ಮತ್ತು ಕಸುಬುಗಳನ್ನು ಮುಂದುವರೆಸಿಕೊಂಡು ಹೋಗುವುದನ್ನು ನಾವು ಇಂದಿಗೂ ಹೆಚ್ಚಿನ ಪ್ರಮಾಣದಲ್ಲಿ ನೋಡಬಹುದಾಗಿದೆ. ಇತರೆ ಅನೇಕ ಬುಡಕಟ್ಟುಗಳಂತೆ ಮರಾಟಿಗರು ಸಹ ಸಾಲಭಾದೆ, ಆರ್ಥಿಕ ಶೋಷಣೆ, ಪರಿಣಾಮಕಾರಿಯಾದ ಮಾರುಕಟ್ಟೆ ವ್ಯವಸ್ಥೆಯ ಕೊರತೆ, ಭೂರಹಿತತೆ, ಕೃಷಿಕಾರ್ಯಗಳ ಆಧುನಿಕ ವಿಧಾನದ ಕೊರತೆ, ಇತ್ಯಾದಿ ಕ್ಷೇತ್ರಕಾರ್ಯ ಸಂದರ್ಭದಲ್ಲಿ ಕಂಡು ಬಂದಿರುತ್ತವೆ. ಅರಣ್ಯವು ಮರಾಟಿಗರಿಗೆ ದೀರ್ಘಕಾಲದವರೆಗೆ ಜೀವನೋಪಾಯದ ಮೂಲವಾಗಿತ್ತು. ಅರಣ್ಯ ಉತ್ಪನ್ನಗಳನ್ನು ಸಂಗ್ರಹಿಸುತ್ತಿದ್ದರು. ಅರಣ್ಯ ಅವರಿಗೆ ಮರ, ಬಿದಿರು, ಹಣ್ಣುಗಳು, ನಾರು ಬೇರುಗಳು, ಎಲೆಗಳು, ತೊಗಟೆ, ಜೇನುತುಪ್ಪ, ವ್ಯಾಕ್ಸ್ (ಮೇಣ) ಔಷಧೀಯ ಗಿಡಮೂಲಿಕೆಗಳು ಇತ್ಯಾದಿಗಳನ್ನು ಒದಗಿಸುತ್ತಿತ್ತು. ಅರಣ್ಯವು ಅವರ ವಾಸಸ್ಥಾನವಾಗಿದ್ದಾಗ ಅವರು ತಮ್ಮ ಆರ್ಥಿಕ ಸರಕುಗಳನ್ನು ಮತ್ತು ಇತರೇ ಅವಶ್ಯಕತೆಗಳನ್ನು ತಮ್ಮ ಸುತ್ತಲಿನ ಅರಣ್ಯದಿಂದ ಕೃಷಿ ಮತ್ತು ಆಹಾರ ಸಂಗ್ರಹಣೆಯ ಮೂಲಕ ಪಡೆದುಕೊಳ್ಳುತ್ತಿದರು. ಅರಣ್ಯವು ಮರಾಟಿಗರಿಗೆ ಕೃಷಿ ಉಪಕರಣಗಳು, ವಸತಿ ಸಾಮಗ್ರಿಗಳು, ಸಂಗೀತ ಪರಿಕರಗಳಿಗೆ ಬೇಕಾದ ಕಚ್ಚಾವಸ್ತುಗಳನ್ನು ಒದಗಿಸುತ್ತಿತ್ತು. ಆದ್ದರಿಂದ ಅರಣ್ಯವು ಅವರ ಪ್ರಮುಖ ಜೀವನೋಪಾಯವಾಗಿತ್ತು.

ಮರಾಟಿಗರು ಕಾಡಿನಲ್ಲಿ ಪ್ರಾಣಿಗಳನ್ನು ಬೇಟೆಯಾಡುತ್ತಿದ್ದರು. ಇತ್ತೀಚಿನವರೆಗೆ ಮರಾಟಿಗರು ಕುಮೇರಿ ಕೃಷಿಯ ಮೇಲೆ ಅವಲಂಬಿತವಾಗಿದ್ದರು ಎಂಬುದಾಗಿ ವರದಿಯು ಆಗಿದೆ. ಅನ್ಯ ಕಾರಣಗಳಿಂದ ಈ ಕೃಷಿ ಪದ್ಧತಿಯನ್ನು ಬಿಟ್ಟುಕೊಟ್ಟಿದ್ದೇವೆ ಮತ್ತು ಬೇಟೆಯಾಡುವುದನ್ನು ಸರ್ಕಾರ ನಿರ್ಬಂಧಿಸಿದೆ ಎಂಬುದಾಗಿ ಗ್ರಾಮಾಂತರದಲ್ಲಿ ವಾಸವಿರುವ ಅಧ್ಯಯನಕ್ಕೊಳಪಡಿಸಿದ ಮರಾಟಿಗರು ಮಾಹಿತಿ ನೀಡಿರುವರು.

೫.೧. ಮರಾಟಿಗರ ಕೃಷಿ

ಈಗಾಗಲೇ ತಿಳಿಸಿದಂತೆ ಮರಾಟಿ ಮತ್ತು ಮರಾಟಿ ನಾಯ್ಕರು ಮಹಾರಾಷ್ಟ್ರ ಮತ್ತು ಗೋವಾದಿಂದ ವಲಸೆ ಬಂದಾಗ ಕುಂಬ್ರಿ (ಕುಮೇರಿ) ಬೇಸಾಯವನ್ನು ಕಾಡಂಚಿನಲ್ಲಿ ಪ್ರಾರಂಭ ಮಾಡಿದ್ದರಿಂದ ಅವರಿಗೆ ಕೃಷಿಯ ಬಗ್ಗೆ ಹೆಚ್ಚು ಪರಿಣತಿ ಪಡೆದಿದ್ದರೆಂದು ತಿಳಿಯುತ್ತದೆ. ಇವರು ಮೊದಲು ಒಂದು ಸ್ಥಳದಲ್ಲಿ ಗಿಡಗಳನ್ನು ಕಡಿದು ಬೇಸಾಯ ಮಾಡಿ ಕೆಲವು ವರ್ಷಗಳಕ ತನಕ ಅಲ್ಲಿದ್ದು, ನಂತರ ಆ ಸ್ಥಳವನ್ನು ಬಿಟ್ಟು ಬೇರೊಂದು ಸ್ಥಳಕ್ಕೆ ಹೋಗಿ ಮತ್ತೆ ಗಿಡ ಕಡಿದು ವ್ಯವಸಾಯ ಮಾಡುತ್ತಿದ್ದರು. ಇದಕ್ಕೆ 'ಸ್ಥಳಾಂತರ ಬೇಸಾಯ' ಕುಂಬ್ರಿ ಬೇಸಾಯ, ಕುಮೇರಿ ಕೃಷಿ, (Shifting cultivation) ಎಂಬ ಸಮಾನಾರ್ಥ ಪದಗಳಿಂದ ಕರೆಯುತ್ತಿದ್ದರು. ಈ ರೀತಿಯ ವ್ಯವಸಾಯವನ್ನು ಗುದ್ದಲಿ ಮತ್ತು ಮರದಿಂದ ಮಾಡಿದ ಸಲಕರಣೆಗಳನ್ನು ಉಪಯೋಗಿಸಿಕೊಂಡು ಮಾಡುತ್ತಿದ್ದರು. ಇವರು ಬೆಟ್ಟ-ಗುಡ್ಡಗಳ ತಪ್ಪಲಿನಲ್ಲಿ ಅಥವಾ ಝರಿ ಹರಿಯುವಂತಹ ಸ್ಥಳಗಳನ್ನು ಗುರುತಿಸಿಕೊಂಡು ನೈಸರ್ಗಿಕವಾಗಿ ನೀರಿಗೆ ಅನುಗುಣವಾಗಿ ವ್ಯವಸಾಯದ ಭೂಮಿಯನ್ನು ಗುರುತಿಸುವ ಪದ್ಧತಿ ಇವರಲ್ಲಿತ್ತು.

ಇದರಿಂದಾಗಿ ಮರಾಟಿಗರು ಭೂಮಿಯಲ್ಲಿ ಯಾವುದೇ ಬೆಳೆಯನ್ನು ನೆಟ್ಟರೂ ಆ ಬೆಳೆಗಳು ಸಲಿಸಾಗಿ ಬೆಳೆಯುತ್ತಿದ್ದವು. ಆದರೆ ನಿರೀಕ್ಷಿಸಿದಷ್ಟು ಆದಾಯ ಸಿಗುವುದು ಕಡಿಮೆಯಾಗಿತ್ತು.

೫.೨. ಮರಾಟಿಗರು ಬೆಳೆಯುವ ಬೆಳೆಗಳು

ಮರಾಟಿಗರು ಕುಮೇರಿ ಕೃಷಿಯಲ್ಲಿ ಹೆಚ್ಚು ತರಬೇತಿ ಪಡೆದಿದ್ದರೂ ಕೆಲವೊಂದು ಕಡೆಗಳಲ್ಲಿ ಭತ್ತ, ರಾಗಿ, ವೀಳ್ಯದೆಲೆ, ಗೋಡಂಬಿ, ಹಣ್ಣು-ಹಂಪಲು, ಗೆಡ್ಡೆ ಗೆಣಸು, ಸೊಪ್ಪು, ದಂಟಿನಸೊಪ್ಪು, ಮುಂತಾದ ಅನೇಕ ಬೆಳೆಗಳನ್ನು ಬೆಳೆಯುತ್ತಾರೆ. ಇತ್ತೀಚೆಗೆ ಮರಾಟಿ ಸಮುದಾಯದ ಮುಖ್ಯವಾದ ಆರ್ಥಿಕ ಬೆಳೆಯಾದ ಲಾವಂಚದ ಬೆಳೆಯು ಬಹಳ ಪ್ರಾಮುಖ್ಯತೆಯನ್ನು ಪಡೆದಿದೆ. ಆದ್ದರಿಂದ ಲಾವಂಚದ ಎಣ್ಣೆಯನ್ನು ಯಾವ ರೀತಿ ತಯಾರಿಸುತ್ತಾರೆ ಹಾಗೂ ಬೆಳೆಯನ್ನು ಯಾವ ರೀತಿ ಬೆಳೆಸುತ್ತಾರೆ ಎಂಬುದರ ಬಗ್ಗೆ ಗಮನ ಹರಿಸುವುದು ಇಲ್ಲಿ ಸೂಕ್ತ. ಮರಾಟಿ ಸಮುದಾಯದವರು ಲಾವಂಚದ ಎಣ್ಣೆಯನ್ನು ತಯಾರಿಸುವುದನ್ನು ನೋಡಿದರೆ ಯಾವುದೇ ಇತರೆ ಬುಡಕಟ್ಟು ಸಮುದಾಯದವರು ಈ ರೀತಿ ಎಣ್ಣೆಯನ್ನು ತಯಾರಿಸುವುದಿಲ್ಲ ಎಂದು ಹೇಳಿದರೆ ತಪ್ಪಾಗಲಾರದು.

ಉತ್ತರ ಕನ್ನಡದ ಮೇಘಾನೆ ಮತ್ತು ಉಡುಪಿ ಜಿಲ್ಲೆಯ ಕಾರ್ಕಳ ತಾಲೂಕಿನಲ್ಲಿ ಹೆಬ್ರಿ ಪರಿಸರದಲ್ಲಿರುವ ಮರಾಟಿಗರು ಲಾವಂಚದ ಎಣ್ಣೆ ತಯಾರಿಸುತ್ತಿರುವ ರೀತಿಯನ್ನು ಕ್ಷೇತ್ರಕಾರ್ಯ ಸಂದರ್ಭದಲ್ಲಿ ಕಂಡುಕೊಂಡಿರುವೆನು. ಈ ಎಣ್ಣೆಗೆ ಬೇಕಾದ ಲಾವಂಚವನ್ನು ಬೆಳೆಸುವುದರಿಂದ, ಮಾರಾಟದ ತನಕ ಮರಾಟಿಗರು ಮಧ್ಯವರ್ತಿಗಳಿಂದ ಶೋಷಣೆಗೆ ಒಳಗಾಗುತ್ತಿದ್ದಾರೆ. ಇದನ್ನು ತಪ್ಪಿಸುವ ಸಲುವಾಗಿ ಆ ಪ್ರದೇಶದ ಯುವಕರು ಮುತುವರ್ಜಿಯಿಂದ ಅವರೇ ಮಾರಾಟವನ್ನು ಮಾಡಲು ಪ್ರಾರಂಭಿಸಿದರು. ಆದ್ದರಿಂದ ಮರಾಟಿ ಸಮುದಾಯದ ಬದುಕನ್ನು ವೀಕ್ಷಿಸಿದಾಗ ಅವರಿಗೆ ಅರಿವೇ ಇಲ್ಲದಂತೆ ದೇಶಕ್ಕೆ ಸಾಮಾಜಿಕ ಸೇವೆಯನ್ನು ಸಲ್ಲಿಸುತ್ತಿದ್ದಾರೆ. ಆದರೆ ಸುಶಿಕ್ಷಿತರು, ಆಧುನೀಕರಣ ಹಾಗೂ ಎಲ್ಲಾ ಸೌಲಭ್ಯಗಳನ್ನು ಪಡೆದು ಬದುಕುವ ಜನರಿಗಿಂತ ದೇಶದ ಆದಿವಾಸಿಗಳು, ಅಲೆಮಾರಿಗಳು, ಅರೆ-ಅಲೆಮಾರಿ ಸಮುದಾಯದವರ ಬದುಕು ಶ್ರೇಷ್ಠವಾಗಿದೆ. ಮರಾಟಿ ಸಮುದಾಯದವರು ವ್ಯವಸಾಯಕ್ಕೆ ಸಾಮಾನ್ಯವಾಗಿ ಕೋಣಗಳನ್ನು ಬಳಸುತ್ತಾರೆ. ಭತ್ತದ ಸಸಿಗಳನ್ನು ನೆಡುವುದಕ್ಕಿಂತ ಮೊದಲು ಹೆಚ್ಚಾಗಿ ಹಟ್ಟಿ ಗೊಬ್ಬರ ಹಾಕುತ್ತಾರೆ. ನಂತರ ಸರ್ಕಾರಿ ಗೊಬ್ಬರವನ್ನು ಕೂಡ ಹಾಕುತ್ತಾರೆ. ಸಾಮಾನ್ಯವಾಗಿ ಭತ್ತವು ಒಣಗಿದ ಮೇಲೆ ಕಟಾವು ಮಾಡಿ ಸೂಡುಕಟ್ಟಿ ಮನೆಯ ಮುಂದಿರುವ ಕಣದ ಪಕ್ಕದಲ್ಲಿ ಕಾಳಿನ ಜೊತೆಯಲ್ಲಿ ಬಣವೆಯನ್ನು ಹಾಕುತ್ತಾರೆ. ವ್ಯವಸಾಯದ ಎಲ್ಲಾ ಕೆಲಸ ಮುಗಿದ ಮೇಲೆ ಕೋಣಗಳನ್ನು ಕಟ್ಟಿಕೊಂಡು ತುಳಿದು ಕಾಳುಗಳನ್ನು ಉದುರಿಸಿಕೊಳ್ಳುತ್ತಾರೆ. ಮರಾಟಿಗರು ಕಬ್ಬನ್ನು ಬೆಳೆಯುತ್ತಾರೆ ಮತ್ತು ಕಬ್ಬನ್ನು ಕಡಿದು ಸಾಧ್ಯವಾದಷ್ಟು ಬೆಟ್ಟದ ಕೆಳಗೆ ಮತ್ತು ಕಾಡಂಚಿನಿಂದ ಪೇಟೆಗೆ ತೆಗೆದುಕೊಂಡು ಹೋಗಿ ಮಾರಾಟ ಮಾಡುತ್ತಾರೆ. ಆದರೆ ಅಡಿಕೆ ಮತ್ತು ಲಾವಂಚವನ್ನು ಬೆಳೆದಂತೆ ಹೆಚ್ಚಿನ ಪ್ರಮಾಣದಲ್ಲಿ ಬೆಳೆಯುವುದಿಲ್ಲ. ಭತ್ತ ನಿತ್ಯದ ಊಟಕ್ಕೆ ಬೇಕಾಗುವ ಬೆಳೆಸುವುದನ್ನು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಗಮನಿಸಿದ್ದೇನೆ.

ಮರಾಟಿಗರು ಬೆಳೆಯುವ ಬೆಳೆಗಳಲ್ಲಿ ವಾಣಿಜ್ಯ ಬೆಳೆಯಾಗಿ ಅಡಿಕೆ ಮತ್ತು ಗೋಡಂಬಿ ಅಪತ್ಬಾಂಧವ ಬೆಳೆಗಳಾಗಿ ಕಂಡುಬರುತ್ತದೆ. ಈ ಬೆಳೆಗಳು ಸಮುದಾಯವನ್ನು ಉತ್ತಮ ಸ್ಥಿತಿಗೆ ತೆಗೆದುಕೊಂಡು

ಹೋಗುವುದಕ್ಕೆ ಸಹಾಯ ಮಾಡಿವೆ ಎಂದು ಹೇಳಬಹುದು. ಇದರಿಂದಾಗಿ ಅಡಿಕೆ, ಗೋಡಂಬಿ, ಲಾವಂಚ ಮುಂತಾದ ಬೆಳೆಗಳನ್ನು ಬೆಳೆಸಿ ಅವುಗಳನ್ನು ಸಂಗ್ರಹಿಸಿಕೊಂಡು ನಗರ ಪ್ರದೇಶಕ್ಕೆ ಹೋಗಿ ಮಾರಾಟ ಮಾಡಿ ಇವರು ಬದುಕನ್ನು ಸಾಗಿಸಿಕೊಳ್ಳುತ್ತಾರೆ. ಕೆಲವು ಬಾರಿ ಕುಮೇರಿ ಕೃಷಿಯಲ್ಲಿ ಬೆಳೆದ ವೀಳ್ಯದೆಲೆ, ತರಕಾರಿ, ಹಣ್ಣು-ಹಂಪಲುಗಳನ್ನು ತಮ್ಮ ಮನೆ ಬಳಕೆಗೆ ಉಪಯೋಗಿಸಿಕೊಂಡು ಉಳಿದದ್ದನ್ನು ಮಾರಾಟ ಮಾಡುದನ್ನು ಕ್ಷೇತ್ರಕಾರ್ಯ ಸಂದರ್ಭದಲ್ಲಿ ಗಮನಿಸಲಾಗಿದೆ.

೫.೩. ಮರಾಟಿಗರ ಕಸುಬುಗಳು

ಮರಾಟಿ ನಾಯ್ಕ ಮತ್ತು ಮರಾಟಿಗರ ಬದುಕು ಮತ್ತು ಅವರ ವೃತ್ತಿ ಪರಸ್ಪರ ಒಂದಕ್ಕೊಂದು ಸಂಬಂಧವನ್ನು ಹೊಂದಿದೆ. ವಲಸೆ ಬಂದ ಪ್ರಾರಂಭದಲ್ಲಿ ಮರಾಟಿಗರು ಗುಡ್ಡ, ಬೆಟ್ಟ, ಕಾಡಿನ, ಪರಿಸರಗಳಲ್ಲಿ ಜೀವಿಸುತ್ತಿದ್ದು, ಪ್ರಕೃತಿಯೊಂದಿಗೆ ಸಾಮರಸ್ಯ ಕಲ್ಪಿಸಿಕೊಂಡು ಅದನ್ನೇ ಜೀವನಾಧಾರವಾದ ಮೂಲವನ್ನಾಗಿಸಿಕೊಂಡಿದ್ದರು. ಕಾಡು ಪ್ರದೇಶಗಳಲ್ಲಿ ತಮ್ಮ ಬದುಕಿಗೆ ಅಗತ್ಯವಾದ ಎಲ್ಲಾ ವಸ್ತುಗಳು ದೊರಕುತ್ತಿದ್ದುದರಿಂದ ಅವರು ಮೊದಲು ಇಂತಹದ್ದೆ ನಿರ್ದಿಷ್ಟವಾದ ಕಸಬು ಎಂದು ಯಾವ ಕೆಲಸವನ್ನು ಮಾಡುತ್ತಿರಲಿಲ್ಲ. ಅರಣ್ಯದಲ್ಲಿ ದೊರಕುತ್ತಿರುವ ಕಾಡು ಉತ್ಪನ್ನಗಳಾದ ಜೇನು, ಸೀಗೆಕಾಯಿ, ಧೂಪದಕಾಯಿ, ಕಾಚುಹುಳಿ, ಅಂಟುವಾಳ, ಅರಗು (ಗೊಂಧು) ಕಣಲೆ, ಬಿದಿರಕ್ಕಿ ಮುಂತಾದವುಗಳನ್ನು ಸಂಗ್ರಹಿಸಿ ಮಾರಾಟ ಮಾಡುತ್ತಿದ್ದರು. ಕೆಲವೊಮ್ಮೆ ಮಧ್ಯವರ್ತಿಗಳಿಗೆ ಮಾರಾಟ ಮಾಡಿ ಬದುಕು ನಡೆಸುತ್ತಿದ್ದರು. ಮರಾಟಿಗರು ಪ್ರಾಣಿ ಬೇಟೆಯಾಡುವುದು, ಮೀನು ಹಿಡಿಯುವುದು, ಕುಮೇರಿ, ಸಾಗುವಳಿ, ನಾಟಿವೈದ್ಯ, ಬುಟ್ಟಿ ಹಣೆಯುವುದು, ತೆಂಗಿನಗರಿಗಳಿಂದ ಮಡಲು, ಗೊರಬೆ ಮತ್ತು ತಟ್ಟಿ ತಯಾರಿಕೆ, ಜಾನುವಾರು ಸಾಕಾಣಿಕೆ, ಮರದ ಪೀಠೋಪಕರಣ ತಯಾರಿಕೆ ಮುಂತಾದ ಕಸುಬುಗಳಲ್ಲಿ ತೊಡಗಿದರು. ಕೆಲವರು ಘಟ್ಟ ಪ್ರದೇಶವಾದ ಚಿಕ್ಕಮಗಳೂರು, ಕೊಡಗು ಮತ್ತು ಮಲೆನಾಡು ಪ್ರದೇಶಗಳಿಗೆ ಹೋಗಿ ಕೃಷಿ ಕೂಲಿ ಕಾರ್ಮಿಕರಾಗಿ ಸೇರಿದರು. ಅಲ್ಲದೆ ಅಲ್ಲಿನ ಕಾಡಿನಲ್ಲಿ ಪ್ರಕೃತಿದತ್ತವಾಗಿ ಸ್ವಾಭಾವಿಕವಾಗಿ ಬೆಳೆಯುತ್ತಿದ್ದ ಏಲಕ್ಕಿ, ಕರಿಮೆಣಸು ಮತ್ತು ಕಾಡು ಉತ್ಪನ್ನಗಳನ್ನು ಸಂಗ್ರಹಿಸಿ ಮಾರುಕಟ್ಟೆಗಳಿಗೆ ಮಾರಾಟ ಮಾಡಿ ಜೀವನ ಸಾಗಿಸುತ್ತಿದ್ದರು ಎಂಬುದಾಗಿ ತಿಳುವಳಿಕೆದಾರರು ತಿಳಿಸಿರುವರು.

ಇತ್ತೀಚಿನ ದಿನಗಳಲ್ಲಿ ಮರಾಟಿಗರ ಹೆಚ್ಚಿನ ಗಂಡಸರು ನಗರ ಪ್ರದೇಶಗಳಲ್ಲಿ ಹೆಂಚಿನ ಕಾರ್ಖಾನೆ, ಮನೆ ಕಟ್ಟುವ ಕೆಲಸ ಹಾಗೂ ಮರದ ಕಾರ್ಖಾನೆಗಳಿಗೆ ಕೂಲಿ ಕೆಲಸಕ್ಕೆ ಹೋಗುತ್ತಿದ್ದಾರೆ. ಬಹುಪಾಲು ಹೆಂಗಸರು ತಮ್ಮ ಮನೆಗಳಲ್ಲಿ ಬೀಡಿಕಟ್ಟುವುದನ್ನು ಪ್ರಾರಂಭಿಸಿದ್ದಾರೆ. ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಮರಾಟಿ ಸಮುದಾಯದ ಹಿರಿಯರು ವಲಸೆ ಬಂದ ಪ್ರಾರಂಭದಲ್ಲಿ ಯಾವುದೇ ಆಸ್ತಿ-ಪಾಸ್ತಿ ಇಲ್ಲದ ಅನೇಕ ಕುಟುಂಬಗಳಿಗೆ ಸಂಪಾದನೆಗೆ ಯಾವ ದಾರಿಯೂ ಇರಲಿಲ್ಲ. ಯಾವ ವೃತ್ತಿಗಳೂ ತಿಳಿದಿರಲಿಲ್ಲ. ಆ ಕ್ಷೇತ್ರಗಳಲ್ಲಿ ಕೌಶಲ್ಯಗಳೂ ಇಲ್ಲದಿರುವುದರಿಂದ ಯಾವ ವೃತ್ತಿಯನ್ನು ಮಾಡಬೇಕು. ಯಾವ ವೃತ್ತಿಯನ್ನು ಬಿಡಬೇಕು ಎಂಬ ಗೊಂದಲದಲ್ಲಿದ್ದರು. ತಮ್ಮ ಪಾರಂಪರಿಕ ಕೃಷಿಯನ್ನು ಕೈ ಬಿಡಲಾಗದೆ ಹೊಸ ವೃತ್ತಿಗೆ ಹೊಂದಿಕೊಳ್ಳಲಾಗದೆ ಒಂದು ರೀತಿಯ ವೃತ್ತಿ ಸಂಘರ್ಷಕ್ಕೆ ಸಿಲುಕಿಕೊಂಡಿದ್ದರು.

ಇಂದು ಆಧುನಿಕತೆ ನಾಗರಿಕತೆಯ ವಾತಾವರಣಕ್ಕೆ ಹೊಂದಿಕೊಂಡು ಪಾರಂಪರಿಕ ಕಸುಬನ್ನು ಮರೆಯದೇ ಹೊಸ ವೃತ್ತಿಗಳಿಗೆ ಒಲವನ್ನು ತೋರಿಸುತ್ತಾ ದಿನ ನಿತ್ಯದ ಬದುಕನ್ನು ಸಾಗಿಸುತ್ತಾ ಬಂದಿದ್ದಾರೆ. ಕ್ಷೇತ್ರಕಾರ್ಯ ಸಂದರ್ಭದಲ್ಲಿ ವೀಕ್ಷಿಸಿದಂತೆ ಈ ಎರಡೂ ಸಮುದಾಯದವರು ಕೆಲವೊಂದು

ಆಧುನಿಕ ವೃತ್ತಿಗಳೊಂದಿಗೆ ಕೃಷಿ ಸಂಬಂಧಿತ ಈ ಕೆಳಗಿನ ವೃತ್ತಿಯನ್ನು ಮಾಡುತ್ತಾ ಬಂದಿರುವುದನ್ನು ಗಮನಿಸಲಾಯಿತು.

ಕೈ-ತೋಟ: ಮರಾಟಿ ನಾಯ್ಕ ಮತ್ತು ಮರಾಟಿಗರು ತಮ್ಮ ಮನೆಗಳ ಸುತ್ತಮುತ್ತ ಹಾಗೂ ನೀರು ಹರಿದಾಡುವ ಸ್ಥಳಗಳಲ್ಲಿ ಕೈ-ತೋಟವನ್ನು ಮಾಡಿಕೊಂಡಿದ್ದಾರೆ. ಈ ತೋಟದಲ್ಲಿ ವಿವಿಧ ರೀತಿಯ ತರಕಾರಿಗಳನ್ನು ಬೆಳೆಸುವುದರ ಮೂಲಕ ತಮ್ಮ ಮೂಲ ಉದ್ಯೋಗ ಕುಮೇರಿ ಕೃಷಿಯನ್ನು ರೂಢಿಸಿಕೊಂಡು ಬಂದಿರುವುದನ್ನು ಗಮನಿಸಬಹುದು.

ಕೃಷಿ-ಕೂಲಿ: ಮರಾಟಿಗರಲ್ಲಿ ಕೆಲವರು ಭೂಮಿ ಇಲ್ಲದೆ ಈಗಲೂ ಬೇರೆಯವರ ಗದ್ದೆಗಳಲ್ಲಿ ಕೃಷಿ ಕೂಲಿ, ದಿನಗೂಲಿ ಕಾರ್ಮಿಕರಾಗಿ ಕೆಲಸಕ್ಕೆ ಹೋಗುವುದನ್ನು ಗಮನಿಸಲಾಗಿದೆ. ಇದರಿಂದಾಗಿ ನಾವು ತಿಳಿಯುವುದೇನೆಂದರೆ ಮರಾಟಿಗರೆಲ್ಲರಿಗೂ ಭೂಮಿ ಇಲ್ಲವೆಂದೂ ಇದರ ಪರಿಣಾಮದಿಂದಾಗಿ ಬೇರೆಯವರ ಹೊಲ ಗದ್ದೆಗಳಲ್ಲಿ ಕೃಷಿ ಕೂಲಿಯಾಳುಗಳಾಗಿ ದುಡಿಯುತ್ತಿರುವುದನ್ನು ಕಾಣಬಹುದು. ಕೃಷಿ ಕೂಲಿ ಕಾರ್ಮಿಕರಾಗಿ ದುಡಿಯುತ್ತಿರುವುದನ್ನು ಅಧ್ಯಯನದ ಸಮೀಕ್ಷೆಯಲ್ಲಿ ಕಂಡುಕೊಳ್ಳಲಾಗಿದೆ. ಗ್ರಾಮೀಣ ಪ್ರದೇಶಗಳಾದ ಕುಂದಾಪುರದ ಅಮಾವಾಸ್ಯೆ ಬೈಲು, ಶಂಕರನಾರಾಯಣ, ಜಡ್ಡಿನಗದ್ದೆ, ಗೋಳಿಹೊಳೆ, ಕಮಲಶಿಲೆ, ಹುಣ್ಸೆಮಕ್ಕಿ ಮುಂತಾದ ಕಡೆಗಳಲ್ಲಿ ಮರಾಟಿಗರು ಹಗಲು ದುಡಿದು ರಾತ್ರಿ ಕೂಡಾ ಭೂಮಾಲಕರ ಮನೆಗಳಲ್ಲಿ ಅಡಿಕೆ ಮತ್ತು ತೆಂಗಿನಕಾಯಿ ಸುಲಿದು ಹೆಚ್ಚಿಗೆ ಸಂಪಾದನೆ ಮಾಡುತ್ತಾ ಬಂದಿದ್ದಾರೆ.

ಪಶುಸಂಗೋಪನೆ: ಮರಾಟಿಗರು ಕೃಷಿಯನ್ನು ಅವಲಂಬಿಸಿಕೊಂಡು ಜೀವನ ಮಾಡುವುದರ ಜೊತೆಗೆ ಆರ್ಥಿಕವಾಗಿ ಪ್ರಬಲರಾಗಿರುವ ಮರಾಟಿಗರು ಮನೆಗಳಲ್ಲಿ ಹಸು ಮತ್ತು ಎಮ್ಮೆಗಳನ್ನು ಸಾಕಿರುವುದನ್ನು ಗಮನಿಸಿರುವೆನು. ಭೂಸುಧಾರಣೆ ಕಾಯ್ದೆಯಿಂದ ಕೆಲವೊಂದು ಮರಾಟಿ ನಾಯ್ಕರು ಮತ್ತು ಕಾರ್ಕಳ ತಾಲೂಕಿನ ಮರಾಟಿಗರಿಗೆ ಲಭಿಸಿರುವ ಜಮೀನಿನಲ್ಲಿ ಕೃಷಿ ಹಾಗೂ ಸಾಗುವಳಿಗೆ ಪೂರಕವಾಗಿರುವ ಪಶುಸಂಗೋಪನೆ ರೂಢಿಸಿಕೊಂಡು ಒಂದು ಉಪ-ಕಸುಬನ್ನಾಗಿ ಮಾಡಿಕೊಂಡು ಜೀವನವನ್ನು ಸಾಗಿಸುತ್ತಾ ಬಂದಿರುವುದನ್ನು ಕ್ಷೇತ್ರಕಾರ್ಯ ಸಂದರ್ಭದಲ್ಲಿ ಗಮನಿಸಲಾಗಿದೆ.

ಗೃಹ ಕೈಗಾರಿಕೆ: ಗೃಹ ಕೈಗಾರಿಕೆಯನ್ನು ಪ್ರಾಚೀನ ಕಾಲದಿಂದಲೂ ಪರಂಪಾರಾನುಗತವಾಗಿ ಕರಾವಳಿಯ ಹೆಚ್ಚಿನ ಬುಡಕಟ್ಟು ಸಮುದಾಯಗಳು ರೂಢಿಸಿಕೊಂಡು ಬಂದಿವೆ. ಉದಾ: ಗೊಲ್ಲರು, ಗೊಂಡರು, ಕೊರಗರು, ಕಮ್ಮಾರರು ಮುಂತಾದ ಸಮುದಾಯಗಳು ಗೃಹ ಕೈಗಾರಿಕೆಯನ್ನು ರೂಢಿಸಿಕೊಂಡು ಬಂದಂತೆ ಮರಾಟಿಗರು ಮತ್ತು ಮರಾಟಿ ನಾಯ್ಕರು ಸಹ ವಿವಿಧ ಬಗೆಯ ಕಲಾತ್ಮಕ ಕಸುಬುಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದಾರೆ. ಅವುಗಳೆಂದರೆ ಮುಖ್ಯವಾಗಿ ಮರಾಟಿಗರ ಜೀವನಕ್ಕೆ ಅವಶ್ಯಕತೆ ಇರುವಷ್ಟು ಮಾತ್ರ ಸೀಮಿತವಾಗಿವೆ. ಕಾಡಿನಲ್ಲಿ ಸಿಗುವ ಬಿದಿರು ಬೊಂಬು, ಬೆತ್ತಗಳನ್ನು ತಂದು ಅವುಗಳನ್ನು ಸೀಳಿ ಬೆತ್ತದ ಬುಟ್ಟಿ ಹಾಗೂ ಬೆತ್ತಗಳಿಂದ ಬಿದಿರಿನ ತಟ್ಟಿ, ಗೆರಸೆ, ಗೊರಬು, ತೊಟ್ಟಿಲು ತಯಾರಿಕೆ, ಖಣಜ ಮೀನು ಹಿಡಿಯುವ ವಿವಿಧ ಪರಿಕರಗಳು, ಬೀಸಣಿಕೆ, ಮುಂತಾದ ಗೃಹ ಬಳಕೆಯ ವಸ್ತುಗಳನ್ನು ಹೆಣೆದುಕೊಳ್ಳುತ್ತಾರೆ. ಮತ್ತು ಕೆಲವೊಂದು ಹುಲ್ಲಿನಿಂದ ಚಾಪೆಯನ್ನು ತಯಾರಿಸುತ್ತಾರೆ. ಈ ಕಸುಬುಗಳು ಕಲಾತ್ಮಕತೆ ಮತ್ತು ನಾಜಕೂತನದಿಂದ ಜನರನ್ನು ಆಕರ್ಷಿಸುವ ಸಾಮರ್ಥ್ಯ ಹೊಂದಿವೆ.

ಕೋಷ್ಟಕ: ೫.೧.

ತಿಳುವಳಿಕೆದಾರರ ಕುಟುಂಬ ಸದಸ್ಯರುಗಳ ವೃತ್ತಿ ಹಾಗೂ ಕಸುಬುಗಳ ವಿವರ

ಸಮುದಾಯದ ಹೆಸರು	ತಾಲೂಕು	ಕುಟುಂಬ ಸದಸ್ಯರುಗಳ ವೃತ್ತಿ/ಕಸುಬುಗಳ ವಿವರಗಳ ಹಂಚಿಕೆ																	
		ಕೂಲಿ	ಡ್ರೈವರ್/ ಗ್ಯಾರೇಜ್	ಗೇರುಬೀಜ ಕಾರ್ಖಾನೆ	ಸರಕಾರಿ ನೌಕರಿ	ಖಾಸಗಿ ಕಂಪೆನಿ	ಬೀಡಿ ಕಟ್ಟುವುದು	ಕೃಷಿ	ಗೃಹಿಣಿ/ ಗೃಹಕೃತ್ಯ	ಟೈಲರಿಂಗ್	ವ್ಯಾಪಾರ	ಶಿಕ್ಷಕ	[illegible]	ಇಂಜಿನಿಯರಿಂಗ್	ಬ್ಯಾಂಕಿಂಗ್	[illegible]	[illegible]	[illegible]	ಒಟ್ಟು
ಮರಾಟಿ ನಾಯ್ಕ	ಕುಂದಾಪುರ	೬೩	೧೦	೧೩	೧೦	೦೩	೦೧	೦೮	೨೨	೦೨	೦೪	೦೧	೦೧	-	-	-	೦೧	೦೧	೧೪೦
	ಉಡುಪಿ	೬೩	೦೮	೦೭	೦೨	೨೨	೦೨	೦೯	೩೪	೦೨	೦೩	೦೬	೦೦	೦೨	೦೫	೦೧	-	-	೧೬೬
	ಕಾರ್ಕಳ	೪೯	೧೧	೨೦	೦೪	೨೦	೦೩	೧೪	೩೩	೦೩	೧೦	೦೧	೦೦	೦೦	೦೦	೦೨	-	-	೧೭೦
	ಒಟ್ಟು	೧೭೫	೨೯	೪೦	೧೬	೪೫	೦೬	೩೧	೮೯	೦೭	೧೭	೦೮	೦೧	೦೨	೦೫	೦೩	೦೧	೦೧	೪೭೬
	ಶೇಕಡವಾರು	೩೬.೭೭	೦೬.೦೯	೮.೪೦	೩.೩೬	೯.೪೫	೧.೨೬	೬.೫೧	೧೮.೭೦	೧.೪೭	೩.೫೭	೧.೬೮	೦.೨೧	೦.೪೨	೧.೦೫	೦.೬೩	೦.೨೧	೦.೨೧	೧೦೦
ಮರಾಟಿ	ಕಾರ್ಕಳ	೧೦೨	೩೦	೧೬	೧೨	೭೮	೨೦	೧೧	೧೩೬	೦೪	೧೪	೦೬	೦೧	-	೦೫	-	೦೧	೦೧	೪೩೭
	ಶೇಕಡವಾರು	೨೩.೩೪	೦೬.೮೬	೦೩.೬೬	೦೨.೭೫	೧೭.೮೫	೦೪.೫೮	೦೨.೫೨	೩೧.೧೨	೦.೯೨	೦೩.೨೦	೦೧.೩೭	೦.೨೩	-	೦೧.೧೪	-	೦.೨೩	೦.೨೩	೧೦೦

ಆಧಾರ: ಮರಾಟಿ ನಾಯ್ಕ ೧೫೦ ಕುಟುಂಬಗಳು, ಮರಾಟಿ ೧೫೦ ಕುಟುಂಬಗಳ ಸಮೀಕ್ಷೆ. ಪ್ರಾಥಮಿಕ ಮಾಹಿತಿಗಳ ಆಧಾರದಲ್ಲಿ ರಚಿತವಾದ ಕೋಷ್ಟಕ

ಮರಾಟಿ ನಾಯ್ಕ

ಕೋಸ್ಕ ಸಂಖ್ಯೆ ೫.೧ರ ಸಮೀಕ್ಷೆಯ ಪ್ರಕಾರ ಮರಾಟಿ ನಾಯ್ಕ ಸಮುದಾಯಕ್ಕೆ ಸೇರಿದ ಒಟ್ಟು ೪೭೬ ಜನರಲ್ಲಿ ಕುಂದಾಪುರ ತಾಲೂಕಿನಲ್ಲಿಯೇ ಕೂಲಿ ಮಾಡುವವರು ೬೩ ಜನ, ಡ್ರೈವರ್/ಗ್ಯಾರೇಜ್ ಕೆಲಸಗಾರರು ೧೦ ಜನ, ಗೇರುಬೀಜ ಕಾರ್ಖಾನೆಯಲ್ಲಿ ೧೩ ಜನ, ಸರಕಾರಿ ಗುಮಾಸ್ತರಾಗಿ ೧೮ ಜನ, ಖಾಸಗಿ ಕಂಪನಿಯಲ್ಲಿ ೧೩ ಜನ, ಬೀಡಿ ಕಾರ್ಮಿಕರು ಒಬ್ಬಕೃಷಿಯಲ್ಲಿ — ಗೃಹಿಣಿ / ಗೃಹಸ್ಥ ೨೧ ಜನ, ಟೈಲರಿಂಗ್ ೨ ಜನ, ವ್ಯಾಪಾರ ಒಬ್ಬರು, ಶಿಕ್ಷಕ ಒಬ್ಬ, ಯಕ್ಷಗಾನ ಒಬ್ಬರು ಒಟ್ಟು ೧೩೪ ಜನ ಸಮೀಕ್ಷೆಯ ಪ್ರಕಾರ ವಿವಿಧ ವೃತ್ತಿಗಳನ್ನು ಅನುಸರಿಸುತ್ತಿರುವುದು ಕಂಡುಬರುತ್ತದೆ.

ಉಡುಪಿ ತಾಲೂಕು: ೬೩ ಜನ ಕೂಲಿ, ೧೮ ಜನ ಡ್ರೈವರ್ / ಗ್ಯಾರೇಜ್, ೭ ಜನ ಗೇರು ಬೀಜ, ೨ ಜನ ಸರ್ಕಾರಿ ಗುಮಾಸ್ತ, ೨೨ ಜನ ಖಾಸಗಿ ಕಂಪನಿ, ೦೨ ಬೀಡಿ ಕಟ್ಟುವರು, ೭ ಜನ ಕೃಷಿ, ೩೪ ಜನ ಗೃಹಿಣಿ/ಗೃಹಸ್ಥ, ೨ ಜನ ಟೈಲರಿಂಗ್, ೩ ಜನ ವ್ಯಾಪಾರಿ, ೬ ಜನ ಶಿಕ್ಷಕರು ಒಬ್ಬರು ಯಕ್ಷಗಾನ, ೨ ಜನ ವೈದ್ಯಕೀಯ, ೫ ಜನ ಬ್ಯಾಂಕಿನಲ್ಲಿ ಒಟ್ಟು ೧೬೪ ಜನ ಸಮೀಕ್ಷೆ ಪ್ರಕಾರ ವಿವಿಧ ವೃತ್ತಿಗಳನ್ನು ಅನುಸರಿಸುತ್ತಿರುವುದು ಕಂಡುಬರುತ್ತದೆ.

ಕಾರ್ಕಳ ತಾಲೂಕು: ೪೯ ಜನ ಕೂಲಿ, ೧೧ ಜನ ಡ್ರೈವರ್–ಗ್ಯಾರೇಜ್, ೨೦ ಜನ ಗೇರುಬೀಜ ಕಾರ್ಖಾನೆ, ೪ ಜನ ಸರಕಾರಿ ಗುಮಾಸ್ತ, ೨೦ ಜನ ಖಾಸಗಿ ಕಂಪೆನಿ, ೩ ಜನ ಬೀಡಿ ಕಟ್ಟುವುದು, ೮ ಜನ ಕೃಷಿ, ೩೦ ಜನ ಗೃಹಿಣಿ–ಗೃಹಸ್ಥ, ೩ ಜನ ಟೈಲರಿಂಗ್, ೧೦ ಜನ ವ್ಯಾಪಾರ, ಒಬ್ಬರು ಶಿಕ್ಷಕರು, ಒಬ್ಬರು ಯಕ್ಷಗಾನ, ೩ ಜನ ವೈದ್ಯಕೀಯ, ೩ ಜನ ಬ್ಯಾಂಕಿಂಗ್, ೩ ಜನ ನಿವೃತ್ತರು, ಒಟ್ಟು ೧೭೩ ಜನ ಸಮೀಕ್ಷೆ ಪ್ರಕಾರ ಇರುತ್ತಾರೆ. ಇದರಲ್ಲಿ ಶೇಕಡವಾರು ಹೇಳುದಾದರೆ ೩೬.೯೨ ಕೂಲಿ, ೬.೨೨% ಡ್ರೈವರ್–ಗ್ಯಾರೇಜ್, ೮.೪೪% ಗೇರುಬೀಜ ಕಾರ್ಖಾನೆ, ೫.೩೦% ಸರಕಾರಿ ಗುಮಾಸ್ತ, ೪.೧೮% ಖಾಸಗಿ ಕಂಪೆನಿ, ೯.೧೭% ಬೀಡಿ ಕಟ್ಟುವುದು, ೬.೫೪% ಕೃಷಿ ೧೦.೨೦% ಗೃಹಿಣಿ–ಗೃಹಸ್ತ, ೧.೪೦% ಟೈಲರಿಂಗ್, ೩.೩೦% ವ್ಯಾಪಾರ, ೧.೩೩% ಶಿಕ್ಷಕ, ೨ ಯಕ್ಷಗಾನ, ೨ ವೈದ್ಯಕೀಯ/ಪಿ.ಎಚ್.ಡಿ., ೨ ಮತ್ತು ನಿವೃತ್ತ ಆಗಿರುವವರು ಕಂಡು ಬರುತ್ತಾರೆ.

ಕಾರ್ಕಳದಲ್ಲಿ ಮರಾಟಿ: ೧೦೨ ಜನ ಕೂಲಿ, ೩೦ ಜನ ಡ್ರೈವರ್–ಗ್ಯಾರೇಜ್, ೧೬ ಜನ ಗೇರುಬೀಜ, ೧೨ ಜನ ಸರಕಾರಿ ಗುಮಾಸ್ತ, ೬೪ ಜನ ಖಾಸಗಿ ಕಂಪೆನಿ, ೨೦ ಜನ ಬೀಡಿ ಕಟ್ಟುವುದು, ೧೪ ಜನ ಕೃಷಿ, ೧೩೬ ಜನ ಗೃಹಿಣಿ–ಗೃಹಸ್ಥ, ೪ ಜನ ಟೈಲರಿಂಗ್, ೧೧ ಜನ ವ್ಯಾಪಾರ, ೬ ಜನ ಶಿಕ್ಷಕರು, ಒಬ್ಬರು ಯಕ್ಷಗಾನ, ಒಬ್ಬರು ಬ್ಯಾಂಕಿಂಗ್, ಒಬ್ಬರು ಪಿ.ಎಚ್.ಡಿ., ಒಬ್ಬರು ನಿವೃತ್ತರು ಒಟ್ಟು ೪೩೯ ಜನ ಸಮೀಕ್ಷೆಯ ವಿವಿಧ ವೃತ್ತಿಗಳನ್ನು ಅನುಸರಿಸುತ್ತಿರುವುದು ಕಂಡು ಬರುತ್ತದೆ.

• ಉಡುಪಿ ಜಿಲ್ಲೆಯ ಮರಾಟಿ ನಾಯ್ಕ ಮತ್ತು ಮರಾಟಿ ಸಮುದಾಯಗಳ ಒಟ್ಟು ೩೦೦ ಕುಟುಂಬಗಳ ಸದಸ್ಯರ ವೃತ್ತಿಗಳನ್ನು ತೌಲನಿಕವಾಗಿ ನೋಡಿದಾಗ ಹೆಚ್ಚಿನ ಕುಟುಂಬಗಳು ಕೂಲಿ ಕೆಲಸವನ್ನು ಮಾಡುವುದು ಕಂಡು ಬಂದರೆ ಅದರಲ್ಲೂ ಗೃಹಣಿ ಮತ್ತು ಗೃಹಸ್ಥರು ಕೆಲವರಿದ್ದಾರೆ. ಕೆಲವರು

ಗೇರು ಬೀಜ ಫ್ಯಾಕ್ಟರಿ ಮತ್ತು ಸರಕಾರಿ ಗುಮಾಸ್ತರಾಗಿ ಕೆಲಸ ಮಾಡುತ್ತಿದ್ದರೆ ಕಡಿಮೆ ಪ್ರಮಾಣದ ಕುಟುಂಬಗಳು ಬೀಡಿ ಕಟ್ಟುವುದು ಮತ್ತು ವ್ಯಾಪಾರ ಹಾಗೂ ಶಿಕ್ಷಕರ ಕೆಲಸ ನಿರ್ವಹಿಸುತ್ತಿರುವುದು ಕಂಡುಬರುತ್ತದೆ. ಬ್ಯಾಂಕಿಂಗ್ ಹಾಗೂ ವೃತ್ತಿಪರ ಪ್ಯಾರಾ ಮೆಡಿಕಲ್ ಹಾಗೂ ಪಿಎಚ್.ಡಿ. ಅಧ್ಯಯನ ಮಾಡುವವರು ತುಂಬಾ ಕಡಿಮೆ ಪ್ರಮಾಣದಲ್ಲಿ ಕಾಣಬಹುದು. ನಿವೃತ್ತರ ಸಂಖ್ಯೆ ತುಂಬಾ ಕಡಿಮೆ ಇದೆ. ಟೈಲರಿಂಗ್, ವ್ಯಾಪಾರ ಮತ್ತು ಖಾಸಗಿ ಕಂಪೆನಿಗಳಲ್ಲಿ ವೃತ್ತಿ ಮಾಡುತ್ತಿರುವವರು ತುಂಬಾ ಕಡಿಮೆ ಪ್ರಮಾಣದಲ್ಲಿದ್ದಾರೆ. ಇದು ಎರಡು ಸಮುದಾಯಗಳಲ್ಲಿ ಒಂದೇ ರೀತಿಯಲ್ಲಿರುವುದನ್ನು ಕಾಣಬಹುದು.

ಕರಾವಳಿ ಪ್ರದೇಶದಲ್ಲಿರುವ ಹೆಚ್ಚಿನ ಸಮುದಾಯಗಳು ಒಂದಲ್ಲ ಒಂದು ರೀತಿಯಲ್ಲಿ ತನ್ನ ಮೂಲವೃತ್ತಿಯಿಂದ ರೂಪಾಂತರಗೊಳ್ಳುತ್ತಿರುವುದನ್ನು ಕಾಣುತ್ತೇವೆ. ಈ ಹಿನ್ನೆಲೆಯಲ್ಲಿ ಅಧ್ಯಯನಕ್ಕೆ ಒಳಪಟ್ಟ ಮರಾಟಿ ಮತ್ತು ಮರಾಟಿ ನಾಯ್ಕ ಸಮುದಾಯ ತನ್ನ ಮೂಲ ವೃತ್ತಿಯಾದ ಕುಮೇರಿ ಕೃಷಿ, ಬೇಟೆಯಾಡುವುದು, ಮೀನು ಹಿಡಿಯುವುದು ಮುಂತಾದ ಕಸುಬುಗಳನ್ನು ಕ್ಷೀಣಗತಿಯಲ್ಲಿ ಮುಂದುವರೆಸಿಕೊಂಡು ಆಧುನಿಕ ವ್ಯವಸ್ಥೆಗೆ ಹೊಂದಿಕೊಂಡು ಕೃಷಿಯಲ್ಲಿ ಸಂಪ್ರದಾಯದ ಸಾಧನಗಳ ಜೊತೆಗೆ ಕೆಲವು ಕಬ್ಬಿಣದಿಂದ ಮಾಡಿದ ಸಾಧನಗಳನ್ನು ಬಳಸಿಕೊಂಡು ಕೃಷಿ ಮಾಡುತ್ತಿರುವುದು ಕಂಡು ಬರುತ್ತದೆ. ಅಲ್ಲದೆ ಕೃಷಿಗೆ ಆಧುನಿಕ ಗೊಬ್ಬರವನ್ನು ಉಪಯೋಗಿಸುವುದು ಜೊತೆಗೆ ಹೊಸ ರೀತಿಯ ವೃತ್ತಿಗಳನ್ನು ಬಯಸುತ್ತಾ ಇದ್ದಾರೆ ಎಂಬುದಾಗಿ ತಿಳಿದು ಬರುತ್ತದೆ.

೫.೪. ಮರಾಟಿಗರ ಮನೆಯ ಸ್ವರೂಪ ಮತ್ತು ಒಡೆತನ

ಮಾನವನ ಮೂಲಭೂತ ಬಯಕೆಯಾಗಿರುವ ಆಹಾರ, ರಕ್ಷಣೆ ಎಷ್ಟು ಮುಖ್ಯವೋ ಅಷ್ಟೇ ವಸತಿಯು ಕೂಡ. ವಸತಿಯನ್ನು ತಮ್ಮ ಅಗತ್ಯ ಮತ್ತು ಅವಶ್ಯಕತೆಗಳಿಗನುಗುಣವಾಗಿ ನಿರ್ಮಾಣ ಮಾಡಿಕೊಂಡಿರುತ್ತಾರೆ ಅಥವಾ ಬಾಡಿಗೆ ಭೋಗ್ಯಕ್ಕೆ ಪಡೆದುಕೊಂಡಿರುವರು ಕಂಡು ಬಂದಿದ್ದಾರೆ. ಅನೇಕರಿಗೆ ತಮ್ಮ ಬಡತನದಿಂದಾಗಿ ಅದನ್ನು ಕೂಡ ಪಡೆದುಕೊಳ್ಳಲು ಸಾಧ್ಯವಾಗುತ್ತಿಲ್ಲ. ರಾಷ್ಟ್ರದ ಅಥವಾ ರಾಜ್ಯದ ಪ್ರಜೆಗೆ ದೈಹಿಕ ಮತ್ತು ಮಾನಸಿಕ ಆರೋಗ್ಯವನ್ನು ಕಾಪಾಡುವಂತಹ ವಸತಿಯು ಇಲ್ಲದಿದ್ದಾಗ ಅದನ್ನು ಒದಗಿಸುವುದು ಸಂಬಂಧಪಟ್ಟ ಸರ್ಕಾರದ ಜವಾಬ್ದಾರಿಯೂ ಆಗಿರುತ್ತದೆ.

ಕೋಷ್ಟಕ: ೫.೨

ತಿಳುವಳಿಕೆದಾರರ ವಾಸಿಸುತ್ತಿರುವ ಮನೆಯ ಸ್ವರೂಪ ಮತ್ತು ಒಡೆತನದ ವಿವರಗಳು

ಸಮುದಾಯದ ಹೆಸರು	ತಾಲೂಕು	ಮನೆಯ ಸ್ವರೂಪ						ಮನೆಯ ಒಡೆತನ			
		ಆರ್.ಸಿ.ಸಿ.	ಹಂಚು	RCC+ ಶೀಟ್ ಶೀಟ್	ಹಂಚು & ಸಿಮೆಂಟ್	ಒಟ್ಟು	ಸ್ವಂತದು	ಬಾಡಿಗೆ (ಸರಕಾರಿ ಸೇರಿ)	ಭೋಗ್ಯ	ಸಂಬಂಧಿಕರು	ಒಟ್ಟು
ಮರಾಟ ನಾಯ್ಕ	ಕುಂದಾಪುರ	೦೫	೨೯	–	೦೬	೫೦	೫೦	–	–	–	೫೦
	ಉಡುಪಿ	೧೦	೩೨	೦೫	೦೩	೫೦	೪೮	೦೨	–	–	೫೦
	ಕಾರ್ಕಳ	೦೬	೩೬	೦೮	–	೫೦	೪೯	೦೧	–	–	೫೦
	ಒಟ್ಟು	೨೧	೧೦೭	೧೩	೦೯	೧೫೦	೧೪೭	೦೩	–	–	೧೫೦
	ಶೇಕಡವಾರು	೧೪.೦೦	೭೧.೩೩	೦೮.೬೭	೦೬.೦೦	೧೦೦	೯೮.೦೦	೦೨.೦೦	–	–	೧೦೦.೦೦
ಮರಾಟ	ಕಾರ್ಕಳ ತಾಲೂಕು										
	ಒಟ್ಟು	೨೨	೮೭	೨೭	೧೪	೧೫೦	೧೪೮	೦೨	–	–	೧೫೦
	ಶೇಕಡವಾರು	೧೪.೬೭	೫೮.೦೦	೧೮.೦೦	೯.೩೩	೧೦೦.	೯೮.೬೭	೦೧.೩೩	–	–	೧೦೦.೦೦

ಕೋಷ್ಟಕ ೫.೨ ರಲ್ಲಿ ತಿಳುವಳಿಕೆದಾರರು ವಾಸಿಸುತ್ತಿರುವ ಮನೆಯ ಸ್ವರೂಪ ಮತ್ತು ಒಡೆತನದ ವಿವರಗಳನ್ನು ತೋರಿಸಲಾಗಿದೆ.

ಕುಂದಾಪುರ, ಉಡುಪಿ, ಕಾರ್ಕಳ ತಾಲೂಕುಗಳ ವ್ಯಾಪ್ತಿಯಲ್ಲಿ ಬರುವ ೧೫೦ ಮರಾಟಿ ನಾಯ್ಕ ಕುಟುಂಬದವರನ್ನು ಸಮೀಕ್ಷೆಗೊಳಪಡಿಸಿದಾಗ ೨೧(೧೪%) ರಷ್ಟು ಕುಟುಂಬಗಳು ಆರ್.ಸಿ.ಸಿ., ೧೦೭(೭೧.೩೩%) ರಷ್ಟು ಕುಟುಂಬಗಳು ಹೆಂಚಿನ ಮತ್ತು ೧೩(೮.೬೭%) ರಷ್ಟು ಕುಟುಂಬಗಳು ಆರ್‌ಸಿಸಿ+ಶೀಟ್ ಮನೆಗಳನ್ನು ಹೊಂದಿದರೆ ಹೆಂಚು ಮತ್ತು ಸಿಮೆಂಟ್ ಶೀಟ್‌ನ ಮನೆಗಳನ್ನು ೦೯ (೬%) ರಷ್ಟು ಕುಟುಂಬಗಳು ಹೊಂದಿರುವುದು ಕಂಡುಬಂದಿದೆ.

ಈ ಮನೆಗಳ ಒಡೆತನವನ್ನು ಸೂಕ್ಷ್ಮವಾಗಿ ಅವಲೋಕಿಸಿದಾಗ ಸ್ವಂತ (ಸರಕಾರಿ ಸೇರಿ) ಒಡೆತನವನ್ನು ೧೪೭ (೯೮.೮೦%) ರಷ್ಟು ಕುಟುಂಬಗಳು ಹೊಂದಿದ್ದರೆ, ಬಾಡಿಗೆ ಸ್ವರೂಪದ ಒಡೆತನವನ್ನು ಇನ್ನುಳಿದ ೩(೨%) ರಷ್ಟು ಕುಟುಂಬಗಳಲ್ಲಿ ನೋಡಬಹುದಾಗಿದೆ. ಅದರಂತೆ ಭೋಗ್ಯಕ್ಕೆ ಮತ್ತು ಸಂಬಂಧಿಕರ ಒಡೆತನದ ಮನೆಗಳು ಇಲ್ಲವೆಂಬುದು ಕಂಡುಬಂದಿದೆ.

ಮನೆಯ ಸ್ವರೂಪ ಮತ್ತು ಒಡೆತನದ ಸಮೀಕ್ಷೆಯಲ್ಲಿ ಕಾರ್ಕಳ, ಮುಲ್ಕಿ ಹೋಬಳಿಯ ವ್ಯಾಪ್ತಿಯಲ್ಲಿ ಬರುವ ೧೫೦ ಮರಾಟಿ ಕುಟುಂಬಗಳನ್ನು ಆರ್‌ಸಿಸಿ ೨೨ (೧೪.೬೭%)ರಷ್ಟು, ೮೭ (೫೮%) ಕುಟುಂಬಗಳು ಹಂಚಿನ, ೨೭(೧೮%)ರಷ್ಟು ಕುಟುಂಬಗಳು ಆರ್‌ಸಿಸಿ + ಶೀಟ್‌ನ ಮತ್ತು ೧೪(೯%) ರಷ್ಟು ಕುಟುಂಬಗಳು ಹೆಂಚು ಮತ್ತು ಸಿಮೆಂಟ್ ಶೀಟ್‌ನ ಮನೆಗಳನ್ನು ಹೊಂದಿರುವುದು ಕಂಡುಬಂದಿದೆ.

ಈ ಮನೆಗಳ ಒಡೆತನಕ್ಕೆ ಸಂಬಂಧಿಸಿದಂತೆ ಅಧ್ಯಯನ ಮಾಡಿದಾಗ ಸ್ವಂತ (ಸರಕಾರಿ ಸೇರಿ) ಒಡೆತನದ ಸ್ವರೂಪ ೧೪೮ (೯೮.೬೭%) ರಷ್ಟು ಕುಟುಂಬಗಳಲ್ಲಿ ಕಂಡರೆ ೨(೧.೩೩%) ರಷ್ಟು ಕುಟುಂಬಗಳು ಬಾಡಿಗೆ ಸ್ವರೂಪದ ಒಡೆತನ ಇರುವುದು ಕಂಡು ಬಂದಿದೆ. ಅದರಂತೆ ಭೋಗ್ಯಕ್ಕೆ ಮತ್ತು ಸಂಬಂಧಿಕರ ಒಡೆತನದ ಮನೆಗಳು ಇಲ್ಲದಿರುವುದು ಕಾಣಬಹುದಾಗಿದೆ.

• ಉಡುಪಿ ಜಿಲ್ಲೆಯ ಮರಾಟಿ ನಾಯ್ಕ ಮತ್ತು ಮರಾಟಿ ಸಮುದಾಯಗಳ ಒಟ್ಟು ೩೦೦ ಕುಟುಂಬಗಳು ವಾಸಿಸುತ್ತಿರುವ ಮನೆಯ ಸ್ವರೂಪ ಮತ್ತು ಒಡೆತನದ ವಿವರಗಳನ್ನು ಹೋಲಿಕೆ ಮಾಡಿದಾಗ ಮರಾಟಿ ನಾಯ್ಕ ಮತ್ತು ಮರಾಟಿಗರಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಹೆಂಚಿನ ಮನೆಯಲ್ಲಿ ವಾಸ ಮಾಡುವುದು ತಿಳಿದು ಬಂದರೆ ಆರ್‌ಸಿಸಿ ಮನೆಯಲ್ಲಿ ಕೆಲವರು ಮಾತ್ರ ವಾಸ ಮಾಡುತ್ತಿದ್ದಾರೆ. ಉಳಿದ ಕೆಲವರ ಹೆಂಚು ಮತ್ತು ಸಿಮೆಂಟ್ ಶೀಟಿನ ಮನೆಯಲ್ಲಿ ವಾಸ ಮಾಡುತ್ತಿರುವುದು ತಿಳಿದು ಬರುತ್ತದೆ. ಇದು ಎರಡು ಸಮುದಾಯಗಳಲ್ಲಿ ಒಂದೇ ರೀತಿಯಲ್ಲಿರುವುದನ್ನು ಕಾಣಬಹುದು.

ಕೋಷ್ಟಕ: ೫.೩

ತಿಳುವಳಿಕೆದಾರರು ಹೊಂದಿರುವ ಜಮೀನು ಮತ್ತು ನಿವೇಶನದ ವಿವರಗಳು

ಸಮುದಾಯದ ಹೆಸರು	ತಾಲೂಕು	ನಿವೇಶನ ಜಮೀನು ಹೊಂದಿರುವರೇ			ನಿವೇಶನ/ಜಮೀನು ಪಡೆದಿರುವ ವಿವರಗಳು				
		ಹೌದು	ಇಲ್ಲ	ಒಟ್ಟು	ಸ್ವಯಾರ್ಜಿತ	ಪಿತ್ರಾರ್ಜಿತ	ಸರಕಾರಿ ಯೋಜನೆಗಳಿಂದ	ಬಾಡಿಗೆ ವಾಸ್ತವ್ಯ ಮನೆಯಲ್ಲಿ	ಒಟ್ಟು
ಮರಾಟ ನಾಯ್ಕ	ಕುಂದಾಪುರ	೫೦	೦೦	೫೦	೦೦	೨೪	೨೬	೦೦	೫೦
	ಉಡುಪಿ	೪೮	೦೨	೫೦	೦೨	೧೫	೩೧	೦೨	೫೦
	ಕಾರ್ಕಳ	೪೯	೦೧	೫೦	೦೧	೩೨	೧೬	೦೧	೫೦
	ಒಟ್ಟು	೧೪೭	೦೩	೧೫೦	೦೩	೭೧	೭೩	೦೩	೧೫೦
	ಶೇಕಡವಾರು	೯೮.೦೦	೨.೦೦	೧೦೦	೦೨.೦೦	೪೭.೩೩	೪೮.೬೭	೦೨.೦೦	೯೯.೯೯
ಮರಾಟ	ಕಾರ್ಕಳ ಹೋಬಳಿ								
	ಒಟ್ಟು	೧೪೮	೦೨	೧೫೦	೩೦	೮೭	೩೧	೦೨	೧೫೦
	ಶೇಕಡವಾರು	೯೮.೬೭	೦೧.೩೩	೧೦೦.	೨೦.೦೦	೫೮.೦೦	೨೦.೬೭	೦೧.೩೩	೧೦೦

ಕೋಷ್ಟಕ ಸಂಖ್ಯೆ ೫.೩ರಲ್ಲಿ ಸಮೀಕ್ಷೆಗೊಳಪಡಿಸಿದ ತಿಳುವಳಿಕೆದಾರರು ಹೊಂದಿರುವ ಜಮೀನು ಹಾಗೂ ನಿವೇಶನದ ವಿವರಗಳನ್ನು ನೀಡಲಾಗಿದೆ. ಈ ವಿಷಯಕ್ಕೆ ಸಂಬಂಧಿಸಿದಂತೆ ಕುಂದಾಪುರ, ಉಡುಪಿ, ಕಾರ್ಕಳ ತಾಲೂಕುಗಳ ವ್ಯಾಪ್ತಿಯಲ್ಲಿ ಬರುವ ೧೫೦ ಮರಾಟಿ ನಾಯ್ಕ ಸಮುದಾಯದ ಕುಟುಂಬಗಳನ್ನು ಸಮೀಕ್ಷೆಗೊಳಪಡಿಸಿದಾಗ ನಿವೇಶನ ಮತ್ತು ಜಮೀನು ಹೊಂದಿರುವ ೧೪೭ (೯೮%) ರಷ್ಟು ಕುಟುಂಬಗಳು ಕಂಡುಬಂದರೆ, ೩(೨%) ರಷ್ಟು ಕುಟುಂಬಗಳು ನಿವೇಶನ ಮತ್ತು ಜಮೀನು ಹೊಂದಿಲ್ಲ ಎಂಬುದನ್ನು ಕಾಣಬಹುದಾಗಿದೆ. ಈ ಸಮುದಾಯದ ೧೪೭ ಜಮೀನು ಮತ್ತು ನಿವೇಶನ ಹೊಂದಿರುವವರಲ್ಲಿ ಪಡೆದಿರುವ ರೀತಿ ಕೇಳಿದಾಗ ಸ್ವಯಾರ್ಜಿತದಿಂದ ೦೩ (೨%) ರಷ್ಟು ಕುಟುಂಬ ನಿವೇಶನ, ಜಮೀನು ಪಡೆದರೆ, ಪಿರ್ತಾಜಿತ ರೀತಿಯಲ್ಲಿ ೭೧(೪೭.೩೩%) ರಷ್ಟು ಕುಟುಂಬಗಳು ನಿವೇಶನ ಮತ್ತು ಜಮೀನು ಪಡೆದಿರುವುದು ಕಂಡುಬಂದಿದೆ. ಸರಕಾರಿ ಯೋಜನೆಗಳಿಂದ ೭೩ (೪೮.೬೭%) ರಷ್ಟು ಕುಟುಂಬಗಳು ಜಮೀನು ಮತ್ತು ನಿವೇಶನ ಪಡೆದಿವೆ ಎಂಬುದು ಕಂಡುಬಂದಿದೆ. ೧೫೦ ಕುಟುಂಬಗಳಲ್ಲಿ ೩ (೨%) ರಷ್ಟು ಕುಟುಂಬಗಳು ಜಮೀನು ಮತ್ತು ನಿವೇಶನ ಇಲ್ಲವೆಂಬುದರ ಬಗ್ಗೆ ಅಧ್ಯಯನ ಮಾಡಿದಾಗ ಆ ಕುಟುಂಬಗಳು ಬಾಡಿಗೆ ಮನೆಯಲ್ಲಿ ವಾಸವಿರುವುದನ್ನು ಗಮನಿಸಬಹುದಾಗಿದೆ.

ಜಮೀನು ಮತ್ತು ನಿವೇಶನ ಹೊಂದಿರುವ ಮತ್ತು ಹೊಂದಿರದ ಬಗ್ಗೆ ಕಾರ್ಕಳ ಮತ್ತು ಮುಲ್ಕಿ ಹೋಬಳಿಯ ೧೫೦ ಮರಾಟಿ ಸಮುದಾಯದ ೧೫೦ ಕುಟುಂಬಗಳನ್ನು ಸಮೀಕ್ಷೆಗೊಳಪಡಿಸಿದಾಗ ೧೪೮ (೯೮.೬೭%) ರಷ್ಟು ಕುಟುಂಬಗಳು ನಿವೇಶನ ಮತ್ತು ಜಮೀನು ಹೊಂದಿರುವುದು ಕಂಡುಬಂದರೆ ಕೇವಲ ೨ (೧.೩೩%) ರಷ್ಟು ಕುಟುಂಬಗಳು ನಿವೇಶನ ಮತ್ತು ಜಮೀನು ಹೊಂದದಿರುವುದು ಕಂಡುಬಂದಿದೆ. ಭೂಮಿ ಮತ್ತು ನಿವೇಶನ ಹೊಂದಿರುವ ೧೪೮ ಕುಟುಂಬಗಳಲ್ಲಿ ಅದರ ಪಡೆದ ರೀತಿಯನ್ನು ಅವಲೋಕಿಸಿದಾಗ ಸ್ವಯಾರ್ಜಿತ ಎಂದು ೩೦ (೨೦%) ರಷ್ಟು ಕುಟುಂಬಗಳಲ್ಲಿ ಕಂಡರೆ, ಪಿತ್ರಾರ್ಜಿತ ಪಡೆದಿರುವುದು ಎಂಬ ಅಂಶ ೮೭(೫೮%) ರಷ್ಟು ಕುಟುಂಬಗಳಲ್ಲಿ ನೋಡಬಹುದಾಗಿದೆ. ಅದೇ ರೀತಿ ಸರಕಾರಿ ಯೋಜನೆಗಳ ಸಹಾಯದಿಂದ ೩೧ (೨೦.೬೭%) ಕುಟುಂಬಗಳು ಜಮೀನು ನಿವೇಶನ ಪಡೆದಿರುವುದು ಕಂಡುಬಂದಿದೆ. ನಿವೇಶನ ಹೊಂದಿಲ್ಲದ ೨ (೧.೩೩%) ರಷ್ಟು ಕುಟುಂಬಗಳ ಬಗ್ಗೆ ಅಧ್ಯಯನ ಮಾಡಿದಾಗ ಅವರು ಬಾಡಿಗೆ ಮನೆಯಲ್ಲಿ ವಾಸವಿರುವುದು ಕಂಡುಬಂದಿದೆ.

• ಉಡುಪಿ ಜಿಲ್ಲೆಯ ಮರಾಟಿ ನಾಯ್ಕ ಮತ್ತು ಮರಾಟಿ ಸಮುದಾಯಗಳ ಒಟ್ಟು ೩೦೦ ಕುಟುಂಬಗಳ ಹೊಂದಿರುವ ಜಮೀನು ಮತ್ತು ನಿವೇಶನದ ವಿವರಗಳನ್ನು ತೌಲನಿಕವಾಗಿ ನೋಡಿದಾಗ ಎಲ್ಲರೂ ನಿವೇಶನ ಜಮೀನು ಹೊಂದಿರುವವರೇ ಆಗಿದ್ದು, ಅದರಲ್ಲಿ ಸರ್ಕಾರ ಯೋಜನೆಗಳಿಂದ ಪಡೆದ ಫಲಾನುಭವಿಗಳೇ ಹೆಚ್ಚಾಗಿದ್ದಾರೆ. ಅಷ್ಟೇ ಪ್ರಮಾಣದ ಪಿತ್ರಾರ್ಜಿತ ಜಮೀನು ಪಡೆದವರು ಇದ್ದಾರೆ. ಇಲ್ಲಿ ಯಾರು ಸ್ವಯಾರ್ಜಿತ ಆಸ್ತಿ ಉಳ್ಳವರಾಗಿರುವುದಿಲ್ಲ. ಮತ್ತೆ ಯಾರೂ ಬಾಡಿಗೆ ಮನೆಯಲ್ಲಿ ಇರುವವರ ಸಂಖ್ಯೆ ವಿರಳ ಎಂಬುದು ಕಂಡುಬರುತ್ತದೆ.

ಕೋಷ್ಟಕ: ೫.೪

ತಿಳುವಳಿಕೆದಾರರು ಹೊಂದಿರುವ ಜಮೀನಿನ ಪ್ರಮಾಣಗಳ ವಿವರಗಳು

ಸಮುದಾಯದ ಹೆಸರು	ತಾಲೂಕು	ಮಾಹಿತಿದಾರರು ಹೊಂದಿರುವ ಜಮೀನಿನ ಪ್ರಮಾಣಗಳ ಹಂಚಿಕೆಯ ವಿವರಗಳು					
		೦೦-೦.೫೦ಎಕ್ರೆ	೦.೫೧-೧.೦೦ಎಕ್ರೆ	೧.೦೦-೨.೦೦ಎಕ್ರೆ	೨.೦೦ಎಕ್ರೆ ಮೇಲ್ಪಟ್ಟು	ಬಾಡಿಗೆ ಮನೆಯಲ್ಲಿ ವಾಸ್ತವ್ಯ	ಒಟ್ಟು
ಮರಾಟಿ ನಾಯ್ಕ	ಕುಂದಾಪುರ	೩೭	೦೯	೦೧	೦೩	೦೦	೫೦
	ಉಡುಪಿ	೩೩	೦೯	೦೬	೦೦	೦೨	೪೮
	ಕಾರ್ಕಳ	೨೦	೧೫	೧೧	೦೩	೦೧	೪೯
	ಒಟ್ಟು	೯೦	೩೩	೧೮	೦೬	೦೩	೧೫೦
	ಶೇಕಡವಾರು	**೬೦.೦೦**	**೨೨.೦೦**	**೧೨.೦೦**	**೦೪.೦೦**	**೦೨.೦೦**	**೧೦೦**
ಮರಾಟಿ	ಕಾರ್ಕಳ ತಾಲೂಕು & ಮುಲ್ಕಿ ಹೋಬಳಿ						
	ಒಟ್ಟು	೧೪೬	೦೧	೦೧	ಇಲ್ಲ	೦೨	೧೫೦
	ಶೇಕಡವಾರು	**೯೭.೩೩**	**೦.೬೭**	**೦.೬೭**	**ಇಲ್ಲ**	**೦೧.೩೩**	**೧೦೦**

ಕೋಷ್ಟಕ ಸಂಖ್ಯೆ ೫.೪ರಲ್ಲಿ ಸಮೀಕ್ಷೆಗೊಳಪಟ್ಟ ತಿಳುವಳಿಕೆದಾರರು ಹೊಂದಿರುವ ಜಮೀನಿನ ಪ್ರಮಾಣಗಳ ವಿವರಗಳನ್ನು ತೋರಿಸಲಾಗಿದೆ.

ಜಮೀನಿನ ಪ್ರಮಾಣಕ್ಕೆ ಸಂಬಂಧಿಸಿದಂತೆ ಕುಂದಾಪುರ, ಉಡುಪಿ, ಕಾರ್ಕಳ ತಾಲೂಕುಗಳ ೧೫೦ ಮರಾಟಿ ನಾಯ್ಕ ಸಮುದಾಯದ ಕುಟುಂಬಗಳನ್ನು ಸಮೀಕ್ಷೆಗೊಳಪಡಿಸಿದಾಗ ೯೦(೬೦%) ರಷ್ಟು ಕುಟುಂಬಗಳು ೦–೦.೫೦ ಎಕ್ರೆಯಷ್ಟು ಜಮೀನು ಹೊಂದಿವೆ ಎಂದು ಕಂಡು ಬಂದರೆ, ೩೩ (೨೨%) ರಷ್ಟು ಕುಟುಂಬಗಳು ೦.೫೧–೦೧–೦೦ ಎಕ್ರೆಯಷ್ಟು ಜಮೀನು ಹೊಂದಿವೆ. ಅದೇ ರೀತಿ ೧೮(೧೨%) ರಷ್ಟು ಕುಟುಂಬಗಳು ೧ ರಿಂದ ೨ ಎಕ್ರೆಯಷ್ಟು ಜಮೀನು ಹೊಂದಿರುವುದು ಕಂಡು ಬಂದಿದೆ. ೬(೪%) ರಷ್ಟು ಕುಟುಂಬಗಳು ೨ ಎಕ್ರೆಗಿಂತ ಹೆಚ್ಚು ಜಮೀನು ಹೊಂದಿರುವುದನ್ನು ಕಾಣಬಹುದಾಗಿದೆ. ಅದರಂತೆ ಉಳಿದ ೩(೨%) ರಷ್ಟು ಕುಟುಂಬಗಳು ಭೂಮಿಯನ್ನು ಹೊಂದಿಲ್ಲ ಎಂಬುದು ಕಂಡುಬಂದಿದೆ.

ಮರಾಟಿ ಸಮುದಾಯಕ್ಕೆ ಸಂಬಂಧಿಸಿದಂತೆ ಕಾರ್ಕಳ ತಾಲೂಕು ಮುಲ್ಕಿ ಹೋಬಳಿ ವ್ಯಾಪ್ತಿಯಲ್ಲಿ ಬರುವ ಮರಾಟಿ ಸಮುದಾಯದ ೧೫೦ ಕುಟುಂಬಗಳನ್ನು ಸಮೀಕ್ಷೆಗೊಳಪಡಿಸಿದಾಗ ೧೪೬ (೯೭.೩೩%) ರಷ್ಟು ಕುಟುಂಬಗಳು ೦೦ ರಿಂದ ೦.೫೦ ಎಕ್ರೆಯಷ್ಟು ಜಮೀನು ಹೊಂದಿರುವುದು ಕಂಡು ಬಂದರೆ ಕೇವಲ ೧ (೦.೬೭%) ರಷ್ಟು ಕುಟುಂಬ ೦.೫೧ ರಿಂದ ೧.೦೦ರಷ್ಟು ಎಕ್ರೆಯ ಜಮೀನು ಹೊಂದಿದ್ದಾರೆ, ೧ ರಿಂದ ೨ ಎಕ್ರೆಯಷ್ಟು ಜಮೀನನ್ನು ೧(೦.೬೭%) ಕುಟುಂಬ ಹೊಂದಿರುವುದು ಕಾಣಬಹುದಾಗಿದೆ. ಹಾಗೂ ಯಾವುದೇ ಕುಟುಂಬಗಳು ೨ ಎಕರೆಯನ್ನು ಮೇಲ್ಪಟ್ಟ ಜಮೀನನ್ನು ಹೊಂದದೇ ಇರುವುದು ಕಂಡುಬಂದಿದೆ. ಉಳಿದ ೨ (೧.೩೩%) ಕುಟುಂಬಗಳಿಗೆ ಯಾವುದೇ ಜಮೀನು ಇಲ್ಲದೇ ಇರುವುದು ಕಂಡು ಬಂದಿದೆ. ಈ ವಿಷಯಕ್ಕೆ ಸಂಬಂಧಿಸಿದಂತೆ ಈ ಎರಡು ಸಮುದಾಯಗಳ ಮಧ್ಯೆ ತುಲನಾತ್ಮಕವಾಗಿ ಅಧ್ಯಯನ ಮಾಡಿದಾಗ ಮರಾಟಿ ನಾಯ್ಕ ಸಮುದಾಯವು, ಮರಾಟಿ ಸಮುದಾಯಕ್ಕಿಂತ ಅತಿ ಹೆಚ್ಚು ಜಮೀನು ಹೊಂದಿರುವುದು ಕಂಡುಬರುತ್ತದೆ.

• ಉಡುಪಿ ಜಿಲ್ಲೆಯ ಮರಾಟಿ ನಾಯ್ಕ ಮತ್ತು ಮರಾಟಿ ಸಮುದಾಯಗಳ ಒಟ್ಟು ೩೦೦ ಕುಟುಂಬಗಳ ಸಮೀಕ್ಷೆಗೊಳಪಟ್ಟ ತಿಳುವಳಿಕೆದಾರರು ಹೊಂದಿರುವ ಜಮೀನಿನ ಪ್ರಮಾಣಗಳ ವಿವರಗಳನ್ನು ಹೋಲಿಕೆ ಮಾಡಿದಾಗ ಅರ್ಧ ಎಕರೆಗಿಂತ ಕಡಿಮೆ ಇರುವವರು ಹೆಚ್ಚಾಗಿದ್ದು, ೧ ರಿಂದ ೨ ಎಕರೆ ಜಮೀನು ಇರುವವರು ತುಂಬಾ ಕಡಿಮೆ ಪ್ರಮಾಣದಲ್ಲಿ ಇರುವುದನ್ನು ಕಾಣಬಹುದು.

ಕೋಷ್ಟಕ: ೫.೫

ತಿಳುವಳಿಕೆದಾರರ ಮಕ್ಕಳನ್ನು ಕಳುಹಿಸಲು ಉದ್ದೇಶಿಸಿರುವ ಉದ್ಯೋಗದ ವಿವರಗಳು

ಸಮುದಾಯದ ಹೆಸರು	ತಾಲೂಕು	ಉದ್ಯೋಗವಾರು ಹಂಚಿಕೆಯ ವಿವರಗಳು					ಒಟ್ಟು
		ಕೃಷಿ	ವ್ಯಾಪಾರ	ಯಾವುದಾದರು ಸರ್ಕಾರಿ ಉದ್ಯೋಗ	ವೃತ್ತಿಪರ ಉದ್ಯೋಗ	ಸ್ವ–ಉದ್ಯೋಗ	
ಮರಾಟಿ ನಾಯ್ಕ	ಕುಂದಾಪುರ	–	–	೨೫	೧೯	೦೬	೫೦
	ಉಡುಪಿ	–	೦೫	೨೪	೦೬	೧೫	೫೦
	ಕಾರ್ಕಳ	–	೦೫	೨೪	೦೬	೧೫	೫೦
	ಒಟ್ಟು	–	೧೦	೭೩	೩೧	೩೬	೧೫೦
	ಶೇಕಡವಾರು	–	೦೬.೬೭	೪೮.೬೭	೨೦.೬೬	೨೪.೦೦	೧೦೦.೦೦
ಮರಾಟಿ	ಕಾರ್ಕಳ ತಾಲೂಕು						
	ಒಟ್ಟು	೦೦	೧೬	೭೬	೪೧	೧೭	೧೫೦
	ಶೇಕಡವಾರು	೦೦	೧೦.೬೭	೫೦.೬೭	೨೭.೩೩	೧೧.೩೩	೧೦೦.೦೦

ಕೋಷ್ಟಕ ಸಂಖ್ಯೆ ೫.೫ರಲ್ಲಿ ತಿಳುವಳಿಕೆದಾರರ ಮಕ್ಕಳನ್ನು ಕಳುಹಿಸಲು ಉದ್ದೇಶಿಸಿರುವ ಉದ್ಯೋಗದ ವಿವರಗಳನ್ನು ತೋರಿಸಲಾಗಿದೆ. ಅದರಂತೆ ಕುಂದಾಪುರ, ಉಡುಪಿ ಮತ್ತು ಕಾರ್ಕಳ ತಾಲೂಕುಗಳ ೧೫೦ ಮರಾಟಿ ನಾಯ್ಕ ಸಮುದಾಯದ ಕುಟುಂಬಗಳನ್ನು ಸಮೀಕ್ಷೆಗೊಳಪಡಿಸಿದಾಗ ತಮ್ಮ ಮಕ್ಕಳನ್ನು ವ್ಯಾಪಾರಕ್ಕೆ ಕಳುಹಿಸಲು ೧೦(೬.೬೭%) ರಷ್ಟು ಕುಟುಂಬಗಳು ಇಚ್ಛಿಸಿವೆ. ಅದರಂತೆ ಯಾವುದಾದರೂ ಸರ್ಕಾರಿ ಉದ್ಯೋಗಕ್ಕೆ ಕಳುಹಿಸಲು ೭೩ (೪೮.೬೭%) ರಷ್ಟು ಕುಟುಂಬಗಳು ತಮ್ಮ ಇಚ್ಛೆ ವ್ಯಕ್ತಪಡಿಸಿರುವುದು ಕಂಡುಬಂದಿದೆ. ಇನ್ನುಳಿದ ಕುಟುಂಬದಲ್ಲಿ ಅಂದರೆ ೩೧ (೨೦.೬೬%) ರಷ್ಟು ಕುಟುಂಬಗಳು ವೃತ್ತಿಪರ ಉದ್ಯೋಗವನ್ನು ಪಡೆಯಲು ತಮ್ಮ ಮಕ್ಕಳಿಗೆ ಬಯಸಿದರೆ ಸ್ವ-ಉದ್ಯೋಗ ಹೊಂದಲು ೩೬(೨೪%) ರಷ್ಟು ಕುಟುಂಬಗಳು ಬಯಸಿವೆ ಎಂಬುದು ಕಂಡುಬಂದಿದೆ. ಕೃಷಿ ಕ್ಷೇತ್ರದಲ್ಲಿ ಯಾರ ಒಲವು ಇಲ್ಲದಿರುವುದನ್ನು ಗಮನಿಸಬಹುದು.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಕಾರ್ಕಳ ತಾಲೂಕಿನ ೧೫೦ ಮರಾಟಿ ಸಮುದಾಯದ ಕುಟುಂಬಗಳಲ್ಲಿ ಮಾಹಿತಿಯನ್ನು ಕೇಳಿದಾಗ ೧೬(೧೦.೬೭%) ರಷ್ಟು ಕುಟುಂಬಗಳು ತಮ್ಮ ಮಕ್ಕಳಿಗೆ ವ್ಯಾಪಾರಕ್ಕೆ ಕಳುಹಿಸಲು ಇಚ್ಛಿಸಿದರೆ. ೭೬ (೫೦.೬೭%) ರಷ್ಟು ಕುಟುಂಬಗಳು ತಮ್ಮ ಮಕ್ಕಳಿಗೆ ಯಾವುದಾದರೂ ಸರ್ಕಾರಿ ಉದ್ಯೋಗಕ್ಕೆ ಕಳುಹಿಸಲು ಬಯಸಿರುವುದು ಕಂಡುಬಂದಿದೆ. ಇನ್ನುಳಿದ ಕುಟುಂಬಗಳಲ್ಲಿ ೪೧(೨೭.೩೩%) ರಷ್ಟು ಕುಟುಂಬಗಳು ವೃತ್ತಿಪರ ಉದ್ಯೋಗ ಕೊಡಿಸಲು ಬಯಸಿದರೆ ಸ್ವ-ಉದ್ಯೋಗಕ್ಕೆ ಕಳುಹಿಸಲು ೧೭(೧೧.೩೩%) ರಷ್ಟು ಕುಟುಂಬಗಳು ಇಚ್ಛಿಸಿರುವುದು ಕಂಡುಬಂದಿದೆ. ಅದರಂತೆ ಈ ಸಮುದಾಯದಲ್ಲಿ ಕೃಷಿ ಉದ್ಯೋಗಕ್ಕೆ ತಮ್ಮ ಮಕ್ಕಳನ್ನು ಕಳುಹಿಸಲು ಒಲವು ಇಲ್ಲದಿರುವುದು ಕಂಡುಬಂದಿದೆ.

• ಉಡುಪಿ ಜಿಲ್ಲೆಯ ಮರಾಟಿ ನಾಯ್ಕ ಮತ್ತು ಮರಾಟಿ ಸಮುದಾಯಗಳ ಒಟ್ಟು ೩೦೦ ಕುಟುಂಬಗಳ ಮಕ್ಕಳನ್ನು ಕಳುಹಿಸಲು ಉದ್ದೇಶಿಸಿರುವ ಉದ್ಯೋಗದ ವಿವರಗಳನ್ನು ಗಮನಿಸಿದಾಗ ಹೆಚ್ಚಿನವರು ಸರ್ಕಾರಿ ಉದ್ಯೋಗದಲ್ಲಿದ್ದು, ಯಾರೊಬ್ಬರೂ ಕೃಷಿಯಲ್ಲಿ ಇರದೇ ಇದ್ದುದನ್ನು ಮತ್ತು ಕೆಲವರು ಮಾತ್ರ ವ್ಯಾಪಾರ ಮಾಡುತ್ತಿರುವುದನ್ನು ಅದರಲ್ಲಿ ಕೆಲವರು ವೃತ್ತಿಪರ ಉದ್ಯೋಗವನ್ನು ಮಾಡುತ್ತಿದ್ದು, ಮತ್ತು ಇನ್ನುಳಿದ ಕೆಲವರು ಸ್ವ-ಉದ್ಯೋಗವನ್ನು ಮಾಡುತ್ತಿರುವುದು ಎರಡು ಸಮುದಾಯಗಳಿಂದ ತಿಳಿದುಬರುತ್ತದೆ.

ಭೂ ಸುಧಾರಣಾ ಕಾಯ್ದೆಯಿಂದ ಮರಾಟಿ ನಾಯ್ಕ ಮತ್ತು ಮರಾಟಿ ಸಮುದಾಯಕ್ಕೆ ಆಗಿರುವ ಪ್ರಯೋಜನಗಳು

ಉಡುಪಿ ಜಿಲ್ಲೆಯಲ್ಲಿ ಭೂಮಾಲಿಕರಲ್ಲಿ ಹೆಚ್ಚಿನವರು ಮೇಲ್ವರ್ಗದ ಬಂಟರು, ಬ್ರಾಹ್ಮಣರು, ಗೌಡ ಸಾರಸ್ವತ ಬ್ರಾಹ್ಮಣರು ಮತ್ತು ಜೈನರು ಸೇರಿದವರಾಗಿದ್ದು, ಗಾಣಿಗ, ಪೂಜಾರಿ, ದೇವಾಡಿಗ, ಆಚಾರಿ, ಮರಾಟಿ, ಮರಾಟಿ ನಾಯ್ಕ, ಕುಡುಬಿ, ಮಡಿವಾಳ, ಮೊಗವೀರ ಕುಂಬಾರ ಮತ್ತಿತ್ತರ ಕುಶಲಕರ್ಮಿ ಹಾಗೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಜನರು ಹೆಚ್ಚಾಗಿ ಭೂಮಾಲಿಕರಲ್ಲಿ ಗೇಣಿದಾರರಾಗಿರುವುದು ಕಂಡುಬರುತ್ತದೆ. ಭೂಮಾಲಿಕರು ತಮ್ಮ ಒಕ್ಕಲಿನವರ ಮೇಲೆ ಅನೇಕ ರೀತಿಯ ಹಿಡಿತ ಹೊಂದಿದ್ದಾರೆ. ಭೂಮಾಲಿಕರ ಅಪ್ಪಣೆ ಇಲ್ಲದೆ ಒಕ್ಕಲಿನವರು ಏನೂ ಮಾಡುವಂತಿಲ್ಲ. ಪ್ರತಿವರ್ಷ ತಮ್ಮ ಗೇಣಿಯನ್ನು ನವೀಕರಿಸಿಕೊಳ್ಳಬೇಕಾದರೆ ಭೂಮಾಲಿಕರು ಹೇಳಿದ ರೀತಿ ಕೇಳಬೇಕಾಗಿತ್ತು. ಅವರ ಗದ್ದೆಯಲ್ಲಿ ಬಿಟ್ಟಿ ಚಾಕರಿ ಕೂಡ ಮಾಡಬೇಕಾಗಿತ್ತು. ಗೇಣಿದಾರರ ಹೆಣ್ಣು ಮಕ್ಕಳು ಶಾಲೆಗೆ ಹೋಗದೆ, ಧಣಿಯ ಮನೆಯ ಚಾಕರಿಗೆ ಹೋಗಬೇಕಾಗಿತ್ತು. ಧಣಿಯ ಮಕ್ಕಳು,

ಸಂಬಂಧಿಕರು ಪಟ್ಟಣಗಳಲ್ಲಿ ನೌಕರಿ ಅಥವಾ ವ್ಯಾಪಾರ ಮಾಡುತ್ತಿದ್ದರೆ, ಅವರ ಮನೆಯ ಚಾಕರಿಗೂ ಒಕ್ಕಲಿನವರು ಮಕ್ಕಳನ್ನು ಕಳುಹಿಸಿರುವುದನ್ನು ಕ್ಷೇತ್ರಕಾರ್ಯದಲ್ಲಿ ಗಮನಿಸಿರುವೆನು.

ಭೂ-ಸುಧಾರಣಾ ಕಾಯ್ದೆ ಜಾರಿಗೊಳಿಸುವುದರ ಪೂರ್ವದಲ್ಲಿ ಉಡುಪಿ ಜಿಲ್ಲೆಯಲ್ಲಿ ಗೇಣಿ ಪದ್ಧತಿಯಲ್ಲಿ ಮುಖ್ಯವಾಗಿ 'ಚಾಲಗೇಣಿ' ಮತ್ತು 'ಮೂಲಗೇಣಿ' ಎಂಬ ಎರಡು ವಿಧಗಳಿದ್ದವು. ಚಾಲಗೇಣಿ ಪದ್ಧತಿಯಲ್ಲಿ ಒಕ್ಕಲುಗಳು ಮತ್ತು ಧಣಿಗಳ ನಡುವೆ ನಿಕಟ ಸಂಪರ್ಕವಿದ್ದು, ಒಕ್ಕಲಿನವರಿಗೆ ನಿರಂತರ ಶೋಷಣೆ ನಡೆಯುತ್ತಿತ್ತು. ಆದರೆ ಮೂಲ ಗೇಣಿ ಪದ್ಧತಿಯಲ್ಲಿ ಧಣಿ ಮತ್ತು ಒಕ್ಕಲಿನವರ ನಡುವೆ ಹೆಚ್ಚು ನಿಕಟತೆ ಇರಲಿಲ್ಲ. ಏಕೆಂದರೆ 'ಮೂಲ ಗೇಣಿದಾರರು ಖಾಲಿ ಅಥವಾ ಕೃಷಿಗೆ ಒಳಪಡದ ಸ್ಥಳವನ್ನು ನಿಗದಿತ ಮುಂಗಡ ಮೊತ್ತ ನೀಡಿ ನಂತರ ವಾರ್ಷಿಕ ಇಂತಿಷ್ಟು ಹಣ ಸಲ್ಲಿಸುವುದೆಂದು ಒಪ್ಪಿ, ಗೇಣಿ ಪಡೆದು ಅದನ್ನು ಕೃಷಿಯೋಗ್ಯವನ್ನಾಗಿ ಮಾಡಿ ಅನುಭವಿಸಿಕೊಂಡು ಬಂದಿದ್ದರು. ಹಾಗಾಗಿ ಅವರಿಗೆ ಧಣಿಯ ಮನೆಗೆ ಕೂಲಿ ಕೆಲಸಕ್ಕೆ ಹೋಗಬೇಕಾದ ಹಂಗು ಇರಲಿಲ್ಲ. ಒಮ್ಮೆ ಗೇಣಿಗೆ ಭೂಮಿ ಪಡೆದರೆ ಮತ್ತೆ ಪ್ರತಿ ವರ್ಷವೂ ನವೀಕರಿಸುವ ಅಗತ್ಯವೂ ಇರಲಿಲ್ಲ. ಈ ಕ್ರಮದ ಪ್ರಕಾರ ಗೇಣಿ ಸಲ್ಲಿಸುತ್ತಿದ್ದರೆ. ಹಿಡುವಳಿಯನ್ನು ಖಾಯಂ ಆಗಿ ಹೊಂದಿಸಬಹುದಾಗಿತ್ತು. ವಾರಸುದಾರರಿಂದ ಮಕ್ಕಳಿಗೆ ಈ ಗೇಣಿ ಭೂಮಿಯ ಹಕ್ಕು ವರ್ಗಾವಣೆಯಾಗಬಹುದಿತ್ತು ಹಾಗೂ ಅದನ್ನು ಪಾಲು ಮಾಡಿಕೊಳ್ಳಬಹುದಿತ್ತು. ಹಾಗಾಗಿ ಅದನ್ನು 'ಖಾಯಂ ಗೇಣಿ' ಎಂದೂ ಕರೆಯಲಾಗುತ್ತಿತ್ತು.

ಭೂಮಾಲಿಕರ ಭೂಮಿಗೆ ಮಿತಿಯನ್ನು ಹೇರಿ ಗೇಣಿ ಪದ್ಧತಿಯನ್ನು ರದ್ದುಗೊಳಿಸಿ 'ಉಳುವವನನ್ನೇ ಭೂಮಿಯ ಒಡೆಯನನ್ನಾಗಿ ಮಾಡುವ ಉದ್ದೇಶದಿಂದ ರಾಜ್ಯದಲ್ಲಿ ೧೯೬೧ರ ಭೂಸುಧಾರಣಾ ಕಾಯ್ದೆಯು ೧೯೬೫ರ ಅಕ್ಟೋಬರ್ ೨ರಂದು ಜಾರಿಗೆ ತಂದಿತು. ಇದಕ್ಕೂ ಮೊದಲು ಈ ಕಾಯಿದೆಯ ರಚನೆಗಾಗಿ ೧೯೫೭ರಲ್ಲಿ 'ಬಿ.ಡಿ. ಜತ್ತಿ ಕಮಿಟಿ'ಯನ್ನು ನೇಮಿಸಿದಂದಿನಿಂದ ಅದನ್ನು ಜಾರಿಗೊಳಿಸುವವರೆಗಿನ ಸುಮಾರು ಎಂಟು ವರ್ಷಗಳಲ್ಲಿ ಸಾಕಷ್ಟು ಗೇಣಿದಾರರನ್ನು ಒಕ್ಕಲೆಬ್ಬಿಸಿದರು. ಇದಲ್ಲದೆ, ೧೯೬೧ರ ಕಾಯಿದೆಯ ಹಲವಾರು ನ್ಯೂನತೆಗಳನ್ನು ಹೊಂದಿತ್ತು. ಇದರ ಲಾಭ ಪಡೆದ ಭೂಮಾಲಿಕರು ಇನ್ನಷ್ಟು ಜನರನ್ನು ಒಕ್ಕಲೆಬ್ಬಿಸಿದರು. ಇದನ್ನರಿತ ಸರ್ಕಾರವು ೧೯೭೪ರಲ್ಲಿ ಇನ್ನಷ್ಟು ಬಿಗುವಾದ ಕಾಯಿದೆಯನ್ನು ಜಾರಿಗೊಳಿಸಿತು. ಆದರೆ ಇದರ ಪ್ರಯೋಜನ ಪಡೆಯಲು ಹೆಚ್ಚಿನ ಗೇಣಿದಾರರೇ ಇರಲಿಲ್ಲ. ಆಗಲೇ ಹೆಚ್ಚಿನವರು ಸ್ವಂತ ಭೂಮಿ ಹೊಂದುವ ಕನಸುಗಳು ಭಗ್ನಗೊಂಡಿದ್ದವು. ಆದ್ದರಿಂದ ಈ ಕಾಯಿದೆಯ ಲಾಭ ಬಹಳ ಅಲ್ಪ ಜನರಿಗೆ ಮಾತ್ರ ಆಗಿದೆ "ಡಾ। ಚಂದ್ರಶೇಖರ ದಾಮ್ಲೆ ಅವರ ಹೇಳುವಂತೆ "ಕರ್ನಾಟಕದಲ್ಲಿ ಸರ್ಕಾರವು ಹೇಳಿಕೊಳ್ಳುವಂತೆ ಗೇಣಿ ಪದ್ಧತಿಯ ರದ್ದತಿ ಮಸೂದೆಯ ಲಾಭವು ಶೇಕಡ ೬೦ರಷ್ಟು ಗೇಣಿದಾರರಿಗೆ ಸಿಕ್ಕಿಲ್ಲ.' ವಾಸ್ತವಿಕವಾಗಿ ರಾಜ್ಯದಲ್ಲಿ ಈ ಮಸೂದೆಯ ಪ್ರಯೋಜನ ಪಡೆದ ಗೇಣಿದಾರರ ಪ್ರಮಾಣವು ಶೇಕಡ ೨೦ರಷ್ಟು ಮಾತ್ರ ಇದೆ. ಅಂತೆಯೇ ಭೂ ಮಸೂದೆಯು ತೀರಾ ನಿರರ್ಥಕವೆನ್ನುವಷ್ಟು ಮಂದಗತಿಯನ್ನು ತೋರಿಸಿದೆ"[೧]. ಹೀಗಾಗಿ ಈ ಮಸೂದೆಯ ಪ್ರಯೋಜನ ಬಡ ಗೇಣಿದಾರರಿಗೆ ಹೆಚ್ಚಾಗಿ ಆಗಿಲ್ಲವೆಂದು ಹೇಳಬಹುದು.

ಆದರೆ "ಉಡುಪಿ ಜಿಲ್ಲೆಯಲ್ಲಿ ಒಟ್ಟು ಗೇಣಿದಾರರಲ್ಲಿ ಮೂಲಗೇಣಿದಾರರ ಸಂಖ್ಯೆ ಕಡಿಮೆ ಇತ್ತು. ಅವರಲ್ಲಿ ಸೂಕ್ತವಾದ ದಾಖಲೆಗಳೂ, ಹಿಡುವಳಿಯ ಸ್ವಾಧೀನತೆಯೂ ಇದ್ದುದರಿಂದ ಅಂತಹವರಿಗೆ ಭೂ ಸುಧಾರಣೆಯ ಲಾಭವು ಸುಲಭವಾಗಿ ದೊರೆಯಿತು. ಆದರೆ ಮುಕ್ಕಾಲು ಭಾಗದಷ್ಟು ಜನರು ಒಕ್ಕಲೆಬ್ಬಿಸುವಿಕೆಗೆ ಒಳಗಾಗಿ ಭೂಮಿಯು ಪುನಃ ಮಾಲಿಕರ ಕೈ ಸೇರಿತು. ಇಲ್ಲಿಯ ತನಕ

ಗೇಣಿದಾರರಾಗಿದ್ದು, ಕೂಲಿ ಮಾಡುತ್ತಿದ್ದವರು ಈಗ ಕೇವಲ ಕೃಷಿ ಕೂಲಿಕಾರ ಕಾರ್ಮಿಕರಾಗಿ ಪರಿವರ್ತನೆ ಹೊಂದಿದರು. ಒಂದು ರೀತಿಯಲ್ಲಿ ಅವರು ಹಿಂದಿನ ಹಂಗು ಹಾಗೂ ದಾಸ್ಯದಿಂದ ಬಿಡುಗಡೆ ಹೊಂದಿದರೆಂದೂ ಹೇಳಬಹುದು. ಏಕೆಂದರೆ ಚಾಲಗೇಣಿದಾರರ ಆರ್ಥಿಕ ನೀತಿಯು ಕೃಷಿ ಕೂಲಿಕಾರರಿಗಿಂತ ಒಳ್ಳೆಯದೆನೂ ಇರಲಿಲ್ಲ"[೨]. ಹೀಗಾಗಿ ಚಾಲಗೇಣಿದಾರರ ಸ್ಥಿತಿ ಹೆಚ್ಚು ಸಂಕಷ್ಟದಿಂದ ಕೂಡಿತ್ತು. ಇವರಿಗೆ ಭೂ ಸುಧಾರಣಾ ಕಾಯ್ದೆಯಿಂದ ಆದ ಲಾಭವೂ ಬಹಳ ಕಡಿಮೆ.

ಕೋಷ್ಟಕ: ೫.೬

ಭೂ–ಸುಧಾರಣಾ ಕಾಯ್ದೆಯಿಂದ ತಿಳುವಳಿಕೆದಾರರಿಗೆ ಲಭ್ಯವಾಗಿರುವ ಜಮೀನಿನ ವಿವರಗಳು

ಸಮುದಾಯದ ಹೆಸರು	ತಾಲೂಕು	ಭೂ–ಸುಧಾರಣಾ ಕಾಯ್ದೆಯಿಂದ ಮಾಹಿತಿದಾರರು ಪಡೆದ ಜಮೀನು				ಒಟ್ಟು ಫಲಾನುಭವಿಗಳು
		೦೦–೦.೫೦ ಎಕ್ರೆ	೦.೫೧ –೧.೦೦ ಎಕ್ರೆ	೧.೦೦ –೨.೦೦ ಎಕ್ರೆ	೨.೦೦ ಎಕ್ರೆ ಮೇಲ್ಪಟ್ಟು	
ಮರಾಟಿ ನಾಯ್ಕ	ಕುಂದಾಪುರ	೧೮	೦೯	೦೧	೦೩	೩೧
	ಉಡುಪಿ	೧೩	೦೭	೦೬	೦೦	೨೬
	ಕಾರ್ಕಳ	೦೯	೦೮	೦೮	೦೩	೨೮
	ಒಟ್ಟು	೪೦	೨೪	೧೫	೦೬	೮೫ (೧೫೦)
	ಶೇಕಡವಾರು	೨೬.೬೭	೧೬.೦೦	೧೦.೦೦	೦೪.೦೦	೫೬.೬೭
ಮರಾಟಿ	ಕಾರ್ಕಳ ತಾಲೂಕು					
	ಒಟ್ಟು	೬೦	೦೧	೦೧	ಇಲ್ಲ	೬೨
	ಶೇಕಡವಾರು	೪೦.೦೦	೦.೬೬	೦.೬೭	ಇಲ್ಲ	೪೧.೩೩

ಕೋಷ್ಟಕ ಸಂಖ್ಯೆ ೫.೬ರಲ್ಲಿ ಭೂ–ಸುಧಾರಣಾ ಕಾಯ್ದೆಯಿಂದ ತಿಳುವಳಿಕೆದಾರರು ಪಡೆದ ಜಮೀನಿನ ವಿವರವನ್ನು ನೀಡಲಾಗಿದೆ.

ಭೂ–ಸುಧಾರಣಾ ಕಾಯ್ದೆಯಿಂದ ಪಡೆದ ಜಮೀನಿನ ವಿವರ ತಿಳಿಯಲು ಕುಂದಾಪುರ, ಉಡುಪಿ, ಕಾರ್ಕಳ ತಾಲೂಕುಗಳ ೧೫೦ ಮರಾಟಿ ನಾಯ್ಕ ಕುಟುಂಬಗಳನ್ನು ಸಮೀಕ್ಷೆಗೊಳಪಡಿಸಿದಾಗ ೪೦ (೨೬.೬೭%) ರಷ್ಟು ಕುಟುಂಬಗಳು ಭೂ–ಸುಧಾರಣಾ ಕಾಯ್ದೆಯಿಂದ ೦.೫೦ ಎಕ್ರೆ ಜಮೀನು ಪಡೆದಿದ್ದಾರೆ. ಅದರಂತೆ ೨೪(೧೬%) ರಷ್ಟು ಕುಟುಂಬಗಳು ೦.೫೧–೧.೦೦ ಎಕ್ರೆಯಷ್ಟು ಜಮೀನು ಪಡೆದಿವೆ.

೧ ಎಕ್ರೆಯಿಂದ ೨ ಎಕ್ರೆಯಷ್ಟು ಜಮೀನು ೧೫(೧೦%) ರಷ್ಟು ಕುಟುಂಬಗಳು ಪಡೆದಿವೆ. ಅದರಂತೆ ೨ ಎಕ್ರೆಯಷ್ಟು ಜಮೀನು ೦೬ (೪%) ರಷ್ಟು ಕುಟುಂಬಗಳು ಪಡೆದು ಒಟ್ಟು ೮೫

ಕುಟುಂಬಗಳು ಅಂದರೆ ಶೇಕಡಾ ೫೬.೬೭%ರಷ್ಟು ಕುಟುಂಬಗಳು ಭೂ–ಸುಧಾರಣಾ ಕಾಯ್ದೆಯಿಂದ ಫಲಾನುಭವಿಗಳಾಗಿರುವುದು ಕಂಡುಬಂದಿದೆ.

ಭೂ–ಸುಧಾರಣಾ ಕಾಯ್ದೆಯಿಂದ ಪಡೆದ ಜಮೀನಿಗೆ ಸಂಬಂಧಿಸಿದಂತೆ ಕಾರ್ಕಳ ಮತ್ತು ಮುಲ್ಕಿ ಹೋಬಳಿಯ ವ್ಯಾಪ್ತಿಯ ೧೫೦ ಮರಾಟಿ ಸಮುದಾಯದ ಕುಟುಂಬಗಳಲ್ಲಿ ಸಮೀಕ್ಷೆ ನಡೆಸಿದಾಗ ೬೦(೪೦%) ರಷ್ಟು ಕುಟುಂಬಗಳು ೦.೫೦ ಎಕ್ರೆ ಪಡೆದರೆ, ೦.೫೧ ರಿಂದ ೧ ಎಕ್ರೆಯಷ್ಟು ೧(೦.೬೬) ರಷ್ಟು ಕುಟುಂಬ ಪಡೆದರುವುದು ಕಂಡುಬಂದಿದೆ. ಅದರಂತೆ ೧(೦.೬೭%) ರಷ್ಟು ಕುಟುಂಬ ೧ ರಿಂದ ೨ ಎಕ್ರೆಯಷ್ಟು ಜಮೀನು ಭೂ–ಸುಧಾರಣಾ ಕಾಯ್ದೆಯಿಂದ ಜಮೀನು ಪಡೆಯದಿರುವುದು ತಿಳಿದುಬಂದಿದೆ. ಅದರಿಂದ ಒಟ್ಟು ೧೫೦ ಮರಾಟಿ ಕುಟುಂಬಗಳಲ್ಲಿ ಕೇವಲ ೬೨(೪೧.೩೩%) ರಷ್ಟು ಕುಟುಂಬಗಳು ಭೂ–ಸುಧಾರಣಾ ಕಾಯ್ದೆಯಿಂದ ಫಲಾನುಭವಿಗಳಾಗಿರುವುದು ಕಂಡುಬಂದಿದೆ.

• ಉಡುಪಿ ಜಿಲ್ಲೆಯ ಮರಾಟಿ ನಾಯ್ಕ ಮತ್ತು ಮರಾಟಿ ಸಮುದಾಯಗಳ ಒಟ್ಟು ೩೦೦ ಕುಟುಂಬಗಳ ಭೂ–ಸುಧಾರಣಾ ಕಾಯ್ದೆಯಿಂದ ತಿಳುವಳಿಕೆದಾರರಿಗೆ ಲಭ್ಯವಾಗಿರುವ ಜಮೀನಿನ ವಿವರಗಳನ್ನು ಹೋಲಿಕೆ ಮಾಡಿದಾಗ ಭೂ–ಸುಧಾರಣಾ ಕಾಯ್ದೆಯಲ್ಲಿ ಅರ್ಧ ಎಕರೆಗಿಂತ ಕಡಿಮೆ ಜಮೀನು ಹೆಚ್ಚಿನ ಕುಟುಂಬಗಳು ಪಡೆದುಕೊಂಡಿದ್ದು, ಅರ್ಧಕ್ಕಿಂತ ಹೆಚ್ಚು ಕೆಲವು ಕುಟುಂಬಗಳಿಗೆ ಸಿಕ್ಕರೆ ೧ ಮತ್ತು ೨ ಎಕರೆ ಜಮೀನು ಪಡೆದುಕೊಂಡ ಕುಟುಂಬಗಳು ತುಂಬಾ ಕಡಿಮೆ ಪ್ರಮಾಣದಲ್ಲಿ ಇರುವುದನ್ನು ಕೋಷ್ಟಕದಲ್ಲಿ ಕಾಣಬಹುದು. ೧ ರಿಂದ ೨ ಎಕರೆ ಜಮೀನು ಪಡೆದವರಲ್ಲಿ ಮರಾಟಿಗರು ಕಂಡು ಬರುವುದಿಲ್ಲ. ಮರಾಟಿ ನಾಯ್ಕರು ಹೆಚ್ಚಾಗಿದ್ದಾರೆ. ಮರಾಟಿಗರಲ್ಲಿ ಹೆಚ್ಚಿನವರು ಪ್ರತಿಶತ ೯೫% ರಷ್ಟು ಹೆಚ್ಚಿನ ಕುಟುಂಬಗಳ ಅರ್ಧ ಎಕರೆಗಿಂತ ಕಡಿಮೆ ಸೌಲಭ್ಯ ಪಡೆದಿದ್ದನ್ನು ಕಾಣಬಹುದು.

"ಉಳಿದ ಜಿಲ್ಲೆಗಳಿಗಿಂತ ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಭೂ ಮಸೂದೆಯು ಅತ್ಯಂತ ಯಶಸ್ವಿಯಾಗಿದೆ ಎಂದು ಸರ್ಕಾರದ ದಾಖಲೆಗಳಲ್ಲಿ ತಿಳಿಯುತ್ತದೆ. ಆದರೆ ವಾಸ್ತವಿಕವಾಗಿ ಅದು ಹಾಗಾಗಿಲ್ಲ. ಈ ಕಾಯ್ದೆಗೆ ಉತ್ತಮ ಪ್ರತಿಕ್ರಿಯೆ ಲಭ್ಯವಾಗಿದ್ದಂತು ಸತ್ಯ. ಬೇರೆ ಜಿಲ್ಲೆಗಳಿಗೆ ಹೋಲಿಸಿದಾಗ ಇಲ್ಲಿನ ಗೇಣಿದಾರರು ಹೆಚ್ಚು ಸಂಘಟಿತರಾಗಿ ಅತ್ಯಂತ ಹೆಚ್ಚಿನ ಸಂಖ್ಯೆಯಲ್ಲಿ ಡಿಕ್ಲೆರೇಶನಗಳನ್ನು ಸಲ್ಲಿಸಿದ್ದರು. ಜೊತೆಗೆ ಇಲ್ಲಿನ ಸಂಘಟನೆಗಳು ಹಾಗೂ ಹೋರಾಟಗಳು ಸಾಕಷ್ಟು ಪ್ರಚಾರವನ್ನು ಪಡೆದುಕೊಂಡಿದ್ದರಿಂದ, ಈ ಮಸೂದೆಯ ಲಾಭ ಈ ಜಿಲ್ಲೆಗೆ ಅತ್ಯಂತ ಹೆಚ್ಚಾಗಿದೆ ಎಂದು ಎಲ್ಲರೂ ತಿಳಿಯುವಂತಾಯಿತು. ಆದರೆ ಈ ಜಿಲ್ಲೆಯಲ್ಲಿಯೂ ಕಾಯಿದೆಯ ಲಾಭ ಪಡೆದ ಒಕ್ಕಲುಗಳ ಪ್ರಮಾಣವು ಶೇಕಡ ೨೮ಕ್ಕಿಂತ ಹೆಚ್ಚಾಗಿಲ್ಲವೆಂಬುದು ಫಲಕಾರಿ ಫಲಿತಾಂಶದ ಪೊಳ್ಳುತನವನ್ನು ತೋರಿಸುತ್ತದೆ. ಉಳುವವನೇ ಹೊಲದೊಡೆಯನೆಂಬ ಸಾಮಾಜಿಕ ನ್ಯಾಯದ ಉದ್ದೇಶವಿದ್ದ ಈ ಕಾನೂನು ಒಂದು ವೇಳೆ ಶೇಕಡ ೭೫ರಷ್ಟು ಸಫಲವಾಗಿದ್ದರೂ ದಕ್ಷಿಣ ಕನ್ನಡದ ಗ್ರಾಮೀಣ ಸಾಮಾಜಿಕ ರಚನೆಯಲ್ಲಿ ಆಮೂಲಾಗ್ರ ಬದಲಾವಣೆಗಳಾಗುವ ಸಂಭವವಿತ್ತು. ಇಲ್ಲಿ ಕೆಲವು ಕಡೆ ಎಡಪಂಥೀಯ ರೈತ ಸಂಘಟನೆಯ ಹೋರಾಟ ಪ್ರಬಲವಾಗಿದ್ದಂತೆ ಕಂಡು ಬಂದರೂ, ಒಕ್ಕಲುಗಳು ವರ್ಗ ಸಂಘರ್ಷಕ್ಕೆ ಇಳಿದಿರಲಿಲ್ಲ. ರಾಜಕೀಯ ನಾಯಕತ್ವ ಹಾಗೂ ಅಧಿಕಾರಶಾಹಿತ್ವವು ಹೆಚ್ಚಾಗಿ ಮೇಲ್ಜಾತಿಯವರ ಕೈಯಲ್ಲಿದ್ದುದರಿಂದ ಭೂಮಾಲಿಕರೊಂದಿಗಿನ ಅವರ ಸಂಬಂಧದ ಕೊಂಡಿಗಳು ಇನ್ನೂ ಬಲವಾಗಿದ್ದವು. ಆದ್ದರಿಂದ ರೈತ ಹೋರಾಟದಲ್ಲಿ ರಾಜಿ ಸೂತ್ರಗಳಿಗೆ ಅವಕಾಶ ಹೆಚ್ಚಾಗಿ, ಒಕ್ಕಲುಗಳು ಪರಿಹಾರ

ಧನ ಪಡೆದು ನೆಲವನ್ನು ಬಿಟ್ಟು ಕೊಟ್ಟು ತೃಪ್ತರಾಗುವುದೊ, ಅರ್ಧಭೂಮಿಗೆ ಮಾತ್ರ ಡಿಕ್ಲೆರೇಶನ್ನು ಕೊಟ್ಟು ತೆಪ್ಪಗಿರುವುದೋ ಅಥವಾ ಪರಿಹಾರವೂ ಇಲ್ಲದೆ ಜೀವ ಮಾತ್ರ ಕೈಯಲ್ಲಿ ಹಿಡಿದು ಊರು ಬಿಟ್ಟು ಬಿಡುವುದು ಮುಂತಾದ ಪ್ರಕರಣಗಳೇ ಹೆಚ್ಚಾಗಿ ಸಂಭವಿಸಿದವು. ಹಾಗಾಗಿ ಇದಾವುದಕ್ಕೂ ಒಳಗಾಗದೆ ಉಳಿದಿದ್ದ ಗೇಣಿ ಒಕ್ಕಲುಗಳಷ್ಟೆ ೧೯೭೪ರ ಕಾಯಿದೆಯ ಲಾಭವನ್ನು ಪಡೆಯಲು ಸಾಧ್ಯವಾಯಿತು. ಅವರ ಪ್ರಮಾಣವು ವಾಸ್ತವಿಕವಾಗಿದ್ದ ಒಕ್ಕಲುಗಳ ಸಂಖ್ಯೆಯ ಶೇಕಡಾ ೨೪ರಷ್ಟು ಮಾತ್ರವಾಗಿದ್ದರೂ ಅವರೇ ಸುಮಾರು ಒಂದು ಲಕ್ಷದ ಮೂವತ್ತಾರು ಸಾವಿರ (೧,೩೬,೦೦೦) ಮಂದಿ ಇದ್ದರು. ಆದ್ದರಿಂದಲೇ ಅವರ ಯಶಸ್ಸು ರಾಜ್ಯಾದ್ಯಂತ ಗಮನ ಸೆಳೆದಿತ್ತು. ಸರ್ಕಾರಿ ದಾಖಲೆಗಳಲ್ಲಿ ದಕ್ಷಿಣ ಕನ್ನಡವು ಭೂ ಸುಧಾರಣೆಯ ಯಶಸ್ಸಿನಲ್ಲಿ ಮಂಚೂಣಿಯ ಸ್ಥಾನ ಪಡೆಯಿತು. ಹೀಗಾಗಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬೇರೆಲ್ಲೂ ಆಗದಂತಹ ಬದಲಾವಣೆಯಾಗಿದೆ ಎಂದು ಊಹಿಸಲಾಯಿತು. ಆದರೆ ಅಲ್ಲಿ ಹೇಳಿಕೊಳ್ಳುವಂತಹ ಹೆಚ್ಚಿನ ಬದಲಾವಣೆಗಳು ಆಗಿಲ್ಲ"[೩].

೫.೫. ಶೈಕ್ಷಣಿಕ ಸ್ಥಿತಿ–ಗತಿಗಳ ತೌಲನಿಕ ಅಧ್ಯಯನ

ಮಾನವನ ಬೆಳವಣಿಗೆಗೆ ಮೂಲಭೂತ ಬೇಡಿಕೆಗಳಾದ ಆಹಾರ, ಬಟ್ಟೆ, ವಸತಿಗಳು ಹೇಗೆ ಅಗತ್ಯವೋ ಹಾಗೆಯೇ ಶಿಕ್ಷಣವೂ ಸಹ ಅಷ್ಟೇ ಅಗತ್ಯವಾಗಿದೆ. ಶಿಕ್ಷಣವು ಪ್ರತಿಯೊಬ್ಬ ವ್ಯಕ್ತಿಯ ವ್ಯಕ್ತಿತ್ವವನ್ನು ಸುಶಿಕ್ಷಿತ ಮತ್ತು ಉತ್ತಮ ಸಾಮಾಜಿಕ ಕಳಕಳಿಯನ್ನು ಹೊಂದಿದವರನ್ನಾಗಿ ಮಾಡುವುದಲ್ಲದೆ, ಜವಾಬ್ದಾರಿಯುತವಾದ ಎಚ್ಚರಿಕೆಯನ್ನು ವಹಿಸುವಂತೆ ಮಾಡುತ್ತದೆ. ಆದ್ದರಿಂದ ಶಿಕ್ಷಣವು ಪ್ರತಿಯೊಬ್ಬ ವ್ಯಕ್ತಿಗೂ ಅಗತ್ಯವಾಗಿ ಬೇಕೆ ಬೇಕು. ಇದರಿಂದ ಮಾನವನು ಮತ್ತೊಬ್ಬನೊಡನೆ ಸಮಾನತೆ, ಸಮಾನ ಉದ್ದೇಶ, ಸಹಾನುಭೂತಿ ಸಹಬಾಳ್ವೆ ಸಹಕಾರ ಮನೋಭಾವನೆ ಮೊದಲಾದ ಲಕ್ಷಣಗಳನ್ನು ಮೈಗೂಡಿಸಿಕೊಳ್ಳುತ್ತಾನೆ. ಈ ಮಾನವೀಯ ಗುಣಗಳು ಬೆಳೆಯಬೇಕಾದರೆ ಶಿಕ್ಷಣವು ಅಗತ್ಯ. ಒಂದರ್ಥದಲ್ಲಿ ಹೇಳುವುದಾದರೆ ಉತ್ತಮ ಶಿಕ್ಷಣ ದೊರಕದಿದ್ದ ಪಕ್ಷದಲ್ಲಿ ಸಮಾಜದಲ್ಲಿ ಉತ್ತಮ ಪ್ರಜೆಯಾಗಿ ಬಾಳುವುದಕ್ಕೆ ಸಾಧ್ಯವಿಲ್ಲ. ಸಮಾಜವು ರೂಪಿತವಾಗಿ ಮುಂದುವರೆಯಬೇಕಾದರೆ ಹಲವಾರು ಸೂಕ್ತವಾದ ಕಾನೂನು ನಿಯಮಗಳು ಅಗತ್ಯ. ಅವುಗಳನ್ನು ಅನುಸರಿಸುವುದು ಪಾಲಿಸುವುದು ಅಷ್ಟೇ ಅವಶ್ಯಕವಾದದ್ದು. ಇದನ್ನು ಪರಿಚಯ ಮಾಡಿಕೊಡುವುದೇ ಶಿಕ್ಷಣದ ಹೊಣೆಯಾಗಿರುತ್ತದೆ. ಮಾನವನಿಗೆ ಈ ನಿಯಮಗಳನ್ನು, ಮೌಲ್ಯಗಳನ್ನು ಪರಿಪಾಲಿಸಲು ಆಸಕ್ತಿ ಇರುವುದರಿಂದಲೇ ಸಮಾಜವು ಸ್ಥಾಪನೆಯಾಗಿರುವುದು. ಶಿಕ್ಷಣ ಸಂಸ್ಥೆಗಳು ಸಹ ಇದರಲ್ಲಿ ಹೆಚ್ಚಿನ ಜವಾಬ್ದಾರಿಯನ್ನು ತೆಗೆದುಕೊಂಡಿರುವುದು.

ಶಿಕ್ಷಣದ ನೆರವು ನಿರಂತರವಾದದ್ದು. ವ್ಯಕ್ತಿಯು ಉತ್ತಮ ಶಿಕ್ಷಣದ ಮೂಲಕ ಯೋಗ್ಯವಾದ ಪರಿವರ್ತನೆಯನ್ನು ಹೊಂದಬಲ್ಲನಲ್ಲದೆ ಜ್ಞಾನಾರ್ಜನೆಯನ್ನು ಪಡೆದುಕೊಳ್ಳುತ್ತಾನೆ ಹಾಗೂ ಸಮಾಜದ ಪರಿಸ್ಥಿತಿಯನ್ನು ಅರಿತುಕೊಂಡು ಪ್ರಗತಿ ಸಾಧಿಸುವುದಕ್ಕೆ ಅನುಕೂಲವಾಗುವನು. ಇದರ ಜೊತೆಗೆ ಸಾಮಾಜಿಕ ವ್ಯವಸ್ಥೆಗಳ ಪರಿಚಯ ಉಂಟಾಗುವುದು. ಹೀಗೆ ಶಿಕ್ಷಣಕ್ಕೂ, ಸಮಾಜಕ್ಕೂ ಅನ್ಯೋನ್ಯ ಸಂಬಂಧವನ್ನು ಸ್ವತಃ ಮನಗಂಡಿದ್ದ ಮೈಸೂರು ಸಂಸ್ಥಾನದ ೨೪ನೇ ಅರಸ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ತಮ್ಮ ಸಂಸ್ಥಾನದಲ್ಲಿ ಪಶುಗಳಿಗಿಂತಲೂ ಕೀಳು ಜೀವನ ಸಾಗಿಸುತ್ತಿದ್ದಂತಹ ಬುಡಕಟ್ಟು ಹಾಗೂ ಅಸ್ಪೃಶ್ಯರಿಗೆ ಶಿಕ್ಷಣ ನೀಡಿ ಮುಖ್ಯವಾಹಿನಿಗೆ ತರಲು ಕಂಕಣ ಬದ್ಧರಾದರು.

'ಶಿಕ್ಷಣವೇ ನಮ್ಮೆಲ್ಲರ ಮೂಲಮಂತ್ರವಾಗಬೇಕು' ಎಂದು ಎಚ್ಚರಿಸಿದ ಡಾ. ಬಾಬಾ ಸಾಹೇಬ ಅಂಬೇಡ್ಕರ್ ಅವರು ಮುಂದುವರೆದು ಜನಸಮುದಾಯದ ಉದ್ಧಾರಕ್ಕಾಗಿ ಶಿಕ್ಷಣ, ಹೋರಾಟ ಮತ್ತು ಸಂಘಟನೆ ಎಂಬ ಮೂರು ಮಂತ್ರಗಳನ್ನು ನೀಡಿದರೆ. ಅವರ ಗುರುಗಳಾಗಿದ್ದ ಜ್ಯೋತಿ ಬಾಪುಲೆ ಅವರು 'ದಲಿತರ ಬುಡಕಟ್ಟುಗಳ ಶೋಷಿತರ ಅವನತಿಗೆ ಶಿಕ್ಷಣದ ಅಭಾವವೇ ಕಾರಣ'ವೆಂದು ಹೇಳಿದರು. ಮುಂದುವರೆದು "ಶಿಕ್ಷಣವಿಲ್ಲದ್ದರಿಂದ ಮನುಷ್ಯರಾಗಿದ್ದ ಬುಡಕಟ್ಟು ಜನರು (ಎಲ್ಲರೂ) ಪಶುಗಳಾದರು" ಎಂದು ಹೇಳಿ ಅವರೆಲ್ಲರೂ ಅಗತ್ಯವಾಗಿ ಶಿಕ್ಷಣ ಕಲಿಯಬೇಕೆಂದು ಅಗ್ರಹಿಸಿದ್ದರು. ಆದ್ದರಿಂದಲೇ ಅಂಬೇಡ್ಕರ್ ಅವರು ಅನಕ್ಷರತೆಯ ವಿರುದ್ಧ ಯುದ್ಧವನ್ನೇ ಸಾರಿದರು ಎಂದು ಹೇಳಬಹುದು.

ನಮ್ಮ ದೇಶದಲ್ಲಿನ ಅನಕ್ಷರತೆ, ಅಜ್ಞಾನ, ಬಡತನ, ಆರೋಗ್ಯ, ನೈರ್ಮಲ್ಯ, ಜನಸಂಖ್ಯೆ, ಜಾತೀಯತೆ, ಅನೈತಿಕತೆ, ಸೋಮಾರಿತನದಂತಹ ಹಲವಾರು ಸಮಸ್ಯೆಗಳಿಂದಾಗಿ ಇನ್ನೂ ಪ್ರಗತಿಯನ್ನು ಸಾಧಿಸಲು ಸಾಧ್ಯವಾಗಿಲ್ಲ. ಶಿಕ್ಷಣವು ವ್ಯಕ್ತಿಯಲ್ಲಿ ದೈಹಿಕವಾಗಿ, ಮಾನಸಿಕವಾಗಿ ಹಾಗೂ ಆಧ್ಯಾತ್ಮಿಕವಾಗಿ ಅಡಗಿರುವ ಹಲವಾರು ಅಂಶಗಳನ್ನು ಹೊರಗೆಳೆದು ಮಾನವನನ್ನು ಪರಿಪೂರ್ಣ ವ್ಯಕ್ತಿಯನ್ನಾಗಿ ಮಾಡುತ್ತದೆ. ಆದರೆ ಬೇರೆ ಬೇರೆ ಕಾರಣಗಳಿಂದಾಗಿ ಅದನ್ನು ಎಲ್ಲರಿಗೂ ಪಡೆದುಕೊಳ್ಳಲು ಸಾಧ್ಯವಾಗಿಲ್ಲ. ಶಿಕ್ಷಣವು ಶಾಲೆಗಳಿಂದ ಮಾತ್ರವಲ್ಲದೆ ಪರಸ್ಪರ ಅಂತರ್‌ಕ್ರಿಯೆಗಳಿಂದ, ಸಮೂಹಗಳಿಂದ ಹಾಗೂ ಸಂಸ್ಕೃತಿಗಳಿಂದಲೂ ದೊರಕುತ್ತದೆ. ಇಲ್ಲಿನ ಶಿಕ್ಷಣವು ವ್ಯಕ್ತಿಯಲ್ಲಿ ಮತ್ತು ಸಂಸ್ಕೃತಿಯಲ್ಲಿನ ಬದಲಾವಣೆಗೂ ಕಾರಣವಾಗುತ್ತದೆ. ಇದಕ್ಕೆ ಪೂರಕವಾಗಿ ಸೈನಿಯವರು "Education taken place in the interaction of individuals, Groups and entire culture. Education is the process of interaction resulting in changes in behavior of both the individuals and culture" ಎಂಬುದಾಗಿ ಅಭಿಪ್ರಾಯ ಪಟ್ಟಿದ್ದಾರೆ.

ಹಾಗೆಯೇ ಶಾಲೆಗಳು ಓದು, ಬರಹ ಮತ್ತು ಲೆಕ್ಕಾಚಾರಗಳನ್ನು ಕಲಿಸುವುದು ಮಾತ್ರವಲ್ಲದೆ, ವಿದ್ಯಾರ್ಥಿಗಳಿಗೆ ಸಾಮಾಜಿಕ ಮತ್ತು ಮನರಂಜನೆಯ ಅಗತ್ಯತೆಗಳನ್ನು ಪೂರೈಸುತ್ತವೆ. ಈ ಬಗ್ಗೆ ಕೊಲ್ಮನ್ ಮತ್ತು ಕ್ರೆಸ್ಸಿಯವರು "The schools do much more than teach reading, writing and arithmetic. One of the most important functions of the schools is to provide for students social and recreational needs" ಎಂಬುದಾಗಿ ಅಭಿಪ್ರಾಯಪಟ್ಟಿದ್ದಾರೆ.

ಹಿಂದೆ ಬುಡಕಟ್ಟುಗಳು ತಾವು ನೈಸರ್ಗಿಕ ಸನ್ನಿವೇಶಗಳಲ್ಲಿ, ಅನೌಪಚಾರಿಕವಾಗಿ ಪಡೆಯುತ್ತಿದ್ದ ಜೀವನಾನುಭವದ ಶಿಕ್ಷಣ ಸಾಕ್ಷರತಾ ಶಿಕ್ಷಣಕ್ಕಿಂತ ತೀರ ಭಿನ್ನವಾಗಿದ್ದು, ಅದು ಮೌಖಿಕವಾಗಿ ಸಾಗಿ ಬರುತ್ತಿತ್ತು. ಬೇಟೆ, ಆಹಾರ ಸಂಗ್ರಹಣಾ ವಿಧಾನ, ನಾಟಿ ವೈದ್ಯಪದ್ಧತಿ, ಸ್ವಯಂ ರಕ್ಷಣಾ ಕಲೆ, ಕಾಡಿನ ಪ್ರಾಣಿ, ಪಕ್ಷಿಗಳನ್ನು ಕುರಿತ ಅರಿವು, ತಮ್ಮದೇ ಆದ ಸಂಪ್ರದಾಯದ, ನಂಬಿಕೆ, ನಿಷೇಧಗಳು, ಆಚಾರ-ವಿಚಾರಗಳ ಬಗೆಗಿನ ಶಿಕ್ಷಣ ಅವರಿಗೆ ಅನೌಪಚಾರಿಕವಾಗಿ ದೊರೆಯುತ್ತಿತ್ತು.

ಪ್ರಾರಂಭದಲ್ಲಿ ಬುಡಕಟ್ಟು ಸಮುದಾಯಗಳಲ್ಲಿ ಕಾಣುತ್ತಿದ್ದ ಸಹಜ ಗುಣಗಳಾದ ಅಲೆಮಾರಿತನ, ಅಂಜಿಕೆ, ಬೇರೆಯವರೊಡನೆ ನೇರವಾಗಿ ವ್ಯವಹರಿಸುವ ಸ್ವಭಾವಗಳು ಅವರನ್ನು ಶಿಕ್ಷಣದಿಂದ ವಂಚಿತರಾಗುವಂತೆ ಮಾಡಿದವು. ಅಲ್ಲದೆ ಬುಡಕಟ್ಟು ಮತ್ತು ಇತರೆ ಸಮುದಾಯದವರ ನಡುವೆ

ಇದ್ದ ಭಿನ್ನಾಭಿಪ್ರಾಯಗಳು, ಸಂಕುಚಿತ ಮನೋಭಾವ, ಅಸ್ಪೃಶ್ಯತೆ ಮುಂತಾದವುಗಳು ಇವರ ಸಾಮಾಜಿಕವಾಗಿ, ಶೈಕ್ಷಣಿಕವಾಗಿ ಹಿಂದುಳಿಯಲು ಪ್ರಮುಖ ಕಾರಣಗಳೆನ್ನಬಹುದು. ಕ್ರೈಸ್ತ ಮಿಷನರಿಗಳು ಇಂತಹ ಅವಕೃಪೆಗೆ ಒಳಗಾದ ಬುಡಕಟ್ಟು ಸಮುದಾಯದವರನ್ನು ಮೊದಲಿಗೆ ಗುರುತಿಸಿ ಶಿಕ್ಷಣದ ಬಗೆಗೆ ಅರಿವು ಮೂಡಿಸಿದರು. ನಂತರದಲ್ಲಿ ರಾಷ್ಟ್ರಮಟ್ಟದಲ್ಲೂ ಸಂವಿಧಾನ, ಕೊಠಾರಿ ಶಿಕ್ಷಣ ಆಯೋಗ, ರಾಷ್ಟ್ರೀಯ ಶಿಕ್ಷಣ ನೀತಿ (೧೯೮೬) ಬುಡಕಟ್ಟುಗಳ ಶಿಕ್ಷಣದ ಬೆಳವಣಿಗೆ ಒತ್ತು ನೀಡಿದವು. ಕೇಂದ್ರ ಸರ್ಕಾರದ ನೆರವಿನಿಂದ ಕರ್ನಾಟಕ ರಾಜ್ಯದ ಸಮಾಜ ಕಲ್ಯಾಣ ಇಲಾಖೆ ಶಿಕ್ಷಣಕ್ಕೆ ಸಂಬಂಧಿಸಿದ ಯೋಜನೆಗಳನ್ನು ರೂಪಿಸಿಕೊಂಡಿದೆ. ಆಶ್ರಮ ಶಾಲೆಗಳು, ಉಚಿತ ಮೆಟ್ರಿಕ್ ಪೂರ್ವ ಹಾಸ್ಟೆಲ್‌ಗಳು ಶಾಲಾ ಸಂಕೀರ್ಣಗಳು ಈ ದಿಸೆಯಲ್ಲಿ ಕಾರ್ಯನಿರ್ವಹಿಸುತ್ತಿವೆ. ಉಚಿತ ಪಠ್ಯಪುಸ್ತಕ, ವಸತಿ, ವಿದ್ಯಾರ್ಥಿ ವೇತನ, ವೃತ್ತಿ ಕೋರ್ಸುಗಳಲ್ಲಿ ಮೀಸಲಾತಿ ಸೌಲಭ್ಯವಿದೆ. ಹಲವಾರು ವೃತ್ತಿ ತರಬೇತಿ ಕಾರ್ಯಕ್ರಮಗಳು ಜಾರಿಯಲ್ಲಿವೆ. ಜೊತೆಗೆ ಸರ್ಕಾರೇತರ ಸಂಘ–ಸಂಸ್ಥೆಗಳು, ವಿಶ್ವವಿದ್ಯಾನಿಲಯಗಳು ಬುಡಕಟ್ಟು ಶಿಕ್ಷಣ ಅಭಿವೃದ್ಧಿಗೆ ಶ್ರಮಿಸುತ್ತಿವೆ. ಕೆಲವು ಬುಡಕಟ್ಟಿನವರು ಇವುಗಳ ಪ್ರಯೋಜನ ಪಡೆಯುತ್ತಿದ್ದಾರೆ.

ಶಿಕ್ಷಣದಿಂದ ಬುಡಕಟ್ಟು ಮಕ್ಕಳಿಗೆ ತಮ್ಮ ಹಕ್ಕುಗಳ ಬಗೆಗೆ ಅರಿವುಂಟಾಗುತ್ತದೆ. ಈ ರೀತಿಯ ಶಿಕ್ಷಣದಿಂದ ತಮ್ಮ ಮೂಲ ಸಂಸ್ಕೃತಿಯಿಂದ ದೂರ ಸರಿಯುವ ಸಾಧ್ಯತೆಗಳು ಇವೆ. ಆದರೂ ಇವರ ಅಭಿವೃದ್ಧಿ ಬಗ್ಗೆ ಮಾತನಾಡುವಾಗ ಇವೆಲ್ಲವನ್ನು ಸಕಾರಾತ್ಮಕವಾಗಿಯೇ ಪರಿಗಣಿಸುವ ಅಗತ್ಯವಿದೆ. ಸರ್ಕಾರ ನಿರ್ಮಿಸಿರುವ ವಸತಿ ಶಾಲೆಗಳಲ್ಲಿನ ಶಿಕ್ಷಣ ಹಲವಾರು ಬುಡಕಟ್ಟುಗಳ ಮಕ್ಕಳಿಗೆ ಸಿಗುತ್ತಿಲ್ಲ. ಮಕ್ಕಳು ಪ್ರೌಢಶಾಲೆಯ ಶಿಕ್ಷಣಕ್ಕೆ ಬರುವ ವೇಳೆಗೆ ಇವರ ಸಂಖ್ಯೆ ಇನ್ನೂ ಕಡಿಮೆಯಾಗುತ್ತಿದೆ. ಇದಕ್ಕೆ ಸಂಬಂಧಸಿದ ಕಾರಣಗಳನ್ನು ತಿಳಿಯಬೇಕಿದೆ. ಬೋಧನಾ ವ್ಯವಸ್ಥೆ ಬದಲಾಗಬೇಕೆ? ಅಥವಾ ಹೆಚ್ಚು ವೃತ್ತಿಪರ ಶಿಕ್ಷಣವನ್ನೇ ನೀಡಬೇಕೆ? ಮುಂತಾದವುಗಳ ಬಗೆಗೆ ಚರ್ಚಿಸಬೇಕಿದೆ. ವಸತಿ ಶಾಲೆಗಳಲ್ಲಿ ವ್ಯವಸ್ಥೆ ಅಲ್ಲಿನ ಆಡಳಿತ ವೈಖರಿ, ಪಾಲಕರ ಸಮಸ್ಯೆ ಮುಂತಾದ ವಿಷಯಗಳ ಬಗೆಗೆ ಅಧ್ಯಯನ ಅವಶ್ಯಕತೆ ಇದೆ.


ಶಿಕ್ಷಣದ ಮಹತ್ವವನ್ನು ಮರಾಟಿಗರು ಮತ್ತು ಮರಾಟಿ ನಾಯ್ಕರು ಬಹಳ ಬೇಗನೆ ಅರ್ಥ ಮಾಡಿಕೊಂಡಿದ್ದಾರೆ. ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಶೈಕ್ಷಣಿಕ ಸೌಲಭ್ಯಗಳ ಪ್ರಾರಂಭದ ಸಂದರ್ಭದಲ್ಲಿ ಇವರ ಶೈಕ್ಷಣಿಕ ಮಟ್ಟ ತೀರಾ ಕಡಿಮೆ ಇದ್ದರೂ, ನಂತರದ ದಿನಗಳಲ್ಲಿ ಹೆಚ್ಚಾಗಿ ಶಿಕ್ಷಣದ ಕಡೆಗೆ ಒಲವು ತೋರಿಸುತ್ತಿರುವುದು ಕಂಡು ಬರುತ್ತಿದೆ. ಇವರಲ್ಲಿ ಅನೇಕರು ಉದ್ಯಮ ಶೀಲರಿದ್ದರೂ ಸಾಮಾನ್ಯ ಶಿಕ್ಷಣಕ್ಕೆ ಹೆಚ್ಚು ಒತ್ತು ಕೊಡುವುದರ ಜೊತೆಗೆ ವೃತ್ತಿ ಶಿಕ್ಷಣವನ್ನು ತಮ್ಮ ಮಕ್ಕಳಿಗೆ ನೀಡುತ್ತಿದ್ದಾರೆ. ಇವರ ಆದ್ಯತೆಗಳಲ್ಲಿ ಮಕ್ಕಳಿಗೆ ಶಿಕ್ಷಣ ಕೊಡಿಸುವುದು ಬಹಳ ಮುಖ್ಯವಾದ ಉದ್ದೇಶವಾಗಿದೆ. ಒಟ್ಟಿನಲ್ಲಿ ಯಾವುದೇ ಒಂದು ಸಮುದಾಯದ ಸಾಮಾಜಿಕ–ಆರ್ಥಿಕ ಪ್ರಗತಿಗೆ ಶಿಕ್ಷಣವು ಬಹಳ ಪ್ರಾಮುಖ್ಯವಾಗಿದ್ದು, ಈ ನಿಟ್ಟಿನಲ್ಲಿ ಮರಾಟಿಗರ ಮತ್ತು ಮರಾಟಿ ನಾಯ್ಕರ ವಿಚಾರಗಳನ್ನು ಅಧ್ಯಯನ ಮಾಡಲಾಗಿದ್ದು, ಅವರು ಶಿಕ್ಷಣದ ಬಗ್ಗೆ ಸರ್ಕಾರಿ ಮತ್ತು ಖಾಸಗಿ ಶಾಲಾ – ಕಾಲೇಜುಗಳಿಗೆ ಕಳುಹಿಸಲು, ಕಳುಹಿಸದಿರಲೂ ಕಾರಣಗಳು ಎರಡು ಸಮುದಾಯದ ಅಭಿಪ್ರಾಯಗಳು.

ಕೋಷ್ಟಕ: ೫.೭

ಮರಾಟಿ ನಾಯ್ಕ ಮತ್ತು ಮರಾಟಿ ಸಮುದಾಯದವರ ಕುಟುಂಬ ಸದಸ್ಯರುಗಳ ಶೈಕ್ಷಣಿಕ ಸ್ಥಿತಿಗಳ ವಿವರ

ಸಮುದಾಯಗಳ ಹೆಸರು	ತಾಲೂಕುಗಳು	ಶೈಕ್ಷಣಿಕವಾರು ಹಂಚಿಕೆ										
		ಅನಕ್ಷರತೆ	ಪ್ರಾಥಮಿಕ	ಪ್ರೌಢಶಾಲಾ	ಪದವಿಪೂರ್ವ	ಪದವಿ	ಡಿಪ್ಲೋಮಾ/ವೃತ್ತಿ ಶಿಕ್ಷಣ	ವೈದ್ಯಕೀಯ/ ಪ್ಯಾರಾ ಮೆಡಿಕಲ್	ಇಂಜಿನಿಯರಿಂಗ್	ಸ್ನಾತಕೋತ್ತರ	ಶಿಕ್ಷಕ	ಒಟ್ಟು
ಮರಾಟಿ ನಾಯ್ಕ	ಕುಂದಾಪುರ	೨೮	೮೩	೩೧	೧೮	೨೧	೦೫	೦೦	೦೦	೦೫	೦೦	೧೯೧
	ಉಡುಪಿ	೧೩	೮೦	೪೮	೧೬	೨೬	೦೬	೦೨	೦೨	೧೨	೦೦	೨೦೫
	ಕಾರ್ಕಳ	೧೭	೯೨	೬೯	೨೫	೨೩	೦೫	೦೨	-	-	೦೧	೨೩೪
	ಒಟ್ಟು	೫೮	೨೫೫	೧೪೮	೫೯	೭೦	೧೬	೦೪	೦೨	೧೭	೦೧	೬೩೦
	ಶೇಕಡವಾರು	೦೯.೨೦	೪೦.೪೮	೨೩.೪೯	೦೯.೩೭	೧೧.೧೧	೦೨.೫೪	೦.೬೩	೦.೩೨	೦೨.೭೦	೦.೧೬	೧೦೦
ಮರಾಟಿ	ಕಾರ್ಕಳ ತಾ.	೨೩	೧೭೯	೧೭೪	೮೭	೧೦೩	೧೨	-	೦೫	೦೯	೦೩	೫೯೫
	ಶೇಕಡವಾರು	೦೩.೮೭	೩೦.೦೮	೨೯.೨೪	೧೪.೬೨	೧೭.೩೧	೦೨.೦೨	-	೦.೮೪	೦೧.೫೧	೦.೫೧	೧೦೦

ಆಧಾರ: ಮರಾಟಿ ನಾಯ್ಕ ೧೫೦ ಕುಟುಂಬಗಳು, ಮರಾಟಿ ೧೫೦ ಕುಟುಂಬಗಳ ಸಮೀಕ್ಷೆ, ಪ್ರಾಥಮಿಕ ಮಾಹಿತಿಗಳ ಆಧಾರದಲ್ಲಿ ರಚಿತವಾದ ಕೋಷ್ಟಕ



ಕೋಷಕ ಸಂಖ್ಯೆ ೫.೭ರಲ್ಲಿ ಉಡುಪಿ ಜಿಲ್ಲೆಯಲ್ಲಿ ಮರಾಟಿ ನಾಯ್ಕರ ೧೫೦ ಕುಟುಂಬಗಳ ಸಮೀಕ್ಷೆ ಮಾಡಲಾಗಿದ್ದು. ಈ ಸಮುದಾಯಗಳ ಕುಟುಂಬ ಸದಸ್ಯರುಗಳ ಶೈಕ್ಷಣಿಕ ಸ್ಥಿತಿಗತಿಗಳ ಸಮೀಕ್ಷೆಯ ಪ್ರಕಾರ ಈ ಕೆಳಗಿನ ವಿವರಗಳು ದೊರೆತಿವೆ.

ಉಡುಪಿ ಜಿಲ್ಲೆಯ ೫೮ ಜನ ಅನಕ್ಷರಸ್ಥರು ಅಂದರೆ ಶೇಕಡ ೦೯.೨೦ ರಷ್ಟು ಇದ್ದು, ಇದರಲ್ಲಿ ೨೮ ಜನ ಕುಂದಾಪುರದಲ್ಲಿ, ೧೩ ಜನ ಉಡುಪಿಯಲ್ಲಿ ಹಾಗೂ ೧೭ ಜನ ಕಾರ್ಕಳ ತಾಲೂಕಿನಲ್ಲಿ ಇರುವರು. ೨೫೫ ಜನ ಪ್ರಾಥಮಿಕ ಶಿಕ್ಷಣ ಅಂದರೆ ಶೇಕಡ ೪೦.೪೮ ರಷ್ಟು ಇದ್ದು, ಅದರಲ್ಲಿ ೮೩ ಜನ ಕುಂದಾಪುರ, ೮೦ ಜನ ಉಡುಪಿ ಹಾಗೂ ೯೨ ಜನ ಕಾರ್ಕಳ ತಾಲೂಕಿನಲ್ಲಿ ವಾಸವಾಗಿರುತ್ತಾರೆ. ೧೪೮ ಜನ ಅಂದರೆ ೨೩.೪೯ ರಷ್ಟು ಜನ ಪ್ರೌಢಶಾಲಾ ಶಿಕ್ಷಣ ಪಡೆದವರಾಗಿದ್ದು, ೩೧ ಜನ ಕುಂದಾಪುರ, ೪೮ ಜನ ಉಡುಪಿ ಹಾಗೂ ೬೯ ಜನ ಕಾರ್ಕಳ ತಾಲೂಕಿನವರಾಗಿದ್ದಾರೆ.

ಇನ್ನು ಜಿಲ್ಲೆಯ ೫೯ ಜನ ಅಂದರೆ ಶೇಕಡ ೦೯.೩೭% ರಷ್ಟು ಜನ ಪದವಿಪೂರ್ವ ಶಿಕ್ಷಣ ಮುಗಿಸಿದ್ದು, ೧೮ ಜನ ಕುಂದಾಪುರ, ೧೬ ಜನ ಉಡುಪಿ ಹಾಗೂ ೨೫ ಜನ ಕಾರ್ಕಳ ತಾಲೂಕಿನವರು. ಇನ್ನು ಜಿಲ್ಲೆಯ ೭೦ ಜನ ಅಂದರೆ ಶೇಕಡ ೧೧.೧೧% ರಷ್ಟು ಜನ ಪದವೀಧರರಾಗಿದ್ದು, ಇವರಲ್ಲಿ ೨೧ ಜನ ಕುಂದಾಪುರ, ೨೬ ಜನ ಉಡುಪಿ ಹಾಗೂ ೨೩ ಜನ ಕಾರ್ಕಳ ತಾಲೂಕಿನವರು. ಜಿಲ್ಲೆಯ ೧೬ ಜನ ಅಂದರೆ ಶೇಕಡ ೦೨.೫೪% ರಷ್ಟು ಜನ ಡಿಪ್ಲೋಮಾ ಅಥವಾ ವೃತ್ತಿಶಿಕ್ಷಣ ಪಡೆದಿದ್ದು, ಇದರಲ್ಲಿ ೫ ಜನ ಕುಂದಾಪುರ, ೬ ಜನ ಉಡುಪಿ ೫ ಕಾರ್ಕಳ ತಾಲೂಕಿನವರು.

ಉಡುಪಿ ಜಿಲ್ಲೆಯ ಕಾರ್ಕಳ ತಾಲೂಕಿನಲ್ಲಿ ೫ ಜನ ಇಂಜಿನಿಯರಿಂಗ್ ಮಾಡಿದ್ದು, ಶೇಕಡ ೦.೮೪% ಆಗಿರುತ್ತದೆ. ೯ ಜನ ಸ್ನಾತಕೋತ್ತರರಾಗಿದ್ದು ಶೇಕಡ ೦೧.೫೧% ರಷ್ಟು, ಕಾರ್ಕಳ ತಾಲೂಕಿನಲ್ಲಿ ಶೇಕಡ ೦.೫೧% ರಷ್ಟು ಜನ ಶಿಕ್ಷಕರಾಗಿದ್ದು ೦೩ ಜನರಿದ್ದಾರೆ.

• ಉಡುಪಿ ಜಿಲ್ಲೆಯ ಮರಾಟಿನಾಯ್ಕ ಮತ್ತು ಮರಾಟಿ ಸಮುದಾಯಗಳ ಒಟ್ಟು ೩೦೦ ಕುಟುಂಬಗಳ ಸದಸ್ಯರುಗಳ ಶೈಕ್ಷಣಿಕ ಸ್ಥಿತಿ-ಗತಿಗಳನ್ನು ಹೋಲಿಕೆ ಮಾಡಿದಾಗ ಉಳಿದೆಲ್ಲಾ ಶೈಕ್ಷಣಿಕ ಅರ್ಹತೆಯವಾರು ಹಂಚಿಕೆಯನ್ನು ಪ್ರಾಥಮಿಕ ಶೈಕ್ಷಣಿಕತೆಯನ್ನು ಪಡೆದುಕೊಂಡವರು ಹೆಚ್ಚಾಗಿದ್ದು, ಅನಕ್ಷರಸ್ಥರು ಸ್ವಲ್ಪ ಮಟ್ಟಿಗೆ ಕಂಡು ಬರುತ್ತಾರೆ. ಇವರ ಹೋಲಿಕೆಯಲ್ಲಿ ಅಷ್ಟೇ ಪ್ರಮಾಣದ ಪ್ರೌಢ ಮತ್ತು ಪದವೀಧರರು ಕಂಡು ಬಂದರೆ ವೃತ್ತಿಪರ ಶಿಕ್ಷಣದಲ್ಲಿ ತುಂಬಾ ಕಡಿಮೆ ಸಂಖ್ಯೆಯಲ್ಲಿ ಕಾಣಬಹುದು.

ಭಾಷಾವಾರು ಹಂಚಿಕೆಯ ವಿವರ

ಮರಾಟಿ ನಾಯ್ಕ ಮತ್ತು ಮರಾಟಿ ಸಮುದಾಯದವರು ಹೆಚ್ಚಿನ ಸಂಖ್ಯೆಯಲ್ಲಿ ಮರಾಟಿ ಮಾತೃ ಭಾಷೆಯನ್ನಾಗಿ ಹೊಂದಿದ್ದಾರೆ. ಉಳಿದವರು ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯ ಉತ್ತರ ಭಾಗದಲ್ಲಿ ಮುಖ್ಯವಾಗಿ ಬ್ರಹ್ಮಾವರ ನದಿ ದಾಟಿದ ನಂತರ ಕುಂದಾಪುರ ಕನ್ನಡ ಭಾಷೆಯನ್ನು ಕಾರ್ಕಳ ಮತ್ತು ಉಡುಪಿ ಭಾಗದಲ್ಲಿ ತುಳು ಮಾತನಾಡುವುದನ್ನು ಕ್ಷೇತ್ರಕಾರ್ಯ ಸಂದರ್ಭದಲ್ಲಿ ಕಂಡುಬಂದಿರುತ್ತದೆ.

ಕೆಳಗಿನ ಕೋಷ್ಟಕ ೫.೮ರಲ್ಲಿ ಗಮನಿಸಬೇಕಾದ ಅಂಶವೆಂದರೆ, ಕೆಲವು ತಿಳುವಳಿಕೆದಾರರಿಗೆ ಒಂದಕ್ಕಿಂತ ಹೆಚ್ಚಿನ ಭಾಷೆಗಳು ಗೊತ್ತಿರುತ್ತದೆ. ಅದರಿಂದ ತಿಳುವಳಿಕೆದಾರರ ಒಟ್ಟು ಮೊತ್ತದ ಮಾದರಿಯು ಮೀರಿದೆ. ಉದಾ: ಮರಾಟಿ ಮಾತೃಭಾಷೆಯ-ತಿಳುವಳಿಕೆದಾರರಿಗೂ ಕನ್ನಡ ಮತ್ತಿತ್ತರ ಭಾಷೆ ಗೊತ್ತಿದೆ.


ಅಲ್ಲದೆ, ತಿಳುವಳಿಕೆದಾರರಿಗೆ ಇತರೆ ಕೆಲವು ಭಾಷೆ ಗೊತ್ತಿರುವುದು ಅವರ ಕಲಿಕೆಯ ಗುಣ ಹಾಗೂ ಸಾಮರ್ಥ್ಯವನ್ನು ಸೂಚಿಸುತ್ತದೆ. ಜೊತೆಗೆ ಇತರೆ ಸಮಾಜದೊಂದಿಗೆ ನಿಕಟಸಂಪರ್ಕ, ಸಣ್ಣ-ಪುಟ್ಟ ವ್ಯಾಪಾರ ವಹಿವಾಟುಗಳನ್ನು ನಡೆಸುವಾಗ ಹೆಚ್ಚಿನ ಭಾಷೆಗಳ ಅಗತ್ಯತೆಯು ಅರಿವು ಅದಕ್ಕೆ ಕಾರಣವಾಗಿರುತ್ತದೆ. ಶಿಕ್ಷಣದಿಂದಲೂ ಎರಡು ಸಮುದಾಯದವರು ಬೇರೆ ಬೇರೆ ಭಾಷೆಗಳನ್ನು ಕಲಿತಿದ್ದಾರೆ. ಒಟ್ಟಿನಲ್ಲಿ ಭಾಷೆಯ ಕಲಿಕೆಯ ದೃಷ್ಟಿಯಿಂದ ಅವಲೋಕಿಸಿದಾಗ ತಿಳುವಳಿಕೆದಾರರು ಯಾವುದೇ ಮಡಿವಂತಿಕೆಯನ್ನು ಇಟ್ಟುಕೊಳ್ಳದೆ, ಹೆಚ್ಚಿನವರು ಬಹುಭಾಷಾ-ಪ್ರಿಯರು ಎಂಬುದನ್ನು ತೋರಿಸಿಕೊಡುತ್ತದೆ.

ಕೋಷ್ಟಕ: ೫.೮

ಮರಾಟಿ ನಾಯ್ಕ ಮತ್ತು ಮರಾಟಿ ಸಮುದಾಯಗಳ ತಿಳುವಳಿಕೆದಾರರ ಭಾಷಾವಾರು ವಿವರ

ಸಮುದಾಯಗಳು ಹೆಸರು	ತಾಲೂಕು	ತಿಳಿದಿರುವ ಭಾಷಾವಾರು ಹಂಚಿಕೆ							
		ಮಾತನಾಡಲು ಗೊತ್ತಿರುವ				ಬರೆಯಲು ಮತ್ತು ಓದಲು			
		ಮರಾಠಿ	ಕನ್ನಡ	ಹಿಂದಿ	ಇಂಗ್ಲಿಷ್	ಮರಾಠಿ	ಕನ್ನಡ	ಇಂಗ್ಲೀಷ್	ಹಿಂದಿ
ಮರಾಟಿ ನಾಯ್ಕ	ಕುಂದಾಪುರ	೫೦	೪೮	೦೧	೦೭	ಇಲ್ಲ	೪೪	೦೭	೦೧
	ಉಡುಪಿ	೫೦	೫೦	೦೩	೧೮	ಇಲ್ಲ	೫೦	೦೮	೦೧
	ಕಾರ್ಕಳ	೫೦	೪೪	೦೪	೦೪	ಇಲ್ಲ	೪೬	೦೭	೦೨
	ಒಟ್ಟು	೧೫೦	೧೪೨	೦೮	೨೯	ಇಲ್ಲ	೧೪೦	೨೨	೦೪
ಮರಾಟಿ	ಕಾರ್ಕಳ								
	ಒಟ್ಟು	೧೫೦	೧೫೦	೦೬	೧೯	ಇಲ್ಲ	೧೪೨	೧೯	೦೫

ತಿಳಿದಿರುವ ಭಾಷಾವಾರು ಹಂಚಿಕೆ ಬರೆಯಲು ಮತ್ತು ಓದಲು ಕನ್ನಡ



ಕೋಷ್ಟಕ ಸಂಖ್ಯೆ ೫.೮ರ ಸಮೀಕ್ಷೆಯ ಪ್ರಕಾರ ಮರಾಟಿ ನಾಯ್ಕ ಸಮುದಾಯಕ್ಕೆ ಸೇರಿದ ಉಡುಪಿ ಜಿಲ್ಲೆಯ ಒಟ್ಟು ೧೫೦ ತಿಳುವಳಿಕೆದಾರರಲ್ಲಿ (ಕುಂದಾಪುರ, ಉಡುಪಿ ಹಾಗೂ ಕಾರ್ಕಳ ತಾಲೂಕಿನ ತಲಾ ೫೦ ಜನರಿಗೆ ಜನರಂತೆ ಒಟ್ಟು ೧೫೦) ಮರಾಠಿ ಮಾತನಾಡಲು ತಿಳಿದಿದ್ದು, ಅದರಲ್ಲಿ ಯಾರಿಗೂ ಮರಾಠಿಯನ್ನು ಓದಲು ಮತ್ತು ಬರೆಯಲು ತಿಳಿದಿಲ್ಲ. ಅದರಂತೆ ಜಿಲ್ಲೆಯ ಒಟ್ಟು ೧೪೨ ಮರಾಟಿ ನಾಯ್ಕ ಸಮುದಾಯವರೆಗೆ ಕನ್ನಡ ಮಾತನಾಡಲು ತಿಳಿದಿದ್ದು, ಅದರಲ್ಲಿ ೧೪೦ ಜನರು ಮಾತ್ರ ಕನ್ನಡವನ್ನು ಓದಲು ಬರೆಯಲು ತಿಳಿದಿದ್ದಾರೆ. ತಾಲೂಕುವಾರು ಹೇಳುವುದಾದರೆ ಕುಂದಾಪುರ ೪೮, ಉಡುಪಿಯ ೫೦ ಹಾಗೂ ಕಾರ್ಕಳದ ೪೪ ಮಂದಿಗೆ ಮಾತನಾಡಲು ಗೊತ್ತಿದ್ದು, ಆದರೆ ಕೇವಲ ಕುಂದಾಪುರದ ೪೪, ಉಡುಪಿ ೫೦ ಹಾಗೂ ಕಾರ್ಕಳದ ೪೬ ಜನರಿಗೆ ಕನ್ನಡ ಓದಲು ಮತ್ತು ಬರೆಯಲು ಬರುತ್ತದೆ. ಸಮುದಾಯದ ಒಟ್ಟು ೮ ಮಂದಿಗೆ ಹಿಂದಿ ಮಾತಾಡಲು ತಿಳಿದಿದ್ದು, ಅದರಲ್ಲಿ ಕುಂದಾಪುರದ ೧, ಉಡುಪಿ ೩ ಹಾಗೂ ಕಾರ್ಕಳ ತಾಲೂಕಿನ ೪ ಜನ ಸೇರಿದ್ದಾರೆ. ಅದರಲ್ಲಿ ಕೇವಲ ೪ ಜನ ಹಿಂದಿ ಓದಲು ಹಾಗೂ ಬರೆಯಲು ತಿಳಿದಿದ್ದಾರೆ. ಕುಂದಾಪುರ ಹಾಗೂ ಉಡುಪಿಯ ತಲಾ ಒಂದು ಮತ್ತು ಕಾರ್ಕಳ ತಾಲೂಕಿನ ೨ ಜನ ಒಳಗೊಂಡಿದ್ದಾರೆ. ಇನ್ನು ಇಂಗ್ಲೀಷ್ ಭಾಷೆಯನ್ನು ಮಾತನಾಡಲು ಕುಂದಾಪುರದ ೭, ಉಡುಪಿಯ ೧೮ ಹಾಗೂ ಕಾರ್ಕಳ ತಾಲೂಕಿನ ೪ ಜನರಿಗೆ ಬರುತ್ತಿದ್ದು, ಜಿಲ್ಲೆಯ ಒಟ್ಟು ೨೯ ಜನರಿಗೆ ಇಂಗ್ಲಿಷ್ ಭಾಷೆಯನ್ನು ಮಾತನಾಡಲು ಬರುತ್ತಿದೆ. ಅದರಲ್ಲಿ ಕೆಲವು ಜಿಲ್ಲೆಯ ಒಟ್ಟು ೨೨ ಜನರಿಗೆ ಇಂಗ್ಲೀಷ್ ಓದಲು ಬರೆಯಲು ತಿಳಿದಿದ್ದು, ಕುಂದಾಪುರದ ೭, ಉಡುಪಿ ೮ ಹಾಗೂ ಕಾರ್ಕಳ ತಾಲೂಕಿನ ೭ ಜನ ಸೇರಿದ್ದಾರೆ.

ಉಡುಪಿ ಜಿಲ್ಲೆಯ ಮರಾಟಿ ಸಮುದಾಯದವರ ಭಾಷಾವಾರು ಸಂಖ್ಯೆಯನ್ನು ಹೇಳುವುದಾದರೆ ಒಟ್ಟು ೧೫೦ ತಿಳುವಳಿಕೆದಾರರಲ್ಲಿ ೧೫೦ ಜನರಿಗೆ ಕನ್ನಡ, ೬ ಜನರಿಗೆ ಹಿಂದಿ ಹಾಗೂ ೧೯ ಜನರಿಗೆ ಇಂಗ್ಲೀಷ್ ಮಾತನಾಡಲು ತಿಳಿದಿದ್ದು, ಆದರೆ ಯಾರಿಗೂ ಮರಾಟಿ ಭಾಷೆಯನ್ನು ಓದಲು



ಬರೆಯಲು ತಿಳಿದಿರುವುದಿಲ್ಲ. ಇನ್ನುಳಿದ ೧೪೨ ಜನರಿಗೆ ಕನ್ನಡ, ೫ ಜನ ಹಿಂದಿ ಹಾಗೂ ೧೯ ಜನರಿಗೆ ಇಂಗ್ಲಿಷ್ ಭಾಷೆ ಓದಲು ಹಾಗೂ ಬರೆಯಲು ತಿಳಿದಿದೆ ಎಂದು ಭಾಷಾವಾರು ಮಾಹಿತಿಯ ಸಮೀಕ್ಷೆಯಲ್ಲಿ ವ್ಯಕ್ತವಾಗುತ್ತದೆ.

• ಉಡುಪಿ ಜಿಲ್ಲೆಯ ಮರಾಟಿ ನಾಯ್ಕ ಮತ್ತು ಮರಾಟಿ ಸಮುದಾಯಗಳ ಒಟ್ಟು ೩೦೦ ಕುಟುಂಬಗಳ ಭಾಷಾವಾರು ತಿಳುವಳಿಕೆಯ ಬಗೆಗೆ ಹೋಲಿಕೆ ಮಾಡಿದಾಗ ಎಲ್ಲಾ ಕುಟುಂಬದವರು ಮರಾಠಿ ಭಾಷೆಯನ್ನು ಮಾತನಾಡುತ್ತಾರೆ. ಆದರೆ ಜೊತೆಗೆ ಕನ್ನಡವನ್ನು ಬಹುಸಂಖ್ಯೆಯಲ್ಲಿ ಮಾತಾನಾಡುತ್ತಾರೆ. ಹಿಂದಿ ಹಾಗೂ ಇಂಗ್ಲಿಷ್ ಭಾಷೆಯನ್ನು ಕೆಲವರು ಮಾತ್ರ ಮಾತಾನಾಡುವರಾಗಿದ್ದಾರೆ. ಅಷ್ಟೇ ಅಲ್ಲದೇ ಇವರಿಗೆ ಯಾರಿಗೂ ಮರಾಠಿ ಭಾಷೆಯನ್ನು ಬರೆಯಲು ಮತ್ತು ಓದಲು ಬರುವುದಿಲ್ಲವೆಂದು ಮತ್ತು ಕೆಲವರು ಮಾತ್ರ ಕನ್ನಡವನ್ನು ಹೊರತುಪಡಿಸಿ ಇಂಗ್ಲೀಷ್ ಮತ್ತು ಹಿಂದಿಯಲ್ಲಿ ಬರೆಯುವುದನ್ನು ಕಾಣಬಹುದು.

ಪುರುಷ ಮತ್ತು ಮಹಿಳೆಯರ ನಡುವೆ ಶಿಕ್ಷಣದಲ್ಲಿ ಸಮಾನ ಪ್ರಾಧಾನ್ಯತೆಯ ವಿವರಗಳು

ಆಧುನೀಕರಣ, ನಗರೀಕರಣ ಮತ್ತು ಜಾಗತೀಕರಣದ ಇಂದಿನ ಯುಗದಲ್ಲಿ ಸ್ತ್ರೀ ಮತ್ತು ಪುರುಷರ ನಡುವೆ ಯಾವುದೇ ವಿಚಾರಗಳಲ್ಲಿಯೂ ಹೆಚ್ಚಿನ ವ್ಯತ್ಯಾಸಗಳು ಕಂಡು ಬರುತ್ತಿಲ್ಲ. ಗಂಡು ಮಕ್ಕಳಿಗೆ ಮಾತ್ರ ಉತ್ತಮ ಶಿಕ್ಷಣ ನೀಡಬೇಕೆಂಬ ಮನೋಭಾವನೆ ಇಂದು ಮರೆಯಾಗುತ್ತಿದೆ. ಇತರೆ ಸಮುದಾಯಗಳಂತೆ ಮರಾಟಿ ಮತ್ತು ಮರಾಟಿ ನಾಯ್ಕ ಸಮುದಾಯದವರು ಸ್ತ್ರೀಯರಿಗೆ ಹೆಚ್ಚಿನ ಆದ್ಯತೆ ಇದೀಗ ಕೊಡುತ್ತಿರುವುದು ಕಂಡುಬರುತ್ತಿದೆ. ಆದ್ದರಿಂದ ಶಿಕ್ಷಣದ ವಿಚಾರದಲ್ಲಿ ಈ ಎರಡೂ ಸಮುದಾಯದವರು ಪುರುಷರಂತೆಯೇ ಮಹಿಳೆಯರಿಗೂ ಸಮಾನ ಅವಕಾಶ ನೀಡುತ್ತಿರುವುದು ಕಂಡುಬಂದಿದೆ. ಪುರುಷ ಮತ್ತು ಮಹಿಳೆಯರ ನಡುವೆ ಶಿಕ್ಷಣದ ವಿಚಾರದಲ್ಲಿ ಯಾವ ರೀತಿಯ ಪ್ರಾಶಸ್ತ್ಯ ನೀಡುತ್ತಾರೆ ಮತ್ತು ಅವರು ಸಮಾನ ಪ್ರಾಧಾನ್ಯತೆ ನೀಡಲು ಮತ್ತು ನೀಡದಿರಲು ತಿಳುವಳಿಕೆದಾರರು ನೀಡುವ ವಿವರಣೆಗಳನ್ನು ಕೋಷ್ಟಕ ೫.೯ರ ಮೂಲಕ ತಿಳಿದುಕೊಳ್ಳಬಹುದು.

ಕೋಷ್ಟಕ: ೫.೯

ಪುರುಷ ಮತ್ತು ಮಹಿಳೆಯರ ನಡುವೆ ಶಿಕ್ಷಣದಲ್ಲಿನ ಸಮಾನ ಪ್ರಾಧಾನ್ಯತೆಯ ವಿವರಗಳು

ಸಮುದಾಯದ ಹೆಸರು	ತಾಲೂಕುಗಳು	ಪ್ರಾಧಾನ್ಯತೆ ನೀಡುವ ವಿಷಯ				ಒಟ್ಟು
		ನೀಡುತ್ತೇವೆ	ಶೇಕಡವಾರು	ನೀಡುವುದಿಲ್ಲ	ಶೇಕಡವಾರು	
ಮಾರಾಟಿ ನಾಯ್ಕ	ಕುಂದಾಪುರ	೪೧	೨೭.೩೩	೦೯	೦೬.೦೦	೫೦
	ಉಡುಪಿ	೪೬	೩೦.೬೭	೦೪	೦೨.೬೭	೫೦
	ಕಾರ್ಕಳ	೪೭	೩೧.೩೩	೦೩	೦೨.೦೦	೫೦
	ಒಟ್ಟು	೧೩೪	೮೯.೩೩	೧೬	೧೦.೬೭	೧೫೦
ಮರಾಟಿ	ಕಾರ್ಕಳ ತಾಲೂಕು					
	ಒಟ್ಟು	೧೪೧	೯೪.೦೦	೦೯	೦೬.೦೦	೧೦೦

ಕೋಷ್ಟಕ ಸಂಖ್ಯೆ ೫.೯ರಲ್ಲಿ ತಿಳುವಳಿಕೆದಾರರಲ್ಲಿ ಪುರುಷ ಮತ್ತು ಮಹಿಳೆಯರ ಶಿಕ್ಷಣ ವಿಚಾರದಲ್ಲಿ ಸಮಾನ ಪ್ರಾಧ್ಯಾನ್ಯತೆಯ ಬಗ್ಗೆ ಮಾಹಿತಿ ಪಡೆದಾಗ, ಅದರ ಪ್ರಕಾರ ಕುಂದಾಪುರ, ಉಡುಪಿ, ಕಾರ್ಕಳ ತಾಲೂಕಿನಲ್ಲಿ ಬರುವ ಮರಾಟಿ ನಾಯ್ಕ ಸಮುದಾಯದಲ್ಲಿ ಒಟ್ಟು ೧೩೪ (೮೯.೩೩) ರಷ್ಟು ಸಮುದಾಯದವರು ಪುರುಷ ಮತ್ತು ಮಹಿಳೆಯ ಶಿಕ್ಷಣ ವಿಚಾರದಲ್ಲಿ ಸಮಾನ ಪ್ರಾಧಾನ್ಯತೆ ನೀಡುತ್ತಿರುವುದು ಕಂಡುಬರುತ್ತದೆ. ಉಳಿದ ಒಟ್ಟು ೧೬ (೧೦.೬೭) ರಷ್ಟು ಸಮುದಾಯದವರು ಶಿಕ್ಷಣ ವಿಚಾರದಲ್ಲಿ ಸಮಾನ ಪ್ರಾಧಾನ್ಯತೆ ನೀಡುತ್ತಿಲ್ಲವೆಂಬ ಅಂಶ ಬೆಳಕಿಗೆ ಬರುತ್ತದೆ.

ಮರಾಟಿ ಸಮುದಾಯದಲ್ಲಿ ಶಿಕ್ಷಣ ವಿಚಾರದಲ್ಲಿ ಪುರುಷ ಮತ್ತು ಮಹಿಳೆಯರ ಸಮಾನ ಪ್ರಾಧಾನ್ಯತೆಯ ಬಗ್ಗೆ ಅಧ್ಯಯನ ಮಾಡಿದರೆ ಒಟ್ಟು ೧೪೧ (೯೪%) ರಷ್ಟು ಪುರುಷ ಮತ್ತು ಮಹಿಳೆಯರು ಶಿಕ್ಷಣದ ಸಮಾನ ಪ್ರಾಧಾನ್ಯತೆಯನ್ನು ನೀಡುತ್ತಿರುವುದು ತಿಳಿದುಬಂದಿದೆ. ಉಳಿದ ಒಟ್ಟು ೦೯ (೬%) ರಷ್ಟು ಸಮುದಾಯದವರು ಶಿಕ್ಷಣ ವಿಚಾರದಲ್ಲಿ ಸಮಾನ ಪ್ರಾಧಾನ್ಯತೆ ನೀಡುತ್ತಿಲ್ಲ ಎಂಬುದು ತಿಳಿಯುತ್ತದೆ.

• ಉಡುಪಿ ಜಿಲ್ಲೆಯ ಮರಾಟಿ ನಾಯ್ಕ ಮತ್ತು ಮರಾಟಿ ಸಮುದಾಯಗಳ ಒಟ್ಟು ೩೦೦ ಕುಟುಂಬಗಳ ಪುರುಷ ಮತ್ತು ಮಹಿಳೆಯರ ಶಿಕ್ಷಣ ಸಮಾನತೆ ಕುರಿತು ತೌಲನಿಕವಾಗಿ ನೋಡಿದಾಗ ಗಂಡು ಮತ್ತು ಹೆಣ್ಣು ಇಬ್ಬರಿಗೂ ಶಿಕ್ಷಣ ಬೇಕು ಈ ವಿಚಾರದಲ್ಲಿ ಪ್ರಾಧ್ಯಾನ್ಯತೆ ನೀಡುತ್ತೇವೆಂದು ತಿಳಿಸಿದ್ದಾರೆ. ಬೆರಳೆಣಿಕೆಯಷ್ಟು ಕುಟುಂಬಗಳು ಪಾಧಾನ್ಯತೆ ನೀಡುವುದಿಲ್ಲ ಎಂದು ಹೇಳಿರುವುದು ಕಂಡುಬರುತ್ತದೆ.

ಕೋಷ್ಟಕ: ೫.೧೧.

ಪುರುಷ ಮತ್ತು ಮಹಿಳೆಯರ ಶಿಕ್ಷಣ ವಿಚಾರದಲ್ಲಿ ತಿಳುವಳಿಕೆದಾರರು ಸಮಾನ ಪ್ರಾಧಾನ್ಯತೆ ನೀಡಲು ಮತ್ತು ನೀಡದಿರಲು ಕಾರಣಗಳು

ಸಮುದಾಯದ ಹೆಸರು	ತಾಲೂಕು	ಸಮಾನ ಪ್ರಾಧಾನ್ಯತೆ ನೀಡಲು ಕಾರಣಗಳ ಹಂಚಿಕೆ					ಸಮಾನ ಪ್ರಾಧಾನ್ಯತೆ ನೀಡದಿರಲೂ ಕಾರಣಗಳ ಹಂಚಿಕೆ				
		ಜೀವನದಲ್ಲಿ ಸಮಸ್ಯೆ	ಉತ್ತಮ ಜೀವನಕ್ಕಾಗಿ	ಜ್ಞಾನಾರ್ಜನೆಗಾಗಿ	ಸ್ವಾವಲಂಬಿ	ಒಟ್ಟು	ದೂರದ ಊರಿಗೆ ಅಂಜಿಕೆ	ಹೆಚ್ಚಿನ ಶಿಕ್ಷಣ ಅನಗತ್ಯ	ಮದುವೆ ಮಾಡಿಕೊಡುವುದರಿಂದ	ಒಟ್ಟು	
ಮರಾಟಿ ನಾಯ್ಕ	ಕುಂದಾಪುರ	೧೪	೧೪	೦೪	೦೯	೪೧	೦೩	೦೨	೦೪	೦೯	೫೦
	ಉಡುಪಿ	೨೧	೧೧	೧೦	೦೪	೪೬	೦೨	೦೧	೦೧	೦೪	೫೦
	ಕಾರ್ಕಳ	೧೩	೧೫	೧೧	೦೮	೪೭	೦೨	೦೦	೦೧	೦೩	೫೦
	ಒಟ್ಟು	೪೮	೪೦	೨೫	೨೧	೧೩೪	೦೭	೦೩	೦೬	೧೬	೧೫೦
	ಶೇಕಡವಾರು	೩೨.೦೦	೨೬.೬೭	೧೬.೬೬	೧೪.೦೦	೮೯.೩೩	೦೪.೬೭	೦೨.೦೦	೦೪.೦೦	೧೦.೬೭	೧೦೦
ಮರಾಟಿ	ಕಾರ್ಕಳ ತಾಲೂಕು										
	ಒಟ್ಟು	೩೩	೫೨	೧೭	೩೯	೧೪೧	೦೬	೦೨	೦೧	೦೯	೧೫೦
	ಶೇಕಡವಾರು	೨೨.೦೦	೩೪.೬೭	೧೧.೩೩	೨೬.೦೦	೯೪.೦೦	೦೪.೦೦	೦೧.೩೩	೦೦.೬೭	೦೬.೦೦	೧೦೦

ಕೋಷ್ಟಕ ಸಂಖ್ಯೆ ೫.೧೦ರಲ್ಲಿ ಪುರುಷ ಮತ್ತು ಮಹಿಳೆಯರ ಶಿಕ್ಷಣ ವಿಚಾರದಲ್ಲಿ ತಿಳುವಳಿಕೆದಾರರು ಸಮಾನ ಪ್ರಾಧಾನ್ಯತೆ ನೀಡಲು ಮತ್ತು ನೀಡದಿರಲು ಕಾರಣಗಳನ್ನು ನೋಡಬಹುದಾಗಿದೆ. ಅದರಂತೆ ಕುಂದಾಪುರ, ಉಡುಪಿ, ಕಾರ್ಕಳ ತಾಲೂಕುಗಳ ವ್ಯಾಪ್ತಿಯಲ್ಲಿ ಬರುವ ಮರಾಟಿ ನಾಯ್ಕ ಸಮುದಾಯದಲ್ಲಿ ಎರಡು ರೀತಿಯ ಧೋರಣೆಗಳು ಇರುವುದನ್ನು ನೋಡಬಹುದಾಗಿದೆ. ಒಂದು ಸಮಾನತೆ ಮತ್ತು ಅಸಮಾನತೆ. ಸಮಾನ ಪ್ರಾಧಾನ್ಯತೆ ಧೋರಣೆಯ ಅಧ್ಯಯನ ಮಾಡಿದಾಗ ಕುಂದಾಪುರ, ಉಡುಪಿ, ಕಾರ್ಕಳ ತಾಲೂಕುಗಳ ವ್ಯಾಪ್ತಿಯಲ್ಲಿ ಸಮೀಕ್ಷೆಗೊಳಪಟ್ಟ ಮರಾಟಿ ನಾಯ್ಕ ಸಮುದಾಯದಲ್ಲಿ ಒಟ್ಟು ೧೫೦ ಕುಟುಂಬದಲ್ಲಿ ೧೩೪ (೮೯.೩೩%) ಕುಟುಂಬದವರು ಸಮಾನ ಪ್ರಾಧಾನ್ಯತೆಯನ್ನು ಮಹಿಳೆ ಮತ್ತು ಪುರುಷರಿಗೆ ಶಿಕ್ಷಣ ನೀಡುತ್ತಿರುವುದು ಕಂಡುಬಂದರೆ, ೧೬ (೧೦.೬೭%) ಮರಾಟಿ ನಾಯ್ಕ ಕುಟುಂಬಗಳು ಪುರುಷ ಮತ್ತು ಮಹಿಳೆಯರ ಶಿಕ್ಷಣ ವಿಚಾರದಲ್ಲಿ ಸಮಾನತೆ ನೀಡುವುದಿಲ್ಲ ಎಂದು ಅಭಿಪ್ರಾಯ ವ್ಯಕ್ತಪಡಿಸಿವೆ. ಪುರುಷ ಮತ್ತು ಮಹಿಳೆ ಶಿಕ್ಷಣದಲ್ಲಿ ಸಮಾನ ಪ್ರಾಧಾನ್ಯತೆಯನ್ನು ಬೆಂಬಲಿಸಿದ ೧೩೪ ಕುಟುಂಬದ ಮರಾಟಿ ನಾಯ್ಕ ಸಮುದಾಯದವರು ನೀಡಿರುವ ಬಗೆ ಅಧ್ಯಯನ ಮಾಡಿದಾಗ ಜೀವನದಲ್ಲಿಯ ಸಮಸ್ಯೆಗಳನ್ನು ಎದುರಿಸಲು ಶಿಕ್ಷಣ ಅವಶ್ಯ ಎಂದು ಒಟ್ಟು ೪೮ (೩೨%) ರಷ್ಟು ಜನರು ಅಭಿಪ್ರಾಯ ನೀಡಿದರೆ, ಉತ್ತಮ ಜೀವನಕ್ಕಾಗಿ ಒಟ್ಟು ೪೦ (೨೬.೬೭%) ಮಂದಿ, ಜಾನ್ನಾರ್ಜನೆಗಾಗಿ ಒಟ್ಟು ೨೫ (೧೬.೬೬%) ಮತ್ತು ಸ್ವಾವಲಂಬಿಯಾಗಲು ಒಟ್ಟು ೨೧ (೧೪%) ರಷ್ಟು ಕುಟುಂಬಗಳು ಪುರುಷರಿಗೆ ಮತ್ತು ಮಹಿಳೆಯರಿಗೆ ಶಿಕ್ಷಣ ನೀಡಬೇಕು ಎಂದು ಹೇಳಿಕೆ ನೀಡಿರುವುದು ಕಂಡುಬರುತ್ತದೆ.

ಪುರುಷ ಮತ್ತು ಮಹಿಳೆಯರ ಶಿಕ್ಷಣಕ್ಕೆ ಸಮಾನ ಪ್ರಾಧಾನ್ಯತೆಯನ್ನು ನೀಡದಿರಲು ಕಾರಣ ಕೇಳಿದಾಗ ೧೬ ಮರಾಟಿ ನಾಯ್ಕ ಕುಟುಂಬಗಳು ಶಿಕ್ಷಣ ಪಡೆಯಲು ದೂರದ ಊರಿಗೆ ಹೋಗುವ ಅಂಜಿಕೆಯ ಕಾರಣದಿಂದ ಒಟ್ಟು ೦೭ (೦೪.೬೭%) ರಷ್ಟು ಜನರು, ಹೆಚ್ಚಿನ ಶಿಕ್ಷಣ ಅನಗತ್ಯವೆಂಬ ಕಾರಣದಿಂದ ಒಟ್ಟು ೦೩ (೦೨%) ಕುಟುಂಬಗಳು ಹಾಗೂ ಮದುವೆ ಮಾಡಿಕೊಡುವ ಕಾರಣದಿಂದ ಒಟ್ಟು ೦೬ (೦೪.೦೦%) ರಷ್ಟು ಕುಟುಂಬಗಳು ಶಿಕ್ಷಣಕ್ಕೆ ಸಮಾನ ಪ್ರಾಧಾನ್ಯತೆ ನೀಡದಿರಲು ಬಯಸಿವೆ.

ಇದೆ ವಿಷಯದ ಬಗ್ಗೆ ಮರಾಟಿ ಸಮುದಾಯದ ಒಟ್ಟು ೧೫೦ ಕುಟುಂಬಗಳಲ್ಲಿ ಕೇಳಿದಾಗ ಒಟ್ಟು ೧೪೧ (೯೪%) ರಷ್ಟು ಶಿಕ್ಷಣದಲ್ಲಿ ಸಮಾನತೆ ನೀಡುವ ಬಗೆಗೆ ತಿಳಿಸಿದ್ದಾರೆ. ಇದಕ್ಕೆ ಅವರಲ್ಲಿ ಕಾರಣಗಳನ್ನು ಕೇಳಿದಾಗ ಜೀವನದಲ್ಲಿನ ಸಮಸ್ಯೆ ಎದುರಿಸಲು ಒಟ್ಟು ೩೩ (೨೨%) ರಷ್ಟು ಉತ್ತಮ ಜೀವನಕ್ಕಾಗಿ ಒಟ್ಟು ೫೨ (೩೪.೬೭%) ರಷ್ಟು, ಜ್ಞಾನಾರ್ಜನೆಗೆ ಒಟ್ಟು ೧೭ (೧೧.೩೩%) ರಷ್ಟು, ಸ್ವಾವಲಂಬಿಯಾಗುವ ಉದ್ದೇಶದಿಂದ ಒಟ್ಟು ೩೯ (೨೬%) ಜನ, ಪುರುಷ ಮತ್ತು ಮಹಿಳೆಯ ಶಿಕ್ಷಣಕ್ಕೆ ಸಮಾನ ಪ್ರಾಧಾನ್ಯತೆ ನೀಡಿರುವುದು ಕಂಡುಬಂದಿದೆ. ಒಟ್ಟು ೧೫೦ ಮರಾಟಿ ಸಮುದಾಯದಲ್ಲಿ ೯ (೬%) ರಷ್ಟು ಕುಟುಂಬಗಳು ಸಮಾನ ಪ್ರಾಧಾನ್ಯತೆ ನಿರಾಕರಿಸಿವೆ. ಅದರಕ್ಕೆ ಕಾರಣಗಳನ್ನು ಕೇಳಿದಾಗ ದೂರದ ಊರಿಗೆ ಹೋಗಲು ಅಂಜಿಕೆ ಎಂದು ೦೬ (೦೪%) ಕಾರಣ ತಿಳಿಸಿದರೆ, ಹೆಚ್ಚಿನ ಶಿಕ್ಷಣ ಅನಗತ್ಯವೆಂದು ಒಟ್ಟು ೦೨ (೧.೩೩%) ಮತ್ತು ಮದುವೆ ಮಾಡಿಕೊಡುವುದರಿಂದ ೧

(೦೦.೬೭) ರಷ್ಟು ಒಟ್ಟು ೦೯ (೬.೦೦%) ರಷ್ಟು ಮರಾಟಿ ಸಮುದಾಯದವರು ಸಮಾನ ಪ್ರಾಧಾನ್ಯತೆಯನ್ನು ಪುರುಷ ಮತ್ತು ಮಹಿಳೆಯರ ಶಿಕ್ಷಣಕ್ಕೆ ನೀಡದಿರುವುದು ಕಂಡುಬರುತ್ತದೆ.

• ಉಡುಪಿ ಜಿಲ್ಲೆಯ ಮರಾಟಿ ನಾಯ್ಕ ಮತ್ತು ಮರಾಟಿ ಸಮುದಾಯಗಳ ಒಟ್ಟು ೩೦೦ ಕುಟುಂಬಗಳ ಪುರುಷ ಮತ್ತು ಮಹಿಳೆಯರ ಶಿಕ್ಷಣ ವಿಚಾರದಲ್ಲಿ ಸಮಾನ ಪ್ರಾಧಾನ್ಯತೆ ನೀಡಲು ಮತ್ತು ನೀಡದಿರಲು ಕಾರಣಗಳನ್ನು ಗಮನಿಸಿದಾಗ ಜೀವನದಲ್ಲಿ ಬರುವ ಸಮಸ್ಯೆಗಳನ್ನು ಮತ್ತು ಉತ್ತಮ ಜೀವನ ನಡೆಸುವುದಕ್ಕೆ ಶಿಕ್ಷಣ ಬೇಕು ಎಂಬ ಕಾರಣಗಳೇ ಹೆಚ್ಚಾಗಿರುವುದನ್ನು ಈ ಎರಡು ಸಮುದಾಯಗಳಲ್ಲಿ ಕಾಣಬಹುದು. ಜ್ಞಾನಾರ್ಜನೆ ಮತ್ತು ಸ್ವಾವಲಂಬಿ ಜೀವನಕ್ಕೆ ಕಡಿಮೆ ಪ್ರಾಧಾನ್ಯತೆ ಕೊಟ್ಟಿರುವುದು ಕಂಡುಬರುತ್ತದೆ. ಪ್ರಾಧಾನ್ಯತೆ ನೀಡದಿರಲು ಬೆರಳೆಣಿಕೆಯಷ್ಟು ಕುಟುಂಬಗಳು ಅಭಿಪ್ರಾಯ ನೀಡಿವೆ.

ತಿಳುವಳಿಕೆದಾರರ ಮಕ್ಕಳ ಶಾಲಾ ಕಾಲೇಜಿನ ವಿವರ

ಮರಾಟಿ ಮತ್ತು ಮರಾಟಿ ನಾಯ್ಕ ಸಮುದಾಯದವರು ಇತ್ತೀಚೆಗೆ ಶಿಕ್ಷಣಕ್ಕೆ ಒತ್ತು ಕೊಡುತ್ತಿದ್ದು, ತಮ್ಮ ಮಕ್ಕಳನ್ನು ಉತ್ತಮವಾದ ಶಾಲಾ ಕಾಲೇಜುಗಳಲ್ಲಿ ಓದಿಸಲು ಇಚ್ಛೆ ಪಡುತ್ತಿರುವುದು ಕಂಡುಬರುತ್ತದೆ. ಈ ಎರಡೂ ಸಮುದಾಯದವರು ಹೆಣ್ಣು ಮಕ್ಕಳ ವಿವಾಹಕ್ಕೆ ಪ್ರಥಮ ಪ್ರಾಶಸ್ತ್ಯನೀಡಿದರೆ, ಎರಡನೇ ಪ್ರಾಶಸ್ತ್ಯವನ್ನು ಶಿಕ್ಷಣಕ್ಕೆ ಕೊಡುತ್ತಿರುವುದನ್ನು ಗಮನಿಸಿದರೆ ಸಮುದಾಯದವರ ಸಾಮಾಜಿಕ ಜವಾಬ್ದಾರಿಯನ್ನು ತೋರಿಸಿ ಕೊಡುತ್ತಿದೆ. ಪ್ರಸ್ತುತ ಅಧ್ಯಯನದಲ್ಲಿ ಎರಡೂ ಸಮುದಾಯದ ತಿಳುವಳಿಕೆದಾರರು ತಮ್ಮ ಮಕ್ಕಳನ್ನು ಯಾವ ಶಾಲೆ-ಕಾಲೇಜುಗಳಲ್ಲಿ ಓದಿಸುತ್ತಾರೆ. ಮತ್ತು ಓದಿಸಲು ಕಾರಣಗಳೇನು ಎಂಬುದರ ಬಗ್ಗೆ ಮಾಹಿತಿ ಸಂಗ್ರಹಿಸಲಾಗಿದ್ದು, ಅದರ ವಿವರಗಳನ್ನು ಕೋಷ್ಟಕ ಸಂಖ್ಯೆ ೫.೧೧ರಲ್ಲಿ ನೋಡಬಹುದು.

ಕೋಷ್ಟಕ: ೫.೧೧

ತಿಳುವಳಿಕೆದಾರರ ಮಕ್ಕಳ ಶಾಲಾ ಕಾಲೇಜಿನ ವಿವರ

ಸಮುದಾಯದ ಹೆಸರು	ತಾಲೂಕು	ಸರ್ಕಾರಿ ಶಾಲೆ-ಕಾಲೇಜುಗಳಿಗೆ ಕಳುಹಿಸುವವರು		ಖಾಸಗಿ ಶಾಲಾ -ಕಾಲೇಜುಗಳಿಗೆ ಕಳುಹಿಸುವವರು		ಒಟ್ಟು
		ಸಂಖ್ಯೆ	ಶೇಕಡಾ	ಸಂಖ್ಯೆ	ಶೇಕಡಾ	
ಮರಾಟಿ ನಾಯ್ಕ	ಕುಂದಾಪುರ	೪೩	೨೮.೬೭	೦೭	೦೪.೬೭	೫೦
	ಉಡುಪಿ	೨೭	೧೮.೦೦	೨೩	೧೫.೩೩	೫೦
	ಕಾರ್ಕಳ	೩೫	೨೩.೩೩	೧೫	೧೦.೦೦	೫೦
	ಒಟ್ಟು	೧೦೫	೭೦.೦೦	೪೫	೩೦.೦೦	೧೫೦/೧೦೦

ಮರಾಟಿ	ಕಾರ್ಕಳ					
	ಒಟ್ಟು	೧೧೯	೭೯.೩೩	೩೧	೨೦.೬೭	೧೫೦/೧೦೦

೫.೧೧ರ ಕೋಷ್ಟಕದಲ್ಲಿ ಸಮೀಕ್ಷೆಗೊಳಪಟ್ಟ ತಿಳುವಳಿಕೆದಾರರ ಮಾಹಿತಿಯಲ್ಲಿ ಕುಂದಾಪುರ, ಉಡುಪಿ, ಕಾರ್ಕಳ ತಾಲೂಕುಗಳ ವ್ಯಾಪ್ತಿಯಲ್ಲಿ ಬರುವ ೧೫೦ ಮರಾಟಿ ನಾಯ್ಕ ಸಮುದಾಯದಲ್ಲಿ ೧೦೫ (೭೦%) ಕುಟುಂಬಗಳು ತಮ್ಮ ಮಕ್ಕಳನ್ನು ಸರ್ಕಾರಿ ಶಾಲೆ-ಕಾಲೇಜುಗಳಿಗೆ ಕಳುಹಿಸಿದರೆ, ಉಳಿದ ೪೫ ಕುಟುಂಬ ಶೇಕಡಾ (೩೦%) ರಷ್ಟು ಮಂದಿ ತಮ್ಮ ಮಕ್ಕಳನ್ನು ಖಾಸಗಿ ಶಾಲೆ - ಕಾಲೇಜಿಗೆ ಕಳುಹಿಸಿರುವುದು ಕಂಡು ಬರುತ್ತದೆ. ಕುಂದಾಪುರದಲ್ಲಿ ೨೮.೬೭% ಶೇಕಡಾ, ಉಡುಪಿಯಲ್ಲಿ ಶೇಕಡಾ ೧೮% ಮತ್ತು ಕಾರ್ಕಳದಲ್ಲಿ ಶೇಕಡಾ ೨೩.೩೩ ದಷ್ಟು ಮರಾಟಿ ನಾಯ್ಕ ಸಮುದಾಯದವರು ಸರಕಾರಿ ಶಾಲಾ - ಕಾಲೇಜುಗಳಿಗೆ ತಮ್ಮ ಮಕ್ಕಳನ್ನು ಕಳುಹಿಸುತ್ತಿರುವುದು ಕಂಡುಬಂದಿದೆ. ಕುಂದಾಪುರದಲ್ಲಿ ೦೪.೬೭%, ಉಡುಪಿಯಲ್ಲಿ ೧೫.೩೩% ಮತ್ತು ಕಾರ್ಕಳದಲ್ಲಿ ೧೦% ರಷ್ಟು ಮರಾಟಿ ನಾಯ್ಕ ಸಮುದಾಯದವರು ತಮ್ಮ ಮಕ್ಕಳನ್ನು ಖಾಸಗಿ ಶಾಲಾ - ಕಾಲೇಜುಗಳಿಗೆ ಕಳುಹಿಸಿರುವುದು ತಿಳಿದು ಬರುತ್ತದೆ.

ಮರಾಟಿ ಸಮುದಾಯದ ೧೫೦ ಕುಟುಂಬಗಳಲ್ಲಿ ೧೧೯ ಕುಟುಂಬದವರು ಅಂದರೆ ಶೇಕಡಾ ೭೯.೩೩% ಜನ ಸರಕಾರಿ ಶಾಲೆ-ಕಾಲೇಜುಗಳೀಗೆ ತಮ್ಮ ಮಕ್ಕಳನ್ನು ಕಳುಹಿಸಿದರೆ, ಉಳಿದ ೩೧ ಕುಟುಂಬಗಳು ಅಂದರೆ ೨೦.೬೭% ತಮ್ಮ ಮಕ್ಕಳನ್ನು ಖಾಸಗಿ ಶಾಲಾ - ಕಾಲೇಜುಗಳಿಗೆ ಕಳುಹಿಸಿರುವುದು ಕಂಡುಬಂದಿದೆ.

• ಉಡುಪಿ ಜಿಲ್ಲೆಯ ಮರಾಟಿ ನಾಯ್ಕ ಮತ್ತು ಮರಾಟಿ ಸಮುದಾಯಗಳ ಒಟ್ಟು ೩೦೦ ಕುಟುಂಬಗಳು ಸರ್ಕಾರಿ ಶಾಲಾ - ಕಾಲೇಜುಗಳಿಗೆ ಕಳುಹಿಸುವವರು ಮತ್ತು ಖಾಸಗಿ ಶಾಲಾ - ಕಾಲೇಜುಗಳಿಗೆ ಕಳುಹಿಸುವವರನ್ನು ತೌಲನಿಕವಾಗಿ ನೋಡಿದಾಗ ಎರಡು ಸಮುದಾಯಗಳಲ್ಲಿ ಸರಕಾರಿ ಶಾಲಾ - ಕಾಲೇಜುಗಳಿಗೆ ಕಳುಹಿಸುವವರು ಹೆಚ್ಚಿನ ಪ್ರಮಾಣಲ್ಲಿದ್ದು, ಖಾಸಗಿ ಶಾಲಾ - ಕಾಲೇಜುಗಳಿಗೆ ಕಳುಹಿಸುವವರ ಸಂಖ್ಯೆ ತುಂಬಾ ಕಡಿಮೆ ಪ್ರಮಾಣದಲ್ಲಿದೆ ಎಂಬುದನ್ನು ಕಾಣಬಹುದು.

ಕೋಷ್ಟಕ: ೫.೧೨

ತಿಳುವಳಿಕೆದಾರರ ಮಕ್ಕಳ ಶಿಕ್ಷಣಕ್ಕಾಗಿ ಸರಕಾರಿ ಹಾಗೂ ಖಾಸಗಿ ಶಾಲಾ-ಕಾಲೇಜಿಗೆ ಕಳುಹಿಸಲು ಕಾರಣಗಳು

ಸಮುದಾಯದ ಹೆಸರು	ತಾಲೂಕು	ಶಾಲಾ-ಕಾಲೇಜುಗಳಿಗೆ ಸೇರಿಸಲು ಕಾರಣಗಳ ಹಂಚಿಕೆ									
		ಸರಕಾರಿ ಶಾಲೆಗೆ					ಖಾಸಗಿ ಶಾಲೆಗೆ				
		ಕಡಿಮೆ ಶುಲ್ಕ	ಉಚಿತ ಶಿಕ್ಷಣ	ಉತ್ತಮ ಭೋಧನ	ಮನೆಗೆ ಹತ್ತಿರ	ಒಟ್ಟು	ಉತ್ತಮ ಭವಿಷ್ಯಕ್ಕಾಗಿ	ಮನೆಗೆ ಹತ್ತಿರ	ಉತ್ತಮ ಭೋಧನೆ	ಒಟ್ಟು	ಒಟ್ಟು
ಮರಾಟಿ ನಾಯ್ಕ	ಕುಂದಾಪುರ	೧೬	೧೧	೦೪	೧೨	೪೩	೦೩	೦೨	೦೨	೦೭	೫೦
	ಉಡುಪಿ	೦೮	೦೯	೦೪	೦೬	೨೭	೦೭	೦೮	೦೮	೨೩	೫೦
	ಕಾರ್ಕಳ	೧೩	೧೫	೦೩	೦೪	೩೫	೦೫	೦೬	೦೪	೧೫	೫೦
	ಒಟ್ಟು	೩೭	೩೫	೧೧	೨೨	೧೦೫	೧೫	೧೬	೧೪	೪೫	೧೫೦
	ಶೇ.	೨೪.೬೭	೨೩.೩೩	೦೭.೩೩	೧೪.೬೭	೭೦.೦೦	೧೦.೦೦	೧೦.೬೭	೦೯.೩೩	೩೦.೦೦	೧೦೦
ಮರಾಟಿ	ಕಾರ್ಕಳ										
	ಒಟ್ಟು	೪೯	೩೯	೧೩	೧೮	೧೧೯	೧೬	೦೮	೦೭	೩೧	೧೫೦
	ಶೇ.	೩೨.೬೭	೨೬.೦೦	೮.೬೭	೧೨.೦೦	೭೯.೩೩	೧೦.೬೭	೦೫.೩೩	೦೪.೬೭	೨೦.೬೭	೧೦೦

ಕೋಷ್ಟಕ ಸಂಖ್ಯೆ ೨.೧೨ರಲ್ಲಿ ತಿಳುವಳಿಕೆದಾರರ ಮಕ್ಕಳ ಶಿಕ್ಷಣಕ್ಕಾಗಿ ಸರಕಾರಿ ಶಾಲೆ–ಕಾಲೇಜು ಹಾಗೂ ಖಾಸಗಿ ಶಾಲಾ–ಕಾಲೇಜುಗಳಿಗೆ ಕಳುಹಿಸಲು ಕಾರಣವನ್ನು ಕೇಳಿದಾಗ ಕುಂದಾಪುರ, ಉಡುಪಿ, ಕಾರ್ಕಳ ತಾಲೂಕಿನಲ್ಲಿ ಬರುವ ಮರಾಟಿ ನಾಯ್ಕ ಸಮುದಾಯದ ಒಟ್ಟು ೧೫೦ ಕುಟುಂಬಗಳಲ್ಲಿ ಒಟ್ಟು ೧೦೫ ಕುಟುಂಬದವರು ಸರಕಾರಿ ಶಾಲೆಗೆ ಕಳುಹಿಸಿದರೆ, ಇನ್ನುಳಿದ ೪೫ ಕುಟುಂಬಗಳು ಖಾಸಗಿ ಶಾಲೆಗೆ ತಮ್ಮ ಮಕ್ಕಳನ್ನು ಕಳುಹಿಸುತ್ತಿದ್ದಾರೆಂಬುದು ಕಂಡುಬರುತ್ತದೆ. ಇದಕ್ಕೆ ಕಾರಣಗಳನ್ನು ಸೂಕ್ಷ್ಮವಾಗಿ ಅಧ್ಯಯನ ಮಾಡಿದಾಗ ಒಟ್ಟು ೩೭ (ಶೇಕಡಾ ೨೪.೬೭) ರಷ್ಟು ಕಡಿಮೆ ಶುಲ್ಕದ ಕಾರಣದಿಂದ, ಉಚಿತ ಶಿಕ್ಷಣದ ಕಾರಣದಿಂದ ಒಟ್ಟು ೩೫ (ಶೇಕಡಾ ೨೩.೩೩) ರಷ್ಟು ಕುಟುಂಬಗಳು ಸರಕಾರಿ ಶಾಲೆಗೆ ಕಳುಹಿಸಿದರೆ, ಉತ್ತಮ ಬೋಧನ ಕಾರಣದಿಂದ ಒಟ್ಟು ೧೧ (ಶೇಕಡಾ ೦೭.೩೩%) ರಷ್ಟು ಹಾಗೂ ಮನೆಯ ಹತ್ತಿರವಿರುವುದರಿಂದ ಒಟ್ಟು ೨೨ (ಶೇಕಡಾ ೧೪.೬೭%) ಕುಟುಂಬಗಳು ಸರಕಾರಿ ಶಾಲೆಗೆ ತಮ್ಮ ಮಕ್ಕಳನ್ನು ವಿದ್ಯಾಭ್ಯಾಸಕ್ಕಾಗಿ ಕಳುಹಿಸುತ್ತಿರುವುದು ಕಂಡುಬರುತ್ತದೆ.

ಉಳಿದ ಒಟ್ಟು ಮರಾಟಿ ನಾಯ್ಕ ಸಮುದಾಯದ ೪೫ ಕುಟುಂಬದವರು ತಮ್ಮ ಮಕ್ಕಳನ್ನು ಖಾಸಗಿ ಶಾಲೆಗೆ ಕಳುಹಿಸುತ್ತಿದ್ದಾರೆ. ಇದಕ್ಕೆ ಕಾರಣಗಳನ್ನು ಕೇಳಿದಾಗ ಕುಂದಾಪುರ, ಉಡುಪಿ, ಕಾರ್ಕಳ ತಾಲೂಕುಗಳಲ್ಲಿ ಉತ್ತಮ ಭವಿಷ್ಯಕ್ಕಾಗಿ ಒಟ್ಟು ೧೫ (ಶೇಕಡಾ ೧೦%) ತಮ್ಮ ಮಕ್ಕಳನ್ನು ಖಾಸಗಿ ಶಾಲೆಗೆ ಕಳುಹಿಸಿದರೆ, ಮನೆಗೆ ಸಮೀಪವಿರುವ ಕಾರಣದಿಂದ ಒಟ್ಟು ೧೬ (ಶೇಕಡಾ ೧೦.೬೭%) ಹಾಗೂ ಉತ್ತಮ ಬೋಧನ ಕಾರಣದಿಂದ ಒಟ್ಟು ೧೪ (ಶೇಕಡಾ ೯.೩೩%) ರಷ್ಟು ಕುಟುಂಬಗಳು ಖಾಸಗಿ ಶಾಲಾ – ಕಾಲೇಜಿಗೆ ತಮ್ಮ ಮಕ್ಕಳನ್ನು ಕಳುಹಿಸುತ್ತಿರುವುದು ಕಂಡುಬಂದಿದೆ.

ಮರಾಟಿ ಸಮುದಾಯದ ಸಮೀಕ್ಷೆಗೊಳಪಟ್ಟ ೧೫೦ ಕುಟುಂಬಗಳಲ್ಲಿ ೧೧೯ (೭೯.೩೩%) ರಷ್ಟು ಜನರು ಸರಕಾರಿ ಶಾಲೆಗೆ ಕಳುಹಿಸಿದರೆ ಒಟ್ಟು ೩೧ (೨೦.೬೭%) ರಷ್ಟು ಜನ ಖಾಸಗಿ ಶಾಲೆಗಳಿಗೆ ಕಳುಹಿಸಿರುತ್ತಿರುವುದು ಕಂಡು ಬಂದಿದೆ. ಅದಕ್ಕೆ ಕಾರಣಗಳನ್ನು ಕೇಳಿದಾಗ ೪೯ (ಶೇಕಡಾ ೩೨.೬೭%) ಕುಟುಂಬಗಳು ಕಡಿಮೆ ಶುಲ್ಕದ ಕಾರಣದಿಂದ, ಸರಕಾರಿ ಶಾಲೆಗೆ ಕಳುಹಿಸಿದರೆ ಉಚಿತ ಶಿಕ್ಷಣದ ಕಾರಣದಿಂದ ಒಟ್ಟು ೩೯ (ಶೇ. ೨೬%) ರಷ್ಟು ಜನರು ಸರಕಾರಿ ಶಾಲೆಗೆ ತಮ್ಮ ಮಕ್ಕಳನ್ನು ಕಳುಹಿಸಿತ್ತಿರುವುದನ್ನು ಕಂಡರೆ, ಒಟ್ಟು ೧೩ (ಶೇಕಡಾ ೮.೬೭%) ಉತ್ತಮ ಶಿಕ್ಷಣ ದೊರೆಯುತ್ತದೆ ಮತ್ತು ಮನೆಯ ಹತ್ತಿರ ಶಾಲೆ ಕಾಲೇಜುಗಳಿರುತ್ತವೆ ಎಂಬ ಕಾರಣದಿಂದ ಒಟ್ಟು ೧೮ ಶೇಕಡಾ (೧೨%) ತಮ್ಮ ಮಕ್ಕಳನ್ನು ಸರ್ಕಾರಿ ಶಾಲೆ–ಕಾಲೇಜುಗಳಿಗೆ ಕಳುಹಿಸುತ್ತಿರುವುದು ಕಂಡುಬಂದಿದೆ.

ಉಳಿದ ಮರಾಟಿ ಸಮುದಾಯದ ೩೧ ಕುಟುಂಬಗಳು ತಮ್ಮ ಮಕ್ಕಳನ್ನು ಖಾಸಗಿ ಶಾಲೆಗೆ ಕಳುಹಿಸುತ್ತಿರುವ ಬಗೆಗೆ ಕಾರಣಗಳನ್ನು ಅಧ್ಯಯನ ಮಾಡಿದಾಗ ಉತ್ತಮ ಭವಿಷ್ಯಕ್ಕಾಗಿ ಒಟ್ಟು ೧೬ (ಶೇಕಡಾ ೧೦.೬೭%) ತಮ್ಮ ಮಕ್ಕಳನ್ನು ಖಾಸಗಿ ಶಾಲೆಗೆ ಕಳುಹಿಸಿದರೆ, ಮನೆಗೆ ಸಮೀಪವಿರುವ ಕಾರಣದಿಂದ ಒಟ್ಟು ೦೮ (೫.೩೩%) ಮತ್ತು ಉತ್ತಮ ಬೋಧನೆಯ ಕಾರಣದಿಂದ ಒಟ್ಟು ೦೭ (ಶೇಕಡಾ ೪.೬೭%) ರಷ್ಟು ಕುಟುಂಬಗಳು ತಮ್ಮ ಮಕ್ಕಳನ್ನು ಖಾಸಗಿ ಶಾಲೆಗೆ ಕಳುಹಿಸುತ್ತಿರುವುದು ಕಂಡುಬಂದಿದೆ.

• ಉಡುಪಿ ಜಿಲ್ಲೆಯ ಮರಾಟಿ ನಾಯ್ಕ ಮತ್ತು ಮರಾಟಿ ಸಮುದಾಯಗಳ ಒಟ್ಟು ೩೦೦ ಕುಟುಂಬಗಳ ಮಕ್ಕಳ ಶಿಕ್ಷಣಕ್ಕಾಗಿ ಸರಕಾರಿ ಶಾಲಾ–ಕಾಲೇಜು ಹಾಗೂ ಖಾಸಗಿ ಶಾಲಾ–ಕಾಲೇಜಿಗೆ ಕಳುಹಿಸಲು

ಕಾರಣಗಳನ್ನು ಕುರಿತು ತೌಲನಿಕವಾಗಿ ಅಧ್ಯಯನ ಮಾಡಿದಾಗ ಖಾಸಗಿ ಶಾಲೆಗಳಿಗಿಂತ ಸರಕಾರಿ ಶಾಲೆಗಳಿಗೆ ಸೇರಿಸುವುದು ಹೆಚ್ಚಾಗಿ ಕಂಡು ಬಂದಿದ್ದು, ಅದಕ್ಕೆ ಕಡಿಮೆ ಶುಲ್ಕ ಹಾಗೂ ಉಚಿತ ಶಿಕ್ಷಣದ ವ್ಯವಸ್ಥೆ ಇರುವುದು ಪ್ರಮುಖವಾಗಿ ಗೋಚರಿಸುತ್ತಿದೆ. ಎರಡು ಸಮುದಾಯಗಳೆಲ್ಲ ಒಂದೇ ರೀತಿಯ ಅಭಿಪ್ರಾಯ ಮತ್ತು ಕಾರಣಗಳನ್ನು ಹೇಳಿವೆ. ಖಾಸಗಿ ಶಾಲೆಗೆ ಸೇರಿಸಿದವರು ತುಂಬಾ ಕಡಿಮೆ ಪ್ರಮಾಣದಲ್ಲಿ ಕಂಡು ಬಂದಿದ್ದಾರೆ.

ಮಹಿಳೆಯರಿಗೆ ದೂರದ ಊರಿನಲ್ಲಿ ಶಿಕ್ಷಣ ಕೊಡಿಸುವ ವಿವರ

ಇಂದು ಸ್ತ್ರೀ ಪುರುಷರು ಭೇದ ಭಾವಗಳಿಲ್ಲದೆ ಉತ್ತಮ ಹಾಗೂ ಉನ್ನತ ಶಿಕ್ಷಣಕ್ಕಾಗಿ ದೂರದ ಊರುಗಳಲ್ಲಿರುವ ಶಾಲೆಗಳಿಗೆ ಕಳುಹಿಸುತ್ತಿರುವುದು ಸಾಮಾನ್ಯವಾಗಿ ಕಂಡು ಬರುತ್ತಿದೆ. ಆದರೆ ಮಹಿಳೆಯರ ಬಗೆಗಿನ ಜವಾಬ್ದಾರಿಗಳು ಆಕೆ ದೂರದ ನಗರ ಪ್ರದೇಶಗಳಲ್ಲಿ ಅನ್ಯ ಕಾರಣಗಳಿಂದ ಶಿಕ್ಷಣ ಪಡೆಯಲು ಸಮರ್ಥರಲ್ಲ ಎಂಬ ಭಾವನೆಯಿಂದಾಗಿ ಅನೇಕ ಮಹಿಳೆಯರು ಶಿಕ್ಷಣದಿಂದ ವಂಚಿತರಾಗಿರುವುದು ಕಂಡು ಬರುತ್ತದೆ. ಗ್ರಾಮಾಂತರ ಪ್ರದೇಶಗಳಲ್ಲಿ ಅನಕ್ಷರಸ್ಥರಲ್ಲಿ ಮಹಿಳೆ ಎಷ್ಟು ಕಲಿತರೂ ಮುಂದೆ ಅವಳು ಗಂಡನ ಮನೆಯಲ್ಲಿ ಪಾತ್ರೆ ತೊಳೆಯುವುದು ತಪ್ಪುವುದಿಲ್ಲ ಎಂಬ ಅಭಿಪ್ರಾಯಗಳಿಂದ ಅವಳನ್ನು ದೂರದ ಊರುಗಳಿಗೆ ಕಳುಹಿಸಲು ಹೆತ್ತವರು ಮತ್ತು ರಕ್ಷಕರು ಇಚ್ಚಿಸುತ್ತಿಲ್ಲ. ಈ ಬಗ್ಗೆ ಅಧ್ಯಯನಕ್ಕೊಳಪಡಿಸಿದ ಎರಡೂ ಸಮುದಾಯದವರು ಯಾವ ರೀತಿಯ ನಿಲುವು ತಳೆದಿದ್ದಾರೆ ಎಂಬುದನ್ನು ಕೋಷ್ಟಕ ೫.೧೩ರ ಮೂಲಕ ಕಂಡುಕೊಳ್ಳಲಾಗಿದೆ.

ಕೋಷ್ಟಕ: ೫.೧೩

ತಿಳುವಳಿಕೆದಾರರ ಕುಟುಂಬದ ಮಹಿಳೆಯರಿಗೆ ದೂರದ ನಗರದಲ್ಲಿ ಶಿಕ್ಷಣ ಕೊಡಿಸುವ ಬಗ್ಗೆ ಅವರ ಅಭಿಪ್ರಾಯಗಳು

ಸಮುದಾಯದ ಹೆಸರು	ತಾಲೂಕು	ಅಭಿಪ್ರಾಯ ಹಂಚಿಕೆ		
		ಕೊಡಿಸುತ್ತೇವೆ	ಕೊಡಿಸುವುದಿಲ್ಲ	ಒಟ್ಟು
ಮರಾಟಿ ನಾಯ್ಕ	ಕುಂದಾಪುರ	४೧	೦೯	೫೦
	ಉಡುಪಿ	४೨	೦೮	೫೦
	ಕಾರ್ಕಳ	४೬	೦४	೫೦
	ಒಟ್ಟು	೧೨೯	೨೧	೧೫೦
	ಶೇಕಡವಾರು	೮೬.೦೦	೧४.೦೦	೧೦೦.೦೦
ಮರಾಟಿ	ಕಾರ್ಕಳ ತಾ.			
	ಒಟ್ಟು	೧೩೫	೧೫	೧೫೦
	ಶೇಕಡವಾರು	೯೦.೦೦	೧೦.೦೦	೧೦೦.೦೦

ಕೋಷ್ಟಕ ಸಂಖ್ಯೆ ೫.೧೩ರಲ್ಲಿ ಅಧ್ಯಯನಕ್ಕೊಳಪಟ್ಟ ತಿಳುವಳಿಕೆದಾರರ ಕುಟುಂಬದ ಮಹಿಳೆಯರಿಗೆ ದೂರದ ನಗರಗಳಲ್ಲಿ ಶಿಕ್ಷಣ ಕೊಡಿಸುವ ಬಗ್ಗೆ ಅಭಿಪ್ರಾಯ ಸಂಗ್ರಹಿಸಲಾಗಿದೆ. ಸಮೀಕ್ಷೆಗೊಳಪಟ್ಟ

ಕುಂದಾಪುರ, ಉಡುಪಿ ಮತ್ತು ಕಾರ್ಕಳ ತಾಲೂಕುಗಳ ಮರಾಟಿ ನಾಯ್ಕ ಸಮುದಾಯದಲ್ಲಿ ಒಟ್ಟು ೧೫೦ ಕುಟುಂಬಗಳಲ್ಲಿ ೧೨೯ (೮೬%) ರಷ್ಟು ಜನರು ದೂರವಾದರು ಶಿಕ್ಷಣ ಕೊಡಿಸುತ್ತೇವೆ ಎಂಬ ಅಭಿಪ್ರಾಯ ಹಂಚಿಕೊಂಡಿದ್ದಾರೆ. ೨೧ ಕುಟುಂಬಗಳು (೧೪%) ಕೊಡಿಸುದಿಲ್ಲವೆಂದು ಹೇಳಿದ್ದಾರೆ.

ಮರಾಟಿ ಸಮುದಾಯದ ೧೫೦ ಕುಟುಂಬಗಳ ಅಭಿಪ್ರಾಯವನ್ನು ಕೇಳಿದಾಗ ಮಹಿಳೆಯರ ಶಿಕ್ಷಣಕ್ಕಾಗಿ ದೂರರ ಪ್ರದೇಶಗಳಿಗೆ ಕಳುಹಿಸಲು ನಾವು ಸಿದ್ಧರಿದ್ದೇವೆ ಎಂದು ೧೩೫ (೯೦%) ರಷ್ಟು ಜನರು ಹೇಳಿದ್ದಾರೆ. ೧೫ (೧೦%) ರಷ್ಟು ಕುಟುಂಬಗಳು ತಮ್ಮ ಅಭಿಪ್ರಾಯದಲ್ಲಿ ಮಹಿಳೆಯರನ್ನು ದೂರದ ನಗರಗಳಿಗೆ ಕಳುಹಿಸದಿರಲು ತೀರ್ಮಾನಿಸಿದ್ದಾರೆ. ಆಧುನಿಕತೆಯ ಇಂದಿನ ಪರಿಸರದಲ್ಲಿ ಪರಿಣಾಮಕಾರಿಯಾದ ಶಿಕ್ಷಣದ ಅವಶ್ಯಕತೆಯನ್ನು ಮನಗಂಡ ಮರಾಟಿ ನಾಯ್ಕ ಮತ್ತು ಮರಾಟಿ ಸಮುದಾಯದವರು ತಮ್ಮ ಮಹಿಳೆಯರಿಗೆ ದೂರದ ನಗರಗಳಲ್ಲಿ ಶಿಕ್ಷಣ ನೀಡಲು ಬಯಸಿದ್ದಾರೆ ಎಂದು ತಿಳಿದುಬರುತ್ತದೆ.

• ಉಡುಪಿ ಜಿಲ್ಲೆಯ ಮರಾಟಿ ನಾಯ್ಕ ಮತ್ತು ಮರಾಟಿ ಸಮುದಾಯಗಳ ಒಟ್ಟು ೩೦೦ ಕುಟುಂಬಗಳ ಮಹಿಳೆಯರಿಗೆ ದೂರದ ಊರಿನಲ್ಲಿ ಶಿಕ್ಷಣ ಕೊಡಿಸುವುದರ ಬಗ್ಗೆ ಹಾಗೂ ನಗರದಲ್ಲಿ ಶಿಕ್ಷಣ ಕೊಡಿಸುವುದರ ಬಗ್ಗೆ ವ್ಯಕ್ತಪಡಿಸಿರುವ ಅಭಿಪ್ರಾಯಗಳನ್ನು ತೌಲನಿಕವಾಗಿ ನೋಡಿದಾಗ ದೂರದ ಊರಿನಲ್ಲಾಗಲೀ ಅಥವಾ ನಗರದಲ್ಲಾಗಲೀ ಶಿಕ್ಷಣವನ್ನು ನೀಡುವ ಅಭಿಪ್ರಾಯಗಳನ್ನೇ ಪ್ರತಿಪಾದಿಸಿದ್ದು ಕಂಡು ಬರುತ್ತದೆ. ಮಹಿಳೆಯರಿಗೆ ದೂರದ ನಗರ ಪ್ರದೇಶಗಳಲ್ಲಿ ಅವರಿಗೆ ಶಿಕ್ಷಣ ಪಡೆಯಲು ಅವಕಾಶ ನೀಡುವುದಿಲ್ಲ ಎಂದು ಬೆರಳೆಣಿಕೆಯಷ್ಟು ಕುಟುಂಬಗಳು ಅಭಿಪ್ರಾಯ ಪಟ್ಟಿರುವುದು ಕಂಡುಬರುತ್ತದೆ. ಒಟ್ಟಾರೆಯಾಗಿ ಗಮನಿಸಿದಾಗ ಎರಡು ಸಮುದಾಯಗಳು ಹೆಚ್ಚಿನ ಸಂಖ್ಯೆಯಲ್ಲಿ ಮಹಿಳೆಯರ ಶಿಕ್ಷಣಕ್ಕೆ ಒತ್ತು ನೀಡಿರುವುದು ಕಂಡು ಬರುತ್ತದೆ.

ಶೈಕ್ಷಣಿಕ ಸೌಲಭ್ಯಗಳನ್ನು ಪಡೆದುಕೊಂಡಿರುವವರ ಹಾಗೂ ಪಡೆದುಕೊಳ್ಳುವುದರ ವಿವರಗಳು

ಬಡ ವಿದ್ಯಾರ್ಥಿಗಳಿಗೆ ಹಾಗೂ ಅರ್ಹ ಪ್ರತಿಭಾವಂತ ಮಕ್ಕಳಿಗೆ ನೆರವಾಗಲು ಇಂದು ಜಾತಿಯ ಸಂಘಟನೆಗಳು, ಸಂಘ–ಸಂಸ್ಥೆಗಳು, ಸರ್ಕಾರ ಹಾಗೂ ಸರ್ಕಾರೇತರ ಸಂಘಟನೆಗಳು ಹಲವಾರು ರೀತಿಯ ಸೌಲಭ್ಯಗಳನ್ನು ಒದಗಿಸುತ್ತಿವೆ. ಸರ್ಕಾರವು ಮುಖ್ಯವಾಗಿ ಉಚಿತ ಶಿಕ್ಷಣ, ವಿದ್ಯಾರ್ಥಿ ವೇತನ, ಶುಲ್ಕ ವಿನಾಯಿತಿ, ಸಮವಸ್ತ್ರ, ಕಲಿಕಾ ಸಾಮಾಗ್ರಿಗಳು, ವಿದ್ಯಾರ್ಥಿ, ವಿದ್ಯಾರ್ಥಿನಿ ನಿಲಯಗಳಲ್ಲಿ ಉಚಿತ ವಸತಿ ಸೌಲಭ್ಯ ಮುಂತಾದ ಹಲವಾರು ರೀತಿಯ ನೆರವನ್ನು ನೀಡುತ್ತಿರುವುದನ್ನು ಗಮನಿಸಲಾಗಿದೆ. ಇದೇ ರೀತಿಯ ನೆರವನ್ನು ಕೆಲವು ಸಂಘ–ಸಂಸ್ಥೆಗಳು ಕೂಡಾ ನೀಡುತ್ತಿವೆ. ಆದರೆ ಈ ಸೌಲಭ್ಯಗಳನ್ನು ಪಡೆಯುವುದರಲ್ಲಿನ ಅಡೆತಡೆಗಳಿಂದಾಗಿ ತಾಂತ್ರಿಕ ದೋಷಗಳಿಂದಾಗಿ ತಿಳುವಳಿಕೆದಾರರಿಗೆ ಯಾವುದೇ ಮಾಹಿತಿ ಇಲ್ಲದಿರುವಿಕೆ ಮುಂತಾದ ಕಾರಣಗಳಿಂದಾಗಿ ಎಲ್ಲರಿಗೂ ಆ ಸೌಲಭ್ಯಗಳನ್ನು ಪಡೆಯಲು ಸಾಧ್ಯವಾಗುತ್ತಿಲ್ಲ. ಈ ಹಿನ್ನೆಲೆಯಲ್ಲಿ ಪ್ರಸ್ತುತ ಅಧ್ಯಯನದಲ್ಲಿ ಎರಡೂ ಸಮುದಾಯದ ತಿಳುವಳಿಕೆದಾರರು ಯಾವ ರೀತಿಯ ಸೌಲಭ್ಯಗಳನ್ನು ತಮ್ಮ ಮಕ್ಕಳು ಪಡೆದುಕೊಂಡಿದ್ದಾರೆ ಎಂಬುದನ್ನು ಸಮೀಕ್ಷೆಯ ಮೂಲಕ ಅಧ್ಯಯನ ಮಾಡಲಾಗಿದ್ದು, ಅದನ್ನು ಈ ೫.೧೪ರ ಕೋಷ್ಟಕದಲ್ಲಿ ನೀಡಲಾಗಿದೆ.

ಕೋಷ್ಟಕ: ೫.೧೪

ತಿಳುವಳಿಕೆದಾರರ ಕುಟುಂಬದ ಸದಸ್ಯರು ಶೈಕ್ಷಣಿಕ ಸೌಲಭ್ಯಗಳನ್ನು ಪಡೆದ ಮಾಹಿತಿಯ ವಿವರಗಳು

ಸಮುದಾಯದ ಹೆಸರು	ತಾಲೂಕುಗಳ ಹೆಸರು	ಶೈಕ್ಷಣಿಕ ಸೌಲಭ್ಯ ಪಡೆದುಕೊಂಡಿರುವುದರ ಬಗ್ಗೆ				ಪಡೆದುಕೊಂಡಿರುವ ಸೌಲಭ್ಯಗಳ ಹಂಚಿಕೆ				
		ಪಡೆದಿರುತ್ತಾರೆ	ಪಡೆದಿರುವುದಿಲ್ಲ	ಒಟ್ಟು	ಶುಲ್ಕ ವಿನಾಯಿತಿ	ಸ್ಕಾಲರ್‌ಶಿಪ್ ಸೌಲಭ್ಯ	ಹಾಸ್ಟೆಲ್	ಲ್ಯಾಪ್‌ಟಾಪ್	ಇತರ	ಒಟ್ಟು
ಮರಾಟಿ ನಾಯ್ಕ	ಕುಂದಾಪುರ	೩೫	೧೫	೫೦	೩೦	೨೯	೦೯	೦೨	–	೭೦
	ಉಡುಪಿ	೪೩	೦೭	೫೦	೩೧	೨೮	೧೨	೦೬	–	೭೭
	ಕಾರ್ಕಳ	೪೧	೦೯	೫೦	೨೫	೨೯	೦೪	೦೮	–	೬೬
	ಒಟ್ಟು	೧೧೯	೩೧	೧೫೦	೮೬	೮೬	೨೫	೧೬	–	೨೧೩
	ಶೇಕಡವಾರು	**೭೯.೩೩**	**೨೦.೬೭**	**೧೦೦.೦೦**	**೪೦.೩೮**	**೪೦.೩೮**	**೧೧.೭೩**	**೭.೫೧**	–	**೧೦೦**
ಮರಾಟಿ	ಕಾರ್ಕಳ									
	ಒಟ್ಟು	೫೩	೯೭	೧೫೦	೪೭	೩೪	೦೦	೦೦	೦೦	೮೧
	ಶೇಕಡವಾರು	**೩೫.೩೩**	**೬೪.೬೭**	**೧೦೦**	**೫೮.೦೨**	**೪೧.೯೮**	**೦೦**	**೦೦**	**೦೦**	**೧೦೦**

೫.೧೪ರ ಕೋಷ್ಟಕದಲ್ಲಿ ತಿಳುವಳಿಕೆದಾರರ ಕುಟುಂಬದ ಸದಸ್ಯರ ಮಕ್ಕಳು ಶೈಕ್ಷಣಿಕ ಸೌಲಭ್ಯಗಳನ್ನು ಪಡೆದ ವಿವರಗಳನ್ನು ನೋಡಬಹುದಾಗಿದೆ. ಕುಂದಾಪುರ, ಉಡುಪಿ, ಕಾರ್ಕಳ ತಾಲೂಕುಗಳ ವ್ಯಾಪ್ತಿಯಲ್ಲಿ ಬರುವ ಮರಾಟಿ ನಾಯ್ಕ ಸಮುದಾಯವನ್ನು ಅಧ್ಯಯನ ಮಾಡಿದಾಗ ಒಟ್ಟು ಸಮೀಕ್ಷೆಗೊಳಪಟ್ಟ ೧೫೦ ಕುಟುಂಬಗಳಲ್ಲಿ ೧೧೯ (ಶೇಕಡಾ ೭೯.೩೩%) ರಷ್ಟು ಜನರು ಶೈಕ್ಷಣಿಕ ಸೌಲಭ್ಯ ಪಡೆದಿದ್ದಾರೆ. ಅದರ ವಿವರವನ್ನು ಗಮನಿಸಿದಾಗ ಶುಲ್ಕ ವಿನಾಯಿತಿಯನ್ನು ಒಟ್ಟು ೮೬ (೪೦.೩೮%) ಪಡೆದರೆ, ವಿದ್ಯಾರ್ಥಿ ವೇತನವನ್ನು ಒಟ್ಟು ೮೬ (೪೦.೩೮%) ರಷ್ಟು, ಹಾಸ್ಟೆಲ್ ಸೌಲಭ್ಯ ಒಟ್ಟು ೨೫ (೧೧.೭೩%) ಮತ್ತು ಲ್ಯಾಪ್‌ಟಾಪ್‌ನ್ನು ಒಟ್ಟು ೧೬ (೭.೫೧%) ರಷ್ಟು ಕುಟುಂಬಗಳು ಸೌಲಭ್ಯವನ್ನು ಸರಕಾರದಿಂದ ಪಡೆದಿರುವುದು ಕಂಡು ಬರುತ್ತದೆ.

ಉಳಿದ ೩೧ ಕುಟುಂಬಗಳು (೨೦.೬೭%) ರಷ್ಟು ಮಂದಿ ಸರಕಾರದ ಶೈಕ್ಷಣಿಕ ಸೌಲಭ್ಯಗಳನ್ನು ಪಡೆಯದಿರುವುದು ಕಂಡುಬರುತ್ತದೆ.

ಮರಾಟಿ ಸಮುದಾಯವನ್ನು ಸಮೀಕ್ಷೆಗೊಳಪಡಿಸಿದಾಗ ಒಟ್ಟು ೧೫೦ ಕುಟುಂಬಗಳಲ್ಲಿ ೫೩ ಕುಟುಂಬದವರು (೩೫.೩೩%) ಶೈಕ್ಷಣಿಕ ಸೌಲಭ್ಯವನ್ನು ಪಡೆದಿರುವುದು ಕಂಡುಬಂದರೆ, ಅದರಲ್ಲಿ ಶುಲ್ಕ ವಿನಾಯಿತಿ ಒಟ್ಟು ೪೭ (೫೮.೦೨%), ಸ್ಕಾಲರ್‌ಶಿಪ್ ಒಟ್ಟು ೩೪ (೪೧.೯೮%) ಪಡೆದರೆ, ಯಾರೊಬ್ಬರು ಹಾಸ್ಟೆಲ್ ಸೌಲಭ್ಯ ಮತ್ತು ಲ್ಯಾಪ್‌ಟಾಪ್ ಸೌಲಭ್ಯವನ್ನು ಪಡೆದಿಲ್ಲ ಎಂಬುದು ಕಂಡುಬಂದಿದೆ. ೯೭ ಕುಟುಂಬಗಳು (೬೪.೬೭%) ಶೈಕ್ಷಣಿಕ ಸೌಲಭ್ಯವನ್ನು ಸರಕಾರದಿಂದ ಪಡೆದಿಲ್ಲ ಎಂಬುದನ್ನು ಕಾಣಬಹುದಾಗಿದೆ.

ಸರಕಾರ ಮತ್ತು ಸರಕಾರೇತರ ಸಂಸ್ಥೆಗಳಿಂದ ಶೈಕ್ಷಣಿಕ ಸೌಲಭ್ಯಗಳನ್ನು ಪಡೆದ ಮತ್ತು ಪಡೆಯದಿರುವ ವಿಷಯಕ್ಕೆ ಸಂಬಂಧಿಸಿದಂತೆ ತುಲನಾತ್ಮಕವಾಗಿ ಗಮನಿಸಿದಾಗ ಮರಾಟಿ ನಾಯ್ಕ ಸಮುದಾಯದವರು, ಮರಾಟಿ ಸಮುದಾಯಕ್ಕೆ ಹೋಲಿಸಿದರೆ ಉತ್ತಮ ಶೈಕ್ಷಣಿಕ ಸೌಲಭ್ಯವನ್ನು ಸರಕಾರದಿಂದ ಪಡೆದಿರುವುದನ್ನು ಗಮನಿಸಬಹುದು.

• ಉಡುಪಿ ಜಿಲ್ಲೆಯ ಮರಾಟಿ ನಾಯ್ಕ ಮತ್ತು ಮರಾಟಿ ಸಮುದಾಯಗಳ ಒಟ್ಟು ೩೦೦ ಕುಟುಂಬಗಳ ಸದಸ್ಯರುಗಳ ಶೈಕ್ಷಣಿಕ ಸೌಲಭ್ಯಗಳನ್ನು ಪಡೆದದ್ದನ್ನು ಹೋಲಿಕೆ ಮಾಡಿದಾಗ ಮರಾಟಿ ನಾಯ್ಕ ಸಮುದಾಯ ಶೈಕ್ಷಣಿಕ ಸೌಲಭ್ಯ ಪಡೆದುಕೊಂಡವರು ಹೆಚ್ಚಾಗಿದ್ದು, ಅವುಗಳಲ್ಲಿ ಹೆಚ್ಚು ಶುಲ್ಕ ವಿನಾಯಿತಿ ಮತ್ತು ಹೆಚ್ಚಾಗಿದ್ದು, ಹಾಸ್ಟೆಲ್ ಸೌಲಭ್ಯ ಮತ್ತು ಲ್ಯಾಪ್‌ಟಾಪ್ ಪಡೆದವರು ಮರಾಟಿಗರಿಗೆ ಹೋಲಿಸಿದರೆ ಅಧಿಕ ಸಂಖ್ಯೆಯಲ್ಲಿರುವುದು ಕಂಡುಬರುತ್ತದೆ.

ಆಧುನಿಕ ಯುಗದಲ್ಲಿ ಮಕ್ಕಳ ಶಿಕ್ಷಣಕ್ಕೆ ನೀಡುತ್ತಿರುವ ಆದ್ಯತೆ

ಆಧುನಿಕ ಯುಗದಲ್ಲಿ ಎಲ್ಲ ತಂದೆ–ತಾಯಿಗಳಿಗೆ ತಮ್ಮ ಮಕ್ಕಳಿಗೆ ಉತ್ತಮವಾದ ಭವಿಷ್ಯವನ್ನು ರೂಪಿಸಬೇಕು ಎಂಬುದು ಅವರ ಮಹದಾಸೆಯಾಗಿರುತ್ತದೆ. ಅದಕ್ಕಾಗಿಯೇ ಮಕ್ಕಳನ್ನು ಪ್ರಾರಂಭದಿಂದಲೇ ತಯಾರು ಮಾಡುವ ಕೆಲಸಗಳನ್ನು ಮಾಡುತ್ತಾ ಬರುವುದನ್ನು ನಮ್ಮ ಸುತ್ತಮುತ್ತಲ ಪರಿಸರದಲ್ಲಿ ಕಾಣುತ್ತೇವೆ. ಉಳ್ಳವರ ದೃಷ್ಟಿ ಒಂದು ರೀತಿಯಾದರೆ ಹಣಕಾಸಿನ ಕೊರತೆಯಿಂದಾಗಿ ಕೆಲವರಿಗೆ ತಮ್ಮ ಮಕ್ಕಳನ್ನು ವೃತ್ತಿಪರ ಕಾಲೇಜುಗಳಲ್ಲಿ ಓದಿಸಲು ಸಾಧ್ಯವಾಗುತ್ತಿಲ್ಲ. ಅಂಥವರು ತಮ್ಮ ಮಕ್ಕಳಿಗೆ ಸಾಮಾನ್ಯ ಶಿಕ್ಷಣಕೊಡಿಸಿ ಆ ಮೂಲಕ ಅವರ ಭವಿಷ್ಯ ರೂಪಿಸುವ ಚಿಂತನೆ ಮಾಡುತ್ತಿರುವುದು ಕಂಡುಬರುತ್ತದೆ. ಈ ನಿಟ್ಟಿನಲ್ಲಿ ಮರಾಟಿ ಮತ್ತು ಮರಾಟಿ ನಾಯ್ಕ ಸಮುದಾಯದವರು ತಮ್ಮ ಮಕ್ಕಳ ಬಗ್ಗೆ ಹೆಚ್ಚು ಕಾಳಜಿ ಹೊಂದಿದವರಾಗಿದ್ದು, ಪ್ರಸ್ತುತ ಅಧ್ಯಯನದಲ್ಲಿ ಎರಡೂ ಸಮುದಾಯದ ತಲಾ ೧೫೦ ಕುಟುಂಬಗಳನ್ನು ಒಟ್ಟು ೩೦೦ ಕುಟುಂಬಗಳನ್ನು ಅಧ್ಯಯನಕ್ಕೊಳಪಡಿಸಿ ಆ ಮೂಲಕ ಸಂಗ್ರಹಿಸಿರುವ ಮಾಹಿತಿಗಳನ್ನು ೫.೧೫ರ ಕೋಷ್ಟಕದಲ್ಲಿ ನೀಡಲಾಗಿದೆ.

ಕೋಷ್ಟಕ: ೫.೧೫

ತಿಳುವಳಿಕೆದಾರರ ಕುಟುಂಬದ ಮಕ್ಕಳಿಗೆ ನೀಡಲಿಚ್ಛಿಸುವ ಶಿಕ್ಷಣದ ವಿವರಗಳು

ಸಮುದಾಯದ ಹೆಸರು	ತಾಲೂಕು	ಪದವಿ	ಕಾನೂನು	D.ed ಬಿ.ಎಡ್.	ವೃತ್ತಿಶಿಕ್ಷಣ	ಮೆಡಿಕಲ್/ ಪ್ಯಾರ್ ಮೆಡಿಕ್ಲ್	ಇಂಜನಿಯರಿಂಗ್	ಸ್ನಾತಕೋತ್ತರ	ಅನ್ವಯಿಸುವುದಿಲ್ಲ	ಒಟ್ಟು
ಮರಾಟಿ ನಾಯ್ಕ	ಕುಂದಾಪುರ	೩೧	೦೨	೦೪	೦೪	೦೧	೦೪	೦೨	೦೨	೫೦
	ಉಡುಪಿ	೧೨	೦೨	೦೮	೦೯	೦೬	೦೪	೦೫	೦೪	೫೦
	ಕಾರ್ಕಳ	೧೩	೦೩	೦೫	೦೩	೦೭	೧೦	೦೮	೦೧	೫೦
	ಒಟ್ಟು	೫೬	೦೭	೧೭	೧೬	೧೪	೧೮	೧೫	೦೭	೧೪೩
	ಶೇಕಡವಾರು	**೩೭.೩೩**	**೦೪.೬೭**	**೧೧.೩೩**	**೧೦.೬೭**	**೦೯.೩೩**	**೧೨.೦೦**	**೧೦.೦೦**	**೦೪.೬೭**	**೧೦೦**
ಮರಾಟಿ	ಕಾರ್ಕಳ ತಾ.									
	ಒಟ್ಟು	೪೭	೧೫	೧೨	೩೩	೦೪	೨೨	೧೩	೦೪	೧೫೦
	ಶೇಕಡವಾರು	**೩೧.೩೩**	**೧೦.೦೦**	**೮.೦೦**	**೨೨.೦೦**	**೨.೬೭**	**೧೪.೬೭**	**೮.೬೭**	**೦೨.೬೬**	**೧೦೦**

ಕೋಷ್ಟಕ ೫.೧೫ರ ಸಮೀಕ್ಷೆಗೊಳಪಟ್ಟ ತಿಳುವಳಿಕೆದಾರರ ಕುಟುಂಬದ ಮಕ್ಕಳಿಗೆ ನೀಡಲಿಚ್ಚಿಸುವ ಶಿಕ್ಷಣ ಕುರಿತಾದ ಮಾಹಿತಿ ನೋಡಬಹುದಾಗಿದೆ. ಕುಂದಾಪುರ, ಉಡುಪಿ, ಕಾರ್ಕಳ ತಾಲೂಕುಗಳಲ್ಲಿರುವ ಮರಾಟಿ ನಾಯ್ಕ ಸಮುದಾಯದಲ್ಲಿ ಒಟ್ಟು ೫೬ (ಶೇ. ೩೭.೩೩) ತಿಳುವಳಿಕೆದಾರರು ತಮ್ಮ ಮಕ್ಕಳಿಗೆ ಪದವಿ ನೀಡಲು ಬಯಸಿದರೆ ಒಟ್ಟು ೦೭ (೦೪.೬೭) ರಷ್ಟು ಜನರು ಕಾನೂನು ಪದವಿ ನೀಡಲಿಚ್ಚಿಸಿದರೆ. ಡಿ.ಎಡ್. ಮತ್ತು ಪದವಿ ಶಿಕ್ಷಣ ನೀಡಲು ಒಟ್ಟು ೧೭ (ಶೇ. ೧೧.೩೩%) ತಿಳುವಳಿಕೆದಾರರು ಬಯಸಿದರೆ, ವೃತ್ತಿ ಶಿಕ್ಷಣ ಪಡೆಯಲು ೧೬ (೧೦.೬೭%) ಕುಟುಂಬಗಳು ತಮ್ಮ ಮಕ್ಕಳಿಗೆ ಶಿಕ್ಷಣ ನೀಡಲಿಚ್ಚಿಸಿರುವುದು ಅಧ್ಯಯನದಿಂದ ತಿಳಿಯುತ್ತದೆ. ಈ ಸಮುದಾಯದಲ್ಲಿ ಮೆಡಿಕಲ್ ಪದವಿ ನೀಡಲು ಒಟ್ಟು ೧೪ (೦೯.೩೩%) ಮತ್ತು ಇಂಜಿನಿಯರಿಂಗ್ ಪದವಿ ನೀಡಲು ಒಟ್ಟು ೧೮ (೧೨%) ಹಾಗೂ ಸ್ನಾತಕೋತ್ತರ ಪದವಿ ನೀಡಲು ಒಟ್ಟು ೧೫ (೧೦%) ರಷ್ಟು ಕುಟುಂಬಗಳು ತಮ್ಮ ಮಕ್ಕಳಿಗೆ ಶಿಕ್ಷಣ ನೀಡಲು ಬಯಸಿದ್ದಾರೆ ಎಂಬುದು ಕಂಡುಬಂದಿದೆ.

ಸಮೀಕ್ಷೆಗೊಳಪಟ್ಟ ಮರಾಟಿ ಸಮುದಾಯದಲ್ಲಿ ೪೭ (೩೧.೩೩%) ಪದವಿ ಶಿಕ್ಷಣವನ್ನು, ೧೫ (೧೦%) ರಷ್ಟು ಕಾನೂನಿನ ಪದವಿಯನ್ನು, ಒಟ್ಟು ೧೨ (೮.೦೦%) ಡಿ.ಎಡ್. ಪದವಿಯನ್ನು, ೩೩ (೨೨%) ರಷ್ಟು ವೃತ್ತಿಶಿಕ್ಷಣದ ಪದವಿ, ಒಟ್ಟು ೦೪ (೨.೬೭%) ರಷ್ಟು ಮೆಡಿಕಲ್ ಪದವಿ, ೨೨ (೧೪.೬೭%) ರಷ್ಟು ಇಂಜಿನಿಯರಿಂಗ್ ಪದವಿ, ೧೩ (೮.೬೭%) ರಷ್ಟು ಸ್ನಾತಕೋತ್ತರ ಪದವಿಯನ್ನು ತಮ್ಮ ಮಕ್ಕಳಿಗೆ ನೀಡಲಿಚ್ಚಿಸಿರುವುದು ಕಂಡುಬಂದಿದೆ. ಹಾಗೂ ೪ (೨.೬೬)ರಷ್ಟು ಅನ್ವಯಿಸುವುದಿಲ್ಲ ಎಂಬ ಅಭಿಪ್ರಾಯವನ್ನು ನೀಡಿರುತ್ತಾರೆ.

• ಉಡುಪಿ ಜಿಲ್ಲೆಯ ಮರಾಟಿ ನಾಯ್ಕ ಮತ್ತು ಮರಾಟಿ ಸಮುದಾಯಗಳ ಒಟ್ಟು ೩೦೦ ಕುಟುಂಬಗಳ ಗಂಡು ಮಕ್ಕಳಿಗೆ ಶಿಕ್ಷಣವನ್ನು ನೀಡಲಿಚ್ಚಿಸಿರುವ ಶಿಕ್ಷಣದ ಮಾಹಿತಿಯನ್ನು ಹೋಲಿಕೆ ಮಾಡಿದಾಗ ಹೆಚ್ಚಿನವರಿಗೆ ಪದವಿ ಶಿಕ್ಷಣ, ಕಾನೂನು ಹಾಗೂ ವೃತ್ತಿಪರ ಶಿಕ್ಷಣವನ್ನು ಕೆಲವರು ಪಡೆದರೆ ಉಳಿದ ಕೆಲವರು ವೃತ್ತಿಪರ ಶಿಕ್ಷಣವನ್ನು ಪಡೆದವರಿದ್ದಾರೆ. ಅತೀ ಕಡಿಮೆ ಸಂಖ್ಯೆಯಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದಿದ್ದನ್ನು ಕಾಣಬಹುದಾಗಿದೆ.

ಶಿಕ್ಷಣವನ್ನು ಅರ್ಧಕ್ಕೆ ಬಿಟ್ಟವರ ಕಾರಣಗಳು

ಕೇಂದ್ರ ಮತ್ತು ರಾಜ್ಯ ಸರ್ಕಾರ ಬುಡಕಟ್ಟು ಸಮುದಾಯದವರ ಸರ್ವತೋಮುಖ ಅಭಿವೃದ್ಧಿಗೆ ಹಲವಾರು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದರೂ ಈ ಎರಡೂ ಸಮುದಾಯದಲ್ಲಿ ಅವಿದ್ಯಾವಂತರ ಸಂಖ್ಯೆ ಹೆಚ್ಚಾಗಿರಲು ಮತ್ತು ಮಧ್ಯದಲ್ಲಿಯೇ ಶಾಲೆಗಳನ್ನು ಬಿಡುವವರ ಮತ್ತು ಬಿಡಲು ಕಾರಣವೇನೆಂದು ತಿಳಿದುಕೊಳ್ಳಲು ಸಮೀಕ್ಷಾ ಮಾಹಿತಿಯನ್ನು ಕ್ರೋಢೀಕರಿಸಿದಾಗ ಮತ್ತು ಕ್ಷೇತ್ರಕಾರ್ಯ ಸಂದರ್ಭದಲ್ಲಿ ಅನೌಪಚಾರಿಕ ಮಾತುಕತೆಯ ಸಂದರ್ಭದಲ್ಲಿ ಈ ಕೆಳಗಿನ ಅಂಶಗಳನ್ನು ತಿಳಿದುಕೊಳ್ಳಲಾಯಿತು.

೧. ಸಮೀಕ್ಷೆಗೆ ಒಳಪಟ್ಟ ಮರಾಟಿ ನಾಯ್ಕ ಮತ್ತು ಮರಾಟಿ ಸಮುದಾಯದವರು ದಟ್ಟವಾದ ಕಾಡು ಪ್ರದೇಶ, ಬೆಟ್ಟಗುಡ್ಡಗಳ ಅಂಚಿನಲ್ಲಿ ವಾಸ ಮಾಡುತ್ತಿದ್ದಾರೆ. ಇಂತಹ ಪ್ರದೇಶಗಳಲ್ಲಿ ಶಾಲಾ ವ್ಯವಸ್ಥೆಯನ್ನು

ಪರಿಪೂರ್ಣವಾಗಿ ಇನ್ನೂ ಕಲ್ಪಿಸಿಲ್ಲ. ಇವರಲ್ಲಿ ವಿದ್ಯಾಭ್ಯಾಸದ ಬಗ್ಗೆ ಹೆಚ್ಚಿನ ತಿಳುವಳಿಕೆ ಇಲ್ಲದಿರುವುದು ಕಂಡುಬಂದಿದೆ.

೨. ಈ ಸಮುದಾಯಗಳ ಜನರ ಬಡತನವೂ ಸಹ ಶಿಕ್ಷಣ ಪಡೆಯುವುದಕ್ಕೆ ಮಾರಕವಾಗಿದೆ. ಬಡತನದ ಕಾರಣದಿಂದಾಗಿ ಈ ಜನರು ತಮ್ಮ ಮಕ್ಕಳನ್ನು ಶಾಲೆಗಳಿಗೆ ಕಳುಹಿಸುವುದರ ಬದಲು ತಮ್ಮ ಜೊತೆ ಕೆಲಸಕ್ಕೆ ಕರೆದುಕೊಂಡು ಹೋಗುತ್ತಾರೆ. ಕೃಷಿಕೂಲಿ ಕಾರ್ಮಿಕರಾಗಿ ಜೀವನ ನಿರ್ವಹಿಸಲು ಪ್ರೋತ್ಸಾಹಿಸುತ್ತಿರುವುದು ಕಂಡುಬರುತ್ತದೆ.

೩. ಭಾಷಾ ಮಾಧ್ಯಮವೂ ಕೂಡಾ ಮರಾಟಿ ಮತ್ತು ಮರಾಟಿ ನಾಯ್ಕರಿಗೆ ಶಿಕ್ಷಣ ಪಡೆಯಲು ಬಹಳ ತೊಡಕಾಗಿದೆ. ಅಧ್ಯಯನಕ್ಕೊಳಪಡಿಸಿರುವ ಎರಡೂ ಸಮುದಾಯದವರು ತಮ್ಮದೇ ಆದಂತಹ ಕೊಂಕಣಿ ಮಿಶ್ರಿತ ಮರಾಟಿ ಭಾಷೆಯನ್ನು ಹೊಂದಿದ್ದಾರೆ. ಆದರೆ ಈ ಭಾಷೆಗೆ ಲಿಪಿ ಇಲ್ಲ, ಅವರಾಡುವ ಭಾಷೆ ಹೊರಗಿನ ಪ್ರದೇಶದಲ್ಲಿ ಇಲ್ಲ ಮತ್ತು ಹೊರಗಿನ ಪ್ರತಿಯೊಂದು ಭಾಷೆಯು ಅವರಿಗೆ ಪರಕೀಯ ಭಾಷೆಯಾಗಿ ಕಾಣುತ್ತಿದೆ. ಗ್ರಾಮಾಂತರ ಪ್ರದೇಶಗಳಲ್ಲಿ ಕ್ರಿಶ್ಚಿಯನ್ ಮಿಷನರಿಗಳು ತೆರೆದಿರುವ ಶಾಲೆಗಳಲ್ಲಿ ಭಾಷಾ ಮಾಧ್ಯಮ ಇಂಗ್ಲಿಷ್. ಈ ಭಾಷೆಯನ್ನು ಅರ್ಥ ಮಾಡಿಕೊಳ್ಳುವಲ್ಲಿ ಅವರು ಅಸಮರ್ಥರಾಗಿದ್ದಾರೆ.

೪. ಮರಾಟಿ ಸಮುದಾಯದವರು ಚಿಕ್ಕ ಚಿಕ್ಕ ಗುಂಪುಗಳಾಗಿ ಪರ್ವತದ ಅಂಚಿನಲ್ಲಿ ಪ್ರತ್ಯೇಕವಾಗಿ ವಾಸಿಸುತ್ತಿರುವುದು ಹಾಗೂ ನಾಗರಿಕ ಸಮಾಜದಿಂದ ದೂರ ಇರುವುದರಿಂದ ಈ ಜನರಿಗೆ ವಿದ್ಯಾಭ್ಯಾಸದ ಮಹತ್ವ ತಿಳಿದಿಲ್ಲ ಮತ್ತು ಅವರ ವಿದ್ಯಾಭ್ಯಾಸಕ್ಕಾಗಿ ಸರ್ಕಾರ ಒದಗಿಸುತ್ತಿರುವ ಶೈಕ್ಷಣಿಕ ಸೌಲಭ್ಯಗಳ ಬಗ್ಗೆ ಯಾವುದೇ ಅರಿವಿಲ್ಲ ಎಂದೂ ಹೇಳಬಹುದು.

೫. ಯಾವುದೇ ಒಬ್ಬ ವ್ಯಕ್ತಿ ವಿದ್ಯಾವಂತನಾಗಲು ಆ ವ್ಯಕ್ತಿಗೆ ಬೋಧನೆ ಮಾಡುತ್ತಿರುವ ಶಿಕ್ಷಕನ ಪಾತ್ರ ಬಹಳ ಪ್ರಮುಖವಾದದ್ದು. ಶಿಕ್ಷಣದ ಯಶಸ್ಸು ಕೂಡ ಶಿಕ್ಷಕರ ಗುಣಮಟ್ಟವನ್ನು ಅವಲಂಬಿಸಿರುತ್ತದೆ. ಈ ಸಮುದಾಯದವರಿಗೆ ವಿದ್ಯಾಭ್ಯಾಸ ನೀಡಲು ಬರುವ ಹೆಚ್ಚಿನ ಶಿಕ್ಷಕರು ಹೊರಗಿನವರಾಗಿದ್ದಾರೆ. ಅಂದರೆ ನಾಗರಿಕ ಅಥವಾ ಪಟ್ಟಣ ಪ್ರದೇಶದಿಂದ ಬಂದಂತಹ ಉಪಾಧ್ಯಾಯರಾಗಿದ್ದಾರೆ. ಇವರಿಗೆ ಈ ಸಮುದಾಯದ ಜನರ ಜೀವನ ವಿಧಾನ, ಸಂಸ್ಕೃತಿಯ ಬಗ್ಗೆ ಯಾವುದೇ ತಿಳುವಳಿಕೆ ಇರುವುದಿಲ್ಲ. ಹಾಗೆಯೇ ಶಿಕ್ಷಕ ಮತ್ತು ಈ ಸಮುದಾಯದ ಜನರು ಒಬ್ಬರಿಗೊಬ್ಬರು ಪರಿಚಿತರಲ್ಲದವರಾದುದರಿಂದ ಅಪರಿಚಿತರಂತೆ ವರ್ತಿಸುತ್ತಾರೆ. ಈ ಸಮುದಾಯದವರ ಮನೆಯಲ್ಲಿ ವಿದ್ಯಾಭ್ಯಾಸ ಕಲಿಯುವ ಪೂರಕ ವಾತಾವರಣ ಇಲ್ಲದಿರುವುದರಿಂದ ಮಕ್ಕಳಲ್ಲಿ ಸಹಜವಾಗಿ ವಿದ್ಯಾಭ್ಯಾಸದ ಕಡೆ ಹೆಚ್ಚು ಆಸಕ್ತಿ ಇರುವುದಿಲ್ಲ. ಮಾಸಿಕ ಸಂಬಳಕ್ಕಾಗಿ ಶಿಕ್ಷಕರಾಗಿರುವ ಶಿಕ್ಷಕರು ಹೆಚ್ಚಿನ ಆಸಕ್ತಿ ವಹಿಸಿ ಈ ಮಕ್ಕಳನ್ನು ವಿದ್ಯಾವಂತರನ್ನಾಗಿಸಲು ಮುಂದೆ ಬರುತ್ತಿಲ್ಲ.

ಕೋಷ್ಟಕ: ೫.೧೬

ತಿಳುವಳಿಕೆದಾರರ ಕುಟುಂಬ ಸದಸ್ಯರು ಶಾಲಾ-ಕಾಲೇಜನ್ನು ಅರ್ಧಕ್ಕೆ ಬಿಟ್ಟಿರುವವರ ಬಗೆಗಿನ ಕಾರಣಗಳ ವಿವರಗಳು

ಸಮುದಾಯದ ಹೆಸರು	ತಾಲೂಕು	ಶಾಲೆಯನ್ನು ಅರ್ಧಕ್ಕೆ ಬಿಟ್ಟಿರುವವರ ಸಂಖ್ಯೆ ವಿವರಗಳು			ಕಾರಣಗಳ ಹಂಚಿಕೆ				ಒಟ್ಟು
		ಹೌದು	ಇಲ್ಲ	ಒಟ್ಟು	ಬಡತನ	ಶಿಕ್ಷಣದ ಮಹತ್ವ ಗೊತ್ತಿರಲಿಲ್ಲ	ಸರಿಯಾದ ವ್ಯವಸ್ಥೆ ಇರಲಿಲ್ಲ	ಆಸಕ್ತಿ ಇರಲಿಲ್ಲ	
ಮರಾಟಿ ನಾಯ್ಕ	ಕುಂದಾಪುರ	೨೯	೨೧	೫೦	೨೦	೦೧	೦೧	೦೭	೨೯
	ಉಡುಪಿ	೧೯	೩೧	೫೦	೦೬	೦೮	೦೪	೦೧	೧೯
	ಕಾರ್ಕಳ	೨೭	೨೩	೫೦	೦೯	೦೭	೦೮	೦೩	೨೭
	ಒಟ್ಟು	೭೫	೭೫	೧೫೦	೩೫	೧೬	೧೩	೧೧	೭೫
	ಶೇಕಡವಾರು	೫೦.೦೦	೫೦.೦೦	೧೦೦.೦೦	೪೬.೬೭	೨೧.೩೩	೧೭.೩೩	೧೪.೬೭	೧೦೦.೦೦
ಮರಾಟಿ	ಕಾರ್ಕಳ								
	ಒಟ್ಟು	೫೧	೯೯	೧೫೦	೨೪	೧೭	೦೬	೦೪	೫೧
	ಶೇಕಡವಾರು	೩೪.೦೦	೬೬.೦೦	೧೦೦.೦೦	೪೭.೦೬	೩೩.೩೩	೧೧.೭೬	೭.೮೪	೧೦೦

೫.೧೬ರ ಕೋಷ್ಟಕದಲ್ಲಿ ತಿಳುವಳಿಕೆದಾರರ ಕುಟುಂಬದ ಸದಸ್ಯರ ಶಿಕ್ಷಣವನ್ನು ಕಡಿತಗೊಳಿಸಿರುವ ಬಗೆಗೆ ಕಾರಣಗಳನ್ನು ಕೇಳಿದಾಗ ಅವರ ಪ್ರಕಾರ ಕುಂದಾಪುರ, ಉಡುಪಿ, ಕಾರ್ಕಳ ತಾಲೂಕಿನ ವ್ಯಾಪ್ತಿಯಲ್ಲಿ ಬರುವ ಮರಾಟಿ ನಾಯ್ಕ ಸಮುದಾಯದಲ್ಲಿ ಶೇಕಡಾ ೫೦% ಜನ ಶಿಕ್ಷಣವನ್ನು ಅರ್ಧಕ್ಕೆ ಬಿಟ್ಟಿದ್ದಾರೆ. ಮತ್ತು ಶೇಕಡಾ ೫೦% ಜನರು ತಮ್ಮ ಶಿಕ್ಷಣವನ್ನು ಪೂರ್ಣಗೊಳಿಸಿರುವುದು ಕಂಡುಬರುತ್ತದೆ. ಇದಕ್ಕೆ ಸಂಬಂಧಿಸಿದಂತೆ ಕಾರಣವನ್ನು ಕೇಳಿದಾಗ ಬಡತನದ ಕಾರಣದಿಂದಾಗಿ ಒಟ್ಟು ೩೫ (೪೬.೬೭%) ರಷ್ಟು, ೧೬ (೨೧.೩೩%) ರಷ್ಟು ಕುಟುಂಬಗಳು ಶಿಕ್ಷಣದ ಮಹತ್ವ ತಿಳಿಯದೆ ತಮ್ಮ ಶಿಕ್ಷಣವನ್ನು ಅರ್ಧಕ್ಕೆ ನಿಲ್ಲಿಸಿದರೆ, ಸಾರಿಗೆ ವ್ಯವಸ್ಥೆಯಿಲ್ಲದೆ ಒಟ್ಟು ೧೩ (೧೭.೩೩%) ಮತ್ತು ೧೧ (೧೪.೬೭%) ರಷ್ಟು ಆಸಕ್ತಿ ಇಲ್ಲದೆ ಶಿಕ್ಷಣವನ್ನು ಅರ್ಧಕ್ಕೆ, ನಿಲ್ಲಿಸಿರುವುದು ಕಂಡುಬರುತ್ತದೆ.

ಮರಾಟಿ ಸಮುದಾಯದಲ್ಲಿ ಶೇಕಡಾ ೩೪% ರಷ್ಟು ಜನರು ತಮ್ಮ ಶಿಕ್ಷಣವನ್ನು ಅರ್ಧಕ್ಕೆ ನಿಲ್ಲಿಸಿದರೆ, ಶೇಕಡಾ ೬೬.೦೦% ಜನರು ತಮ್ಮ ಶಿಕ್ಷಣವನ್ನು ಪೂರ್ಣಗೊಳಿರುವುದು ಕಂಡುಬರುತ್ತದೆ. ಶಿಕ್ಷಣವನ್ನು ಅರ್ಧಕ್ಕೆ ನಿಲ್ಲಿಸಿರುವುದು ಕಾರಣಗಳನ್ನು ಗುರುತಿಸಿದಾಗ ಬಡತನಕ್ಕೆ ಒಟ್ಟು ೨೪(೪೭.೦೬) ಶಿಕ್ಷಣದ ಮಹತ್ವ ತಿಳಿಯದೆ ೧೭ (೩೩.೩೩%) ತಮ್ಮ ಶಿಕ್ಷಣವನ್ನು ಅರ್ಧಕ್ಕೆ ನಿಲ್ಲಿಸಿದರೆ ಒಟ್ಟು ೦೬ (೧೧.೭೭%) ರಷ್ಟು ಜನ ಸಾರಿಗೆ ವ್ಯವಸ್ಥೆಯಿಲ್ಲದೆ ಮತ್ತು ಆಸಕ್ತಿ ಇಲ್ಲದೆ ೦೪ (೭.೮೪%) ರಷ್ಟು ಜನರು ತಮ್ಮ ಶಿಕ್ಷಣವನ್ನು ಅರ್ಧಕ್ಕೆ ನಿಲ್ಲಿಸಿರುವುದು ಕಂಡುಬರುತ್ತದೆ.

• ಉಡುಪಿ ಜಿಲ್ಲೆಯ ಮರಾಟಿ ನಾಯ್ಕ ಮತ್ತು ಮರಾಟಿ ಸಮುದಾಯಗಳ ಒಟ್ಟು ೩೦೦ ಕುಟುಂಬಗಳ ಶಾಲಾ-ಕಾಲೇಜನ್ನು ಅರ್ಧದಲ್ಲಿ ಬಿಟ್ಟಿರುವ ಹಿನ್ನೆಲೆಯನ್ನು ಗಮನಿಸಿದಾಗ ಮರಾಟಿ ನಾಯ್ಕರಲ್ಲಿ ಪೂರ್ವ ಶಿಕ್ಷಣವನ್ನು ಪಡೆದವರಿಗಿಂತ ಅರ್ಧದಲ್ಲಿ ಬಿಟ್ಟವರನ್ನು ಹೆಚ್ಚಾಗಿ ಕಾಣುತ್ತೇವೆ. ಆದರೆ ಮರಾಟಿಗರಲ್ಲಿ ಅರ್ಧದಲ್ಲಿ ಬಿಟ್ಟವರಿಗಿಂತ ಪೂರ್ತಿ ಶಿಕ್ಷಣವನ್ನು ಪಡೆದವರು ಹೆಚ್ಚಾಗಿರುವುದು ಕಂಡುಬರುತ್ತದೆ. ಅದರಲ್ಲೂ ಮರಾಟಿ ನಾಯ್ಕರು ಹಾಗೂ ಮರಾಟಿ ಎರಡು ಸಮುದಾಯಗಳಲ್ಲಿ ಬಡತನದ ಸಮಸ್ಯೆಯಿಂದಲೇ ಹೆಚ್ಚಾಗಿ ತಮ್ಮ ಶಿಕ್ಷಣವನ್ನು ಅರ್ಧದಲ್ಲಿ ನಿಲ್ಲಿಸಿರುವುದು ಕಂಡುಬರುತ್ತದೆ.

ಮರಾಟಿ ಮತ್ತು ಮರಾಟಿ, ನಾಯ್ಕ ಈ ಎರಡೂ ಸಮುದಾಯಗಳಿಗೆ ಶಿಕ್ಷಣದ ಮಹತ್ವ ಮತ್ತು ಸರಕಾರದಿಂದ ಮಕ್ಕಳಿಗೆ ಸಿಗುತ್ತಿರುವ ಸೌಲಭ್ಯಗಳ ಬಗೆಗೆ ಪರಿಣಾಮಕಾರಿಯಾದ ಮಾಹಿತಿಯನ್ನು ಸರಕಾರ, ಸಂಘ ಸಂಸ್ಥೆಗಳು ನೀಡಬೇಕು. ಈ ಸಮುದಾಯದ ಪ್ರತಿಯೊಬ್ಬರು ಶಿಕ್ಷಣ ಪಡೆದರೆ ಸಮುದಾಯದ ಪ್ರಗತಿಯಲ್ಲಿ ಪಾಲುದಾರರಾಗುವುದರಲ್ಲಿ ಸಂಶಯವಿಲ್ಲ.

ಕೊನೆ ಟಿಪ್ಪಣಿಗಳು

೧. ಚಂದ್ರಶೇಖರ ದಾಮ್ಲೆ, ೧೯೯೫, ಪು-೩೬

೨. ಚಂದ್ರಶೇಖರ ದಾಮ್ಲೆ, ೧೯೬೫, ಪು-೪೧

೩. ಚಂದ್ರಶೇಖರ ದಾಮ್ಲೆ, ೧೯೬೫, ಪು-೫೬

ಅಧ್ಯಾಯ : ಆರು
ಮರಾಟಿ ಸಮುದಾಯಗಳಲ್ಲಿ ದೈವಾರಾಧನೆ ತೌಲನಿಕ ಅಧ್ಯಯನ

ಪೀಠಿಕೆ

ಧರ್ಮವು ಒಂದು ಸಾರ್ವತ್ರಿಕ ವಿದ್ಯಮಾನವಾಗಿದೆ. ಮಾನವನ ಚಟುವಟಿಕೆಯ ಆರಂಭಿಕ ರೂಪಗಳಲ್ಲಿ ಒಂದಾಗಿದೆ. ಮತಧರ್ಮವು ಮತ್ತು ಮನುಷ್ಯನ ಸಂಬಂಧವು ಅತಿಮಾನವ ಶಕ್ತಿಯೊಂದಿಗೆ ಪ್ರತಿನಿಧಿಸುತ್ತದೆ. ಸಾಮಾನ್ಯವಾಗಿ ಎಲ್ಲಾ ಧರ್ಮಗಳಲ್ಲಿ ಬಾಹ್ಯವಾಗಿ ಕಂಡುಬರುವ ಪ್ರಮುಖ ನಂಬಿಕೆಗಳು, ವಿಧಿ ವಿಧಾನಗಳು, ಆರಾಧನೆ ಮತ್ತು ಆಚರಣೆಯ ವ್ಯವಸ್ಥೆಯ ಮೂಲಕ ವ್ಯಕ್ತವಾಗುತ್ತದೆ. “ಎಮಿಲಿ ಡರ್ಕೈಮ್ ರವರ ಧರ್ಮವು ಪವಿತ್ರ ವಸ್ತು ವಿಷಯಗಳ ಬಗ್ಗೆ ಇರುವ ನಂಬಿಕೆ ಮತ್ತು ಆಚರಣೆಗಳ ಏಕೀಕೃತ ವ್ಯವಸ್ಥೆಯಾಗಿದೆ. ಮುಂದುವರಿದು ಮತಧರ್ಮವು ರಚನಾತ್ಮಕ ಮತ್ತು ಕ್ರಿಯಾತ್ಮಕ ಅಂಶಗಳನ್ನು ವಿಶ್ಲೇಷಿಸುತ್ತದೆ ಎಂಬುದಾಗಿ ಅವರು ಅಭಿಪ್ರಾಯ ಪಟ್ಟಿರುತ್ತಾರೆ”.[೧] ಅಲ್ಲದೆ ಧಾರ್ಮಿಕ ಅನುಭವವು ಪವಿತ್ರ ಮತ್ತು ಅಪವಿತ್ರವಾದ ಅನುಭವವಾಗಿದೆ. ಮಾನವನ ಅಧ್ಯಾತ್ಮ ವಿಚಾರಗಳು, ಧಾರ್ಮಿಕ ಅನುಭವಗಳ ಕುರಿತು ಆತನ ಪ್ರತಿಕ್ರಿಯೆಗಳಿಂದ ಕಠಿಣವಾದ ಗುಂಪುಗಳು ಮತ್ತು ಧಾರ್ಮಿಕ ಸಂಸ್ಥೆಗಳು ಅಭಿವೃದ್ಧಿಗೊಳ್ಳುತ್ತಾ ಹೋಗುತ್ತವೆ.

ಬುಡಕಟ್ಟು ಸಮುದಾಯಗಳ ಸಾಂಘಿಕ, ಸಾಂಸ್ಥಿಕ ಪಾತ್ರಗಳು ಮತ್ತು ಕಾರ್ಯ ವಿಧಾನಗಳು ಸಂಕೀರ್ಣವಾಗಿದ್ದು, ಇದು ಮಾನವನ ಸಂಬಂಧವನ್ನು ಅತಿಮಾನುಷ ಕ್ರಮದೊಂದಿಗೆ ನಿಯಂತ್ರಿಸುತ್ತದೆ ಮತ್ತು ಅಂತಹ ಆದೇಶಗಳನ್ನು ಕಲ್ಪಿಸಿಕೊಳ್ಳುತ್ತದೆ. ಬುಡಕಟ್ಟು ಧರ್ಮವು ಧರ್ಮದ ಅತ್ಯಂತ ಪ್ರಾಚೀನ ರೂಪವೆಂದು ಪರಿಗಣಿಸಲಾಗಿದೆ. ಬುಡಕಟ್ಟು ಸಮುದಾಯದವರು ಕಾಡು ಪ್ರಾಣಿಗಳನ್ನು, ಮರ, ಸೂರ್ಯ, ಚಂದ್ರ, ಮಳೆ, ಪರ್ವತ, ನದಿ ಬೆಟ್ಟ, ಗುಡ್ಡ ಇವುಗಳಲ್ಲಿ ನಂಬಿಕೆ, ವಾಮಾಚಾರದ ಮೇಲೆ ನಂಬಿಕೆ, ಆತ್ಮದ ಅಮರತ್ವದ ನಂಬಿಕೆ, ಆಚರಣೆ ಮುಂತಾದ ಪ್ರಕೃತಿಗೆ ಸಂಬಂಧಿತ ಅಂಶಗಳನ್ನು ಆರಾಧಿಸುವುದನ್ನೊಳಗೊಂಡಿದೆ. ಹೀಗಾಗಿ ಬುಡಕಟ್ಟು ಧರ್ಮವು ಜೀವನದ ಬಹುತೇಕ ಎಲ್ಲಾ ಅಂಶಗಳನ್ನು ಪ್ರವೇಶಿಸುತ್ತಿದೆ.

ಬುಡಕಟ್ಟು ಸಮುದಾಯದ ಧಾರ್ಮಿಕ ಜೀವನದಲ್ಲಿ ಸರ್ವಚೇತನವಾದ (Animism)[೨] Animism ಕುಲದೇವತಾವಾದ (Totemism)[೩] ನಿಷೇಧ (Taboo)[೪] ಮಾಂತ್ರಿಕ ವಿದ್ಯೆ (Magic)[೫] ಮತ್ತು ಪಿತೃಗಳ ಆರಾಧನೆಗಳು ಗಮನಾರ್ಹವಾದ ಪ್ರಮುಖ ಗುಣಲಕ್ಷಣಗಳಾಗಿವೆ. “ಆರ್.ಸಿ. ಮೊಜುಂದಾರ್‌ರವರ ಪ್ರಕಾರ ಸರ್ವಚೇತನವಾದವು ಧರ್ಮದ ಕಚ್ಚಾ ರೂಪವಾಗಿದ್ದು, ಇದರಲ್ಲಿ ಮಾಂತ್ರಿಕತೆಯು ಪ್ರಮುಖ ಅಂಶವಾಗಿದೆ. ದೆವ್ವ ಮತ್ತು ಆತ್ಮಗಳ ಮೇಲೆ ನಂಬಿಕೆ, ಬಲಿಗಳ ಅರ್ಪಣೆ,

ವಿವಿಧ ರೀತಿಯ ಮಾಂತ್ರಿಕ ಚಟುವಟಿಕೆಗಳು ಪೂರ್ವಜರ ಆರಾಧನೆ ಪೂಜಿಸುವ ಪ್ರಾಣಿ ಪಕ್ಷಿಗಳು ಮತ್ತು ನಿರ್ಜೀವ ವಸ್ತುಗಳು ಸರ್ವಚೇತನವಾದದ ಕೆಲವು ಪ್ರಮುಖ ಅಂಶಗಳಾಗಿವೆ"[೬]. ಸತ್ತವರ ಆತ್ಮವು ಒಂದು ಪ್ರಬಲವಾದ ಆಧ್ಯಾತ್ಮ ಶಕ್ತಿಯಾಗಿ ರೂಪಾಂತರಗೊಳ್ಳುತ್ತದೆ" ಎಂದು ಬುಡಕಟ್ಟು ಸಮುದಾಯದವರು ನಂಬುತ್ತಾರೆ. ಇದು ಜೀವನದ ಮೇಲೆ ವಿವಿಧ ರೀತಿಯಲ್ಲಿ ಪರಿಣಾಮವನ್ನು ಬೀರುತ್ತದೆ ಮತ್ತು ಸತ್ತವರ ಸಂಬಂಧಿಕರಿಗೆ ಅನುಕೂಲ ಹಾಗೂ ಅನಾನುಕೂಲವಾಗಿರುತ್ತದೆ. ಮರಾಟಿ ಸಮುದಾಯಗಳಾಗಿರುವ ಕುಡುಬಿ, ಕುಂಬ್ರಿ, ಕುಣುಬಿ, ಮರಾಟಿ ಮತ್ತು ಮರಾಟಿ ನಾಯ್ಕ ಬುಡಕಟ್ಟು ಸಮುದಾಯದವರು ಸರ್ವಚೇತನಾವಾದಿಗಳಾಗಿರುವುದು ಕ್ಷೇತ್ರಕಾರ್ಯ ಸಂದರ್ಭದಲ್ಲಿ ಕಂಡುಬರುತ್ತದೆ. ಅವರು ತಮ್ಮ ಜೀವನವು ಒಂದು ರೀತಿಯ ಪ್ರಾಕೃತಿಕ, ಆಧ್ಯಾತ್ಮಿಕ ಮತ್ತು ಮಾಂತ್ರಿಕ ಶಕ್ತಿಯಿಂದ ನಿಯಂತ್ರಿಸಲ್ಪಡುತ್ತದೆ ಮತ್ತು ಮಾರ್ಗದರ್ಶಿಸಲ್ಪಡುತ್ತದೆ ಎಂದು ನಂಬುತ್ತಾರೆ. ಅವರ ಧಾರ್ಮಿಕತೆ ಕೆಲವು ಅಂಶಗಳು ಆರಂಭಿಕ ಕುಲದೇವತಾವಾದವನ್ನು (Totemism) ಸೂಚಿಸುತ್ತದೆ. ಆದರೆ ಇಂದಿನ ಸಮಾಜದಲ್ಲಿ ಅವರ ಧಾರ್ಮಿಕತೆಯ ಮೇಲೆ ಅವರ ಸುತ್ತಲೂ ವಾಸಿಸುತ್ತಿರುವ ಅನ್ಯ ಪ್ರಬಲವಾದ ಧರ್ಮದಿಂದ ಹೆಚ್ಚು ಪ್ರಭಾವಿತವಾಗಿದೆ. ಹಿಂದೂ ಧಾರ್ಮಿಕ ಆಚರಣೆಗಳ ಪ್ರಭಾವವು ಮರಾಟಿಗರ ನಂಬಿಕೆ ಮತ್ತು ಆಚರಣೆಗಳಲ್ಲಿ ಕೆಲವು ಬದಲಾವಣೆಗಳನ್ನು ತಂದಿದೆ. ಸ್ಟೀಫನ್ ಫೂಕ್ (Stephen Fuchs) ಅಭಿಪ್ರಾಯದಂತೆ "ಕುಮೇರಿ ಕೃಷಿ ಅಥವಾ ಸ್ಥಳಾಂತರ ಕೃಷಿಯನ್ನು ಮಾಡುತ್ತಿರುವ ಬುಡಕಟ್ಟು ಜನಾಂಗದವರಲ್ಲಿ ಹಿಂದೂ ಧರ್ಮದ ಪ್ರಭಾವವು ಕಡಿಮೆ ಪ್ರಮಾಣದಲ್ಲಿ ಪ್ರಭಾವ ಬೀರುತ್ತದೆ"[೭]. ಮರಾಟಿ ನಾಯ್ಕರು ಸ್ಥಳಾಂತರ ಕೃಷಿ ಹಂತದಿಂದ ನೆಲೆನಿಂತ ಕೃಷಿ ಹಂತವಾಗಿ ಮತ್ತು ನೆಲೆಸಿದ ಕೃಷಿ ಹಂತದಿಂದ ಆಧುನಿಕ ಕೃಷಿ ಮತ್ತು ಕಸುಬುಗಳ ಹಾಗೂ ಆಧುನಿಕ ಉದ್ಯೋಗದಲ್ಲಿ ಹಂತ ಹಂತವಾಗಿ ಪರಿವರ್ತನೆಗೊಳ್ಳುತ್ತಿದ್ದಾರೆ. ಆದ್ದರಿಂದ ಇಂದು ಮರಾಟಿಗರು ಹಾಗೂ ಇತರೆ ಬುಡಕಟ್ಟು ಸಮುದಾಯದವರು ಅನುಸರಿಸುತ್ತಿರುವ ಸರ್ವಚೇತನ ಆರಾಧನಾ ಕ್ರಮ ಕುಲದೇವತಾವಾದ ಬದಲಾವಣೆಗೊಳ್ಳುತ್ತಾ ಸ್ಥಳೀಯವಾಗಿ ಪ್ರಬಲವಾದ ಮತಧರ್ಮಗಳ ಪ್ರಭಾವವು ಹೆಚ್ಚಾಗಿ ಕಂಡುಬರುತ್ತದೆ.

ಪ್ರಸ್ತುತ ಅಧ್ಯಾಯದಲ್ಲಿ ಮರಾಟಿ ನಾಯ್ಕ ಮತ್ತು ಮರಾಟಿ ಸಮುದಾಯದವರು ಆರಾಧಿಸುತ್ತಿರುವ ಭೂತ, ಭೂತಗಳ ಆರಾಧನಾ ಸ್ವರೂಪ, ನಾಗಾರಾಧನೆಯ ಸ್ವರೂಪಗಳು, ಕುಲೆ ಆರಾಧನೆ, ಕುಲೆ ಮದ್ಮೆ (ಮದುವೆ ತುಳು) ಮಾತೃ ದೇವತಾರಾಧನೆಯ ಪ್ರತೀಕವಾಗಿರುವ ಗೊಂದೋಳು ಪೂಜೆ, ಸಿರಿ ಆರಾಧನೆ, ಭೈರವಾರಾಧನೆ, ತಿರುಪತಿ ವೆಂಕಟ್ರರಮಣ ದೇವರಿಗಾಗಿ ಮುಡಿಪು ಸೇವೆ ಮತ್ತು ಪಾನಕ ಪೂಜೆ, ದೇವಿಯ ಭಂಟನಾದ ಮತ್ತು ಪ್ರಾಣಿ ಬಲಿ, ಹೋಳಿ ಆಚರಣೆ ಮುಂತಾದವು ಮರಾಟಿ ನಾಯ್ಕ ಹಾಗೂ ಮರಾಟಿ ಸಮುದಾಯದವರಿಗೆ ಸಂಬಂಧಿತ ಆರಾಧನೆಯ ವಿಷಯಗಳನ್ನು ಕ್ಷೇತ್ರ ಕಾರ್ಯದ ಸಂದರ್ಭದಲ್ಲಿ ಗಮನಿಸಿದ ವಿಷಯವನ್ನು ಸಂಗ್ರಹಿಸಿ ಮಾಹಿತಿಯನ್ನು ವಿಶ್ಲೇಷಿಸಲಾಗಿದೆ.

೬.೧. ಮರಾಟಿ ಸಮುದಾಯಗಳ ಧಾರ್ಮಿಕ ಮತ್ತು ಸಾಂಸ್ಕೃತಿಕ ಆಚರಣೆಗಳ ತೌಲನಿಕತೆ

ಉಡುಪಿ ಜಿಲ್ಲೆಯಾದ್ಯಂತ ಇರುವ ಮರಾಟಿ ನಾಯ್ಕರು ಶಕ್ತಿದೇವತೆ, ಮಾತೃದೇವತೆಯಾದ ಮಹಾಮ್ಮಾಯಿಯನ್ನು ವಿವಿಧ ರೂಪದಲ್ಲಿ ಆರಾಧಿಸುತ್ತಿಂವುದು ಕಂಡುಬರುತ್ತದೆ. "ಅಂಬಾಭವಾನಿ, ತುಳಜಾ, ಭವಾನಿ, ದುರ್ಗಾಪರಮೇಶ್ವರಿ, ದುರ್ಗಾದೇವಿ, ದುರ್ಗಾಂಬಾ, ಭವಾನಿ, ಗದ್ದುಗೆಅಮ್ಮ ದೇವಿ, ನವದುರ್ಗಾ, ಮಾರಿಕಾಂಬೆ, ಮಹಾಸತಿ ಲಕ್ಷ್ಮೀ, ವನದುರ್ಗಾ, ಮಹಿಷಾಮರ್ದಿನಿ, ಅಮ್ಮನವರು,

ಶಾಂತಾದುರ್ಗಾ, ಸಿಂಹವಾಹಿನಿ ದುರ್ಗಪರಮೇಶ್ವರಿ, ಲಕ್ಷ್ಮೀ ಅಂಬಾಭವಾನಿ ಮುಂತಾದ ಹೆಸರುಗಳಲ್ಲಿ ಕರೆಯುತ್ತಿದ್ದಾರೆ. ಮರಾಟಿ ನಾಯ್ಕ ಸಮುದಾಯದಲ್ಲಿ ಉಡುಪಿ ಜಿಲ್ಲಾಯಾದ್ಯಂತ ಒಟ್ಟು ೪೨ ಗದ್ದುಗೆ ದೇವಸ್ಥಾನಗಳಿವೆ”[೮].

ಕ್ಷೇತ್ರಕಾರ್ಯದಿಂದ ಲಭಿಸಿರುವ ಆರಾಧನಾ ಮಾಹಿತಿಗಳು

ಮರಾಟಿ ನಾಯ್ಕ ಸಮುದಾಯ		ಮರಾಟಿ ಸಮುದಾಯ	
೧.	ಮಾತೃದೇವತೆ/ಮಹಾಮ್ಮಾಯಿ ಆರಾಧನೆ	೧.	ಶಕ್ತಿ ಆರಾಧನೆ /ಮಹಾಮ್ಮಾಯಿ ಆರಾಧನೆ / ಮಾತೃ ದೇವತಾರಧನೆ ೧) ಹಿರಿಯಂಗಡಿ ದುರ್ಗಾಪರಮೇಶ್ವರಿ ದೇವಸ್ಥಾನ ೨) ಗಾಳಿ ಮಾರಿಯಮ್ಮ ದೇವಸ್ಥಾನ–ಹಿರಿಯಂಗಡಿ ೩) ಅಂಬಾಭವಾನಿ ಭಜನಾ ಮಂದಿರ – ಕೊಲಕಾಡಿ
೨.	ಭೈರವ / ಭೈರವಿ ಆರಾಧನೆ (ಮನೆಯ ಒಳಗೆ ಮತ್ತು ಹೊರಗೆ ಆರಾಧನೆ ಮಾಡುತ್ತಾರೆ)	೨.	ಭೈರವ ಆರಾಧನೆ
೩.	ಕುಟುಂಬದ ಭೂತ ಅ) ಮನೆಯ ಒಳಗೆ ಮಣೆಮಂಚಗಳಲ್ಲಿ ಭೂತಗಳನ್ನು ನಂಬಿ ಆರಾಧಿಸುತ್ತಾ ಬಂದಿರುವುದು ಆ) ಮನೆಯ ಹೊರಗೆ ಪ್ರತ್ಯೇಕ ಗುಡಿಗಳನ್ನು ನಿರ್ಮಿಸಿ ನಂಬಿಕೊಂಡು ಬಂದಿರುವ ದೈವಗಳು		
	ಮರಾಟಿನಾಯ್ಕರು ಆರಾಧಿಸುವ ಭೂತಗಳ ವಿವರಗಳು	೩.	ಭೂತಾರಾಧನೆ
	• ಪಂಜುರ್ಲಿ, ವರ್ತೆ ಪಂಜುರ್ಲಿ		• ಕಲ್ಕುಡ – ಕಲ್ಲುರ್ಟಿ
	• ರಾವ್ – ಗುಳಿಗ		• ಗುಳಿಗ
	• ಕಲುರ್ಟಿ – ಕಲ್ಕುಡ		• ವರ್ತೆ
	• ದೂಮಾವತಿ		• ಮಂತ್ರ ದೇವತೆ
	• ಚಿಕ್ಕು – ವಿವಿಧ ರೂಪಗಳು		• ಪಂಜುರ್ಲಿ
	• ಹ್ಯಾಗುಳಿ		• ಚಾವುಂಡಿ
	• ಬೊಬ್ಬರ್ಯ		• ರಕ್ತೇಶ್ವರಿ
	• ಚಾವುಂಡಿ		• ತೂಗತ್ತೇರಿ (ಕಾಳಮ್ಮ)

	• ರಕ್ತೇಶ್ವರಿ		• ಜುಮಾದಿ
	• ಮಾಸ್ತಿಯಮ್ಮ		(ಕ್ಷೇತ್ರಕಾರ್ಯ ಮತ್ತು ಕುಟುಂಬ ಸಮೀಕ್ಷೆಗಳಿಂದ ತಿಳಿದು ಬಂದಿರುವುದು)
೪.	ನಾಗಾರಾಧನೆ	೪.	ನಾಗಾರಾಧನೆ–ಕುಟುಂಬದಲ್ಲಿ ಮೂಲ ನಾಗಸ್ಥಾನಗಳಿವೆ
೫.	ಗೋಂದೋಳು ಪೂಜೆ (ದೇವಿಯ ಗಣಗಳಿಗೆ ರಕ್ತಹಾರ ನೀಡುವ ಸಂಪ್ರದಾಯ ಇದೆ)	೫.	ಕುಲೆ ಆರಾಧನೆ – ಪ್ರೇತ ವಿವಾಹ (ಕುಲೆ ಮದುವೆ)
೬.	ಹೋಳಿ ಕುಣಿತ	೬.	ಹೋಳಿ ಕುಣಿತ
೭.	ಕುಲೆ ಆರಾಧನೆ – ಪ್ರೇತ ವಿವಾಹ (ಕುಲೆಮದ್ಮೆ–ತುಳು)		

೬.೨. ಭೂತಾರಾಧನೆ

ಕರಾವಳಿ ಕರ್ನಾಟಕದಲ್ಲಿ ಧಾರ್ಮಿಕ, ಸಾಂಸ್ಕೃತಿಕ ಆಚರಣೆಗಳಲ್ಲಿ ಭೂತಾರಾಧನೆಯು ಬಹಳ ಮುಖ್ಯವಾದ ಆಚರಣೆಯಾಗಿದೆ. "ತುಳು ಜನಪದರ ಜೀವನ ಶೈಲಿಯನ್ನು ಪ್ರಾಚೀನ ಕಾಲದಿಂದಲೂ ನಿರ್ದೇಶಿಸುತ್ತಾ ಬಂದಿರುವ ವೈವಿಧ್ಯಮಯ ತಾಂತ್ರಿಕ ರೂಪದ ಆರಾಧನೆಯೆ ಭೂತಾರಾಧನೆ ಎಂಬುದಾಗಿ ಕೆ. ಎಲ್. ಕುಂಡತ್ತಾಯ ಅವರು ಅಭಿಪ್ರಾಯಪಟ್ಟಿದ್ದಾರೆ."[೯] ಅಲ್ಲದೆ "ಈ ಪ್ರದೇಶದ ಮುಖ್ಯ ಆರಾಧನಾ ಪ್ರಕಾರಗಳಲ್ಲಿ ಭೂತಾರಾಧನೆಯು ಒಂದು ತುಳುನಾಡಿನ ಪ್ರಾದೇಶಿಕ ಮತ್ತು ಜನಾಂಗೀಯ ಆರಾಧನಾ ಪದ್ಧತಿಯಾಗಿ, ವರ್ತಮಾನ ಕಾಲದೊಂದಿಗೆ ಸ್ಪಂದಿಸುತ್ತಾ ಸಾಗುತ್ತಿದೆ ಎಂಬುದಾಗಿ ಹಿ.ಚಿ. ಬೊರಲಿಂಗಯ್ಯರವರು ಅಭಿಪ್ರಾಯ ಪಟ್ಟಿದ್ದಾರೆ."[೧೦]

ಮರಾಟಿ ಸಮುದಾಯಗಳು ಆರಾಧಿಸುವ ಭೂತಗಳ ವಿವರಗಳು

ಭೂತಾರಾಧನೆ ವಿಷಯಕ್ಕೆ ಸಂಬಂಧಪಟ್ಟಂತೆ ಸಮೀಕ್ಷೆಗೊಳಪಟ್ಟ ಮರಾಟಿ ನಾಯ್ಕ ಮತ್ತು ಮರಾಟಿ ಸಮುದಾಯದವರ ಒಟ್ಟು ೩೦೦ ಕುಟುಂಬಗಳಲ್ಲಿಯೂ ಭೂತಾರಾಧನೆಯನ್ನು ಮಾಡುತ್ತಿರುವುದು ತಿಳುವಳಿಕೆದಾರರಿಂದ ತಿಳಿದುಬರುತ್ತದೆ. "ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ೫೧೨ಕ್ಕಿಂತ ಹೆಚ್ಚಿನ ಭೂತಗಳಿರುವುದು ಅಧ್ಯಯನಗಳಿಂದ ತಿಳಿದು ಬಂದಿರುತ್ತದೆ".[೧೧]

ಇವುಗಳಲ್ಲಿ ಕೆಲವನ್ನು ಮಾತ್ರ ಮರಾಟಿ ನಾಯ್ಕ ಮತ್ತು ಮರಾಟಿಗರು ಆರಾಧಿಸುತ್ತಿರುವುದು ಕ್ಷೇತ್ರಕಾರ್ಯದಲ್ಲಿ ಗಮನಿಸಲಾಗಿದೆ. ಇಲ್ಲಿ ಹೆಚ್ಚಿನ ತಿಳುವಳಿಕೆದಾರರು ತಮ್ಮ ಮನೆಗಳಲ್ಲಿ ಮಣೆ ಮಂಚಗಳಲ್ಲಿಟ್ಟು ಆರಾಧಿಸುತ್ತಿದ್ದು ಮತ್ತೆ ಕೆಲವರು ಪ್ರತ್ಯೇಕ ಗುಡಿಗಳನ್ನು ಕಟ್ಟಿಸಿ ಆರಾಧಿಸುತ್ತಿದ್ದಾರೆ. ಇನ್ನು ಕೆಲವು ತಿಳುವಳಿಕೆದಾರರು ತಾವು ವಲಸೆ ಸಂದರ್ಭದಲ್ಲಿ ನೆಲೆ ನಿಂತ ಮೂಲದ ಮನೆಯಲ್ಲಿ ನಡೆಯುವ ವಾರ್ಷಿಕ ಅಥವಾ ದ್ವಿವಾರ್ಷಿಕ ಭೂತಾರಾಧನೆಯಲ್ಲಿ ಪಾಲ್ಗೊಳ್ಳುತ್ತಿರುವುದು ಕ್ಷೇತ್ರಕಾರ್ಯದಲ್ಲಿ ಕಂಡು ಬಂದಿರುತ್ತದೆ. ಹೀಗೆ ಎಲ್ಲಾ ತಿಳುವಳಿಕೆದಾರರು ಒಂದಲ್ಲ ಒಂದು ಭೂತವನ್ನು ಆರಾಧಿಸುತ್ತಿರುವುದಾಗಿ ಅಭಿಪ್ರಾಯ ಪಟ್ಟಿದ್ದಾರೆ.

ಭೂತಾರಾಧನೆಗೆ ಸಂಬಂಧಪಟ್ಟ ಕೋಷ್ಟಕವನ್ನು ಗಮನಿಸಿದಾಗ (ಕೋಷ್ಟಕ ಸಂಖ್ಯೆ:೬.೧) ೩೦೦ ತಿಳುವಳಿಕೆದಾರರಲ್ಲಿ ಮರಾಟಿ ನಾಯ್ಕ ಮತ್ತು ಮರಾಟಿಗರ ೨೨೫ ಕುಟುಂಬಗಳಲ್ಲಿ ಕಲ್ಕುಡ-ಕಲ್ಲುರ್ಟಿ ದೈವವನ್ನು ಆರಾಧಿಸುತ್ತಿದ್ದು, ಇದರಲ್ಲಿ ೧೦೮ ಮರಾಟಿ ನಾಯ್ಕ ಕುಟುಂಬಗಳು ಮತ್ತು ೧೧೭ ಮರಾಟಿ ಕುಟುಂಬದವರು ಒಳಗೊಂಡಿದ್ದಾರೆ. ಹಾಗೆಯೇ ಅಧ್ಯಯನಕ್ಕೊಳಪಡಿಸಿದ ಎರಡು ಸಮುದಾಯದವರಲ್ಲಿ ೧೭೧ ಕುಟುಂಬಗಳು ಗುಳಿಗೆ ದೈವವನ್ನು ಆರಾಧಿಸುತ್ತಿದ್ದು, ಇದರಲ್ಲಿ ೮೦ ಮರಾಟಿ ನಾಯ್ಕ ಕುಟುಂಬಗಳು ಮತ್ತು ೯೧ ಮರಾಟಿ ಕುಟುಂಬದವರು ಸೇರಿದ್ದಾರೆ.

ಪಂಜುರ್ಲಿ ದೈವವನ್ನು ೯೯ ಕುಟುಂಬಗಳು ಆರಾಧಿಸುತ್ತಿದ್ದು, ಇದರಲ್ಲಿ ೩೨ ಮರಾಟಿ ನಾಯ್ಕ ಮತ್ತು ೬೭ ಮರಾಟಿ ಕುಟುಂಬಗಳು ಸೇರಿರುತ್ತವೆ. ಚಾಮುಂಡಿ ಅಥವಾ ಪಿಲಿಚಾಮುಂಡಿ ಮತ್ತು ಅನೇಕ ರೂಪಾಂತರಗೊಂಡಿರುವ ದೈವವನ್ನು ೧೬೭ ತಿಳುವಳಿಕೆದಾರರ ಕುಟುಂಬದವರು ಆರಾಧಿಸುತ್ತಿದ್ದು, ಇದರಲ್ಲಿ ೮೦ ಮರಾಟಿ ನಾಯ್ಕ ಕುಟುಂಬಗಳು ಹಾಗೂ ೮೭ ಮರಾಟಿ ಕುಟುಂಬದವರು ಸೇರಿರುತ್ತಾರೆ. ಸತ್ಯ ದೇವತೆಯನ್ನು ೪೪ ಕುಟುಂಬಗಳು ಆರಾಧಿಸುತ್ತಿದ್ದು, ಇದರಲ್ಲಿ ೧೬ ಮರಾಟಿ ನಾಯ್ಕ ಕುಟುಂಬಗಳು ಮತ್ತು ೨೮ ಮರಾಟಿ ಕುಟುಂಬಗಳು ಸೇರಿವೆ. ಪೊಸ ಅಪ್ಪೆ ದೈವವನ್ನು ೩೧ ಕುಟುಂಬಗಳು. ಇದರಲ್ಲಿ ೧೩ ಮರಾಟಿ ನಾಯ್ಕ ಮತ್ತು ೧೮ ಮರಾಟಿ ಕುಟುಂಬಗಳು ಸೇರಿವೆ. ಮಂತ್ರ ದೇವತೆಯನ್ನು ೭೮ ಕುಟುಂಬಗಳು ಆರಾಧಿಸುತ್ತಿದ್ದು, ಇದರಲ್ಲಿ ೨೧ ಮರಾಟಿ ನಾಯ್ಕ ಮತ್ತು ೨೭ ಮರಾಟಿ ಕುಟುಂಬದವರು ಒಳಗೊಂಡಿದ್ದಾರೆ. ರಾಹು ಭೂತವನ್ನು ೧೭೭ ಕುಟುಂಬಗಳು ಆರಾಧಿಸುತ್ತಿದ್ದು, ಅವುಗಳಲ್ಲಿ ೮೩ ಮರಾಟಿ ನಾಯ್ಕ ಮತ್ತು ೯೪ ಮರಾಟಿ ಕುಟುಂಬಳಿವೆ. ಸೇರಿದ್ದಾರೆ. ಚಿಕ್ಕು ಭೂತವನ್ನು ೯೩ ಮರಾಟಿ ನಾಯ್ಕ ಕುಟುಂಬಗಳು ಆರಾಧಿಸುತ್ತಿದ್ದು, ಇದರಲ್ಲಿ ಮರಾಟಿಗರು ಸೇರಿರುವುದಿಲ್ಲ. ಭೂತಗಳ ಆರಾಧನೆಯಲ್ಲಿ ಪ್ರಾದೇಶಿಕ ಪರಿಣಾಮ ಬೀರಿರುವುದು ಕಂಡುಬರುತ್ತದೆ. ಮಾಸ್ತಿಯಮ್ಮ ಭೂತವನ್ನು ೧೦೨ ಕುಟುಂಬಗಳು ಆರಾಧಿಸುತ್ತಿದ್ದು, ಇದರಲ್ಲಿ ೭೬ ಮರಾಟಿ ನಾಯ್ಕ ಕುಟುಂಬದವರು ಮತ್ತು ೨೬ ಮರಾಟಿ ಕುಟುಂಬದವರು ಕಂಡು ಬಂದಿದ್ದಾರೆ.

ಕೋಷ್ಟಕ: ೬.೧

ತಿಳುವಳಿಕೆದಾರರ ಕುಟುಂಬಗಳಲ್ಲಿ ಆರಾಧಿಸುವ ದೈವ-ಭೂತಗಳ ವಿವರಗಳು

ಕ್ರ.ಸಂ.	ಭೂತಗಳು	ಮರಾಟಿ ನಾಯ್ಕ (ಆವೃತ್ತಿ ೧೫೦)	ಮರಾಟಿ (ಆವೃತ್ತಿ ೧೫೦)	ಒಟ್ಟು (ಆವೃತ್ತಿ ೩೦೦)	ಶೇಕಡವಾರು
೧.	ಕಲ್ಕುಡ-ಕಲ್ಲುರ್ಟಿ	೧೦೮	೧೧೭	೨೨೫	೭೫.೦೦
೨.	ಗುಳಗ	೮೦	೯೧	೧೭೧	೫೭.೦೦
೩.	ವರ್ತೆ/ವರ್ತೆ ಪಂಜುರ್ಲಿ	೩೨	೬೭	೯೯	೩೩.೦೦
೪.	ಚಾವುಂಡಿ/ಪಿಲಿಚಾವುಂಡಿ	೮೦	೮೭	೧೬೭	೫೫.೬೭
೫.	ಸತ್ಯದೇವತೆ	೧೬	೨೮	೪೪	೧೪.೬೭
೬	ಪೊಸ ಅಪ್ಪೆ	೧೩	೧೮	೩೧	೧೦.೩೩
೭	ಮಂತ್ರ ದೇವತೆ	೨೧	೨೭	೭೮	೨೬.೦೦
೮.	ರಾವು / ರಾಹು	೮೩	೯೪	೧೭೭	೫೯.೦೦

೯.	ಚಿಕ್ಕು	೯೩	–	೯೩	೩೧.೦೦
೧೦.	ಮಾಸ್ತಿಯಮ್ಮ	೭೬	೨೬	೧೦೨	೩೪.೦೦
೧೧.	ನಂದಿ / ನಂದಿಕೇಶ್ವರ	೭೯	೭೨	೧೫೧	೫೦.೩೩
೧೨.	ಜುಮಾದಿ / ಧೂಮಾವತಿ	೦೭	೦೫	೧೨	೦೪.೦೦
೧೩.	ರಕ್ತೇಶ್ವರಿ	೯೪	೯೬	೧೯೦	೬೩.೩೩
೧೪.	ಬೈರವ / ಬೈರವಿ	೧೩೯	೧೪೭	೨೮೬	೯೫.೩೩
೧೫.	ಸಿರಿ	೧೬	೨೮	೪೪	೧೪.೬೭
೧೬.	ಹ್ಯಾಗುಳಿ	೧೪೧	೧೯	೧೬೦	೫೩.೩೩
೧೭.	ಸ್ವಾಮಿ ಆರಾಧನೆ	೧೨೭	೧೦	೧೩೭	೪೫.೬೭
೧೮.	ಬೊಬ್ಬರ್ಯ	೯೬	೨೧	೧೧೭	೩೯.೦೦

ನಂದಿ ದೈವವನ್ನು ೧೫೧ ಕುಟುಂಬಗಳು ಆರಾಧಿಸುತ್ತಿದ್ದು, ಇದರಲ್ಲಿ ೭೯ ಮರಾಟಿ ನಾಯ್ಕ ಕುಟುಂಬಗಳು ಮತ್ತು ೭೨ ಮರಾಟಿ ಕುಟುಂಬಗಳು ಸೇರಿವೆ. ಧೂಮಾವತಿ (ಜುಮಾದಿ ತುಳು) ದೈವವನ್ನು ಒಟ್ಟು ೧೨ ಕುಟುಂಬಗಳು ಆರಾಧಿಸುತ್ತಿದ್ದು, ಇದರಲ್ಲಿ ೦೭ ಮರಾಟಿ ನಾಯ್ಕ ಮತ್ತು ೦೫ ಮರಾಟಿ ಕುಟುಂಬಗಳು ಸೇರಿವೆ.

ರಕ್ತೇಶ್ವರಿ ದೈವವನ್ನು ೧೯೦ ಕುಟುಂಬಗಳು ಆರಾಧಿಸುತ್ತಿದ್ದು, ಇದರಲ್ಲಿ ೯೪ ಮರಾಟಿ ನಾಯ್ಕ ಮತ್ತು ೯೬ ಮರಾಟಿ ಕುಟುಂಬಗಳಿವೆ. ಭೈರವ ಅಥವಾ ಭೈರಪಿ ದೈವವನ್ನು ೨೮೬ ಕುಟುಂಬಗಳು ಆರಾಧಿಸುತ್ತಿದ್ದು, ಇದರಲ್ಲಿ ೧೩೯ ಮರಾಟಿ ನಾಯ್ಕ ಮತ್ತು ೧೪೭ ಮರಾಟಿ ಕುಟುಂಬಗಳು ಸೇರಿವೆ. ಸಿರಿ ದೈವವನ್ನು ೪೪ ಕುಟುಂಬಗಳು ಆರಾಧಿಸುತ್ತಿದ್ದು, ಇದರಲ್ಲಿ ೧೬ ಮರಾಟಿ ನಾಯ್ಕ ಮತ್ತು ೨೮ ಮರಾಟಿ ಕುಟುಂಬಗಳು ಸೇರಿವೆ. ಹ್ಯಾಗುಳಿ ದೈವವನ್ನು ೬೦ ಕುಟುಂಬಗಳು ಆರಾಧಿಸುತ್ತಿದ್ದು, ಇದರಲ್ಲಿ ೧೪೧ ಮರಾಟಿ ನಾಯ್ಕ ಮತ್ತು ೧೯ ಮರಾಟಿ ಕುಟುಂಬಗಳಿವೆ. ಸ್ವಾಮಿ ದೈವವನ್ನು ೧೩೭ ಕುಟುಂಬಗಳು ಆರಾಧಿಸುತ್ತಿದ್ದು, ಇದರಲ್ಲಿ ೧೨೭ ಮರಾಟಿ ನಾಯ್ಕ ಮತ್ತು ೧೦ ಮರಾಟಿ ಕುಟುಂಬಗಳು ಸೇರಿವೆ. ಬೊಬ್ಬರ್ಯ ದೈವವನ್ನು ೧೧೭ ಕುಟುಂಬಗಳು ಆರಾಧಿಸುತ್ತಿದ್ದು, ಇದರಲ್ಲಿ ೯೬ ಕುಟುಂಬಗಳು ಮರಾಟಿ ನಾಯ್ಕ ಹಾಗೂ ೨೧ ಮರಾಟಿ ಸೇರಿರುತ್ತದೆ.

೬.೧ರ ಕೋಷ್ಟಕದಲ್ಲಿ ವ್ಯಕ್ತವಾಗುವ ಅಂಶವೇನೆಂದರೆ ಅತ್ಯಂತ ಹೆಚ್ಚಿನ ತಿಳುವಳಕೆದಾರರು ಅಂದರೆ ೨೮೬ ಮರಾಟಿಗ ಕುಟುಂಬಗಳು ಭೈರವ / ಭೈರವಿ ದೈವವನ್ನು ಆರಾಧಿಸುತ್ತಿರುವುದು. ಇವುಗಳಲ್ಲಿ ಮರಾಟಿ ನಾಯ್ಕ ಸಮುದಾಯದವರಿಗಿಂತ ಮರಾಟಿ ಸಮುದಾಯದವರು ಭೈರವನನ್ನು ಹೆಚ್ಚಿನ ಪ್ರಮಾಣದಲ್ಲಿ ಆರಾಧಿಸುತ್ತಿರುವುದು ಕಂಡು ಬಂದರೂ, ಅಧ್ಯಯನಕ್ಕೊಳಪಟ್ಟ ಎರಡು ಸಮುದಾಯದವರು ಭೈರವ ಅಥವಾ ಭೈರವಿಯು ಆರಾಧ್ಯ ದೈವವಾಗಿರುವುದು ಕಂಡುಬರುತ್ತದೆ.

ನಾಗನಿಗೆ ಸಂಬಂಧಿತ ದೈವವಾಗಿರುವ ರಕ್ತೇಶ್ವರಿ ದೈವವನ್ನು ೧೯೦ ಕುಟುಂಬಗಳು ಆರಾಧಿಸುತ್ತಿರುವುದು ಕಂಡುಬರುತ್ತದೆ. ವಲಸೆ ಬಂದ ಪ್ರಾರಂಭದ ಹಂತದಲ್ಲಿ ಈ ಎರಡು ಸಮುದಾಯದವರಿಗೆ ಮೂಲಸ್ಥಾನವಿಲ್ಲದಿದ್ದರೂ ಕಾಲಾನಂತರದಲ್ಲಿ ಮೂಲಸ್ಥಾನವನ್ನು ಸ್ಥಾಪಿಸಿರುವುದು ಕಂಡುಬರುತ್ತದೆ.

ಕಲ್ಕುಡ – ಕಲ್ಲುರ್ಟಿ ಭೂತವನ್ನು ೨೨೫ ಕುಟುಂಬಗಳು ಆರಾಧಿಸುತ್ತಿದ್ದು, ಮರಾಟಿ ನಾಯ್ಕ ಸಮುದಾಯದವರಿಗಿಂತ ಮರಾಟಿಗರು ಹೆಚ್ಚಾಗಿ ಈ ದೈವವನ್ನು ಆರಾಧಿಸುತ್ತಿರುವುದು ಕಂಡುಬಂದಿದೆ. ಪ್ರಾಚೀನ ಕಾಲದಲ್ಲಿ ಹಿರಿಯಂಗಡಿ ಪ್ರದೇಶವನ್ನು ಭೈರ ಅರಸನು ಆಳ್ವಿಕೆ ಮಾಡಿರುವುದರಿಂದ ಆ ಸಂದರ್ಭದಲ್ಲಿ ಈ ಎರಡು ದೈವಗಳು ಭೈರರಸನ ಅರಮನೆಯನ್ನು ಸುಟ್ಟು ಭಸ್ಮ ಮಾಡಿರುವುದಾಗಿ ಪಾಡ್ದನದಲ್ಲಿ ಕಂಡುಬಂದಿದ್ದು, ಇದರಿಂದಾಗಿ ಭೈರರಸನನ ಆಳ್ವಿಕೆ ಸಂದರ್ಭ ಮರಾಟಿಗರನ್ನು ಅರಸನು ತನ್ನ ರಾಜ್ಯದ ರಕ್ಷಣೆಗಾಗಿ ಅನ್ಯ ಪ್ರದೇಶಗಳಿಂದ ತಂದಿರುವುದಾಗಿ ಇವರಲ್ಲಿ ನಂಬಿಕೆ ಇದೆ. ಸಾಮಾಜಿಕ ಒತ್ತಡದಿಂದಾಗಿ ಮರಾಟಿಗರು ಕಲ್ಕುಡ – ಕಲ್ಲುರ್ಟಿ ದೈವವನ್ನು ಆರಾಧಿಸಲು ಕಾರಣವಿರಬಹುದಾಗಿ ಊಹಿಸಬಹುದು.

ಮರಾಟಿ ನಾಯ್ಕ ಮತ್ತು ಮರಾಟಿ ಸಮುದಾಯದವರು ಆರಾಧಿಸುತ್ತಿರುವ ದೈವಗಳ ಪರಿಚಯ ಮತ್ತು ಸ್ವರೂಪ

ಕಲುಡ್ಕ – ಕಲ್ಲುರ್ಟಿ

ಕೆಲ್ಲಪುತ್ತಿಗೆ ಮಾರ್ನಾಡಿನ ಪ್ರಸಿದ್ಧ ಶಿಲ್ಪಿ ಮನೆತನದ ಶಂಭುಕಲ್ಕುಡ ಮತ್ತು ಈರುವೆದಿ ದಂಪತಿಗಳಿಗೆ ಐವರು ಗಂಡುಮಕ್ಕಳು ಹಾಗೂ ಒಬ್ಬಳು ಮಗಳು ಜನಿಸಿರುತ್ತಾರೆ. ತಂಗಿಯ ಹೆಸರು ಕಾಳಮ್ಮ. ಕಲ್ಲಿನ ಕೆಲಸ ಕಲಿತ ಮಗನ ಹೆಸರು ಬೀರುಕಲ್ಕುಡ. ಬೀರುಕಲ್ಕುಡ, ಕಾಳಮ್ಮ ತಾಯಿ ಬಸಿರಿನಲ್ಲಿದ್ದಾಗಲೇ ತಂದೆ ಶಂಭು ಕಲ್ಕುಡನಿಗೆ ಬೇಲೂರು ಶ್ರವಣಬೆಳಗೊಳಗಳಿಂದ ಆಹ್ವಾನ ಬಂದು ಅಲ್ಲಿಗೆ ಹೋಗುತ್ತಾನೆ. ಅಲ್ಲಿ ಗೊಮ್ಮಟಸ್ವಾಮಿ, ನೂರಿಪ್ಪತ್ತು ಬೊಂಬೆ ಅರಮನೆಯ ಕೆಲಸವನ್ನು ಮಾಡಿ ದೀರ್ಘಕಾಲದ ನಂತರ ಮನೆಗೆ ಹೊರಡುತ್ತಾನೆ ಶಂಭುಕಲ್ಕುಡ. ಇತ್ತ ಕೆಲತ್ತ ಮಾರ್ನಾಡಿನಲ್ಲಿ ಕಾಳಮ್ಮ, ಬೀರಕಲ್ಕುಡ ಬೆಳೆದು ದೊಡ್ಡವರಾಗುತ್ತಾರೆ. ಇವರನ್ನು ತಂದೆ ಇಲ್ಲದ ಮಕ್ಕಳೆಂದು ಜನರು ಅವಮಾನ ಮಾಡುತ್ತಾರೆ. ಆಗ ಬೀರು ಕಲ್ಲುಡ 'ನನಗೆ ತಂದೆ ಇಲ್ಲವೆ? ಎಂದು ತಾಯಿಯನ್ನು ಕೇಳಿದಾಗ "ನಿನ್ನ ತಂದೆ ಬೇಲೂರು ಬೆಳ್ಗೊಳಕ್ಕೆ ಕೆಲಸಕ್ಕೆ ಹೋಗಿದ್ದಾರೆ ಎಂದು ತಿಳಿಸುತ್ತಾಳೆ. ಆಗ ಅವನು ತಂದೆಯನ್ನು ಹಾಗೂ ಅವನ ಕೆಲಸವನ್ನು ನೋಡಬೇಕೆಂದು ಹಠ ಹಿಡಿದು ಹೊರಡುತ್ತಾನೆ. ಬಹುಮಾನದೊಡನೆ ಬಂದ ಶಂಭುಕಲ್ಕುಡ ಒಂದು ಕಟ್ಟೆಯಲ್ಲಿ ಕುಳಿತ್ತಿರುವಾಗ ಅಲ್ಲಿಗೆ ಬೀರು ಕಲ್ಕುಡ ಬರುತ್ತಾನೆ. ಪರಸ್ಪರ ಪರಿಚಯವಾಗಿ ತಂದೆ–ಮಗ ಸಂಭ್ರಮಿಸುತ್ತಾರೆ. 'ನಿಮ್ಮ ಕೆಲಸವನ್ನು ನಾನು ನೋಡಬೇಕೆಂದು ಬೀರು ಹಠ ಮಾಡುತ್ತಾನೆ. ಅಲ್ಲಿ ಗುಮ್ಮಟಸ್ವಾಮಿಯ ಕೆಲಸದಲ್ಲಿ ಕುಂದುಕೊರತೆ ಉಂಟು' ಎಂದು ಹೇಳಲು 'ಅಯ್ಯೋ' ನನ್ನ ಕೆಲಸದಲ್ಲಿ ಕುಂದು ಕೊರತೆ ಹೇಳಿದೆಯಾ? ಅರಸರು ನೋಡಿದರೆ ಆನೆಯ ಕಾಲಲ್ಲಿ ತುಳಿಸಿಯಾರು, ಚಾಟಿಯಲ್ಲಿ ಹೊಡೆದಾರು ಎಂದು ಶಂಭುಕಲ್ಕುಡ ಚೂರಿಯಿಂದ ಹೊಟ್ಟೆಗೆ ಇರಿದುಕೊಂಡು ಸಾಯುತ್ತಾನೆ. ತಂದೆಯನ್ನು ಕೊಂದ ಮಗ ಕೆಲಸದಲ್ಲಿ ಶೂರನೆಂದು ಸುದ್ದಿಯಾಗುತ್ತದೆ. ಆಗ ಕಾರ್ಕಳದ ಅರಸು ಭೈರನ ಸೂಡ ಕರೆದು ಗೊಮ್ಮಟಸ್ವಾಮಿ ಕೆತ್ತನೆಯ ಕೆಲಸ ನೀಡುತ್ತಾರೆ. ಗೊಮ್ಮಟಸ್ವಾಮಿಯ ಕೆಲಸ ಮುಗಿದ ನಂತರ ನನ್ನ ರಾಜ್ಯದಲ್ಲಿ ಕೆಲಸಗೈದ ಬೀರು ಕಲ್ಕುಡ ಬೇರೆ ಯಾವ ರಾಜ್ಯದಲ್ಲಿ ಕೆಲಸ ಮಾಡಬಾರದೆಂದು ಅವನ ಎಡಕೈ ಮತ್ತು ಬಲಗಾಲವನ್ನು ಕತ್ತರಿಸುತ್ತಾನೆ. ಭೈರನ ಸೂಡ ಕಲ್ಕುಡನ ಕೈಕಾಲು ಕತ್ತರಿಸಿದ ವಿಷಯ ತಿಳಿದು ತಂಗಿ ಕಾಳಮ್ಮ ಸಂಕಟದಿಂದ ಓಡಿ ಬರುತ್ತಾಳೆ. ಅಣ್ಣನ ಸ್ಥಿತಿಯನ್ನು ನೋಡಿ ದುಃಖಿಸಿ "ಕಾಣುವಂತೆ ಗಾಸಿಗೈದ ಅರಸನನ್ನು ಮಾಯದಲ್ಲಿ ನೋಡಬೇಕು. ಜೋಗಬಿಟ್ಟು ಮಾಯಕಕ್ಕೆ ಸೇರುವ' ಎಂದು ಹೇಳಿ. ಅಂಗಳದಲ್ಲಿ ಮಾಯವಾದರು. ನಂತರ ಭೈರನ ಸೊಡನ ಅರಮನೆಯನ್ನು ಕೋಟೆಯನ್ನು

ಸುಟ್ಟು 'ಸೂಕರಿ' ಮಾಡಿದರು. ಇವರ ಕಾಟ ತಾಳಲಾರದೆ ಅವರಿಗೆ ಕೊಟ್ಟಿಗೆ ಕಟ್ಟಿಸಿ, ನೇಮ ಉತ್ಸವ ಮಾಡಿ, ಪೂಜೆ ಮಾಡಿ ಅವರನ್ನು ಶಾಂತಗೊಳಿಸಿದರು"[೧೨]. ಹೀಗೆ ಕಲ್ಕುಡ, ಕಲ್ಕುರ್ಟಿ ಉಗ್ರ ಸ್ವಭಾವದ ದೈವಗಳು. ಕಪ್ಪುಬಣ್ಣದಲ್ಲಿ ಬಿಳಿ ಚುಕ್ಕೆಗಳ ಮುಖವರ್ಣಿಕೆ. ಇವರು ಕೆಳವರ್ಗದ ದೈವಗಳು ಎಂಬುದನ್ನು ಸಾಂಕೇತಿಕವಾಗಿ ಸೂಚಿಸುತ್ತದೆ.

ಪಂಜುರ್ಲಿ (ವರ್ತೆ ಪಂಜುರ್ಲಿ)

ಪಂಜುರ್ಲಿ ದೈವವು ಈಶ್ವರನ ಶಾಪದಿಂದ ಹುಟ್ಟಿ ಭೂಮಿಗೆ ಇಳಿದು ಬಂದು ದೈವವಾಗಿದೆ ಎಂಬುದಾಗಿ ಜನಪದರಲ್ಲಿಯ ನಂಬಿಕೆ. ಈತನ ಮೂಲ ಕಥೆಯಲ್ಲಿ ಬ್ರಾಹ್ಮಣ ರೂಪದಲ್ಲಿ ಭೂಮಿಗಿಳಿದು, 'ಗಣಾಮಣೆ'ಯಾಗಿ ಘಟ್ಟ ಇಳಿದು ಧರ್ಮಸ್ಥಳ ಪಕ್ಕದ ನೆಲ್ಯಾಡಿ ಬೀಡಿಗೆ ಬಂದು ನೆಲೆಸಿರುತ್ತಾನೆ. ನಂತರ ಆಯಾಪ್ರದೇಶಗಳಿಗೆ ಹೊಂದಿಕೊಂಡು ಅಣ್ಣಪ್ಪ ಪಂಜುರ್ಲಿ, ಮಲಾರ ಪಂಜುರ್ಲಿ, ಒರ್ತೆ ಪಂಜುರ್ಲಿ, ವರ್ಣಾರ ಪಂಜುರ್ಲಿ, ಮೊಟ್ಟ ಪಂಜುರ್ಲಿ, ಸೇಮಕಲ್ಲು ಪಂಜುರ್ಲಿ. ಸೇಮಕಲ್ಲು ಪಂಜುರ್ಲಿಯು ಸಿರಿಯನ್ನು ಕಾಮಿಸಿ, ಅವಳಿಂದ ಮರಣ ಹೊಂದಿದ. ನಂತರ ಆತನೇ ಸೇಮಕಲ್ಲು ಪಂಜುರ್ಲಿಯಾಗಿ ದೈವತ್ವವನ್ನು ಪಡೆದಿದ್ದಾನೆ ಎಂದು ಸಿರಿ ಪಾಡ್ದನದಲ್ಲಿ ಮಾಹಿತಿ ಇದೆ. ಕವತ್ತಾರ, ಶಿವಂತ್ತಾರು, ಏಳಿಂಜೆ, ಕರ್ನಿರೆ, ಪಂಜನಡ್ಕ ಸುತ್ತಮುತ್ತಲೂ ವಾಸಿಸುತ್ತಿರುವ ಮರಾಟಿಗರು ಹೆಚ್ಚಾಗಿ ವರ್ತೆ ಪಂಜುರ್ಲಿಯನ್ನು ನಂಬುತ್ತಿರುವುದು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಕಂಡುಕೊಂಡಿರುವೆನು.

"ಪಂಜುರ್ಲಿಯ ಹುಟ್ಟಿನ ಹಿಂದೆ ಶಾಪವೋ, ವರವೋ ಎಂಬುದಾಗಿ ಜನಪದರು ಹೇಳುತ್ತಾರೆ. ಜನಪದರ ದೃಷ್ಟಿಯಲ್ಲಿ ಅನೇಕ ಬಾರಿ ಶಾಪ ವರವಾಗಿ ಪರಿಣಮಿಸಿದ್ದುಂಟು. ಒಮ್ಮೆ ಕೈಲಾಸ ಪರ್ವತದಲ್ಲಿ ಈಶ್ವರ ಬೇಟೆಗೆ ಹೊರಡುವಾಗ ಪಾರ್ವತಿ ದೇವಿಯು ಹೊರಡುತ್ತಾಳೆ. ಗಂಡಸರು ಹೋಗುವಲ್ಲಿ ಹೆಂಗಸರು ಬರಬಾರದು ಎಂದು ಹೇಳಿದರೂ ಪಾರ್ವತಿ ದೇವಿ ಹಠ ಮಾಡುತ್ತಾಳೆ. ಆಗ ಈಶ್ವರನು 'ನಾನು ನೋಡಿದ್ದನ್ನು ನೋಡಿದೆ ಎನ್ನಬಾರದು ಕೈ ತೋರಿ ಕೇಳಬಾರದು' ಎಂಬ ಷರತ್ತು ವಿಧಿಸಿ ಕರೆದುಕೊಂಡು ಹೋಗುತ್ತಾನೆ. ಕಾಡಿನಲ್ಲಿ 'ಗುಜ್ಜಾರ ಮತ್ತು ಕಾಳಿ' ಎಂಬ ಎರಡು ಹಂದಿಗಳ ಐದು ಮರಿಗಳು ಈಶ್ವರನ ನಂದನ ಕೆರೆಯಲ್ಲಿ ಹೊರಳಾಡುತ್ತಿರುತ್ತವೆ. ಈಶ್ವರ ಗುಜ್ಜಾರನಿಗೆ ಬಾಣ ಬಿಡುತ್ತಾನೆ. ಕಾಳಿ ಓಡುತ್ತದೆ. ಈ ಐದು ಮರಿಗಳಲ್ಲಿ ಒಂದನ್ನು ಹಠ ಮಾಡಿ ಪಾರ್ವತಿ ಕೈಲಾಸಕ್ಕೆ ತೆಗೆದುಕೊಂಡು ಹೋಗಿ ಪ್ರೀತಿಯಿಂದ ಸಾಕುತ್ತಾಳೆ. ಅದನ್ನು ಮಾಳಿಗೆಯಲ್ಲಿ ಸಂಕೋಲೆಯಿಂದ ಕಟ್ಟಿ ಹಾಕುತ್ತಾಳೆ. ಕೈಲಾಸದಲ್ಲಿ ಒಂದು ಸಮಾರಾಧನೆಯ ದಿನ ಈ ಹಂದಿಮರಿ ಬಿಡಿಸಿಕೊಂಡು ಊಟದ ಎಲೆಗಳಿಗೆ ಬಾಯಿ ಹಾಕುತ್ತದೆ. ಈಶ್ವರನಿಗೆ ಸಿಟ್ಟು ಬಂದು ನೀನು ಕೈಲಾಸದಲ್ಲಿ ಇರಬಾರದು. ಭೂಮಿಗಿಳಿದು ದೈವವಾಗಬೇಕು ಎಂದು ವರ ಕೊಡುತ್ತಾನೆ. ಮುಂದೆ ಆತ ನೆಲ್ಯಾಡಿ ಬೀಡುಗೆ ಬಂದು ನೆಲೆನಿಂತು, ಮುಂದೆ ಬೇರೆ ಬೇರೆ ಪ್ರದೇಶಕ್ಕೆ ಪ್ರಸರಣಗೊಳ್ಳುತ್ತಾ ಆರಾಧನೆ ಪಡೆಯುತ್ತದೆ.[೧೩]"

ಮಾಸ್ತಿಯಮ್ಮ

ರಟ್ಟಾಗೆ ಜೋಗ್ರ ಗುಂಡಿ ಸ್ಥಳದಲ್ಲಿ ವೀರರ್ಕಳೊ ಎಂಬ ಕುಲದಲ್ಲಿ ವೀರಮಾಸ್ತಿಯಮ್ಮ ಹುಟ್ಟಿ ಬೆಳೆಯುತ್ತಿದ್ದಳು. ಪ್ರಾಯ ತುಂಬಿ ಬರಲು ಪುಷ್ಪಾಳಿಕೆಯೊಳೊಪ್ಪಿ ಬಾಳುತ್ತಿದ್ದಳು. ಒಂದಲ್ಲ ಒಂದು ದಿವಸ ಪುಷ್ಪಾಳಿಕೆ ತಪ್ಪಿ ಹೋಗುತ್ತಿತ್ತು. ವೈರಾಗ್ಯವೂ ಬಂದು ಮಾಸ್ತಿಯಮ್ಮ ಒಡೆಯನ ಮನದಾಜ್ಞೆ ಪಡೆಯಬೇಕೆಂದು, ಕೈ ಮುಗಿದು "ಕೇಳಿಕೊಳ್ಳಿ ಸ್ವಾಮಿ ಹೊನ್ನ ಕಂಬ್ಳಿಯವರೇ ಅರಮನೆಯ ಅಪ್ಪಣೆ

ಕೊಡಿಸಬೇಕೆಂದು ಬಿನ್ನಹ ಮಾಡಿದಳು. ವೀರಮ್ಮನ ಮನಸ್ಸನ್ನು ತಿಳಿಯಬೇಕೆಂದು ಅವಳಿಗೆ ಇದೇನು ಹುಚ್ಚೇ? ಭ್ರಾಂತಿಯೇ? ಎಂದು ಬುದ್ಧಿ ಹೇಳುತ್ತಾರೆ. ಆಗ ಅವಳು ಅಟ್ಟಡಿಗೆಯ ಮಗುಚಿ ಆಡಲಾರೆ, ದೇವ ಕುಂಕುಮ ಹಣೆಯಲ್ಲಿ ಇಡಲಾರೆನು ಎಂದು ದೃಢವಾಗಿ ಹೇಳುತ್ತಾಳೆ. ವೀರಮ್ಮನ ಭಾವ ನೋಡಿಕೊಂಡು ಪತಿವ್ರತೆಯ ಧರ್ಮ ಉಂಟು" ಎಂದು ಅರಮನೆ ಅಪ್ಪಣೆ ಕೊಟ್ಟಿತು. ಕೊಂಡವನ್ನು ರಚಿಸಿಕೊಂಡು, ಅನ್ನದಾನ ಚಿನ್ನದಾನ, ಗೋದಾನ, ಭೂದಾನ ಕೊಟ್ಟು, ಗರುಡವಾಹನ ವಿಷ್ಣುವನ್ನು ನೆನೆದು ಕೊಂಡಕ್ಕೆ ಹಾರುತ್ತಾಳೆ. ವೀರ ಮಾಸ್ತಿಯಮ್ಮನ ಬಂಧುಗಳು ಎಣ್ಣೆ ತುಪ್ಪವನ್ನು ಎರೆಯುವ ಮರುದಿವಸ ಉದಯದ ಸಮಯದಲ್ಲಿ ಕೊಂಡದ ಬಳಿ ಅರೆನೀರು ನಿಂಬೆಹಣ್ಣು ಸಿಗುತ್ತದೆ. ಮನೆಗೆ ತಂದು ಪೂಜೆ ಮಾಡುವಾಗ ಕಲಾಸನ್ನಿಧಿ ಏರಿ ಬರುತ್ತಿತ್ತು. ನಂತರ ವೀರಮಾಸ್ತಿಯಮ್ಮ ಅಲ್ಲಲ್ಲಿ ಮನೆ ರಚಿಸಿಕೊಂಡು ಆರಾಧನೆ ಪಡೆಯುತ್ತಿದ್ದಾಳೆ.

ಸ್ವಾಮಿ ಆರಾಧನೆ

ಕುಂದಾಪುರದ ಕನ್ನಡ ಪ್ರದೇಶಗಳಲ್ಲಿ ನಾಗಬ್ರಹ್ಮರನ್ನು 'ಸ್ವಾಮಿ' ಎಂದು ಆರಾಧಿಸುತ್ತಾರೆ. "ಮಂಗಳೂರು ಸುತ್ತಮುತ್ತಲಿನ ಕೆಲವರು ಕೊಂಕಣರ ಮನೆಗಳಲ್ಲಿ ಹಾಗೂ ಬಂಟ ಸಮುದಾಯದವರು ಕೂಡ 'ಸ್ವಾಮಿ' ಆರಾಧನೆ ಮಾಡುತ್ತಾರೆ. ಕೆಲವೆಡೆ ಸ್ವಾಮಿಗೆ ಉಯ್ಯಾಲೆ ಇರುತ್ತದೆ. ಕೆಲವೆಡೆ ಮರದ ಮಣೆಯಲ್ಲಿ ಸ್ವಾಮಿಯನ್ನು ಸಂಕಲ್ಪಿಸಿ ಒಂದು ಗಿಂಡಿ ನೀರು ಮತ್ತು ಹೂ ಇಟ್ಟು ನಿತ್ಯ ಪೂಜಿಸುತ್ತಾರೆ."[೧೪]

ಕೆಲವೆಡೆ 'ಮುದ್ದುಸ್ವಾಮಿ' ಎನ್ನುತ್ತಾರೆ. ಸುಬ್ರಹ್ಮಣ್ಯನನ್ನು ಕೂಡ ಮುದ್ದುಸ್ವಾಮಿ ಎಂದು ಕರೆಯುತ್ತಾರೆ. ಕುಂದಾಪುರ ಪ್ರದೇಶದಲ್ಲಿ ಸ್ವಾಮಿಮನೆ ಅಥವಾ 'ಸ್ವಾಮಿ ಮುಂಡಿಗೆ' ಎನ್ನುವ ಆರಾಧನಾ ಸ್ಥಾನವಿದೆ. ಸ್ವಾಮಿ ಮುಂಡಿಗೆಯಲ್ಲಿ ನಾಲ್ಕೈದು ಅಡಿ ಎತ್ತರದ ಹುತ್ತವನ್ನು ಪೂಜಿಸುತ್ತಾರೆ. ಏನೆಕಲ್ಲು ಸಂಕಪಾಲ ಸುಬ್ರಹ್ಮಣ್ಯಸ್ವಾಮಿ ದೇವಾಲಯದ ಗರ್ಭಗುಡಿಯಲ್ಲಿ ಹುತ್ತದ ಎದುರಿನಲ್ಲಿ ನಾಗನಹೆಡೆಯನ್ನಿಟ್ಟು ಆರಾಧಿಸುತ್ತಾರೆ. ಕುಕ್ಕೆ ಸುಬ್ರಹ್ಮಣ್ಯದಲ್ಲಿ ಆದಿ ಸುಬ್ರಹ್ಮಣ್ಯವೆಂಬ ಸ್ಥಳವಿದ್ದು, ಇಲ್ಲಿ ಹುತ್ತವನ್ನು ಪೂಜಿಸುತ್ತಾರೆ. ಪ್ರಸಾದವೆಂದು ಈ ಹುತ್ತದ ಮಣ್ಣನ್ನು ನೀಡುತ್ತಾರೆ. ಕೆಲವೆಡೆ ಸ್ವಾಮಿ ಮುಂಡಿಗೆ ಕಾಡಿನಲ್ಲಿ ಇರುತ್ತದೆ.

ಸ್ವಾಮಿಗೆ 'ತಂಬಿಲ' ಸೇವೆಯನ್ನು ಮಾಡುತ್ತಾರೆ. ಸ್ವಾಮಿಗೆ ಕೋಲದ ರೂಪದ ಆರಾಧನೆಯೂ ಇದೆ. ಇದಕ್ಕೆ 'ಸ್ವಾಮಿಕೋಲ' ಎನ್ನುತ್ತಾರೆ. ಪಾಣರಾಟದಲ್ಲಿ ಸ್ವಾಮಿಕೋಲ ಪ್ರಧಾನ ಪಾತ್ರ ವಹಿಸುತ್ತದೆ. ಪಾಣಾರಾಟವು ಸ್ವಾಮಿ ಹಾಗೂ ಇತರ ದೈವಗಳ ಕೋಲ ಮತ್ತು ಢಕ್ಕೆ ಬಲಿಗಳ ಸಂಯುಕ್ತ ಆರಾಧನೆಯಾಗಿದೆ. ಪಾಣಾರಾಟದ ಢಕ್ಕೆ ಬಲಿಯಲ್ಲಿ 'ಸ್ವಾಮಿ' ಪ್ರಧಾನ ದೈವವಾಗಿದೆ. ಸ್ವಾಮಿಕೋಲದ 'ಸ್ವಾಮಿ'ಯ ವೇಷಭೂಷಣಗಳಿಗೂ ತುಳುನಾಡಿನ ಇತರ ದೈವಗಳ ವೇಷಭೂಷಣಗಳಿಗೂ ತುಂಬ ವ್ಯತ್ಯಾಸಗಳು ಕಂಡುಬರುತ್ತವೆ. ಇತರೆ ದೈವಗಳಿಗೆ ತೆಂಗಿನ ತಿರಿಯಲ್ಲಿ ಅಲಂಕಾರವಿದ್ದರೆ 'ಸ್ವಾಮಿ'ಗೆ ಗೆಜ್ಜೆ 'ಚಲ್ಲಣ'ದಲ್ಲಿ ಅಲಂಕಾರವಿರುತ್ತದೆ. ತಲೆಗೆ ಸಿರಿಮುಡಿ ಇರುವುದಿಲ್ಲ. ಢಕ್ಕೆ ಬಲಿಯ 'ಸ್ವಾಮಿ' ಪಾತ್ರಿಗೆ ಕೂಡ ಇದೇ ಅಲಂಕಾರವಿರುತ್ತದೆ.

ಗುಳಿಗ

ನೂರ ಎಂಟು ಗುಳಿಗರಿದ್ದಾರೆಂದು ನಂಬಿಕೆ ಇದ್ದು ಅವರಲ್ಲಿ ಐದು ಗುಳಿಗಗಳು ಸೇರಿವೆ. ಜಾಗ, ಸನ್ನಿವೇಶ, ಸಂದರ್ಭಗಳಿಗನುಸಾರವಾಗಿ ಗುಳಿಗ ದೈವ ಬೇರೆ ಬೇರೆ ಹೆಸರಿನಿಂದ ಕರೆಯಲ್ಪಡುತ್ತಾನೆ.

"ಗುಳಿಗ ದೈವವು ಶಿವಗಣವೆಂದು ಪರಿಗಣಿಸಲ್ಪಟ್ಟಿದೆ. ಗುಳಿಗನ ಆಯುಧ ತ್ರಿಶೂಲ. ಕೈಲಾಸದಲ್ಲಿ ಒಂದು ದಿನ ಪಾರ್ವತಿ ಶಿವನಿಗೆ ತಂದುಕೊಟ್ಟ ಭಸ್ಮದಲ್ಲಿ ಒಂದು ಕಲ್ಲು ಸಿಗುತ್ತದೆ. ಈಶ್ವರ ಅದನ್ನು ಭೂಮಿಗೆ ಎಸೆಯುತ್ತಾನೆ. ಅದರಲ್ಲಿ ಹುಟ್ಟಿದ ಈಶ್ವರನ ಮಗನೇ ಗುಳಿಗ. ಗುಳಿಗನಿಗೆ ಹಸಿವೆ ಆಗುತ್ತಿದೆ ಎನ್ನುವಾಗ ಈಶ್ವರ ನಾರಾಯಣನನ್ನು ಕಳುಹಿಸುತ್ತಾನೆ. ನಾರಾಯಣ ಭೂಮಿಯಲ್ಲಿ ನೆಲವುಲ್ಲ ಸಂಖ್ಯೆ ಎಂಬುವಳ ಹೊಟ್ಟೆಯಲ್ಲಿ ಹುಟ್ಟಿ ಬರಲು ಹೇಳುತ್ತಾನೆ. ತಾಯಿಯನ್ನು ಕೊಂದು ಹೊರಗೆ ಬರುವ ಗುಳಿಗ ಹಸಿವು ತಡೆಯದೆ ನಾರಾಯಣ ಬ್ರಹ್ಮದೇವರ ಕೆರೆಯ ನೀರನ್ನು ಬತ್ತಿಸಿ ಮೀನುಗಳನ್ನು ಕೊಲ್ಲುತ್ತಾನೆ. ಅವನಿಗೆ ಆನೆ, ಕುದುರೆಗಳನ್ನು ನೀಡಿದರೂ ಅವನ ಹಸಿವೆ ಇಂಗುವುದಿಲ್ಲ. ಅದಕ್ಕೆ ನಾರಾಯಣನು ತನ್ನ ಕಿರುಬೆರಳನ್ನು ನೀಡುತ್ತಾನೆ. ಆಗ ನಾರಾಯಣನಿಗೆ ಪ್ರಜ್ಞೆ ತಪ್ಪುತ್ತದೆ. ಕೊನೆಗೆ ತ್ರಿಮೂರ್ತಿಗಳು ಅವನನ್ನು ಭೂಮಿಗೆ ಕಳುಹಿಸುತ್ತಾರೆ. ಅಲ್ಲಿ ಏಳು ಜನ ಜಲದುರ್ಗೆಯರು ದೋಣಿಯಲ್ಲಿ ಕುಳಿತು ಸಮುದ್ರದಲ್ಲಿ ಹೋಗುತ್ತಿದ್ದರು. ಅವರು ಗುಳಿಗನಿಗೆ ಆಶ್ರಯ ಕೊಡುತ್ತಾರೆ. ಬರುವಾಗ ದಾರಿಯಲ್ಲಿ ಬಿಳಿಹಂದಿಗೆ ಹಾಗೂ ಗುಳಿಗನಿಗೆ ಯುದ್ಧವಾಗುತ್ತದೆ. ಜಲದುರ್ಗೆಯರು ಅವರನ್ನು ಸಮಾಧಾನ ಮಾಡಿ ಅಣ್ಣ ತಮ್ಮಂದಿರಂತೆ ಬಾಳಲು ಹೇಳುತ್ತಾರೆ. ಪಂಜುರ್ಲಿಯ ಕ್ಷೇತ್ರದಲ್ಲಿ ನೀನು ಕ್ಷೇತ್ರಪಾಲ. ಗುಳಿಗ ದೇವಿಯ ದೂತನೆಂದು ಹೇಳುತ್ತಾರೆ. ಗುಳಿಗ ಬೆಟ್ಟುಸ್ಥಾನ, ಗುಡ್ಡಕಲ್ಲು, ಹಾಕಿಸಿಕೊಂಡು ಶಿಷ್ಟರಕ್ಷಣೆ, ದುಷ್ಟಶಿಕ್ಷೆಯನ್ನು ವಿಧಿಸುವ ದೈವ ಎಂದು ಪ್ರಸಿದ್ಧವಾಗಿದೆ. ಗುಳಿಗ ಕೋಲ ಅತ್ಯಂತ ಪ್ರಾಚೀನ ಆರಾಧನೆ. ಸೂಟೆ ಈತನ ಪ್ರಧಾನ ಆಯುಧ."[೧೫]

ಗುಳಿಗನ ವೇಷ ಬಹಳ ಸರಳವಾದದ್ದು. ತೆಂಗಿನಗರಿ ಹಾಗೂ ಅಡಿಕೆ ಹಾಳೆಯಿಂದ ಮಾಡಿದ ಮುಖವಾಡ ಗುಳಿಗನ ವಿಶೇಷತೆ. ಪೊಟ್ಟ ಗುಳಿಗ, ರಾವು, ಗುಳಿಗ, ಮಂತ್ರಗಳಿಗ, ನೆತ್ತರ್ ಗುಳಿಗ, ಚೌಕಾರು ಗುಳಿಗ, ಸಂಚಾರಿ ಗುಳಿಗ, ಉಮ್ಮಟ್ಟಿ ಗುಳಿಗ, ಮಂತ್ರವಾದಿ ಗುಳಿಗ, ರಕ್ತೇಶ್ವರಿ ಗುಳಿಗ, ಮೂಕಾಂಬಿ ಗುಳಿಗ, ಮಾರಣ ಗುಳಿಗ, ಉನ್ನಟ್ಟಿ ಗುಳಿಗ, ಅಗ್ನಿ ಗುಳಿಗ, ಭಂಡಾರಿ ಗುಳಿಗ ಇತ್ಯಾದಿ ೧೦೮ ಗುಳಿಗ ಇದ್ದಾರೆಂದು ಜನಪದರು ಹೇಳುತ್ತಾರೆ.

ಹ್ಯಾಗುಳಿ

ಕರಾವಳಿ ಜಿಲ್ಲೆಯ ಉತ್ತರ ಭಾಗದಲ್ಲಿ ಹ್ಯಾಗುಳಿ ಎಂಬ ದೈವವನ್ನು ಆರಾಧಿಸುತ್ತಾರೆ. ಬೇರೆ ಬೇರೆ ಪ್ರದೇಶಗಳಲ್ಲಿ ಹ್ಯಾಗುಳಿಯು ಬೇರೆ ಬೇರೆ ರೂಪಗಳಲ್ಲಿ ಕರೆದುಕೊಳ್ಳುತ್ತಾ ದೈವತ್ವಕ್ಕೆ ಏರಿ ಆರಾಧನೆ ಪಡೆಯುತ್ತಿದೆ. ಮುಡೂರು ಹ್ಯಾಗುಳಿ, ನೆತ್ರ ಹ್ಯಾಗುಳಿ, ಕುಂಇಡಿ 'ಹ್ಯಾಗುಳಿ', ಮೂಕ ಹ್ಯಾಗುಳಿ, ಕೆಪ್ಪ ಹ್ಯಾಗುಳಿ ಇತ್ಯಾದಿ ಹೆಸರುಗಳಿಂದ ಉಡುಪಿಯ ಉತ್ತರ ಭಾಗದಲ್ಲಿಯ ಮರಾಟಿ ನಾಯ್ಕ ಸಮುದಾಯದವರಿಂದ ಆರಾಧನೆಗೊಳ್ಳುತ್ತದೆ.

ಪಿಲಿಚಾಮುಂಡಿ

ಪಿಲಿಚಾಮುಂಡಿ ಭೂತವನ್ನು ದುರ್ಗೆಯ ಅಂಶ ಎನ್ನುವ ದೃಷ್ಟಿಯಿಂದ "ಜುಮಾದಿಗೆ ಸಮಾನವಾದುದು ಎಂದು ಭಾವಿಸಿದ್ದಾರೆ" ಎಂದು ಡಾ. ವಿವೇಕ ರೈ ಹೇಳುತ್ತಾರೆ. ಹುಲಿಯನ್ನೇರಿ ಯುದ್ಧ ಮಾಡಿ ಚಂಡಮುಂಡರನ್ನು ಸಂಹಾರ ಮಾಡಿರುವ ಶಕ್ತಿ ಸ್ವರೂಪಿಗೆ ದೇವಿ ಚಾಮುಂಡಿ ಚಾಮುಂಡೇಶ್ವರಿ ಎಂದು ಕರೆಯುತ್ತಾರೆ. ಆದರೆ ಹುಲಿಯನ್ನೇ ಕುಲದೈವವಾಗಿರಿಸಿಕೊಂಡ ಜನಾಂಗಗಳ ಆರಾಧನೆಗೆ ಪೌರಾಣಿಕ ಕಲ್ಪನೆ ಸೇರಿ ಅದು ಪಿಲಿಚಾಮುಂಡಿ ಭೂತವಾಗಿರಬಹುದು ಎಂದು ಡಾ.

ವಿವೇಕ ರೈ ಅಭಿಪ್ರಾಯಪಟ್ಟಿದ್ದಾರೆ. ಪಿಲಿಚಾಮುಂಡಿಯ ಉಗಮಕ್ಕೆ ಸಂಬಂಧಿಸಿದ ಪಾಡ್ದನಗಳು ಲಭ್ಯವಿಲ್ಲ. ಆದರೆ ಅದರ ಪ್ರಸರಣವನ್ನು ಹಾಗೂ ಮಹಿಮೆಯನ್ನು ಹೇಳುವ ಪಾಡ್ದನಗಳಿವೆ. ಪಾಡ್ದನಗಳ ಪ್ರಕಾರ ಮಂಜುಪೂಂಜನು ಕಳ್ಳರಿಂದ ರಕ್ಷಣೆ ಪಡೆಯುವುದಕ್ಕಾಗಿ ಪಿಲಿಚಾಮುಂಡಿ ಭೂತವನ್ನು ತರುತ್ತಾನೆ. ಆದರೆ ತಮ್ಮ ಕುಲದೈವವಾದ ಪಿಲಿಚಾಮುಂಡಿಯನ್ನು ಹಣದ ಆಸೆಯಿಂದ ಬಾಳೊಳಿಯವರು ಮಂಜು ಪೂಂಜನಿಗೆ ಕೊಡುತ್ತಾರೆ. ಆದ್ದರಿಂದ ಮಂಜು ಪೂಂಜನಿಗೆ ಅದು ನಾನಾ ವಿಧವಾದ ತೊಂದರೆಗಳನ್ನು ಉಂಟುಮಾಡುತ್ತದೆ. ನಂತರ ಸ್ಥಾನವನ್ನು ಕೇಳಿ ಪಡೆದು ನೆಲೆ ನಿಲ್ಲುತ್ತದೆ. ಪಿಲಿಚಾಮುಂಡಿ ಖಡ್ಗವನ್ನು ಕೇಳಿ ಪಡೆಯುತ್ತದೆ. ಪಿಲಿಚಾಮುಂಡಿ ಭೂತದ ಆಯುಧ ಖಡ್ಗವೇ ಆಗಿದೆ. ಇನ್ನೊಂದು ಪಾಡ್ದನ್ ಪ್ರಕಾರ ಓಬಾದೇಶಿ ಎನ್ನುವವರು ನೆಕರೆಯ ಕೈಯಿಂದ ವೀಳ್ಯದೆಲೆಯಲ್ಲಿ ಮಂತ್ರಿಸಿದ ಪಿಲಿಚಾಮುಂಡಿ ಭೂತವನ್ನು ತರುತ್ತಾರೆ. ಆದರೆ ಅದರ ಶಕ್ತಿಯನ್ನು ತಡೆಯಲು ಸಾಧ್ಯವಾಗದೆ ಕೋಲ, ಬಲಿ ನೀಡಿ ಅದನ್ನು ಶಾಂತಗೊಳಿಸುತ್ತಾರೆ. ಜೈನರಲ್ಲಿ 'ಚಾಮುಂಡಾ' ಎಂಬ ಹೆಸರಿನ ಯಕ್ಷಿಯ ಆರಾಧನೆ ಇದೆ.

ಬೊಬ್ಬರ್ಯ

ಜೈನ ಮಡಸ್ತಾನದ ಏಳು ಜನ ಅಣ್ಣಂದಿರಿಗೆ ಒಬ್ಬಳು ತಂಗಿ. ಅವಳನ್ನು ಮದುವೆಯಾದವರು ಅಂದೇ ರಾತ್ರಿ ಸಾಯುತ್ತಾರೆ. ಇರುವ ಒಬ್ಬ ತಂಗಿಯ ಬದುಕು ಹೀಗಾಯ್ತಲ್ಲ? ಎಂಬ ಚಿಂತೆಯಲ್ಲಿರುವಾಗ ವ್ಯಾಪಾರಕ್ಕೆಂದು ಬಂದ ಮುಸ್ಲಿಂ ಹುಡುಗ ಸುಲಿಕಲ್ಲ ಮಾಧವ ಬ್ಯಾರಿ ಇವರ ದುಃಖಕ್ಕೆ ಕಾರಣವನ್ನು ಕೇಳುತ್ತಾನೆ. "ನಮ್ಮ ತಂಗಿಯನ್ನು ಮದುವೆಯಾದವರಿಗೆ ಅರ್ಧರಾಜ್ಯ ಕೊಡುತ್ತೇವೆ" ಎಂದು ಅಣ್ಣಂದಿರು ಹೇಳುತ್ತಾರೆ. ಮಾಧವ ಬ್ಯಾರಿ ನಾನು ಪ್ರಯತ್ನ ಮಾಡುತ್ತೇನೆ ಎಂದ. ಒಂದು ದೊಡ್ಡ ಮನುಷ್ಯನ ರೂಪವನ್ನು ಅಕ್ಕಿಯಲ್ಲಿ ಕಡೆದು ಮಾಡುತ್ತಾನೆ. ಆ ಅಕ್ಕಿಯ ಮನುಷ್ಯ ರೂಪವನ್ನು ರಾತ್ರಿ ಅವಳ ಜೊತೆಯಲ್ಲಿ ಮಲಗಿಸಿದರು. ಮಧ್ಯರಾತ್ರಿಯ ಹೊತ್ತು ಅವಳ ಮೂಗಿನಿಂದ ಎರಡು ಸರ್ಪಗಳು ಹೊರಬಂದು ಮಲಗಿದ್ದ ಬೊಂಬೆಯನ್ನು ಕಚ್ಚುತ್ತವೆ. ಆಗ ಬದಿಯಲ್ಲೇ ಅಡಗಿ ನಿಂತಿದ್ದ ಬ್ಯಾರಿ ತನ್ನ ಕತ್ತಿಯಿಂದ ಸರ್ಪಗಳನ್ನು ತುಂಡರಿಸುತ್ತಾನೆ. ಮೊದಲು ಕೊಟ್ಟ ಮಾತಿನಂತೆ ಅವನಿಗೆ ಅರ್ಧ ರಾಜ್ಯ ಹಾಗೂ ತಂಗಿಯನ್ನು ಕೊಡುತ್ತಾರೆ. ಆದರೆ ಆತ ಮದುವೆಗೆ ಒಪ್ಪುವುದಿಲ್ಲ. ಅವಳು ಚಂದ್ರನಾಥ ದೇವರ ಕೆರೆಗೆ ಸ್ನಾನಕ್ಕೆ ಹೋಗುತ್ತಾಳೆ. ಕೆರೆಯಿಂದ ಮೇಲೆ ಬರುವಾಗ ಮಾಯದ ಬಸಿರನ್ನು ಪಡೆಯುತ್ತಾಳೆ. ಬೊಬ್ಬರ್ಯನನ್ನು ಹೆರುತ್ತಾಳೆ. ಆಗ ಜೈನರಿಗೂ ಮುಸ್ಲಿಮರಿಗೂ ವಿವಾದ ಉಂಟಾಗಿ ಅವರು ಊರು ಬಿಟ್ಟು ಹೋಗುವ ಕಾಲ ಬರುತ್ತದೆ. "ಅಮವಾಸ್ಯೆಯ ದಿನ ಚಂದ್ರನನ್ನು ಕಂಡರೆ ಊರು ಬಿಟ್ಟು ಹೋಗುತ್ತೇವೆ ಎಂದು ಜೈನರು ಹೇಳುತ್ತಾರೆ. ನಾವು ಚಂದ್ರನನ್ನು ಕಂಡರೆ ಚಂದ್ರನನ್ನು ನಂಬುತ್ತೇವೆ ಎನ್ನುತ್ತಾರೆ ಮುಸ್ಲಿಮರು. ಚಂದ್ರ ಕಾಣಿಸಿದ್ದರಿಂದ ಜೈನರು ಚಂದ್ರನನ್ನು ತುಳಿದು ಊರು ಬಿಟ್ಟು ಹೋಗುತ್ತಾರೆ. ಮುಸ್ಲಿಮರು ಚಂದ್ರನನ್ನು ನಂಬಿದರು. "ಬೊಬ್ಬರ್ಯ ನೀನು ಏನು ಮಾಡುತ್ತಿ? ಎಂದು ಕೇಳಿದಾಗ ಬೊಬ್ಬರ್ಯ ನೀವು ಮುಂದಿನಿಂದ ಹೋಗಿ, ನಾನು ಹಿಂದಿನಿಂದ ಬರುತ್ತೇನೆ ಎಂದು ಹೇಳುತ್ತಾನೆ. ದೇವರ ವರ ಪಡೆದು ಬರುತ್ತೇನೆ ಎಂದು ಹೇಳುತ್ತಾನೆ. ಆಗ ತ್ರೇತಾಯುಗದ ರಾಮದೇವರ ಕಿರೀಟ, ಕೃಷ್ಣನ ಚಕ್ರ, ಜಗದೀಶ್ವರನ ತ್ರಿಶೂಲ, ದೇವೇಂದ್ರನ ವಜ್ರಾಯುಧ ಹಿಡಿದುಕೊಂಡು ಮಾಯಕದ ಹಡಗನ್ನು ಬ್ರಹ್ಮರು ನಿರ್ಮಾಣ ಮಾಡಿದರು. ಹಡಗಿನಲ್ಲಿದ್ದ ಹಾಯಿ ಹರಿಯುತ್ತದೆ. ಕೊಂಬು ತುಂಡಾಗುತ್ತದೆ. ಹಡಗು ಬದಿಗೆ ಬರುವಾಗ ಮುಳೂರಿನ ಮುನ್ನೂರು

ಜನ, ಕಾಮುವಿನ ಸಾವಿರ ಜನ ಕೂಡಿ ಹತ್ತಿರ ಹೋಗುವಾಗ, ಕಣ್ಣಿಗೆ ಕಂಡರೂ ಕೈಗೆ ಸಿಗುವುದಿಲ್ಲ. ಬೊಬ್ಬರ್ಯ ಹಡಗನ್ನು ಪಡುಗಂಗೆಗೆ ಕಳುಹಿಸುತ್ತಾನೆ. ಮಾಯದಲ್ಲಿ ಬಂದು ಮೂಳೂರು ಉಳ್ಳಂಗಾಯ ಕಟ್ಟೆಯಲ್ಲಿ ಜೋಗದಲ್ಲಿ ಆಗುತ್ತಾನೆ. ಸೊಲ್ಮೆ ಸಂದಾಯ ಮಾಡುತ್ತಾನೆ. ನೀನು ಯಾರಿಗೆ ಸೊಲ್ಮೆ ಸಂದಾಯ ಮಾಡುವುದು ಎಂದು ಕೇಳಲು ನನ್ನನ್ನು ಬಿಟ್ಟು ಉಳ್ಳಾಯ ರಾಯಭಾರಿ ಇದ್ದಾನೆ. ಅವನಿಗೆ ನಾನು ರಾಜ್ಯಭಾರಿ. ನಾನು ನಿಮ್ಮನ್ನು ಅನುಗ್ರಹ ಮಾಡಲು ಬಂದ ಶಕ್ತಿ ಎನ್ನುತ್ತಾನೆ. ಪೊಂಗ ಬೈದ್ಯನಿಗೆ ಅಭಯ ಕೊಟ್ಟು ಒಂದು ತೊಟ್ಟು ಕಳ್ಳು ಬೀಳುವಲ್ಲಿ ಸಾವಿರ ತೊಟ್ಟು ಬೀಳುವ ಹಾಗೆ ಮಾಡುತ್ತಾನೆ. ಈ ಗುಟ್ಟನ್ನು ಅವನು ಅವನ ಹೆಂಡತಿಗೆ ಹೇಳಿದ ನಂತರ, ಒಂದು ತೊಟ್ಟು ಕೂಡ ಬೀಳುವುದಿಲ್ಲ. ಕೊನೆಗೆ ಪೊಂಗ ಬೈದ್ಯನನ್ನು ನೀರಿನಲ್ಲಿ ಮುಳುಗಿಸುತ್ತಾನೆ. ಅವನ ಹೆಂಡತಿ ಮೂಳೂರಿನ ಮುನ್ನೂರು ಒಕ್ಕಲು, ಕಾಮುವಿನ ಸಾವಿರ ಒಕ್ಕಲು ಕೂಡಿಸಿ ದೇವರಾದರೆ ದೇವಸ್ಥಾನ, ಬ್ರಹ್ಮರಾದರೆ ಬ್ರಹ್ಮಸ್ಥಾನ, ಭೂತಗಳಾದರೆ ಭೂತಸ್ಥಾನ ಕಟ್ಟಿಸುತ್ತೇನೆ. ನನ್ನ ಗಂಡನನ್ನು ಉಳಿಸಿಕೊಡಬೇಕು ಎಂದು ಪ್ರಾರ್ಥನೆ ಮಾಡುತ್ತಾಳೆ. ಆಗ ಪೊಂಗ ಬೈದ್ಯ ನೀರಿನಿಂದ ಎದ್ದು ಬರುತ್ತಾನೆ. ಪ್ರಾರ್ಥನೆ ಪ್ರಕಾರ ಬ್ರಹ್ಮಗುಂಡ ಮತ್ತು ಕೊಂಬಿನ ಮರ ಸ್ಥಾಪನೆ ಮಾಡುತ್ತಾನೆ. ಊರಿನ ಜನ ಸೇರಿ ಧ್ವಜಸ್ತಂಭ ಮಾಡಿಸುತ್ತಾರೆ. ಆಗ ಬೊಬ್ಬರ್ಯ ಜೋಗ ಬರುತ್ತಾನೆ. ನಾನು ದೇವರಾಗಿ ನಿಮಗೆ ಅನುಗ್ರಹ ಮಾಡುತ್ತೇನೆ ಎನ್ನುತ್ತಾನೆ. ನಾಗಬ್ರಹ್ಮ ಉಳ್ಳಾಯ ಬೊಬ್ಬರ್ಯ ನಾನು. ಅಂಕೋಲಕ್ಕೆ ಹೋಗಿ ಲಿಂಗರೂಪದಿಂದ ಮೂಡಿ ಬರುತ್ತೇನೆ. ಅಲ್ಲಿ ಆದಿನಾಥ ಎಂದು ಕರೆಸಿಕೊಂಡು ನೀಲೇಶ್ವರಕ್ಕೆ ಹೋಗಿ ನೀಲಕಂಠನೆಂದು ಕರೆಸಿಕೊಂಡಿದ್ದೇನೆ.”[೧೭] ಎಂದು ಹೇಳುತ್ತಾರೆ.

ಜೈನರಿಗೆ ಬೊಬ್ಬರ್ಯ ಮನೆದೈವ. ಕರಾವಳಿಯಲ್ಲಿ ಬೊಬ್ಬರ್ಯ ಕುಲದೈವ. ಬೊಬ್ಬರ್ಯ ಬೆರ್ಮರಂತೆ ಸಸ್ಯಾಹಾರಿ. ಮಾಂಸಾಹಾರ ಅಲ್ಲ. ಹಾಲು ಮತ್ತು ಎಳೆ ನೀರು ಆತನ ಆಹಾರ. ದೇವಸ್ಥಾನದಲ್ಲಿ ಬೊಬ್ಬರ್ಯ ಕ್ಷೇತ್ರಪಾಲನೆಂದು ಪಾಡ್ದನ ತಿಳಿಸುತ್ತದೆ. ಇಲ್ಲಿ ಬೊಬ್ಬರ್ಯ ಮತ್ತು ಬೆರ್ಮರ್ ಒಬ್ಬನೇ ಎಂಬಂತೆ ವರ್ಣಿಸಲಾಗಿದೆ.

ಜುಮಾದಿ (ಧೂಮಾವತಿ ದೈವ)

ಜುಮಾದಿ ದೈವವನ್ನು 'ಧೂಮಾವತಿ' ಎಂದು ಕರೆಯುತ್ತಾರೆ. ಧೂಮಾವತಿ ಎಂಬ ಪದದ ಜನಪದ ರೂಪ 'ಜುಮಾದಿ' ತುಳುನಾಡಿನಾದ್ಯಂತ ಪ್ರಸಿದ್ಧಿ ಹೊಂದಿದ ದೈವ. ರಾಜನ್ ದೈವವಾಗಿದೆ. ಆತಳು ನೆಲೆನಿಂತ ಸ್ಥಳಕ್ಕನುಗುಣವಾದ ಹೆಸರುಗಳಿವೆ. ಉದಾ:ಪಾದೆ ಜುಮಾದಿ, ಪದು ಜುಮಾದಿ, ಪಳ್ಳ ಧೂಮಾವತಿ, ಅಮ್ಮಂಗಲ್ಲಿ ಧೂಮಾವತಿ, ಸಾರಾಳ ಧೂಮಾವತಿ, ಪಂಚಕಲ್ಲು ಧೂಮಾವತಿ, ಮರುಳು ಧೂಮಾವತಿ ಇತ್ಯಾದಿ ಹೆಸರುಗಳಿವೆ. ಆದಿಶಕ್ತಿ ದುಷ್ಟ ಸಂಹಾರಕ್ಕಾಗಿ ಸೃಷ್ಟಿಸಿದ ದೈವ ಎಂದು ಜನಪದರು ನಂಬುತ್ತಾರೆ.

೬.೩. ಮರಾಟಿಗರ ಭೂತರಾಧನೆಯ ಪ್ರಕಾರಗಳು

ನೂರಾರು ವರ್ಷಗಳಿಂದ ಕರಾವಳಿಯ ಜನರ ಸಾಂಸ್ಕೃತಿಕ ಬದುಕನ್ನು ನಿರ್ದೇಶಿಸುತ್ತಾ ಬಂದಿರುವ ಭೂತಾರಾಧನಾ ಸಂಪ್ರದಾಯವು ಹಲವಾರು ಸಾಂಸ್ಕೃತಿಕ ಅಂಶಗಳನ್ನು ಒಳಗೊಂಡಿರುವ ವಿಶಿಷ್ಟವಾದ ವಿಲಕ್ಷಣವುಳ್ಳ ಬೆಸುಗೆಯಾಗಿದೆ. ಇದೊಂದು ಧಾರ್ಮಿಕ ರಂಗಭೂಮಿಯಾಗಿದ್ದು, ಇದರಲ್ಲಿ ಆರಾಧನಾ ಅಂಶ, ಕಲಾತ್ಮಕ ಅಂಶ, ಮನೋರಂಜನಾಂಶ, ನ್ಯಾಯಾವಿತರಣಾಂಶ ಇತ್ಯಾದಿ ಅಂಶಗಳು

ಸೇರ್ಪಡೆಗೊಂಡು ಇದೊಂದು ಸಂಕೀರ್ಣ ವ್ಯವಸ್ಥೆಯಾಗಿದೆ. ಈ ಆರಾಧನಾ ವ್ಯವಸ್ಥೆಯ ಪ್ರತಿಯೊಂದು ಘಟಕದ ಆಳವಾದ ಅಧ್ಯಯನ ಕೈಗೊಳ್ಳಲು ಸಾಧ್ಯವಿದೆ. ಭೂತಾರಾಧನೆಯನ್ನು ಐತಿಹಾಸಿಕವಾಗಿ, ಸಮಾಜಶಾಸ್ತ್ರೀಯವಾಗಿ, ಸಾಂಸ್ಕೃತಿಕ, ಮನಃಶಾಸ್ತ್ರ, ನ್ಯಾಯಶಾಸ್ತ್ರ, ತತ್ವಶಾಸ್ತ್ರ ಕಲಾಮಿಮಾಂಸೆ ಮುಂತಾದ ಅನೇಕ ಶಿಸ್ತುಗಳ ಅಧ್ಯಯನ ಹಿನ್ನೆಲೆಯಲ್ಲಿ ವಿಶ್ಲೇಷಿಸಬಹುದು. ಒಟ್ಟಿನಲ್ಲಿ ಈ ಭೂತಾರಾಧನಾ ಪದ್ಧತಿ ಕರಾವಳಿ ನಾಡಿನ ಜನ ಜೀವನದಲ್ಲಿ ಹಾಸುಹೊಕ್ಕಾಗಿದ್ದು, ಈಗಲೂ ಸಹ ಅಸ್ತಿತ್ವದಲ್ಲಿದೆ.

ಮರಾಟಿಗರು ಆರಾಧಿಸುತ್ತಿರುವ ದೈವಗಳಿಗೆ ಬೇರೆ ಬೇರೆ ಕಡೆ ಬೇರೆ ಬೇರೆ ಹೆಸರುಗಳುಂಟು. ಆ ದೈವಗಳ ಮೂಲ, ಅಂತಸ್ತು, ವ್ಯಾಪ್ತಿ, ಸ್ವರೂಪ ಇತ್ಯಾದಿಗಳ ದೃಷ್ಟಿಯಿಂದ ಹಲವು ಬಗೆಯಲ್ಲಿ ವರ್ಗೀಕರಿಸಬಹುದು. ಪಂಜುರ್ಲಿ, ಪಿಲಿಚಾಮುಂಡಿ, ಭೂತಗಳು ಪ್ರಾಣಿ ಮೂಲದವುಗಳಾಗಿವೆ. ರಕ್ತೇಶ್ವರಿ, ಚಾಮುಂಡಿ, ಭೈರವ, ಭೈರವಿ, ಹಾಯ್‌ಗುಳಿ, ಗುಳಿಗ ಮುಂತಾದವುಗಳು ಪುರಾಣಗಳಿಂದ ಸೃಷ್ಟಿಯಾಗಿ ಆರಾಧನಾ ರಂಗದಲ್ಲಿ ಕಾಣಿಸಿಕೊಂಡ ದೈವಗಳು. ಒಂದು ಕಾಲದಲ್ಲಿ ಮಾನವ ಜೀವಿಗಳಾಗಿದ್ದು, ಯಾವುದೇ ಕಾರಣಕ್ಕೆ ಆಕಾಲ ಮರಣಹೊಂದಿದ ಹಲವು ವಿಶಿಷ್ಟ ಶಕ್ತಿಗಳು ಮರಣಾನಂತರ ದೈವ ರೂಪಿಗಳಾಗಿ ಪೂಜೆಗೊಳ್ಳುತ್ತಾ ಬಂದಿವೆ. ಅವುಗಳಲ್ಲಿ ಕಲ್ಕುಡ, ಕಲ್ಕುಟ್ಟಿ, ಗುಳಿಗ, ಬೊಬ್ಬರ್ಯ ಇವುಗಳು ಮಾನವ ಮೂಲದ ದೈವಗಳು. ಇವರಲ್ಲಿ ವೀರರಿದ್ದಾರೆ, ಜನೋಪಕಾರಿಗಳಾಗಿದ್ದಾರೆ, ಶಿಲ್ಪಿ ಮೊದಲಾದ ವಿವಿಧ ವರ್ಗದವರಿದ್ದಾರೆ. ಹೀಗಾಗಿ ಭೂತರಾಧನೆಯಲ್ಲಿ, ವೀರ ಆರಾಧನೆ, ಪಿತೃ ಆರಾಧನೆ, ಶಕ್ತಿಯ ಉಪಾಸನೆ, ಪ್ರಕೃತಿ ಪೂಜೆ ಮುಂತಾದ ಹಲವು ವಿಚಾರಗಳು ಸೇರ್ಪಡೆಗೊಂಡಿವೆ. ಇವರು ನಂಬುತ್ತಿರುವ ದೈವಗಳಲ್ಲಿ ಪುರುಷ ಭೂತಗಳು ಇದ್ದಂತೆ ಚಾಮುಂಡಿ, ಸತ್ಯದೇವತೆ, ಮಂತ್ರದೇವತೆ, ಪೊಸ ಅಪ್ಪೆ, ಸಿರಿ, ಸ್ತ್ರೀ ರೂಪದ ದೈವಗಳಾಗಿವೆ. ಉಭಯ ಲಿಂಗದ ಅಂಶಗಳನ್ನು ಕೆಲವೊಮ್ಮೆ ಸಾಂಕೇತಿಕವಾಗಿ ತಳೆದ ಅರ್ಧನಾರಿ ಸ್ವರೂಪದ ಧೂಮವತಿ ಅಥವಾ ಜುಮಾದಿ ದೈವಗಳಿವೆ. ಸಮಾಜಿಕ ವ್ಯವಸ್ಥೆಗಳಲ್ಲಿ ತೋರಿ ಬರುವ ಶ್ರೇಣಿ ಬದ್ದ ಪದ್ದತಿ ಮತ್ತು ಉಳಿಗಮಾನ್ಯ ಪದ್ದತಿಯ ಪ್ರಭಾವವು ಸಹಜವಾಗಿ ಭೂತಾರಾಧನಾ ವ್ಯವಸ್ಥೆಯಲ್ಲಿ ವ್ಯಕ್ತವಾಗಿದೆ.

ಮರಾಟಿಗರು ಆರಾಧಿಸುತ್ತಿರುವ ಭೂತಗಳ ಆರಾಧನಾ ಸ್ಥಳಗಳು ವೈವಿಧ್ಯಪೂರ್ಣವಾಗಿವೆ. ಭೂತಗಳ ಕೊಟ್ಟಿಗೆ, ಭೂತ ಸ್ಥಾನ, ಚಾವಡಿ, ಭೈರವ ಬನ ಇತ್ಯಾದಿಗಳಲ್ಲಿ ಭೂತಗಳು ಒಂಟಿಯಾಗಿಯೋ, ಸಮೂಹವಾಗಿಯೋ ನೆಲೆಸಿರುತ್ತವೆ. ಇವರು ಆರಾಧಿಸುವ ದೈವಗಳಿಗೆ ಸಂಕೇತವಾಗಿ ಮೊಗ (ಮುಖವಾಡ), ಖಡ್ತಲೆ (ಖಡ್ಗ), ಶೂಲ, ಘಂಟಾಮಣಿ ಇತ್ಯಾದಿ ದೈವದ ಭಂಡಾರ ವಸ್ತುಗಳು ನಿರ್ದಿಷ್ಟ ಸ್ಥಾನಗಳಲ್ಲಿ ಪವಿತ್ರ ಪರಿಸರದಲ್ಲಿ ಇಟ್ಟು ಕಾಲಕಾಲಕ್ಕೆ ಪೂಜಿಸಲ್ಪಡುತ್ತದೆ. ದೈವಗಳ ಆರಾಧನಾ ಸ್ಥಾನಗಳಿಗೆ ನಿರ್ದಿಷ್ಟವಾದ ವಾಸ್ತುಶಿಲ್ಪದ ಶಾಸ್ತ್ರೀಯ ಶೈಲಿ ಇರುತ್ತದೆ. ಉಪಯೋಗಿಸುವ ಎಲ್ಲಾ ಪರಿಕರಗಳಿಗೂ ನಿಶ್ಚಿತ ರೂಪಗಳಿರುತ್ತವೆ.

ಕರಾವಳಿಯ ಜನರು ಭೂತಗಳನ್ನು ವಿವಿಧ ಪ್ರಕಾರಗಳಲ್ಲಿ ಆರಾಧನೆ ಮಾಡುತ್ತಾರೆ. ಅವುಗಳೆಂದರೆ ಕೋಲ, ನೇಮ, ತಂಬಿಲ, ಅಗೆಲು, ಬಂಡಿ, ಜಾತ್ರೆ, ದೊಂಪದ ಬಲಿ, ಧರ್ಮನೇಮ, ಕೆಂಡಸೇವೆ, ಮೆಚ್ಚಿ, ಜಾಲಾಟ ಮುಂತಾದವುಗಳು. ಪ್ರಸ್ತುತ ಅಧ್ಯಯನಕ್ಕೊಳಪಡಿಸಿದ ಮರಾಟಿ ಸಮುದಾಯದವರು ಕೋಲ, ನೇಮ, ಕೆಂಡಸೇವೆಗಳನ್ನು ಹರಕೆಯ ರೂಪದಲ್ಲಿ ಅಥವಾ ವಾರ್ಷಿಕ ಆಚರಣೆಗಳಲ್ಲಿ ದೈವಗಳನ್ನು ಆರಾಧಿಸುತ್ತಾರೆ.

ಕೋಲ

ಕರಾವಳಿ ಪ್ರದೇಶದ ತುಳು ಜನರ ಪ್ರಭಾವದಿಂದಾಗಿ ಮರಾಟಿಗರು ಭೂತರಾಧನೆಯ ಆಚರಣಾತ್ಮಕ ಪ್ರದರ್ಶನವನ್ನು ಸಾಮಾನ್ಯವಾಗಿ ಕೋಲ ಎಂಬ ಹೆಸರಿನಿಂದ ಕರೆಯುತ್ತಾರೆ. ಭೂತಕ್ಕೆ ಕೋಲ ಕೊಡುವುದು, ಕೋಲ ಕಟ್ಟುವುದು ಮೊದಲಾದ ಪದಗಳು ಬಳಕೆಯಲ್ಲಿವೆ. ಕೋಲ ಎಂಬ ಪದಕ್ಕೆ ಅಲಂಕಾರ, ಬಣ್ಣ, ರೂಪ, ವಿನ್ಯಾಸ, ಆಕಾರ, ಆಭರಣ, ಮುಖವಾಡ ಹಾಕಿಕೊಂಡಿರುವ ವೇಷ, ನೃತ್ಯಗಳೆಂಬ ಅರ್ಥಗಳಿವೆ. ಕಲಾವಿದರು ಇಲ್ಲಿ ಭೂತವನ್ನು ವೇಷಗಾರಿಕೆಯ ಮೂಲಕ ಆವ್ಹಾನಿಸಿಕೊಂಡು ಪ್ರತ್ಯಕ್ಷಗೊಳಿಸಿಕೊಳ್ಳುತ್ತಾರೆ. ವಿವಿಧ ವೇಷಭೂಷಣಗಳಿಂದ ಭೂತದ ವ್ಯಕ್ತಿತ್ವವನ್ನು ನಟನೆ, ಕುಣಿತ ಮತ್ತು ಅನುಕರಣೆಯ ಮೂಲಕ ಜನಪದರ ಕಣ್ಣಿಗೆ ಕಾಣುವಂತೆ ಅಭಿವ್ಯಕ್ತಗೊಳಿಸುವ ಕ್ರಿಯೆಯನ್ನು 'ಕೋಲ' ಶಬ್ದವು ನಿರೂಪಿಸುತ್ತದೆ.

ನೇಮ

ಸಂಸ್ಕೃತದ ನಿಯಮ ಶಬ್ದದಿಂದ 'ನೇಮ' ಶಬ್ದವು ಬಂದಿದೆ. ಭೂತಾರಾಧನೆಯಲ್ಲಿ ಪರಂಪರಾನುಗತವಾದ ಅನೇಕ ಸಂಪ್ರದಾಯಗಳು ನಿಯಮಗಳ ರೂಪದಲ್ಲಿ ಕೆಲಸ ಮಾಡುತ್ತವೆ. ಜನಪದರ ನಿಯಮಗಳ ಜೊತೆಗೆ ಶಾಸ್ತ್ರ ಪರಂಪರೆಯ ನಿಯಮಗಳನ್ನು ಭೂತಾರಾಧನೆಗೆ ಸೇರಿಸಿ ಅದನ್ನು ನಿಯಮ ಎಂಬ ಹೆಸರಿನಿಂದ ಕರೆದಿರುವ ಸಾಧ್ಯತೆಗಳಿವೆ.

ಕೆಂಡ ಸೇವೆ

ಉಡುಪಿ ಜಿಲ್ಲೆಯ ದಕ್ಷಿಣ ಭಾಗದಲ್ಲಿ ರಕ್ತೇಶ್ವರಿ ಭೂತಕ್ಕೆ ನೇಮ ರೂಪದಲ್ಲಿ ಆರಾಧನೆಗೊಳ್ಳುತ್ತಿದ್ದು, ಜಿಲ್ಲೆಯ ಉತ್ತರ ಭಾಗದಲ್ಲಿ ಕೆಲವು ಕಡೆ ಕೆಂಡ ಸೇವೆ ಇರುತ್ತದೆ. ರಕ್ತೇಶ್ವರಿ ಅಲ್ಲದೆ ಇನ್ನಿತರೆ ಭೂತಗಳಾದ ಮಾಸ್ತಿಯಮ್ಮ ಆರಾಧನಾ ಸಂದರ್ಭದಲ್ಲಿ ಕೆಂಡಸೇವೆ ಜರಗುವುದು. ಕೆಂಡದ ರಾಶಿಯ ಮೇಲೆ ಭೂತದ ಪಾತ್ರಿಯು ಓಡುವುದು ಕೆಂಡಸೇವೆಯ ವೈಶಿಷ್ಟ್ಯವಾಗಿವೆ.

ಒಟ್ಟಿನಲ್ಲಿ ಕೋಲ, ನೇಮವು ಮರಾಟಿಗರು ಆಚರಿಸುತ್ತಿರುವ ಭೂತರಾಧನೆಯ ಸ್ವರೂಪವನ್ನು ಸೂಚಿಸಿದರೆ. ಕೆಂಡ ಸೇವೆಗಳು ಭೂತಾರಾಧನೆಯ ಯಾವುದೇ ಒಂದು ಭಾಗವನ್ನು ಮಾತ್ರ ಪ್ರತಿನಿಧಿಸುತ್ತದೆ.

ಜಕಣಿ

ಕುಂದಾಪುರದ ಪರಿಸರದಲ್ಲಿ ಆಚರಿಸಲ್ಪಡುತ್ತಿರುವ 'ಜಕಣಿ' ಎಂಬ ಆಚರಣೆ. ಯುಗಾದಿಯ ನಂತರ ಬರುವ ಆಚರಣೆಗಳಲ್ಲಿ ಈ ಜಕಣಿ ಮೊದಲ ಆಚರಣೆಯಾಗಿದೆ. ಈ ಜಕಣಿಯ ಆಚರಣೆಯ ಮುಖ್ಯ ಉದ್ದೇಶ ದೈವಗಳನ್ನು ಮತ್ತು ಸತ್ತವರನ್ನು ತೃಪ್ತಿಪಡಿಸುವುದು. ಹಿರಿಯರ ನಂಬಿಕೆಯ ಪ್ರಕಾರ ಭೂತಗಳಿಗೂ ಹಾಗೂ ಸತ್ತ ವ್ಯಕ್ತಿಗಳಿಗೆ ಕಾಲಕಾಲಕ್ಕೆ ಜಕಣಿ ಬಡಿಸದೆ ಇದ್ದರೆ, ಅವರು ಕೋಪಗೊಂಡು, ತಮಗೆ ತೊಂದರೆ ನೀಡಬಹುದು ಈ ಕಾರಣಕ್ಕಾಗಿ ವರ್ಷದಲ್ಲಿ ಒಂದು ದಿನವನ್ನು ಅದಕ್ಕಾಗಿಯೇ ಮೀಸಲಿರಿಸಿಕೊಂಡು 'ಜಕಣಿ' ಎಂಬ ಹೆಸರಿನಲ್ಲಿ ಆಚರಿಸುತ್ತಾರೆ. ಜಕಣಿಯ ಆಚರಣೆಯ ವಿಧಿ ವಿಧಾನಗಳು ಎಲ್ಲಾ ಕಡೆ ಒಂದೇ ರೀತಿಯಾಗಿಲ್ಲ. ಆಚರಣೆಯ ರೀತಿಗಳು ಆಯಾ ಪ್ರದೇಶಗಳ ಜನರಿಗೆ ಬಿಟ್ಟಿದ್ದು. ಜಕಣಿಯನ್ನು ಆಚರಿಸುವ ದಿನದಂದು ಕೋಳಿಯನ್ನು ಸಿದ್ಧ ಮಾಡಿಟ್ಟುಕೊಂಡಿರುತ್ತಾರೆ. "ಅಡಿಕೆಯ ಎಲೆಯಲ್ಲಿ ಗಟ್ಟಿಯಾದ ಭಾಗವನ್ನು ಕತ್ತರಿಸಿ, ಅದರ ಎರಡು ತುದಿಗಳನ್ನು ಮಡಚಿ

ಬಳ್ಳಿಯಿಂದ ಕಟ್ಟಿ ಆಯತಾಕಾರವಾದ ಪಾತ್ರೆಯನ್ನು ತಯಾರಿಸುತ್ತಾರೆ. ಇಂತಹುದೇ ಎರಡು ಪಾತ್ರೆಗಳನ್ನು ಸಿದ್ಧಗೊಳಿಸುತ್ತಾರೆ. ಅಡಿಕೆ ಓಲೆಯ ಬದಲು ಮಣ್ಣಿನ ಮಡಕೆಗಳನ್ನೂ ಉಪಯೋಗಿಸುತ್ತಾರೆ. ಒಂದು ಪಾತ್ರೆಯಲ್ಲಿ ಅರಿಶಿಣದ ಪುಡಿ ಹಾಗೂ ಸುಣ್ಣವನ್ನು ಮಿಶ್ರಮಾಡಿ ನೀರಿನೊಂದಿಗೆ ಬೆರೆಸಿ, ಕೆಂಪು ಬಣ್ಣದ ದ್ರಾವಣ ತಯಾರಿಸುತ್ತಾರೆ. ಇನ್ನೊಂದು ಪಾತ್ರೆಯಲ್ಲಿ ಭತ್ತದ ಹುಲ್ಲನ್ನು ಸುಟ್ಟು, ನೀರಿನೊಂದಿಗೆ ಸೇರಿಸಿ ಕಪ್ಪು ಬಣ್ಣದ ದ್ರಾವಣ ಮಾಡುತ್ತಾರೆ. ಬಿಳಿಯ ಬಟ್ಟೆಯನ್ನು ಎಣ್ಣೆಯಲ್ಲಿ ನೆನೆಸಿ ಕೋಲಿನ ತುದಿಗೆ ಸುತ್ತುತ್ತಾರೆ. ನಂತರ ಅದನ್ನು ಆ ಪಾತ್ರೆಗಳಲ್ಲಿ ಇರಿಸುತ್ತಾರೆ. ಹೀಗೆ ಸಿದ್ಧಗೊಳಿಸಿದ ಪಾತ್ರೆಗಳನ್ನು, ತೆಂಗಿನಕಾಯಿಯನ್ನು, ಒಂದು ಬಿಂದಿಗೆ ನೀರನ್ನು ತೆಗೆದುಕೊಂಡು ಮನೆಯ ದೈವದ ಕಲ್ಲುಗಳ ಬಳಿ ಕೊಂಡೊಯ್ದು ಕೋಳಿಯ ಕತ್ತನ್ನು ಕತ್ತರಿಸಿ ರಕ್ತದ ತರ್ಪಣ ನೀಡುತ್ತಾರೆ. ಪಾತ್ರೆಯಲ್ಲಿರುವ ಬತ್ತಿಗೆ ಬೆಂಕಿ ಹಚ್ಚಿ ತೆಂಗಿನಕಾಯಿ ಒಡೆದು ಅರ್ಪಿಸುತ್ತಾರೆ. ಇವು ದೈವದ ಕಲ್ಲಿನ ಬಳಿ ನಡೆಸುವ ಪೂಜಾ ವಿಧಾನಗಳು. ಜಕಣಿಗೆ ವಿವಿಧ ರೀತಿಯ ಆಹಾರ ಪದಾರ್ಥಗಳನ್ನು ಕೂಡ ತಯಾರಿಸುತ್ತಾರೆ. ಹಲಸಿನ ಹಣ್ಣಿನಿಂದ ತಯಾರಿಸಿದ ಕಡುಬು, ಉದ್ದಿನ ಇಡ್ಲಿ, ಕೋಳಿಯ ಸಾರು ಇದನ್ನೆಲ್ಲ ತಯಾರಿಸಿ ರಾತ್ರಿ ಊಟದ ವೇಳೆಗೆ ಬಾಳೆ ಎಲೆಯಲ್ಲಿ ಬಡಿಸುತ್ತಾರೆ. ಸ್ವಲ್ಪ ಹೊತ್ತು ಬಡಿಸಿದ ಸ್ಥಳಕ್ಕೆ ಯಾರೂ ಪ್ರವೇಶಿಸುವುದಿಲ್ಲ. ನಂತರ ನೀರನ್ನು ಸುತ್ತಲೂ ಸಿಂಪಡಿಸಿ, ಭೋಜನ ಮಾಡುತ್ತಾರೆ. ಕೆಲವೊಂದು ಊರಿನಲ್ಲಿ ಕೋಳಿಯನ್ನು ಊರಿನಲ್ಲಿರುವ ಅಮ್ಮನವರ ದೇವಸ್ಥಾನದ ಬಳಿ ಬಲಿ ಕೊಡುತ್ತಾರೆ. ನಂತರ ಅವರವರ ಮನೆಯಲ್ಲಿ ಆಚರಿಸುತ್ತಾರೆ."[೧೭]

೬.೪. ಭೂತಾರಾಧನೆಯಲ್ಲಿನ ಸಾಮಾಜಿಕ ಅಂಶಗಳು

ಭೂತಾರಾಧನೆಯು ಶ್ರೇಣೀಕೃತ ವ್ಯವಸ್ಥೆಯನ್ನು ಹೊಂದಿಕೊಂಡಿದ್ದು, ಭೂಮಾಲಕರ ಮತ್ತು ಉನ್ನತ ಜಾತಿಗಳ ಆಸ್ತಿಯ ಹಕ್ಕು ಮತ್ತು ಆರ್ಥಿಕ ಸ್ವಾತಂತ್ರ್ಯವನ್ನು ಬಲಪಡಿಸುತ್ತಾ ರಾಜಕೀಯ ವ್ಯವಸ್ಥೆಯನ್ನು ಮತ್ತಷ್ಟು ಗಟ್ಟಿಗೊಳಿಸುತ್ತಾ ಬಂದಿರುವುದನ್ನು ನಾವು ಕಾಣಬಹುದು. ಭೂತಾರಾಧನೆಯು ಹೊಂದಿರುವ ಸಾಮಾಜಿಕ ಅಂಶಗಳಾದ ನ್ಯಾಯ ತೀರ್ಮಾನ, ಚಿಕಿತ್ಸಾ ಪದ್ಧತಿ, ರಕ್ಷಣಾ ಅಂಶಗಳನ್ನು ಗುರುತಿಸಬಹುದು. ಕರಾವಳಿ ಕರ್ನಾಟಕದ ಭೂತಾರಾಧನೆಯು ನ್ಯಾಯಾಂಗ ಪದ್ಧತಿಯಾಗಿಯೂ ಆಚರಣೆಯಲ್ಲಿದೆ. ಜಾತಿಯ ಒಳಗಿನ ಊರಿನ ನ್ಯಾಯಗಳು ಭೂತಗಳ ಮೂಲಕ ಭೂತಗಳ ಮಾನಿಗಳ ಮೂಲಕ ಪರಿಹಾರವಾಗುತ್ತದೆ. ಈ ಆಚರಣೆಯಲ್ಲಿ ಗಮನಿಸಬಹುದಾದ ಅಂಶವೇನೆಂದರೆ ರಾಜ್ಯದ ಇತರೆ ಪ್ರದೇಶಗಳಲ್ಲಿ ಕಂಡುಬರುವ ಗ್ರಾಮ ಪಂಚಾಯ್ತಿ ಅಥವಾ ನ್ಯಾಯ ಪಂಚಾಯ್ತಿ ವ್ಯವಸ್ಥೆ ಇಲ್ಲಿ ಅಷ್ಟೊಂದು ಪ್ರಾಮುಖ್ಯತೆ ಪಡೆದಿರುವುದನ್ನು ಕಾಣಬಹುದು. ಭೂತಾರಾಧನೆಯು ನ್ಯಾಯ ತೀರ್ಮಾನದ ಜೊತೆಗೆ ಚಿಕಿತ್ಸಾ ಪದ್ಧತಿಯಾಗಿ ಕಾರ್ಯವೆಸಗಿರುವುದನ್ನು ನಾವು ಕಾಣಬಹುದು. ಇದು ಸಾಮಾನ್ಯವಾಗಿ ಪ್ರೇತ ಬಿಡಿಸುವ ಕ್ರಿಯೆಯಾಗಿ ಆಚರಣೆಯಲ್ಲಿದೆ. ಯಾವುದಾದರೂ ಸಂದರ್ಭಗಳಲ್ಲಿ ವ್ಯಕ್ತಿಗಳ ಮೈ ಸೇರಿದ ಪ್ರೇತವು ಬಾಧೆಯನ್ನು ಕೊಡುವಾಗ ಜನರು ದೈವಗಳಿಗೆ ಹರಕೆ ಹೇಳಿಕೊಳ್ಳುತ್ತಾರೆ. ಭೂತಗಳು ತಮ್ಮ ಕಾರಣದ ಮೂಲಕ ಇಂತಹ ಪ್ರೇತಗಳನ್ನು ಬಿಡಿಸುತ್ತದೆ. ಭೂತಾರಾಧನೆಯು ಕಳ್ಳತನ ಮೊದಲಾದ ಸಂದರ್ಭಗಳಲ್ಲಿ ಭೂತದ ಹೆಸರಿನಲ್ಲಿ ಯಾವುದಾದರೊಂದು ವಸ್ತು ರೂಪದಲ್ಲಿ ಭೂತಗಳನ್ನು ಆಹ್ವಾನಿಸಿ ಒಂದು ನಿರ್ದಿಷ್ಟ ಸ್ಥಳದಲ್ಲಿ ಕಟ್ಟಿಡಲಾಗುತ್ತದೆ. ಅಂತಹ ವಸ್ತುಗಳನ್ನು ಕದ್ದರೆ ವ್ಯಕ್ತಿ ಮೃತ್ಯು ಹೊಂದುತ್ತಾನೆ ಅಥವಾ ಸಂಪತ್ತು ನಾಶವಾಗುತ್ತದೆ ಎಂಬ ನಂಬಿಕೆ ಇದೆ. ಹೀಗೆ ಕರಾವಳಿ ಭಾಗದಲ್ಲಿ ಆಡಳಿತ ವ್ಯವಸ್ಥೆಗೆ ಪರ್ಯಾಯವಾಗಿ ಹುಟ್ಟಿಕೊಂಡಿರುವ ಭೂತಾರಾಧನೆಯು ಸ್ವಾತಂತ್ರ್ಯಗೊಂಡ ನಂತರ ಭೂ ಸುಧಾರಣೆ ಕಾಯ್ದೆ ಜಾರಿಗೆ ಬರುವವರೆಗೆ ಭೂಮಾಲಕರು ಮತ್ತು ಗೇಣಿದಾರರ ಮೇಲೆ ಹಿಡಿತ ಸಾಧಿಸಲು ಸಹಾಯವಾಯಿತು.

ಇತ್ತೀಚಿನ ಬದಲಾವಣೆಗಳು

ಭೂತಾರಾಧನೆಯ ಧನಾತ್ಮಕ ಅಂಶಗಳು ಅನೇಕವಿದ್ದರೂ ಕಾಲಕಾಲಕ್ಕೆ ಅವುಗಳೊಂದಿಗೆ ಬೆರೆತು ಬಂದ ಕೆಲವು ಅನಪೇಕ್ಷಿತ ಅಂಶಗಳಿರುವುದನ್ನು ಮರೆಯುವಂತಿಲ್ಲ. ಹಿಂದೆ ಸಮಾಜದಲ್ಲಿ ಊಳಿಗಮಾನ್ಯ ಪದ್ಧತಿಯೂ ಶ್ರೇಣೀಕೃತ ಜಾತಿ ಪದ್ಧತಿಯೂ ರೂಢಿಯಲ್ಲಿದ್ದುದರಿಂದ ಅವುಗಳ ನೆರಳು ದೈವಾರಾಧನೆಯಲ್ಲಿ ಕಾಣುವುದು ಸಹಜ. ಜಾತಿಯಲ್ಲಿ ಉಚ್ಚನೀಚ, ಕೆಲವೊಮ್ಮೆ ಅನಪೇಕ್ಷಿತವೆನಿಸುವಷ್ಟು ಮಡಿಮೈಲಿಗೆ ಪ್ರವೃತ್ತಿ, ಎಂದೋ ಆಚರಣೆಗೆ ಬಂದು, ಇಂದು ಅನಗತ್ಯವೆಂದು ತೋರುವ ಕೆಲವು ಕಂದಾಚಾರಗಳು ಈಗಲೂ ದೈವಾರಾಧನೆಯ ಕಕ್ಷೆಯೊಳಗೆ ಕಂಡುಬರುವುದುಂಟು. ಕೆಲವೊಮ್ಮೆ ದಬ್ಬಾಳಿಕೆ, ಶೋಷಣೆಗಳ ಸಾಧನವಾಗಿ ಕೆಲವರು ಭೂತಗಳನ್ನು ಬಳಸಿದ್ದೂ ಉಂಟು. ಭೂತಕ್ಕೆ ನಿಲ್ಲುವವರ ಮೇಲೆ ಪ್ರಭಾವ ಬೀರಿ ತಮಗೆ ಬೇಕಾದಂತೆ 'ನ್ಯಾಯ' ಹೇಳಿಸುವ ಕುಹಕತನವೂ ನಡೆದದ್ದುಂಟು.

ದೈವಾರಾಧನೆಯಲ್ಲಿ ಇತ್ತೀಚೆಗೆ ಸೇರಿಕೊಂಡ ಕೆಲವು ವಿಕೃತಿಗಳನ್ನು ಕಡೆಗಣಿಸುವಂತಿಲ್ಲ. ಸುಧಾರಣೆ ಮತ್ತು ವೈಭವೀಕರಣದ ಭ್ರಮೆಯಲ್ಲಿ ಕೆಲವು ದೈವಾರಾಧನೆಯ ಸಹಜ ಗಾಂಭೀರ್ಯ ಹಾಗೂ ಕಲಾತ್ಮಕತೆಗೆ ಧಕ್ಕೆಯಾಗಿರುವುದು ಸುಳ್ಳಲ್ಲ. ದೈವಸ್ಥಾನಗಳ ಪುನರ್ನಿರ್ಮಾಣಕಾಲದಲ್ಲಿ ಕೆಲವು ಕಡೆ ಪರಂಪರೆಯ ವಾಸ್ತು ಶೈಲಿಗೆ ಬದಲಾಗಿ ಭಿನ್ನಶೈಲಿಯ ಕಟ್ಟಡಗಳನ್ನು ಕಟ್ಟುವುದಿದೆ. ದೈವಗಳ ವೇಷಗಾರಿಕೆಯಲ್ಲಿ ಅನಪೇಕ್ಷಿತವಾದ ಬದಲಾವಣೆಯಾಗಿರುವುದುಂಟು. ತೆಂಗಿನ ಎಳೆಯ ಗರಿ, ಅಡಿಕೆಯ ಹಾಳೆಗಳ ಬದಲಾಗಿ ಆಡಂಬರಕ್ಕಾಗಿ ಬೆಳ್ಳಿಯಂಥ ಲೋಹಗಳ ಅಣಿಗಳನ್ನು ಸಿದ್ಧಗೊಳಿಸುವುದುಂಟು. ಮುಖವರ್ಣಿಕೆಗೆ ಬದಲಾಗಿ ನಾಟಕೀಯ ರೀತಿಯ ಮುಖವರ್ಣಿಕೆಯನ್ನು ಮಾಡುವುದುಂಟು. ಕಲ್ಲುರ್ಟಿ, ಮಾಯಂದಾಳ್ ಮುಂತಾದ ಸ್ತ್ರೀ ದೈವಗಳ ವೇಷವನ್ನು ಆಧುನಿಕತೆಯ ಮೆರುಗಿನಿಂದ ನಿರ್ವಹಿಸುವುದುಂಟು. ಕೆಲವು ಭೂತವೇಷಗಳು ವೇಷಭೂಷಣ ಮತ್ತು ಅಭಿನಯಾದಿಗಳಲ್ಲಿ ಯಕ್ಷಗಾನದ ಅನುಕರಣೆ ಮಾಡುವುದುಂಟು. ಭೂತ ನರ್ತನಕ್ಕೆ ಪೂರಕವಾಗಿ ವಾದ್ಯಗಳು ಕೆಲವೊಮ್ಮೆ ಆಧುನಿಕ ಚಲನಚಿತ್ರ ಸಂಗೀತವನ್ನು ನುಡಿಸುವುದುಂಟು. ಭೂತ ವೇಷಧಾರಿ ಜೀವಂತ ಕೋಳಿಯ ನೆತ್ತರನ್ನು ಹೀರುವಂಥ ಹಳೆಯ ಪದ್ಧತಿಯನ್ನು ನಿಷೇಧಿಸುವುದು ಸೂಕ್ತ. ಅತಿಯಾದ ದೇಹದಂಡನೆಯನ್ನೂ ಅಳತೆ ಮೀರಿದ ಆವೇಶದರ್ಶನವನ್ನೂ ನಿಯಂತ್ರಿಸುವುದು ಒಳ್ಳೆಯದು.

ದೈವಾರಾಧನೆಗೆ ನೇರವಾಗಿ ಸಂಬಂಧಪಟ್ಟ ವ್ಯಕ್ತಿಗಳನ್ನು ಒಂದೆಡೆ ಸೇರಿಸಿ ಕೆಲವೊಂದು ಮುಖ್ಯ ವಿಚಾರಗಳನ್ನು ಸಮಾಲೋಚನೆ ಮಾಡಿ, ದೈವಾರಾಧನೆಯಂಥ ಅದ್ಭುತ ಕಲೆಯನ್ನು ಇಂದಿನ ಸಮಾಜಕ್ಕೆ ಹೆಚ್ಚು ಉಪಯುಕ್ತ ಹಾಗೂ ಸಂಗತಗೊಳಿಸುವ ಅಗತ್ಯವಿದೆಯೆನ್ನಬಹುದು.

ನಾಗಾರಾಧನೆ

ಕರಾವಳಿ ಕರ್ನಾಟಕದ ಎರಡು ಭಾಷಾ ಪ್ರದೇಶಗಳಾದ ತುಳು ಹಾಗೂ ಕನ್ನಡ ಪ್ರದೇಶಗಳೆರಡರಲ್ಲೂ ನಾಗ ಬಹು ಜನಪ್ರಿಯ ಆರಾಧ್ಯ ದೈವ. "ನಾಗಾರಾಧನೆಯ ಬಹಳ ಮುಖ್ಯವಾದ ಧಾರ್ಮಿಕ ಸಾಂಸ್ಕೃತಿಕ ಆಚರಣೆಯಾಗಿದ್ದು, ಭೂತಾರಾಧನೆಗಿಂತ ಪ್ರಾಚೀನವಾದುದೆಂಬ ಅಭಿಪ್ರಾಯಗಳಿವೆ. ಭಯ ಮತ್ತು ಸೌಂದರ್ಯಗಳು ಸಮ್ಮಿಲನಗೊಂಡ ನಾಗನನ್ನು ಕಂಡಾಗ ಜನರು ಮೊಟ್ಟ ಮೊದಲು ಅದಕ್ಕೆ ತಲೆಬಾಗಿ ಆರಾಧಿಸ ತೊಡಗಿರಬಹುದು. ಕಾಲಾಂತರದಲ್ಲಿ ಸುಂದರವಾದ, ಕಲಾತ್ಮಕವಾದ ನಾಗನ ಕಲ್ಲುಗಳನ್ನು ಕೆತ್ತಿಸಿ ನಾಗನಿಗಾಗಿಯೇ ದೊಡ್ಡ ಮರ, ಬಳ್ಳಿಗಳ ಸ್ವಲ್ಪ ಪ್ರದೇಶವನ್ನು ಮೀಸಲಿರಿಸಿ ಅಲ್ಲಿ ನಾಗನ ಕಲ್ಲುಗಳನ್ನಿರಿಸಿ ನಾಗಬನವೆಂದು ಹೆಸರಿಸಿ, ಆರಾಧನೆ ನಡೆಸಿಕೊಂಡು ಬರುವ ಕ್ರಮ

ಮೊದಲಿದ್ದಿರಬೇಕು. ಈ ತುಳುನಾಡಿಗೆ ಬ್ರಾಹ್ಮಣರು ಬಂದು ದೇವಸ್ಥಾನಗಳಲ್ಲಿ ಮಂತ್ರ ಉಚ್ಚಾರಣೆಗಳೊಡನೆ ಆರಾಧಿಸುವ ಸಂಪ್ರದಾಯ ಮೊದಲಾಗಿರಬೇಕು. ತುಳುನಾಡಿನಲ್ಲಿ ಬ್ರಾಹ್ಮಣರು ಬರುವ ಮೊದಲೇ ನಾಗಾರಾಧನೆ ವ್ಯಾಪಕವಾಗಿ ನಡೆಯುತ್ತಿದ್ದುದರಿಂದ ಈ ಭೂಭಾಗಕ್ಕೆ ಬಹಳ ಹಿಂದೆಯೇ 'ನಾಗರ ಖಂಡ' ಎಂಬ ಹೆಸರು ಬಂದಿರಬೇಕು."[೧೮]

"ನಾಗ" ಎಂದರೆ ನಾಗರಹಾವು, ಸರ್ಪ ಎಂಬ ಅರ್ಥ ಕೊಡುತ್ತದೆ. ಹಾವನ್ನು ದೇವರ ರೂಪದಲ್ಲಿ ಚಿತ್ರೀಕರಿಸಿ, ಕಲ್ಪಿಸಿಕೊಂಡು, ಅವಾಹನೆ ಮಾಡಿಕೊಂಡು, ಸ್ವಾಮಿ ಕೋಲ, ಸ್ವಾಮಿ ಆರಾಧನೆ, ಕಾಡ್ಯ ನಾಟ್ಯ, ನೋಂಪು (ಅನಂತ ವೃತ) ತನು ಹಾಕುವುದು, ನಾಗ ಮಂಡಲ, ಆಶ್ಲೇಷ ಬಲಿ, ಸರ್ಪಂಕೋಲ, ಡಕ್ಕೆಬಲಿ, ನಾಗಮಂಡಲ ಮುಂತಾದ ರೂಪದಲ್ಲಿ ಆರಾಧಿಸುತ್ತಿರುವುದನ್ನು ನಾಗಾರಾಧನೆ ಎಂದು ಕರೆಯಬಹುದು."[೧೯]

ನಾಗಾರಾಧನೆಯ ಪ್ರಾಚೀನತೆ

• "ನಾಗಾರಾಧನೆ ಪ್ರಪಂಚದ ಅತ್ಯಂತ ಪ್ರಾಚೀನ ಆರಾಧನೆ ಸಂಪ್ರದಾಗಳಲ್ಲಿ ಒಂದು. ಇದು ಯಾವ ಕಾಲದಲ್ಲಿ ಪ್ರಾರಂಭವಾಯಿತು ಹಾಗೂ ಯಾವ ಪ್ರದೇಶದಲ್ಲಿ ಮೊದಲು ಪ್ರಾರಂಭವಾಯಿತು ಎಂದು ಖಚಿತವಾಗಿ ಹೇಳಲು ಸಾಧ್ಯವಿಲ್ಲ.

• "ಕ್ರಿಪೂ. ೨೬೦೦ ವರ್ಷಗಳ ಹಿಂದೆಯೇ ಸುಮೇರಿಯನ್ ದೊರೆ 'ಗುದಿಯನ'ನ ಸುರಾ ಪಾತ್ರೆಯಲ್ಲಿ ಮೇಲೆ ನಾಗ ಮಿಥುನದ ಸ್ವಾರಸ್ಯವಾದ ಚಿತ್ರಣದಿಂದಲೇ ನಾಗ ಸಂಬಂಧ ಸಂಪ್ರದಾಯದ ಪ್ರಾಚೀನತೆಯನ್ನು ತಿಳಿಯಬಹುದು.

• ಗ್ರೀಕರ ರಾಷ್ಟ್ರ ಚಿಹ್ನೆ ಸರ್ಪ. ಅಲ್ಲಿ ಆರೋಗ್ಯದ ಅಧಿದೇವತೆಯಾದ 'ರುಸ್ಕು ಲೇಪಿಯನ್' ಕೈಯಲ್ಲಿ ಹಿಡಿದಿರುವ ದಂಡದ ಸುತ್ತ ನಾಗ ಮಿಥುನವಿದೆ. ನಂತರ ಇದೆ ಚಿಹ್ನೆಯನ್ನು ವೈದ್ಯ ವಿಜ್ಞಾನದ ಲಾಂಛನವನ್ನಾಗಿ ಮಾಡಿಕೊಳ್ಳಲಾಗಿದೆ. ಗ್ರೀಸಿನ ವೀರರು ಸತ್ತ ಮೇಲೆ ಸರ್ಪಗಳಾಗಿ ಜನಿಸುತ್ತಾರೆ ಎಂಬ ನಂಬಿಕೆ ಅಪಾರವಾಗಿದೆ.

• ಕ್ರೇಟ್ ರಾಜ್ಯದಲ್ಲಿ ಸರ್ಪನಿಗೆ ಹಾಲು ಕೊಟ್ಟು ಪೂಜಿಸುವ ಸಂಪ್ರದಾಯವಿದೆ.

• ಎಥೆನ್ಸ್ ನಗರದಲ್ಲಿ ಸರ್ಪ ದೇವಾಲಯಗಳಿದ್ದ ಬಗ್ಗೆ ಇತಿಹಾಸವಿದೆ. ಸರ್ಪಗಳು ದೇವತೆಗಳಿಗೆ ಸಂದೇಶ ರವಾನಿಸುವವರಾಗಿರುವರು ಎಂದು ಅವರ ನಂಬಿಕೆ.

• ಬ್ರಿಟನ್ನಿನಲ್ಲಿ ಡ್ರೂಯಿಕ್ ಜನರು ಸರ್ಪ ಆರಾಧಿತರಾಗಿದ್ದರೆಂದು ಅಲ್ಲಿಯ ಜನಪದರ ಮೌಖಿಕ ನಂಬಿಕೆ.

• ಬ್ಯಾಬಿಲೋನಿಯಾ ಸಂಸ್ಕೃತಿಯಲ್ಲಿ ನಾಗರಾಧನೆಗೆ ವಿಶೇಷ ಸ್ಥಾನವಿದೆ. ಅಲ್ಲಿ ಸರ್ಪಕ್ಕೆ ದೇವಾಲಯವನ್ನು ಕಟ್ಟಿ ಆರಾಧಿಸುವ ಪರಿಪಾಠವಿರುವುದ್ದನ್ನು ಇತಿಹಾಸಕಾರರು ತಿಳಿಸಿದ್ದಾರೆ.

• ಪ್ರಾಚೀನ ಈಜಿಪ್ಟ್‌ನ ರಾಜನ ಕಿರೀಟದಲ್ಲಿ ಸರ್ಪ ಲಾಂಛನವಿದೆ. ನೈಲ್‌ನದಿಯ ಜಲಾನಯನ ಪ್ರದೇಶಗಳಲ್ಲಿ ನಾಗಾರಾಧನೆಯ ಕುರುಹುಗಳಿರುವುದನ್ನು ಸಂಶೋಧಕರು ಶೋಧಿಸಿದ್ದಾರೆ. ಇವರುಗಳ ಸೆಬ್ ದೇವತೆ ನಾಗಗಳ ರಾಜ.

• ಸ್ಕಾಟ್‌ಲ್ಯಾಂಡಿನ ಶಿಲ್ಪಾ ಕಲಾಕೃತಿಗಳಲ್ಲಿಯು ಸರ್ಪ ಲಾಂಛನವಿದೆ.

• ಅಪ್ರಿಕನ್ನರುಬೊಂಬಾಟ್ ಎಂಬ ಜಾತಿಯ ಮರದಡಿ ಗೂಟ ಹಾಕಿ ಅದನ್ನು ಹಾವಿನ ಪ್ರತಿರೂಪವೆಂದು ನಂಬಿ ಪೂಜಿಸುತ್ತಿದ್ದರು. ನಾಗ ಲಾಂಛನದ ಮೇಲೆ ಕಲಬಾರ್ ಎಂಬ ಮರದ ಪಾತ್ರೆಯಲ್ಲಿ ಮೊಸರು

ಮತ್ತು ಜೋಳದ ಹಿಟ್ಟಿನ ಅಭಿಷೇಕ ಮಾಡುತ್ತಿದ್ದರು. ಪರಮಾತ್ಮ ಜೀವರಾಶಿಗಳಲ್ಲಿ ಸರ್ಪನನ್ನೇ ಮೊದಲು ಸೃಷ್ಟಿಸಿದ ಎಂಬ ಪುರಾಣಕತೆ ಅವರಲ್ಲಿದೆ. ಇಲ್ಲಿ ನಾಗನನ್ನು ಹೆಬ್ಬಾವಿನ ರೂಪದಲ್ಲಿಯೂ ಸರ್ಪನ ರೂಪದಲ್ಲಿಯೂ ಪೂಜಿಸುತ್ತಾರೆ.

• ಶ್ರೀಲಂಕಾ ದೇಶವು ಮೊದಲು ನಾಗ ವಂಶಜರ ನಾಡಾಗಿದ್ದು ಅಲ್ಲಿ ನಾಗ ಪೂಜೆ ನಡೆಸುತ್ತಿದ್ದರು.

• ಕಾಂಬೋಡಿಯದಲ್ಲಿಯೂ ನಾಗಾರಾಧನೆ ಇದ್ದು, ಇಲ್ಲಿನ ನಾಗಾರಾಧನೆ ಸ್ಥಳವು ಪವಿತ್ರ ಯಾತ್ರಾ ಸ್ಥಳಗಳಾಗಿವೆ.

• ಚೀನಾ ದೇಶದವರು ಸರ್ಪ ಮಳೆ ತರುವ ದೇವರೆಂದು ನಂಬುತ್ತಾರೆ.

• ಜಪಾನ್‌ನಲ್ಲಿ ನಾಗ ಸಮೃದ್ಧಿಯ ಅಧಿದೇವತೆ ಆತ ದೇವದೂತನೆಂದು ನಂಬಿರುವರು.

• ಫಿಜಿ ದ್ವೀಪಗಳಲ್ಲಿ ಸರ್ಪವು ಸುರಳಿ ಕಟ್ಟಿ ಕುಳಿತ ಚಿತ್ರಗಳಿವೆ. ಇವು ಅಲ್ಲಿನ ಮುಖ್ಯ ದೇವತೆಗಳಲ್ಲಿ ಓರ್ವನಾಗಿರುವರು.

• ಉತ್ತರ ಅಮೇರಿಕಾದಲ್ಲಿ ಕೊಲಂಬಸ್‌ನ ಪ್ರವೇಶಕ್ಕಿಂತ ಪೂರ್ವದಲ್ಲಿ ಅಲ್ಲಿನ ಹೆಚ್ಚಿನ ಮೂಲ ನಿವಾಸಿಗಳು ಸರ್ಪ ಮಳೆ ನೀರಿನ ಅಧಿದೇವತೆಯೆಂದು ನಂಬಿರುತ್ತಾರೆ. ಬೆಳೆ ಮತ್ತು ಮಳೆ ನೀರಿಗಾಗಿ ಸರ್ಪವನ್ನು ಆರಾಧಿಸುವುದಾಗಿ ಸಂಶೋಧಕರು ತಿಳಿಸಿದ್ದಾರೆ.

• ಆಸ್ಟ್ರೇಲಿಯಾದ ಮೂಲನಿವಾಸಿಗಳ ಪುರಾಣಗಳಲ್ಲಿ ದೈತ್ಯಾಕಾರದ ಸರ್ಪವು ತನ್ನ ಬಾಲದ ಹೊಡೆತದಿಂದ ಜಗತ್ತನ್ನು ಸೃಷ್ಟಿಸಿದೆ ಎಂಬುದಾಗಿ ವರ್ಣಿಸಲಾಗಿದೆ."[೨೦] ಹೀಗೆ ಪ್ರಪಂಚದ ಹಲವಾರು ರಾಷ್ಟ್ರಗಳಲ್ಲಿ ಸರ್ಪವನ್ನು ವಿವಿಧ ಕಾರಣಗಳಿಗಾಗಿ ಪೂಜಿಸುತ್ತಾ, ಫಲ ಸಮೃದ್ಧಿಯ ಸಂಕೇತವಾಗಿ ನಂಬಿಕೊಂಡು ಬಂದಿರುವುದನ್ನು ಕಾಣುತ್ತೇವೆ.

ಭಾರತದ ಉದ್ದಗಲಕ್ಕೂ ಸರ್ಪಾರಾಧನೆಯ ವಿವಿಧ ಪ್ರಕಾರಗಳು ಇಂದಿಗೂ ಕಾಣಸಿಗುತ್ತದೆ. ಈ ದೇಶದಲ್ಲಿ ನಾಗಾರಾಧನೆಗೆ ಇರುವಷ್ಟು ಪ್ರಾಶಸ್ತ್ಯ ಪ್ರಾಯಶ ಇನ್ನಾವ ದೇಶದಲ್ಲೂ ಇರಲಾರದು. ನಮ್ಮ ಹೆಚ್ಚಿನ ಎಲ್ಲ ದೇವತೆಗಳು ಒಂದಲ್ಲ ಒಂದು ರೀತಿಯಲ್ಲಿ ನಾಗ ಸಂಬಂಧವನ್ನು ಹೊಂದಿದ್ದಾರೆ. ಶಿವ ನಾಗಭೂಷಣ, ವಿಷ್ಣು ನಾಗಶಯನ, ಲಂಬೋದರನ ಉದರವು ನಾಗನಿಂದ ಬಂಧಿತ, ಸುಬ್ರಹ್ಮಣ್ಯನಂತೂ ನಾಗರೂಪಿ. ದೇವಿ ಶಾಂತದುರ್ಗೆ ನಾಗಸ್ವರೂಪಿ. ಬಂಗಾಲದ ಮಾನಸಾದೇವಿ ನಾಗದೇವಿಯೆನಿಸಿದ್ದಾಳೆ. ಸರ್ಪಮುಕುಟ, ಸರ್ಪಕಂಕಣ, ಸರ್ಪಕುಂಡಲ, ಸರ್ಪಮುದ್ರಿಕೆ, ಸರ್ಪಾಯುಧಗಳಿಂದ ಅಲಂಕೃತವಾದ ದೇವತೆಗಳು ನೂರಾರು.

"ಜ್ಯೋತಿಷ್ಯಶಾಸ್ತ್ರದಲ್ಲಿ, ಛಾಯಾಗ್ರಹವೆನಿಸಿದ ರಾಹುವು ಸರ್ಪರೂಪಿಯೆಂದು ಕಲ್ಪಿಸಲಾಗಿದೆ. ಅನಿಷ್ಟ ಕಾಲವೆನಿಸಿದ 'ರಾಹುಕಾಲ'ವನ್ನು ನಾಗದೇವರಿಗೆ ಸಂಬಂಧಿಸಿದ ಕಾಲವೆಂದು ನಂಬುತ್ತಾರೆ. ನಾಗನಿಗೆ ಸಂಬಂಧಪಟ್ಟ ಸೇವೆಗಳನ್ನು ಮಾತ್ರ ರಾಹುಕಾಲದಲ್ಲಿ ಮಾಡುತ್ತಾರೆ. 'ಕಾಲಸರ್ಪ ದೋಷ' ಮೊದಲಾದ ದೋಷವಿದ್ದವರು ರಾಹುವಿನ ಮಂತ್ರ ಜಪಿಸಬಹುದೆಂದೂ, ಗೋಮೇಧಿಕ ಕೂರಿಸಿ ಬೆಳ್ಳಿಯ ಉಂಗುರವನ್ನು ಧರಿಸಬಹುದೆಂದೂ ಹೇಳಲಾಗಿದೆ."[೨೧] "ಯೋಗಶಾಸ್ತ್ರದಲ್ಲಿ ಕುಂಡಲಿನಿ (ಸುಷುಮ್ನಾನಾಡಿ) ಯು ನಾಗಾಕೃತಿಯದೆನ್ನಲಾಗಿದೆ."[೨೨] ಬುದ್ಧ ಜಾತಕಗಳಲ್ಲಿ ನಾಗನ ಕಥೆಗಳಿವೆ. ಜೈನತೀರ್ಥಂಕರರ ವಿಗ್ರಹಗಳಲ್ಲಿ ನಾಗನ ಹೆಡೆಯ ಚಿತ್ರಗಳಿರುವುದುಂಟು."[೨೩]ಮೊಹೆಂಜೋದಾರೋದಲ್ಲಿ ನಾಗವಿಗ್ರಹಾರಾಧನೆ ಇತ್ತೆಂದು ತಿಳಿದುಬರುತ್ತದೆ. ನಾಗಕುಲ, ನಾಗರಖಂಡ, ನಾಗಲಾಂಛನಗಳ ಪ್ರಸ್ತಾಪಗಳನ್ನು ನಮ್ಮ ನಾಡಿನ ಸಾಂಸ್ಕೃತಿಕ ಅಧ್ಯಯನದಲ್ಲಿ ಆಗಾಗ ಎದಿರಾಗುತ್ತವೆ. ಜನಪದ

ಸಾಹಿತ್ಯ ಕಲೆಗಳಲ್ಲಿ ನಾಗನ ಸುಳಿದಾಟ ಧಾರಾಳ. ನಾಗರಪಂಚಮಿ ನಮ್ಮ ದೇಶದ ಒಂದು ಮುಖ್ಯ ಹಬ್ಬ. ಅಂದು ದೇಶದ ಹಲವೆಡೆ ಜೀವಂತ ನಾಗಗಳಿಗೆ ಹಾಲಿಡುತ್ತಾರೆ. ನಾಗಪ್ರತಿಮೆಗಳಿಗಂತೂ ಪುಷ್ಕಳ ಹಾಲಿನ ಅಭಿಷೇಕ, ಸ್ಕಂದಷಷ್ಠಿಯೂ ಇಂತಹದೇ ಹಬ್ಬ. ಇಂದಿಗೂ ವೈವಿಧ್ಯಪೂರ್ಣವಾದ ನಾಗಾರಾಧನಾ ಸಂಪ್ರದಾಯಗಳು ಬಹುವಾಗಿ ಜೀವಂತವಿರುವ ಮುಖ್ಯ ಪ್ರದೇಶವೆಂದರೆ ಅವಿಭಜಿತ ದಕ್ಷಿಣ ಕನ್ನಡ ಮತ್ತು ಅದರ ದಕ್ಷಿಣಕ್ಕಿರುವ ಕೇರಳ. ತುಳುನಾಡು ನಾಗಲೋಕವಾಗಿತ್ತೆಂದೂ, ಇಲ್ಲಿಗೆ ನಾಗಬ್ರಹ್ಮನೆಂಬ ದೈವವೇ ಸೃಷ್ಟಿಕರ್ತ ಸ್ಥಾನದಲ್ಲಿರುವುದಾಗಿಯೂ ಜನಪದರ ಪ್ರತೀತಿ. ಬ್ರಹ್ಮ, ನಾಗಬ್ರಹ್ಮ, ನಾಗಲಿಂಗ, ಬ್ರಹ್ಮಲಿಂಗ, ನಾಗಬ್ರಹ್ಮಲಿಂಗೇಶ್ವರ, ನಾಗಯಕ್ಷ(ಕ್ಷಿ), ಬೆರ್ಮೆರ್, ಶೇಷನಾಗ, ಅನಂತಪದ್ಮನಾಭ, ಸುಬ್ರಹ್ಮಣ್ಯ ಮೊದಲಾದ ಬೇರೆ ಬೇರೆ ನಾಮರೂಪಗಳಿಂದ ಆತನನ್ನು ತುಳುನಾಡಿನಲ್ಲಿ ಆರಾಧಿಸುತ್ತಾರೆ. ತುಳುನಾಡಿಗೆ 'ಆಲುಕ'[೨೪] ಎಂಬುದು ಪ್ರಾಚೀನ ಹೆಸರುಗಳಲ್ಲೊಂದು 'ಆಲುಕ' ಎಂದರೆ ಸರ್ಪರಾಜನೆಂದು ಹೇಳಿಕೆ ಇದೆ. ಶಂಖಕುಲದ ನಾಗವಂಶೀಯರು ತುಳುನಾಡಲ್ಲಿದ್ದರೆಂದು ಗೋವಿಂದ ಪೈಗಳು ಅಭಿಪ್ರಾಯ ಪಡುತ್ತಾರೆ.

ಉಡುಪಿ ಜಿಲ್ಲೆಯಲ್ಲಿ ಹೆಜ್ಜೆ ಹೆಜ್ಜೆಗೂ ನಾಗನಬನ, ನಾಗನಕಟ್ಟೆ, ನಾಗನಕಲ್ಲು, ನಾಗನಹುತ್ತ, ನಾಗದೇವಸ್ಥಾನ, ಆಲಡೆಗಳನ್ನು "ಚಿತ್ತೇರಿ"ಗಳನ್ನು[೨೫] ಇಂದಿಗೂ ಕಾಣಬಹುದು. ಪ್ರತಿಯೊಂದು ಮನೆತನದ ಪೂರ್ವಾರ್ಜಿತ ಸ್ಥಳದಲ್ಲಿ ನಾಗನ ಬನವಾಗಲೀ ನಾಗಾಲಯವಾಗಲೀ ಇಲ್ಲದಿರುವುದಿಲ್ಲ. ಸಂತಾನ ಪ್ರದವೆನಿಸಿ ಆರೋಗ್ಯ ಭಾಗ್ಯದಾತನಾದ ಈ ದೈವದ ಅನುಗ್ರಹವನ್ನು ಅಂದಿನವರು ಬಯಸಿದ್ದರು. ಇಂದೂ ಆ ನಂಬಿಕೆ ಸಾಕಷ್ಟು ಊರ್ಜಿತವಾಗಿಯೇ ಇದೆ. ಪ್ರತಿಯೊಂದು ದೇವಸ್ಥಾನ, ಭೂತಸ್ಥಾನಕ್ಕೂ ಸಂಬಂಧಪಟ್ಟಂತೆ ಪ್ರತ್ಯೇಕ ನಾಗಬನ ಅಥವಾ ನಾಗಪ್ರತಿಷ್ಠೆಗಳು ಇದ್ದೆ ಇರುತ್ತವೆ. ಯಾವುದೇ ಆರಾಧನೆಯ ಸಂಕೀರ್ಣವಾದರೂ ನಾಗನಿಗೆ ಸ್ಥಾನ ಮೀಸಲಿರುತ್ತದೆ. ಭೂಮಿಯ ಪುತ್ರನೆನಿಸಿದ ನಾಗನಿಗೆ ನೆಲದ ಒಡೆತನವನ್ನು ಆರೋಪಿಸಲಾಗುತ್ತದೆ. ಹಾಗಾಗಿ ನಾಗ ಕ್ಷೇತ್ರಪಾಲನಾಗಿ ಮನ್ನಣೆ ಪಡೆಯುತ್ತಾನೆ. ಆಲಡೆಯೆಂಬ ದೈವಸಂಕೀರ್ಣದಲ್ಲಿ ನಾಗಬ್ರಹ್ಮ ಒಂದು ಪ್ರಧಾನ ದೇವತೆ.

ಕೋಷ್ಟಕ: ೬.೨

ಮರಾಟಿ ನಾಯ್ಕ ಮತ್ತು ಮರಾಟಿಗರ ನಾಗಾರಾಧನೆಯ ಕುರಿತು ನಂಬಿಕೆಯ ಬಗ್ಗೆ ಸಮುದಾಯವಾರು ವಿವರಗಳು

ಸಮುದಾಯದ ಹೆಸರು	ನಾಗಾರಾಧನೆ ನಂಬಿಕೆವಾರು ಹಂಚಿಕೆ			
	ನಂಬುತ್ತೇವೆ/ಆರಾಧಿಸುತ್ತೇವೆ	ನಂಬುವುದಿಲ್ಲ/ಆರಾಧಿಸುವುದಿಲ್ಲ	ತಟಸ್ಥ	ಒಟ್ಟು
ಮರಾಟಿ ನಾಯ್ಕ	೧೪೫	೦೩	೦೨	೧೫೦
ಮರಾಟಿ	೧೪೭	–	೦೩	೧೫೦
ಒಟ್ಟು	೨೯೨	೦೩	೦೫	೩೦೦
ಶೇಕಡವಾರು	೯೭.೩೩	೦೧.೦೦	೦೧.೬೭	೧೦೦.

ಕೋಷ್ಟಕ ಸಂಖ್ಯೆ ೬.೨ರಲ್ಲಿ ಉಡುಪಿ ಜಿಲ್ಲೆಯ ಮರಾಟಿ ನಾಯ್ಕ ಸಮುದಾಯದವರ ೧೫೦ ಕುಟುಂಬಗಳನ್ನು ಹಾಗೂ ಮರಾಟಿ ಸಮುದಾಯದವರ ೧೫೦ ಕುಟುಂಬಗಳನ್ನು ಒಟ್ಟು ಎರಡು ಸಮುದಾಯದವರ ೩೦೦ ಕುಟುಂಬಗಳನ್ನು ಸಮೀಕ್ಷೆಗೊಳಪಡಿಸಲಾಗಿದೆ. ಅವರಲ್ಲಿ ನಾಗಾರಾಧನೆಯ ಕುರಿತು ನಂಬಿಕೆ ಇದೆಯೇ ಅಥವಾ ಇಲ್ಲವೇ ಹಾಗೂ ಆರಾಧಿಸುವುದರ ಬಗ್ಗೆಯೂ ಪ್ರಶ್ನೆ ಕೇಳಲಾಗಿದೆ. ಎರಡು ಸಮುದಾಯಗಳ ಅಭಿಪ್ರಾಯವನ್ನು ಕ್ರೋಢಿಕರಿಸಿ ನೀಡಲಾಗಿದೆ.

ಮರಾಟಿನಾಯ್ಕ ಸಮುದಾಯದವರ ೧೫೦ ಮಾಹಿತಿದಾರರಲ್ಲಿ ೧೪೫ ತಿಳುವಳಿಕೆದಾರರು ನಾಗಾರಾಧನೆಯನ್ನು ಮಾಡುತ್ತಿರುವುದಾಗಿ ಅಭಿಪ್ರಾಯ ಪಟ್ಟಿದ್ದಾರೆ. ೦೩ ತಿಳುವಳಿಕೆದಾರರು ನಂಬುವದಿಲ್ಲವೆಂದು, ೦೨ ತಿಳುವಳಿಕೆದಾರರು ತಟಸ್ಥರಾಗಿರುವರು. ಇವರಲ್ಲಿ ಹೆಚ್ಚಿನವರು ನಾಗ ಸಂಬಂಧಿತ ಪೂಜೆಯಾದ ನಾಗ ಪಂಚಮಿ, ಸರ್ಪ ಸಂಸ್ಕಾರ, ಆಶ್ಲೇಷಬಲಿ ಮುಂತಾದ ಸೇವೆಗಳಲ್ಲಿ ಭಾಗವಹಿಸಿ ಸೇವೆಗಳನ್ನು ಸಲ್ಲಿಸಿರುವುದಾಗಿ ಅಭಿಪ್ರಾಯ ಪಟ್ಟಿದ್ದಾರೆ.

ಮರಾಟಿ ಸಮುದಾಯದಲ್ಲಿರುವ ೧೫೦ ಮಾಹಿತಿದಾರರಲ್ಲಿ ೧೪೭ ಮಂದಿ ಮಾಹಿತಿದಾರರು ನಾಗಾರಾಧನೆ ಸಂಬಂಧಿತ ಸೇವೆಗಳಲ್ಲಿ ಭಾಗವಹಿಸಿರುವುದಾಗಿ ಅಭಿಪ್ರಾಯ ಪಟ್ಟಿರುವರು. ೦೩ ತಿಳುವಳಿಕೆದಾರರು ತಟಸ್ಥವಾಗಿರುವುದ್ದನ್ನು ಕಾಣಬಹುದಾಗಿದೆ.

೬.೨ರ ಕೋಷ್ಟಕದಲ್ಲಿ ಗಮನಿಸಿದಾಗ ನಾಗಾರಾಧನೆಯಲ್ಲಿ ಹೆಚ್ಚಿನ ಕುಟುಂಬದವರು ಭಾಗವಹಿಸಿರುವುದು ಕಂಡುಬರುತ್ತದೆ. ನಾಗಾರಾಧನೆಯಲ್ಲಿದ್ದಂತಹ ಭಯವೇ ಕಾರಣವಾಗಿರಬಹುದು ಎಂಬುದಾಗಿ ಊಹಿಸಬಹುದು. ಆದರೆ ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಗಮನಿಸಿರುವ ಅಂಶವೇನೆಂದರೆ ಇತ್ತೀಚೆಗೆ ಶ್ರದ್ದೆ ಕಡಿಮೆಯಾಗುತ್ತಿದೆ ಎಂಬ ಅಭಿಪ್ರಾಯವನ್ನು ತಿಳುವಳಿಕೆದಾರರು ವ್ಯಕ್ತಪಡಿಸಿರುತ್ತಾರೆ.

೬.೬. ಮರಾಟಿ ಸಮುದಾಯಗಳ ನಾಗ ಬ್ರಹ್ಮಸ್ಥಾನದಲ್ಲಿರುವ ಪರಿವಾರ ದೈವಗಳು ಮತ್ತು ಆರಾಧನೆಗಳು

ರಕ್ತೇಶ್ವರಿ

ರಕ್ತೇಶ್ವರಿಯನ್ನು ಬೇರೆ ಬೇರೆ ಹೆಸರಿನಿಂದ ಕರೆಯುತ್ತಾರೆ. "ಅಮ್ಮನವರು, ಹೊನ್ನೋಲೆ ಕಿವಿಯವಳು, ಹೊತ್ತಾರೆ ನೆರಿಯವಳು, ಭೂಮಿ ತಾಯಿ ಎಂದು ವರ್ಣಿಸಿರುವರು. ಕೆಂಪು ರಕ್ತೇಶ್ವರಿ, ಶಾಂತರಕ್ತೇಶ್ವರಿ, ಸಂಹಾರ ರಕ್ತೇಶ್ವರಿ, ರಕ್ತಗಂಧಿ, ರಕ್ತಾಕ್ಷಿ ಯೋಗಿನಿ ಗಣಗಳ ಪರಿವಾರವುಳ್ಳವಳು ಎಂದು ಹೇಳುತ್ತಾರೆ. ಇವಳು ಮೂಕಾಸುರವನ್ನು ಕೊಂದು ಕೊಲ್ಲೂರಿನಲ್ಲಿ ನೆಲೆನಿಂತವಳು. ಮಹಿಷಾಸುರನನ್ನು ಕೊಂದವಳು ಎಂಬುದಾಗಿ ವರ್ಣಿಸುತ್ತಾರೆ. ಮರಾಟಿಗಳು ವಾಸವಿರುವ ದಕ್ಷಿಣ ಕನ್ನಡ ಜಿಲ್ಲೆಯ, ಮಂಗಳೂರು ತಾಲೂಕಿನ ಮುಲ್ಕಿ ಹೋಬಳಿಯ ಕವತ್ತಾರಿನಲ್ಲಿ ರಕ್ತೇಶ್ವರಿಯನ್ನು 'ಸಿರಿ' ಎಂದು ಅಲ್ಲಿನ ಜನಪದರು ಹೇಳುತ್ತಾರೆ"[೨೬].

ಕವತ್ತಾರುನಲ್ಲಿ ಅಬ್ಬಗ-ದಾರಗೆ, ಸೊನ್ನೆಗಿಂಡೆಯವರಿಗೆ ಆರಾಧನೆ ಇರುತ್ತದೆ. ಸಿರಿಯ ಆರಾಧನೆ ಇರುವುದಿಲ್ಲ. ಇವರಿಗೆ ಮೂರ್ತಿ ರೂಪವಿದ್ದರೆ ರಕ್ತೇಶ್ವರಿಗೆ ಪ್ರತ್ಯೇಕವಾಗಿ ಒಂದು ಸಾಮಾನ್ಯ ಕಲ್ಲು ಇರುವುದನ್ನು ಕ್ಷೇತ್ರಕಾರ್ಯ ಸಂದರ್ಭದಲ್ಲಿ ಕಂಡಿರುವೆನು. ಆ ಪ್ರದೇಶದ ತುಳುವರು ರಕ್ತೇಶ್ವರಿ ಎಂದು ಹೇಳುವುದಿಲ್ಲ. ಅವರು 'ಲೆಕ್ಕೇಸಿರಿ' ಎಂದು ಹೇಳುತ್ತಾರೆ. "ಸಿರಿ ಪಾಡ್ಡನದ ಸಿರಿಯ ಪೂರ್ಣ ಹೆಸರು 'ಬಾಲೆಕ್ಕಿ ಸಿರಿ'. ಈ ಹೆಸರೇ ಕಾಲಾಂತರದಲ್ಲಿ 'ಲೆಕ್ಕಿಸಿರಿ' ಆಗಿರುವ ಸಾಧ್ಯತೆ ಇದೆ. ಲೆಕ್ಕೆಸಿರಿ ಎಂಬುದು ಸಂಸ್ಕೃತೀಕರಣಗೊಂಡು 'ರಕ್ತೇಶ್ವರಿ' ಆಗಿದೆ. ಲೆಕ್ಕೆಸಿರಿಗೆ ಕೊಲ ರೂಪದಲ್ಲಿ ಕೂಡ ಆರಾಧನೆ ಇದೆ. ಆಗ ಈ ದೈವ ಒಂದು "ಲೆಕ್ಕೆಗಿಡ" ಗೆಲ್ಲನ್ನು ಕೈಯಲ್ಲಿ ಹಿಡಿದುಕೊಳ್ಳುತ್ತದೆ"[೨೭].

ರಕ್ತೇಶ್ವರಿಯು ರಾಕ್ಷಸರನ್ನು ನಾಶ ಮಾಡಲು ಬಂದ ಶಕ್ತಿ. ಆದಿಶಕ್ತಿಯು ರಕ್ತಾಬೀಜಾಸುರನನ್ನು ನಾಶ ಮಾಡಲು ಸೃಷ್ಟಿಸಿದ ರೂಪವೇ ರಕ್ತೇಶ್ವರಿ. ಪಾಡ್ದನದಲ್ಲಿ ಇವಳು ನಾಗನ ಬಲಭಾಗದಲ್ಲಿ ಕುಳಿತು ಭೂಮಿಗೆ ಇಳಿವಳು ಎಂದು ಹೇಳಿದೆ. ಸಪ್ತದೇವಿಯರು ಮೇಲಿನ ಲೋಕದಿಂದ ಭೂಲೋಕಕ್ಕೆ ಬಂದು ದಕ್ಷಿಣ ದಿಕ್ಕಿನಲ್ಲಿ ಒಂದು ಸತ್ಯದ ಕಟ್ಟೆಯಲ್ಲಿ ವಿಶ್ರಾಂತಿ ಪಡೆಯುತ್ತಾರೆ. ಬಾಯಾರಿಕೆ ನೀಗಿಸಲು ಎಳೆ ನೀರು 'ರಾಣಿ' ಎನ್ನುವ ಕೆಲಸದ ಹೆಣ್ಣು ತೆಂಗಿನಕಾಯಿ ಕೆತ್ತಿ ಕೊಡುವಾಗ, ಸಿಯಾಳಕ್ಕೆ ಅವಳೇ ಬಾಯಿ ಹಾಕುತ್ತಾಳೆ. ಆಗ ದೇವಿ ಕೋಪದಿಂದ ಆ ಹುಡುಗಿಯನ್ನು ಮಾಯ ಮಾಡುತ್ತಾಳೆ. ಮೇಲಿನ ಲೋಕಕ್ಕೆ ಕೊಂಡು ಹೋಗುತ್ತಾರೆ. ಮುಂದೆ ಆದಿಶಕ್ತಿಯು ರಕ್ತಬೀಜಾಸುರನ ಜೊತೆ ಯುದ್ಧ ಮಾಡುವಾಗ ಆರು ಜನ ತಂಗಿಯರು ದೇವಿಯಲ್ಲಿ ಆ ದಿನ ಮಾಯ ಮಾಡಿದ ಹುಡುಗಿಯನ್ನು ಕರೆಸಿ ಎನ್ನುತ್ತಾರೆ. ಆಗ ಅವಳು ನನ್ನ ಶರೀರದಲ್ಲಿ ಲೀನವಾಗಿದ್ದಾಳೆ. ರಕ್ತೇಶ್ವರಿಯೆಂಬ ಹೆಸರಿನಲ್ಲಿ ಅವತರಿಸುತ್ತಾಳೆ. ಅಂತೆಯೇ ಅವಳು ರಕ್ತ ಬೀಜಾಸುರನ ರಕ್ತವನ್ನು ಹೀರಿ ಸಂಹಾರ ಮಾಡುತ್ತಾಳೆ. ರಕ್ತ ಬೀಜಾಸುರನ ಸಂಹಾರದ ನಂತರ ಹುಡುಗಿ ತಾಯಿ ಇನ್ನು ಮೇಲೆ ನನಗೇನು ನೆಲೆ? ಎಂದು ವಿನಂತಿಸುತ್ತಾಳೆ. ಆಗ ಆದಿಶಕ್ತಿಯು ನೀನು ಭೂತಕ್ಕಿಂತ ದೊಡ್ಡವಳು, ದೇವರಿಗಿಂತ ಸಣ್ಣವಳು ನಾಗನ ಜೊತೆ ಆರಾಧನೆ ಪಡೆಯುತ್ತಾ, ನಾಗನಿಗೆ ತಂಗಿಯಾಗಿ, ನಾಗಾರಾಧನೆ ಮಾಡುವಾಗ ನೀನು ಕೂಡ ಜೊತೆಯಲ್ಲಿ ಆರಾಧನೆ ಪಡೆ ಎಂದು ಹೇಳಿ ಆ ಹುಡುಗಿಯನ್ನು ಮಾಯ ಮಾಡುತ್ತಾರೆ. ಇಂದಿಗೂ ಜನಪದರಲ್ಲಿ ಅವಳು ಮಾಯದಲ್ಲಿ ಬಂದು ದೈವಗಳಿಗೆ ಮಾತೆಯಾಗಿ, ನಾಗರಿಗೆ ತಂಗಿಯಾಗಿ ಲೋಕ ರಕ್ಷಣೆ ಮಾಡುತ್ತಾಳೆ ಎಂಬ ಕಥೆಯು ಪ್ರಚಲಿತದಲ್ಲಿವೆ. ಇಲ್ಲಿ ನಾಗನೊಂದಿಗೆ ಸೇರಿಕೊಂಡಿರುವುದರಿಂದ ಅವಳು 'ನಾಗಬ್ರಹ್ಮ ರಕ್ತೇಶ್ವರಿ' ಎಂದು ಕರೆಸಿಕೊಳ್ಳುವಳು.

"ಕಾರ್ಕಳದಲ್ಲಿ ಜೈನ ಸಂಸ್ಕೃತಿಯ ಪ್ರಭಾವವಿರುವುದರಿಂದ ಯಕ್ಷಿಗೂ ರಕ್ತೇಶ್ವರಿಗೂ ಸಂಬಂಧವಿರುವುದು ಕಂಡುಬರುತ್ತದೆ. ಲೆಕ್ಕಿ ಮರದಡಿಯಲ್ಲಿ ನಿಂತ ಪದ್ಮಾವತಿ ಯಕ್ಷಿಗೂ ಲೆಕ್ಕಿಸಿರಿಗೂ ಅನೇಕ ಸಾಮ್ಯತೆ ಇದೆ. "ಲೆಕ್ಕಿಸಿರಿ" ದೈವದ ಬಣ್ಣ ಕೆಂಪು. ಆದ್ದರಿಂದ ಈ ದೈವವನ್ನು ರಕ್ತೇಶ್ವರಿ ಎನ್ನಲಾಗುತ್ತದೆ. ಜೈನರ ಯಕ್ಷಿಯಲ್ಲಿ ಒಂದಾದ ಪದ್ಮಾವತಿ ಯಕ್ಷಿಯ ಬಣ್ಣ ಕೆಂಪು ಅಥವಾ ರಕ್ತಬಣ್ಣ. ಧರಣೇಂದ್ರ ಯಕ್ಷ ಹಾಗೂ ಪದ್ಮಾವತಿ ಯಕ್ಷಿ ಸತಿಪತಿಯರು. ಪದ್ಮಾವತಿಯನ್ನು ಲೆಕ್ಕಿಯಮ್ಮ, ಲೊಕ್ಕಿಯಮ್ಮ ಎಂದು ಕರೆಯುತ್ತಾರೆ"[೨೮]. ಕರಾವಳಿ ಜಿಲ್ಲೆಯಲ್ಲಿ ನಾಗ ಪರಿವಾರದಲ್ಲಿ ಸೇರಿರುವ ಲೆಕ್ಕೆಸಿರಿ ದೈವದ ಭೂತ ನರ್ತಕ ಲೆಕ್ಕಿಗಿಡದ ಸೊಪ್ಪನ್ನು ಅಥವಾ ರೆಂಬೆಯನ್ನು ಹಿಡಿದು ನರ್ತಿಸುವ ಸಂಪ್ರದಾಯ ಕೆಲವೆಡೆ ಕಾಣಿಸುತ್ತದೆ. ಲೆಕ್ಕಿಯನ್ನು ನೆಕ್ಕಿ (ತುಳುಪದ) ಎಂಬುದಾಗಿ ಕೂಡ ಕರೆಯುತ್ತಾರೆ. ಇದರಿಂದ ಪದ್ಮಾವತಿ ಯಕ್ಷಿ ಹಾಗೂ ರಕ್ತೇಶ್ವರಿ ದೈವಾರಾಧನೆಯು ಒಂದೇ ದೈವದ ಆರಾಧನೆ ಎಂದು ಸ್ಪಷ್ಟವಾಗುತ್ತದೆ. ರಕ್ತೇಶ್ವರಿಯು ನಾಗಕುಲಕ್ಕೆ ಸಂಬಂಧಿಸಿದ ದೈವ ಎಂಬುದು ಸ್ಪಷ್ಟವಾಗುತ್ತದೆ. ಆದ್ದರಿಂದಲೇ ರಕ್ತೇಶ್ವರಿಯು ನಾಗನ ಬಲಬದಿಯಲ್ಲಿ ಸ್ಥಾನವನ್ನು ಪಡೆದು ಆರಾಧನೆಗೊಳ್ಳುವಳು.

ನಂದಿಗೋಣ

"ಶಿವನ ವಾಹನವಾದ 'ಬಸವ'ನನ್ನು ನಂದಿ ಎನ್ನುತ್ತಾರೆ. ಕೋಣಗದ್ದೆ ಉಳಲು ಉಪಯೋಗಿಸುತ್ತಿದ್ದ ಪ್ರಾಣಿ. ಈ ಎರಡು ಒಟ್ಟಿಗೆ ಸೇರಿ ನಂದಿಗೋಣ ಎಂಬ ಹೆಸರಿನಲ್ಲಿ ಗೊಂದಲವಿದೆ. ತಲೆಗೆ ಖಡ್ಗವನ್ನಿಟ್ಟವನು, ಉದರ ಗಂಟೆಯ ಕಟ್ಟಿ ಛಲದಂಕನಾದವನು ಎಂದು ನಂದಿಗೆ ಹೇಳಿರುವರು"[೨೯]. "ನಾಗಮಂಡಲ ಆಚರಣೆಯ ಸಂದರ್ಭ ಹಿರೆನಂದಿ ಮತ್ತು ಕಿರೆನಂದಿ ಎಂಬ ಇಬ್ಬರ ಕಥೆ ಬರುತ್ತದೆ. ಉಳ್ಳಾಲ ಎಂಬ ಸ್ಥಳದಲ್ಲಿ ಚೆನ್ನಮ್ಮ ಹುಟ್ಟಿ, ಬಾಳುತ್ತಿದ್ದಳು. ೧೬ ವರ್ಷದಲ್ಲಿ ಋತುಮತಿಯಾಗಿ

ಬಾಳುವಾಗ ಚಿಕ್ಕಯ್ಯ ಶೆಟ್ಟಿ ಮತ್ತು ಜೋಗಪ್ಪ ಶೆಟ್ಟಿ ಹುಟ್ಟಿದರು. ಯುವಕರಾದ ದಾಯಾದಿ ಮತ್ಸರದಿಂದ ರಣ ಕಾಳಗವಾಯಿತು. ಕಾಳಗದಲ್ಲಿ ಇಬ್ಬರು ಸತ್ತು ಹಿರೆನಂದಿ ಮತ್ತು ಕಿರೆನಂದಿ ಎನಿಸಿಕೊಂಡು ಉಳ್ಳಾಲದಲ್ಲಿದ್ದರು. ಒಂದು ದಿನ ನೆರೆ ಬಂದು ಉಳ್ಳಾಲ ತೇಲಿ ಉತ್ತರ ದಿಕ್ಕಿಗೆ ಹೋಯಿತು. ಇಲ್ಲಿಯೇ ಸ್ಥಳ ಒಳ್ಳೆಯದೆಂದು ಅಲ್ಲಲ್ಲಿ ಮನೆ ಕಟ್ಟಿಸಿಕೊಂಡು ಹಿರೆನಂದಿ, ಕಿರೆನಂದಿಯರು ಭೇದಭಾವವಿಲ್ಲದೆ ಜೀವಿಸುತ್ತಿದ್ದರು"[೩೦].

ಯಕ್ಷಿ

ಯಕ್ಷಿಯು ದೇವಲೋಕದ ಹೆಣ್ಣೆಂದು, ಬಿಳಿವರ್ಣದವಳೆಂದು ಜನಪದರ ನಂಬಿಕೆಯಾಗಿದೆ. ಬೇರೆ ಬೇರೆ ಪ್ರದೇಶ ಬೇರೆ ಬೇರೆ ಸ್ವರೂಪವನ್ನು ಎತ್ತಿ ವ್ಯಕ್ತಪಡಿಸುತ್ತಾಳೆ."ಗಂಡುಯಕ್ಷಿ, ಹೆಣ್ಣು ಯಕ್ಷಿ, ಭೂತ ಯಕ್ಷಿ, ಪ್ರೇತ ಯಕ್ಷಿ, ತಾಂಬೂಲ ಯಕ್ಷಿ, ನಾಗ ಯಕ್ಷಿ, ಬ್ರಹ್ಮ ಯಕ್ಷಿ ಮುಂತಾದ ರೂಪಗಳಿವೆ. ಯಕ್ಷಿಯ ಕತೆಯಲ್ಲಿ ದೇವಲೋಕದಲ್ಲಿರುವ ಯಕ್ಷಿಗೆ ಭೂಲೋಕದಲ್ಲಿ ಸೇವೆ ನಡೆಯುವಾಗ ಯಕ್ಷ ವಾದ್ಯವ ಹಿಡಿದು ಬಾರಿಸುವಾಗ, ಡಕ್ಕೆಯ ಧ್ವನಿ ಕೇಳಿ ನಿದ್ರೆ ಬಾರದಿರಲು ದೇವೇಂದ್ರನ ಬಳಿಗೆ ಹೋಗುತ್ತಾಳೆ. ದೇವೇಂದ್ರ ಇವಳನ್ನು ಗಮನಿಸದೇ ಇರುವಾಗ ಕೋಪಗೊಂಡು ನಂದಿಬಟ್ಟಲು ಹೂವು ಕೊಯ್ದು, ಮಾಲೆ ಧರಿಸಿದಾಗ, ದೇವೇಂದ್ರನ ಪೀಠ ತಲೆ ಕೆಳಗಾಯಿತು. ಆಗ ದೇವೇಂದ್ರ ದೇವ ಪೀಠ ತಂದುಕೊಟ್ಟು, ದೇವಾಭರಣವನ್ನು ಹೆಣ್ಣಾನೆಯನ್ನು ಕೊಡುತ್ತಾನೆ. ಅವಳು ಗಂಡು ಯಕ್ಷನ ಕೈ ಹಿಡಿದುಕೊಂಡು ಭೂಲೋಕಕ್ಕೆ ತೆರಳಿ ಅಶ್ವಥ ಮರದಡಿಯಲ್ಲಿ ಉಯ್ಯಾಲೆಯಾಡುತ್ತಾಳೆ. ಮುಂದೆ ಅವಳು ನಾಗಮಂಡಲ ನಡೆಯುವ ಸ್ಥಳಕ್ಕೆ ಬರುತ್ತಾಳೆ ಎಂಬ ನಂಬಿಕೆಯಿದೆ"[೩೧].

ನಾಗನಿಗೆ ಸಂಬಂಧಿಸಿದ ಸೇವಾ ಪ್ರಕಾರಗಳು

ಕ್ಷೇತ್ರ ಕಾರ್ಯದ ಸಂದರ್ಭದಲ್ಲಿ ಮರಾಟಿ ಮತ್ತು ಮರಾಟಿ ನಾಯ್ಕರು ತಮ್ಮದೇಯಾದ ತಮ್ಮ ಮೂಲ ಕುಟುಂಬದ ನಾಗಬ್ರಹ್ಮ ಸ್ಥಾನದಲ್ಲಿ ನಾಗನನ್ನು ವಿವಿಧ ಪ್ರಕಾರದಲ್ಲಿ ಪೂಜೆ ಮಾಡುವುದಲ್ಲದೆ ತಾವು ವಾಸವಿರುವ ಪ್ರದೇಶದ ಇತರ ಜಾತಿಯವರು ಆರಾಧಿಸುತ್ತಿರುವ ನಾಗನಿಗೆ ಹರಕೆ ರೂಪದಲ್ಲಿ ತನು – ತಂಬಿಲ ಅರ್ಪಣೆ, ನಾಗಮಂಡಲ, ಆಶ್ಲೇಷ ಬಲಿ, ಸರ್ಪ ಸಂಸ್ಕಾರಕ್ಕೆ ಶಕ್ತ್ಯಾನುಸಾರವಾಗಿ ವಸ್ತು ಅಥವಾ ಧನ ರೂಪದಲ್ಲಿ ಸಹಾಯ ಮಾಡಿ ನಾಗಾರಾಧನೆಗೆ ನಡೆದುಕೊಳ್ಳುತ್ತಿರುವುದು ಕಂಡು ಬಂದಿರುತ್ತದೆ.

ಮರಾಟಿ ಮತ್ತು ಮರಾಟಿ ನಾಯ್ಕರು ತಮ್ಮದೇ ಆದ ರೀತಿಯಲ್ಲಿ ತಮ್ಮ ಶಕ್ತ್ಯಾನುಸಾರವಾಗಿ ನಾಗಾರಾಧನೆ ನಡೆಸಿಕೊಂಡು ಬರುತ್ತಾರೆ. ನಾಗನಿಗೆ ಪ್ರತ್ಯೇಕವಾದ ಆರೂಢವನ್ನು ರಚಿಸಿ, ಅವುಗಳಲ್ಲಿ ರಕ್ತೇಶ್ವರಿ, ನಂದಿಗೋಣ, ಯಕ್ಷ / ಯಕ್ಷಿ ಮತ್ತಿತ್ತರ ಪರಿವಾರ ದೈವಗಳನ್ನು ಸ್ಥಾಪಿಸಿರುವುದು ಕ್ಷೇತ್ರಕಾರ್ಯದಲ್ಲಿ ಅವಲೋಕಿಸಲಾಗಿದೆ. ಮರಾಟಿಗರ ನಾಗಬ್ರಹ್ಮ ಸ್ಥಾನ (ನಾಗನ ಆರೂಡ) ದಲ್ಲಿ ಜರಗುವ ಸೇವೆ ಹಾಗೂ ಆರಾಧನೆಗಳು ೧. ತಂಬಿಲ ಅಥವಾ ತನು ಹಾಕುವುದು ೨. ಆಶ್ಲೇಷ ಬಲಿ ೩. ಸರ್ಪ ಸಂಸ್ಕಾರ ೪. ನಾಗ ದರ್ಶನ ೫. ನಾಗ ಪ್ರತಿಷ್ಠೆ

ತನು ಹಾಕುವುದು: ಮರಾಟಿ ಮತ್ತು ಮರಾಟಿ ನಾಯ್ಕ ಈ ಎರಡು ಸಮುದಾಯದವರು ಬ್ರಾಹ್ಮಣ ಅರ್ಚಕರ ಮೂಲಕ ನಾಗನಿಗೆ ನಾಗ ತಂಬಿಲ ಅಥವಾ ತನು ಹಾಕುವುದು ಅಥವಾ ಹಾಲಿಟ್ಟು ಸೇವೆ ಮಾಡುತ್ತಾರೆ. ನಾಗರ ಪಂಚಮಿ ಅಥವಾ ಪ್ರತಿ ತಿಂಗಳಲ್ಲಿ ಬರುವ ಪಂಚಮಿಯ ದಿನದಂದು

ನಾಗಬನಗಳಲ್ಲಿ ನಾಗನಿಗೆ ಹಾಲೆರುವುದು ಕಂಡುಬರುತ್ತದೆ. ಇದಕ್ಕೆ 'ತನು' ಹಾಕುವುದು ಎಂದು ಕರೆಯಲಾಗುವುದು.

ಆಶ್ಲೇಷ ಬಲಿ: ಗ್ರಹಚಾರ ದೋಷ ನಿವಾರಣಾರ್ಥ, ಸಂತಾನ ಪ್ರಾಪ್ತಿಗಾಗಿ, ಚರ್ಮವ್ಯಾಧಿ ಪರಿಹಾರಕ್ಕಾಗಿ ಹಾಗೂ ನಾಗ ಪ್ರೀತ್ಯರ್ಥವಾಗಿ ಆಶ್ಲೇಷ ಬಲಿ ನಡೆಸುವರು. ಪ್ರತಿ ತಿಂಗಳ ಆಶ್ಲೇಷ ನಕ್ಷತ್ರವು ನಾಗನಿಗೆ ಸಂಬಂಧಿಸಿದುದೆಂದು ನಂಬಲಾಗಿದೆ. ಆ ನಕ್ಷತ್ರದಂದು ವಿಶೇಷವಾಗಿರುವ ನಾಗ ಸಂತತಿಯನ್ನು ಕರೆದು ಬಲಿ ಪ್ರದಾನ ಮಾಡಿ ಪೂಜಿಸುವುದಕ್ಕೆ 'ಆಶ್ಲೇಷ ಬಲಿ' ಎಂದು ಹೆಸರು.

"ಆಶ್ಲೇಷ ನಕ್ಷತ್ರದ ದಿನ ಹಗಲು ಅಥವಾ ರಾತ್ರಿ ಶುದ್ಧಿಕರಿಸಿದ ನಿರ್ದಿಷ್ಟ ಸ್ಥಳದಲ್ಲಿ ಅಥವಾ ನಿಗದಿಪಡಿಸಿದ ದೇವಸ್ಥಾನಗಳಲ್ಲಿ ಪಂಚವರ್ಣದ ಹುಡಿಗಳಿಂದ ಕಲಾತ್ಮಕವಾದ ಮಂಡಲ ಬರೆಯುತ್ತಾರೆ. ಸುರುಳಿ ಹಾಕಿ ಕುಳಿತ ಹೆಡೆಬಿಚ್ಚಿದ ನಾಗನನ್ನು ಈ ಮಂಡಲ ಹೋಲುತ್ತದೆ. ವೈದಿಕ ವಿಧಿಯಂತೆ ಪೂಜೆ ನಡೆದು ಈ ಮಂಡಲದೊಳಗೆ ಎಪ್ಪತ್ತಾರು ಪಿಂಡ (ಅನ್ನದ ಉಂಡೆ) ಹಾಗೂ ಅದರ ಮೇಲೆ ತಲಾ ಒಂದೊಂದು, ಅಕ್ಕಿಯಿಂದ ಮಾಡಿದ ಭಕ್ಷವಾದ ಅನ್ನವನ್ನಿರಿಸಿ ಅದರ ಮೇಲೆ ಹಣತೆಗೆ ಸೋಡರನ್ನು (ದೀಪ) ಬೆಳಗಿಸುತ್ತಾರೆ. ಹೀಗೆ ಮಂಡಲ ರಚಿಸಿ ನಾಗನನ್ನು ತೃಪ್ತಿಗೊಳಿಸುವ ಈ ಆಚರಣೆಯನ್ನು ಭಕ್ತರು ಹನ್ನೆರಡು ಬಾರಿ ಸತತವಾಗಿ ನಡೆಸಿ ಹದಿಮೂರನೆ ಬಾರಿ 'ಉದ್ಯಾಪನೆ'ಯ ಮೂಲಕ ಮುಕ್ತಾಯಗೊಳಿಸಲಾಗುತ್ತದೆ. ಆಚರಣೆಯ ವೇಳೆ ಕೊನೆಯಲ್ಲಿ ನಾಗದರ್ಶನವಾಗುತ್ತದೆ"[೨]. ಈ ಆಚರಣೆಯು ಆಧುನಿಕ ಸಮಾಜದಲ್ಲಿ ಪರಿಣಾಮಕಾರಿ ಪ್ರಭಾವವನ್ನು ಬೀರಿದೆ. ಇದೊಂದು ಮೂಢನಂಬಿಕೆಯಾಗಿದ್ದರೂ ಜನ ಸಾಮಾನ್ಯರ ನಂಬಿಕೆಯ ದೃಷ್ಟಿಯಿಂದ ಮಹತ್ವವನ್ನು ಅಲ್ಲಗಳೆಯುವಂತಿಲ್ಲ.

ಸರ್ಪ ಸಂಸ್ಕಾರ: ವ್ಯಕ್ತಿಯೊಬ್ಬನ ಜೀವನದಲ್ಲಿ ಆತನ ಪೂರ್ವಜರು ನಾಗನನ್ನೋ, ನಾಗನ ಮೊಟ್ಟೆಯನ್ನು ನಾಶ ಮಾಡಿದರೆ ನಾಗದೋಷವಾಗಿ ಆತನನ್ನು ಹಿಂಬಾಲಿಸುತ್ತದೆ ಎಂಬ ನಂಬಿಕೆ ಕರಾವಳಿ ಪ್ರದೇಶದ ಜನತೆಯಲ್ಲಿದೆ. ಈ ದೋಷ ನಿವಾರಣೆಗಾಗಿ ಸರ್ಪ ಸಂಸ್ಕಾರ, ನಾಗಪ್ರತಿಷ್ಠೆ, ಆಶ್ಲೇಷಬಲಿ ಇತ್ಯಾದಿಗಳನ್ನು ನೆರವೇರಿಸುತ್ತಾರೆ. ಹಾಗೆಯೇ ಆಕಸ್ಮಿಕವಾಗಿ ಸರ್ಪದ ಶವವನ್ನು ಕಂಡರೆ ಅದಕ್ಕೆ ಸರ್ಪ ಸಂಸ್ಕಾರ ಮಾಡದೇ ಇರಬಾರದು ಎಂಬ ನಂಬಿಕೆಯಿದೆ. ಅಂತ್ಯ ಸಂಸ್ಕಾರ ಮಾತ್ರವಲ್ಲ. ಬ್ರಾಹ್ಮಣರ ಮೂಲಕ ವಿಧಿಯುಕ್ತ ಉತ್ತರ-ಕ್ರಿಯೆಯನ್ನು ಮಾಡಬೇಕು ಎಂಬ ನಿಯಮ ಜನಪದರಲ್ಲಿದೆ.

ಹಿಟ್ಟಿನಿಂದ ಎರಡು ಸರ್ಪಾಕೃತಿಗಳನ್ನು ಮಾಡಿ ಅವುಗಳಲ್ಲಿ ಒಂದು ಮೃತವಾಯಿತೆಂದು ಭಾವಿಸಿ ಅದನ್ನು ವಿಧಿಯಂತೆ ಸುಟ್ಟು ಅಪರ ಕರ್ಮ ಮಾಡುವುದು. ಮತ್ತೊಂದನ್ನು ಹುತ್ತದ ಸಮೀಪ ಬಿಡುವುದು. ಬ್ರಹ್ಮಚಾರಿಗಳನ್ನು ಆಮಂತ್ರಿಸಿ ಅವರಿಗೆ ವಿವಿಧ ಸರ್ಪ ದೇವತೆಗಳನ್ನು ಆಹ್ವಾನಿಸಿ ಭೋಜನ ದಾನಾದಿಗಳಿಂದ ಅವರನ್ನು ತೃಪ್ತಿಪಡಿಸಿ ಆಶೀರ್ವಾದ ಪಡೆಯುವುದು ಸರ್ಪ ಸಂಸ್ಕಾರದ ಮುಖ್ಯ ಕ್ರಿಯೆಗಳು.

ನಾಗಪ್ರತಿಷ್ಠೆ: ವಿಷಯ ಸಂಖ್ಯೆಯ ಹೆಡೆಗಳಿಂದ ನಾಗನ ಅಥವಾ ನಾಗ ಯಕ್ಷ ಯಕ್ಷಿಯರ ಬಿಂಬಗಳನ್ನು ಶಿಲೆಯಲ್ಲಿ ರೂಪಿಸಿ ಅವುಗಳನ್ನು ನಾಗಬನದಲ್ಲಿ ಪ್ರತಿಷ್ಠಾಪನೆ ಮಾಡುತ್ತಾರೆ. ಪ್ರಾಚೀನ ಕಾಲದಲ್ಲಿ ನಿರ್ದಿಷ್ಟ ಮರಗಳ ಬುಡದಲ್ಲಿ ನಾಗನ ಕಲ್ಲುಗಳನ್ನಿರಿಸಿ ಪೂಜಿಸುತ್ತಿದ್ದರು. ಸುತ್ತಲು ಮರಗಿಡಗಳು ದಟ್ಟವಾಗಿ ಬೆಳೆದಿರುತ್ತಿದ್ದವು. ಈ ನಾಗಬನದ ಸ್ವರೂಪಗಳು ಇತ್ತೀಚಿನ ವರ್ಷಗಳಲ್ಲಿ ವ್ಯತ್ಯಾಸವಾಗುತ್ತಾ 'ಚಿತ್ರಕೂಟ' ರಚನೆಯೊಂದಿಗೆ ಕಾಂಕ್ರೀಟಿನ ನಾಗಾಲಯಗಳು ಹೆಚ್ಚಾಗಿ ಮೇಲೇಳ ತೊಡಗಿವೆ.

ನಾಗದರ್ಶನ: ನಾಗಬನ, ಚಿತ್ತೇರಿ, ಭಂಡಾರಮ್ಮನ ಸನ್ನಿಧಿ ಅಥವಾ ನಾಗನ ಚಿತ್ರಕೂಟದಲ್ಲಿ ಬ್ರಾಹ್ಮಣ ಪಾತ್ರಿಯ ಮೈಮೇಲೆ ನಾಗ ದೇವತೆಯನ್ನು ಅವ್ಹಾನಿಸಿಕೊಂಡು ಸರ್ಪದಂತೆ ಬುಸುಗುಡುತ್ತಾ ನಾಗನ ಚಲನೆಯನ್ನು ಅನುಕರಿಸುತ್ತಾ ವಿಶಿಷ್ಟವಾಗಿ ಪಾತ್ರಿ ಕಂಪಿಸುತ್ತದೆ. ತನ್ನ ಕೈಯಲ್ಲಿರುವ ಹಿಂಗಾರವನ್ನು ಆಗಾಗ ಮುಖಕ್ಕೆ ಉಜ್ಜಿಕೊಳ್ಳುತ್ತಾನೆ. ಸಂಬಂಧಿತ ಭಕ್ತರು ತಮ್ಮ ಸಮಸ್ಯೆಗಳನ್ನು ನಾಗನಲ್ಲಿ ಅರಿಕೆ ಮಾಡಿಕೊಂಡು, ನಾಗಪಾತ್ರಿಯ ಮುಖದಿಂದ ಪರಿಹಾರದ ಮಾತನ್ನು, ಆತನ ಕೈಯಿಂದ ಹಿಂಗಾರ ಮತ್ತು ಅರಿಶಿಣ ಹುಡಿಯ ಪ್ರಸಾದವನ್ನು ಪಡೆಯುತ್ತಾರೆ.

೬.೭. ಮರಾಟಿ ಸಮುದಾಯಗಳ ನಾಗ ಸಂಬಂಧಿತ ನಂಬಿಕೆಗಳು

"ನಾಗಸಂಬಂಧಿಯಾದ ನಂಬಿಕೆ ನಡವಳಿಕೆಗಳು ಇಲ್ಲಿನ ಮರಾಟಿಗರ ಜನಜೀವನದಲ್ಲಿ ಅತ್ಯಂತ ಸಹಜವಾಗಿ ಸೇರಿಕೊಂಡಿವೆ. ನಾಗರಹಾವಿಗೆ ಒಂದು ಸಾವಿರ ವರ್ಷ ಆಯುಷ್ಯ ಇದೆಯೆಂದೂ, ಅದಕ್ಕೆ ಅತೀಂದ್ರಿಯ ಜ್ಞಾನ ಇರುವುದೆಂದೂ ಪ್ರತೀತಿ. ಏಳೂ ಕನ್ನಡಿ ಹಾವುಗಳನ್ನು, ಕಬಳಿಸಿ, ಹಾರುತ್ತ ಬಾಲ ಕರಗಿ ಕ್ರಮೇಣ ರೆಕ್ಕೆ, ಹುಟ್ಟಿ, 'ಕುತ್ತೊಡಿ' ಎನಿಸಿ ಹಾರುತ್ತದೆಂದೂ ಅದರ ನೆರಳು ಸೋಂಕಿದವರಿಗೆ ಪಕ್ಷವಾತವೂ ಅದರ ಬಾಯಿಂದ ಉಗುಳಿದ ಜೊಲ್ಲು ನೊರೆಯನ್ನು ಮೆಟ್ಟಿದವರಿಗೆ 'ಕಾಲೊತ್ತು' ಎಂಬ ಪೀಡೆಯೂ ಉಂಟಾಗತ್ತದೆನ್ನುವುದು ಜನಪದರ ನಂಬಿಕೆ"[೩೩]."ನಾಗರಹಾವನ್ನೋ ಅದರ ಮೊಟ್ಟೆ, ವಾಸಸ್ಥಳ, ಬೀದಿ ಇತ್ಯಾದಿಗಳನ್ನು ಮೂತಿಸಿದವರಿಗೆ ದೃಷ್ಟಿದೋಷ, ಕುಷ್ಠರೋಗ, ಸಂತಾನಕ್ಷಯಾದಿ ದೋಷ ತಟ್ಟುವುದೆಂಬ ನಂಬಿಕೆಯಿದೆ"[೩೪]. 'ಸರ್ಪಮತ್ಸರ' ಎಂಬುದು ಪ್ರಸಿದ್ಧಆಗಿದೆ. ಸಾಮಾನ್ಯವಾಗಿ ತಿಳಿದು ತಿಳಿದೂ ಯಾರೂ ನಾಗರಹಾವನ್ನು ಹಿಂಸಿಸುವುದಿಲ್ಲ. ಅದರ ಸಾನ್ನಿಧ್ಯ ಇರುವ ಸ್ಥಳದಲ್ಲಿ ಅಶುದ್ಧಿ ಮಾಡಲು ಅಂಜುತ್ತಾರೆ. ಅಶುದ್ಧಿಯಾದರೆ ಸರ್ಪ ಕಾಣಿಸಿಕೊಳ್ಳುವುದೆನ್ನುತ್ತಾರೆ. ನಾಗ ಪಾವಿತ್ರ್ಯದ ಸಂಕೇತವೆನಿಸಿದೆ.

"ಸರ್ಪವೊಂದು ಸತ್ತುದನ್ನು ಕಂಡರೆ, ಅದನ್ನು ಸಂಸ್ಕಾರ ಮಾಡದೆ ಹೋಗಬಾರದೆಂದು ನಂಬಿಕೆ. ಸತ್ತ ಹಾವಿನ ಬಾಯಲ್ಲಿ ನಾಣ್ಯವನ್ನು ಇಟ್ಟು ಬಿಳಿಬಟ್ಟೆ ಹೊದಿಸಿ ದಹನ ಸಂಸ್ಕಾರ ನಡೆಸುತ್ತಾರೆ. ಆ ಬಳಿಕ ವ್ರತಸ್ಥರಾಗಿ ಉತ್ತರಕ್ರಿಯೆ ಜರಗಿಸಿ ಬ್ರಾಹ್ಮಣ ಸಂತರ್ಪಣೆ ನಡೆಯಿಸುವ ರೂಢಿಯಿದೆ"[೩೫].

ನಾಗನಿಗೆ ಅಪಚಾರವಾಗಿದೆಯೆಂದೂ, ಆ ಬಗ್ಗೆ ಸೂಕ್ತವಾಗಿ ನಡೆದುಕೊಳ್ಳತಕ್ಕದ್ದೆಂದೂ ಸೂಚನೆಯಾಗಿ ಅಥವಾ ವಾಸ್ತವಿಕವಾಗಿ ನಾಗದರ್ಶನ, ಬಾವಿಯ ನೀರು ಹಳದಿಯಾಗುವುದು, ಮೈಮೇಲೆ ಬಿಳಿಯ ಕಲೆ ಬೀಳುವಿಕೆ, ಮರ, ಗಿಡ, ತರಕಾರಿಗಳಲ್ಲಿ ನಾಗನ ಆಕೃತಿ ಕಾಣಿಸಿಕೊಳ್ಳುವುದು ಇತ್ಯಾದಿ ಸಂಭವಿಸುವುದುಂಟೆಂದು ನಂಬಲಾಗಿದೆ. ಪರಿಹಾರವಾಗಿ ನಾಗಕ್ಷೇತ್ರಗಳಲ್ಲಿ ಸೇವೆ ಸಲ್ಲಿಸುವುದು ಸಾಮಾನ್ಯ. ನಾಗನ ಪ್ರತಿಷ್ಠೆ, ಆಶ್ಲೇಷಬಲಿ, ನಾಗದರ್ಶನ, ದಕ್ಕೆಬಲಿ, ನಾಗಮಂಡಲ, ತಂಬಿಲ ಇತ್ಯಾದಿಗಳಿಂದ ನಾಗನನ್ನು ಪ್ರಸನ್ನೀಕರಿಸುತ್ತಾರೆ.

ಮರಾಟಿ ಸಮುದಾಯಗಳ ನಾಗ ಬ್ರಹ್ಮಸ್ಥಾನ, ನಾಗನ ಆರೂಢ ಅಥವಾ 'ಆಲಡೆ', 'ಬ್ರಹ್ಮಸ್ಥಾನ' ಅಥವಾ "ಚಿತ್ತೇರಿ"[೩೬] ಎಂದು ಕರೆಯಲ್ಪಡುವ ವಿಶಿಷ್ಟ ಆರಾಧನಾ ಸ್ಥಳಗಳಲ್ಲಿ ಮುಖ್ಯವಾಗಿ ನಾಗ, ಬ್ರಹ್ಮ, ನಂದಿ (ನಂದಿಗೋಣ) ರಕ್ತೇಶ್ವರಿ ಹಾಗೂ ಕ್ಷೇತ್ರಪಾಲ ಎಂಬ ಶಕ್ತಿಗಳನ್ನು ಸಮಷ್ಟಿಯಾಗಿ ಪೂಜಿಸುವ ಸಂಪ್ರದಾಯವಿದೆ. (ನಂದಿಗೋಣನನ್ನು ಮೈಸಂದಾಯನೆಂದೂ, ರಕ್ತೇಶ್ವರಿಯನ್ನು ಲೆಕ್ಕೇರಿಸಿ ಎಂದೂ, ಕ್ಷೇತ್ರಪಾಲನನ್ನು ಗುಳಿಗನೆಂದೂ ಹೇಳುವುದುಂಟು) ಇವಲ್ಲದೆ ಬೇರೆಯೂ ಕೆಲವು ದೈವಗಳು ಆಲಡೆಯ ಸಂಕೀರ್ಣದಲ್ಲಿರಬಹುದು. ಆದರೆ ನಾಗನ ಉಪಸ್ಥಿತಿಯಂತೂ ಅನಿವಾರ್ಯ. ಗುಳಿಗದೈವದ

ಬನದಲ್ಲೂ ನಾಗನಿಗೆ ಎಡೆಯಿದೆ. ಗುಳಿಗನ ವಾಹನವೂ ನಾಗ ಎನ್ನಲಾಗಿದೆ. ಅಷ್ಟನಾಗರಾಜರಲ್ಲಿ ಒಬ್ಬನ ಹೆಸರು "ಕುಳಿಕ"[೩೭] ಎಂದಾಗಿದೆ.

ಆಲಡೆ ಹಾಗೂ ನಾಗಾಲಯಗಳು ಹಿಂದೆ ವನಪ್ರದೇಶದಲ್ಲಿದ್ದ ಪೂಜಾ ಸ್ಥಾನಗಳೆನ್ನಬಹುದು. ನಾಗನಿಗಂತೂ ಸಸ್ಯಶ್ಯಾಮಲವಾದ ತಂಪಾದ ತಾಣವೇ ಇಷ್ಟಕರ. ತುಳುನಾಡಿನ ನಾಗಸಂಬಂಧಿ ದೇಗುಲಗಳು ಇರುವ ಪ್ರದೇಶಗಳನ್ನು ಗಮನಿಸಿದರೆ, ಸುತ್ತಲಿನ ಸ್ಥಳಕ್ಕಿಂತ ತಗ್ಗಿನ ತಂಪು ತಾವಿನಲ್ಲೆ ಆ ದೇಗುಲಗಳು ರೂಪುಗೊಂಡಿರುವುದು ತಿಳಿದುಬರುತ್ತದೆ. (ಉದಾ: ಸುಬ್ರಹ್ಮಣ್ಯ, ಕುಡುಪು, ಮಂಜೇಶ್ವರ) ಒಂದು ಕಾಲದಲ್ಲಿ ಈ ದೇವಸ್ಥಾನಗಳಿದ್ದ ಸ್ಥಾನದಲ್ಲಿ ಮರಗಿಡ ಬಳ್ಳಿಗಳಿಂದ ನಿಬಿಡವಾದ ನಾಗವನ ಅಥವಾ ಹಿರಿಯ ಹುತ್ತಗಳು ಇದ್ದಿರಬಹುದು. ಈಗಲೂ ಕೆಲವು ದೇವಸ್ಥಾನಗಳ ಗರ್ಭಗುಡಿಯೊಳಗೆ ಹುತ್ತ ಮಾತ್ರವೇ ಇದ್ದು, ಅದು ನಾಗದೇವತೆಯನ್ನು ಪ್ರತಿನಿಧಿಸುವುದನ್ನು ಕಾಣಬಹುದು. ಸುಬ್ರಹ್ಮಣ್ಯದ ಮೂಲಸ್ಥಾನದಲ್ಲಿ ಹುತ್ತವೇ ಇದ್ದು, ಅದರ ಮೃತ್ತಿಕೆಯನ್ನೇ ಪ್ರಸಾದವಾಗಿ ಕೊಡುವ ಸಂಪ್ರದಾಯವಿದೆ. ಬಳ್ಳಮಂಜ ಮೊದಲಾದ ಸ್ಥಳಗಳಲ್ಲಿ ಇದೇ ರೀತಿಯ ಹುತ್ತವಿದೆ. ಬ್ರಹ್ಮಲಿಂಗೇಶ್ವರನನ್ನು ಹುತ್ತದ ರೂಪದಲ್ಲಿ ಆರಾಧಿಸುವುದುಂಟು. ಕುಂದಾಪುರ ಪ್ರದೇಶದ ಕೆಲವು ಮುಖ್ಯ ಮನೆತನದ ಮನೆಗಳ ಪಕ್ಕದಲ್ಲಿ 'ಸ್ವಾಮಿಮನೆ' ಎಂದು ಕರೆಯಲ್ಪಡುವ ಚಿಕ್ಕಗುಡಿಗಳಲ್ಲಿ ದೊಡ್ಡ ಹುತ್ತಗಳೇ ಬೆಳೆದುನಿಂತಿರುತ್ತವೆ. ಹುತ್ತದ ಆರಾಧನೆಯು ಭೂಮಿಯ ಅಥವಾ ಮಾತೃದೇವತೆಯ ಆರಾಧನೆಯ ಒಂದು ರೂಪವೂ ಆಗಬಲ್ಲದು. ಹುತ್ತದ ಅಥವಾ ಭೂಮಿಯ ಮಗುವಾಗಿ ನಾಗನಿಗೆ ಪೂಜೆ ಸಲ್ಲುತ್ತದೆ.

ದಕ್ಷಿಣ ಕನ್ನಡದ ಕೆಲವು ಶಕ್ತಿ ಕ್ಷೇತ್ರಗಳಲ್ಲಿ ನಾಗ ಮತ್ತು ದುರ್ಗಾ ಅಭೇದ್ಯವಾಗಿ ಆರಾಧನೆ ಹೊಂದುವ ಕುತೂಹಲಕರ ವಿಚಾರವನ್ನು ಗಮನಿಸಬಹುದು. ಉಡುಪಿ ಜಿಲ್ಲೆಯ ಕುಂದಾಪುರ ತಾಲೂಕಿನ ಬಸರೂರಿನ ದುರ್ಗಾಲಯ, ನೀಲಾವರದ ದುರ್ಗಾಭಗವತೀ ದೇವಾಲಯ (ಇಲ್ಲಿ ದೊಡ್ಡ ಬನ ಇದೆ) ಮಂದರ್ತಿ ಕ್ಷೇತ್ರ ಇತ್ಯಾದಿ ಕಡೆಈ ಸಾಮರಸ್ಯವನ್ನು ಕಾಣಬಹುದು. ಶಾಂತಾದುರ್ಗ ಎಂಬ ಹೆಸರಲ್ಲಿ (ಗೋವಾದಲ್ಲಿ 'ಸಾಂತೇರಿ' ಎನ್ನುತ್ತಾರೆ) ಹುತ್ತವನ್ನು ಪೂಜಿಸಲಾಗುತ್ತದೆ. 'ನಾಗಬ್ರಹ್ಮಲಿಂಗೇಶ್ವರ' ಎಂಬುದರಲ್ಲಿ ನಾಗ, ಬ್ರಹ್ಮ ಮತ್ತು ಶಿವ ಎಂಬ ಮೂರು ಶಕ್ತಿಗಳ ಬೆಸುಗೆಯನ್ನು ಕಾಣಬಹುದು. ಹೆಬ್ರಿಯ ಒಂದು ಬ್ರಹ್ಮಸ್ಥಾನದಲ್ಲಿ ಗಣೇಶನೂ ಇದ್ದಾನೆ. ಒಟ್ಟಿನಲ್ಲಿ ಎಲ್ಲ ದೇವತೆಗಳೊಂದಿಗೂ ಮತಪ್ರಸ್ಥಾನಗಳೊಂದಿಗೂ ನಾಗನಿಗೆ ಹಿತಸಂಬಂಧವಿದೆಯೆಂಬುದನ್ನು ಕಂಡುಕೊಳ್ಳಬಹುದು.

ಉಡುಪಿ ಜಿಲ್ಲೆಯ ಕಾಳಾವರ ಎಂಬ ಪ್ರಸಿದ್ಧ ನಾಗಕ್ಷೇತ್ರದಲ್ಲಿ ಷಷ್ಠಿ ಹಬ್ಬದ (ಸಾಮಾನ್ಯವಾಗಿ ಷಷ್ಠಿಯೆಂದು ಎಲ್ಲ ನಾಗಕ್ಷೇತ್ರಗಳಲ್ಲೂ ಉತ್ಸವ ಜರುಗುತ್ತದೆ) ಮರುದಿನ ಬೆಳಗ್ಗೆ ನಾಗಮಂಡಲ ನಡೆಯುವುದು ವಾಡಿಕೆ. ಈ ಕ್ಷೇತ್ರದಲ್ಲಿ ಸುಬ್ರಹ್ಮಣ್ಯ ಕಾಳಿಂಗಸರ್ಪದ ರೂಪದಲ್ಲಿ ಹಿಂದೆ ಮೈದೋರಿದ್ದನಂತೆ. ಆ ಸರ್ಪ ಹರಿದು ಬಂದಿತೆಂದು ಹೇಳಲಾಗುವ ಅಂಕುಡೊಂಕಾದ ದಾರಿಯಲ್ಲಿ ತೋಡಿದರೆ ನೀರು ಬಹಳ ಮೇಲೆಯೇ ಸಿಗುತ್ತದಂತೆ (ನಾಗನಿಗೂ ನೀರಿಗೂ ಬಲು ನಂಟು. ಭೂಮಿಯ ಅಡಿಯ ನೀರಿನ ನಾಗಸಂಚಾರದ ಹಾದಿಯಲ್ಲಿ 'ನಾಗಬೀದಿ' ಎನ್ನುತ್ತಾರೆ. ಹುತ್ತ ಇದ್ದಲ್ಲಿ ನೀರಿನ ಸಾನಿಧ್ಯ ಇದೆ ಎಂದು ಊಹಿಸುತ್ತಾರೆ.)

ಇದನ್ನು 'ಕಾಳಿಂಗತೀರ್ಥ' ಎನ್ನುತ್ತಾರೆ. ಈ ಕ್ಷೇತ್ರದ ಕೆರೆಯಲ್ಲಿ ಮಿಂದು ಉರುಳುತ್ತಾ ದೇವಸ್ಥಾನಕ್ಕೆ ಪ್ರದಕ್ಷಿಣೆ ಕೆಲವರು 'ಉರುಳು ಸೇವೆ'ಯನ್ನು ಕೈಕೊಳ್ಳುತ್ತಾರೆ. ಮಣ್ಣಿನ ಐದು ಹೆಡೆಗಳ ಆಕಾರಗಳಿರುವ

ಕಲಶದಲ್ಲಿ ಅಕ್ಕಿ, ಕಾಯಿ, ಹೂ ಹಣ್ಣುಗಳ ಹರಕೆ ಹೊರುವ ಪರಿಪಾಠ ಈ ಕ್ಷೇತ್ರದಲ್ಲಿದೆ. ಸಂತಾನಪ್ರಾಪ್ತಿ ಹಾಗೂ ಕುಷ್ಠರೋಗ, ಚರ್ಮರೋಗಗಳ ನಿವಾರಣೆಯ ಉದ್ದೇಶದಿಂದ ಮಡೆಸ್ನಾನವನ್ನು ಭಕ್ತಾದಿಗಳು ನಡೆಸುವರು.

೬.೮. ಗೊಂದೋಳು ಪೂಜೆ

ಗೊಂದೋಳು ಪೂಜೆಯು ಮಾತೃದೇವತೆಯ ಉಪಾಸನೆಯ ಒಂದು ಆಚರಣೆಯಾಗಿದೆ. ದೈವೀಕತೆಗೆ ಬದ್ಧವಾದ ವಿಶಿಷ್ಟ ಆರಾಧನೆ. ಧಾರ್ಮಿಕ, ಸಾಂಸ್ಕೃತಿಕ ಹಾಗೂ ಜಾನಪದೀಯ ಸಂಪ್ರದಾಯಗಳಲ್ಲೊಂದಾದ ಗೊಂದೋಳು ಪೂಜೆಯು ಸಾಮೂಹಿಕ ವಿಧಿಕ್ರಿಯೆ ಮತ್ತು ಆರಾಧನೆಯಾಗಿರುತ್ತದೆ. ಅದೊಂದು ವಿಶಿಷ್ಟವಾದ ಅರ್ಥಪೂರ್ಣವಾದ ಮೂಲದಿಂದ ತನ್ನ ಹುಟ್ಟನ್ನು ಪಡೆದುಕೊಂಡಿದೆ. ಇದು ಮರಾಟಿ ಕುಲಧರ್ಮ ಪಾಲನೆಯ ಸಂಪ್ರದಾಯವಾಗಿರುತ್ತದೆ. ಮಹಾರಾಷ್ಟ್ರದ ತುಳಜಾ ಭವಾನಿಯ ಭಕ್ತರಾದವರು ತಮ್ಮ ಕಷ್ಟ ನಿವಾರಣೆಯ ಅಭಿಲಾಷೆಯ ಕುರುಹಾಗಿ ಹರಕೆಯ ರೂಪದಲ್ಲಿ ತಮ್ಮ ತಮ್ಮ ಮನೆಗಳಲ್ಲಿ ನಡೆಸುವ ಅಂಬಾ ಭವಾನಿಗೆ ವೈಯಕ್ತಿಕವಾಗಿ ಹಾಗೂ ಸಾಮೂಹಿಕವಾಗಿ ಮಂಡಲಾಕಾರದ ಬಲಿ ಸಹಿತವಾದ ಒಂದು ಆರಾಧನೆಯಾಗಿರುತ್ತದೆ.

ಉಡುಪಿ ಜಿಲ್ಲೆಯ ಮರಾಟಿ ನಾಯ್ಕರು ಮಾತೃದೇವತೆ ಹಾಗೂ ಶಕ್ತಿದೇವತೆಯ ಪ್ರತೀಕವಾಗಿರುವ ಅಂಬಾಭವಾನಿಯನ್ನು ವಿವಿಧ ಹೆಸರುಗಳಲ್ಲಿ ಆರಾಧಿಸುತ್ತಿರುವುದು ಕ್ಷೇತ್ರಕಾರ್ಯ ಸಂದರ್ಭದಲ್ಲಿ ಕಂಡುಬಂದಿದೆ. ಅಂಬಾ, ಮಮ್ಮಾಯಿ, ದುರ್ಗಾಂಬ, ಅಂಬಾಭವಾನಿ, ಮಹಮ್ಮಾಯಿ, ತುಲಜಾಭವಾನಿ, ಸಿಂಹವಾಹಿನಿ, ದುರ್ಗಾಪರಮೇಶ್ವರಿ, ಶಾಂತಾದುರ್ಗೆ, ಅಮ್ನೋರು, ಮಹಿಷಮರ್ದಿನಿ, ದುರ್ಗಾದೇವಿ, ಲಕ್ಷ್ಮೀಅಂಬಾಭವಾನಿ ಮುಂತಾದ ಹೆಸರುಗಳಿಂದ ಆರಾಧಿಸುತ್ತಿದ್ದಾರೆ. ಅಲ್ಲದೆ ಉಡುಪಿ ಜಿಲ್ಲೆಯಾದ್ಯಂತ ಸುಮಾರು ನಲವತ್ತೆರಡು ಗದ್ದುಗೆ ದೇವಸ್ಥಾನಗಳಿವೆ. ಈ ಎಲ್ಲಾ ದೇವಸ್ಥಾನಗಳಲ್ಲಿ ಗೊಂದೋಳು ಪೂಜೆಯು ಪ್ರಮುಖ ಆಚರಣೆಗಳಲ್ಲಿ ಒಂದು. ಈ ಪೂಜೆಯನ್ನು ಅವರು ದೇವಿಪೂಜೆ, ದುರ್ಗಾಪೂಜೆ, ಅಮ್ನೋರುಪೂಜೆ, ಮಹಮ್ಮಾಯಿಪೂಜೆ, ಎಂಬ ಹೆಸರುಗಳಿಂದ ಕರೆಯುತ್ತಾರೆ. ಅಲ್ಲದೆ ಕುಂದಾಪುರ ತಾಲೂಕಿನ ಗ್ರಾಮಾಂತರ ಪ್ರದೇಶಗಳಲ್ಲಿ ಜಾತಿ ಮತ ಭೇದವಿಲ್ಲದೆ ಊರಿನ ಸಮಸ್ತ ಜನರು ಸೇರಿ 'ಮಾರಿಗೊಂದೋಲು' ಪೂಜೆಯನ್ನು ಆಚರಿಸುತ್ತಿರುವುದು ಕಂಡುಬರುತ್ತದೆ. ಅಲ್ಲದೆ ಕುಂದಾಪುರ ತಾಲೂಕಿನ ಬಸರೂರು ಮುಂತಾದ ಪ್ರದೇಶಗಳಲ್ಲಿ ಅರವತ್ತು ವರ್ಷಗಳಿಗೊಮ್ಮೆ ಆಚರಿಸುವ ಮಾರಿ ಪೂಜೆಯನ್ನು ಕೂಡಾ ಅನೇಕ ತಿಳುವಳಿಕೆದಾರರು ಮಾರಿ ಗೊಂದೋಲಿಗೆ ಸಮನಾಗಿರುವಂತದ್ದು ಎಂದು ತಿಳಿಸಿರುವರು.

ಗೊಂದೋಳು ಪೂಜೆಯ ಪೂರ್ವ ಭೈರವನ ಆರಾಧನೆ

ಮರಾಟಿಗರ ಆರಾಧ್ಯ ದೈವವಾದ ಅಂಬಾಭವಾನಿಯನ್ನು ಪೂಜಿಸುವ (ಅಂದರೆ ಗೊಂದೋಳು ಪೂಜೆಯ) ಮುಂಚೆ ದೇವಿಯ ಭಂಟನಾಗಿರುವ ಭೈರವನನ್ನು ಮೊದಲು ಅಸುರ ಕ್ರಿಯೆಯಿಂದ ಪೂಜಿಸುತ್ತಾರೆ. ಭೈರವನ ಪೂಜೆಗಾಗಿ ಬನದಲ್ಲಿ ಒಂದು ಕಲ್ಲನ್ನು ಸ್ಥಾಪಿಸುತ್ತಾರೆ. ಆ ಕಲ್ಲನ್ನು ಭೈರವನ ಕಲ್ಲು ಅಥವಾ ಭೂತದ ಕಲ್ಲು ಎಂದು ಕರೆಯುತ್ತಾರೆ. ಒಂದು ನಿರ್ದಿಷ್ಟವಾಗಿ ಗೊತ್ತುಪಡಿಸಿದ ದಿನದಂದು ಮನೆಯ ಯಜಮಾನ ಅಥವಾ ಪೂಜಾರಿ ಮಡಿಯಲ್ಲಿದ್ದು ಮಧ್ಯಾಹ್ನದ ಹೊತ್ತಿಗೆ ಭೈರವನ ಬನಕ್ಕೆ ಹೋಗಿ ಸ್ವಚ್ಛಗೊಳಿಸಿ ನಂತರ ಈಗಾಗಲೇ ಭೈರವನಿಗೆ ಈಡುಬಿಟ್ಟ ಕೋಳಿಗಳಿಗೆ ಅನ್ನ ಆಹಾರವನ್ನು ನೀಡಿ ತಾನು ಆಹಾರವನ್ನು ಸೇವಿಸುತ್ತಾನೆ. ಇದೇ ಸಂದರ್ಭದಲ್ಲಿ ಮನೆಯ

ಅಥವಾ ಕುಟುಂಬದ ಗಂಡಸರೆಲ್ಲರು, ಭೈರವನ ಪೂಜೆಗೆ ಬೇಕಾಗಿರುವ ಎಲ್ಲಾ ಸಾಮಾಗ್ರಿಗಳನ್ನು ಒಟ್ಟಿಗೆ ಸೇರಿಸಿ ಒಂದು ಬುಟ್ಟಿಯಲ್ಲಿ ಸಂಗ್ರಹಿಸಿಡುತ್ತಾರೆ. ಅಲ್ಲದೆ ಗಂಡಸರು ಪೂಜೆಗೆ ಬೇಕಾದ ಅಡುಗೆಯನ್ನು ತಯಾರಿಸುತ್ತಾರೆ. ಅನ್ನ, ಮೀನು ಸಾರು, ಅಕ್ಕಿರೊಟ್ಟಿ, ತೊರಕೆ ಮೀನು ಮತ್ತು ಹುರುಳಿ ಇವು ಭೈರವನಿಗೆ ಪ್ರಸಾದ ಮಾಡುವ ಆಹಾರಗಳು.

ಗೊಂದೋಳು ಪೂಜೆಯ ದಿನ ಸಾಯಂಕಾಲ ಸೂರ್ಯಾಸ್ತ ಆದ ಬಳಿಕ ಕುಟುಂಬದ ಗಂಡಸರು ಮತ್ತು ಆಮಂತ್ರಿತ ಅತಿಥಿಗಳಲ್ಲಿ ಗಂಡಸರು ಭಕ್ತಾದಿಗಳು ಭೈರವನ ಬನಕ್ಕೆ ಬರುತ್ತಾರೆ. ಈಗಾಗಲೇ ಸ್ಥಾಪಿತವಾದ ಕಲ್ಲಿನ ಮೇಲೆ ತಾವು ತಂದಿರುವ ಬೆಳ್ತಿಗೆ ಅಕ್ಕಿ ಮತ್ತು ತೆಂಗಿನಕಾಯಿಯನ್ನು ಇಟ್ಟು ಆರತಿ ಮಾಡಿ ಮೊದಲು ಪ್ರಾರ್ಥನೆ ಮಾಡುತ್ತಾರೆ. ನಂತರ ಕುಟುಂಬಸ್ಥರು ಹಾಗೂ ಭಕ್ತಾದಿಗಳು ಭಕ್ತಿ ಪೂರ್ವಕವಾಗಿ ತಂದಿರುವ ಅಗರಬತ್ತಿ, ತೆಂಗಿನಕಾಯಿ ಮತ್ತು ಶೇಂದಿ ಮತ್ತು ಮದ್ಯವನ್ನು ದೈವಕ್ಕೆ ಅರ್ಪಿಸುತ್ತಾರೆ. ಸಿದ್ಧಪಡಿಸಿರುವ ಅಕ್ಕಿಯ ರೊಟ್ಟಿ ಅನ್ನ, ಮೀನು ಪದಾರ್ಥ, ಮೀನು ಮತ್ತು ಹುರುಳಿ (ಕೆಲವು ಕಡೆಯಲ್ಲಿ ಬಲ್ಯಾರು ಮತ್ತು ಕಡ್ಲೆ) ಉಪಯೋಗಿಸುತ್ತಾರೆ. ಅವುಗಳನ್ನು ಕಲ್ಲಿನಲ್ಲಿಟ್ಟು ಪ್ರಾರ್ಥಿಸಿ ಈಡುಬಿಟ್ಟಿರುವ ಮತ್ತು ಹರಕೆಯ ರೂಪದಲ್ಲಿ ಅರ್ಪಿಸಲು ಉದ್ದೇಶಿಸಿರುವ ಕೋಳಿಗಳ ರಕ್ತ ತರ್ಪಣ ನೀಡಲಾಗುತ್ತದೆ. ನಂತರ ಎರಡನೆಯ ಪೂಜೆ ಮತ್ತು ಪ್ರಾರ್ಥನೆಯನ್ನು ನೆರವೇರಿಸುತ್ತಾರೆ. ಈ ಸಂದರ್ಭದಲ್ಲಿ ಒಂದು ಕ್ಷಣ ಎಲ್ಲರೂ ಮೌನವಾಗಿ ಬೇರೆ ಕಡೆ ತಮ್ಮ ಲಕ್ಷ್ಯವನ್ನು ಹರಿಸುವಂತೆ ಮಾಡುತ್ತಾರೆ. ಉದಾಹರಣೆ (ಅಗೋ ಅಗೋ ನೋಡಲ್ಲಿ ಆನೆಯನ್ನು ಇರುವೆ ಕೊಂಡು ಹೋಗುತ್ತಿರುವುದು) ಅಂತಿಮವಾಗಿ ಭೈರವನ ಪ್ರಸಾದ ರೂಪದಲ್ಲಿ ತೆಂಗಿನಕಾಯಿ ಒಡೆದು ಭಕ್ತರಿಗೆ ಭೈರವನ ಪ್ರಸಾದ ಹಂಚುತ್ತಾರೆ. ಕೊನೆಗೆ ಬನದ ಒಂದು ಮೂಲೆಯಲ್ಲಿ ಅಥವಾ ಹೊರಗೆ ತಂದಿರುವ ಹಾಗೂ ಸಮರ್ಪಿಸಿರುವ ಸಾರಾಯಿ, ಬೇಯಿಸಿದ ಮೀನು, ಕೋಳಿ ಮಾಂಸದಿಂದ ಕೂಡಿದ ಲಘುವಾದ ಭೋಜನ ಮಾಡುವುದರೊಂದಿಗೆ ಭೈರವನ ಪೂಜೆ ಮುಕ್ತಾಯವಾಗುತ್ತದೆ. ಹರಕೆಯ ಹೆಸರಿನಲ್ಲಿ ಭಕ್ತಾದಿಗಳು ತಂದಿರುವ ಹಾಗೂ ಬಲಿಕೊಟ್ಟು ಕೋಳಿಯನ್ನು ಅವರವರ ಮನೆಗೆ ತೆಗೆದುಕೊಂಡು ಹೋಗುತ್ತಾರೆ ಎಂಬುದು ಕ್ಷೇತ್ರಕಾರ್ಯ ಸಂದರ್ಭದಲ್ಲಿ ಕಂಡುಬಂದಿದೆ.

ಗೊಂದೋಳು ಪೂಜೆಯ ಪ್ರಕಾರಗಳು ಮತ್ತು ವಿಧಿ ವಿಧಾನಗಳು

ಮರಾಟಿ ನಾಯ್ಕರ ಆರಾಧ್ಯ ದೇವತೆ ಮಹಮ್ಮಾಯಿ ಇವರು ಕಷ್ಟಕಾಲದಲ್ಲಿ ಬೇರೆ ಯಾರಿಂದಲೂ ಯಾವುದರಿಂದಲೂ ಸಾಧ್ಯವಿಲ್ಲ ಎಂದಾಗ ಆದಿಶಕ್ತಿ ಮಹಮ್ಮಾಯಿಯನ್ನು ಪ್ರಾರ್ಥಿಸಿ ತಮ್ಮ ಕುಟುಂಬಕ್ಕೆ ಬಂದ ಸಮಸ್ಯೆಯನ್ನು ಬಗೆಹರಿಸಿ ತಮಗೆ ನೆಮ್ಮದಿಯ ಜೀವನವನ್ನೂ ಕರುಣಿಸಿದಲ್ಲಿ ದೇವಿಗೆ ಅಂಗಾರೆ ಪೂಜೆಯೋ ಅಥವಾ ಶುಕ್ರವಾರ ಪೂಜೆಯೋ ಗೊಂದೋಳು ಪೂಜೆಯನ್ನು ಮಾಡುತ್ತೇನೆಂದೂ ನೆನಪಿಸಿ ಹರಕೆಯ ರೂಪದಲ್ಲಿ ಒಂದು ಕುಡ್ತೆ ತೆಂಗಿನೆಣ್ಣೆಯನ್ನು ಅಥವಾ ಐದು ಕಾಲು ಅಥವಾ ನೂರಾ ಒಂದು ರೂಪಾಯಿಯನ್ನು ಈಡು ಕಟ್ಟಿಡುತ್ತಾರೆ. ಶ್ರದ್ಧಾ ಭಕ್ತಿಯಿಂದ ನಂಬಿದರೆ ದೇವಿ ನಮ್ಮ ಕಷ್ಟವನ್ನು ಪರಿಹರಿಸುತ್ತಾಳೆ ಎಂಬ ಬಲವಾದ ನಂಬಿಕೆ ಇವರಲ್ಲಿದೆ. ಮರಾಟಿಗರು ಹರಕೆ ಹೊತ್ತು ಪೂಜೆ ಮಾಡುವುದರ ಜೊತೆಗೆ ಭಕ್ತಿಯಿಂದ ತಮ್ಮ ಅನುಕೂಲಕ್ಕೆ ತಕ್ಕಂತೆ ಎರಡು ಅಥವಾ ನಾಲ್ಕು ವರ್ಷಕ್ಕೆ ಒಂದು ಅಂಗಾರೆ ಪೂಜೆಯನ್ನು ಅಥವಾ ಗೊಂದೋಳು ಪೂಜೆಯನ್ನು ಮಾಡಿ ಅನೇಕ ಕುಟುಂಬಗಳು ಉನ್ನತಿಯನ್ನು ಕಂಡಿರುತ್ತಾರೆ ಎಂಬುದಾಗಿ ಕ್ಷೇತ್ರಕಾರ್ಯ ಸಂದರ್ಭದಲ್ಲಿ ತಿಳುವಳಿಕೆದಾರರು ಹಾಗೂ ಭಕ್ತಾದಿಗಳು ತಿಳಿಸಿರುತ್ತಾರೆ. ಮರಾಟಿ ನಾಯ್ಕರು ಗೊಂದೋಳು ಪೂಜೆಯನ್ನು ಮೂರು ವಿಧಗಳಾಗಿ ಮಾಡುವುದನ್ನು ಕ್ಷೇತ್ರಕಾರ್ಯ ಸಂದರ್ಭದಲ್ಲಿ ಕಂಡುಕೊಳ್ಳಲಾಗಿದೆ.

೧. "ಅತ್ಯಂತ ಸಣ್ಣ ರೀತಿಯಲ್ಲಿ ಕಡಿಮೆ ಖರ್ಚಿನಲ್ಲಿ ಮನೆಯ ಒಳಗಡೆಯೇ ಪೂಜಾ ಕೋಣೆಗೆ ಸೀಮಿತಗೊಂಡಂತೆ ಅಂಗಾರೆ ಪೂಜೆಯನ್ನು ಕುಟುಂಬಸ್ಥರು ಬಂಧುಗಳನ್ನು ಸ್ವಲ್ಪ ಪ್ರಮಾಣದಲ್ಲಿ ಜನರನ್ನು ಸೇರಿಸಿ ಅದಕ್ಕೆ ತಕ್ಕಂತೆ ಪೂಜೆ ಮಾಡುತ್ತಾರೆ. ಇದಕ್ಕೆ ಬಲಿ ಕೊಡಲು ಒಂದು ಗಂಡು ಕೋಳಿ ಮತ್ತು ಹೆಣ್ಣು ಕೋಳಿಯನ್ನು ಮಾತ್ರ ಉಪಯೋಗಿಸುತ್ತಾರೆ.

೨. ಇನ್ನೊಂದು ವಿಧಾನ ಸ್ವಲ್ಪ ದೊಡ್ಡ ಮಟ್ಟದಲ್ಲಿ ಗೊಂದೋಳು ಪೂಜೆ ಆಚರಿಸುವುದು ಕಂಡು ಬಂದಿರುತ್ತದೆ. ಇದಕ್ಕೆ ನಾಲ್ಕು ಕೋಳಿಯನ್ನು ಬಲಿ ಕೊಡಲು ಉಪಯೋಗಿಸುತ್ತಾರೆ. ಇದರಲ್ಲಿ ಗೊಂದೋಳು ಕುಣಿತ ಅಂಗಳದಲ್ಲಿ ನಡೆಸುವವರು. ಇದನ್ನು ಇವರು ಕೋಳಿ ಗೊಂದೋಳು ಪೂಜೆ ಎಂದು ಕರೆಯುತ್ತಾರೆ.

೩. ಮೂರನೆಯದಾಗಿ ಗೊಂದೋಳು ಪೂಜೆಯನ್ನು ಸ್ವಲ್ಪ ದೊಡ್ಡ ಪ್ರಮಾಣದಲ್ಲಿ ಮಾಡುವುದು ಕಂಡು ಬಂದಿರುತ್ತದೆ. ಇದಕ್ಕೆ ಎರಡು ಹಂದಿ (ಒಂದು ಹಂದಿಯಲ್ಲೂ ಕೂಡ ಮಾಡುತ್ತಾರೆ) ಮತ್ತು ನಾಲ್ಕು ಕೋಳಿಗಳನ್ನು ಬಲಿಗಾಗಿ ಉಪಯೋಗಿಸುವರು. ಕೆಲವರು ವಾದ್ಯ, ಬ್ಯಾಂಡು, ಕೊಂಬು ವಾಲಗವನ್ನು ಉಪಯೋಗಿಸಿ ಮಾಡುವುದುಂಟು. ಇದಕ್ಕೆ ಅತೀ ಹೆಚ್ಚಿನ ಜನರನ್ನು ಆಮಂತ್ರಿಸುತ್ತಾರೆ. ಕೆಲವು ಕಡೆಯಲ್ಲಿ ಊರಿನ ಜನರನ್ನು ಕೂಡ ಸೇರಿಸಿ ಆಚರಿಸುತ್ತಾರೆ. ಈ ಮಾಹಿತಿಯನ್ನು ಕ್ಷೇತ್ರಕಾರ್ಯ ಸಂದರ್ಭದಲ್ಲಿ ತಿಳುವಳಿಕೆದಾರರು ನೀಡಿರುತ್ತಾರೆ".[೩೮]

ವೀಳ್ಯ ಕೊಡುವುದು ಮತ್ತು ಬಾಳೆಗೊನೆ ಕಡಿಯುವ ಆಚರಣೆ

ಸಾಮಾನ್ಯವಾಗಿ ಮಾತೃದೇವತಾರಾಧನೆಗಳು ಮಂಗಳವಾರ ಅಥವಾ ಶುಕ್ರವಾರ ಹೆಚ್ಚಾಗಿ ನಡೆಯುವುದು ಕರಾವಳಿ ಕರ್ನಾಟಕದಲ್ಲಿ ಕಂಡುಬರುತ್ತದೆ. ಮರಾಟಿಗರು ಆಚರಿಸುತ್ತಿರುವ ಗೊಂದೋಳು ಪೂಜೆಯು ಕೂಡಾ ಮಂಗಳವಾರ ಅಥವಾ ಶುಕ್ರವಾರ ನಡೆಯುತ್ತದೆ. ಜನರ ನಂಬಿಕೆಯಂತೆ ಈ ಎರಡೂ ದಿನಗಳೂ ಕೂಡಾ ಕಡುದಿನಗಳು ಆಗಿರುತ್ತವೆ. ಮನೆಯ ಯಜಮಾನ ಗೊಂದೋಳು ಪೂಜೆಯ ಪ್ರಧಾನ ಪೂಜಾರಿ, ದರ್ಶನ ಪಾತ್ರಿ ಒಂದು ನಿಗದಿತ ದಿನವನ್ನು ನಿರ್ಧರಿಸಿ ಸಂಪ್ರದಾಯದಂತೆ ಗೊಂದೋಳು ಪೂಜೆಯ ಪ್ರಧಾನ ಪೂಜಾರಿಯ ಮನೆಗೆ ಹೋಗಿ ಇಂತಹ ದಿನ ನಮಗೊಂದು ಅಮ್ನೋರು ಪೂಜೆ ಆಗಬೇಕು. ನೀವು ಪೂಜೆಯ ಭಂಡಾರವನ್ನು ತೆಗೆದುಕೊಂಡು ಇಂತಹ ದಿನ ಮಧ್ಯಾಹ್ನಕ್ಕೆ ನಮ್ಮ ಮನೆಗೆ ಬಂದು ಪೂಜೆ ಮಾಡಿಕೊಡಬೇಕೆಂದು ತಾಂಬೂಲ ಕೊಟ್ಟು ಅವರಿಗೆ ಆಮಂತ್ರಿಸುವರು. ನಂತರ ಮಧ್ಯಾಹ್ನವೇ ಪೂಜೆಗೆ ಕುಳಿತು ಪೂಜೆ ಮಾಡುವುದಕ್ಕೆ ಗುರು ಉಪದೇಶವಿರುವ ಅಕ್ಕಪಕ್ಕದವರಿಗೂ, ನೆಂಟರಿಗೂ ಬಂಧು-ಮಿತ್ರರಿಗೂ ಆಮಂತ್ರಣ ಕೊಡುವರು 'ಇದಕ್ಕೆ ಬಾಳೆಗೊನೆ'[೩೯] ಕಡಿಯುವುದೆಂದು ಕರೆಯುತ್ತಾರೆ.

ಗೊನೆ ಕಡಿದ ಬಳಿಕ ಪೂಜೆಗೆ ಸಂಬಂಧಪಟ್ಟ ಎಲ್ಲಾ ಪರಿಕರಗಳನ್ನು ಪೂಜೆಯ ಮನೆಯವರು ಸಿದ್ಧಪಡಿಸಿಕೊಳ್ಳುತ್ತಾರೆ.

ಗೊಂದೋಳು ಪೂಜೆಯ ಪೂಜಾರಿಗಳ ಆಗಮನ, ಸ್ವಾಗತ ಮತ್ತು ಸಂಕಲ್ಪ ಪ್ರಾರ್ಥನೆ

ಪೂಜೆ ನಡೆಯುವ ಶುಭದಿನದಂದು ದೇವಿಗೆ ಸಂಬಂಧಿತ ಎಲ್ಲಾ ಪೂಜಾ ಪರಿಕರಗಳೊಂದಿಗೆ ಪೂಜಾರಿ ಬಳಗದವರು ಮಧ್ಯಾಹ್ನದ ಹೊತ್ತಿಗೆ ಮನೆಗೆ ಬರುತ್ತಾರೆ. (ಈ ಕಾರ್ಯಕ್ರಮವು ಕೆಲವೊಂದು ಕಡೆಗಳಲ್ಲಿ ಸಂಜೆ ಹೊತ್ತು ನಡೆಯುವುದುಂಟು.) ಪೂಜಾರಿಗಳು ಮತ್ತು ಭಂಡಾರ ಬರುವುದಕ್ಕೆ

ಮುಂಚಿತವಾಗಿ ಪೂಜೆ ನಡೆಯುವ ಮನೆಯಲ್ಲಿ ದೇವಕಿ ಕೋಣೆಯಲ್ಲಿ ದೀಪ ಹಚ್ಚುತ್ತಾರೆ. ಪೂಜೆಗೆ ಎಣ್ಣೆ ತೆಗೆದು ಸ್ನಾನ ಮಾಡುವುದಕೋಸ್ಕರ ಪೂಜಾರಿಗಳಿಗೆ ಒಂದು ತಂಬಿಗೆ ನೀರನ್ನು ಕೊಡುತ್ತಾರೆ. ಅವರು ಮನೆಯೊಳಗೆ ಬಂದಾಗ ಒಂದು ಹರಿವಾಣದಲ್ಲಿ ಬೆಳ್ತಿಗೆ ಅಕ್ಕಿ, ತೆಂಗಿನೆಣ್ಣೆ, ಒಂದು ಲೋಟದಲ್ಲಿ ಹಾಲು ಕೇಪಳ ಹೂವು ಮತ್ತಿತರ ಬಿಡಿ ಹೂಗಳನ್ನು ಹಾಕಿಡುತ್ತಾರೆ. ಮತ್ತು ಮಂಡಲಾಕಾರದಲ್ಲಿ ಕುಳಿತುಕೊಳ್ಳಲು ಮರದ ಮಣೆಯನ್ನು ಹಾಕುತ್ತಾರೆ. ಮನೆಯೊಡತಿ ಅಥವಾ ಗುರು ಉಪದೇಶವಿರುವ ಮಹಿಳೆಯರು ಇದ್ದು, ಅವರೊಂದಿಗೆ ನಾಲ್ಕು ಮಂದಿ ಮಹಿಳೆಯರು ಸೇರಿ ದೀಪ ಹಚ್ಚುಸುತ್ತಾರೆ. ಆ ಬಳಿಕ ದೀಪಕ್ಕೆ ಐದು ಬಾರಿ ಚಮದಲ್ಲಿ ಎಣ್ಣೆ ಹಾಕಿ ದೀಪದ ಬುಡದಲ್ಲಿ ತಾಂಬೂಲವನ್ನಿಟ್ಟು ಐದು ಮಹಿಳೆಯರು ದೀಪದ ಬುಡಕ್ಕೆ ಅಕ್ಷತೆ ಹಾಕಿ ನಮಸ್ಕರಿಸುತ್ತಾರೆ. ಆ ಬಳಿಕ ಸೇರಿದವರೆಲ್ಲಿಗೂ ಅಕ್ಷತೆ ಕೊಟ್ಟು ಸಂಕಲ್ಪ ಪ್ರಾರ್ಥನೆ ಮಾಡುವರು. ಈ ಸಂದರ್ಭದಲ್ಲಿ ಮನೆಯ ಯಜಮಾನ ಯಾವುದಕ್ಕಾಗಿ ಈ ಪೂಜೆಯನ್ನು ಮಾಡುತ್ತೇನೆಂದು ಪ್ರಧಾನ ಪೂಜಾರಿಯವರ ಹತ್ತಿರ ಹೇಳುತ್ತಾರೆ. ಈ ಪೂಜೆಯನ್ನು ನಿರ್ವಿಘ್ನವಾಗಿ ನಡೆಯುವಂತೆ ಅವರು ಆರಾಧಿಸುತ್ತಿರುವ ಕುಲದೇವತೆಯನ್ನು ಗ್ರಾಮದೇವರನ್ನು ನಂಬಿಕೊಂಡು ಬಂದಿರುವ ಭೂತ ದೈವಗಳು ಅನುಗ್ರಹಿಸಬೇಕು ಎಂಬುದಾಗಿ ಪ್ರಾರ್ಥಿಸುತ್ತಾರೆ. ಬಳಿಕ ಪೂಜಾರಿ ಪ್ರಾರ್ಥಿಸಿದ ಮೇಲೆ ಸೇರಿದವರೆಲ್ಲಿ ಕೈ ಮುಗಿದು ಪೂಜೆಗೆ ಕುಳಿತುಕೊಳ್ಳುವವರು. ಒಟ್ಟಿಗೆ ಅಕ್ಷತೆ ಹಾಕಿ ಸಾಷ್ಟಾಂಗ ನಮಸ್ಕರಿಸುವರು. ಗೊಂದೋಳು ಪೂಜೆಯಲ್ಲಿ ಬೆಸಸಂಖ್ಯೆಯಾದ ಏಳು, ಒಂಭತ್ತು, ಹನ್ನೊಂದು ಗುರು ಉಪದೇಶವಿರುವ ಪೂಜಾರಿಗಳು ಇರುವರು. ಮರಾಟಿಗರು ಗುರು ಉಪದೇಶವನ್ನು "ಗುರಿಮಾರಿಕೆ"[೪೦] ಎಂಬುದಾಗಿ ಕರೆಯುತ್ತಾರೆ. ಗುರು ಉಪದೇಶ ಇಲ್ಲದವರು ಪೂಜೆಯಲ್ಲಿ ಕುಳಿತುಕೊಳ್ಳಲು ಅವಕಾಶವಿಲ್ಲ. ಸ್ತ್ರೀ-ಪುರುಷರೆಂಬ ಭೇದ ಭಾವವಿಲ್ಲ.

ಪೂಜಾರಿಗಳಿಂದ ನಂದಾ ದೀಪಕ್ಕೆ ಎಣ್ಣೆ ಸಮರ್ಪಣೆ ಮತ್ತು ಗೌರವಾರ್ಪಣೆ

ಗೊಂದೋಳು ಪೂಜೆಯ ಮುಖ್ಯ ವಿಧಿಗಳಲ್ಲಿ ಮತ್ತೊಂದು ವಿಧಿ ನಂದಾ ದೀಪಕ್ಕೆ ಎಣ್ಣೆ ಅರ್ಪಣೆ ಮತ್ತು ನಮಸ್ಕಾರದ ಆಚರಣೆ ನಡೆಯುವುದು. ಪೂಜೆಗೆ ಕುಳಿತುಕೊಳ್ಳುವವರು ಮೊದಲು ದೀಪದ ಬುಡಕ್ಕೆ ಅಕ್ಷತೆ ಹಾಕಿ ನಮಸ್ಕರಿಸಿ ದೀಪಕ್ಕೆ ಐದು ಭಾರಿ ಚಮಚದಿಂದ ಎಣ್ಣೆಯನ್ನು ಎರೆಯುತ್ತಾರೆ. ಆ ಬಳಿಕ ಬಲಗೈಯಲ್ಲಿ ಚಮಚ ಹಿಡಿದು ಎಡಗೈ ಅಂಗೈಗೆ ಒಂದು ಚಮಚ ಎಣ್ಣೆ ಹಾಕುತ್ತಾರೆ. ಮೊದಲಿಗೆ ದರ್ಶನ ಪೂಜಾರಿ, ಅವರ ನಂತರ ಈಗಾಗಲೇ ಪ್ರದಕ್ಷಿಣಾಕಾರದಲ್ಲಿ ಕುಳಿತಿರುವ ಎಲ್ಲಾ ಪೂಜಾರಿಗಳು ದೀಪಕ್ಕೆ ಎಣ್ಣೆ ಹಾಕಿ ಎಡಗೈಯಲ್ಲಿ ಎಣ್ಣೆ ತೆಗೆದುಕೊಂಡು ಕುಳಿತಲ್ಲಿಯೇ ನೆಲಕ್ಕೆ ಪವಿತ್ರ ಬೆರಳಿನಿಂದ ಐದು ಬೊಟ್ಟು ಉದ್ದಕ್ಕೆ ಮತ್ತು ಐದು ಬೊಟ್ಟು ಅಡ್ಡಕ್ಕೆ ಹಚ್ಚಿ ನಮಸ್ಕರಿಸುತ್ತಾರೆ. ನಂತರ ಎಲ್ಲರೂ ಬೆರಳಿನಿಂದ ಒಬ್ಬೊಬ್ಬರ ಕೈಗೆ ಎಣ್ಣೆ ಬದಲಾಯಿಸುತ್ತಾರೆ. ತರುವಾಯು ಮಹಮ್ಮಾಯಿ ದೇವರ ಎಣ್ಣೆ ತೆಗೆದುಕೊಳ್ಳುತ್ತೇವೆ ಎಂದು ಹೇಳಿ ಆ ಎಣ್ಣೆಯನ್ನು ತಲೆಯಿಂದ ಪಾದದ ವರೆಗೆ ಕೈಯಿಂದ ಸವರುತ್ತಾರೆ. ಆ ಬಳಿಕ ಕುಟುಂಬದ ಯಜಮಾನ ಅಥವಾ ಯಾರಾದರೊಬ್ಬರು ಕುಳಿತವರಿಗೆ ಎಣ್ಣೆ ಹಚ್ಚುತ್ತಾರೆ. ನಂತರ ಅಮೃತವನ್ನು (ಶೇಂದಿ / ತುಳುವಿನಲ್ಲಿ ಕಳಿ) ಕುಳಿತವರಿಗೂ ಹಾಗೂ ಶಕ್ತಿ ಕೂರಿಸುವ ಮಹಿಳೆಗೂ ಕೊಟ್ಟು ಕುಡಿದ ಬಳಿಕ ತಾಂಬೂಲ ಸೇವನೆ ಮಾಡಿ ದೀಪದ ಬುಡಕ್ಕೆ ಅಕ್ಷತೆಯನ್ನು ಹಾಕಿ ಎಲ್ಲರೂ ನಮಸ್ಕರಿಸಿ ಎಲ್ಲರೂ ಎದ್ದು ನಿಂತುಕೊಳ್ಳುವರು. ದೀಪಕ್ಕೆ ಪ್ರದಕ್ಷಣೆ ಹಾಕಿ ಸ್ನಾನಕ್ಕೆ ಹೋಗುವರು. ಸ್ನಾನ ಮಾಡಿ ಬರುವಾಗ ಗಂಧ ಸವೆಸಿ ಮತ್ತು ಒಂದು ಕೊಡಪಾನ ಶುದ್ಧ ನೀರು ತರುವರು. "ಕುದ್ತೆ ನೀರು ಕುರ್ದಿನೀರು"[೪೧] (ಪುಣ್ಯ ನೀರು) ಎಲ್ಲರಿಗೂ ಸಿಂಪಡಿಸಿ ಸ್ವಲ್ಪ ಸೇವಿಸಿ ಬಳಿಕ ತುಳಸಿ ಕಟ್ಟೆಯ ಪಕ್ಕದಲ್ಲಿ ವಿಭೂತಿ ಧಾರಣೆ ಮಾಡುವರು.

ಬಲಿ ನೀಡಲಿರುವ ಪ್ರಾಣಿಗಳಿಗೆ ಆಹಾರ ಸಮರ್ಪಣೆ (ಪಾಯಿದು)

ಗೊಂದೋಳು ಪೂಜೆಯನ್ನು ನೆರವೇರಿಸಿಕೊಡುವ ಪೂಜಾರಿಗಳು ಶುದ್ಧರಾಗಿ ಬಲಿ ನೀಡಲಿರುವ ಕೋಳಿ ಮತ್ತು ಹಂದಿಗಳಿಗೆ ಆಹಾರ ನೀಡುವ ಮತ್ತೊಂದು ನಡೆಸುವರು. ಈ ವಿಧಿಗೆ ಮರಾಟಿಗರು 'ಪಾಯಿದು' ಎಂದು ಕರೆಯುವರು. ಪ್ರಾರಂಭದಲ್ಲಿ ಕೋಳಿಗಳ ಕಾಲು ತೊಳೆದು ಶುದ್ಧ ಮಾಡಿ ಧೂಪ ಬೆಳಗಿ ಹೂವು ಅಕ್ಷತೆ ಹಾಕಿ ಮೂರು ಬಗೆಯ ಬೊಟ್ಟು ಹಾಕಿ ಗುರುಪದೇಶ 'ಮಂತ್ರವನ್ನು ಕೋಳಿಯ ಕಿವಿಯಲ್ಲಿ ಜಪಿಸಿ, ಅದರ ಕೊರಳಿಗೆ ಅಕ್ಷತೆ ಹಾಕುತ್ತಾರೆ. ಮೊದಲಿಗೆ ಹೆಂಟೆಗೆ ನಂತರ ಗಂಡುಕೋಳಿಗಳಿಗೆ ಆ ಬಳಿಕ ಭೈರವನ ಕೋಳಿಗೆ "ಪಾಯಿದು"[೪೨] ಬೊಟ್ಟು ಹಾಕಿ ಆಹಾರ ನೀಡುತ್ತಾರೆ. ಅದೇ ರೀತಿ ಬಲಿ ನೀಡಲಿರುವ ಹಂದಿಗೂ ಕೂಡ ಪಾಯಿದು ಮಾಡುತ್ತಾರೆ. ನಂತರ ಎಲ್ಲರೂ ಸೇರಿ ಊಟ ಮಾಡಿ ಇದೇ ಸಂದರ್ಭದಲ್ಲಿ ಪೂಜೆ ಮಾಡುವವರ ಮನೆಯಲ್ಲಿ ಮನೆಯೊಡತಿ ಅಮವಾಸ್ಯೆಯ ದಿನದಂದೂ ಪಿತೃಗಳಿಗೆ ಬಡಿಸುವ ರೀತಿಯಲ್ಲಿ ಮಾಡಿರುವ ಎಲ್ಲಾ ಅನ್ನ, ಪದಾರ್ಥವನ್ನು ಆ ಎಲೆಯಲ್ಲಿ ಬಡಿಸಿ ಮೀಸಲಿಡುತ್ತಾರೆ. ಅಲ್ಲದೆ ಊಟ ಮಾಡುವವರು ತಮ್ಮ ಎಲೆಯಿಂದ ಸ್ವಲ್ಪ ಅನ್ನದ ಅಗಳನ್ನು ನೆಲಕ್ಕೆ ಹಾಕಿ ಬಲ ಅಂಗೈಯಲ್ಲಿ ನೀರು ತೆಗೆದುಕೊಂಡು ಎಲೆಯ ಸುತ್ತ ನೆಲಕ್ಕೆ ಬಿಟ್ಟು ಆ ನಂತರ ಊಟ ಮಾಡುತ್ತಾರೆ.

ಮಹಮ್ಮಾಯಿ ಮತ್ತು ಭೈರವನ ಪೂಜೆಗೆ ಪೂಜಾ ಸಾಮಾಗ್ರಿಗಳನ್ನು ಜೋಡಿಸುವುದು ಹಾಗೂ ಮಂಡಲ ರಚನೆ

ಸಾಮಾನ್ಯವಾಗಿ ಎಲ್ಲರ ಊಟ ಆದ ಬಳಿಕ ಪೂಜೆ ನಡೆಯುವ ಜಾಗವನ್ನು ಸ್ವಚ್ಛ ಮಾಡಿ ಎಲ್ಲಾ ಪೂಜಾರಿಗಳು ಸೇರಿ ಸಾಯಂಕಾಲ ನಡೆಯುವ ಭೈರವ ಆರಾಧನೆಗೆ ಬೇಕಾಗಿರುವ ಎಲ್ಲಾ ಪೂಜಾ ಸಾಮಾಗ್ರಿಗಳನ್ನು ಜೋಡಿಸುತ್ತಾರೆ. ಅಲ್ಲದೆ ಗೊಂದೋಳು ಪೂಜೆಗೆ ಬೇಕಾಗಿರುವ ಎಲ್ಲಾ ಸಾಮಾಗ್ರಿಗಳನ್ನು ಜೋಡಿಸಿರುತ್ತಾರೆ. ಜೊತೆಗೆ ಗೊಂದೋಳು ಪೂಜೆಗೆ ಸಂಬಂಧಿಸಿದ ಮಹಮ್ಮಾಯಿ ಮಂಟಪವನ್ನು ಪೂರ್ಣವಾಗಿ ಅಲಂಕರಿಸುತ್ತಾರೆ. ದೇವಿಯ ಬಿಂಬದ ಮೇಲ್ಭಾಗದಲ್ಲಿ ಒಂದು ಬಿಳಿಯ ಬಟ್ಟೆಯನ್ನು ಕಟ್ಟುತ್ತಾರೆ ಇದಕ್ಕೆ "ಮೆಲ್ಕಾಪು"[೪೩] ಎನ್ನುವರು. ಮುಂಭಾಗದಲ್ಲಿ ಪೂಜೆಯನ್ನು ನೆರವೇರಿಸುವ ಪೂಜಾರಿಯ ಕೈಗೆಟುವಷ್ಟು ದೂರದಲ್ಲಿ ಗುರುಪದೇಶ ಆಗಿರುವ ಐದು ಮಂದಿ ಮಹಿಳೆಯರು, ಪೂಜಾರಿಗಳು ಸೇರಿಕೊಂಡು ಅಲಂಕೃತವಾದ ಒಂದು ದೀಪವನ್ನು ಇಡುವರು. ಬಳಿಕ ಗುರುಪದೇಶ ಇರುವ ಮಹಿಳೆಯರು ದೀಪಕ್ಕೆ ಬತ್ತಿ ಸಹಿತ ಎಣ್ಣೆ ಹಾಕಿ ತಾಂಬೂಲವನ್ನು ದೀಪದ ಬುಡದಲ್ಲಿಟ್ಟು ನಮಸ್ಕಾರ ಮಾಡಿ ಮಹಿಳೆಯರು ತೆರಳುವರು.

ಮಹಮ್ಮಾಯಿಯನ್ನು ಕೂರಿಸಲು ಈ ಮೊದಲು ತಿಳಿಸಿದಂತೆ ಭೂಮಿಗೆ ಐದು ಎಣ್ಣೆ ಬೊಟ್ಟು ಹಾಕಿ ಮತ್ತು ಹೂವುಗಳನ್ನಿಟ್ಟು (ಮಹಮ್ಮಾಯಿಚೆ ನಾವೆ ಮೂಟ್ ತೋವುತೋ) "ಮಹಮ್ಮಾಯಿ ದೇವರ ಮೂರ್ತಿಯನ್ನು ಇಡುವೆ" ಎಂದು ಹೇಳಿ ಬೆಳ್ತಕ್ಕಿಯನ್ನು ಹಾಕಿ ಪೂರ್ವ, ಪಶ್ಚಿಮ, ಉತ್ತರ, ದಕ್ಷಿಣ ನಾಲ್ಕು ದಿಕ್ಕಿಗೆ ದ್ವಾರವನ್ನು ರಚನೆ ಮಾಡಿ ಮಂಡಲದ ಹೊರಭಾಗದಲ್ಲಿ ಗೋವು, ಕಟಾರಿ, ನಾಗ, ತ್ರಿಶೂಲ ಮುಂತಾದ ಪ್ರಕೃತಿಗೆ ಸಂಬಂಧಿಸಿದ ಚಿತ್ರಗಳನ್ನು ಬಿಡಿಸುತ್ತಾರೆ. ಇದಾದ ನಂತರ ಭಂಡಾರ ಇಡಲು ಮಂಡಲದ ಎಡಗಡೆಗೆ ಗೊಂದೋಳುಗೆ ಮಂಡಲ ಹಾಕಿದ ರೀತಿಯಲ್ಲಿ ಎಣ್ಣೆ, ನೀರು, ವಿಭೂತಿಯ ಬೊಟ್ಟು ಹಾಕಿ ಭಂಡಾರ ಪಾತ್ರೆಯಲ್ಲಿ ಅಮೃತ ತುಂಬಿಸಿ ಪಾತ್ರೆ ನಿಲ್ಲಲು ಸಿಂಬಿ ಇಟ್ಟು ಭಂಡಾರ ಇಡುತ್ತೇನೆ ಎಂದು ಹೇಳಿ (ಭಂಡಾರ್ ಭ್ಸ್‌ವುತ್ತೋ) ನೆರೆದ ಭಕ್ತಾದಿಗಳ ಅನುಮತಿ

ಪಡೆದು ಭಂಡಾರ ಪ್ರತಿಷ್ಠಾಪಿಸುತ್ತಾರೆ. ಭಂಡಾರದ ಸುತ್ತಲೂ ವೀಳ್ಯದೆಲೆ ಅಡಿಕೆ ಅದೇ ರೀತಿ ಭೈರವನ ಸ್ವಸ್ತಿಕಕ್ಕೂ ಹೂವು, ವೀಳ್ಯದೆಲೆ ಇಡುತ್ತಾರೆ. ಹಂದಿ ಮತ್ತು ಕತ್ತಿಗೆ ಕೋಳಿ ಬಲಿ ನೀಡುವ ಕತ್ತಿಗೆ (ಕರಕ್) ಹೂವು, ಕೇಪಳ ಹಾಕಿ ಅದೇ ರೀತಿ ಎಲ್ಲಾ ಪ್ರಸಾದಗಳನ್ನು ಪೂಜಾ ಪೂರ್ವ ಸಿದ್ಧತೆ ಮಾಡುತ್ತಾರೆ.

ಗದ್ದಿಗೆ ಏರಿಸುವುದು ಮಹಮ್ಮಾಯಿ ಕಲಶ ಸ್ಥಾಪನೆ 'ಈಸ್ ದೇವ್' ಪೂಜೆ

ಸೂರ್ಯಾಸ್ತದ ಸಮಯದಲ್ಲಿ ಮನೆಯ ಹೊರಗಡೆ ಭೈರವನ ಬನದಲ್ಲಿ ಎರಡನೇ ಹಂತದ ಪೂಜೆ ನಡೆಯುತ್ತದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಭೈರವನ ಪೂಜೆಯು ಗೊಂದೋಳು ದಿನದಂದೂ ಪ್ರತ್ಯೇಕವಾಗಿ ಭೈರವನ ಬನದಲ್ಲಿ ಪೂಜೆ ಮಾಡುತ್ತಾರೆ. ಅದರೆ ಉಡುಪಿ ಜಿಲ್ಲೆಯ ಹೆಚ್ಚಿನ ಕಡೆಗಳಲ್ಲಿ ಗೊಂದೋಳು ಪೂಜೆಯ ಸಂದರ್ಭ ಹಲವಾರು ಕಡೆ ಭೈರವನನ್ನೂ ಮನೆಯ ಒಳಗಡೆ ಪೂಜೆ ಮಾಡುತ್ತಾರೆ. ಪ್ರದೇಶದಿಂದ ಪ್ರದೇಶಕ್ಕೆ ಭೈರವನ ಆರಾಧನೆ ವ್ಯತ್ಯಾಸವನ್ನು ಹೊಂದಿದೆ. ಉಡುಪಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇಂದು ಭೈರವನ ಆರಾಧನೆಯ ವಿಧಿ ನಿಷೇಧಗಳು ಸಡಿಲತೆಗೊಂಡಿರುವುದು ಕಂಡು ಬರುತ್ತದೆ.

ಭೈರವ ಆರಾಧನೆಯ ಮೂಲತಃ ತಾಂತ್ರಿಕ ಕ್ರಿಯಾವಿಧಿ ವಿಧಾನಗಳ ಅವಲೋಕಿಸಿದಾಗ ಶೈವ ಪರಂಪರೆ ಕಂಡು ಬಂದರು. ವೈಷ್ಣವ ಪರಂಪರೆಯ ಪ್ರಭಾವ ಹಾಗೂ ಐತಿಹಾಸಿಕ ಕಾಲಘಟ್ಟದಲ್ಲಿ ವೈದಿಕ ಆಚರಣೆಯ ಪ್ರಭಾವಕ್ಕೆ ಒಳಗಾಗಿರುವ ಸಾಧ್ಯತೆಯನ್ನು ತಳ್ಳಿ ಹಾಕುವಂತಿಲ್ಲ.

ರಾತ್ರಿ ಸುಮಾರು ಎಂಟು ಗಂಟೆಗೆ 'ಈಸ್‌ದೇವ್' ಪೂಜೆ ನಡೆಯುತ್ತದೆ. ಪೂಜಾರಿಯೊಬ್ಬ ಮನೆಯ ಯಜಮಾನನ ಅಡುಗೆ ಮನೆಯ ಒಲೆಯ ಬಳಿಗೆ ಹೋಗಿ ಒಲೆಗೆ ಪಂಚಕಜ್ಜಾಯವನ್ನು ಒಲೆಗೆ ಸಮರ್ಪಿಸಿ ಅಲ್ಲಿನ ಬೂದಿಯನ್ನು ತಂದು ಪೂಜೆ ಮಾಡುತ್ತಾರೆ. ಹಿಂದಿನ ಕಾಲದಲ್ಲಿ ಸ್ಮಶಾನಕ್ಕೆ ಹೋಗಿ ಅಲ್ಲಿಂದ ಭಸ್ಮ ತಂದು ಪೂಜೆ ಮಾಡುತ್ತಿದ್ದರಂತೆ, ಕಾಲ ಕ್ರಮೇಣ ಸ್ಮಶಾನದ ಭಸ್ಮಕ್ಕೆ ಬದಲಾಗಿ ಒಲೆಯ ಬೂದಿಯನ್ನೆ ಭಸ್ಮದ ರೂಪದಲ್ಲಿ ಪೂಜೆಗೆ ಉಪಯೋಗಿಸುತ್ತಾರೆ ಎಂಬುದನ್ನು ಕ್ಷೇತ್ರಕಾರ್ಯ ಸಂದರ್ಭದಲ್ಲಿ ತಿಳುವಳಿಕೆದಾರರು ಮಾಹಿತಿಯನ್ನು ನೀಡಿರುವರು. ನಂತರ ಪ್ರಧಾನ ಪೂಜಾರಿಗಳಿಗೆ ಸಹಾಯಕ ಪೂಜಾರಿಗಳು ನಮಸ್ಕರಿಸಿ ಗೌರವ ಸಲ್ಲಿಸುತ್ತಾರೆ.

ಮಹಮ್ಮಾಯಿ ದೇವರ ಗಣಗಳಿಗೆ ಬಲಿ ಕೊಡುವ ಕಾರ್ಯಕ್ರಮ

ಈಸ್‌ದೇವ್ ಪೂಜೆ ಆದ ಮೇಲೆ ಗೊಂದೋಳು ಪೂಜೆಯ ಪ್ರಕ್ರಿಯೆಯಲ್ಲಿ ಬಲಿ ನೀಡುವ ಕಾರ್ಯಕ್ರಮ. ಮೊದಲಿಗೆ ಹೆಣ್ಣು ಕೋಳಿಯನ್ನು ಬಲಿಕೊಟ್ಟು ಮೇಲೆ ಗಂಡು ಕೋಳಿ ನಂತರ ಹಂದಿಯ ಬಲಿ ನಡೆಯುತ್ತದೆ. ಕೋಳಿಯ ಕಾಲನ್ನು ಶುದ್ಧ ಮಾಡಿ ಧೂಪ ಬೆಳಗಿ ಅದರ ಕಿವಿಯಲ್ಲಿ ಮಂತ್ರೋಪದೇಶ ಮಾಡಿ ಕೊರಳಿಗೆ ಮಂತ್ರಾಕ್ಷತೆ ಹಾಕಿ ಬೇರೆಯವರ ಕೈಗೆ ನೀಡುತ್ತಾರೆ. ಬಲಿ ತೆಗೆಯುವ ವ್ಯಕ್ತಿಗೆ (ಕರಕ್) ದೇವರ ಬಳಿಯಲ್ಲಿಟ್ಟು ಕತ್ತಿಯನ್ನು ತೆಗೆದು ಪೂಜಾರಿಗೆ ಕೊಡುತ್ತಾರೆ. ಈ ಸಂದರ್ಭದಲ್ಲಿ ದೇವಿಯ ಗದ್ದುಗೆಯ ಸ್ವಲ್ಪ ದೂರದಲ್ಲಿ ಭೈರವನಿಗೆ ರಕ್ತ ತರ್ಪಣ ಮಾಡುವ ಸಲುವಾಗಿ ಒಂದು ಕಲ್ಲಿನ ಮೇಲೆ ಎಲೆಯಲ್ಲಿ ಅರಳು ಪಾತ್ರೆ ಅಥವಾ ಅಡಿಕೆ ಹಾಳೆಯಲ್ಲಿ ಕುರ್ದಿ ನೀರು ಕೊಲ್‌ತಿರಿ, ಅಕ್ಕಿ ತೆಂಗಿನಕಾಯಿ ವೀಳ್ಯದೆಲೆಯಿಂದ ಕೂಡಿದ ಪನಿವಾರವನ್ನು ಕಲ್ಲಿನ ಪಕ್ಕದಲ್ಲಿ ಸಿದ್ಧ ಮಾಡಿರುತ್ತಾರೆ. ಕೋಳಿ ಮತ್ತು ಹಂದಿಯನ್ನು ಸಿದ್ಧ ಮಾಡಿ ಇಡುವರು. ಈ ಸಂದರ್ಭದಲ್ಲಿ ಪರಶುರಾಮನು ಅಸುರ ಕ್ರಿಯೆಗೆ ತೆರಳುತ್ತೇನೆ ಎಂದು ಮಹಮ್ಮಾಯಿಯಲ್ಲಿ ಬೇಡಿಕೊಂಡು ರಕ್ತ

ತರ್ಪಣ ನೀಡುವಲ್ಲಿಗೆ ಹೋಗುತ್ತಾನೆ. ಅಲ್ಲಿ ಭೈರವನಿಗೆ ರಾಶಿ ಬಿಡಿಸುವ ಕ್ರಮವೂ ಕೂಡಾ ಕೆಲವು ಕಡೆಗಳಲ್ಲಿ ಕಂಡುಬರುತ್ತದೆ. ಜೊತೆಗೆ ಕೆಲವೊಂದು ಕಡೆಗಳಲ್ಲಿ ಹದಿನಾರು ಎಡೆಗಳನ್ನು ರಾಶಿಯ ಸುತ್ತಲೂ ಬಿಡಿಸುವ ಕ್ರಮವಿದೆ. ನೆರೆದವರೆಲ್ಲರೂ ಭೈರವನಿಗೆ ಪ್ರಾರ್ಥನೆ ಸಲ್ಲಿಸುತ್ತಾರೆ. ನಂತರ ಪ್ರಸಾದವನ್ನು ಗಣ್ಯರಿಗೆ ನೀಡುತ್ತಾರೆ. ಹಂದಿ ಬಲಿ ನೀಡುವ ಸಂದರ್ಭದಲ್ಲಿ ಹಂದಿಯ ಕೈ ಕಾಲುಗಳನ್ನು, ಬಾಯಿ ಕಿವಿಗಳನ್ನು ಹಿಡಿದು ನೆಟ್ಟಗೆ ನಿಲ್ಲಿಸಿ ಬಲಿ ನೀಡುತ್ತಾರೆ. ತಲೆಯನ್ನೂ ಕತ್ತರಿಸಿ ದೊಡ್ಡ ಪಾತ್ರೆಯಲ್ಲಿಟ್ಟು ಅದರ ಬಲಕೈಯನ್ನೂ ಕತ್ತರಿಸಿ ಹಂದಿಯ ಬಾಯಿಗೆ ಅಡ್ಡಲಾಗಿ ಇಡುತ್ತಾರೆ. ನಂತರ ಅದನ್ನು ತಂದು ಪೂಜೆಯ ಪಕ್ಕದಲ್ಲಿ ಇಟ್ಟು ಬೂದು ಕುಂಬಳಕಾಯಿ ಅಥವಾ ಸೌತೆಕಾಯಿಯಲ್ಲಿ ದೀಪವನ್ನೂ ಹಚ್ಚಿ ಇಡುತ್ತಾರೆ. ಬಲಿ ನೀಡಿರುವ ಹಂದಿಯ ಸ್ವಲ್ಪ ಭಾಗದ ಮಾಂಸವನ್ನು ತೆಗೆದು ನೈವೇದ್ಯಕ್ಕಾಗಿ ಇಡುತ್ತಾರೆ. ನಂತರ ರಕ್ತ ಪಾತ್ರೆಯನ್ನು ತೆಗೆದು ಆ ಸ್ಥಳವನ್ನು ಸ್ವಚ್ಛ ಮಾಡುತ್ತಾರೆ. ಎಲ್ಲಾ ಕೋಳಿ, ಹಂದಿಯ ರಕ್ತ ತರ್ಪಣವಾದ ಮೇಲೆ ತೆಂಗಿನಕಾಯಿ ಒಡೆದು ಸ್ಥಳ ಶುದ್ಧ ಮಾಡುತ್ತಾರೆ. ನಂತರ ದೇವಿಗೆ ನೈವೇದ್ಯ ಅರ್ಪಣೆ ಮಾಡುವರು. ನಂತರ ಈಗಾಗಲೇ ಇಟ್ಟಿರುವಂತಹ ಭಂಡಾರ ಪಾತ್ರೆಯನ್ನು ಸರಿಸುತ್ತಾರೆ. ನಂತರ ದೇವರಿಗೆ ಮಂಗಳಾರತಿ ಮಾಡುವ ಕ್ರಮ ಜರಗುತ್ತದೆ. ಏಕಾರತಿಯಿಂದ ಪ್ರಾರಂಭಿಸಿ ಕೊನೆಗೆ ಮಂಗಳಾರತಿಯನ್ನು ಹರಿವಾಣದಲ್ಲಿ ಮಾಡುತ್ತಾರೆ. ಈ ಸಂದರ್ಭದಲ್ಲಿ ಐದು ಜನ ಮುತ್ತೈದೆಯರು ಸೇರಿ ಶೋಭಾನೆ ಹಾಡುತ್ತಾರೆ. ನಂತರ ಮುತ್ತೈದೆಯರು ಕುಂಕುಮದ ಬೊಟ್ಟನ್ನು ದೀಪಕ್ಕೂ, ದೇವಿಗೂ, ಭೈರವನಿಗೂ ಹಾಕಿ ಪೂಜೆಗೆ ಕುಳಿತವರಿಗೆ ಬೊಟ್ಟ ಹಾಕಿ ಆದ ಬಳಿಕ ಆರತಿಯನ್ನು ಸಭೆಗೆ ಆರತಿ ಮಾಡಿ ಒಂದು ಬತ್ತಿಯನ್ನೂ ದೀಪಕ್ಕೂ, ಒಂದು ಬತ್ತಿಯನ್ನು ಅಡುಗೆ ಒಲೆಗೂ ಹಾಕಿ ಆರತಿ ದೇವರ ಬಳಿಗೆ ತಂದು ಪೂಜಾರಿಯು ದೇವರ ಬಳಿ ಮೆತ್ತಗೆ ಪ್ರಾರ್ಥನೆ ಮಾಡುತ್ತಾನೆ. ಕುಟುಂಬದ ಹಿರಿಯರು ಮೊದಲಿಗೆ ಪ್ರಾರ್ಥನೆ ಮಾಡಿದ ಬಳಿಕ ಉಳಿದವರು ಪ್ರಾರ್ಥಿಸಿ ಕೊನೆಗೆ ದರ್ಶನ ಪಾತ್ರಿ ಪ್ರಾರ್ಥಿಸಿದ ಬಳಿಕ ಹಣ್ಣು ಕಾಯಿ ಕೊಡುತ್ತಾರೆ. ಮೊದಲಿಗೆ ಹತ್ತು ಸಮಸ್ತರಿಗೆ ಪ್ರಸಾದ, ಊರಿನ ಗುರಿಕಾರನ ಕೈಗೆ ನೀಡುತ್ತಾರೆ. ಬಳಿಕ ಪರವೂರಿನವರಿಗೆ ಪ್ರಸಾದ ನಂತರ ನೆರೆದವರೆಲ್ಲರಿಗೂ ಪ್ರಸಾದ ನೀಡುತ್ತಾರೆ. ಕೊನೆಗೆ ಕುಟುಂಬದ ಎಲ್ಲರ ಸಮ್ಮುಖದಲ್ಲಿ ಸೇವೆ ಸಲ್ಲಿಸುತ್ತಿರುವ ಮನೆಯ ಯಜಮಾನನಿಗೆ ಪ್ರಸಾದ ನೀಡುತ್ತಾರೆ.

ನಂತರ ಗೊಂದೋಳು ಪೂಜೆಯ ಗದ್ದುಗೆ ಎಬ್ಬಿಸುವರು. ಪೂಜೆಗೆ ಕುಳಿತವರು ಮತ್ತು ಶಕ್ತಿ ಕೂರಿಸಿದ ಮಹಿಳೆಯರು ಸೇರಿ ದೇವರ ಬಿಂಬ ಕಳಸ ಸಮೇತ ಮೆಲೆತ್ತಿ ಮೂರು ಭಾರಿ ಕೆಳಗೆ ಮೇಲೆ ಮಾಡಿ ಕಲಶ ಪಾತ್ರೆಯನ್ನು ಕೈಯಲ್ಲಿ ಹಿಡಿದು ಮೂರ್ತಿ ಬಿಂಬವನ್ನು ಅಕ್ಕಿಯ ಮೇಲಿಟ್ಟು ಕಲಶ ಪಾತ್ರೆಯ ತೀರ್ಥವನ್ನೂ ಎಲ್ಲರಿಗೂ ಕೊಟ್ಟು ಈಗಾಗಲೇ ಪ್ರತಿಷ್ಠಾಪಿಸಲ್ಪಟ್ಟ ದೀಪವನ್ನು ಅಲ್ಲಿಂದ ಸ್ವಲ್ಪ ಸರಿಸಿ ಪೂಜೆಗೆ ಕುಳಿತ ಎಲ್ಲರೂ ಪರಸ್ಪರ ಕೈ ಮುಗಿದು ದೀಪಕ್ಕೆ ಒಂದು ಸುತ್ತು ಬಂದು ಕಾರ್ಯಕ್ರಮವನ್ನು ಮುಕ್ತಾಯಗೊಳಿಸುವುದು ಕಂಡು ಬರುತ್ತದೆ.

ಅಗ್ನಿಸೇವೆ / ಲಾಗೇಲೋ ಕುಣಿತ

ಲಾಗೇಲೋ ಕುಣಿತರವರು ಗದ್ದಿಗೆ ಬಳಿ ಬಂದು ದೀಪಕ್ಕೆ ಎಣ್ಣೆ ಹಾಕಿ ಪೂಜಾರಿಯಿಂದ ಎಲೆ ಅಡಿಕೆಯೊಂದಿಗೆ ತಾಳವನ್ನು ಇಟ್ಟು ಸಂಧಿ ಹೇಳುವವರ ಕೈಗೆ ನೀಡುತ್ತಾರೆ. ಜೊತೆಯಲ್ಲಿ ಎಣ್ಣೆಯ ಕವಂಗ, ಪಂಚ ದೀವಟಿಗೆಯನ್ನು ದೇವರ ದೀಪದಿಂದ ಉರಿಸಿ ಪೂಜಾರಿಯ ಕೈಗೆ ಕೊಡುತ್ತಾರೆ. ಇದೇ ಸಂದರ್ಭದಲ್ಲಿ ನೆರೆದ ಭಕ್ತರು ಜಯಘೋಷವನ್ನು ಹಾಕುತ್ತಾರೆ. ದೇವರ ಕೋಣೆಯಿಂದ ಅಂಗಳದ ತನಕ ಪೂಜಾರಿಯು ದೇವರ ಸಂಧಿಯನ್ನು ಆರಂಭಿಸಿ ಅಂಗಳಕ್ಕೆ ಬರುತ್ತಾರೆ. ಅವರನ್ನು

ಅನುಸರಿಸಿಕೊಂಡು ದೀವಟಿಗೆ ಹಿಡಿದವರು ಒಬ್ಬೊಬ್ಬರಾಗಿ ಬಂದು ಚಪ್ಪರವಿಲ್ಲದ ಕಡೆಯಲ್ಲಿ ಮಂಡಲಾಕೃತಿಯಲ್ಲಿ ಕುಣಿಯಲು ಪ್ರಾರಂಭಿಸುತ್ತಾರೆ. ಗೊಂದೋಳು ಕುಣಿತವು ಏಳು, ಒಂಬತ್ತು, ಹನ್ನೊಂದು ಸುತ್ತು ಎಂಬ ಕ್ರಮದಲ್ಲಿ ಕುಣಿಯುತ್ತಾರೆ. ದರ್ಶನ ಪಾತ್ರಿಗಳು ಐದು ಅಥವಾ ಏಳು ಸುತ್ತಿನಲ್ಲಿ ಒಬ್ಬರು ಬದಲಾವಣೆಯಾಗುತ್ತಿರುತ್ತಾರೆ. ಕೊನೆಗೆ ಪ್ರಧಾನ ದರ್ಶನ ಪಾತ್ರಿ ಪರಶುರಾಮನ ಆಗಮನವಾಗಿ ಅಂಗಳಕ್ಕೆ ದರ್ಶನದಲ್ಲಿ ಬಂದು ಕುಣಿತದವರಿಂದ ದೀವಟಿಗೆಯನ್ನೂ ತೆಗೆದುಕೊಂಡು ಸಭೆಯ ಸುತ್ತ ದೀವಟಿಗೆ ನೃತ್ಯ ಮಾಡುತ್ತಾ ಪೂಜೆ ಮಾಡಿದ ಕುಟುಂಬದ ಹಿರಿಯರಲ್ಲಿ ಯಾತಕ್ಕಾಗಿ ನನ್ನ ಸೇವೆ ಮಾಡುತ್ತಿದ್ದರೆಂದು ಕಾರಣವನ್ನು ಕೇಳುತ್ತಾನೆ. ಅವರಿಗೆ ಅಭಯವನ್ನಿತ್ತು ಸಭೆಗೆ ಪ್ರಸಾದ ನೀಡಲು ತಿಳಿಸುತ್ತಾನೆ. ಮೊದಲಿಗೆ ಬ್ರಹ್ಮ ಸಭೆಗೆ ಪ್ರಸಾದ ನೀಡಿ, ತುಳಸಿಕಟ್ಟೆಯಲ್ಲಿ ಎರಡೆಲೆ ಪ್ರಸಾದವನ್ನಿಟ್ಟು ಹತ್ತು ಸಮಸ್ತರ ಪ್ರಸಾದವನ್ನು ಊರಿನ ಗುರಿಕಾರನ ಕೈಗೆ ನೀಡುತ್ತಾನೆ.

ಆ ಬಳಿಕ ಪೂಜೆ ನಡೆಸಿದವರ ಮನೆಗೆ ಪ್ರಸಾದಕ್ಕೆ ಮೊದಲು ದೇವರಿಗೆ ಅಗ್ನಿ ಫಲಹಾರ ನೀಡುತ್ತಾರೆ. ಉರಿಯುತ್ತಿರುವ ಭತ್ತಿಯನ್ನು ಬಾಯಿಯ ಒಳಗಡೆ ಹಾಕಿ ಒಂದೊಂದೇ ಭತ್ತಿಯನ್ನು ಸೇವಿಸುತ್ತಾ ದೇವಿಯ ಪ್ರತೀಕವಾಗಿರುವ ದರ್ಶನ ಪಾತ್ರಿಯು ಸಂತೋಷ ಪಡುತ್ತಾರೆ. ಕೊನೆಗೆ ಕುಟುಂಬದವರೆಲ್ಲರ ಪ್ರಾರ್ಥನೆಯನ್ನು ಆಲಿಸಿ ಅಭಯವನ್ನು ಹಿತವಚನವನ್ನು ನೀಡುತ್ತಾನೆ. ಮೊದಲಿಗೆ ರಾಕ್ಷಸನ ಸಂಧಿಯನ್ನು ಹೇಳಿ ಕುಣಿಯುತ್ತಾರೆ. ನಂತರ ಶೃಂಗಾರದ ಹಾಡು ಬಳಿಕ ರಾಕ್ಷಸ ದೇವಿಯೊಂದಿಗೆ ಯುದ್ಧ ಮಾಡುವ ಸಂಧಿಯನ್ನು ಜೊತೆಗೆ ಕೋಟೆಯನ್ನು ಮುರಿಯುವ ಸಂಧೀ. ಆ ಬಳಿಕ ಭೈರವನ ಸಂಧಿ ನಂತರ ದೇವಿಯನ್ನು ಕುಣಿತದ ಸ್ಥಳಕ್ಕೆ ಕರೆದೊಯ್ಯುವ ಸಂಧಿ ಇವುಗಳೆಲ್ಲವನ್ನೂ ಕ್ರಮಬದ್ಧವಾಗಿ ಹಾಡುತ್ತಾರೆ.

ಗುರು ಉಪದೇಶ

ಗೊಂದೋಳು ಪೂಜೆಯ ಪ್ರಕ್ರಿಯೆಯಲ್ಲಿ ಗುರು – ಉಪದೇಶ (ಗುರಿಮಾರಿಕೆ) ಇಲ್ಲದೆ ಯಾರು ಕೂಡಾ ಪೂಜಾ ಕಾರ್ಯದಲ್ಲಿ ಪಾತ್ರಿಯ ಸ್ಥಾನದಲ್ಲಿ ಭಾಗವಹಿಸುವಂತಿಲ್ಲ. ಗುರು – ಉಪದೇಶ ಕೊಡಲು ಉಪದೇಶ ಪಡೆಯುವವರ ತಂದೆ ಅಥವಾ ಕುಟುಂಬದ ಹಿರಿಯ ವ್ಯಕ್ತಿ ಗುರು–ಉಪದೇಶ ಇದ್ದವರು ಆಗಬೇಕು. ಅಥವಾ ಪೂಜಾರಿಯು ಕೂಡಾ ನೀಡುತ್ತಾರೆ. ಗುರು – ಉಪದೇಶ ನೀಡುವವರಿಗೆ ಪೂಜೆಯ ಸಂದರ್ಭದಲ್ಲಿ ವಿಶೇಷವಾಗಿ ಆಮಂತ್ರಣವನ್ನು ನೀಡುತ್ತಾರೆ. ಆ ಸಂದರ್ಭದಲ್ಲಿ ಗುರು – ಉಪದೇಶಕ್ಕೆ ಬೇಕಾಗುವ ಸಾಮಾಗ್ರಿಗಳ ಪಟ್ಟಿಯನ್ನೂ ಕೂಡಾ ನೀಡಿರುತ್ತಾನೆ. ನಿಗದಿಪಡಿಸಿದ ಗೊಂದೋಳು ಪೂಜೆಯ ದಿನದಂದು ಉಪದೇಶ ಪಡೆಯುವ ವ್ಯಕ್ತಿ ಮೈ ಕೈಗೆ ಎಣ್ಣೆ ಹಚ್ಚಿ ಸ್ನಾನ ಮಾಡಿ ಸ್ವಲ್ಪ ಅಮೃತವನ್ನು ಪೂಜಾರಿಗೆ ನೀಡಿ ಕಾಲಿಗೆ ನಮಸ್ಕರಿಸಿ ಆಶೀರ್ವಾದ ಪಡೆಯುತ್ತಾನೆ. ಬಿಳಿ ವಸ್ತ್ರದ ಒಂದು ತುದಿಯಲ್ಲಿ ತಾಂಬೂಲ ಮತ್ತೊಂದು ತುದಿಯಲ್ಲಿ ದಕ್ಷಿಣೆಯನ್ನು ಕಟ್ಟಿ ಗದ್ದುಗೆಯ ಹಿಂಬದಿಯಲ್ಲಿ ಅವರ ತೊಡೆಯಲ್ಲಿ ಕುಳಿತು ಗುರು – ಉಪದೇಶ ಪಡೆಯುತ್ತಾರೆ. ಅವರ ತಲೆಯ ಮೇಲೆ ಬಿಳಿ ಬಟ್ಟೆ ಮುಚ್ಚಿದಾಗ ಗುರು – ಉಪದೇಶ ನೀಡುವರು. ಒಂದನೆ ಮಂತ್ರ – ಓಂ ಶ್ರೀ ಗುರುನಾರಾಯಣಾಯ ನಮಃ, ಎರಡನೇ ಮಂತ್ರ – ಓಂ ಶ್ರೀ ದೇವಗುರುನಾರಾಯಣಾಯ ನಮಃ, ಮೂರನೇ ಮಂತ್ರ – ಓಂ ಶ್ರೀ ಚಿನ್ಮಯನೇ ನಮಃ. ಒಂದೊಂದು ಮಂತ್ರವನ್ನು ಕಿವಿಯಲ್ಲಿ ಮೂರು ಭಾರಿ ಉಪದೇಶ ಮಾಡಿದ ಮೇಲೆ ಬಿಳಿ ವಸ್ತ್ರ ತೆಗೆದು ಗುರುವಿನ ಹೆಗಲಿಗೆ ಹಾಕಿ ಕಾಲು ಮುಟ್ಟಿ ನಮಸ್ಕರಿಸುತ್ತಾನೆ. ಇನ್ನು ಇವರಿಗೆ ಪಾಯಿದು ಮಾಡಿ ವಿಭೂತಿ ಹಾಕುವ ವಿಧಾನವನ್ನು ಗುರೂಪದೇಶ ಕೊಟ್ಟವರು ತಿಳಿಸಿ ಕೊಡುತ್ತಾರೆ. ಇದಾದ ಬಳಿಕ ಇವರಿಗೆ ಪಾತ್ರೆ ತೀರ್ಥವನ್ನು ನೀಡುತ್ತಾನೆ. ನಂತರ

ಗುರೂಪದೇಶ ಪಡೆದ ವ್ಯಕ್ತಿ ಮಂತ್ರವನ್ನು ರಹಸ್ಯವಾಗಿಟ್ಟು ನಿತ್ಯವೂ ವಿಭೂತಿಧಾರಣೆ ಮಾಡಿ ಮುಂದೆ ನಡೆಯಲಿರುವ ಗೊಂದೋಳು ಪೂಜೆಗಳಲ್ಲಿ ಪಾತ್ರಿಯವರಿಗೆ ಪೂಜೆಯಲ್ಲಿ ಸಹಕರಿಸುವ ಸಂಪ್ರದಾಯ ಕಂಡು ಬಂದಿರುತ್ತದೆ.

ಮರುದಿನ ಮಧ್ಯಾಹ್ನದವರೆಗೆ ಪೂಜಾರಿ ಮತ್ತಿತರರು ನಿಂತು ದೇವರ ಕಲಶವಿಟ್ಟ ಅಕ್ಕಿಯನ್ನು ಮತ್ತು ಕೋಳಿ ತಲೆಯ ಹಾಗೂ ನೀರ್‌ದೋಸೆಯನ್ನು ಮಾಡಿ ಆ ಬಳಿಕ ಎಲ್ಲರೂ ಊಟ ಮಾಡಿ ಅವರವರ ಮನೆಗೆ ತೆರಳುತ್ತಾರೆ. ಇಲ್ಲಿಗೆ ಗೊಂದೋಳು ಪೂಜಾ ಕಾರ್ಯಕ್ರಮ ಕೊನೆಯಾಗುತ್ತದೆ.

ಇತರ ಸಮುದಾಯಗಳಲ್ಲಿ ಗೊಂದೋಳು ಪೂಜೆ

"ಕರಾವಳಿ ಜಿಲ್ಲೆಯಲ್ಲಿ ಮರಾಟಿಗರಲ್ಲದೆ ಇತರೆ ಸಮುದಾಯದವರು ಮಮ್ಮಾಯಿಯನ್ನು ಬೇರೆ ಬೇರೆ ನಾಮಗಳಿಂದ ಕರೆದು ಗೊಂದೋಳು ಪೂಜೆ ಆಚರಿಸುತ್ತಿರುವುದು ಕ್ಷೇತ್ರಕಾರ್ಯ ಸಂದರ್ಭದಲ್ಲಿ ಕಂಡುಬಂದಿರುತ್ತದೆ. ಮಹಾರಾಷ್ಟ್ರ ಮೂಲದಿಂದ ಬಂದಿರುವ ಕರಾಡ್ಡ ಬ್ರಾಹ್ಮಣರು ಕೊಲ್ಹಾಪುರದ ಮಹಾಲಕ್ಷ್ಮೀಯ ಆರಾಧಕರಾಗಿದ್ದು, 'ಗೊಂದಲ್' ಎಂಬ ಮೂರ್ತಿಯ ಸುತ್ತ ಗೊಂದಳ ಆಚರಿಸುವರು. ಇವರು ತುಳುಜಾಪುರದ ಭವಾನಿಪೂಜೆ ಅಥವಾ ಸಂತೋಷಿಮಾ ಪೂಜೆ ಎಂಬುದಾಗಿ ಕರೆದು ಇಲ್ಲಿಯ ಕ್ರಿಯಾಚರಣೆಯನ್ನು ಗೊಂದೋಳು ಎಂದು ಕರೆಯುವರು"[೪೪].

"ಪರಿವಾರ ಬಂಟರು ಮಹಮ್ಮಾಯಿಯ ಆರಾಧಕರು ಹಾಗೂ ಅಂಬಾಭವಾನಿಯ ಉಪಾಸಕರು. ಇವರು ಮಹಾನವಮಿಯ ಸಂದರ್ಭದಲ್ಲಿ ತಮ್ಮ ಇಷ್ಟಾರ್ಥ ಸಿದ್ಧಿಗಾಗಿ, ಕಷ್ಟ ನಷ್ಟ ಪರಿಹಾರಕ್ಕಾಗಿ ಹರಕೆಯ ರೂಪದಲ್ಲಿ ತಮಗೆ ಅನುಕೂಲವಾದ ಹಾಗೂ ಶುಭದಿನದಂದು ಈ ಗೊಂದೋಳು ಸೇವೆಯನ್ನು ಆಚರಿಸುವರು. ಇವರು ನೇರವಾಗಿ ಈ ಆಚರಣೆಯನ್ನು ಮಾಡದಿದ್ದರೂ ಕರಾವಳಿ ಪ್ರದೇಶದಲ್ಲಿ ವಾಸ್ತವವಿರುವ ಮರಾಟಿ ನಾಯ್ಕರನ್ನು ಕರೆದು ಅವರಿಂದ ಅಂಬಾ ಭವಾನಿಗೆ ಗೊಂದೋಳು ಪೂಜೆ ನಡೆಸುವರು"[೪೫].

"ಕರಾವಳಿ ಕರ್ನಾಟಕದ ರಾಮಕ್ಷತ್ರಿಯ ಸಮುದಾಯದವರು ತಾವು ಆರಾಧಿಸುತ್ತಿರುವ ಆದಿಶಕ್ತಿ ದುರ್ಗಾಪರಮೇಶ್ವರಿಗೆ (ಇದೀಗ ಪರಿವರ್ತನೆಗೊಂಡ ಹೆಸರು) ಪೂರ್ವ ಕಾಲದಲ್ಲಿ ವಿಶೇಷ ಪೂಜೆಯಾಗಿ ಗೊಂದೋಳು ಕ್ರಿಯಾಚರಣೆಯನ್ನು ನಡೆಸುವುದನ್ನು ತಿಳುವಳಿಕೆದಾರರು ತಿಳಿಸಿರುತ್ತಾರೆ"[೪೬].

"ದಕ್ಷಿಣ ಕನ್ನಡ ಜಿಲ್ಲೆಯ ಪದ್ಮಶಾಲಿ (ಶೆಟ್ಟಿಗಾರ್) ಯವರು ಆರಾಧ್ಯ ದೇವರು ಮಾರಿಯಮ್ಮ ಅಥವಾ ಮಹಮ್ಮಾಯಿಯಾಗಿದ್ದು, ಇವರು ವಾಸವಾಗಿರುವ ಮುಲ್ಕಿ, ಪಣಂಬೂರು, ಸುರತ್ಕಲ್, ಸಿದ್ಧಕಟ್ಟೆ, ಉಳ್ಳಾಲ ಪ್ರದೇಶಗಳಲ್ಲಿ ಇವರು ನಡೆಸುವ ಮಾರಿ ಪೂಜೆ ಸಂದರ್ಭದಲ್ಲಿ ರಾಣಿಯವರು, ಮಾದಿಗರು, ಅದೇ ರೀತಿ ಮರಾಟಿ ನಾಯ್ಕ ಸಮುದಾಯದವರನ್ನು ಆಮಂತ್ರಿಸಿ ಗೊಂದೋಳು ಆಚರಣೆಯನ್ನು ನಡೆಸಿಕೊಡುರು ಈ ಹಿಂದೆ ಮಾರಿಪೂಜೆಯ ಪೂರ್ವದಲ್ಲಿ ಅಮ್ನೋರಿಗೆ ಸೇವೆ ಸಲ್ಲಿಸುತ್ತಿದ್ದರು ಎಂಬುದಾಗಿ ತಿಳುವಳಿಕೆದಾರರು ತಿಳಿಸಿರುವರು"[೪೭].

"ಮಹಾರಾಷ್ಟ್ರದಿಂದ ಕರಾವಳಿ ಪ್ರದೇಶಕ್ಕೆ ವಲಸೆ ಬಂದಿರುವ ಅನೇಕ ಸಮುದಾಯಗಳಲ್ಲಿ ಈ ಆಚರಣೆಯು ನಡೆಯುವುದನ್ನು ಗಮನಿಸಬಹುದು. ಶತಮಾನಗಳ ಹಿಂದೆ ಮಹಾರಾಷ್ಟ್ರ, ಗೋವಾ, ಉತ್ತರ ಕರ್ನಾಟಕ ಜಿಲ್ಲೆಗಳ ಮೂಲಕ ಕರಾವಳಿ ಪ್ರದೇಶಕ್ಕೆ ವಲಸೆ ಬಂದಿರುವ ಗೌಡ ಸಾರಸ್ವತ ಬ್ರಾಹ್ಮಣರು," ಬಾಲಾ– ವಾಳಿಕರ್, ರಾಜಪುರ ಬ್ರಾಹ್ಮಣರು, ಸಾರಸ್ವತ ಬ್ರಾಹ್ಮಣರು, ಕುಡಾಲದೇಶಸ್ಥಾರು, ಚಪ್ಪೆಕರ್, ಚಿತ್ಪಾವನ ಬ್ರಾಹ್ಮಣರು, ಪೆಡ್ನೆಕರ್, ಕುಡುಬಿಯರು, ಮರಾಟಿ ಕ್ಷತ್ರಿಯರು ಮುಂತಾದ

ಸಮುದಾಯಗಳಲ್ಲಿ ಇಂದಿಗೂ ಗೊಂದೋಳು ಪೂಜೆ ಮತ್ತು ಅದಕ್ಕೆ ಸಂಬಂಧಿತ ರೂಪಾಂತರಗೊಂಡ ಮಹಮ್ಮಾಯಿ ಪೂಜೆ ನಡೆಯುತ್ತಿದೆ ಎಂಬುದಾಗಿ ಆಯಾ ಸಮುದಾಯಕ್ಕೆ ಸಂಬಂಧಪಟ್ಟ ತಿಳುವಳಿಕೆದಾರರು ಕ್ಷೇತ್ರಕಾರ್ಯ ಸಂದರ್ಭದಲ್ಲಿ ತಿಳಿಸಿರುತ್ತಾರೆ. ಈ ಎಲ್ಲಾ ಸಮುದಾಯದ ಮೂಲ ಮಹಾರಾಷ್ಟ್ರ ಸುತ್ತಮುತ್ತಲಿನ ಪ್ರದೇಶವಾಗಿರುವಂತಹ ಕೊಲ್ಹಾಪುರ, ರತ್ನಗಿರಿ, ಸೋಲಾಪುರ, ಕರಾಡ, ಪೂನಾ, ಸಾಂಗ್ಲಿ ಈ ಭಾಗ ಆಗಿರಬಹುದೆಂದು ಇನ್ನೂ ಹೆಚ್ಚಿನ ಸಂಶೋಧನೆಗಳಾದಾಗ ತಿಳಿದು ಬರಬಹುದು".[೪೮]

"ಗೋವಾದಿಂದ ವಲಸೆ ಬಂದಿರುವ ಕ್ರೈಸ್ತ ಸಮುದಾಯದ ಹಳೆಯ ತಲೆಮಾರಿನ ಕೆಲವರು ಈ ಪೂಜೆಯ ಅಭಿಮಾನಿಗಳಾಗಿರುವುದಾಗಿ ತಿಳಿದು ಬಂದಿರುತ್ತದೆ. ಕಾಸರಗೋಡು ಸಮೀಪದ ಹಳ್ಳಿಯೊಂದರಲ್ಲಿ ನೆಲೆಸಿದ ಕ್ರೈಸ್ತ ಕುಟುಂಬವೊಂದು ಗೊಂದೋಳು ಪೂಜೆಯನ್ನು ಮಾಡಿಸುತ್ತಿದ್ದುದಲ್ಲದೆ ಈ ಪೂಜೆಗೆ ಸಂಬಂಧಪಟ್ಟಿರುವ ಪದ್ಯಗಳನ್ನು ಹಾಡುತ್ತಾ ಗುಮ್ಮಟವನ್ನು ಬಾರಿಸುತ್ತಿರುವುದು ತಿಳಿದುಬಂದಿರುವುದಾಗಿ ಕೈಂತಜೆ ನರಸಿಂಹ ಭಟ್ ಅವರ ಲೇಖನ 'ಗೊಂದೋಲು' ಎಂಬುದರಲ್ಲಿ ತಿಳಿಸಿದ್ದಾರೆ".[೪೯]

ಮಾತೃದೇವತೆಯ ಪರಿಕಲ್ಪನೆ, ಆರಾಧನೆಯ ಪ್ರಾಚೀನತೆ ಮತ್ತು ಗೊಂದೋಳು ಪೂಜೆಯ ಎಲ್ಲಾ ಪ್ರಕ್ರಿಯೆಯನ್ನು ಚರ್ಚಿಸುವುದರ ಮುಂಚಿತವಾಗಿ ಕ್ಷೇತ್ರಕಾರ್ಯ ಸಂದರ್ಭದಲ್ಲಿ ಅವಲೋಕಿಸಿರುವ ಹಾಗೂ ಮರಾಟಿಗರು ಆರಾಧಿಸಿಕೊಂಡು ಬಂದಿರುವ ದೇವತೆಗಳ ಆರಾಧನಾ ಸ್ಥಳಗಳನ್ನು ಅಥವಾ ಶ್ರದ್ಧಾ ಕೇಂದ್ರಗಳನ್ನು ಗುರುತಿಸಿ ಪಟ್ಟಿ ಮಾಡಲಾಗಿದೆ ಅವುಗಳು ಈ ಕೆಳಗಿನಂತಿವೆ.

ಮರಾಟಿ ನಾಯ್ಕರು ಮುಖ್ಯವಾಗಿ ಶಕ್ತಿ ದೇವತೆ ಹಾಗೂ ಮಾತೃದೇವತೆಯ ಪ್ರತೀಕವಾಗಿರುವ ಮಹಾಮ್ಮಾಯಿ ದೇವತೆಯನ್ನು ವಿವಿಧ ಹೆಸರುಗಳಿಂದ ಆರಾಧಿಸುತ್ತಿರುವುದು ಕ್ಷೇತ್ರಕಾರ್ಯ ಸಂದರ್ಭದಲ್ಲಿ ಕಂಡು ಬಂದಿರುತ್ತದೆ.

ಮಮ್ಮಾಯಿ, ಅಂಬಾ, ಅಂಬಾಭವಾನಿ, ದುರ್ಗಾಂಬಾ, ಸಿಂಹವಾಹಿನಿ, ದುರ್ಗಾಪರಮೇಶ್ವರಿ, ಮಹಾಮ್ಮಾಯಿ, ತುಳಜಾಭವಾನಿ, ಶಾಂತಾದುರ್ಗೆ, ಗದ್ದುಗೆ ಅಮ್ಮ, ಅಮ್ನಾರು, ಮಹಿಷಾಮರ್ದಿನಿ, ದುರ್ಗಾದೇವಿ, ಲಕ್ಷ್ಮೀ ಅಂಬಾ ಭವಾನಿ, ಸಿಂಹವಾಹಿನಿದುರ್ಗಾಪರಮೇಶ್ವರಿ, ವ್ಯಾರ್ಘಚಾಮುಂಡಿ ಮುಂತಾದ ಹೆಸರುಗಳಿಗೆ ಶಕ್ತಿದೇವತೆ ಅಥವಾ ಮಾತೃ ದೇವತಾರಾಧನೆ ಮಾಡುತ್ತಾರೆ. ಉಡುಪಿ ಜಿಲ್ಲೆಯಲ್ಲಿ ಮರಾಟಿನಾಯ್ಕ ಸಮುದಾಯದವರಲ್ಲಿ ಒಟ್ಟು ೪೨ ಗದ್ದುಗೆ ದೇವಸ್ಥಾನಗಳಿವೆ. ಮರಾಟಿ ನಾಯ್ಕ ಸಮುದಾಯದವರು ವಾಸವಿರುವ ಪ್ರದೇಶದಿಂದ ಪ್ರದೇಶಕ್ಕೆ ದೇವತೆಯ ಹೆಸರುಗಳು ಬೇರೆ ಬೇರೆಯಾಗಿರುತ್ತದೆ. ಅವುಗಳ ಸಮೀಕ್ಷೆ ಮಾಡಿ ಈ ಕೆಳಗಿನಂತೆ ನೀಡಿರುವೆನು.

ಉಡುಪಿ ಜಿಲ್ಲೆಯಲ್ಲಿ ಮರಾಟಿ ನಾಯ್ಕ ಸಮುದಾಯದವರ ಗದ್ದುಗೆ ದೇವಸ್ಥಾನಗಳು (ಶಕ್ತಿ ಆರಾಧನೆಯ ಶ್ರದ್ಧಾ ಕೇಂದ್ರಗಳು)

ಉಡುಪಿ ತಾಲೂಕು

೧. ಶ್ರೀ ಮಹಿಷಮರ್ದಿನಿ ಗದ್ದುಗೆ ಅಮ್ಮನವರ ದೇವಸ್ಥಾನ, ಇಂದ್ರಾಳಿ, ಉಡುಪಿ

೨. ಶ್ರೀ ದುರ್ಗಾಪರಮೇಶ್ವರಿ ಗದ್ದುಗೆ ಅಮ್ಮನವರು, ಬೈರವ ಬೈರವಿ ದೇವಸ್ಥಾನ, ಮೂಡುಸಗ್ರಿ, ಉಡುಪಿ

೩. ಶ್ರೀ ಮೂಲ ಗದ್ದುಗೆ ಅಮ್ಮನವರ ದೇವಸ್ಥಾನ, ಸಗ್ರಿ, ಉಡುಪಿ

೪. ಶ್ರೀ ದುರ್ಗಾಪರಮೇಶ್ವರಿ ಅಮ್ಮನವರ ಗದ್ದುಗೆ ದೇವಸ್ಥಾನ ಜಡ್ಡು, ದೇವಿ ನಗರ, ಪರ್ಕಳ, ಉಡುಪಿ

೫. ಶ್ರೀ ದುರ್ಗಾದೇವಿ ದೇವಸ್ಥಾನ ಗದ್ದುಗೆ, ಕಂಚಿನ ಬೈಲು, ಉಡುಪಿ

೬. ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನ, ಬೊಮ್ಮಾರಬೆಟ್ಟು, ಹಿರಿಯಡಕ, ಉಡುಪಿ

೭. ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನ, ದೇವರಗುಂಡ, ಹಿರಿಯಡಕ, ಉಡುಪಿ

೮. ಶ್ರೀ ದುರ್ಗಾ ಅಂಭಾಭವಾನಿ ದೇವಸ್ಥಾನ, ಕುದಿ ಕೊಂಡಾಡಿ, ಉಡುಪಿ

೯. ಶ್ರೀ ದುರ್ಗಾಂಬಾ ಭವಾನಿ ದೇವಸ್ಥಾನ, ಆತ್ರಾಡಿ, ಉಡುಪಿ

೧೦. ಶ್ರೀ ಅಂಬಾ ಭವಾನಿ ದೇವಸ್ಥಾನ, ಕೆಳಕಬ್ಯಾಡಿ, ಪರ್ಕಳ, ಉಡುಪಿ

೧೧. ಶ್ರೀ ಸಿಂಹವಾಹಿನಿ ದುರ್ಗಾಪರಮೇಶ್ವರಿ ಗದ್ದುಗೆ ಅಮ್ಮನವರ ದೇವಸ್ಥಾನ, ಶ್ರೀ ಕ್ಷೇತ್ರ ಗಂಪ, ಹಿರಿಯಡಕ

೧೨. ಶ್ರೀ ಮಹಿಷಮರ್ದಿನಿ ಗದ್ದುಗೆ ಅಮ್ಮನವರ ದೇವಸ್ಥಾನ, ಪಡುಬೆಟ್ಟು, ಚಾಂತಾರು, ಬ್ರಹ್ಮಾವರ

೧೩. ಶ್ರೀ ದುರ್ಗಾಪರಮೇಶ್ವರಿ ಗದ್ದುಗೆ ಅಮ್ಮನವರ ದೇವಸ್ಥಾನ, ಮೂಡುಬೆಟ್ಟು, ಚಾಂತಾರು, ಬ್ರಹ್ಮಾವರ

೧೪. ಶ್ರೀ ದುರ್ಗಾಪರಮೇಶ್ವರಿ ಜೋಡು ಗದ್ದಿಗೆ ಅಮ್ಮನವರ ದೇವಸ್ಥಾನ, ಚೇರ್ಕಾಡಿ, ಬ್ರಹ್ಮಾವರ

೧೫. ಶ್ರೀ ದುರ್ಗಾಪರಮೇಶ್ವರಿ ಗದ್ದುಗೆ ಅಮ್ಮನವರ ದೇವಸ್ಥಾನ, ಆಲುಂಜೆ, ಆರೂರು, ಬ್ರಹ್ಮಾವರ

೧೬. ಶ್ರೀ ದುರ್ಗಾಪರಮೇಶ್ವರಿ ಜೋಡು ಗದ್ದುಗೆ ಅಮ್ಮನವರ ದೇವಸ್ಥಾನ, ನೂಜಿ, ಹಲುವಳ್ಳಿ, ಬ್ರಹ್ಮಾವರ

೧೭. ಗದ್ದುಗೆ ಶ್ರೀ ದುರ್ಗಾಪರಮೇಶ್ವರಿ ಅಮ್ಮನವರ ದೇವಸ್ಥಾನ, ತುರುಕರುಬೆಟ್ಟು, ಕರ್ಜೆ, ಬ್ರಹ್ಮಾವರ

೧೮. ಶ್ರೀ ದುರ್ಗಾಪರಮೇಶ್ವರಿ ಅಮ್ಮನವರ ದೇವಸ್ಥಾನ, ಜೋಡುಗದ್ದಿಗೆ, ತಡಾಲು ಕರ್ಜೆ, ಬ್ರಹ್ಮಾವರ

೧೯. ಶ್ರೀ ದುರ್ಗಾಪರಮೇಶ್ವರಿ ಗದ್ದುಗೆ ಅಮ್ಮನವರ ದೇವಸ್ಥಾನ, "ವಿಜಯವನ", ಅಮುಜಿ, ಕೆಂಜೂರು, ಬ್ರಹ್ಮಾವರ

೨೦. ಶ್ರೀ ಮಹಾಮ್ಮಾಯಿ ಗದ್ದುಗೆ ಅಮ್ಮನವರ ದೇವಸ್ಥಾನ, ಕುಂಜದ ಕಟ್ಟೆ, ಪೆರ್ಡೂರು

೨೧. ಶ್ರೀ ದುರ್ಗಾಪರಮೇಶ್ವರಿ ಗದ್ದುಗೆ ಅಮ್ಮನವರ ದೇವಸ್ಥಾನ, ಕುಕ್ಕೆಹಳ್ಳಿ

೨೨. ಶ್ರೀ ದುರ್ಗಾಂಬಾ ಗದ್ದುಗೆ ಅಮ್ಮನವರ ದೇವಸ್ಥಾನ, ಕೂಡ್ಲಿ, ಬಾರಕೂರು

೨೩. ಶ್ರೀ ದುರ್ಗಾಪರಮೇಶ್ವರಿ ಗದ್ದುಗೆ ಮಾರಿಯಮ್ಮ ದೇವಸ್ಥಾನ, ಮಸ್ಕಿಬೈಲು, ಬಾರಕೂರು

ಕಾರ್ಕಳ ಜಿಲ್ಲೆ

೧. ಶ್ರೀ ಗದ್ದುಗೆ ಅಮ್ಮನವರ ದೇವಾಲಯ, ಬ್ಯಾಣ, ಶಿವಪುರ, ಹೆಬ್ರಿ

೨. ಶ್ರೀ ದುರ್ಗಾಪರಮೇಶ್ವರಿ ಗದ್ದುಗೆ ಅಮ್ಮನವರು, ಕುಬ್ರಿ, ಶಿವಪುರ, ಹೆಬ್ರಿ

೩. ಶ್ರೀ ದುರ್ಗಾಪರಮೇಶ್ವರಿ ಗದ್ದುಗೆ ಅಮ್ಮನವರು ಬಚ್ಚಪ್ಪು, ಹೆಬ್ರಿ

೪. ಶ್ರೀ ದುರ್ಗಾಪರಮೇಶ್ವರಿ ಗದ್ದುಗೆ ಅಮ್ಮನವರು ಹೊಸ ಮದಗ, ಮಂಡಾಡಿಜಡ್ಡು, ಚಾರ ಹೆಬ್ರಿ

೫. ಶ್ರೀ ಲಕ್ಷ್ಮೀ ಅಂಬಾ ಭವಾನಿ ದೇವಸ್ಥಾನ, ದುರ್ಗಾ ಕಾರ್ಕಳ

೬. ಶ್ರೀ ಮಹಾಮ್ಮಾಯಿ ಗದ್ದುಗೆ, ಕುಕ್ಕುಜೆ ದೊಂಡರಂಗಡಿ, ಕಾರ್ಕಳ

೭. ಶ್ರೀ ದುರ್ಗಾಪರಮೇಶ್ವರಿ ಗದ್ದುಗೆ ಅಮ್ಮನವರ ದೇವಸ್ಥಾನ, ಕೈರಬೆಟ್ಟು, ಕಾರ್ಕಳ

೮. ಶ್ರೀ ಗದ್ದುಗೆ ಅಮ್ಮನವರ ದೇವಸ್ಥಾನ, ಮುನಿಯಾಲು, ಕಾರ್ಕಳ

೯. ಶ್ರೀ ಕ್ಷೇತ್ರ ಮಾಣಿಬೆಟ್ಟು, ಶ್ರೀ ಮಹಾಮ್ಮಾಯಿ ದೇವಸ್ಥಾನ, ಶಿರ್ಲಾಲು, ಕಾರ್ಕಳ

೧೦. ಶ್ರೀ ದುರ್ಗಾದೇವಿ ದೇವಸ್ಥಾನ, ಪಾಲುಮನೆ, ಸೂಡಾ, ಕಾರ್ಕಳ

೧೧. ಶ್ರೀ ಮಹಾಮ್ಮಾಯಿ ಗದ್ದುಗೆ ಪಾಲ್‌ಬೆಟ್ಟು, ಎಳ್ಳಾರೆ, ಕಾರ್ಕಳ

೧೨. ಶ್ರೀ ದುರ್ಗಾಪರಮೇಶ್ವರಿ ಗದ್ದುಗೆ ಅಮ್ಮ ಚೆನ್ನಿಬೆಟ್ಟು, ಕಡ್ತಲ, ಕಾರ್ಕಳ

೧೩. ಶ್ರೀ ದುರ್ಗಾಪರಮೇಶ್ವರಿ ಗದ್ದುಗೆ ಅಮ್ಮನವರು ಕುಕ್ಕುಜೆ ಹೊಸಮನೆ, ದೊಂಡರಂಗಡಿ, ಕಾರ್ಕಳ

ಕುಂದಾಪುರ ತಾಲೂಕು

೧. ಶ್ರೀ ದುರ್ಗಾಪರಮೇಶ್ವರಿ ಗದ್ದುಗೆ, ೪೧ನೇ ಶಿರೂರು ಕೊಡಸರ ಬೆಟ್ಟು

೨. ಶ್ರೀ ಗದ್ದುಗೆ ಅಮ್ಮನವರ ದೇವಸ್ಥಾನ, ಗೋರ್ಕೊಡು ರಟ್ಟಾಡಿ, ಕುಂದಾಪುರ

೩. ಶ್ರೀ ದುರ್ಗಾಪರಮೇಶ್ವರಿ ಗದ್ದುಗೆ ಅಮ್ಮನವರ ದೇವಸ್ಥಾನ, ಭಂಡೀಮರದ ಕಟ್ಟೆ, ರಟ್ಟಾಡಿ, ಕುಂದಾಪುರ

೪. ಶ್ರೀ ನವದುರ್ಗಿ ಗದ್ದುಗೆ ಅಮ್ಮನವರು, ಕೊಂತಾಲಿ, ಜೆಡ್ಡಿನಗದ್ದೆ, ಅಮಾಸೆಬೈಲು, ಕುಂದಾಪುರ

೫. ಶ್ರೀ ಅಂಬಾ ಭವಾನಿ ಗದ್ದುಗೆ ಅಮ್ಮನವರ ದೇವಸ್ಥಾನ, ಮರೂರು, ಬೆಳ್ವೆ, ಕುಂದಾಪುರ

೬. ಶ್ರೀ ಗದ್ದುಗೆ ಅಮ್ಮನವರ ದೇವಸ್ಥಾನ, ಸೋಣೆ, ಸಿದ್ಧಾಪುರ, ಕುಂದಾಪುರ

೬.೯. ಭೈರವ ಆರಾಧನೆ

ಭೈರವ ಎಂಬ ಪದವು ಭೃ (Bhru) ಎಂಬ ಪದದಿಂದ ಹುಟ್ಟಿಕೊಂಡಿದೆ. ಇದರ ಅರ್ಥ ಭಯ (fear) 'ಭೈರವ' ಎಂದರೆ "ಭಯಭೀತ / ಭಯಾನಕ ರೂಪ" ಭೈರವನು ಭಯವನ್ನು ನಾಶ ಮಾಡುವವನು, ಭಯವನ್ನು ನೀಡುವವನು ಹಾಗೂ ಭಯವನ್ನು ಮೀರಿದವನು ಎಂದು ಕರೆಯುತ್ತಾರೆ. ಈತನು ತನ್ನ ಭಕ್ತರನ್ನು ಶತ್ರುಗಳ ಭಾದೆಯಿಂದ ರಕ್ಷಿಸುತ್ತಾನೆ ಮತ್ತು ಮಾನವನ ದುರಾಸೆ, ಕಾಮ ಮತ್ತು ಕೋಪಗಳಿಂದ ರಕ್ಷಣೆ ನೀಡುತ್ತಾನೆ. ಶತ್ರು, ಕಾಮ, ದುರಾಸೆ, ಕೋಪಗಳು ಮಾನವನ ಬೆಳವಣಿಗೆಗೆ ಅಪಾಯಕಾರಿ. ಏಕೆಂದರೆ ಇವುಗಳ ಆತನನ್ನು ಅಧ್ಯಾತ್ಮದತ್ತ ಅಥವಾ ದೇವರನ್ನು ಹುಡುಕಲು ಮನುಷ್ಯರಿಗೆ ಅವಕಾಶವನ್ನು ನೀಡುವುದಿಲ್ಲ.

ಇನ್ನೊಂದು ಅರ್ಥದಲ್ಲಿ ಹೇಳುವುದಾದರೆ 'ಭ' ಎಂದರೆ ಸೃಷ್ಟಿ, 'ರಾ' ಎಂದರೆ ಪೋಷಣೆ 'ವ' ಎಂದರೆ ನಾಶ. ಒಟ್ಟಿನಲ್ಲಿ ಭೈರವ ಎಂದರೆ ಸೃಷ್ಟಿ, ಸ್ಥಿತಿ, ಲಯಗಳ ಸರ್ವೋಚ್ಛವಾದ ಅಧಿಪತಿ ಎಂದು ಜನಪದರು ಕರೆಯುತ್ತಾರೆ. ಆದ್ದರಿಂದ ಈತನು ಶಿವನ ಒಂದು ಅವತಾರ ರೂಪದ ಭೂತ. (A Manifestation of God Shiva in the form of Bhutha) ಎಂದು ಅರ್ಥವನ್ನು ಹೇಳಿದ್ದಾರೆ. ಕರಾವಳಿ ಪ್ರದೇಶದಲ್ಲಿ ತುಳುವರು ಆರಾಧಿಸುವ ದೈವವಾಗಿ ಭೈರವನು ಕಂಡುಬರುತ್ತಾನೆ. ಆದ್ದರಿಂದ ತುಳು ಜನಪದರು ಭೈರವನ ಆರಾಧನೆಯ ಸಂದರ್ಭದಲ್ಲಿ "ಭೈರವಗ್ ಕರಿಪುನಿ" ಅಂದರೆ ಭೈರವ ಎಂಬ ಭೂತಕ್ಕೆ ಬಲಿಯನ್ನು ಕೊಡುವ ಆಚರಣೆ(A ritual of offering food to Bhairava) ಎಂದು ಹೇಳಲಾಗಿದೆ.

ಶಿವನ ಆರಾಧನೆಯು ಬಹಳ ಪ್ರಾಚೀನ ಕಾಲದಿಂದಲೂ ನಡೆದುಕೊಂಡು ಬಂದಿದೆ. ವೇದಪೂರ್ವ ಯುಗದ ಸಿಂಧೂ ನದಿ ಕಣಿವೆಯ ನಾಗರಿಕತೆಯ ಕಾಲದಲ್ಲಿಯೇ ಶಿವೋಪಾಸನೆ ಇದ್ದಿತೆಂದು ಇತಿಹಾಸಕಾರರು ಅಭಿಪ್ರಾಯ ಪಟ್ಟಿರುತ್ತಾರೆ. ನೇಪಾಳದ ಕಠ್ಮಂಡು ಮತ್ತು ಭಾರತದಲ್ಲಿ ಜನಪದರ ನಂಬಿಕೆ. ಭೈರವನು ಒಬ್ಬ ಗ್ರಾಮದೇವತೆ, ಕ್ಷೇತ್ರ ರಕ್ಷಕ, ಸಮೃದ್ಧಿಯ ಪ್ರತೀಕ ಹಾಗೂ ಶಿವನ ಒಂದು ಅಂಶ ಎಂಬುದಾಗಿ ಪ್ರಚಲಿತದಲ್ಲಿರುವ ಜನಪದರ ನಂಬಿಕೆ. ಭೈರವನು ರಾಕ್ಷಸ ಸ್ವಭಾವದವ. ಆತನು ಹುಟ್ಟಿದ ತಕ್ಷಣ ದೇವತೆಗಳನ್ನೆಲ್ಲಾ ಸೃಷ್ಟಿಕರ್ತನಾದ ಶಿವನ ಅನುಮತಿ ಇಲ್ಲದೆ ನಿಗ್ರಹಿಸಿದ. ಇದರಿಂದಾಗಿ ಶಿವನ ಕೋಪ ಮತ್ತು ಶಾಪಕ್ಕೆ ಗುರಿಯಾಗಿ ಆತನನ್ನು ಒಂದು ಮರವಾಗಿ ಪರಿವರ್ತಿಸಿದನು. ಆ ನಂತರ ಶಿವನು ಶಾಂತ ಚಿತ್ತನಾಗಿ ಯಾರು ಈ ಭೈರವನನ್ನು ಪೂಜಿಸುತ್ತಾರೋ ಅವರು ಯತೇಚ್ಛವಾಗಿ ಪುರಸ್ಕೃತರಾಗುತ್ತಾರೆ ಎಂದು ತಿಳಿಸಿದನು. ಶಿವನ ಕೋಪಕ್ಕೆ ತುತ್ತಾಗಿ ಮರವಾಗಿದ್ದರಿಂದ ಆ ಮರಕ್ಕೆ 'ಧಮನಕ' (ತಾತಿರಿ) ಮರ ಎಂದು ಹೆಸರಾಗಿದೆ. ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆ ಮತ್ತು ಕೇರಳದ ಕಾಸರಗೋಡು ತಾಲೂಕಿನಲ್ಲಿ ಭೈರವನ ಆರಾಧನೆ ಹೆಚ್ಚಾಗಿ ಕಂಡುಬರುತ್ತವೆ. ಭೈರವನ ಬನದಲ್ಲಿ ಹೆಚ್ಚಾಗಿ ಕಾಸರಕ ಮತ್ತು ಹಾಲೆ ಮರಗಳು ಕಂಡುಬರುತ್ತವೆ. ಕಾಸರಕನ ಮತ್ತು (ಪಾಲೇಯ) ಹಾಲೆಯ ಮರಕ್ಕೆ ಕರಾವಳಿ ಪ್ರದೇಶದಲ್ಲಿ ತುಳು ಜನಪದ ಸಂಸ್ಕೃತಿಯಲ್ಲಿ ವಿಶಿಷ್ಟವಾದ ಸ್ಥಾನಮಾನಗಳಿವೆ. 'ಹಾಲೆ' ಮರದಲ್ಲಿ ಪ್ರೇತಗಳು ವಾಸಿಸುತ್ತವೆ ಮತ್ತು ಈ ಮರವು ಹಾಲನ್ನು ಒಸರುವ ವೃಕ್ಷವಾಗಿದ್ದರಿಂದ ಇದು ಸಮೃದ್ಧಿಯ ಸೂಚಕವಾಗಿದೆ. ಅದೇ ರೀತಿ ಕಾಸರಕನ ಮರವು ದುಷ್ಟಶಕ್ತಿಗಳನ್ನು ನಿಗ್ರಹಿಸುವ ಮರ ಎಂಬುದಾಗಿ ಜನಪದರಲ್ಲಿ ನಂಬಿಕೆ ಇದೆ. ಆದ್ದರಿಂದಲೇ ಭೈರವನೂ ಕೂಡಾ ದುಷ್ಟ ಶಕ್ತಿಗಳ ನಿಗ್ರಹ ಮತ್ತು ಸಂಮೃದ್ಧಿಯ ಪರಿಕಲ್ಪನೆಯ ಆಶಯವನ್ನು ಪ್ರಕಟಿಸುವ ಒಂದು ದೈವ ಎಂದು ಹೇಳಬಹುದು.

ಡಾ. ಚಿದಾನಂದಮೂರ್ತಿಯವರು 'ಕರ್ನಾಟಕದಲ್ಲಿ ಭೈರವನ ಆರಾಧನೆಯು ಬಹುಶಃ ಕಾಪಾಲಿಕರಿಂದ ಬಂದಿರಬಹುದು ಎಂಬುದಾಗಿ ಅಭಿಪ್ರಾಯ ಪಡುತ್ತಾರೆ. ಶೈವ ಧರ್ಮದ ಒಂದು ಶಾಖೆ ವಾಮಾಚಾರ ಪದ್ಧತಿಯು ಕಾಪಾಲಿಕರದಾಗಿರುತ್ತದೆ ಎಂದು ಅಭಿಪ್ರಾಯ ಪಡುತ್ತಾರೆ. ೭ನೇ ಶತಮಾನದಲ್ಲಿ ಮಹಾರಾಷ್ಟ್ರದ ನಾಸಿಕ್ ಜಿಲ್ಲೆಯ 'ಕಾಪಾಲೇಶ್ವರ' ದೇವಸ್ಥಾನದಲ್ಲಿ ಕಾಪಾಲಿಕರಿದ್ದು, ಕೃಷ್ಣ ಮಿಶ್ರನ ಪ್ರಭೋದ ಚಂದ್ರೋದಯದ ಕಾಪಾಲಿಕರು ಮಹಾಭೈರವನ ಆರಾಧಕರಾಗಿದ್ದರು. ಆಗ ತಾನೇ ಕಡಿದ ನರಮಂಡಲಗಳ ರಕ್ತದಿಂದ ಭೈರವನನ್ನು ತೃಪ್ತಿ ಪಡಿಸುತ್ತಿದ್ದರು. ಇದರಿಂದ ವ್ಯಕ್ತವಾಗುವುದೇನೆಂದರೆ ಭೈರವನಿಗೆ ಬಲಿ ಪದ್ಧತಿ ಮೂಲಕ ಪೂಜೆ ಸಲ್ಲಿಸುತ್ತಿರುವ ಕ್ರಮ ಕರಾವಳಿಯ ಪ್ರದೇಶದಲ್ಲಿ ಸ್ಪಷ್ಟವಾಗುವುದಲ್ಲದೆ ತುಳುನಾಡಿನ ಬಹುತೇಕ ಗ್ರಾಮಾಂತರ ಪ್ರದೇಶಗಳಲ್ಲಿ ಭೈರವನು ಜನಪದೀಯರ ದೈವವಾಗಿ ಕಂಡುಬರುತ್ತಾನೆ'.

ಭೂತಾರಾಧನೆಯ ರೂಪದಲ್ಲಿ ಭೈರವನ ಆರಾಧನೆ

ಡಾ. ಚಿನ್ನಪ್ಪ ಗೌಡ ಅವರ 'ಭೂತಾರಾಧನೆ ಜನಪದೀಯ ಅಧ್ಯಯನ' ಎಂಬ ಗ್ರಂಥದಲ್ಲಿ ಸುಮಾರು ೩೬೦ ಭೂತಗಳ ಹೆಸರುಗಳಿರುವುದನ್ನು ತಿಳಿಸಿರುವರು. ಡಾ. ವಾಮನ ನಂದಾವರ ಇವರು ಹೊಸದಾಗಿ ೧೩ ಭೂತಗಳ, ರಘುನಾಥ ಎಂ. ವರ್ಕಾಡಿಯವರ ಕಡಂಬಾರ ಮಲ್ರಾಯೆ ಕೃತಿಯಲ್ಲಿ ೪೦೭ ಭೂತಗಳ ಹೆಸರುಗಳನ್ನು ದಾಖಲಿಸಿದ್ದಾರೆ. ಹಾಗಾಗಿ ಅವುಗಳೆಲ್ಲ ಒಟ್ಟಿಗೆ ಸೇರಿದಾಗ ಒಟ್ಟು ೪೧೦ ಭೂತಗಳ ಲೆಕ್ಕ ಸಿಗುತ್ತದೆ. ತುಳುನಾಡಿನ ಜನಪದರು ಸಾವಿರದೊಂದು (ಸಾರತ್ತೊಂಜಿ) ಭೂತಗಳನ್ನು ನಂಬಿಕೊಂಡು ಬಂದಿರುವ ಪರಂಪರೆಯವರು. ಡಾ. ಲಕ್ಷ್ಮೀ ಜೆ. ಪ್ರಸಾದ್‌ರವರು ತಮ್ಮ ಕೃತಿ ತುಳುನಾಡಿನ ನಾಗಬ್ರಹ್ಮ ಮತ್ತು ಕಂಬಳದಲ್ಲಿ ೧೦೩ ಇತರೆ ಭೂತಗಳ ಹೆಸರುಗಳನ್ನು ಸೇರಿಸಿರುತ್ತಾರೆ. ಅಧ್ಯಯನ ಮತ್ತು ಸಂಶೋಧನೆಗಳಿಂದಾಗಿ ಭೂತಗಳ ಹೆಸರುಗಳು ಮತ್ತೆ ಬೆಳಕಿಗೆ ಬಂದಿರುತ್ತವೆ. ಈಗ ಒಟ್ಟಿನಲ್ಲಿ ೫೪೨ ಭೂತಗಳ ಅಸ್ತಿತ್ವದಲ್ಲಿವೆ ಎಂದು ಕಂಡುಬರುತ್ತದೆ. ಅದರಲ್ಲಿ ಭೈರವ ಭೂತವು ಕೂಡಾ ಒಂದು. ಭೈರವನನ್ನು ಜನಪದರ ದೇವತೆ ಎಂದೂ ಮದ್ಯ ಮಾಂಸಾಗಳಿಂದ ಆರಾಧನೆಗೊಳ್ಳುವ ದೈವವೆಂದು ತಿಳಿದು ಬರುತ್ತದೆ. ತುಳುನಾಡಿನಲ್ಲಿ ಭೂತಾರಾಧನೆಯ ರೂಪದಲ್ಲಿ ಭೈರವನ ಆರಾಧನೆ ನಡೆಯುತ್ತಿರುವುದು ವಿಶೇಷ.

"ಮಂಗಳೂರು ನಗರ ಭಾಗದಲ್ಲಿ ಕದ್ರಿಯಲ್ಲಿ ಮಂಜುನಾಥ ದೇವಾಲಯದ ಸಮೀಪ ನಾಥ ಸಂಪ್ರದಾಯದ ಜೋಗಿ ಮಠವಿದೆ. ಜೋಗಿ ಸಮುದಾಯದಲ್ಲಿ ಅನೇಕ ಉಪವರ್ಗಗಳಿವೆ. ಡಾ. ಪುರುಷೋತ್ತಮ ಬಿಳಿಮಲೆಯವರು ಸುಮಾರು ೨೦ ಜೋಗಿ ಸಮುದಾಯದ ಪ್ರಭೇದಗಳನ್ನು ಗುರುತಿಸಿ ಪಟ್ಟಿ ಮಾಡಿದ್ದಾರೆ". ಇವರಲ್ಲಿ ಮರಾಟಿ ಜೋಗಿ ಒಂದು ಉಪ ಪಂಗಡವಾಗಿದೆ. ಜೋಗಿ ಸಮುದಾಯದ ಪ್ರಮುಖವಾದ ಆರಾಧ್ಯ ದೈವ ಕಾಳ ಭೈರವ. ನಾಥ ಸಂಪ್ರದಾಯದವರ ಆರಾಧ್ಯ ದೈವ ಕಾಳ ಭೈರವ ಶಿವನನ್ನು ಕಾಳ ಭೈರವನೆಂದು ಆರಾಧಿಸುತ್ತಾರೆ. ಡಾ. ಲಕ್ಷ್ಮೀ ಜೆ. ಪ್ರಸಾದ್ ಅವರ ಕೃತಿಯಾದ ತುಳುನಾಡಿನ ನಾಗಬ್ರಹ್ಮ ಮತ್ತು ಕಂಬಳದಲ್ಲಿ ಭೈರವ ಪದವೇ ಕಾಲಾಂತರದಲ್ಲಿ "ಬ್ರಹ್ಮ" ಆಗಿರುವ ಸಾಧ್ಯತೆ ಇದೆ ಎಂಬುದಾಗಿ ಅಭಿಪ್ರಾಯ ಪಟ್ಟಿರುತ್ತಾರೆ"[೫೦].

ತುಳುನಾಡಿನಲ್ಲಿ ಕಾಳ ಭೈರವ ಎಂಬ ಭೂತಕ್ಕೆ ಆರಾಧನೆ ಕಂಡುಬಂದಿದೆ. ಈತನು ಈಶ್ವರನ ಹಣೆಯಲ್ಲಿ (ಮುಂಡ) ಜನಿಸಿದ ಕಾರಣ ಈತನನ್ನು 'ಮುಂಡದೇರ್ ಕಾಳ ಭೈರವ' ಎಂದು ತುಳು ಪಾಡ್ದನದಲ್ಲಿ ಹೇಳಲಾಗಿದೆ. ಈತನನ್ನೇ ಬಹುಶಃ 'ಗುಡ್ಡದಯ್ಯ, ಗುಡ್ಡಜ್ಜ, ಗುಡ್ಡದಜ್ಜ' ಎಂದೂ ಕರೆಯುತ್ತಾರೆ. ಸಾಮಾನ್ಯವಾಗಿ ನಾಗಾರಾಧನೆ ಇರುವಲ್ಲಿ ನಾಗಕಲ್ಲಿನ ಸಮೀಪದಲ್ಲಿಯೇ ಭೈರವನ ಕಲ್ಲು ಕೂಡಾ ಆರಾಧನೆಗೊಳ್ಳುತ್ತದೆ.

ತುಳು ಪಾಡ್ದನದಲ್ಲಿ ಭೈರವನ ಬಗ್ಗೆ ಮಾಹಿತಿ ಇಲ್ಲವಾದರೂ ನಾಲ್ವರು ಜೋಗಿಗಳ ಜೊತೆಗೆ ಬಂದುದಾಗಿ ತಿಳಿದುಬರುತ್ತದೆ. ಕಾಲಭೈರವ, ಮಾಂಡತ್ತಾಯ ಮುಂಡಿಪಡಿತ್ತಾಯ, ದೈವಗಳು ಒಂದೇ ದೈವದ ಬೇರೆ ಬೇರೆ ಹೆಸರುಗಳು ಎಂಬುದಾಗಿ ಡಾ. ಲಕ್ಷ್ಮೀಯವರು ಅಭಿಪ್ರಾಯ ಪಡುತ್ತಾರೆ. ಮುಂಡಿಪಡಿತ್ತಾಯ ಪಾಡ್ದನದಲ್ಲಿ ವೈದ್ಯನಾಥನೆಂಬವನು ಘಟ್ಟದಿಂದ ಕೆಳಗೆ ತುಳುನಾಡಿಗೆ ಇಳಿದು ಬರುತ್ತಾನೆ. ಅವನ ಜೊತೆಗೆ ಕಾಶಿಯಲ್ಲಿ ಕಾಲ ಭೈರವನೆಂದು ಪ್ರಸಿದ್ಧವಾಗಿದ್ದ ಮುಂಡಿಪಡಿತ್ತಾಯ ದೈವವು ಹಿಂಬಾಲಿಸಿ ಬಂತು ಎಂದು ಹೇಳಲಾಗಿದೆ. ಈ ಘಟನೆಯಲ್ಲಿ ವ್ಯಕ್ತವಾಗುವ ತಾತ್ವಿಕ ಅಂಶವೆಂದರೆ ನಾಥ ಸಂಪ್ರದಾಯವು ಹೊರಗಿನಿಂದ ಬಂದಿದ್ದು, ಹೊರಗಿನಿಂದ ಬಂದ ಕಾರಣಕ್ಕೂ

ಏನೋ ಕರಾವಳಿಯ ಭಾಗ ಒಳಗೊಂಡು ತುಳುನಾಡಿನಲ್ಲಿ ಕಾಳ ಭೈರವ ಬಹಳ ಪ್ರಸಿದ್ಧವಾದ ದೈವ. ಕರಾವಳಿಯ ಭಾಗವಾಗಿರುವ ಕೇರಳ ರಾಜ್ಯದ ಕಾಸರಗೋಡು ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಗ್ರಾಮಾಂತರ ಭಾಗವಾಗಿರುವ ಸುಳ್ಯ, ಪುತ್ತೂರು, ಬಂಟ್ವಾಳ, ಉಡುಪಿ ಜಿಲ್ಲೆಯ ಕಾರ್ಕಳ ಮತ್ತು ಉಡುಪಿ ತಾಲೂಕಿನ ಹೆಚ್ಚಿನ ಗ್ರಾಮಗಳಲ್ಲಿ ಭೈರವನಿಗೆ ಕೋಳಿ ಕಡಿದು ಆರಾಧನೆ ಮಾಡುವ ಪದ್ಧತಿ ಇದೆ. ಅಲ್ಲದೆ ಕಾರ್ಕಳ, ಗುರುಪುರ, ಮೂಲ್ಕಿ, ಕುಂದಾಪುರ ಮುಂತಾದ ಪ್ರದೇಶದಲ್ಲಿ ಭೈರವನ ಆರಾಧನೆ ಇದೆ.

ಭೈರವ, ಬ್ರಹ್ಮ ಮತ್ತು ಕ್ಷೇತ್ರಪಾಲ ಒಬ್ಬನೇ ಎಂದೂ ಜೈನ ಜಾನಪದ ಹಾಡೊಂದು ಹೇಳುತ್ತದೆ. ಬ್ರಹ್ಮ ಯಕ್ಷನ ಹಾಡಿನಲ್ಲಿ

"ಎಲ್ಲದ್ಯನ ಸ್ತವನಿಧಿ ಬ್ರಹ್ಮರಾಯ
ಪಂಚಭೈರವ ಕ್ಷೇತ್ರಪಾಲರಿಗಾರುತಿ ಬೆಳಗುವೆನೋ
ಗಾದದಂಡ ತ್ರಿಶೂಲ ಕೈಯಲ್ಲಿ ಹಿಡಿದವನು
ತೀರ್ಥಂಕರರಿಗೆ ರಕ್ಷಣೆ ಕೊಡುವವನು
ಭೂತಪಿಶಾಚಿಗಳಿಗೆ ಶಿಕ್ಷೆ ಕೊಡುವವನು
ಪಂಚತತ್ವವ ಪಂಚಭೈರವ ಕ್ಷೇತ್ರ ಪಾಲರಿಗೆ ಆರತಿ ಬೆಳಗುವೆನೋ"

ಎಂಬ ಬ್ರಹ್ಮ ಯಕ್ಷನ ಹಾಡಿನಲ್ಲಿ ಬ್ರಹ್ಮರಾಯ. ಭೈರವ, ಕ್ಷೇತ್ರ ಪಾಲರು ಒಂದೇ ದೈವ ಎಂದು ತಿಳಿದು ಬರುತ್ತದೆ.

೬.೧೦. ಮರಾಠಿಗರಲ್ಲಿ ಭೈರವ ಪೂಜೆ

ಮರಾಟಿಗರು ಭೈರವನ ಆರಾಧನೆಯನ್ನು ಮೂರು ಕಾಲಘಟ್ಟದಲ್ಲಿ ಆಚರಿಸುವುದು ಕಂಡುಬರುತ್ತದೆ.

೧. **ವಾರ್ಷಿಕ ಕಾಲಾವಧಿ ಪೂಜೆ:** ಪ್ರತಿವರ್ಷ ಗೊತ್ತುಪಡಿಸಿದ ದಿನದಂದು ಈ ಪೂಜೆಯನ್ನು ನೆರವೇರಿಸುತ್ತಾರೆ. ಈ ಸಂದರ್ಭದಲ್ಲಿ ಭೈರವನನ್ನು ಕಾಶಿ ಕಾಳ ಭೈರವ ರೂಪವನ್ನು ಆಹ್ವಾನಿಸಿ ಪೂಜಿಸುತ್ತಾರೆ.

೨. **ಮರಾಟಿಗರ ಮೂಲ ಕುಟುಂಬದಲ್ಲಿ ಆರಾಧನೆ:** ಮರಾಟಿ ನಾಯ್ಕರಲ್ಲಿ ಪ್ರತಿಯೊಂದು ಕುಟುಂಬಕ್ಕೂ ತಮ್ಮ ಮನೆಯಲ್ಲಿ ಆರಾಧ್ಯ ದೇವತೆಯಾಗಿರುವಂತಹ ಅಂಬಾ ಭವಾನಿ, ತುಲಜಾ ಭವಾನಿ ಇತ್ಯಾದಿ ದೇವಿಯ ಗೊಂದೋಳು ಪೂಜೆ ಮಾಡಿಸಬೇಕೆಂಬುದು ಮನದಾಸೆಯಾಗಿರುತ್ತದೆ. ಅವರ ಕುಟುಂಬದ ಮೂಲ ಮನೆಯ (ಮೂಲ ಕುಟುಂಬ / ತರವಾಡು) ಜಮೀನಿನಲ್ಲಿ ಭೈರವನ ಬನವಿರುತ್ತದೆ. ಭೈರವನ ಬನವಿರುವ ಮನೆಯಲ್ಲಿ ಬನದ ಪಕ್ಕ ಸ್ವಲ್ಪ ದೂರದಲ್ಲಿ ಎರಡು ಕಲ್ಲು ಹಾಕಿ ಭೈರವನನ್ನು ಆಹ್ವಾನಿಸಿ ಮದ್ಯ ಶೇಂದಿ ಮಾಂಸಾದಿಗಳನ್ನು ಅರ್ಪಿಸಿ ಭೈರವನನ್ನು ತೃಪ್ತಿ ಪಡಿಸುತ್ತಾರೆ. ನಂತರ ಆ ಕಲ್ಲನ್ನು ತೆಗೆದು ಮುಂದಿನ ಕ್ರಿಯೆಗಳನ್ನು ಮುಂದುವರೆಸುತ್ತಾರೆ. ಈ ಸಂದರ್ಭದಲ್ಲಿ ಮರಾಟಿಗಳು ಭೈರವನನ್ನು ಮೂಡುಕಾಳ ಭೈರವ ರೂಪದಲ್ಲಿ ಆರಾಧಿಸುತ್ತಾರೆ.

೩. **ಕಷ್ಟಕಾರ್ಪಣ್ಯಗಳನ್ನು ತುರ್ತು ಹೋಗಲಾಡಿಸುವ ಸಂದರ್ಭದಲ್ಲಿ ಅಗ್ನಿ ಭೈರವನ ರೂಪದಲ್ಲಿ ಆರಾಧನೆ:** ಮರಾಟಿ ನಾಯ್ಕರ ಯಾವುದೋ ಒಂದು ಕುಟುಂಬಕ್ಕೆ ದೈಹಿಕ, ಮಾನಸಿಕ ಸಮಸ್ಯೆಗಳು ಎದುರಾದಾಗ ಅಥವಾ ಅವರ ಜಾನುವಾರುಗಳಿಗೆ ತೊಂದರೆ ಆದಾಗ, ಕೃಷಿ ಬೆಳೆಗಳಿಗೆ ಅತಿವೃಷ್ಟಿ, ಅನಾವೃಷ್ಟಿಗಳು

ಎದುರಾದಾಗ ಮನೆಯ ಯಜಮಾನ ಪ್ರತಿ ಮಂಗಳವಾರ ಮತ್ತು ಶುಕ್ರವಾರ ಭೈರವನನ್ನು ಪ್ರಾರ್ಥಿಸುತ್ತಾನೆ. ಈ ಸಂದರ್ಭದಲ್ಲಿ ತೆಂಗಿನಕಾಯಿಯನ್ನು ಭೈರವನ ಬನದ ಕಲ್ಲಿನಲ್ಲಿಟ್ಟು ಪ್ರಾರ್ಥಿಸಿ ನಂತರ ಕಲ್ಲಿಗೆ ಒಡೆಯುತ್ತಾನೆ. ೧೮ ವಾರ ಈ ರೀತಿ ಭೈರವನನ್ನು ಭಜಿಸಿ ಪ್ರಾರ್ಥಿಸಿದರೆ ಕಷ್ಟವನ್ನು ಪರಿಹರಿಸುತ್ತಾನೆ ಎಂಬ ನಂಬಿಕೆ ಮರಾಟಿಗಳಲ್ಲಿ ಇದೆ. ಮತ್ತು ಕಷ್ಟವನ್ನು ನೀಡಿದಾತನಿಗೆ ಅಥವಾ ಕಷ್ಟದ ದಾರಿ ತೋರಿಸಿದವನನ್ನು ಶಿಕ್ಷೆಗೆ ಒಳಪಡಿಸಬೇಕೆಂದು ಭೈರವನಲ್ಲಿ ಪ್ರಾರ್ಥಿಸುತ್ತಾರೆ.

ಭೈರವನ ಪೂಜಾ ಸಂದರ್ಭದ ವಿಧಿ ನಿಷೇದಗಳು

ಭೈರವನ ಆಚರಣೆಯ ಸಂದರ್ಭದಲ್ಲಿ ಮರಾಟಿ ನಾಯ್ಕರು ಕೆಲವೊಂದು ವಿಧಿ ನಿಷೇಧಗಳನ್ನು ಇಂದಿಗೂ ಆಚರಿಸಿಕೊಂಡು ಬಂದಿರುವುದು ಕಂಡುಬರುತ್ತದೆ. ಕ್ಷೇತ್ರಕಾರ್ಯ ಸಂದರ್ಭದಲ್ಲಿ ತಿಳುವಳಿಕೆದಾರರು ಈ ಕೆಳಗಿನ ಮಾಹಿತಿಯನ್ನು ನೀಡಿರುವರು.

೧. ಭೈರವನ ಬನದ ಒಳಗೆ ಪುರುಷರಿಗೆ ಮಾತ್ರ ಪ್ರವೇಶವಿರುತ್ತದೆ. ಬನದ ಒಳಗೆ ಸ್ತ್ರೀಯರಿಗೆ ಪ್ರವೇಶ ನಿಷಿದ್ಧವಾಗಿರುತ್ತದೆ. ಮುಟ್ಟಿನ ಸಂದರ್ಭದಲ್ಲಂತೂ ಸ್ತ್ರೀಯರು ಬನದ ಹತ್ತಿರ ಸುಳಿಯುವಂತಿಲ್ಲ.

೨. ಭೈರವನ ಪೂಜೆಯಲ್ಲಿ ಸಮರ್ಪಿಸಲಾಗುತ್ತಿರುವ ಪ್ರಸಾದದ ಅಡುಗೆಯನ್ನು ಮರಾಟಿ ಜಾತಿಯ ಗಂಡಸರೇ ತಯಾರು ಮಾಡಬೇಕು.

೩. ಭೈರವನ ಬನದೊಳಗಿರುವ ಯಾವುದೇ ಗಿಡ, ಮರ, ಬಳ್ಳಿಗಳನ್ನು ಕಡಿಯುವಂತಿಲ್ಲ. ಒಂದು ವೇಳೆ ಕಡಿದರೆ ಆಪತ್ತು ಮತ್ತು ಕಷ್ಟಕಾರ್ಪಣ್ಯಗಳು ಕಟ್ಟಿಟ್ಟ ಬುತ್ತಿ ಎಂಬುದಾಗಿ ಹಿರಿಯ ಮರಾಟಿಗರ ನಂಬಿಕೆಯಾಗಿರುತ್ತದೆ.

೪. ಭೈರವನ ಬನದಲ್ಲಿ ಪೂಜೆಯಾದ ನಂತರ ಅಡುಗೆ ರೂಪದಲ್ಲಿದ್ದ ಪ್ರಸಾದವನ್ನು ಯಾವುದೇ ಕಾರಣಕ್ಕೂ ಮನೆಯೊಳಗೆ ತೆಗೆದುಕೊಂಡು ಹೋಗುವಂತಿಲ್ಲ. ಹೊರಗಡೆಯೇ ಅವುಗಳನ್ನು ತಿಂದು ಮುಗಿಸಬೇಕು.

ಒಟ್ಟಿನಲ್ಲಿ ಭೈರವ ಆರಾಧನೆಯನ್ನು ಗಮನಿಸಿದಾಗ ಭೈರವನೋರ್ವ ಜನಪದ ದೈವವಾಗಿ ಕಂಡು ಬರುತ್ತಾನೆ. ಆತನು ಶೈವಾರಾಧನೆಯ ಪ್ರಾಚೀನ ರೂಪ. ಅನಾದಿ ಕಾಲದಿಂದಲೂ ಹುತ್ತಗಳು, ಬೃಹತ್ ಮರಗಳು, ಕಲ್ಲುಗಳೆಲ್ಲ ದೈವ ದೇವರುಗಳ ಕಲ್ಪನೆಯ ಬೆಳವಣಿಗೆಗೆ ಕಾರಣಗಿದೆ. ಭೈರವನಿಗೆ ಆತನ ವಾಸಸ್ಥಾನವಾಗಿರುವ ಬನದಲ್ಲಿರುವ ಹಾಲು ಒಸರುವ ಮರಗಳಾದಂತಹ ಹಾಳೆಮರ ಮತ್ತು ಕಾಸರಿಕೆ ಮರಕ್ಕೆ ತನ್ನದೇ ಆದ ಮಹತ್ವ ಜನಪದ ಸಂಸ್ಕೃತಿಯಲ್ಲಿದೆ. ಭೈರವನು ಸಂಮೃದ್ಧಿ ಮತ್ತು ದುಷ್ಟಶಕ್ತಿಗಳನ್ನು ನಿಗ್ರಹಿಸುವ ಸಂಕೇತ. ಬಲೀಂದ್ರನು ರಾಜನಾಗಿದ್ದು, ಕೃಷಿಯ ರಕ್ಷಕ, ಭೈರವನು ಜಮೀನಿನ ರಕ್ಷಕ ಮತ್ತು ಶಿವ ಪಾರ್ವತಿಯ ಕ್ಷೇತ್ರಗಳ ಕ್ಷೇತ್ರಪಾಲಕ ಎಂಬುದೆ ಜನಪರ ನಂಬಿಕೆ. ಅಲ್ಲದೆ ಭೈರವನ ಆರಾಧನೆಯು ಕೃಷಿ ಸಂಸ್ಕೃತಿಯ ಒಂದು ಭಾಗವಾಗಿದೆ. ಪ್ರಕೃತಿಯನ್ನೊಳಗೊಂಡಿರುವ ಪ್ರಾಣಿ ಪಕ್ಷಿ ಮರಗಿಡ ಬಳ್ಳಿಗಳಲ್ಲಿ ಮಾನವನು ಒಂದು ರೀತಿಯಾದ ನಿಕಟ ಸಂಬಂಧವನ್ನು ಇಟ್ಟುಕೊಂಡು ತಾಂತ್ರಿಕ ಶಕ್ತಿಯನ್ನು ಒಲಿಸುವುದಕೋಸ್ಕರ ಪ್ರಾಣಿಗಳನ್ನು ಉಪಯೋಗಿಸಿರಬಹುದು ಎಂಬುದಾಗಿ ಬಹುತೇಕ ಸಂಶೋಧಕರ ಅಭಿಪ್ರಾಯವಾಗಿದೆ. ಪ್ರಾಣಿ ಪಕ್ಷಿಗಳನ್ನು ಸಾಕಿ, ಸಲಹಿ, ಪೂಜಿಸಿ ಬಲಿಕೊಟ್ಟು ಕೊಂದ ಪಾಪವನ್ನು ತಿಂದು ಪರಿಹಾರ ಎಂಬಂತೆ ಪ್ರಕೃತಿಗೆ ಸಮರ್ಪಿಸಿ ದುಷ್ಟಶಕ್ತಿಗಳನ್ನು ನಿಗ್ರಹಿಸಿ ಜೊತೆಗೆ ಉತ್ತಮವಾದ ಕೃಷಿಯ ಫಲವನ್ನು ಪಡೆಯುವುದರ ಮೂಲಕ ಮಾನವನ ಬದುಕನ್ನು ಹಸನಗೊಳಿಸುವುದೇ ಈ ಆಚರಣೆಯ ತಾತ್ವಿಕತೆಯಾಗಿದೆ.

೬.೧೧. ಭೈರವ ಮತ್ತು ಮಹಮ್ಮಾಯಿಯ ಆರಾಧನೆಗೆ ಸಂಬಂಧಿಸಿದ ಕಥೆಗಳು

ಕುಲ್ವಾಡಿ ಮರಾಟಿಗನಿಗೆ ಭೈರವ ಸಾಕ್ಷಾತ್ಕಾರಗೊಂಡಿರುವ ಕಥೆಯನ್ನು ತಿಳುವಳಿಕೆದಾರರು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ವ್ಯಕ್ತಪಡಿಸಿದ್ದಾರೆ. ಒಂದಾನೊಂದು ಕಾಲದಲ್ಲಿ ಪ್ರಕೃತಿಯ ಮಡಿಲಲ್ಲಿ ಆದಿವಾಸಿಗಳು ವಾಸಿಸುತ್ತಿರುವ ಕಾಡಂಚಿನ ಮಧ್ಯದಲ್ಲಿ ಒಬ್ಬ ಮರಾಟಿಗ ತನ್ನ ಸೊಂಟದಿಂದ ಕೆಳಗೆ ಎರಡೂ ಕಾಲುಗಳು ಸ್ವಾಧೀನವಿಲ್ಲದೆ ಬಳಲುತ್ತಿದ್ದನು. ಸೊಂಟದಿಂದ ಮೆಲ್ಭಾಗ ಗಟ್ಟಿಮುಟ್ಟಾಗಿತ್ತು, ನಡೆಯುವುದಕ್ಕೆ ಸಾಧ್ಯವಾಗದೆ ತೆವಳಿಕೊಂಡು ಹೋಗುತ್ತಿದ್ದ. ಇವನಿಗೆ ಹೆಂಡತಿ ಮತ್ತು ಮಕ್ಕಳಿಬ್ಬರಿದ್ದರು. ಈತನಿಗೆ ಬೇಟೆಯಾಡಿ ಪ್ರಾಣಿ ಪಕ್ಷಿಗಳನ್ನು ಹಿಡಿಯಲಿಕ್ಕೆ ಸಾಧ್ಯವಾಗುತ್ತಿರಲಿಲ್ಲ. ಮೀನು ಹಿಡಿಯುವುದಕ್ಕೆ ನದಿ ತೋಡುಗಳಿಗೆ ಹೋಗಲಿಕ್ಕೆ ಆಗುತ್ತಿರಲಿಲ್ಲ ಹಾಗಾಗಿ ಅವನು ಗುಡಿಸಲಿನ ಸುತ್ತ ಕೃಷಿ ಮಾಡಬೇಕೆಂದು ಆಲೋಚಿಸಿ ತೆವಳುತ್ತಾ ಹೋಗಿ ಮಣ್ಣನ್ನುಅಗೆದು ಭತ್ತ, ರಾಗಿ, ಜೋಳ ಅಲ್ಲದೆ ಗೆಣಸು, ಮೆಣಸು ಮತ್ತು ತರಕಾರಿಗಳನ್ನು ಬೆಳೆಸುತ್ತಿದ್ದ. ಫಸಲು ಚೆನ್ನಾಗಿ ಬಂದರು ಪ್ರಾಣಿಪಕ್ಷಿಗಳ ಹಾವಳಿಯಿಂದ ಇವನಿಗೆ ತಿನ್ನುವುದಕ್ಕೆ ಮಡದಿ ಮತ್ತು ಮಕ್ಕಳಿಗೆ ಸಾಕಾಗುತ್ತಿರಲಿಲ್ಲ. ಹಾಗಾಗಿ ಹೆಂಡತಿ ಮಕ್ಕಳು ಉಪವಾಸವಿದ್ದು ಅಳುತ್ತಿದ್ದರು, ನಿತ್ಯವು ಹತ್ತಿರದಲ್ಲಿದ್ದವರಲ್ಲಿ ಕೇಳುವುದು ಎಷ್ಟು ಸರಿ ಹಾಗಾಗಿ ಈ ಕುಳ್ಳಗಿನ ಮನುಷ್ಯ ದಿನಾ ಬೇಸರದಿಂದ ಏಕಾಂಗಿಯಾಗಿ ಅಳುತ್ತಿದ್ದ. ಈ ಜೀವನ ಸಾಕು ಇನ್ನು ಬದುಕಿ ಪ್ರಯೋಜನವಿಲ್ಲವೆಂದು ಯೋಚಿಸಿ ಒಂದು ದಿನ ಅತ್ಮಹತ್ಯೆಗೆ ಪ್ರಯತ್ನಿಸಿದ. ಅದರೆ ಕಾಲಿಲ್ಲದವನಿಗೆ ನೇಣು ಬಿಗಿದು ಸಾಯುವುದಕ್ಕೆ ಮರ ಹತ್ತಲೂ ಸಾಧ್ಯವಿಲ್ಲ ಹಾಗಾಗಿ ತೆವಳುತ್ತಾ ಮುಂದೆ ಸಾಗಿದಾಗ, ಆ ಗುಡ್ಡದಿಂದ ಕೆಳಗೆ ಒಂದು ಪ್ರಪಾತ ಕಾಣಿಸಿತು. ಮೇಲಿನಿಂದ ಜಲಧಾರೆ ಕೆಳಗೆ ಧುಮುಕುತ್ತಿತ್ತು. ಅಲ್ಲಿ ಕುಳಿತು ಯೋಚಿಸಿದ ಈಗಲೇ ಇಲ್ಲಿಂದ ಕೆಳಕ್ಕೆ ಧುಮುಕಿ ಪ್ರವಾಹದೊಂದಿಗೆ ಕೆಳಕ್ಕೆ ಬೀಳಬೇಕೆಂದು ಹಾರಿಯೇಬಿಟ್ಟ, ಆದರೆ ಆಚಾನಕ್ಕಾಗಿ ಕೆಳಗೆ ಬೀಳುವಷ್ಟರಲ್ಲಿ ಒಬ್ಬ ಅಜಾನುಬಾಹು ಮತ್ತು ಮಹಾ ತೇಜಸ್ವಿಯಾದ ವ್ಯಕ್ತಿಯ ಕೈಗಳಲ್ಲಿದ್ದ. ಆತನಿಗೆ ಅಶ್ಚರ್ಯ ವಿಸ್ಮಯ ಕುತೂಹಲದಿಂದ ಮಹಾತ್ಮನಲ್ಲಿ ಕೇಳಿದ ಯಾಕೆ ಸ್ವಾಮಿ ನನ್ನನ್ನು ಸಾಯುವುದಕ್ಕೂ ಬಿಡುವುದಿಲ್ಲ. ನನ್ನಂತಹ ನತದೃಷ್ಟರು ಬದುಕಿ ಯಾವ ಪ್ರಯೋಜನವಿಲ್ಲ. ಬದುಕುವುದಕ್ಕೂ ಆಗದ ಈ ವಿಕಲಚೇತನನನ್ನು ರಕ್ಷಣೆ ಮಾಡಿದ. ಉದ್ದೇಶವೇನೆಂದು ಕೇಳಿದಾಗ, ಆ ಮಹಾತ್ಮ ಹೀಗೆ ಹೇಳುತ್ತಾನೆ. ನಿನ್ನ ಏಳಿಗೆಗೆ ನಾನು ಸಹಾಯ ಮಾಡುತ್ತೇನೆ. ನಿನ್ನ ಕೃಷಿಯನ್ನು ಪ್ರಾಣಿ ಪಕ್ಷಿಗಳಿಂದ ರಕ್ಷಣೆ ಮಾಡುವುದಕ್ಕೆ ನಾನು ನಿನಗೊಂದು ಉಪಾಯ ಹೇಳುತ್ತೇನೆ. ನೀನು ನಿನ್ನ ಗುಡಿಸಲಿನ ಸುತ್ತ ಕೃಷಿ ಮಾಡಲಿಕ್ಕೆ ಪ್ರಾರಂಭಿಸು ಆಕೃಷಿ ಯಾವುದೇ ರೀತಿಯಲ್ಲಿ ನಷ್ಟವಾಗದಿರಲೀ ಎಂದು ನನ್ನನ್ನು ಪ್ರಾರ್ಥಿಸು. ಒಂದು ಭಾರಿ ಫಸಲು ನಿನಗೆ ನಷ್ಟವಾಗಿಲ್ಲವೆಂದು ಕಂಡು ಬಂದರೆ ಸಮತಟ್ಟವಾದ ಒಂದು ಜಾಗದಲ್ಲಿ ಕಾಸರಕನ ಮರದ ಬುಡದಲ್ಲಿ ಎರಡು ಕಪ್ಪುಕಲ್ಲನ್ನು ತಂದು ಹಾಕು. ಸುತ್ತ ಮುತ್ತಲಿದ್ದ ಬಲ್ಲೆಗಳನ್ನು ಕಡಿದು ನೀರು ಹಾಕಿ ಶುದ್ಧ ಮಾಡಿ ಇಡು. ಆ ಬಳಿಕ ಪಕ್ಕದಲ್ಲಿರುವ ತೊಡಿಗೆ ಹೋಗಿ ಒಂದು ಕಲ್ಲನ್ನು ತೆಗೆದು ಅದರ ಅಡಿಯಲ್ಲಿರುವ ಹತ್ತು ಕಾಲಿನ ಪ್ರಾಣಿ ಏಡಿಯನ್ನು ಹಿಡಿದು ತಂದು ಬೆಂಕಿಯಲ್ಲಿ ಸುಟ್ಟು ಮತ್ತು ಹುರುಳಿ ಕೊಡನ್ನು ಬೆಂಕಿಯಲ್ಲಿ ಸುಟ್ಟ ಬಳಿಕ ಕೊಡನ್ನು ಸುಲಿದು ಹುರುಳಿಯನ್ನು ಒಂದು ಗೆರಟೆಯಲ್ಲಿ ನೆನೆ ಹಾಕಿ ಇಡು. ಬೇರೊಂದು ಗೆರಟೆಯಲ್ಲಿ ಭತ್ತ ಹಾಕಿ ನೀನು ಯಾವುದಾದರೂ ಒಂದು ಎಣ್ಣೆಯನ್ನು ಹಾಕಿ ದೀಪ ಹಚ್ಚಿ ಕಲ್ಲಿನ ಬಲಭಾಗದಲ್ಲಿ ಇಡು. ಗುಡ್ಡದಲ್ಲಿ ದೊರಕುವ ಕೇಪಳ ಹೂವನ್ನು ದೀಪದ ಬುಡಕ್ಕೆ ಹಾಕಿ ಕೈ ಮುಗಿದ ಬಳಿಕ ಇನ್ನೊಂದು ಕಲ್ಲಿನ ಮೇಲೆ ಕೇಪಳ ಹೂವು ಹಾಕಿ ನೀನು ತಯಾರಿಸಿಟ್ಟ ನೆನೆಸಿದ ಹುರುಳಿ ಬೇಜವನ್ನು ಆ ಕಲ್ಲಿಗೆ ಸಮರ್ಪಣೆ ಮಾಡಿ ಕಲ್ಲಿನ

ಮೇಲೆ ಹಾಕು. ಆ ಬಳಿಕ ಏಡಿ ಮಾಂಸವನ್ನು ಮೊದಲಿನ ರೀತಿಯಲ್ಲಿಯೇ ಕಲ್ಲಿಗೆ ಸಮರ್ಪಿಸಿ ನೀನೆ ಗತಿ ನನ್ನನ್ನು ರಕ್ಷಿಸು ಎಂದು ಕೈಮುಗಿ. ಮುಂದೆ ನಿನಗೆ ಒಳಿತಾದಾಗ ಅನುಕೂಲವಾದಾಗ ತಾಳೆ ಮರದಿಂದ ತೆಗೆದ ಅಮೃತ (ಕಳ್ಳು/ಶೆಂದಿ) ಅನ್ನರೊಟ್ಟಿ ಕೋಳಿ ಪಕ್ಷಿಗಳ ರಕ್ತ ಮಾಂಸ ಬೇಯಿಸಿ ಇದೇ ಕಲ್ಲಿಗೆ ಸಮರ್ಪಣೆ ಮಾಡು. ಕಾಲಾಂತರದಲ್ಲಿ ನಿನ್ನ ಜಾತಿ ಭಾಂದವರನ್ನು ರಕ್ಷಿಸುವ ಭೈರವ ಎಂದೂ ಆರಾಧಿಸುತ್ತಾ ಬನ್ನಿ. ನಿಮ್ಮಿಂದ ಪರಿಹರಿಸಲಾಗದ ಕಷ್ಟ ಬಂದಾಗ ನೀವೆಲ್ಲ ಒಟ್ಟಾಗಿ ಸೇರಿ ನನ್ನನ್ನು ಪ್ರಾರ್ಥಿಸಿದಲ್ಲಿ ನಾನು ಸ್ವತಃ ಬಂದು ನಿಮ್ಮ ರಕ್ಷಣೆ ಮಾಡುತ್ತೇನೆ ಎಂದು ಹೇಳಿ ಅದೃಶ್ಯನಾದನು.

ಇಂದಿಗೂ ಮರಾಟಿ ನಾಯ್ಕರು ಭೈರವ ಆರಾಧನೆಯನ್ನು ತೋಟ ಅಥವಾ ಕಾಡಿನಲ್ಲಿರುವ ಹಾಲು ಬಸರುವ ಮರದ (ಹಾಳೆಮರು) ಬುಡದಲ್ಲಿ ಅಥವಾ ಕಾಸರಕನ ಮರದ ಬುಡದಲ್ಲಿ ಎರಡು ಕಪ್ಪು ಕಲ್ಲನ್ನು ಸ್ವಚ್ಛಗೊಳಿಸಿ ಭೈರವನ ಆರಾಧನೆ ಮಾಡುತ್ತಿರುವುದನ್ನು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಗಮನಿಸಿದ್ದೇನೆ.

• ಉಡುಪಿ ಜಿಲ್ಲೆಯಲ್ಲಿರುವ ಮರಾಟಿ ನಾಯ್ಕರು ಭೈರವನನ್ನು ಒಳಗಡೆ ಆರಾಧನೆ ಮಾಡುತ್ತಾರೆ. ಅದರೆ ದಕ್ಷಿಣ ಕನ್ನಡ ಮತ್ತು ಕಾಸರಗೊಡು ಜಿಲ್ಲೆಯಲ್ಲಿ ಭೈರವನನ್ನು ತೋಟದಲ್ಲಿ ಅಥವಾ ಮನೆಯ ಹೊರಗಡೆ ಆರಾಧಿಸುತ್ತಿರುವುದು ಕ್ಷೇತ್ರಕಾರ್ಯದಲ್ಲಿ ಅವಲೋಕಿಸಲಾಗಿದೆ.

• ಭೈರವಾರಾಧನೆಯ ಸಂದರ್ಭದಲ್ಲಿ ಗುಡ್ಡದಲ್ಲಿ ಬೆಳೆಯುತ್ತಿರುವ ಕೇಪಳ ಹೂವನ್ನು ಉಪಯೋಗಿಸುವುದು ಕಂಡುಬರುತ್ತದೆ.

• ಪ್ರತ್ಯಕ್ಷವಾಗಿ ಭೈರವನು ನುಡಿದ ಮಾತಿನಂತೆ ಏಡಿಯನ್ನು ಮಾಂಸದ ಬದಲು ಬಲ್ಯಾರು ಎಂಬ ಜಾತಿಯ ಮೀನನ್ನು ಉಪಯೋಗಿಸುತ್ತಾರೆ. ಜೊತೆಗೆ ಬೇಯಿಸಿದ ಹುರುಳಿಯನ್ನು ಭೈರವನ ಆರಾಧನೆಯಲ್ಲಿ ಸಮರ್ಪಿಸುತ್ತಾರೆ. ಭೈರವ ಆರಾಧನೆಯಲ್ಲಿ ತಾಳೆ ಮರ ಅಥವಾ ತೆಂಗಿನ ಮರದಿಂದ ತೆಗೆದ ಶೇಂದಿಯನ್ನು ಮತ್ತು ಮದ್ಯವನ್ನು ಉಪಯೋಗಿಸುವುದು ಕಂಡುಬಂದಿದೆ.

ತುಳಜಾ ಭವಾನಿಯ ಕಥೆ

ಮರಾಟಿ ನಾಯ್ಕರ ಮನೆತನಗಳ ಕುಲದೇವತೆಯಾದ ತುಳಜಾ ಭವಾನಿ ಆರಾಧ್ಯ ದೇವತೆಯಾಗಿದ್ದಾಳೆ. ತನ್ನ ಭಕ್ತರ ಕಲ್ಯಾಣಕ್ಕಾಗಿ ಸಾಕ್ಷಾತ್ ಪಾರ್ವತಿ ದೇವಿಯು ತುಳಜಾಭವಾನಿ ರೂಪದಲ್ಲಿ ಈ ಭೂಮಿಯಲ್ಲಿ ಅವತರಿಸಿದ್ದಾಳೆ. ದೇವಿಯ ಅವತಾರದ ಕುರಿತು ಮರಾಟಿ ನಾಯ್ಕರು ನೂರಾರು ವರ್ಷಗಳಿಂದ ಈ ರೀತಿಯಾಗಿ ಕಥೆ ಹೇಳುತ್ತಾರೆ. "ಕರ್ದಮ ಮುನಿಯ ಪತ್ನಿ ಅನುಭೂತಿಯು ತನ್ನ ಪತಿಯ ನಿಧನದ ನಂತರ ಸತಿ ಹೋಗುವ ನಿರ್ಧಾರಕ್ಕೆ ಮುಂದಾಗುತ್ತಾಳೆ. ಆದರೆ ಅತ್ಯಂತ ಚಿಕ್ಕ ವಯಸ್ಸಿನ ಮಗುವನ್ನು ಬಿಟ್ಟು ಹೋಗುವ ಧೈರ್ಯ ಬಾರದೇ ಮನಶಾಂತಿಗಾಗಿ ಮಂದಾಕಿನಿ ನದಿಯ ತೀರದಲ್ಲಿ ತಪಸ್ಸಿಗೆ ಅಣಿಯಾಗುತ್ತಾಳೆ ಆಗ 'ಕುಕರ'ನೆಂಬ ರಾಕ್ಷಸನು ಅವಳ ತಪಸ್ಸನ್ನು ಹಾಗೂ ಅವಳ ಪಾತಿವ್ರತ್ಯವನ್ನು ಭಗ್ನಗೊಳಿಸಲು ಮುಂದಾಗುತ್ತಾನೆ. ಆ ಸಂದರ್ಭದಲ್ಲಿ ಅನುಭೂತಿಯು ಪಾರ್ವತಿ ದೇವಿಯನ್ನು ಪ್ರಾರ್ಥಿಸುತ್ತಾಳೆ. ಅವಳ ಮೊರೆಯನ್ನು ಕೇಳಿದ ಆದಿಶಕ್ತಿ ಮಹಾಮ್ಮಾಯ ಅಷ್ಟ ಭುಜಗಳಿಂದ ತುಳಜಾ ಭವಾನಿಯ ರೂಪವನ್ನು ಧರಿಸಿ ದುಷ್ಟ ಕುಕರನನ್ನು ಸಂಹರಿಸಿದಳು. ಈ ಸಂಕಟದಿಂದ ಪರ್ವತದ ಮೇಲೆ ನೆಲೆ ನಿಂತಳು. ಈ ಸ್ಥಳವೇ ಮುಂದೆ ಶ್ರೀಕ್ಷೇತ್ರ ತುಳಜಾಪುರವೆಂದು ಪ್ರಸಿದ್ಧಿ ಪಡೆಯಿತು.

ಮರಾಟಿ ನಾಯ್ಕರು ಆದಿಶಕ್ತಿಯ ಆರಾಧಕರು ಹಾಗೆಯೇ ಆಕೆಯ ಭಂಟನಾದ ಕಾಳಭೈರವನ ಉಪಾಸಕರೂ ಹೌದು. ಆದಿಶಕ್ತಿಯು ಭಕ್ತರ ಭಕ್ತಿಗೆ ಮೆಚ್ಚಿ ಪ್ರಸನ್ನಳಾಗಿ ಮನಸ್ಸಿನ ಇಷ್ಟಾರ್ಥವನ್ನು ಈಡೇರಿಸುತ್ತಾಳೆ ಎಂಬ ಬಲವಾದ ನಂಬಿಕೆ ಮರಾಟಿಗರಲ್ಲಿದೆ. ಈ ಹಿನ್ನೆಲೆಯಲ್ಲಿ ದುಷ್ಟರ ನಿಗ್ರಹ ಶಿಷ್ಟರ ಪರಿಪಾಲನೆ ಮಾಡಿರುವ ಆದಿಶಕ್ತಿಯಕಾರಣೀಕದ ನೆನಪಿಗಾಗಿ ಗೊಂದೋಳು ಪೂಜೆಯನ್ನು ಆಚರಿಸುತ್ತಾ ಬಂದಿರುತ್ತಾರೆ. ಈ ಮಾಹಿತಿಯನ್ನು ರಮೇಶ ನಾಯ್ಕಚಾಂತರು ಬ್ರಹ್ಮಾವರ ಉಡುಪಿ ಜಿಲ್ಲೆ ಇವರು ನೀಡಿರುತ್ತಾರೆ.

ಕುಲ್ವಾಡಿ ಮರಾಟಿಗರಿಗೆ ಮಹಮ್ಮಾಯಿ ಪ್ರತ್ಯಕ್ಷವಾದ ಕಥೆ

ಗೊಂದೋಳು ಪೂಜೆಯ ಹಿನ್ನೆಲೆಗೆ ಸಂಬಂಧಿಸಿ ಇನ್ನೊಂದು ಜನಪದ ಕಥೆಯ ಸಾರಾಂಶ ಹೀಗಿದೆ. ಪ್ರಕೃತಿಯನ್ನೆ ನಂಬಿ ಬದುಕಿರುವ ಮರಾಟಿಗರಿಗೆ ಕಾಡೇ ಆಶ್ರಯ ಮತ್ತು ಅವರ ಪಾಲಿನ ದೇವರು. ಕೆಲವು ಮರಾಟಿಗರು ಕದಂಭ ವೃಕ್ಷವನ್ನು ತಮ್ಮ ದೇವರೆಂದು ಆ ಮರವನ್ನು ಪೂಜಿಸತೊಡಗಿದರು. ಮತ್ತೆ ಕೆಲವರು ದೊಡ್ಡ ಹುತ್ತಕ್ಕೆ ಹೂವನ್ನು ಹಾಕಿ ತಮ್ಮ ದೇವರೆಂದು ಪೂಜೆಸತೊಡಗಿದರು. ಮತ್ತೆ ಕೆಲವರು ದುಷ್ಟರಿಂದ ರಕ್ಷಣೆ ನೀಡುವ ಪಾದೇ ಮುಳ್ಳನ್ನು (ಪರಿಕೆ ಮುಳ್ಳು) ದೇವರೆಂದು ಪೂಜಿಸತೊಡಗಿದರು. ಮುಂದೆ ಅವರು ಪೂಜಿಸುತ್ತಿರುವ ಮರ, ಹುತ್ತ, ಆಮೆ, ಪಾರೆ ಮುಳ್ಳು, ಕದಂಬ ವೃಕ್ಷ ಅವರ ಮೂಲ ದೇವರೆಂದು ನಂಬಿದರು. ಮರಾಟಿಗರು ನಿತ್ಯ ಪ್ರಕೃತಿಯ ಆರಾಧನೆ ಮಾಡುತ್ತ ಹಾಗೂ ನ್ಯಾಯಯುತವಾಗಿ ಬದುಕುತ್ತಿದ್ದರು. ತಮ್ಮ ಸುತ್ತ ಮುತ್ತಲಿನ ಪರಿಸರದಲ್ಲಿ ಎಲ್ಲಿ ನೋಡಿದರು ಅತ್ಯಾಚಾರ, ಕೊಲೆ, ದರೋಡೆ ಅನಾಚಾರ ಮುಂತಾದವುಗಳು ನಡೆಯುತ್ತಿದ್ದವು. ಮಳೆ ಬೆಳೆ ಇಲ್ಲ. ಅಲ್ಲಲ್ಲಿ ಅಲ್ಪ ಸ್ವಲ್ಪ ಬೆಳೆದರೂ ಕಾಡು ಮೃಗಗಳ ಹಾವಳಿಂದ ನಾಶವಾಗುತ್ತಿತ್ತು. ಕಾಡಂಚಿನಲ್ಲಿ ವಾಸಿಸುತ್ತಿರುವ ಮರಾಟಿಗರಿಗೆ ಮೈ ಅಡಗಿಸುವ ಸಾಧನಗಳಿರಲಿಲ್ಲ. ಹೀಗೆ ಜೀವನವನ್ನು ಸಾಗಿಸುತ್ತಿದ್ದಾಗ ಅವರಿಗೆ ದೊಡ್ಡ ವಿಪತ್ತು ಎದುರಾಯಿತು. ಕಾಡಿನಲ್ಲೊಂದು ಭಯಂಕರವಾದ ಕೋರೆ ಹಲ್ಲಿನ ಹಂದಿಯೊಂದು ಕಾಣಿಸಿತು, ಅದು ಕೃಷಿ ನಾಶ ಮಾಡುವುದಲ್ಲದೆ ಮನುಷ್ಯರನ್ನೆ ಕೊಂದು ತಿನ್ನುತ್ತಿತ್ತು. ವನವಾಸಿಗಳು ವಾಸಿಸುತ್ತಿದ್ದ ಗುಡಿಸಲನ್ನೆ ನಾಶಮಾಡತೊಡಗಿತು. ವನವಾಸಿಗಳು ತಮ್ಮ ಆಯುಧಗಳಿಂದ ಆ ಹಂದಿಯನ್ನು ಕೊಲ್ಲಲ್ಲು ಸಾಧ್ಯವಾಗಲಿಲ್ಲ. ಬದಲಾಗಿ ಅನೇಕ ಜನರನ್ನು ಹಂದಿಯು ಬಲಿ ತೆಗೆದುಕೊಂಡಿತು. ಆ ವನವಾಸಿಗಳು ಗುಡ್ಡ ಪ್ರದೇಶದ ಎಲ್ಲಾ ಜನರು ಭಯಭೀಕರಾಗಿ ತಮಗೆ ಉಳಿಗಾಲವಿಲ್ಲವೆಂದು ಕಂಡು ಒಂದು ದಿನ ಗುಡ್ಡಗಾಡು ಜನರು ಗುರಿಕಾರರೊಂದಿಗೆ ಸಭೆ ಕರೆದರು. ಆ ಸಭೆಯಲ್ಲಿ ಎಲ್ಲಾ ಗುಡ್ಡಗಾಡು ಜನರು ಸೇರಿ ಮುಂದೆ ಬದುಕುವ ದಾರಿ ಏನು ಎನ್ನುವಾಗ ಅಲ್ಲಿದ್ದ ವಿಕಲಚೇತನ ಕುಲ್ವಾಡಿ (ಕುಲ್ಯಾಡಿ) ಮರಾಟಿ ಒಂದು ಅಭಿಪ್ರಾಯವನ್ನು ಮುಂದಿಡುತ್ತಾನೆ. ಈ ಹಿಂದೆ ನಾನು ಅತ್ಮಹತ್ಯೆಗೆ ಯತ್ನಿಸಿದಾಗ ನನ್ನನ್ನು ಕಾಪಾಡಿದ್ದು ಆ ಮಹಾತ್ಮನಾದ ಭೈರವವನು ನನಗೆ ಒಂದು ಮಾತನ್ನು ಹೇಳಿದ್ದು ನೆನಪಾಯಿತು. ನೀವೆಲ್ಲರೂ ಒಟ್ಟು ಸೇರಿ ಪ್ರಾರ್ಥಿಸಿದಲ್ಲಿ ನಾನು ಪ್ರತ್ಯಕ್ಷನಾಗಿ ನಿಮ್ಮ ಕಷ್ಟಗಳನ್ನು ಪರಿಹರಿಸುತ್ತೇನೆ ಎಂಬ ಮಾತನ್ನು ಹೇಳಿರುತ್ತಾನೆ. ಹಾಗಿರುವಾಗ ನಾವೆಲ್ಲರೂ ವಿಪತ್ತನ್ನು ಪರಿಹರಿಸಬೇಕು ಎಂದು ಪ್ರಾರ್ಥಿಸಿದರೆ. ಒದಗಿರುವ ವಿಪತ್ತನ್ನು ಖಂಡಿತಾ ಪರಿಹರಿಸುತ್ತಾನೆ ಎಂಬ ಸಲಹೆಯನ್ನು ನೀಡಿದ. ಮರುದಿನವೇ ಭೈರವನ ಆರಾಧನೆಯನ್ನು ಭಯ ಭಕ್ತಿಯಿಂದ ಮರಾಟಿಗರು ಸೇರಿ ಆರಾಧಿಸುತ್ತಾರೆ. ಭೈರವನು ಪ್ರತ್ಯಕ್ಷನಾಗಿ ನಂಬಿರುವ ಎಲ್ಲಾ ಭಕ್ತರ ಸಮಸ್ಯೆಯನ್ನು ಆಲಿಸಿ ವನವಾಸಿಗಳ ಮೊರೆಯನ್ನು ಕೇಳಿ ಬಂದಿರುವ ಆಪತ್ತನ್ನು ಪರಿಹರಿಸುತ್ತೇನೆಂಬ ಅಭಯವನ್ನು ನೀಡಿದನು.

ಆದರೆ ಭೀಕರವಾದ ಹಂದಿಯು ಸಾಧಾರಣ ಹಂದಿಯಲ್ಲ. ಇವನೊಬ್ಬ ದುಷ್ಟರಾಕ್ಷಸನಾಗಿರುತ್ತಾನೆ. ಮಾಯಾ ವಿದ್ಯೆಯನ್ನು ಬಲ್ಲವನಾಗಿದ್ದ. ಕಾಡಿನಲ್ಲಿ ತಪಸ್ಸು ಮಾಡುತ್ತಿದ್ದ ಅನೇಕ ಋಷಿಮುನಿಗಳ ಯಾಗಕ್ಕೆ ಅಡ್ಡಿಯನ್ನುಂಟು ಮಾಡುತ್ತಿದ್ದ ಮಾತ್ರವಲ್ಲದೆ ಯಜ್ಞ-ಯಾಗಾದಿಗಳನ್ನು ಮಾಡುತ್ತಿರುವಾಗ ಯಾಗಕ್ಕೆ ಹೊಲಸನ್ನು ತಂದು ಸುರಿಯುತ್ತಿದ್ದ. ಇದಕ್ಕೆ ಕೋಪಗೊಂಡ ಋಷಿಯೊರ್ವರು ನೀನು ಹೊಲಸು ತಿನ್ನುವ ಹಾಗೂ ಹೊಲಸಿನಲ್ಲಿಯೇ ಹೊರಳಾಡುವ ಹಂದಿಯಾಗೆಂದು ಶಾಪವಿತ್ತರು.

ಆ ಋಷಿಮುನಿಯ ಶಾಪದಿಂದ ರಾಕ್ಷಸ ಹಂದಿ ರೂಪವನ್ನು ತಾಳಿದ್ದಾನೆ. ಇವನ ವಧೆಯಾಗಬೇಕಿದ್ದರೆ ಶಕ್ತಿ ಸ್ವರೂಪಿಣಿಯಾದ ದುರ್ಗೆಯಿಂದಲೇ ಆಗಬೇಕಷ್ಟೆ. ಅದ್ದರಿಂದ ಕಾಡಿನ ಜನರೆಲ್ಲರೂ ಸೇರಿ ಭೈರವನ ಮಾತಿನಂತೆ ಭಯ ಭಕ್ತಿಯಿಂದ ಆ ಶಕ್ತಿ ಸ್ವರೂಪಿಣಿಯಾದ ಮಹಮ್ಮಾಯಿಯನ್ನು ಪ್ರಾರ್ಥಿಸುತ್ತಾರೆ. ಇವರೆಲ್ಲರ ಪ್ರಾರ್ಥನೆಗೆ ಒಲಿದ ಮಹಮ್ಮಾಯಿ ಭೈರವನನ್ನು ಮುಂದಿರಿಸಿ ಕರೆದ ಕಾರಣವೇನು, ಯಾರಿಂದ ತೊಂದರೆಯಾಯಿತು ಬಂದ ಕಷ್ಟವೇನೆಂದು ತಿಳಿಸಲು ಹೇಳಿದಾಗ ಬಂದಿರುವ ಎಲ್ಲಾ ಅಪತ್ತನ್ನು ತಮ್ಮ ಕಷ್ಟವನ್ನು ಮಹಮ್ಮಾಯಿಯಲ್ಲಿ ತೋಡಿಕೊಂಡರು. ಮುಂದೆ ಎಲ್ಲರೂ ಸೇರಿ ಹಂದಿ ಬೇಟೆಯನ್ನು ಮಾಡುತ್ತಾರೆ. ವನವಾಸಿಗಳೆಲ್ಲರೂ ತಮ್ಮ ಆಯುಧ ಪರಿಕರಗಳೊಂದಿಗೆ ಮಹಮ್ಮಾಯಿಯನ್ನು ಹಾಗೂ ಭೈರವನನ್ನು ಮುಂದೆ ನಿಲ್ಲಿಸಿ, ಆ ಕಾಡನ್ನು ಸಂಪೂರ್ಣವಾಗಿ ಹುಡಿಕಿದರು. ಕಾಡಂದಿಯ ಸುಳಿವೇ ಇಲ್ಲ. ಕೆಲವು ಹೊತ್ತಿನ ನಂತರ ಭಯಂಕರವಾದ ಗರ್ಜನೆ, ಕಾಡನ್ನು ನಡುಗಿಸುವಂತಾಯ್ತು. ಮಹಮ್ಮಾಯಿ ಮತ್ತು ಭೈರವನ ಮುಂದೆ ನಿಂತ ಭಯಂಕರ ಕೊರೆ ಹಲ್ಲುಳ್ಳ ಕಾಡು ಹಂದಿ ಮಹಮ್ಮಾಯಿಯನ್ನು ದಿಟ್ಟಿಸಿ ನೋಡಿ ಮೆಲೆರಗುವುದಕ್ಕೆ ಬಂತು. ಮುಂದೆ ಮಹಮ್ಮಾಯಿ ಮತ್ತು ಹಂದಿಯ ನಡುವೆ ಘನಘೋರವಾದ ಯುದ್ಧ ನಡೆಯುತು. ಯುದ್ಧದಲ್ಲಿ ಸೊಲನ್ನಪ್ಪುವ ಸಂದರ್ಭದಲ್ಲಿ ಕಾಡು ಹಂದಿಯು ಅಲ್ಲಿಂದ ಒಡಿಹೋಗಿ ತನ್ನ ಮಾಯೆಯಿಂದ ಕಲ್ಲಿನ ಕೋಟೆಯನ್ನು ಕಟ್ಟಿತು. ಅದನ್ನು ಒಳಹೊಕ್ಕು ದೇವಿ ಮತ್ತು ಭೈರವ ಅದನ್ನು ಮುರಿದರು. ಮುಂದೆ ವಿಷಯ ತಿಳಿದ ರಾಕ್ಷಸ ಕಬ್ಬಿಣದ ಕೋಟೆಯನ್ನು ಕಟ್ಟುತ್ತಾನೆ. ಅದನ್ನು ಮುರಿದು ಮುಂದೆ ಹೋದಾಗ ತಾಮ್ರದ ಕೋಟೆಯನ್ನು ಕಟ್ಟಿ ಹೀಗೆ ನಾನಾ ವಿಧವಾದ ಕೊಟೆಯನ್ನು ಕಟ್ಟಿ ದೇವಿಯನ್ನು ತಡೆಯಲು ಪ್ರಯತ್ನಿಸಿತು. ಎಲ್ಲಾ ಕೋಟೆಯನ್ನು ನಾಶಪಡಿಸಿ ಮುಂದೆ ಹಂದಿಯನ್ನು ಬೆನ್ನತ್ತಿ ಬಂದಾಗ ಎಲ್ಲಿಯೂ ತಪ್ಪಿಸುವುದಕ್ಕೆ ಸಾಧ್ಯವಿಲ್ಲ. ಎಂದು ತಿಳಿದ ರಾಕ್ಷಸ ಹಂದಿ ಸಪ್ತ ಸಾಗರಗಳ ಆಚೆ ಹಾರುತ್ತದೆ. ಭೈರವ ಮತ್ತು ಮಹಮ್ಮಾಯಿ ವನವಾಸಿಗಳೆಲ್ಲರಿಗೆ ಅಲ್ಲಿಯೇ ನಿಲ್ಲುವಂತೆ ಹೇಳಿ ಭೈರವ ಮತ್ತು ಮಹಮ್ಮಾಯಿ ಇಬ್ಬರೇ ಅಲ್ಲಿಗೆ ಹೋಗಿ ಅದನ್ನು ವಧೆ ಮಾಡಿ ಬರುತ್ತೇವೆ ಎಂದು ತಿಳಿಸಿ ಸಪ್ತಸಾಗರದಾಚೆ ಹೋಗಿ ಆ ದೈತ್ಯ ಹಂದಿಯೊಂದಿಗೆ ಘನಘೋರವಾದ ಯುದ್ಧವನ್ನು ಮಾಡಿ ಹಂದಿಯ ತಲೆಯನ್ನು ಕಡಿಯುವಷ್ಟರಲ್ಲಿ ದೇವಿಯ ಎಡಕೈಯನ್ನು ಕಚ್ಚಿತು. ಆ ದೈತ್ಯ ಹಂದಿ. ಇದನ್ನು ತಿಳಿದ ಮಹಮ್ಮಾಯಿ ಅದರದ್ದೆ ಬಲಕೈ ಕತ್ತರಿಸಿ, ಅದರ ಬಾಯಿಗೆ ಕೊಟ್ಟು ತನ್ನ ಕೈಯನ್ನು ಬಡಿಸಿಕೊಂಡಳು ಹೀಗೆ ರಾಕ್ಷಸ ಹಂದಿಯ ವಧೆಯಾಯಿತು. ಮುಂದೆ ನಡೆದ ಯುದ್ಧದ ಘಟನೆಯ ಸಾಕ್ಷಿಗಾಗಿ ಭಕ್ತರಿಗೆ ತೋರಿಸುವ ಸಲುವಾಗಿ ಕಾಯುತ್ತಿರುವ ವನವಾಸಿಗಳಿಗೆ ಹಂದಿಯ ರುಂಡ ಮುಂಡಗಳನ್ನು ಕೊಂಡೊಯ್ದು ಹಂದಿಯ ಕಳೆ ಬರಹವನ್ನು ತಂದಿರುತ್ತಾಳೆ.

ಆದಿಶಕ್ತಿ ಮಹಮ್ಮಾಯಿ ಮತ್ತು ಭೈರವ ಹಂದಿಯ ಕಳೆ ಬರಹವನ್ನು ತಂದಿರುವುದನ್ನು ನೋಡಿ ಭಾವ ಪರವಶರಾಗಿ ಸೇರಿರುವ ಜನರು ದೇವಿಯನ್ನು ಹಾಡಿ ಹೊಗಳುತ್ತಾ ಬಗೆ ಬಗೆಯಾಗಿ ಪ್ರಾರ್ಥಿಸುತ್ತಾರೆ. ಭಾವಪರವಶರಾದ ಗುಡ್ಡಗಾಡು ಜನರು ಸೇರಿ ಮಹಮ್ಮಾಯಿಯನ್ನು ಆರಾಧಿಸುತ್ತಾರೆ.

ಆ ರಾಕ್ಷಸ ಹಂದಿಯ ಕಳೇಬರಹವನ್ನು ಕತ್ತರಿಸಿ ಬೆರಳನ್ನು ಕಾಲುಗಳನ್ನು ಕಣ್ಣನ್ನು ಪ್ರತ್ಯೇಕ ಪ್ರತ್ಯೇಕ ಮಾಡಿ ಅದರ ಬೆನ್ನೆಲುಬನ್ನು ಮಂಚದ ಹಲಗೆಯನ್ನಾಗಿಯೂ ಅದರ ಕೈಕಾಲುಗಳನ್ನು ಮಂಚದ ಕಾಲುಗಳನ್ನಾಗಿ ಮಾಡಿ, ಮಂಚ ತಯಾರಿಸಿ ಮಂಚದ ಬಲಭಾಗದಲ್ಲಿ ದೇವಿಯನ್ನು ಎಡಭಾಗದಲ್ಲಿ ಭೈರವನನ್ನು ಕುಳ್ಳರಿಸುತ್ತಾರೆ. ಅದರ ಕರುಳನ್ನು ದೇವಿಗೆ ಹೂ ಮಾಲೆ ಮಾಡಿ ಹಾಕುತ್ತಾರೆ. ನಾಲಗೆಯನ್ನು ಎಲೆಯಾಗಿ ಹಲ್ಲನ್ನು ಅಡಿಕೆಯಾಗಿ ಮೆದುಳನ್ನು ಸುಣ್ಣವನ್ನಾಗಿ ಮಾಡಿ ದೇವಿಗೂ, ಭೈರವಿಗೂ ತಾಂಬೂಲ ನೀಡುತ್ತಾರೆ. ಹಾಗೆ ಬೆರಳನ್ನು ದೀವಟಿಗೆಗಳನ್ನಾಗಿ ಮಾಡಿ ದೀವಟಿಗೆಯನ್ನು ಹೊತ್ತಿಸಿ (ಪಂಚ ದೀವಟಿಗೆ) ಭಾವ ಪರವಶರಾಗಿ ಹಾಡುತ್ತಾ ಸುತ್ತಲೂ ಕುಣಿಯ ತೊಡಗಿದರು. ಆಗ ಮಧ್ಯರಾತ್ರಿಯಾಗಿತ್ತು. ರಾಕ್ಷಸನ ಶರೀರದ ಬೇರೆ ಬೇರೆ ಅಂಗಗಳನ್ನು ಬೇರೆ ಬೇರೆ ಉಪಕರಣಗಳನ್ನಾಗಿ ಮಾಡಿ ಸಂತೋಷ ಭರಿತರಾಗಿ ದೇವಿಯ ಎದುರುಗಡೆ ನಿಲ್ಲದೆ ಭಯಭಕ್ತಿಯಿಂದ ಹಿಂದೆ ನಿಂತು ಧೂಪ ದೀಪ ಆರತಿ ಎಲ್ಲಾ ಉಪಚಾರಗಳನ್ನು ಮಾಡುತ್ತಾರೆ. ಬಳಿಕ ಪ್ರಾರ್ಥಿಸುತ್ತಾರೆ ಮತ್ತು ತಮ್ಮ ತಪ್ಪುಗಳನ್ನು ಕಷ್ಟ ನಷ್ಟಗಳನ್ನು ಪರಿಹರಿಸಿ ಕಾಪಾಡಬೇಕೆಂದು ಬೇಡಿಕೊಳ್ಳುವರು.

೬.೧೨. ತಿರುಪತಿ ತಿಮ್ಮಪ್ಪನಿಗೆ ಮುಡಿಪು ಸೇವೆ ಮತ್ತು ಪಾನಕ ಪೂಜೆ

ಮರಾಟಿ ನಾಯ್ಕರು ಮತ್ತು ಮರಾಟಿಗರು ತಿರುಪತಿ ಶ್ರೀ ವೆಂಕಟರಮಣ ದೇವರನ್ನು ಕುಲದೇವರೆಂದು ಪೂಜಿಸುತ್ತಾರೆ. ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮರಾಟಿ ನಾಯ್ಕರ ಕುಟುಂಬದ ಮೂಲ ಮನೆಯಲ್ಲಿ ಮುಡಿಪು ಇಟ್ಟಿರುತ್ತಾರೆ. ಪ್ರತಿವರ್ಷವೂ ತಿರುಪತಿ ತಿಮ್ಮಪ್ಪನ ಹೆಸರಿನಲ್ಲಿ ಮುಡಿಪು ಕಟ್ಟಿ ಪಾನಕ ಪೂಜೆ ಮಾಡಿ ಕುಟುಂಬದ ಸದಸ್ಯರೆಲ್ಲರೂ ಮುಡಿಪಿಗೆ ಕಾಣಿಕೆ ಹಾಕಿ. ಕುಲದೇವರನ್ನು ಪೂಜಿಸುತ್ತಿರುವುದನ್ನು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಅವಲೋಕಿಸಲಾಗಿದೆ. "ಕುಟುಂಬದಲ್ಲಿ ಒಬ್ಬರು ಕುಲದೇವರ ಪೂಜೆ ಮಾಡುವರು ಹಾಗೂ ಇತರೆ ಎಲ್ಲಾ ಸದಸ್ಯರು ಅಂದು ಕಡ್ಡಾಯವಾಗಿ ಇರಲೇಬೇಕು. ಕುಲದೇವರ ಪೂಜೆಯನ್ನು ಬೇರೆ ಕುಟುಂಬದ ಸದಸ್ಯರಿಗೆ ಮಾಡಲು ಅನುಮತಿ ಇಲ್ಲ. ಪಾನಕ ಪೂಜೆಯ ವಿಧಾನವನ್ನು ತಿಳಿದುಕೊಂಡ ಮೇಲೆ ಅನಿವಾರ್ಯ ಸಂದರ್ಭದಲ್ಲಿ ಕುಟುಂಬದ ಇತರೇ ಸದಸ್ಯರು ಪೂಜೆ ಮಾಡಬಹುದು. ಅದು ಸಾಧ್ಯವಾಗದಿದ್ದ ಸಂದರ್ಭದಲ್ಲಿ ಬ್ರಾಹ್ಮಣ ಪುರೋಹಿತರಿಂದ ಪಾನಕ ಪೂಜೆ ಮಾಡಿಸಿರುವ ಉದಾಹರಣೆಗಳು ಕ್ಷೇತ್ರಕಾರ್ಯದಲ್ಲಿ ಮಾಹಿತಿದಾರರು ತಿಳಿಸಿರುತ್ತಾರೆ."[೫೧]

ಪಾನಕ ಪೂಜೆ ಹಾಗೂ ಮುಡಿಪು ಸೇವೆ ಮಾಡುವ ವಿಧಾನ:

"ಒಂದು ವಾರಕ್ಕಿಂತ ಮೊದಲು ಒಂದು ಬಾಳೆಗೊನೆ ಕಡಿಯಲಾಗುತ್ತದೆ."[೫೨] ಪಾನಕ ಪೂಜೆಗೆ ಬೆಲ್ಲ, ಎಳ್ಳು, ಕಬ್ಬು, ಗೋಡಂಬಿ, ಕರಿಮೆಣಸಿನ ಪುಡಿ, ಕರಿಮೆಣಸಿನ ಕಾಳು, ತೆಂಗಿನೆಣ್ಣೆ ಬತ್ತಿ, ಊದು ಬತ್ತಿ, ಕರ್ಪೂರ, ದೀಪಗಳು, ಆರತಿ, ಪಾತ್ರೆಗಳು, ಹಿಂಗಾರ, ತುಳಸಿ, ವೀಳ್ಯದೆಲೆ ಮತ್ತು ಅಡಿಕೆ ಇನ್ನೂ ಮುಂತಾದ ವಸ್ತುಗಳು ಬೇಕಾಗುತ್ತವೆ. ಬಾಳೆಗೊನೆ ಕಡಿದ ಬಳಿಕ ಕುಟುಂಬದವರು ಮದ್ಯ, ಮಾಂಸಾಹಾರ ಸೇವಿಸಬಾರದು. ಪೂಜೆಯ ದಿನ ಪೂಜೆ ಮಾಡುವವರು ಬೆಳ್ತಕ್ಕಿಯಿಂದ ತಯಾರಿಸಿದ ಆಹಾರ ಸೇವಿಸಬಾರದು. ಪೂಜೆಗೆ ಮೊದಲು ದೀಪ ಹಚ್ಚಿ ಐದು ಬಾರಿ ಚಮಚದಿಂದ ತೆಂಗಿನೆಣ್ಣೆ ತೆಗೆದು ದೀಪಕ್ಕೆ ಹಾಕುತ್ತಾರೆ. ಬಳಿಕ ಬಲಗೈಯಲ್ಲಿ ಚಮಚದಿಂದ ಎಣ್ಣೆ ತೆಗೆದು ಎಡ ಅಂಗೈಯಲ್ಲಿ ಹಾಕಿ ಭೂಮಿಗೆ ಐದು ಬೊಟ್ಟು ಎಣ್ಣೆ ಬಿಟ್ಟು ನಮಸ್ಕಾರ ಮಾಡಿ, ತಲೆಯಿಂದ ಪಾದದ ತನಕ ಎಣ್ಣೆ ಹಚ್ಚುವರು. ಬಳಿಕ ಪೂಜೆ ಮಾಡುವವನು ಸ್ನಾನಕ್ಕೆ ಹೋಗಿ ತಿರುಗಿ ಬರುವಾಗ ಒಂದು

ಕೊಡದಲ್ಲಿ ಶುದ್ಧ ನೀರು ತಂದು ಗಂಧ ಅರೆದು, ಹೂ, ಹಿಂಗಾರ ಮತ್ತಿತರ ಪೂಜಾ ಸಾಮಾಗ್ರಿಗಳನ್ನು ದೇವರ ದೀಪದ ಎಡಬದಿಗಿಟ್ಟು, ಮಣೆಯ ಮೇಲೆ ತುದಿ ಬಾಳೆ ಎಲೆಯನ್ನಿಟ್ಟು, ಒಂದು ಸೇರು ಬೆಳ್ತಕ್ಕಿಯನ್ನು ಎಲೆಯ ಮೇಲೆ ಹಾಕುವನು. ಎಲೆಗೆ ಹಿಂಗಾರದ ಮತ್ತು ತುಳಸಿ ಎಲೆಯನ್ನು ಹಾಕಿ, ನಂತರ ಉಪಸ್ಥಿತರಿರುವ ಹಿರಿಯರಲ್ಲಿ ಯಾರಾದರೊಬ್ಬರನ್ನು ಕರೆದು, ವೆಂಕಟರಮಣ ದೇವರಿಗೆ ಮುಂಡಿ ಅಕ್ಕಿ ಇಡುತ್ತೇನೆ ಎಂದು ಹೇಳಿ, ಐದು ಬಾರಿ ಬೆಳ್ತಕ್ಕಿಯನ್ನು ಬಾಚಿ ಹಿಡಿದು ಎಲೆಯ ಮೇಲೆ ಹಾಕುತ್ತಾರೆ. ಎಲೆಯ ಮೇಲೆ ಇರುವ ಬೆಳ್ತಕ್ಕಿಯ ಮೇಲೆ ಜುಟ್ಟು ಇರುವ ತೆಂಗಿನಕಾಯಿ ಇಡುತ್ತಾರೆ. ನಂತರ ಹಲವಾರು ಹೂವುಗಳಿಂದ ಅಲಂಕಾರ ಮಾಡುವರು.

ದೀಪದ ಬಲಭಾಗದಲ್ಲಿ ಈಗಾಗಲೇ ಹಲವಾರು ವರ್ಷದಿಂದ ಕಾಪಾಡಿಕೊಂಡು ಬಂದಿರುವ ತಿರುಪತಿ ತಿಮ್ಮಪ್ಪನ ಹುಂಡಿಯನ್ನು ಮತ್ತೊಂದು ಮರದ ಮಣೆಯ ಮೇಲಿಟ್ಟು ಅದರ ಮೇಲೆ ಈ ಕಾಣಿಕೆ ಹುಂಡಿಯನ್ನು ಇಡುತ್ತಾರೆ. ಮಡಿಪಿನ ಮುಚ್ಚಳ ತೆಗೆದು ಅದರ ಮೇಲೆಯೂ ಹಿಂಗಾರ ಮತ್ತಿತರ ಹೂವುಗಳಿಂದ ಅಲಂಕಾರ ಮಾಡುವರು. ದೇವರ ಮನೆಯಲ್ಲಿ ಹಣ್ಣು ತೆಂಗಿನಕಾಯಿ ಇಟ್ಟು ಧೂಪದ ಆರತಿ ಮಾಡಿ ಶುದ್ಧ ಮಾಡುತ್ತಾರೆ. ನಂತರ ಈ ಹಿಂದೆ ಒಂದು ವಾರ ಮೊದಲೇ ಕಡಿದು ಇಟ್ಟ ಬಾಳೆಗೊನೆಯನ್ನು ತಂದು ಅದಕ್ಕೂ ಧೂಪದ ಆರತಿ ಮಾಡಿ ಶುದ್ಧ ಮಾಡುವ ಪ್ರಕ್ರಿಯೆಯನ್ನು ಮಾಡುತ್ತಾರೆ. ಬಳಿಕ ದೀಪಕ್ಕೆ ವಿಭೂತಿ, ಗಂಧ, ಕುಂಕುಮ ಹಚ್ಚಿ, ದೇವರ ಸ್ವಸ್ತಿಕಕ್ಕೂ ಮುಡಿಪಿಗೂ ಮೂರು ಬಗೆಯ ಗಂಧ, ಕುಂಕುಮ ಮತ್ತು ಅರಿಶಿಣ ಹಚ್ಚಿ, ದೇವರಿಗೆ ಹಣ್ಣು ಕಾಯಿ ಪ್ರಸಾದ ಮಾಡುತ್ತಾರೆ. ನಂತರ ಸಮರ್ಪಣೆಗೊಂಡ ತೆಂಗಿನಕಾಯಿ, ಬಾಳೆಹಣ್ಣನ್ನು ತೆಗೆದು ಅದರಿಂದ ಪಂಚಕಜ್ಜಾಯ ಮಾಡಿ, ಪಾನಕವನ್ನು ಪನಿವಾರಕೋಸ್ಕರ ಸಿದ್ಧಪಡಿಸುತ್ತಾರೆ. ಈ ಎರಡೂ ಪ್ರಸಾದ ಸಿದ್ಧವಾದ ಮೇಲೆ ಎರಡನ್ನೂ ದೇವರ ಮುಂದಿಟ್ಟು ತುದಿ ಬಾಳೆ ಎಲೆಯಲ್ಲಿ ಪನಿವಾರದ ಪ್ರಸಾದವನ್ನು ಬಡಿಸಿ, ಪಾನಕವನ್ನಿಟ್ಟು ದೇವರಿಗೆ ಸಮರ್ಪಣೆ ಮಾಡುತ್ತಾರೆ. ಇದಾದ ಬಳಿಕ ತಿರುಪತಿ ತಿಮ್ಮಪ್ಪನಿಗೆ ಮಹಾ ಮಂಗಳಾರತಿ ಮಾಡುವರು. ನಂತರ ಹುಂಡಿಗೆ ಕಾಣಿಕೆ ಹಾಕಲು ಒಂದು ಹರಿವಾಣದಲ್ಲಿ ಕಾಳುಮೆಣಸು ಮತ್ತು ನಾಣ್ಯಗಳನ್ನು ಕುಟುಂಬದ ಎಲ್ಲಾ ಸದಸ್ಯರು ಸೇರಿ ಹಾಕುತ್ತಾರೆ. ಈ ಸಂದರ್ಭ ಕುಟುಂಬದ ಯಜಮಾನ ಅಥವಾ ಹಿರಿಯ ವ್ಯಕ್ತಿ ಪ್ರಾರ್ಥನೆ ಮಾಡಿದ ಬಳಿಕ ಹರಿವಾಣದಲ್ಲಿದ್ದ ಕಾಣಿಕೆ ಮತ್ತು ಕಾಳುಮೆಣಸನ್ನು ಕೆಳಗೆ ಬೀಳದಂತೆ ಭಂಡಾರಕ್ಕೆ ತುಂಬಿಸುತ್ತಾರೆ. ದೇವರ ಮಣೆಯನ್ನು ಪೂಜೆ ಮಾಡಿದ ಬಳಿಕ ಮೊದಲಿದ್ದ ಸ್ಥಳದಲ್ಲಿಯೇ ಇಡುತ್ತಾರೆ. ನಂತರ ಆ ಸ್ಥಳವನ್ನು ಸ್ವಚ್ಛ ಮಾಡುತ್ತಾರೆ. ಇದನ್ನು ತುಳು ಭಾಷೆಯಲ್ಲಿ 'ಪಣವುಕಟ್ಟುನು' ಎಂದು ಕರೆಯುತ್ತಾರೆ.

ಮೂಲತಃ ಶಿವನ ಆರಾಧಕರಾಗಿರುವ ಮರಾಟಿಗರ ಎರಡು ಸಮುದಾಯದವರು ಕಾಲಾಂತರದಲ್ಲಿ ಶಿವನ ಅಂಶವಾಗಿರುವ, ಕೃಷಿ ಹಾಗೂ ಕ್ಷೇತ್ರದ ರಕ್ಷಕನಾಗಿರುವ ಭೈರವನೊಂದಿಗೆ ವೈಷ್ಣವ ಸಂಪ್ರದಾಯದ ವಿಷ್ಣುವಿನ ಅಂಶವಾಗಿರುವ ತಿರುಪತಿಯ ತಿಮ್ಮಪ್ಪನನ್ನು ಆರಾಧನೆ ಮಾಡುತ್ತಾ ಬಂದಿರುವುದನ್ನು ನಾವು ಕಾಣಬಹುದು. ಈ ಆಚರಣೆಯಿಂದಾಗಿ ಶೈವ ಮತ್ತು ವೈಷ್ಣವ ಸಂಪ್ರದಾಯಗಳೆರಡೂ ಸಮನ್ವಯದ ಸಂಕೇತವಾಗಿರುತ್ತದೆ ಎಂಬುದಾಗಿ ಈ ಪೂಜೆಯ ತಾತ್ವಿಕತೆಯಾಗಿರುತ್ತದೆ. ಅಲ್ಲದೆ ಸಾಮಾಜಿಕ ಒತ್ತಡದಿಂದಲೂ ಅಥವಾ ಪ್ರಭಾವದಿಂದಲೂ ಮುಡಿಪು ಸೇವೆ ಹಾಗೂ ಪಾನಕ ಪೂಜೆ ಮಾಡಿರಬಹುದು ಎಂಬುದಾಗಿ ನಾವು ಊಹಿಸಬಹುದು.

೬.೧೩. ಮರಾಟಿ ಸಮುದಾಯದಲ್ಲಿ ಕುಲೆ ಆರಾಧನೆ ಮತ್ತು ಪ್ರೇತ ಮದುವೆ

ಮನುಷ್ಯ ಸತ್ತ ನಂತರವೂ ಆತ ಕುಲೆಯಾಗಿ ನಮ್ಮ ಸುತ್ತಮುತ್ತ ಪರಿಸರದಲ್ಲಿಯೇ ಇರುತ್ತಾನೆ ಎಂಬ ನಂಬಿಕೆ ಈ ಎರಡೂ ಸಮುದಾಯದಲ್ಲಿ ಅಸ್ತಿತ್ವದಲ್ಲಿರುವುದು ಕ್ಷೇತ್ರಕಾರ್ಯದಲ್ಲಿ ಕಂಡುಕೊಳ್ಳಲಾಗಿದೆ. ಈ ನಂಬಿಕೆಯು ಮರಾಟಿಗರಲ್ಲಿ ಮಾತ್ರವಲ್ಲದೆ ವೈದಿಕೇತರ ಸಮುದಾಯಗಳಾದ ಬೆಸ್ತರು, ಬಂಟರು, ದೇವಾಡಿಗರು, ರಾಮಕ್ಷತ್ರಿಯರು, ಗಾಣಿಗರು ಮತ್ತಿತರ ಸಮುದಾಯಗಳಲ್ಲಿ ಕಂಡು ಬರುತ್ತದೆ. ಹಾಗಾಗಿ ಕುಲೆಗಳಿಗೆ ಒಂದು ನಿರ್ದಿಷ್ಟವಾದ ಮತ್ತು ವಿಶೇಷ ದಿನಗಳಂದು 'ಎಡೆ' ಹಾಕುವ ಮೂಲಕ ಅವರನ್ನು ನೆನಪು ಮಾಡಿಕೊಳ್ಳುತ್ತಾರೆ. ಉಡುಪಿ ಜಿಲ್ಲೆಯ ತುಳು ವ್ಯಾಪ್ತಿಯಲ್ಲಿ ಈ ಕ್ರಮಕ್ಕೆ 'ಅಗೆಲು' ಅಥವಾ 'ಸೈತಿನಕಲೆಗ್ ಬಳಸುನು' ಎಂದು ಹೆಸರು. ಅದೇ ರೀತಿ ಕುಂದಾಪುರ ಭಾಷಾ ಪ್ರದೇಶ ವ್ಯಾಪ್ತಿಯಲ್ಲಿ 'ಹಾಕ್‌ಬೆಚ್ಚುದು' ಎಂದು ಕರೆಯುವರು. ಆಟೀ ತಿಂಗಳ (ಅಸಾಡಿ ಅಥವಾ ಆಷಾಢ) ಅಮವಾಸ್ಯೆ ದಿನ ಎಡೆ ಇಡುವ ಪದ್ಧತಿಯಲ್ಲದೇ ವಿಶೇಷ ಸಂದರ್ಭಗಳಾದ ಮದುವೆ ಹಬ್ಬ ಹರಿದಿನಗಳಲ್ಲಿ ಇನ್ನೂ ಕೆಲವು ಮನೆಗಳಲ್ಲಿ ಏನೇ ವಿಶೇಷ ಅಡುಗೆ ಮಾಡಿದರು ಕೂಡಾ ಬಡಿಸಿಡುತ್ತಾರೆ. ಉತ್ತರ ಕರ್ನಾಟಕದ ಹೆಚ್ಚಿನ ಭಾಗಗಳಲ್ಲಿ 'ಮೀಸಲಿಡುವುದು' ಎಂದು ಕರೆಯುತ್ತಾರೆ. ಕುಲೆಗಳಿಗೆ ಎಡೆ ಇಟ್ಟ ಮೇಲೆ ಮನೆಯ ಯಜಮಾನ ಪ್ರಾರ್ಥಿಸುತ್ತಾನೆ. ನಂತರ ಸೇರಿರುವ ಎಲ್ಲಾ ವ್ಯಕ್ತಿಗಳು ಕೈಮುಗಿದು ನಮಸ್ಕರಿಸುತ್ತಾರೆ. ನಂತರ ಆ ಭಾಗದಿಂದ ಹೊರಬಂದು ಸ್ವಲ್ಪ ಹೊತ್ತು ಕಾಯುತ್ತಾರೆ ಮತ್ತೆ ಮನೆಯೊಳಗೆ ಪ್ರವೇಶಿಸಿ ಯಜಮಾನ ಅಥವಾ ಯಜಮಾನಿ ಅಗೆಲಿಗೆ ನೀರು ಚಿಮುಕಿಸಿ ಎಲೆಯನ್ನು ಸ್ವಲ್ಪ ಮುಂದಕ್ಕೆ ಎಳೆಯುತ್ತಾರೆ. ನಂತರ ಬಡಿಸಿಟ್ಟಿರುವ ಅನ್ನವನ್ನು ಎಲ್ಲರೂ ಹಂಚಿ ತಿನ್ನುವ ಕ್ರಮವನ್ನು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ತಿಳುವಳಿಕೆದಾರರು ತಿಳಿಸಿರುವರು.

ಕುಲೆಗಳು ನಿರಾಕಾವಾಗಿ ತಮ್ಮ ಕುಟುಂಬದವರ ಎಲ್ಲಾ ಆಗು ಹೋಗುಗಳನ್ನು ನೋಡುತ್ತಿರುತ್ತವೆ. ಅವರ ಇಷ್ಟಾರ್ಥಗಳನ್ನು ಈಡೇರಿಸುತ್ತವೆ. ಕಷ್ಟ-ನಷ್ಟ, ಅನಿಷ್ಟಗಳನ್ನು ದೂರಗೊಳಿಸುತ್ತವೆ. ಇವುಗಳಿಗೆ ಕಾಲಕಾಲಕ್ಕೆ ಅನ್ನ ಆಹಾರ ಪಾನೀಯಾದಿಗಳನ್ನು ನೀಡದೇ ಹೋದರೆ ತೊಂದರೆ ಕೊಡುತ್ತವೆ ಎಂಬುದಾಗಿ ಮರಾಟಿಗರು ನಂಬಿಕೊಂಡು ಬಂದಿದ್ದಾರೆ. ಪ್ರಾಚೀನ ಕಾಲದಿಂದಲೂ ದೇಹ ಸತ್ತರೂ ಆತ್ಮ ಸಾಯುವುದಿಲ್ಲ ಎಂಬ ನಂಬಿಕೆ ಮರಾಟಿಗರನ್ನೂ ಒಳಗೊಂಡಂತೆ ಹಲವಾರು ಸಮುದಾಯಗಳಲ್ಲಿ ಅಸ್ತಿತ್ವದಲ್ಲಿದೆ. ಅದೇ ರೀತಿ ಬೇರೆ ಬೇರೆ ಧರ್ಮಗಳಲ್ಲಿಯೂ, ಆತ್ಮದ ಬಗ್ಗೆ ವಿವರಣೆಗಳಿವೆ. ಕೆಲವರು ಪುನರ್‌ಜನ್ಮದಲ್ಲಿ ನಂಬಿಕೆ ಹೊಂದಿದ್ದಾರೆ. ಇನ್ನೂ ಕೆಲವರು ಆತ್ಮ ನೇರವಾಗಿ ಭಗವಂತನ ಸಾನಿಧ್ಯ ಸೇರಿ ಮೋಕ್ಷ ಪಡೆಯುತ್ತದೆ ಎಂಬುದಾಗಿ ತಿಳಿಯುತ್ತಾರೆ. ಅಲ್ಲದೆ ವ್ಯಕ್ತಿ ಬದುಕಿದ್ದಾಗ ತಾನು ಮಾಡಿದ ಪಾಪ ಪುಣ್ಯಗಳಿಗೆ ಅನುಗುಣವಾಗಿ ಆತ್ಮಗಳು ಸ್ವರ್ಗ ಅಥವಾ ನರಕಕ್ಕೆ ಸೇರುತ್ತವೆ ಎಂಬ ನಂಬಿಕೆಗಳು ಈ ಎರಡೂ ಸಮುದಾಯದ ಮರಾಟಿಗರಲ್ಲಿದೆ. ಆದ್ದರಿಂದ ಸಮಾಜದಲ್ಲಿ ಅನೇಕ ಆಚರಣೆಗಳಿಗೆ ಅವಕಾಶ ಮಾಡಿಕೊಟ್ಟಿದೆ. ಉದಾಹರಣೆಗೆ ಸತ್ತವರನ್ನು ಬೆಟ್ಟಗುಡ್ಡಗಳ ಮೇಲೆ ಎಸೆಯುವುದು, ಬಹಳ ಪ್ರಾಚೀನವಾದ ಮಾನವ ಸಂಸ್ಕೃತಿ. ಇಂದೂ ಕೂಡಾ ಪಾರ್ಸಿಗಳ ಹೆಣವನ್ನು ಗುಡ್ಡದ ಮೇಲೆ ಎತ್ತರವಾದ ಮರಕ್ಕೆ ಅಥವಾ ಕಲ್ಲು ಬಂಡೆಯಲ್ಲಿ ತೂಗಾಡಿಸಿ ಪ್ರಾಣಿ ಪಕ್ಷಿಗಳಿಗೆ ಆಹಾರವಾಗಿ ನೀಡುತ್ತಾರೆ. ಕಾಲಾಂತರದಲ್ಲಿ ಸುಡುವ ಮತ್ತು ಧಪನ ಮಾಡುವ ಸಂಪ್ರದಾಯ ಬಂದಾಗ ಸುಟ್ಟ ಜಾಗ ಅಥವಾ ಧಪನ ಮಾಡಿರುವ ಜಾಗದಲ್ಲಿ ಗುಡ್ಡದ ಆಕೃತಿ (ತುಳಸಿ ಆಕೃತಿಯಲ್ಲಿ)ಗಳನ್ನು ನಿರ್ಮಿಸುವ ಪದ್ಧತಿ ರೂಢಿಗೆ ಬಂದಿತು. ಬೃಂದಾವನಗಳು, ಸಮಾಧಿ

ಮಂಟಪಗಳು, ಗೋರಿಗಳು, ಶಿಲೆಗಳು. ಅದಕ್ಕಿಂತ ಪೂರ್ವದಲ್ಲಿ ಒರಟೊರಟಾಗಿ ಮಣ್ಣನ್ನು ಗುಡ್ಡದ ಆಕೃತಿಯಾಗಿ 'ಗುಂಪೆ' ಕಟ್ಟುತ್ತಿದ್ದರು. ಈ ಪದ್ಧತಿಯ ಹೆಚ್ಚಿನ ದೇಶಗಳಲ್ಲಿ ತುಂಬಾ ಹಿಂದಿನಿಂದಲೇ ಪ್ರಚಲಿತದಲ್ಲಿತ್ತು. ಸತ್ತವನ ಪ್ರೇತ ಅಲ್ಲಿ ನೆಲೆಸುತ್ತದೆ ಎಂಬ ನಂಬಿಕೆ. ಬದುಕಿರುವವರಿಗೆ ತೋರಿಸಲು ವರ್ಷಕ್ಕೊಮ್ಮೆ ಶ್ರಾದ್ಧ ಕಾರ್ಯಗಳನ್ನು ನಡೆಸಬೇಕಾದ ಕ್ರಮವಿದೆ ಎಂದು ಗುರುತಿಸಲು ಈ ರಚನೆಯ ಅನುಕೂಲವಾಗುತ್ತದೆ.

ಕುಲೆ ಮದ್ಮೆ (ಸತ್ತವರಿಗೆ ಮದುವೆ)

ಮದುವೆ ಪ್ರಾಯಕ್ಕೆ ಬಂದ ಯುವಕ ಅಥವಾ ಯುವತಿ ಮದುವೆಯಾಗದೆ ಅಕಾಲ ಮರಣ ಹೊಂದಿದಲ್ಲಿ ಅವರ ಆತ್ಮವು ಸದ್ಗತಿಯನ್ನು ಪಡೆಯದೆ ಪ್ರೇತ (ಕುಲೆ, ಪಿಶಾಚಿ) ವಾಗಿ ಕುಟುಂಬದ ಸದಸ್ಯರಿಗೆ ಹಾಗೂ ಮೂಲ ಕುಟುಂಬದ ಅನೇಕ ಸದಸ್ಯರಿಗೆ ಭಾದಿಸುವುದು ಎಂಬ ನಂಬಿಕೆ ಮರಾಟಿ ನಾಯ್ಕ ಮತ್ತು ಮರಾಟಿ ಎರಡೂ ಸಮುದಾಯದಲ್ಲಿ ಕಂಡುಬರುತ್ತದೆ. ಕ್ಷೇತ್ರಕಾರ್ಯ ಸಂದರ್ಭದಲ್ಲಿ ಮೂಲ್ಕಿ ಹೋಬಳಿಯ ಆರು ಕುಟುಂಬಗಳಲ್ಲಿ ಪ್ರೇತ ಮದುವೆ ಅಥವಾ ಕುಲೆ ಮದುವೆ (ಕುಲೆ ಮದ್ಮೆ) ಮಾಡಿರುವುದನ್ನು ತಿಳುವಳಿಕೆದಾರರು ತಿಳಿಸಿರುವರು. ಪ್ರೇತ ಭಾದೆಯಿಂದ ಬಿಡುಗಡೆಗೊಳಿಸುವ ನಂಬಿಕೆಯಿಂದ ಮರಾಟಿಗರು ಈ ರೀತಿಯ ಮದುವೆಗಳನ್ನು ಮಾಡುತ್ತಾರೆ.

ಅಂದು ಬಾಳೆ ಮರದ ತೊಗಟೆ ಅಥವಾ ಹಾಳೆಮರದ ತುಂಡಿನಿಂದ ಹೆಣ್ಣು ಮತ್ತು ಗಂಡಿನ ಆಕೃತಿಯನ್ನು ರಚಿಸಿ ಅವುಗಳನ್ನು ಬೇರೆ ಬೇರೆ ಸಂತಾನ (ಬಳಿ)ದ ಗಂಡು ಹೆಣ್ಣೆಂದೆ ಕಲ್ಪಿಸಿ ಅವುಗಳಿಗೆ ಸತ್ತವರ ಹೆಸರನ್ನಿಟ್ಟು ಅಂಗಳದಲ್ಲಿ ಪ್ರತ್ಯೇಕ ಎರಡು ಮರದ ಮಣೆಯ ಮೇಲಿಟ್ಟು ಹೆಣ್ಣು ಪಾಪೆ (ಅಕೃತ)ಯ ಬಳಿ ಸೀರೆ, ರವಿಕೆ, ಬಳೆ, ಕರಿಮಣಿ, ಹೂವು ಮುಡಿಸಿ ಅದೇ ರೀತಿಯ ಗಂಡು ಪಾಪೆಯ (ಅಕೃತ) ಬಳಿ ಶಾಲು, ಬಿಳಿಪಂಚೆಗಳನ್ನಿತ್ತು ಸತ್ತವರ ಆತ್ಮವು ಈ ಆಕೃತಿಯಲ್ಲಿ ಸೇರಬೇಕೆಂದು ನೆರೆದವರ ಸಮ್ಮುಖದಲ್ಲಿ ಪ್ರಾರ್ಥಿಸುತ್ತಾರೆ. ನಂತರ ಈ ಎರಡೂ ಮರದ ಪ್ರೇತ ಆಕೃತಿಗಳನ್ನು ಒಂದರ ಬಳಿ ಮತ್ತೊಂದನ್ನಿಟ್ಟು ಕಲಶದ ನೀರಿನಿಂದ ಧಾರೆ ಎರೆಯುತ್ತಾರೆ. ಸ್ವಲ್ಪ ಸಮಯದ ನಂತರ ಈ ಆಕೃತಿಗಳನ್ನು ಮತ್ತು ಎಡೆ ಹಾಕಿರುವ ಎಲ್ಲಾ ಆಹಾರ ವಸ್ತುಗಳನ್ನು ಗುಡಿಸಿ ಒಟ್ಟು ಸೇರಿಸಿ ಹರಿಯುವ ನೀರಿಗೆ ಎಸೆಯುವರು. ಸಾಮಾನ್ಯವಾಗಿ ಕರಾವಳಿ ಪ್ರದೇಶದಲ್ಲಿರುವ ಅನೇಕ ಸಮುದಾಯಗಳು ಈ ರೀತಿಯ ಸತ್ತವರಿಗೆ ಮದುವೆ ಮಾಡುವ ಪದ್ಧತಿ ಇದೆ. "ಸುಳ್ಯ ಪರಿಸರದ ಗೌಡ ಜನಾಂಗದಲ್ಲಿ ಇದನ್ನು 'ಕೊಲೆ ಮದುವೆ' ಎನ್ನುವರು"[೫೩]. ಬಂಟರಲ್ಲಿ ಹಾಗೂ ಬಿಲ್ಲವರಲ್ಲಿ ಕುಲೆಗಳಿಗೆ ಮದುವೆ ಮಾಡುವ ಆಚರಣೆ ಇದೆ.

ಕುಲೆ ಆರಾಧನೆಯಲ್ಲಿ ಕಾಲ ಬದಲಾದಂತೆ ಸಾಕಷ್ಟು ಬದಲಾವಣೆಗಳಾಗಿರುವುದು ಕಂಡುಬರುತ್ತದೆ. ಇಂದಿನ ವಿದ್ಯಾವಂತ ಯುವಕ ಯುವತಿಯರು ಇವೆಲ್ಲವನ್ನು ನಂಬುವ ಪರಿಸ್ಥಿತಿಯಲ್ಲಿಲ್ಲ. ಉತ್ತರಕ್ರಿಯೆ ಸಂದರ್ಭ (ಬೊಜ್ಜ ದಿನ ರಾತ್ರಿ) ಕುಲೆಗಳನ್ನು ಹದಿನಾರರೊಂದಿಗೆ ಸೇರಿಸುವುದು, ಕುಲೆಗಳಿಗೆ ಎಡೆ ಇಡುವುದನ್ನು ದೀಪಾವಳಿಯಂದು, ಭೂತ ತಂಬಿಲದಂದು, ಆಷಾಢ ತಿಂಗಳ ಅಮವಾಸ್ಯೆಯಂದು ತಮ್ಮ ಪೂರ್ವಜರಿಗೆ ಅಥವಾ ಕುಲೆಗಳಿಗೆ 'ಅಗೆಲ್' ಬಡಿಸುವರು ಈ ಆಚರಣೆಗಳನ್ನು ಯುವ ಪೀಳಿಗೆ ಇಂದು ಬಂಬುತ್ತಿಲ್ಲ. ಕಾಲ ಬದಲಾದಂತೆ ಈ ನಂಬಿಕೆ ಸಂಪ್ರದಾಯಗಳು ಇಂದು ಕಡಿಮೆಯಾಗುತ್ತಿವೆ. ಹಿಂದೆ ತಮ್ಮ ಮನೆಗಳಲ್ಲಿ ಕುಟುಂಬದವರೇ ಸೇರಿ ಮಾಡುತ್ತಿದ್ದ ಕುಲೆ ಮದುವೆಯು ಇಂದು ಪುರೋಹಿತರನ್ನು ಕರೆಯಿಸಿ ಅವರ ಮೂಲಕ ಮಾಡುತ್ತಾರೆ. ಅಥವಾ ಗೋಕರ್ಣಕ್ಕೆ

ಹೋಗಿ ಅಲ್ಲಿ ಸತ್ತ ಹೆಣ್ಣು ಗಂಡುಗಳ ಹೆಸರು ಹೇಳಿ ಮದುವೆ ಮಾಡಿಸುತ್ತಾರೆ. ಬ್ರಾಹ್ಮಣರ ಅನುಕರಣೆ ಮಾಡಿ ಇಂದು ವೈದಿಕ ಪದ್ಧತಿ ಪ್ರಕಾರ ಈ ಕಾರ್ಯವನ್ನು ಮಾಡುತ್ತಿರುವುದು ತಿಳಿದುಬಂದಿದೆ. ಹೀಗೆ ಕುಲೆಗಳ ಆರಾಧನೆಯು ಮರಾಟಿ ನಾಯ್ಕ ಮತ್ತು ಮರಾಟಿಗರ ಸಮುದಾಯಗಳ ಹೆಚ್ಚಿನ ಕುಟುಂಬಗಳು ಇಂದಿಗೂ ಆಚರಿಸುತ್ತಾ ಬರುತ್ತಿರುವುದನ್ನು ಕಾಣಬಹುದು. ಸಾಮಾಜಿಕ ದೃಷ್ಟಿಯಿಂದ ಕುಲೆಗಳ ಆರಾಧನೆ ಬಹಳ ಪ್ರಯೋಜನಕಾರಿ. ತಮ್ಮ ಪಿತೃಗಳು ಸಿಟ್ಟುಗೊಳ್ಳುತ್ತಾರೆ ಎಂಬ ಕಾರಣದಿಂದ ಎಷ್ಟೋ ಜನರು ಸಮಾಜಕ್ಕೆ ಅನಿಷ್ಟವಾದ ಕೆಲಸಗಳನ್ನು ಮಾಡಲು ಹಿಂಜರಿಯುತ್ತಾರೆ. ಅಲ್ಲದೆ ಕುಟುಂಬದವರೆಲ್ಲಾ ತಮ್ಮೊಳಗಿನ ವೈಷಮ್ಯಗಳನ್ನು ಮರೆತು ಆರಾಧನೆಯ ದೃಷ್ಟಿಯಿಂದಲಾದರೂ ಒಂದಾಗುತ್ತಾರೆ. ಇದರಿಂದಾಗಿ ವ್ಯಕ್ತಿ ವ್ಯಕ್ತಿಗಳ ಮಧ್ಯೆ ಪ್ರೀತಿ ವಿಶ್ವಾಸ ಸೌಹಾರ್ದ ಬೆಳೆಯಬಹುದು. ಅಲ್ಲದೆ ಸತ್ತ ವ್ಯಕ್ತಿಯನ್ನು ನೆನಪು ಮಾಡುವುದು ಹೊಸ ಪೀಳಿಗೆಗೆ, ಅವರ ಬಗೆಗಿನ ತಿಳುವಳಿಕೆ ನೀಡುವುದು ಇದರಿಂದ ಸಾಧ್ಯವಾಗುತ್ತದೆ. ಅಂತಿಮವಾಗಿ ಹೇಳುವುದಾದರೆ ಮೂಢನಂಬಿಕೆ ಹೊರತುಪಡಿಸಿ, ಈ ಆರಾಧನೆ / ಆಚರಣೆಯೊಂದು ಧಾರ್ಮಿಕ, ಸಾಂಸ್ಕೃತಿಕ ಆಚರಣೆಯಾಗಿ ಸಾಮಾಜಿಕ ಮನ್ನಣೆ ಪಡೆದುಕೊಂಡಿರುತ್ತದೆ.

ಮರಾಟಿಗರಲ್ಲಿ ಬಲಿ ಆಚರಣೆ

ಪ್ರಾಣಿಬಲಿ

ಮರಾಟಿ ನಾಯ್ಕ ಮತ್ತು ಮರಾಟಿಗರಲ್ಲಿ ಗೊಂದೋಲು, ಭೈರವ, ಭೂತಾರಾಧನೆ ಮುಂತಾದ ಪೂಜಾ ಕಾರ್ಯದಲ್ಲಿ ಬಲಿ ನೀಡುವ ಪದ್ದತಿಯ ಪ್ರಕ್ರಿಯೆಯನ್ನು ಅವಲೋಕಿಸುವುದಕ್ಕಿಂತ ಮುಂಚಿತವಾಗಿ ಬಲಿ ಎಂದರೇನು, ಅದರ ಉದ್ದೇಶಗಳೇನು ಮತ್ತು ಅವುಗಳ ಸ್ವರೂಪವೇನು ಎಂದುದನ್ನು ತಿಳಿದುಕೊಳ್ಳುವುದು ಸೂಕ್ತ. ಈ ಬಗ್ಗೆ ಸಾಕಷ್ಟು ಬರಹಗಳು ಪ್ರಕಟಗೊಂಡಿವೆ. ಪ್ರಪಂಚದಾದ್ಯಂತ ಬಲಿಯ ವಿವಿಧ ಸಂಪ್ರದಾಯಗಳನ್ನು ಕುರಿತು ಅಧ್ಯಯನಗಳು ನಡೆದಿವೆ. ಸದ್ಯಕ್ಕೆ ಬಲಿಯ ಸ್ವರೂಪವನ್ನು ತಿಳಿಸುವ ಎರಡು ಮಾತುಗಳನ್ನು ಇಲ್ಲಿ ಉಲ್ಲೇಖಿಸಬಹುದು:

ಈ ಮಾತುಗಳಿಂದ ನಾಲ್ಕು ಮುಖ್ಯವಾದ ಅಂಶಗಳು ತಿಳಿದುಬರುತ್ತವೆ

೧. ಬಲಿ ಎಂದರೆ ವಿಧಿ ಪೂರ್ವಕವಾಗಿ ನಾಶಮಾಡುವುದು.

೨. ಈ ರೀತಿ ನಾಶ ಮಾಡುವುದು ಒಂದು ವಸ್ತುವಾಗಿರಬಹುದು, ಒಂದು ಪ್ರಾಣಿಯಾಗಿರಬಹುದು ಒಬ್ಬ ಮನುಷ್ಯನಾಗಿರಬಹುದು.

೩. ಪ್ರಾಣಿಯನ್ನು ಬಲಿ ಕೊಡುವಾಗ ಅದರ ರಕ್ತ ಹೀರುವುದು, ಅದು ಉಸಿರುಕಟ್ಟಿ ಸಾಯುವಂತೆ ಮಾಡುವುದು, ಬೆಂಕಿಗೆ ಹಾಕಿ ಸುಡುವುದು – ಈ ಕ್ರಮಗಳನ್ನು ಅನುಸರಿಸುತ್ತಾರೆ.

೪. ದೇವರೊಡನೆ ಸಂಪರ್ಕ ಕಲ್ಪಿಸಿಕೊಳ್ಳುವುದು, ದೇವರನ್ನು ತೃಪ್ತಿಗೊಳಿಸುವುದು. ದೇವರು ಮಾಡಿದ ಉಪಕಾರಕ್ಕೆ ಪ್ರತಿಯಾಗಿ ಕೊಡುವುದು – ಇವು ಬಲಿ ಕೊಡುವುದರ ಮುಖ್ಯ ಉದ್ದೇಶಗಳು.

ಎಚ್.ವಿ. ನಂಜುಂಡಯ್ಯನವರು ಮತ್ತು ಎಲ್.ಕೆ. ಅನಂತಕೃಷ್ಣ ಅಯ್ಯರ್ ಅವರು ಬಲಿಯ ಉದ್ದೇಶದಲ್ಲಿ ಹಾಗೂ ವಿಧಾನದಲ್ಲಿ ಸರಳತೆಯನ್ನು ದ್ರಾವಿಡ ಸಂಸ್ಕೃತಿಯಲ್ಲೆಲ್ಲಾ ಹೆಚ್ಚಾಗಿ ಕಾಣಬಹುದು ಎಂದು ತಿಳಿಸುತ್ತಾರೆ.

ಮರಾಟಿ ಸಮುದಾಯದವರ ಬಲಿಯ ವಿಧಾನ ಮತ್ತು ಉದ್ದೇಶ ಇದೇ ಆಗಿದೆ. ಮರಾಟಿ ನಾಯ್ಕರ ಗೊಂದೋಳು ಪೂಜೆ ಭೈರವ ಆರಾಧನೆಯ ಮತ್ತು ಭೂತಾರಾಧನೆಯ ಸಂದರ್ಭ ಹಂದಿ, ಕುರಿ, ಕೋಳಿ, ಆಡುಗಳನ್ನು ಬಲಿ ಕೊಡುವ ಸಂಪ್ರದಾಯ ಇದೆ. ಅಲ್ಲದೆ ವಾರ್ಷಿಕವಾಗಿ ಕುಂದಾಪುರ ಭಾಗದಲ್ಲಿ ಜಕ್ಕಣಿ, ಉಡುಪಿ ಕಾರ್ಕಳದಲ್ಲಿ ಎರಡು ಸಮುದಾಯದವರು ಭೂತಾರಾಧನೆ ದಿನ, ಪಂಜುರ್ಲಿ ಮತ್ತು ಕಲ್ಲುರ್ಟಿ ದೈವಗಳಿಗೆ ಬಲಿಗಳನ್ನು ನೀಡುವುದು ಅಲ್ಲದೆ ಸ್ಥಳೀಯ ಮಾರಿಗುಡಿಯಲ್ಲಿ ವಾರ್ಷಿಕ ಪೂಜೆಯ ಸಂದರ್ಭದಲ್ಲಿ, ಉಡುಪಿ ಜಿಲ್ಲೆಯಲ್ಲಿ ಮುಖ್ಯವಾಗಿ 'ಕಾಪು ಮಾರಿಗುಡಿಯ ಮಾರಿಪೂಜೆಯ ಸಂದರ್ಭದಲ್ಲಿ ಆಡು, ಕುರಿ, ಕೋಳಿ ಬಲಿಯನ್ನು ನೀಡುವುದನ್ನು ಕ್ಷೇತ್ರಕಾರ್ಯ ಸಂದರ್ಭದಲ್ಲಿ ಅವಲೋಕಿಸಿದ್ದೇನೆ. ಮರಾಟಿಗರು ಆರಾಧಿಸುತ್ತಿರುವ ಯಾವ ದೇವರಿಗೂ ಪ್ರಾಣಿಗಳನ್ನು ಬಲಿ ಕೊಡುವ ಪದ್ಧತಿ ಇಲ್ಲ. ಆದರೆ ಭೈರವಾರಾಧನೆ ಸಂದರ್ಭ ಹಾಗೂ ಗೊಂದೋಳು ಪೂಜೆಯ ದಿನ ಭೈರವ ಮತ್ತು ಆತನ ಗಣಗಳಿಗೆ ಕೋಳಿ, ಪ್ರಾಣಿಗಳಲ್ಲಿ ಹಂದಿ, ಕುರಿಗಳನ್ನು, ಮೇಕೆಗಳನ್ನು ಬಲಿಕೊಡುತ್ತಾರೆ. ಉಳಿದ ಪ್ರಾಣಿಗಳನ್ನು ಬಲಿಕೊಡುವ ಪದ್ಧತಿ ಇವರಲ್ಲಿ ಕಂಡುಬಂದಿರುವುದಿಲ್ಲ.

ಪ್ರಾಣಿ ಬಲಿಯು 'ನರಬಲಿ'ಯ ಮುಂದುವರಿಕೆಯಾಗಿ ಬೆಳೆದು ಬಂದಿದೆ. ಗ್ರಾಮದಲ್ಲಿ ರೋಗಗಳು, ಕಾಲರಾ, ಸಿಡಿಬಿನ ಬೇನೆ, ದನಕರುಗಳಿಗೆ ಬಾಯಿಯ, ಕಾಲಿನ ರೋಗಗಳು ಕಾಣಿಸಿಕೊಂಡರೆ, ಮಾರಿಯಮ್ಮ ಸಿಟ್ಟಿಗೆದ್ದು ಇವುಗಳನ್ನೆಲ್ಲಾ ಸೃಷ್ಟಿಸಿ, ನಮಗೆ ಹಿಂಸೆ ಕೊಡುವಳೆಂದು ತಿಳಿದು, ದೇವತೆಗೆ ಊರಿನ ಜನರು ಒಟ್ಟಿಗೆ ಸೇರಿ ಹರಕೆ ಹೊತ್ತು, ಪ್ರಾಣಿಬಲಿ ಕೊಡುವುದಾಗಿ ಭಾಷೆಕೊಟ್ಟು – ಕೊಟ್ಟ ಭಾಷೆಯ ಪ್ರಕಾರ ಆ ದೇವತೆಗಳ ವಾರ, ಹಬ್ಬ, ಜಾತ್ರೆಯಂದು ಕೋಣ, ಕುರಿ, ಹಂದಿ, ಕೋಳಿಗಳ ಬಲಿಯನ್ನು ಕೊಡುತ್ತಾರೆ.

ಕೋಣಬಲಿ

ಕೋಣಬಲಿ ಆಚರಣೆ ಕರ್ನಾಟಕದಾದ್ಯಂತ ಹಲವು ಆಶಯವನ್ನು ಹೊತ್ತು ಆಚರಿಸುವುದು ಕಂಡುಬಂದಿರುತ್ತದೆ. ಪ್ರಮುಖವಾದ ಆಶಯವೆಂದರೆ ಬ್ರಾಹ್ಮಣ ಯುವತಿಯಾದ ಶ್ರೀ ಬಾಲ ಗೌರಿಯು ಕೆಳಜಾತಿಯ ಮಾದಿಗರ ಹುಡುಗನೊಂದಿಗೆ ಮದುವೆಯಾಗಿ, ಒಂದು ಮಗುವಿಗೆ ಕಾರಣವಾಗಿ, ಕೊನೆಗೂ ಆತನ ಜಾತಿಯನ್ನು ತಿಳಿದು ಕೆರಳಿ ಕೆಂಡವಾಗಿ. ಕೆಂಡಕ್ಕೆ ಆಹುತಿಯಾಗಿ 'ಮುಂದಿನ ಜನ್ಮದಲ್ಲಿ ನಾನು ಮಾರಿಯಾಗಿ ನಿನ್ನನ್ನು ಬಲಿ ತೆಗೆದುಕೊಳ್ಳಲು ನೀನು ಕೋಣನಾಗಿ ಜನಿಸು, ಮಗನು ಕುರಿಯಾಗಿ ಜನಿಸಲಿ, ನನ್ನ ಹಬ್ಬದಂದು ನಿಮ್ಮಿಬ್ಬರನ್ನು ಬಲಿ ತೆಗೆದುಕೊಳ್ಳುವೆನೆಂಬ ಪುರಾಣದ ಹಿನ್ನೆಲೆಯಾಗಿ ಕೋಣಬಲಿಯು ಕರ್ನಾಟಕದಾದ್ಯಂತ ಪ್ರತಿವರ್ಷ, ಮೂರು ವರ್ಷಕ್ಕೊಮ್ಮೆ, ಹನ್ನೆರಡು, ೬೦ ವರ್ಷಗಳಿಗೊಮ್ಮೆ ಸಂಭ್ರಮ ಸಡಗರದಿಂದ ಆಚರಣೆಯಲ್ಲಿರುವುದು, ಕೆಲವು ಕಡೆಯಲ್ಲಿ ನಶಿಸಿಹೋಗಿರುವುದು ತಿಳಿದು ಬರುತ್ತದೆ. ಉದಾ: ಮಂಗಳೂರಿನ ಸುರತ್ಕಲ್, ಬೋಳಾರ, ಕಾಪು, ಕಾರ್ಕಳ, ಮಾರಿಯಮ್ಮ ದೇವಸ್ಥಾನದಲ್ಲಿ ಈಗ ಕೋಣಬಲಿ ನಿಷೇಧಿಸಿರುವರು.

'ಕೋಣಬಲಿ'ಯ ಆಚರಣೆಗೆ ಉತ್ತರ ಕರ್ನಾಟಕದಲ್ಲಿ ಲಕ್ಷ್ಮೀಯ ಹೆಸರಿನಲ್ಲಿ 'ಕ್ಯಾರವೆಂದು' ಹೆಸರಿಸಿದರೆ, ದಕ್ಷಿಣ ಕರ್ನಾಟಕದಲ್ಲಿ ಈ ಆಚರಣೆಗೆ 'ದೊಡ್ಡ ಬಾನ' ಇಲ್ಲವೆ 'ಮಾರಿಹಬ್ಬ'ವೆಂದು, ಕರಾವಳಿಯಲ್ಲಿ 'ಮಾರಿ ಪೂಜೆ'ಎಂದು ಕರೆಯುವ ವಾಡಿಕೆಯಿದೆ. ದಕ್ಷಿಣ ಕರ್ನಾಟಕದಲ್ಲಿ ಹಬ್ಬವು ಮೂರು ದಿವಸ ಇರುವಾಗಲೆ ಗ್ರಾಮದಲ್ಲಿ 'ಸಾರಾಕುತ್ತಾರೆ'. ಸಾರಾಕಿದ ದಿನದಿಂದ ಊರಿನ ಎಲ್ಲಾ

ಹಾದಿಗಳನ್ನು ಜಾಲಿಮುಳ್ಳು, ಬಾರಿಮುಳ್ಳುಗಳನ್ನು ನೆಟ್ಟು, ಬೇಲಿ ಹಾಕುತ್ತಾರೆ. ಇದಕ್ಕೆ 'ಪಾರಿ ಬೇಲಿ' ಎಂದೂ ಕರೆಯುವರು. ಈ ಬೇಲಿ ಹಾಕಿದಂದಿನಿಂದ ಊರ ಹೊರಗಿನವರನ್ನು ಊರೊಳಗೆ ಬಿಡುವುದಿಲ್ಲ. ಇದಕ್ಕಾಗಿಯೇ ಒಬ್ಬನನ್ನು ಅಗಸಿಯ ಬಾಗಿಲಲ್ಲಿ ಕಟ್ಟುನಿಟ್ಟಾಗಿ ಕಾವಲಿಡುತ್ತಾರೆ. ಕೋಣಕಡಿದು ಅದರ ರಕ್ತಮಾಂಸಗಳೆಲ್ಲವನ್ನು ಚರಗ ಚಲ್ಲುವವರೆಗೂ ಊರೊಳಗೆ ಯಾರೂ ಬರದಂತೆ ಕಾವಲಿಡುತ್ತಾರೆ. ಸುರತ್ಕಲ್ ಪುರಾತನ ಶ್ರೀ ಮಾರಿಯಮ್ಮ ದೇವಸ್ಥಾನ, ಬೋಳಾರ ಮಾರಿಗುಡಿ, ಉರ್ವ ಮಾರಿಗುಡಿ ಮತ್ತು ಉಡುಪಿ ಜಿಲ್ಲೆಯ ಬಸರೂರು, ಕಾರ್ಕಳ ಹಾಗೂ ಕಾಪು ಶ್ರೀ ಮಾರಿಯಮ್ಮ ದೇವಸ್ಥಾನಗಳಲ್ಲಿ ಕೋಣಬಲಿ ನಡೆಯುತ್ತಿತ್ತು ಎಂದು ಹಿರಿಯ ಮಾಹಿತಿಯನ್ನು ಒದಗಿಸಿರುವರು.

ಕೋಣಬಲಿ ಆಚರಣೆ ಉಡುಪಿ ಜಿಲ್ಲೆಯನ್ನೊಳಗೊಂಡ ಕರ್ನಾಟಕದಾದ್ಯಂತ ರಾತ್ರಿಯ ಹತ್ತು ಗಂಟೆಯ ಸಮಯದಲ್ಲಿ ಇಲ್ಲವೆ ಮುಂಜಾನೆ ಸೂರ್ಯೋದಯದ ಸಮಯಕ್ಕೆ ಮಾರಮ್ಮನ ಅಥವಾ ಮಾರಿಗುಡಿ ಗದ್ದಿಗೆಯ ಮುಂದೆ ತೋರಣವನ್ನು ಕಟ್ಟಿ, ತೋರಣಕ್ಕೆ ಬೇವಿನ, ಮಾವಿನ, ಬಾಳೆಯ ಸೊಪ್ಪಿನಿಂದ ಅಲಂಕರಿಸಿ, ಗದ್ದುಗೆಯ ಮೇಲಿರುವ ಬೆಳ್ಳಿಯ ಇಲ್ಲವೆ ಕಟ್ಟಿಗೆಯಿಂದ ತಯಾರಿಸಿರುವ ವಿವಿಧ ಬಣ್ಣಗಳನ್ನು ಕೊಟ್ಟಿರುವ ಉತ್ಸವದ ಮೂರ್ತಿಗೆ ಸೀರೆ ಉಡಿಸಿ, ಬಳೆತೊಡಿಸಿ, ಮೂಗಿನಲ್ಲಿ ಮೂಗುತಿ ಇಟ್ಟು, ಕೊರಳಲ್ಲಿ ತಾಳಿ ಹಾಕಿ, ಸುತ್ತೆಲ್ಲಾ ಬೇವಿನ ಸೊಪ್ಪನ್ನು ಹರಡಲಾಗುತ್ತದೆ ಎಂಬುದಾಗಿ ಅನೇಕ ಹಿರಿಯ ತಿಳುವಳಿಕೆದಾರರ ಅಭಿಪ್ರಾಯವಾಗಿರುತ್ತದೆ.

ಗ್ರಾಮದ ಮುತ್ತೈದೆಯರು ತಲೆಯ ಮೇಲೆ ಹೊತ್ತು ಮಡಿಯಿಂದ ತುಂಬಿದ ಐದು ಘಂಟೆಗಳನ್ನು ರಂಗದ ನಾಲ್ಕೂ ಬದಿಗಳಿಗೆ ಒಂದೊಂದನ್ನು ಇಟ್ಟು, ನಂತರ ಮಧ್ಯದಲ್ಲಿ ಒಂದು ಇಟ್ಟು ಪೂಜೆ ಸಲ್ಲಿಸುತ್ತಿರುವಾಗ ಗ್ರಾಮದಲ್ಲಿ ಮೆರವಣಿಗೆಗೆ ಹೋದ ಉತ್ಸವದ ಮೂರ್ತಿಯು ಗದ್ದಿಗೆಯ ಕಡೆಗೆ ಆಗಮಿಸುತ್ತಿರುವಂತೆ, ವಾದ್ಯಗಳ ಬಡಿತ ಇನ್ನಷ್ಟು ಜೋರಾಗುತ್ತದೆ. ಜನತೆಯ ಕೇಕೆ ಹಾಕುವ ಧ್ವನಿಯು ಹೆಚ್ಚಾಗುತ್ತದೆ. ದೇವಿಯು ಗದ್ದಿಗೆಯಲ್ಲಿ ಬಂದು ಪ್ರತಿಷ್ಠಾಪನೆಗೊಳ್ಳುತ್ತಿರುವಂತೆ, ಪರಂಪರಾಗತವಾಗಿ ಕೋಣ ಕಡಿಯಲು ಸಿದ್ಧರಾದ ಕಬ್ಬಲಿಗ, ರಾಣೆ, ಮಾದಿಗರು, ತಳವಾರ, ಹರಿಜನರು ತಮ್ಮ ತಮ್ಮ ಗಂಡುಗೊಡಲಿ ಖಡ್ಗವನ್ನು ಹಿಡಿದುಕೊಂಡು ಕೋಣ ಕಡಿಯಲು ಸಿದ್ಧರಾಗುವರು. ಈ ಸಮಯದಲ್ಲಿ ಕೋಣನಿಗೂ ಮಾರಮ್ಮನಿಗೂ ಮದುವೆ ಮಾಡಲು ಮಾದಿಗರ ಮನೆಯಿಂದ ಸೀರೆ, ಕುಪ್ಪಸ, ಹಸಿರುಬಳೆ, ದಂಡೆ, ಬಾಸಿಂಗ ತಂದು, ಮಾರಮ್ಮನಿಗೆ ಉಡಿಸಿ, ತೊಡಿಸಿ, ಅಲಂಕರಿಸುವವರು. ಗಂಡನ ಸಂಕೇತವಾಗಿ ಕೋಣಕ್ಕೂ ಮದುಮಗನಂತೆ ಶೃಂಗಾರ ಮಾಡುವರು. ದೇವಿಯ ಮುಂದೆ ಕಬ್ಬಿಣದ ಸಳಿಗೆ ತೂಗು ಹಾಕಿರುವ ಚರ್ಮದ ಚಪ್ಪಲಿಗಳಿಗೆ ಬಾಸಿಂಗ ದಂಡೆಯನ್ನು ಕಟ್ಟುತ್ತಿರುವಂತೆ ವಾದ್ಯಗಳು ಇನ್ನಷ್ಟು ಜೋರಾಗುತ್ತದೆ. ಹತ್ತಾರು ಹುರಿಯಾಳುಗಳು ಕೋಣನ ತಲೆಗೂ ಕಲ್ಲು ಗೊರ್ಗಂಬಕ್ಕೂ ಹಗ್ಗದಿಂದ ಬಿಗಿದು ಕಟ್ಟಿ, ಹಿಂದಿನ ಭಾಗವನ್ನು ಜಗ್ಗಿ ಹಿಡಿಯುವರು. ಈ ಕೋಣನ ಎಳೆದಾಟದಲ್ಲಿ ಕೋಣನ ರುಂಡವು ರಬ್ಬರಿನಂತೆ ಹಿಂಜುವುದು. ಕೈಯ ಕೊಡಲಿಯಿಂದ ಒಂದು ಹೊಡೆತ, ಮೂರು ಹೊಡೆತಕ್ಕೆ ರುಂಡವು ಬೇರ್ಪಡುವುದು.

ಕೋಣನ ಮುಂದಿನ ಬಲಗಾಲನ್ನು ಕಡಿದು ಅದರ ಬಾಯಿಗೆ ಅಡ್ಡವಾಗಿ ಸಿಗಿಸಿ ರಂಗದ ಮಧ್ಯದಲ್ಲಿಟ್ಟು, ಅದರ ಮೇಲೆ ದೀಪದ ಪಣತೆಯಿಂದ ದೀಪ ಹಚ್ಚಿ ಉರಿಸುವರು. ಕೋಣ ಬಿದ್ದ ಕ್ಷಣವೇ ದೇವಿಯ (ಕೈಯಲ್ಲಿರುವ ಬಳೆಗಳು ತನ್ನಿಂದ ತಾನೆ ಸಿಡಿಯುವವು ಎಂದೂ ಕೂಡಾ

ಹೇಳುವರು) ಬಳೆಗಳನ್ನು ಒಡೆದು, ಮೂಗಿನ ಮೂಗುತಿ ತೆಗೆದು, ಕೊರಳ ತಾಳಿ ಹರಿದು, ಅಮ್ಮನಿಗೆ ತೆರೆಯಿಂದ ಮುಚ್ಚಲಾಗುತ್ತದೆ. ಅಮ್ಮ ವಿಧವೆಯಾದಳೆಂದು ಇವಳನ್ನು ಕೋಣನಾದ ಗಂಡನನ್ನು ಕುರಿತಂತೆ ಅನೇಕ ಹಾಡುಗಳನ್ನು ಹಾಡುವರು.

ಪ್ರಾಣಿಬಲಿಯಲ್ಲಿ ಭಾಗವಹಿಸಿರುವ ಅನೇಕ ಜಾತಿಯ ಸಮುದಾಯಗಳಾಗಿರುವ ಪದ್ಮಶಾಲಿ ಯಾನೆ ಸೆಟ್ಟಿಗಾರ್, ಮರಾಟಿ ಸಮುದಾಯಗಳು, ರಾಣೆ, ಪರವರು, ಪಂಬದರು, ನೆಲ್ಕೆಯವರು ಮತ್ತಿತ್ತರ ಅನೇಕ ಜನ ಜಾತಿಯವರು ತಮ್ಮ ಆಚರಣೆ, ಸಂಪ್ರದಾಯಗಳನ್ನು ಸುಲಭವಾಗಿ ಬಿಟ್ಟು ಕೊಡುವವರಲ್ಲ. ಬಲಿ ಪದ್ಧತಿಗಳು ಇಂದು ಸರಕಾರದ ಕಾನೂನುಗಳಿಗೆ ವಿರುದ್ಧವಾಗಿಯಾದರೂ ಬಲಿ ಪದ್ಧತಿಗಳು ನಂಬಿಕೆಯ ನೆಲೆಯಲ್ಲಿ ಸಾಂಕೇತಿಕವಾಗಿಯಾದರೂ ನಡೆಯುತ್ತಿವೆ.

ಕುರಿಬಲಿ

ಕುರಿಬಲಿ ಆಚರಣೆಯು ಕೇವಲ ಕರಾವಳಿ ಭಾಗದಲ್ಲಿ ಮಾತ್ರವಲ್ಲದೆ ಕರ್ನಾಟಕದಾದ್ಯಂತ ಕಂಡುಬರುತ್ತದೆ. ಭಕ್ತಾದಿಗಳು ತಮಗೆ ರೋಗರುಜಿನಗಳು ಬಂದರೆ, ಸಂತಾನ ದೊರೆಯದಿದ್ದಾಗ, ಮಳೆಬಾರದಿದ್ದರೆ ದೇವರಿಗೆ ಹರಕೆ ಹೊತ್ತು, ಒಂದು ಅಥವಾ ಜೋಡು ಕುರಿಗಳನ್ನು ಅರ್ಪಿಸುವರು. ಹಿಂದೂಗಳಲ್ಲಿ ಇದರಂತೆ ಮುಸ್ಲಿಂರಲ್ಲಿಯೂ ಕುರಿಬಲಿಯ ಆಚರಣೆ ಇದೆ. ಜಾತ್ರೆ – ಹಬ್ಬ, ವಾರದಲ್ಲಿ ಮಂಗಳವಾರ ಸಾಕಷ್ಟು ಬಲಿಕೊಡುವುದು ಕಂಡುಬರುತ್ತದೆ. 'ಕುರಿಬಲಿ' ಕೊಡುವುದು, ಉಡುಪಿ ಜಿಲ್ಲೆಯಾದ್ಯಂತವಾಗಿ ರೈತಾಪಿ ಜನತೆ ತಮ್ಮ ಫಸಲಿನ ಸುಗ್ಗಿ ತಿಂಗಳು ಮತ್ತು ಬಿತ್ತುವ ಸಂದರ್ಭಗಳಲ್ಲಿ ಬಲಿಕೊಟ್ಟರೆ, ಫಸಲಿನ ರಾಶಿ ಚೆನ್ನಾಗಿ ಬರುವುದು. ಈ ಬಲಿಕೊಡುವುದರಿಂದ ಭೂತ–ಪಿಶಾಚಿಗಳು ಸಂತೃಪ್ತಿ ಹೊಂದಿ ಗದ್ದೆಯ ಫಸಲನ್ನು ಪ್ರಾಣಿಗಳು ಅಪಹರಿಸಲಾರವು. ಯಾವುದೇ ರೀತಿಯಿಂದಲೂ ತೊಂದರೆಯಾಗದೆಂಬ ನಂಬಿಕೆಯಿಂದ ಬಲಿ ಕೊಡುವರು. ಬಲಿಯು ಒಂದಕ್ಕಿಂತ ಜೋಡಿಯಾಗಿದ್ದರೆ ಒಳ್ಳೆಯದು, ಕಪ್ಪಾಗಿದ್ದರೆ ಅದು ದೇವಿಗೆ ಇನ್ನೂ ಇಷ್ಟ. ಬಲಿ ಕೊಡುವಾಗ ಆ ಪ್ರಾಣಿಯ ಒದ್ದಾಡಿದರೆ ಆ ಮನೆಗೆ ತೊಂದರೆ ಬರುವುದು. ಅನೇಕ ತಮ್ಮದೆಯಾದ ನಂಬಿಕೆಗಳನ್ನು ವ್ಯಕ್ತಪಡಿಸುತ್ತಾರೆ.

ಹಂದಿ ಬಲಿ

ಜನಪದರು ತಮ್ಮ ದೇವತೆಗೆ 'ಕುರಿಬಲಿ' ಯಂತೆ ಕರಾವಳಿ ಕರ್ನಾಟಕದಲ್ಲಿ 'ಹಂದಿಬಲಿ' ಕೊಡುವುದು ಕಂಡುಬರುವುದು. ಇಲ್ಲಿ ಮುಖ್ಯವಾಗಿ ಮರಾಟಿ ನಾಯ್ಕರು ತಮ್ಮ ಆರಾಧ್ಯ ದೈವವಾಗಿರುವ ಭೈರವ ಮತ್ತು ಆತನ ಗಣಗಳಿಗೆ ಗೊಂದೋಳು ಪೂಜಾ ಸಂದರ್ಭದಲ್ಲಿ ಹಂದಿ ಬಲಿಯನ್ನು ನೀಡುವುದು ಕ್ಷೇತ್ರಕಾರ್ಯ ಸಂದರ್ಭ ಕಂಡುಬಂದಿರುತ್ತದೆ. ಮರಾಟಿ ನಾಯ್ಕರು ಹಂದಿಯ ಒಂದು ಕಾಲನ್ನು ಕಡಿದು ಬಾಯಲ್ಲಿ ಅಡ್ಡವಾಗಿ ಸಿಗಿಸಿ ಭೈರವನ ಕಲಶದಿಂದ ಸ್ವಲ್ಪ ದೂರದಲ್ಲಿಟ್ಟು ಅದರ ಮೇಲೆ ದೀಪದ ಹಣತೆಯಿಂದ ದೀಪಹಚ್ಚಿ ಉರಿಸುವರು.

ಕೋಳಿ ಬಲಿ

ಮನೆಯಲ್ಲಿ ತೊಂದರೆಗಳು ಕಂಡುಬಂದರೆ, ಆಯಾ ದೇವತೆಗಳಿಗೆ ಹರಕೆ ಹೊತ್ತು ದೇವತೆಯ ಹೆಸರಿನಲ್ಲಿ ಒಂದು ಹುಂಜ ಇಲ್ಲವೆ ಜೋಡಿಹುಂಜ ಬಲಿಕೊಡುವರು. ವಾರ, ಹಬ್ಬ, ಜಾತ್ರೆಯಂದು ಬಲಿಕೊಡುವರು. ಕುರಿಬಲಿ ಅಥವಾ ಹಂದಿಬಲಿ ನಡೆಯುವ ಸಂದರ್ಭಗಳಲ್ಲಿ 'ಕೋಳಿ ಬಲಿ'ಗಳು ನಡೆಯುವುದು ಸಾಮಾನ್ಯವಾದ ರೂಢಿಯಾಗಿರುತ್ತದೆ. ಮರಾಟಿ ಮತ್ತು ಮರಾಟಿ ನಾಯ್ಕ

ಸಮುದಾಯದವರಲ್ಲಿ ಗೊಂದೋಳು ಪೂಜೆ, ವಾರ್ಷಿಕ ಮಾರಿಹಬ್ಬ, ಜಾತ್ರಾ ಸಂದರ್ಭದಲ್ಲಿ ವಿಶೇಷವಾಗಿ ಕೋಳಿಬಲಿ ನೀಡುವುದು ಕಂಡುಬರುತ್ತದೆ.

೬.೧೪. ಮರಾಟಿಗರ ಹೋಳಿ ಹುಣ್ಣಿಮೆ

'ಹೋಳಿ' ವೈಶಿಷ್ಟ್ಯಪೂರ್ಣವಾದ ಧಾರ್ಮಿಕ ಆಚರಣೆ. ದೇಶದ ಬೇರೆ ಬೇರೆ ಭಾಗಗಳಲ್ಲಿ ಆಚರಿಸುವ ರೀತಿಯಲ್ಲಿ ವೈವಿಧ್ಯತೆಯಿದೆ. ಸುಗ್ಗಿ ಕುಣಿತ ಸಿಗ್ಮೋ ಬಹಳ ವಿಶಿಷ್ಟವಾದ ಆರಾಧನಾ ಕಲೆ, ದೇಶದಾದ್ಯಂತ ಜಾತಿ-ಮತ ಬೇದವಿಲ್ಲದೆ ಆಚರಿಸುವ ಈ ಆರಾಧನೆ ಬಣ್ಣದ ಹಬ್ಬವೆಂದೂ ಕರೆಯುತ್ತಾರೆ. ಮುಖ್ಯವಾಗಿ ಮಹಾರಾಷ್ಟ್ರ, ಗೋವ, ಉತ್ತರ ಭಾರತ ಹಾಗೂ ಕರ್ನಾಟಕದ ಕರಾವಳಿಯಾದ್ಯಂತ ಸಂಭ್ರಮದಿಂದ ಆಚರಿಸುತ್ತಾರೆ. ರಾಷ್ಟ್ರದಾದ್ಯಂತ ಬಣ್ಣದೋಕುಳಿಯನ್ನು ಮೈಮೇಲೆ ಎರಚಿಕೊಂಡು ಸಂಭ್ರಮಿಸುವ ಹಬ್ಬವಾದರೆ ಕರಾವಳಿಯ ಮರಾಟಿಗರಲ್ಲಿ ಮಾನಸಿಕ ಸಮಾನತೆಯನ್ನು ತರುವ ಹಬ್ಬ. ಕರಾವಳಿಯ ಹೋಳಿ ಉತ್ತರ ಮತ್ತು ದಕ್ಷಿಣ ಸಂಸ್ಕೃತಿಗಳ ಸಂಗಮ. ಇದು ಅರಿವಿನ ಹಬ್ಬ. ಕ್ಷಣಿಕ ದೈಹಿಕ ಬಯಕೆಗಳನ್ನು ದಹಿಸಿ ಶಾಶ್ವತ ಪ್ರೇಮ ಅರಳಬೇಕೆಂಬುದೇ ಹೋಳಿ ಸಂದೇಶ. ಸಾಮಾಜಿಕ ಕಳಕಳಿ ಹೊಂದಿರುವ ಸಾಹಿತ್ಯಕವಾಗಿ ಉತ್ತಮ ಸಂದೇಶ, ಸಾರುವ ಕಲಾ ನೈಪುಣ್ಯತೆಯನ್ನು ಹೊಂದಿರುವ ಜಾನಪದ ಕಲೆ.

ಹೋಳಿ ಭಾಗವತ ಪುರಾಣದಷ್ಟು ಪ್ರಾಚೀನ, ಭಾಗವತ ಪುರಾಣದಲ್ಲಿ ಹೋಳಿ ಹುಣ್ಣಿಮೆಯ ಬಗ್ಗೆ ಉಲ್ಲೇಖಗಳಿವೆ. 'ಪೋಲಿಕಾ ದಹನ'ದ ನೆನಪಿನ ಫಾಲ್ಗುಣ ಶುದ್ಧ ಹುಣ್ಣಿಮೆಯೇ ಹೋಳಿ ಹುಣ್ಣಿಮೆ. ಇನ್ನೊಂದು ಮಹತ್ವದ ಐತಿಹ್ಯವೆಂದರೆ ಕಾಮದಹನ ವೃತ್ತಾಂತ, ಇದು ಶಿವ ಪುರಾಣ, ವಿಷ್ಣು ಪುರಾಣ, ಕಾಳಿದಾಸನ ಕುಮಾರ ಸಂಭವ ಮೊದಲಾದ ಗ್ರಂಥಗಳಲ್ಲಿ ಫಾಲ್ಗುಣ ಶುದ್ಧ ಹುಣ್ಣಿಮೆಯ ಕಾಮದಹನದ ವೃತ್ತಾಂತವಿದೆ. ತಾರಕಾಸುರ ಬ್ರಹ್ಮನಿಂದ ವರ ಪಡೆದ ನಂತರ ತ್ರಿಲೋಕಗಳಲ್ಲೂ ಉಪಟಳವನ್ನು ನೀಡುತ್ತಿದ್ದ. ಇದನ್ನು ಸಹಿಸದ ದೇವತೆಗಳು ವಿಷ್ಣುವಿಗೆ ಮೊರೆ ಹೋಗುತ್ತಾರೆ. ಶಿವ ಪಾರ್ವತಿಯರ ಸಂಗಮದಿಂದ ಜನಿಸಿದ ಏಳು ದಿನದ ಮಗು ಷಣ್ಮುಖ ತಾರಕನ ಸಂಹಾರ ಮಾಡುತ್ತಾನೆಂದು ವಿಷ್ಣು ಅನುಗ್ರಹಿಸಿದ. ಆದರೆ ಶಿವ ಗಾಢ ತಪಸ್ಸಿನಲ್ಲಿ ನಿರತನಾಗಿದ್ದು, ಪಾರ್ವತಿಯೂ ವ್ರತನಿರತಳಾಗಿದ್ದಳು. ಶಿವನ ಧ್ಯಾನ ಭಂಗ ಮಾಡಲು ಧೈರ್ಯ ಸಾಲದೆ ದೇವತೆಗಳು ಮನ್ಮಥನನ್ನು ಪ್ರೇರೇಪಿಸುತ್ತಾರೆ. ಕಾಮನು ಲೋಕಕಲ್ಯಾಣಾರ್ಥಕ್ಕಾಗಿ ಶಿವನ ತಪಸ್ಸನ್ನು ಕೆಡಿಸಲು ತನ್ನ ಹೂ ಬಾಣಗಳನ್ನು ಹೂಡಿ ವಿಚಲಿತನನ್ನಾಗಿ ಮಾಡಲು ಕ್ಷಣಕಾಲ ಕಾಮವಿಕಾರಕ್ಕೆ ತುತ್ತಾಗಿ ತನ್ನ ಹಣೆಗಣ್ಣನ್ನು ತೆರೆಯಲು ಆ ಪಾಲಾಕ್ಷಕ್ಕೆ ಮನ್ಮಥನು ಬೂದಿಯಾಗಿ ಧರೆಗುರುಳಿದ. ಕಾಮ ಅನಂಗನಾದ. ಅವನ ಸ್ಮರಣೆಗಾಗಿ ಪಾಲ್ಗುಣ ಶುದ್ಧ ಹುಣ್ಣಿಮೆಯೆಂದು ಕಾಮದಹನ ಹಬ್ಬ ರೂಢಿಗೆ ಬಂದಿತು. ಕೋಪಿಷ್ಠನಾದ ಶಿವನನ್ನು ಸಮಾಧಾನಿಸಿದ ಕಾರಣಕ್ಕಾಗಿ ಪಾರ್ವತಿ ಸಂತೃಪ್ತಳಾಗಿ ಅಭಯ ನೀಡುತ್ತಾಳೆ. ಆ ಹಿನ್ನೆಲೆಯಲ್ಲಿ ಹೋಳಿಯು ಚಾಲ್ತಿಗೆ ಬಂತು. ಮರಾಟಿಗರು ಆಚರಿಸುವ ಹೋಳಿ ಹಬ್ಬಕ್ಕೂ ಆದಿಶಕ್ತಿಯ ಆರಾಧನೆಗೂ ಸಂಬಂಧವಿದೆ.

ಮಹಾರಾಷ್ಟ್ರದಿಂದ ವಲಸೆ ಬಂದ ಮರಾಟಿಗರು ತಮ್ಮ ಸಂಸ್ಕೃತಿಯ ಆರಾಧನೆಗಳಾದ ಗೊಂದೋಳು, ಹೋಳಿ, ಬಾಳ್‌ಸಾಂತು ಮೊದಲದವುಗಳನ್ನು ವೈಶಿಷ್ಟ್ಯ ಪೂರ್ಣವಾಗಿ ಆಚರಿಸಿಕೊಂಡು ಬಂದಿದ್ದಾರೆ. ಇಂತಹ ಆರಾಧನೆಗಳು ತುಳುನಾಡಿನ ಸಂಸ್ಕೃತಿಯೊಂದಿಗೆ ವಿಶಿಷ್ಟ ಕಲೆಯಾಗಿ, ಧಾರ್ಮಿಕ ಆಚರಣೆಗಳಾಗಿ ಹೊಂದಿಕೊಂಡು ನೆಲೆನಿಂತಿರುವುದನ್ನು ಕಾಣಬಹುದು.

ಕರಾವಳಿ ಕರ್ನಾಟಕದ ಉಡುಪಿ ಜಿಲ್ಲೆಯ ಮರಾಟಿ ಸಮುದಾಯದವರು ಹೋಳಿ ಹಬ್ಬವನ್ನು ಅತ್ಯಂತ ಸಂಭ್ರಮದಿಂದ ಆಚರಿಸುತ್ತಾರೆ. ಗ್ರಾಮೀಣ ಪ್ರದೇಶಗಳಲ್ಲಿ ವಾಸಿಸುವ ಖಾರ್ವಿ ಮರಾಠಿ ಹಾಗೂ ಕುಡುಬಿ ಸಮುದಾಯದವರು ಧಾರ್ಮಿಕವೂ, ಸಾಂಸ್ಕೃತಿಕವೂ ಆದ ರೀತಿಯಲ್ಲಿ ಈ ಹೋಳಿ ಹಬ್ಬವನ್ನು ಆಚರಿಸುತ್ತಾರೆ. ಈ ಹೋಳಿ ಹಬ್ಬವು ಹಿಂದಿನ ಕಾಲದಲ್ಲಿ ಒಂದು ತಿಂಗಳ ಕಾಲ ನಡೆಯುತ್ತಿದ್ದ ಹಬ್ಬ. ಇತ್ತೀಚಿನ ದಿನಗಳಲ್ಲಿ ಆಧುನಿಕತೆಯಿಂದ ಅಥವಾ ಯುವ ಪೀಳಿಗೆಯ ನಿರಾಸಕ್ತಿಯಿಂದ ಐದು ದಿನಗಳಲ್ಲಿ ಮಾತ್ರ ಆಚರಣೆಗೊಳ್ಳುತ್ತಿದೆ. ಹತ್ತು ಹಲವು ಪಂಗಡಗಳಾಗಿ ಹರಡಿರುವ ಮರಾಟಿ ನಾಯ್ಕ ಸಮುದಾಯದ ಸುಮಾರು ೨೦ ರಿಂದ ೩೦ ಮನೆಗಳ ಗುಂಪುಗಳನ್ನು ಒಂದು 'ಕೂಡುಕಟ್ಟು' ಎನ್ನುತ್ತಾರೆ. ಗುರಿಕಾರನ ಮನೆಯಲ್ಲಿ "ಗಾಂವ್‌ಕಾರ್ ಚೇ ಘರ್" ಅಂದರೆ ಗುರಿಕಾರನ ಮನೆಯೆಂದು ಕರೆಯುತ್ತಾರೆ. ಗುರಿಕಾರನ ಮನೆಯನ್ನು 'ಹತ್ತರಕಟ್ಟೆ' ಅಥವಾ 'ಹತ್ತರಮ್ಮನ ಕಟ್ಟೆ' ಎಂದು ಕರೆಯುತ್ತಾರೆ. ಆ ಮನೆಯ ಹಿರಿಯ ವ್ಯಕ್ತಿಯೊಬ್ಬರು ಹೋಳಿ ಹಬ್ಬದಲ್ಲಿ ನಡೆಯುವ ಪ್ರತಿಯೊಂದು ಕಾರ್ಯಕ್ರಮದಲ್ಲಿ ಮುಂದೆ ನಿಂತು ಎಲ್ಲವನ್ನೂ ಸುಸೂತ್ರವಾಗಿ ನಡೆಸುವ ಜವಾಬ್ದಾರಿಯನ್ನು ಹೊಂದಿರುತ್ತಾನೆ. ಹೋಳಿ ಹಬ್ಬದ ಸಕಲ ಪೂರ್ವಸಿದ್ದತೆಗಳು, ಪೂಜಾ ವಿಧಿ ವಿಧಾನಗಳೆಲ್ಲವೂ ಗುರಿಕಾರನ ಮನೆಯ ಹತ್ತರಕಟ್ಟೆಯಲ್ಲಿ ನಡೆಯುತ್ತವೆ. ಹೋಳಿ ಹಬ್ಬದ ದಿನದಿಂದ ಐದು ದಿನಗಳ ತನಕ ತಮ್ಮ ಇತರೆ ಎಲ್ಲಾ ಕೆಲಸ ಕಾರ್ಯಗಳನ್ನು ಬದಿಗೊತ್ತಿ ಎಲ್ಲರೂ ಒಂದಾಗಿ ಈ ಹಬ್ಬದ ಆಚರಣೆಯಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಾರೆ. ಹೋಳಿ ಹಬ್ಬ ಆಚರಣೆಯ ಮುಂಚಿತವಾಗಿ ನಿಗದಿಪಡಿಸಿದ ದಿನ ಗಂಡಸರೆಲ್ಲ ಹತ್ತರಕಟ್ಟೆಯಲ್ಲಿ ಒಟ್ಟಾಗಿ ಗುರಿಕಾರನ ಮುಖಂಡತ್ವದಲ್ಲಿ ಸಭೆ ಸೇರಿ ಹೋಳಿ ಹಬ್ಬ ಆಚರಿಸುವ ರೂಪುರೇಷೆಗಳ ಪ್ರಸ್ತಾವ ಮಂಡಿಸುತ್ತಾರೆ. ಹೋಳಿ ಹಬ್ಬದ ಗುಮಟೆ ಕುಣಿತ, ಕೋಲಾಟಗಳ ಪೂರ್ವ ತಯಾರಿಗಳು ಸಾಕಷ್ಟು ದಿನಗಳವರೆಗೆ ಮುಂಚಿತವಾಗಿಯೇ ನಡೆಯುತ್ತವೆ. ಪ್ರತಿದಿನ ಸಂಜೆ ಹೊತ್ತಿಗೆ ಅಭ್ಯಾಸ ನಡೆಸುತ್ತಿರುವುದು ಕ್ಷೇತ್ರಕಾರ್ಯ ಸಂದರ್ಭ ಕಂಡುಬರುತ್ತದೆ.

ನಿಗದಿತವಾಗಿ ವೀಳ್ಯವನ್ನು ಕೊಟ್ಟು ಕ್ಷೌರಿಕನನ್ನು ಬರ ಮಾಡುತ್ತಾರೆ. ಹೋಳಿಹಬ್ಬದ ದಿನ ಬೆಳಗ್ಗೆ ಗುರಿಕಾರನ ಮನೆಯಲ್ಲಿ ಗಂಡಸರೆಲ್ಲಾ ಸಾಮೂಹಿಕವಾಗಿ ಕ್ಷೌರ ಮಾಡಿಕೊಳ್ಳುವ ಪದ್ಧತಿಯಿದೆ. ಆ ದಿನ ರಾತ್ರಿ ಗುರಿಕಾರನ ಮನೆಯನ್ನು ಸಗಣಿಯಿಂದ ಸಾರಿಸಿ ಶುದ್ಧೀಕರಿಸಿ ರಂಗೋಲಿ ಇರಿಸಿ, ಆರಾಧ್ಯ ದೇವರಾದ ತುಳಜಾಭವಾನಿಯನ್ನು ಹೂಗಳಿಂದ ಅಲಂಕರಿಸಿ ಕಲಶ ಕನ್ನಡಿಯಿಟ್ಟು ಪೂಜೆ ಮಾಡುತ್ತಾರೆ. ಹೋಳಿ ಹಬ್ಬದ ಕುಣಿತದಲ್ಲಿ ಭಾಗವಹಿಸುವವರು ತಲೆಗೆ ಜರತಾರಿ ಪೇಟ, ಪೈಜಾಮ ಮತ್ತು ನಿಲುವಂಗಿ ಧರಿಸಿ ಬಣ್ಣದ ಶಾಲುಗಳ ಹೊದಿಕೆಯೊಂದಿಗೆ ಕನಕಾಂಬರ ಮತ್ತಿತರ ಹೂಹಾರಗಳನ್ನು ಅಲಂಕಾರವಾಗಿ ಕೊರಳಿಗೆ ಹಾಕಿಕೊಳ್ಳುತ್ತಾರೆ. ಜೊತೆಗೆ ಕಾಲಿಗೆ ಗೆಜ್ಜೆ ಕಟ್ಟಿಕೊಂಡು ಗುಮಟೆಯನ್ನು ಬಾರಿಸುತ್ತಾ ಹಾಡುತ್ತಾ ತುಳಸೀಕಟ್ಟೆಯ ಎದುರು ಲಯಬದ್ಧವಾಗಿ ಕುಣಿಯಲು ಪ್ರಾರಂಭಿಸುತ್ತಾರೆ. ಹೋಳಿಯ ವೇಷಧಾರಿಯನ್ನು ಮರಾಠಿ ಭಾಷೆಯಲ್ಲಿ 'ಖೇಲೆ' ಎನ್ನುವರು. ಸಂಜೆ ಪ್ರಾರಂಭಗೊಂಡ ಪೂಜೆ, ಕುಣಿತಗಳು ಬಹಳ ಆವೇಶಪೂರ್ವಕವಾಗಿ ರಾತ್ರಿಯೆಲ್ಲಾ ಸಾಂಗವಾಗಿ ನೆರವೇರಿ ಮುಂಜಾನೆಯಾಗುತ್ತಿದ್ದಂತೆ "ಕಾಯಿ ಏರಿಸುವ" ಮುಹೂರ್ತ ಬರುತ್ತದೆ. ಸುಲಿಯದ ತೆಂಗಿನ ಕಾಯಿಯನ್ನು ಧೂಪದೀಪ ಆರತಿ ನೈವೇದ್ಯಗಳಿಂದ ಪೂಜಿಸಿ ಗುರಿಕಾರನು ಮತ್ತು ಹತ್ತು ಸಮಸ್ತರೂ ಸೇರಿ ಅದನ್ನು ಎತ್ತಿ ಹಿಡಿದು ತುಳಸಿಕಟ್ಟೆಯ ಮೇಲೆ ಇಡುತ್ತಾರೆ. ಇದನ್ನು 'ಕಾಯಿ' ಇಡುವುದು ಎಂದು ಹೇಳುತ್ತಾರೆ. ಇಲ್ಲಿಂದ ಮುಂದೆ ಐದು ದಿನಗಳಲ್ಲಿ ನಡೆಯುವ ಹಬ್ಬದಲ್ಲಿ ಎಲ್ಲರೂ

ಶುದ್ಧಾಚಾರದಲ್ಲಿರುತ್ತಾರೆ. ಹೆಚ್ಚಿನ ಗಂಡಸರು ಮತ್ತು ಹೆಂಗಸರು ದೇವಿಯ ಆರಾಧನೆಯಲ್ಲಿರುವರು. ಗಂಡಸರು ಮುಂದಿನ ಐದು ದಿನಗಳಲ್ಲಿ ಕ್ಷೌರ ಮಾಡಿಸಿಕೊಳ್ಳುವಂತಿಲ್ಲ. ತಲೆಯ ಮೇಲೆ ಹೊರೆ ಹೊರಬಾರದು. ಕಾಲಿಗೆ ಚಪ್ಪಲಿ ಧರಿಸುವಂತಿಲ್ಲ. ಹೋಳಿ ಹಬ್ಬವನ್ನು ಪ್ರಾರಂಭಿಸುವ ದಿನ ದೇವಿಯ ದರ್ಶನಕ್ಕೆ ಪಾತ್ರಿಯೊಬ್ಬರು ಇರುತ್ತಾರೆ. ಶಂಖ, ತಾಳ, ಜಾಗಟೆ ಮತ್ತು ಗುಮಟೆಗಳ ಅಬ್ಬರದ ಹಿಮ್ಮೇಳ ಮತ್ತು ದೇವಿಸ್ತುತಿಯೊಂದಿಗೆ ವೇಷಧಾರಿಗಳು ಲಯಬದ್ಧವಾಗಿ ಕುಣಿಯುತ್ತಿದ್ದಂತೆ ದರ್ಶನ ಪಾತ್ರಿಗೆ ದೇವಿಯ ಆವೇಶ ಬರುತ್ತದೆ. ಎಲ್ಲರೂ ದೇವರ ಬಳಿ ನಿಂತು "ನಾವು ತಡಮಾಡಿ ನಿನ್ನ ಸೇವೆಗೆ ಹೊರಟಿದ್ದೇವೆ. ನಮ್ಮನ್ನೆಲ್ಲ ಹರಸಬೇಕು" ಎಂದು ಪ್ರಾರ್ಥನೆ ಮಾಡುತ್ತಾರೆ. ಮುಂದಿನ ಐದು ದಿನ ನಡೆಯುವ ಹೋಳಿಯಲ್ಲಿ ಯಾವುದೇ ವಿಘ್ನಗಳು ಬಾರದಂತೆ ರಕ್ಷಣೆ ನೀಡುವ ಅಭಯ ನುಡಿ ದೇವಿಯ ಕಡೆಯಿಂದ ಬರುತ್ತದೆ. ಎಲ್ಲರಿಗೂ ಪ್ರಸಾದ ವಿತರಣೆಯಾದ ನಂತರ ದರ್ಶನ ಮುಕ್ತಾಯವಾಗುತ್ತದೆ.

ಕುಣಿತದ ತಂಡಗಳು ಕುಣಿತಕ್ಕೆ ಬೇಕಾಗುವ ಎಲ್ಲಾ ಸಾಮಗ್ರಿಗಳನ್ನು ಸಂಗ್ರಹಿಸಿ ಊರೂರು ತಿರುಗಾಟಕ್ಕೆ ಸಜ್ಜಾಗುವ ವೇಳೆಗೆ ರಾತ್ರಿ ಕಳೆದು ಸೂರ್ಯೋದಯವಾಗಿರುತ್ತದೆ. ಕುಣಿತದ ತಂಡದಲ್ಲಿ ಒಬ್ಬ ಮುಖ್ಯಸ್ಥನಿರುತ್ತಾನೆ. ಹೋಳಿ ಮೇಳದ ಕುಣಿತ ತಂಡಗಳು ಪ್ರಮುಖ ಬೀದಿಗಳಲ್ಲಿನ ಪ್ರತಿ ಮನೆ ಅಂಗಡಿ ಮತ್ತು ಹೋಟೆಲುಗಳಿಗೆ ಹೋಗಿ ದೇವರನ್ನು ಹೊಗಳುವ ಹಾಸ್ಯಭರಿತವಾದ ಹಾಡುಗಳನ್ನು ಹಾಡಿ ಕುಣಿಯುತ್ತಾರೆ. ಆಯಾ ಊರಿಗೆ ಹೋಗಿ ತಲುಪಿದಾಗ ಎಲ್ಲಾ ವರ್ಗದವರು ಆದರ ಅಭಿಮಾನಗಳಿಂದ ಕುಣಿತ ತಂಡದವರನ್ನು ಬರಮಾಡಿಕೊಳ್ಳುವುದನ್ನು ನೋಡುವಾಗ ಸಂಪ್ರದಾಯದ ಹಿಂದಿನ ಗೌರವ ಭಾವನೆ ಸ್ಪಷ್ಟವಾಗುತ್ತದೆ. ಹೋಳಿಯವರು ಮನೆ ಮನೆಗೆ ಬಂದು ಕುಣಿದು ಹಾಡಿ ಹೋದರೆ ದರಿದ್ರ ದೂರವಾಗುತ್ತದೆಂಬ ನಂಬಿಕೆ ಇವರಲ್ಲಿದೆ.

ಹೋಳಿ ಹಬ್ಬದಲ್ಲಿ ಮಕ್ಕಳು, ದೊಡ್ಡವರು ಸೇರಿದಂತೆ ಸುಮಾರು ಎಪ್ಪತ್ತೈದರಿಂದ ನೂರು ಜನ ಇರುತ್ತಾರೆ. ಈ ಹೋಳಿ ಆಚರಣೆಯ ದಿನಗಳಲ್ಲಿ ಕೆಲಸಕ್ಕೆ ಹೋಗದೆ ವ್ರತಧಾರಿಗಳಾಗಿ ಕೂಡುವಳಿಯ ಎಲ್ಲಾ ಗಂಡಸರು ಈ ಕುಣಿತದಲ್ಲಿ ಭಾಗವಹಿಸುತ್ತಾರೆ. ಹೋಳಿ ಮೇಳದವರು ಮನೆ ಮನೆಗೆ ಭೇಟಿ ನೀಡಿದಾಗ ಎಲ್ಲಾ ಜಾತಿ, ಧರ್ಮ, ಕುಲದವರು ಅಕ್ಕಿ, ತೆಂಗಿನಕಾಯಿ, ಹಣವನ್ನು ಹರಿವಾಣದಲ್ಲಿಟ್ಟು ವೀಳ್ಯ ಸಹಿತ ಕಾಣಿಕೆ ನೀಡಿ ಗೌರವಿಸುತ್ತಾರೆ. ಮನೆಗೆ ಬಂದ ತಂಡದ ಸದಸ್ಯರನ್ನು ಮನೆಯ ಗೃಹಿಣಿ ಕಾಲು ತೊಳೆದು ನಮಸ್ಕರಿಸಿ ಬರಮಾಡಿಕೊಳ್ಳುತ್ತಾಳೆ. ಹೋಳಿ ತಂಡ ಭೇಟಿ ನೀಡುವ ಮೊದಲೇ ಮನೆಯ ಅಂಗಳವನ್ನು ಶುದ್ಧಗೊಳಿಸಿ ರಂಗೋಲಿಯಿಂದ ಅಲಂಕರಿಸುತ್ತಾರೆ. ಆಗಮಿಸಿದವರನ್ನು ಒಂದೆಡೆ ಕುಳ್ಳಿರಿಸಿ ಬೆಲ್ಲ ನೀರು ಕೊಟ್ಟು ಸತ್ಕರಿಸುತ್ತಾರೆ.

ಮನೆಯ ಒಡತಿ ಇಲ್ಲಿ 'ತಳಿ' ನೀಡುವುದು ವಿಶೇಷವಾದುದು. ತೆಂಗಿನಕಾಯಿ, ಅಕ್ಕಿ, ಹೂವು, ವೀಳ್ಯ ಸಹಿತ ಕಾಣಿಕೆಯನ್ನು ಹರಿವಾಣದಲ್ಲಿ ತಂದು ಗುರಿಕಾರನ ಕೈಗೆ ಕೊಟ್ಟು ಅಕ್ಷತೆ ಚೆಲ್ಲಿ ಸಭೆಗೆ ಮನೆ ಯೊಡತಿ ವಂದಿಸುತ್ತಾಳೆ. ಇದನ್ನು 'ತಳಿ' ಕೊಡುವುದು ಎನ್ನುತ್ತಾರೆ. ಆಯಾಯ ಮನೆಯಿಂದ ನಿರ್ಗಮಿಸುವ ಮೊದಲು ಶ್ರೀದೇವಿಯ ಗಂಧ ಪ್ರಸಾದವನ್ನು ಕೊಡುವ ಪದ್ಧತಿ ಇದ್ದು ಇದರಿಂದ ದುಷ್ಟ ಶಕ್ತಿಗಳು ನಿವಾರಣೆಯಾಗುತ್ತದೆಂಬ ನಂಬಿಕೆ ಇದೆ. ದವಸ ಧಾನ್ಯಗಳನ್ನು ತಂಡದ ಮುಖಂಡ ಪಡೆದು ಅವುಗಳನ್ನು ಹಿಡಿದುಕೊಳ್ಳಲು ತಂಡದ ಸದಸ್ಯನಿಗೆ ನೀಡುತ್ತಾನೆ.

ಹೋಳಿ ಹಬ್ಬದಲ್ಲಿ ಪುರುಷರಿಗೆ ಮಾತ್ರ ಭಾಗವಹಿಸಲು ಅವಕಾಶವಿದೆ. ಸ್ತ್ರೀಯರಿಗೆ ಅವಕಾಶವಿಲ್ಲ. ಹತ್ತರಕಟ್ಟೆಯಿಂದ ಹೊರಟ ಗಂಡಸರು ಹೋಳಿ ಮುಗಿಯುವ ತನಕ ತಮ್ಮ ಮನೆಗಳಿಗೆ ಬರಬಾರದೆಂಬ

ಸಂಪ್ರದಾಯವಿದೆ. ಈ ಹಬ್ಬದ ಆಚರಣೆಯ ಐದು ದಿನಗಳ ಕಾರ್ಯಕ್ರಮದಲ್ಲಿ ಭಾಗವಹಿಸುವ ಗಂಡಸರು ಮಾಂಸಾಹಾರ ಸೇವಿಸಬಾರದು, ಮದ್ಯಪಾನ ಮಾಡಬಾರದು, ಬ್ರಹ್ಮಚರ್ಯವನ್ನು ಪಾಲಿಸಬೇಕೆಂಬ ನಿಯಮಗಳಿವೆ.

ಹೀಗೆ ನಿರಂತರ ಐದು ದಿನಗಳವರೆಗೆ ಹಗಲು ರಾತ್ರಿ ಎನ್ನದೆ ಪ್ರದರ್ಶನ ನೀಡಿ ಹುಣ್ಣಿಮೆಯ ದಿನದಂದು ಕುಣಿತದ ಮೇಳವು ಮರಳಿ 'ಹತ್ತರಕಟ್ಟೆ'ಗೆ ಬರುತ್ತದೆ. ಕುಣಿತದ ತಂಡದವರು ಸಂಗ್ರಹಿಸಿದ ಹಣದಿಂದ ದೇವರನ್ನು ಸಿಂಗರಿಸಲು ಬೇಕಾಗುವ ವಿವಿಧ ಜಾತಿಯ ಹೂ ಹಾಗೂ ಇತರ ಪೂಜಾ ವಸ್ತುಗಳನ್ನು ಖರೀದಿಸುತ್ತಾರೆ. ವೇಷಧಾರಿಗಳು ವಿವಿಧ ಬಣ್ಣಗಳನ್ನು ಹಚ್ಚಿಕೊಂಡು ಕೂಡುವಳಿಯ ಹೆಂಗಸರು ಮಕ್ಕಳಾದಿಯಾಗಿ ಎಲ್ಲರೂ ಸೇರಿಕೊಂಡು ವಾದ್ಯ ಮೇಳದೊಂದಿಗೆ ಗುರಿಕಾರನ ಮನೆಯಲ್ಲಿ ಸೇರುತ್ತಾರೆ.

ಶ್ರೀದೇವಿಯ ಆರಾಧನೆ ನಡೆಯುತ್ತದೆ. ಶ್ರೀದೇವಿಯ ಪೂಜೆ ನಡೆಯುತ್ತಿದ್ದಂತೆ ದರ್ಶನ ಪಾತ್ರಿಗೆ ಆವೇಶ ಬರುತ್ತದೆ. ದರ್ಶನ ಪಾತ್ರಿಯು ಆವೇಶದಲ್ಲಿ ಇದ್ದಾಗ ಸಮಸ್ತರು ಸೇರಿ "ನಾವು ಮಾಡಿದ ನಿನ್ನ ಸೇವೆಯಿಂದ ನಿನಗೆ ತೃಪ್ತಿ ಹಾಗೂ ಸಂತೋಷವಾಗಿದೆ ಎಂದು ನಂಬಿದ್ದೇವೆ. ನಮ್ಮಿಂದ ಏನಾದರೂ ತಪ್ಪಾದರೆ ಕ್ಷಮಿಸಬೇಕು" ಎಂದು ಕೈ ಮುಗಿದು ಕೇಳಿಕೊಳ್ಳುತ್ತಾರೆ. ದರ್ಶನ ಪಾತ್ರಿಯು ಹಿಂಗಾರದ ಎಸಳುಗಳನ್ನು ಅವರೆಲ್ಲರಿಗೂ ನೀಡುತ್ತಾನೆ. ದರ್ಶನ ಮುಗಿದ ಮೇಲೆ ಗುರಿಕಾರರು ಮತ್ತು ಹಿರಿಯ ಸಮಸ್ತರು ಪ್ರಾರಂಭದ ದಿನ ಪೂಜಿಸಿ ಏರಿಸಿ ಇಟ್ಟ ತೆಂಗಿನಕಾಯಿಯನ್ನು ಇಳಿಸುತ್ತಾರೆ. ಇದನ್ನು "ಗರುಡ ಇಳಿಸುವ" ಕಾರ್ಯಕ್ರಮ ಎನ್ನುತ್ತಾರೆ. ಆ ವೇಳೆಗೆ ತಂಡದ ಸದಸ್ಯರು ಬಂದು ತುಳಸೀಕಟ್ಟೆಯ ಎದುರು ಹಸೆಮಣೆಯ ಮೇಲೆ ತಮ್ಮ ಉಡುಪು, ಗೆಜ್ಜೆಗಳನ್ನು ತೆಗೆದಿಡುತ್ತಾರೆ. ಅದೇ ರೀತಿ ತಾಳ, ಜಾಗಟೆ, ಶಂಖ, ಗುಮಟೆಗಳನ್ನು ಶ್ರೀದೇವಿಯ ಎದುರು ಓರಣವಾಗಿ ಇಡುತ್ತಾರೆ. ಹೋಳಿ ಹಬ್ಬದಲ್ಲಿ ಐದು ದಿನವೂ ಭಾಗವಹಿಸಿದವರೆಲ್ಲರೂ ಸ್ನಾನಕ್ಕಾಗಿ ಸಜ್ಜಾಗುತ್ತಾರೆ. ವಿಶಾಲ ಅಂಗಳದಲ್ಲಿ ಸುತ್ತಲೂ ಸೇರಿ ಓಕುಳಿ ನೀರನ್ನು ಚೆಲ್ಲಿಕೊಳ್ಳುತ್ತಾರೆ. ಹಿರಿಯ ಕಿರಿಯರೆನ್ನದೆ ಪರಸ್ಪರ ಕಾಲಿಗೆ ಬಿದ್ದು ನಮಸ್ಕರಿಸುತ್ತಾರೆ. ತಂಡದ ಸದಸ್ಯರ ನಡುವಣ ಸಮಾನತೆ ಮತ್ತು ಗೌರವ ಭಾವನೆಯನ್ನು ಇದು ಸೂಚಿಸುತ್ತದೆ. ಬಳಿಕ ಎಲ್ಲರೂ ಸ್ನಾನಕ್ಕಾಗಿ ಸಮೀಪದ ದೇವಸ್ಥಾನದ ಕೆರೆಗೆ ಹೋಗುತ್ತಾರೆ. ಅಲ್ಲಿ ಅನೇಕ ಮನೋರಂಜನಾ ಆಟಗಳನ್ನು ಆಡುವರು. ಕೆರೆಯ ದಡದ ಸುತ್ತಲೂ ಎಲ್ಲರೂ ಸೇರುತ್ತಾರೆ. ಗುರಿಕಾರನು ನೀರನ್ನು ಪೂಜಿಸಿ ಹಣ್ಣುಕಾಯಿ ಸಮರ್ಪಿಸಿದ ಮೇಲೆ ಎಲ್ಲರೂ ಗಂಗೆಗೆ ಪುಷ್ಪಾರ್ಚನೆ ಮಾಡಿ ಉದ್ಘೋಷ ಮಾಡುತ್ತಾ ನೀರಿಗೆ ಧುಮುಕಿ ಸ್ನಾನ ಮಾಡುತ್ತಾರೆ. ಇದನ್ನು "ಗಂಗಾಸ್ನಾನ" ಎನ್ನುತ್ತಾರೆ. ವಿಶಾಲವಾದ ಬಯಲು ಪ್ರದೇಶದಲ್ಲಿ ಬೆಂಕಿ ಹೊತ್ತಿಸಲಾಗುತ್ತದೆ. ಎಲ್ಲರೂ ಸಾಲಾಗಿ ಬೆಂಕಿ ಎದುರು ನಿಲ್ಲುತ್ತಾರೆ. ಗುರಿಕಾರರು ಬೆಂಕಿಗೆ ನಮಸ್ಕರಿಸಿ ತೆಂಗಿನಕಾಯಿ ಒಡೆದು ಪೂಜೆ ನೆರವೇರಿಸಿದಾಗ ಎಲ್ಲರೂ ಸಾಲು ಬೆಂಕಿ ರಾಶಿಯನ್ನು ಹಾರಿ ಹತ್ತರ ಕಟ್ಟೆಮನೆಯತ್ತ ಬರುತ್ತಾರೆ. ಬೆಂಕಿಯನ್ನು ಹಾರಿ ಬರುವುದನ್ನು "ಕಾಮದಹನ" ಎನ್ನುತ್ತಾರೆ. ಕೋಲು, ಕತ್ತಿ ಮತ್ತು ಆರತಿ ಹಿಡಿದು ಬಾಗಿಲಲ್ಲಿ ನಿಂತ ಮುತ್ತೈದೆಯರು ಬಂದವರಿಗೆ ದೃಷ್ಟಿ ತೆಗೆಯುತ್ತಾರೆ.

ಇವರು ಆರತಿಗೆ ನಮಸ್ಕರಿಸಿ ಒಳಬರುತ್ತಾರೆ. ಐದು ದಿನಗಳ ಪರ್ಯಂತ ಊರೂರು ತಿರುಗಾಡಿದ ಗಂಡಸರಿಗೆ ದೃಷ್ಟಿಯಾಗಿರಬಹುದೆಂಬ ನಂಬಿಕೆಯಿಂದ ಈ ಕಾರ್ಯಕ್ರಮ ಮಾಡುವ ಪದ್ಧತಿ ಇಂದಿಗೂ ನಡೆಯುತ್ತದೆ. ಆಮೇಲೆ ಗುಮಟೆ, ಉಡುಪು ಹಾಗೂ ಇತರ ಸಾಧನಗಳಿಗೆ ಧೂಪದಾರತಿ ಮಾಡುತ್ತಾರೆ. ನಂತರ ಗುರಿಕಾರನ ಮನೆಯಲ್ಲಿ ಎಲ್ಲರಿಗೂ ಶುದ್ಧ ಶಾಖಾಹಾರಿ ಭೋಜನ ನಡೆಯುತ್ತದೆ. ಹೀಗೆ ಹೋಳಿ ಹಬ್ಬವು ತುಂಬ ವಿಜೃಂಭಣೆಯಿಂದ ನಡೆಯುತ್ತವೆ.

ಇಂದಿನ ಆಧುನಿಕ ಯುಗದಲ್ಲಿ ಯುವ ಪೀಳಿಗೆಯ ಅಭಿರುಚಿ ಭಿನ್ನವಾಗುತ್ತಿದೆ. ಹೋಳಿಹಬ್ಬದ ಆರಾಧನೆ ಹಾಗೂ ಆಚರಣೆಗಳ ಬಗ್ಗೆ ಆಸಕ್ತಿ ಕಡಿಮೆಯಾಗುತ್ತಿದೆ.

ಹೋಳಿಯಲ್ಲಿ ಒಂದು ವೈವಿಧ್ಯತೆಯಿದೆ, ಸಾಂಸ್ಕೃತಿಕವಾಗಿ ಗಮನಿಸಿದರೆ ಹೋಳಿ ಕುಣಿತ ಹಾಗೂ ಗುಮ್ಮಟವಾದನ ಅಷ್ಟೇ ವಿಶಿಷ್ಟವಾದುದು ಸಾಹಿತ್ಯಕವಾಗಿ ನೋಡುವುದಾದರೆ ಮರಾಟಿ ಭಾಷೆಯಲ್ಲಿರುವ ಹಾಡುಗಳು ರಾಮಾಯಣ, ಮಹಾಭಾರತದ ಕಥೆಗಳನ್ನು ಸಾಕ್ಷಾತ್ಕರಿಸುತ್ತವೆ.

೬.೧೫. ಮರಾಟಿ ಸಮುದಾಯಗಳಲ್ಲಿ ಹರಕೆ

"ಹರಕೆ ಜನಪದ ಆಚರಣೆಗಳಲ್ಲೊಂದು. ಒಳ್ಳೆಯದು ಬರಲಿ, ಕೆಟ್ಟದ್ದು ಬಾರದಿರಲಿ ಎಂದು ತಮಗೆ ಇಷ್ಟವಾದ ದೇವರಲ್ಲಿ ಬೇಡಿಕೊಳ್ಳುವುದೇ ಹರಕೆ". ಪ್ರಕೃತಿಯ ಅನಂತ ಶಕ್ತಿಯನ್ನು ಒಲಿಸಿಕೊಳ್ಳಲು ಅಥವಾ ಪ್ರಸನ್ನಗೊಳಿಸಿಕೊಳ್ಳಲು ಜನಪದರು ನಡೆಸುತ್ತಾ ಬಂದ ಹಲವು ಬಗೆಯ ಆಚರಣೆಗಳಲ್ಲಿ ಹರಕೆಯು ಒಂದು. ಹರಕೆ ದಿನನಿತ್ಯದ ಪ್ರಾರ್ಥನೆಯಿಂದ ಭಿನ್ನವಾಗಿದ್ದು, ವಿಶಿಷ್ಟವಾಗಿ ವ್ಯಕ್ತಿಗತವಾಗಿರುತ್ತದೆ. ಹರಕೆಯಲ್ಲಿ ವ್ಯಕ್ತಿಗತವಾದ ಅಂಶ ಭಾಗಶಃ ಇದ್ದರೂ ಸಾರ್ವತ್ರಿಕ ಅಥವಾ ಸಾಮೂಹಿಕ ಇಲ್ಲವೆ ಕೌಟುಂಬಿಕ ಹಿತ ಪ್ರಧಾನವಾಗಿರುತ್ತದೆ ಎನ್ನಬಹುದು.

ಪ್ರತಿಯೊಂದು ಮನೆಗೂ ಒಂದು ಹೆಣ್ಣು ಒಂದು ಗಂಡು ಹೀಗೆ ಎರಡು ಮನೆ ದೇವರುಗಳಿರುತ್ತವೆ. ಮನೆಯಲ್ಲಿ ಯಾರಿಗಾದರೂ ಕೇಡಾದರೆ ಕಾಯಿಲೆಯಾಗಿದ್ದರೆ ಹರಕೆ ಹೊತ್ತದ್ದರಿಂದ ನಿವಾರಣೆಯಾಯಿತೆಂದು ದೇವರಿಗೆ ಬಲಿ ಕೊಡುವ, ಅಭಿಷೇಕ ಮಾಡಿಸುವ, ಕಂಚಿನ ಬೆಳ್ಳಿಯ ದೇವರ ಮೂರ್ತಿಯನ್ನು ಮಾಡಿಸಿ ಕಾಣಿಕೆ ಕೊಡುವ, ಗಂಗಸ್ನಾನ ಮಾಡಿಸುವ, ತೀರ್ಥಯಾತ್ರೆ ಮಾಡಿಸುವ, ಹರಕೆಗಳನ್ನು ಶಕ್ತ್ಯಾನುಸಾರ ಮನೆಯ ಯಜಮಾನ ಇಲ್ಲವೆ ಯಜಮಾನಿ ರೋಗಿಯ ಪರವಾಗಿ ಹರಕೆ ತೀರಿಸುತ್ತಾರೆ. "ತಮ್ಮ ಮಾತಿಗೆ ಪ್ರಮಾಣ ಎಂಬ ಅರ್ಥದಲ್ಲಿ ಶುಭ್ರವಾದ ಒಂದು ತುಂಡು ಬಿಳಿಯ ಬಟ್ಟೆಯನ್ನು, ತುಂಬಿದ ಕೊಡದಲ್ಲಿ ಒದ್ದೆ ಮಾಡಿ ಅದಕ್ಕೆ ಅರಿಶಿಣ ಹಚ್ಚಿ, ಅದರಲ್ಲಿ ನಾಣ್ಯವನ್ನು ಕಟ್ಟಿ, ಸಾಮಾನ್ಯವಾಗಿ ಬಿಡಿಗಾಸು ಒಂದು ಪಾವಲಿ ಅದನ್ನು ದೇವರ ಮುಂದಿಟ್ಟು ಪೂಜಿಸುತ್ತಾರೆ. ಕೆಲವೊಮ್ಮೆ ಮನೆಯ ಮುಂದಿನ ಸೂರಿಗೆ ಕಟ್ಟುವುದು ಉಂಟು. ಹೀಗೆ ಕಟ್ಟುವುದನ್ನು ಈಡು ಕಟ್ಟುವುದು ಎನ್ನುತ್ತಾರೆ. ಹಿಂದಿನವರು ನಾಣ್ಯವನ್ನು ಅರಿಶಿಣ ಅಥವಾ ಬಣ್ಣದ ಬಟ್ಟೆಯಿಂದ ಹರಕೆ ಕಟ್ಟುತ್ತಿದ್ದರಿಂದ 'ಹೊನ್ನೆಸ್ಳು' ಎಂದು ಕರೆದಿರಬಹುದು. ಹೊನ್ನಿನ ಎಸಳನ್ನೇ ಹರಕೆಯಾಗಿ ಕಟ್ಟಿಕೊಳ್ಳುತ್ತಿದ್ದುದೂ ಇರಬಹುದು. ಏಕೆಂದರೆ ಕೆಲವೊಮ್ಮೆ ಹೊನ್ನಿನ ಆಭರಣವನ್ನು ಹರಕೆ ಕಟ್ಟುವುದುಂಟು. ಬೆಳ್ಳಿಯ ನಾಣ್ಯವನ್ನಾಗಲಿ, ಇತರೆ ಯಾವುದೇ ಲೋಹದ ನಾಣ್ಯವನ್ನಾಗಲೀ, 'ಹರಕೆ' ಕಟ್ಟಿದರೂ 'ಹೊನ್ನೆಸ್ಳು' ಮಾಡಿ ಕಟ್ಟುವುದು ಎನ್ನುವ ರೂಢಿಯಿದೆ.

ಹರಕೆ ಕಟ್ಟಿಕೊಂಡ ವ್ಯಕ್ತಿಯ ಕಷ್ಟಗಳು ಪರಿಹಾರವಾದಾಗ ತಾನು ಹರಕೆ ಹೊತ್ತು ದೇವರ ಪೂಜಾ ದಿನ / ವಾರ, ಹಬ್ಬ, ಜಾತ್ರೆಯ ದಿನ ಹರಕೆ ತೀರಿಸುತ್ತಾನೆ. ಹರಕೆಯಲ್ಲಿ ವೈಯಕ್ತಿಕ ಹರಕೆ, ಕೌಟುಂಬಿಕ ಹರಕೆ, ಸಾಮೂಹಿಕ (ಊರ ಹರಕೆ) ಎಂಬ ವಿಧಾನಗಳಿವೆ.

೧. **ವೈಯಕ್ತಿಕ ಹರಕೆ:** ವೈಯಕ್ತಿಕ ಕುಂದು ಕೊರತೆ, ಸಂಕಷ್ಟಗಳನ್ನು ಹೋಗಲಾಡಿಸುವುದಕ್ಕಾಗಿ ಮಾಡಿಕೊಂಡುದು.

೨. **ಕೌಟುಂಬಿಕ ಹರಕೆ:** ಕುಟುಂಬದಲ್ಲಿ ಸುಖ-ಶಾಂತಿ, ಆರೋಗ್ಯ ನೆಲೆಗೊಂಡು ಮನೆಯ ವಾತಾವರಣ ಉತ್ತಮವಾಗಿರಲೆಂದು ಮನೆಯ ಯಜಮಾನ, ಹರಕೆ ಹೊತ್ತು ಅದನ್ನು ತೀರಿಸುವುದು.

೩. ಸಾಮೂಹಿಕ ಅಥವಾ ಊರಹರಕೆ: "ಸಾಮಾನ್ಯವಾಗಿ ಊರಿಗೆ ಕಾಲರಾ, ಸಿಡುಬು, ಪ್ಲೇಗು ಇತ್ಯಾದಿ ರೋಗಗಳು ಗ್ರಾಮದಲ್ಲಿ ಕಾಣಿಸಿಕೊಂಡಾಗ ಕಾಲದಿಂದ ಕಾಲಕ್ಕೆ ಆಯಾ ರೋಗವನ್ನುಂಟು ಮಾಡುವ ದೇವತೆಗೆ, ಹರಕೆ ಮಾಡಿಕೊಳ್ಳುವುದು ಮತ್ತು ಶುಭವಾದಾಗ ದೊಡ್ಡ ಹಬ್ಬವನ್ನಾಚರಿಸುವುದುಂಟು ಸಾಮಾನ್ಯವಾಗಿ ಊರಿನ ಹರಕೆಯನ್ನು ಆಯಾ ಊರಿನ ಪ್ರಮುಖರಾದ ಗುರಿಕಾರ, ಮೊಕ್ತೇಸರ, ಗೌಡ, ಪಟೇಲ, ಶಾನಭೋಗ ಮತ್ತು ಊರಿನ ಗಣ್ಯವ್ಯಕ್ತಿಗಳು ಮಾಡಿಕೊಳ್ಳುತ್ತಾರೆ. ಊರಿನ ಜನರ ಸಹಕಾರದಿಂದ ಊರೊಟ್ಟಿನ ಹರಕೆಯನ್ನು ತೀರಿಸುತ್ತಾರೆ. ಹರಕೆ ಮಾಡಿಕೊಳ್ಳುವ ಸನ್ನಿವೇಶ ಹಾಗೂ ಕೆಲವು ಪ್ರಮುಖ ಹರಕೆಗಳು, ಚರ್ಮರೋಗ ಸಂಬಂಧವಾದ, ಮಕ್ಕಳಿಗೆ 'ಅಮ್ಮ' (ಸಿಡುಬು) ಬಂದಾಗ ವಾಸಿಯಾಗಲು ಬೇವಿನ ಉಡುಗೆ ಉಡಿಸುವುದಾಗಿ, ಮಕ್ಕಳ ಆರೋಗ್ಯ ಕೆಟ್ಟಾಗ ಒಳ್ಳೆಯದಾಗಲು ಮಗುವಿನ ತೂಕದಷ್ಟು ಬೆಲ್ಲ, ಕಾಯಿ, ಕೊಡುವುದು, (ತುಲಾಭಾರ ಹರಕೆ) ಮನೆ ಮಂದಿಗೆ ಆಗಿಂದಾಗ್ಗೆ ತೊಂದರೆಯಾಗುತ್ತಿದ್ದರೆ ಒಳ್ಳೆಯದಾಗಲು, ಗೆಂಡ ದಿನ ಕೆಂಡಕ್ಕೆ ಸೌದೆ ಹಾಕುವುದು. ಮದುವೆಯಾಗಿ ವರ್ಷಗಳು ಕಳೆದರೂ ಮಕ್ಕಳಾಗದಿದ್ದಾಗ ಮಕ್ಕಳಾದರೆ, ತನ್ನ ಇಷ್ಟ ದೇವರಿಗೆ ಯಾತ್ರೆ ಬರುವುದಾಗಿ ಹರಕೆ ಹೊರುವುದು. ಕೆಲವರು ವಂಶಾಭಿವೃದ್ಧಿಯಾಗದಿದ್ದಾಗ ಗಂಡು ಮಗುವಾದರೆ, ಆ ದೇವರ ಹೆಸರನ್ನು ಮಗುವಿಗೆ ಇಡುವುದಾಗಿ ಜಾತ್ರೆಗೆ ಬಂದು ಮಗುವಿನ 'ಮುಡಿ' ಕೊಡುವುದಾಗಿ ಹರಕೆ ಮಾಡಿಕೊಳ್ಳುತ್ತಾರೆ. ಉತ್ತರ ಕರ್ನಾಟಕದಲ್ಲಿ ಮಕ್ಕಳಾಗಲು ಮತ್ತು ಕಷ್ಟಕಾರ್ಪಣ್ಯಗಳು ಪರಿಹಾರವಾಗಲು ಸ್ತ್ರೀ ಪುರುಷರು ಬಾಯಿಗೆ ಬೀಗ ಚುಚ್ಚಿಕೊಳ್ಳುವ, ದಂಡ ನಮಸ್ಕಾರ ಹಾಕುವ, 'ದಿಂಡುರುಳು' ಸೇವೆ ಮಾಡುವ ಹರಕೆ ಹೊರುತ್ತಾರೆ. ವರ್ಷಕ್ಕೊಮ್ಮೆ ಬಿತ್ತನೆಗೆ ಮೊದಲು ಗ್ರಾಮ ದೇವತೆಗೆ ಉಡಿ ತುಂಬಲು ಐದು ಮಂಗಳವಾರ ಮನೆಗಳಲ್ಲಿ ರೊಟ್ಟಿ ಬಡಿಯದೆ ಸಿಹಿ ಅಡುಗೆ ಮಾಡಿ ಎಡೆ ಕೊಟ್ಟು, ಕೊನೆಯವಾರ ಊರ ಜನರೆಲ್ಲ ಸೇರಿ ದೇವಿಯ ಪಲ್ಲಕ್ಕಿ ಉತ್ಸವ ಮಾಡುವರು.

ಕೊನೆಯದಾಗಿ ಬಸವಣ್ಣನವರು ಹೇಳಿರುವ ವಚನವೊಂದು ನೆನಪಿಗೆ ಬರುವುದು 'ಹಬ್ಬಕ್ಕೆ ತಂದ ಹರಕೆಯ ಕುರಿ, ತೋರಣಕ್ಕೆ ತಂದ ತಳಿರು ಮೇಯಿತು' ಎಂದು ಹರಕೆಯ ವಿಷಯ ಸೂಚಿಸಿದ್ದಾರೆ. ಜನ್ನ ಕವಿಯು ತನ್ನ ಯಶೋಧರ ಚರಿತ್ರೆಯಲ್ಲೂ 'ಹಿಟ್ಟಿನ ಕೋಳಿ ಬಲಿ ಕೊಡುವ' ಹರಕೆಯ ಪ್ರಸ್ತಾಪ ಕಂಡುಬರುತ್ತದೆ. ಈ ರೀತಿಯಾಗಿ ಮರಾಟಿ ಮತ್ತು ಮರಾಟಿ ನಾಯ್ಕರು ತಮ್ಮ ದೈವ ದೇವರ ಹೆಸರಿನಲ್ಲಿ ಸಾವಿರಾರು ಹರಕೆ ಹೊತ್ತು ಸೌಮ್ಯ ರೂಪದ ಹಾಗೂ ಉಗ್ರ ರೂಪದ ಆಚರಣೆಗಳನ್ನು ಧಾರ್ಮಿಕ, ಸಾಂಸ್ಕೃತಿಕ ಹಾಗೂ ವೈಯಕ್ತಿಕ ವಲಯದಲ್ಲಿ ಆಚರಿಸುತ್ತಿರುವುದು ಕಂಡುಬರುತ್ತವೆ.

೬.೧೬. ವಾರ, ಪಕ್ಷ, ನಕ್ಷತ್ರಗಳ ಸಂದರ್ಭದಲ್ಲಿ ಇರುವ ನಂಬಿಕೆ ಮತ್ತು ನಿಷೇಧಗಳು

• **ಅಮವಾಸ್ಯೆ:** ಅಮವಾಸ್ಯೆ ದಿನದಂದು ಚಂದ್ರನು ಕಾಣದೆ ಇರುವುದರಿಂದ ರಾತ್ರಿಯು ಕಪ್ಪಾಗಿರುವುದು. ಭೂಮಿಗೆ ಚಂದ್ರನ ಬಲ ಅಥವಾ ಆಕರ್ಷಣೆ ಕಡಿಮೆಯಾಗಿರುವುದು ಎಂದು ಜ್ಯೋತಿಷ್ಯ ಶಾಸ್ತ್ರದಲ್ಲಿ ಹೇಳಲಾಗಿದೆ. ಗುರುಗ್ರಹ ಮೌಢ್ಯವಾಗಿರುವಾಗ ಉಪನಯನ, ನೂತನ ಗೃಹಪ್ರವೇಶ ಮಾಡದೇ ಇರುವುದು. ಶುಕ್ರ ಗ್ರಹ ಚಂದ್ರನು ಮೌಢ್ಯವಾಗಿರುವಾಗ ಯಾವುದೇ ಶುಭ ಕೆಲಸ ಮಾಡದೆ ಇರುವುದು ವೈದಿಕ ಪದ್ಧತಿ – ಇದನ್ನು ಮರಾಟಿ ನಾಯ್ಕ ಮತ್ತು ಮರಾಟಿಗರು ಅನುಸರಿಸುತ್ತಾರೆ. ಅಲ್ಲದೆ, ಈ ದಿನದಂದು ಇತರರಿಗೆ ಹಣ ಅಥವಾ ಸಾಲ ನೀಡಬಾರದು.

• **ಸಂಕ್ರಮಣ:** ಸೂರ್ಯನು ಒಂದು ರಾಶಿಯಿಂದ ಇನ್ನೊಂದು ರಾಶಿಗೆ ಮುಂದುವರಿಯುವ 'ಸಂಧಿಕಾಲ' ಎಂಬ ನಂಬಿಕೆಯಿಂದ ಈ ಎರಡು ಸಮುದಾಯದ ಬೇಸಾಯಗಾರರು ಅಂದು ಯಾವುದೇ ಶುಭ ಕೆಲಸದ ಆರಂಭ, ಆಚರಣೆ ಮಾಡುವುದಿಲ್ಲ. 'ಅದಿತ್ಯಾದಿ ನವಗ್ರಹೇಭ್ಯೋ ನಮಃ'.. ನವಗ್ರಹರಲ್ಲಿ ಸೂರ್ಯನಿಗೆ ಮೊದಲ ಸ್ಥಾನ. ಅವನು ಸಂಧಿಕಾಲದಲ್ಲಿರುವ ಅವಧಿ ಶುಭವಲ್ಲ – ಎಂಬ ನಂಬಿಕೆ. ವೈದಿಕ ಸಂಪ್ರದಾಯದಲ್ಲೂ ಇದೆ. ಭೂಮಿ ಉಳುವ, ಭತ್ತದ ಬೆಳೆ ಕೊಯ್ಯುವ ಕೆಲಸ ಕೂಡಾ ಕೃಷಿಕರು ಮಾಡುವುದಿಲ್ಲ.

• **ಪಿತೃಪಕ್ಷ:** ಭಾದ್ರಪದ ಮಾಸ ಕೃಷ್ಣ ಪಕ್ಷ (ಕನ್ಯಾ ತಿಂಗಳಲ್ಲಿ) ದಲ್ಲಿ ಗತಿಸಿರುವ ಹಿರಿಯರು ಇಹಲೋಕಕ್ಕೆ ಬಂದು, ತಮ್ಮ ರಕ್ತಸಂಬಂಧಿಗಳಿಂದ 'ಪಿಂಡ', 'ತರ್ಪಣ' ಸ್ವೀಕಾರ ಮಾಡುವರೆಂಬ ನಂಬಿಕೆಯಿಂದ ಮರಾಟಿಗರು ಶುಭಕಾರ್ಯ ನಡೆಸುವುದಿಲ್ಲ. ಹೊಸ ಕೆಲಸ ಆರಂಭಿಸುವುದಿಲ್ಲ. ಮರಾಟಿ ನಾಯ್ಕ ಮತ್ತು ಮರಾಟಿಗರ ಕುಲ ಪುರೋಹಿತರು ವೈದಿಕ ಅಥವಾ ಕರಾಡ ಬ್ರಾಹ್ಮಣರಾದುದರಿಂದ ಅವರ ಕ್ರಮವನ್ನೇ ಈ ಸಮುದಾಯದವರು ಆಚರಿಸುವರು.

• **ಜನ್ಮಸೂತಕ ಮತ್ತು ಮೃತ ಸೂತಕದ ದಿನಗಳು:** ಕುಟುಂಬದ ಯಾವ ವ್ಯಕ್ತಿಯ ಮರಣವೇ ಆಗಿರಲಿ ಯಾವುದೇ ಶಿಶುವಿನ ಜನನವಾಗಿರಲಿ, ವೈದಿಕ ಪದ್ಧತಿ ಮತ್ತು ತುಳುನಾಡಿನ ಅಳಿಯ ಸಂತಾನಕಟ್ಟಿನವರು – ಹತ್ತು ದಿನ – ರಾತ್ರಿಗಳು ಪೂರ್ಣ ಕಳೆದು ಹನ್ನೊಂದನೆಯ ದಿನದಂದು ದೇಹಶುದ್ಧಿ, ಗೃಹಶುದ್ಧಿ ಆಗುವವರೆಗೆ ಅಶುದ್ಧಿ ಎಂದು ಪರಿಗಣಿಸುವರು. ಮರಾಟಿ ನಾಯ್ಕ ಮತ್ತು ಮರಾಟಿಗರ 'ಸಂತಾನ'ದ ಬಂಧುಗಳಲ್ಲೆ ಜನನ–ಮರಣವಾದಲ್ಲಿ ಅಶುದ್ಧಿಯ ದಿನಗಳಲ್ಲಿ ಜೀವನಾವರ್ತನದ ಯಾವುದೇ ಆಚರಣೆ ನಡೆಸುವುದಿಲ್ಲ. ಸೂತಕಾಚರಣೆಯ ಅಶುದ್ಧ–ಶುದ್ಧ–ಹಿಂದೂ ಮತದ ಬೇರೆ ಬೇರೆ ಸಮುದಾಯಗಳಲ್ಲಿ ನಾಲ್ಕರಿಂದ ಹದಿನಾರು ದಿನಗಳವರೆಗೂ ಇರುವುದು.

• **ಜನ್ಮ ನಕ್ಷತ್ರ – ಜನ್ಮದಿನ – ನಿಷೇಧ:** ವೈದಿಕ ಪದ್ಧತಿಯಂತೆ ಜನ್ಮನಕ್ಷತ್ರ, ಜನ್ಮದಿನ – ಯಾವನೇ ಅಥವಾ ಯಾವಳೇ ವ್ಯಕ್ತಿಯ ಜೀವನದಲ್ಲಿ ನಡೆಯಲಿರುವ ಶುಭ ಕೆಲಸಕ್ಕೆ ಶುಭವಲ್ಲ ಎಂದಿದೆ. ಜ್ಯೋತಿಷಶಾಸ್ತ್ರದಲ್ಲಿ ಈ ಎರಡು ಸಮುದಾಯದವರಿಗೆ ನಂಬಿಕೆ ಇದೆ. ತುಳುನಾಡಿನಲ್ಲಿ ತಿಂಗಳ ಮೊದಲ (ಸಂಕ್ರಮಣದ ಮರುದಿನ) ದಿನವನ್ನು ತುಳುವಿನಲ್ಲಿ ತಿಂಗೊಡೆ ಅಥವಾ ಸಿಂಗಡೆ ಎನ್ನುವರು. ತುಳುನಾಡಿನ ಪಕ್ಕದ ಕೇರಳ ರಾಜ್ಯದ ಕಾಸರಗೋಡುನಲ್ಲಿಯು ಮೊದಲ ದಿನ 'ಒನ್ನಾಂದಿ' (ಮಲೆಯಾಳಂ ಭಾಷೆ) ಶುಭ ಕೆಲಸಕ್ಕೆ ಪ್ರಶಸ್ತವಲ್ಲ ಎಂಬ ನಂಬಿಕೆ ಇದೆ. ಶತಮಾನಗಳಿಂದ ಕರಾವಳಿ ಪ್ರದೇಶದಲ್ಲಿ ವಾಸಿಸುತ್ತಿರುವ ಮರಾಟಿಗರಲ್ಲೂ ಈ ಮೇಲಿನ ನಂಬಿಕೆ ಇದ್ದು, ಅಂದು 'ವ್ಯಕ್ತಿಯ ಜನ್ಮನಕ್ಷತ್ರ ಮತ್ತು ಜನ್ಮದಿನಗಳೆಂದು ಶುಭ ಕೆಲಸ ಅಥವಾ ಜೀವನಾವರ್ತನದ ಶುಭ ಕೆಲಸ ಮಾಡುವುದಿಲ್ಲ.

• **ಭರಣಿ ಮತ್ತು ಕೃತ್ತಿಕಾ ನಕ್ಷತ್ರ:** ಈ ಎರಡು ನಕ್ಷತ್ರ ದಿನಗಳಂದು ಆರಂಭಿಸಿದ ಕೆಲಸವು ನಿಧಾನಗತಿಯಿಂದ ಸಾಗುವುದು ಮತ್ತು ಕೆಲಸದ ಮಧ್ಯೆ ಅನೇಕ ವಿಘ್ನಗಳು ಬರುತ್ತವೆ ಎಂಬ ನಂಬಿಕೆ ಜನಪದರಲ್ಲಿದೆ. ಮರಾಟಿ ನಾಯ್ಕ ಮತ್ತು ಮರಾಟಿಗರಲ್ಲೂ ಈ ನಂಬಿಕೆ ಇದೆ. ಆ ನಕ್ಷತ್ರಗಳಂದು ಅಪರಕ್ರಿಯೆಯ ಹೊರತಾಗಿ ಜೀವನಾವರ್ತನದ ಯಾವ ಶುಭ ಆಚರಣೆಯನ್ನು ನಡೆಸುವುದಿಲ್ಲ.

• **ಗ್ರಹಣದ ದಿನಗಳು:** ಸೂರ್ಯಗ್ರಹಣ ಮತ್ತು ಚಂದ್ರಗ್ರಹಣದಂದು ಸೂರ್ಯನನ್ನು ಅಥವಾ ಚಂದ್ರನನ್ನು ರಾಹು ಮತ್ತು ಕೇತುಗಳಲ್ಲಿ ಒಂದು ಗ್ರಹವು ನುಂಗಿ ಬಿಡುತ್ತದೆ. ಹಾಗೂ ಆ ಸಂದರ್ಭ ಸೂರ್ಯ, ಚಂದ್ರರಿಗೆ ಕಷ್ಟದ ಸಮಯ ಎಂಬ ನಂಬಿಕೆ ಇದೆ. ಸೂರ್ಯ, ಚಂದ್ರರು ಜಗತ್ತಿನ ಕಣ್ಣುಗಳೆಂಬ ನಂಬಿಕೆಯಿಂದ ಸನಾತನ ಧರ್ಮದ ಅನೇಕರು, ಯಾವುದೇ ಶುಭ ಕೆಲಸ ಅಥವಾ ಸಂಸ್ಕಾರಳನ್ನು

ಗ್ರಹಣ ದಿನ ಮಾಡುವುದಿಲ್ಲ. ಹೊಸ ಕೆಲಸದ ಮುಹೂರ್ತಕ್ಕೂ ಈ ಸಂದರ್ಭ ನಿಷೇಧ ಎಂದು ಪರಿಗಣಿಸುವರು.

• **ಹಬ್ಬದ ದಿನಗಳು:** ಹಬ್ಬಗಳು ದೇವರ ವಿಶೇಷ ಪೂಜೆಗೆ ಅಥವಾ ನಂಬಿ ಬಂದಿರುವ ಪ್ರಕೃತಿ ಶಕ್ತಿಯ ಆರಾಧನೆಗೆ ಸಂಬಂಧಪಟ್ಟ ದಿನ. ಆದುದರಿಂದ ವ್ಯಕ್ತಿಯ ಜೀವನಾವರ್ತನೆಯ ಆಚರಣೆಗೆ ಈ ದಿನವನ್ನು ಆಯ್ಕೆ ಮಾಡುವುದಿಲ್ಲ.

• **ಆಟಿ / ಆಸಾಡಿ (ಆಷಾಢ) ತಿಂಗಳು:** ತುಳುನಾಡಿನಲ್ಲಿ ಆಟಿ ತಿಂಗಳ ಕಾಲಾವಧಿಯು ತೀರಾ ಮಳೆಯಿಂದ ಸೂರ್ಯನ ಬೆಳಕು ಇಲ್ಲದೆ ಹದಗೆಟ್ಟಿರುತ್ತದೆ. ಈ ತಿಂಗಳು ದುಷ್ಟಶಕ್ತಿಗಳ ಸಂಚಾರಕ್ಕೆ ಮೀಸಲಾದುದು ಎಂಬ ನಂಬಿಕೆ ಮರಾಟಿಗರಲ್ಲಿ ಇದೆ. ಕೊಡಗಿನ ಕೊಡವರಲ್ಲಿ ಆಟಿ ತಿಂಗಳ ನಿಷೇಧ ಇಲ್ಲ. ಆದ್ದರಿಂದ ಅಲ್ಲಿಯ ಮರಾಟಿಗರಲ್ಲೂ ಆ ನಿಷೇಧ ಇಲ್ಲ.

• ಸಮವರ್ಷ / ಪ್ರಾಯ (ಎರಡು, ನಾಲ್ಕು, ಆರು, ಎಂಟು – ಹೀಗೆ)ವನ್ನು ಜೀವನಾವರ್ತನದ ಶುಭ ಕೆಲಸಕ್ಕೆ ಸೂಕ್ತವಲ್ಲ ಎನ್ನುವ ಧಾರ್ಮಿಕ ನಂಬಿಕೆ ವೈದಿಕರಲ್ಲಿದೆ. ತುಳುನಾಡಿವರಲ್ಲೂ ಆ ನಂಬಿಕೆ ಬಲವಾಗಿದೆ. ಸಮಸಂಖ್ಯೆಯನ್ನು ವಿಭಜಿಸಲು ಸಾಧ್ಯ. ಆದುದರಿಂದ ಬೆಸಸಂಖ್ಯೆ (ಮುಗುಳಿ)ಗೆ ಇಲ್ಲಿ ಮಹತ್ವ ನೀಡುವರು. ದೇವರ ಶ್ರೀಮುಡಿಯಿಂದ ಪ್ರಸಾದ ತೆಗೆಯುವಾಗಲೂ ಬೆಸಸಂಖ್ಯೆಗೆ ಪ್ರಾಧಾನ್ಯ. ಉಪನಯನ, ಮದುವೆ ಅಥವಾ ಚವಲ ಸಂಸ್ಕಾರ, ಕರ್ಣವೇಧಗಳಿಗೆ ಈ ಬೆಸಸಂಖ್ಯೆಯ ವರ್ಷ – ಪ್ರಾಯವನ್ನು ಗಮನದಲ್ಲಿಡುವರು ಈ ಎರಡು ಸಮುದಾಯದವರಲ್ಲೂ ಈ ಪದ್ಧತಿ ರೂಢಿಯಲ್ಲಿದೆ.

• ಯಾವುದೇ ಒಂದು ಕುಟುಂಬದ ಹಿರಿಯ ವ್ಯಕ್ತಿ ತೀರಿಕೊಂಡಿದ್ದರೆ ಒಂದು ವರ್ಷ ಕಾಲ ಕಿರಿಯರ (ಗಂಡು ಮಕ್ಕಳ) ಮದುವೆ ಮಾಡಬಾರದು.

• ಶನಿವಾರದಂದು ಕೆಲಸ ಮಂದಗತಿಯಿಂದ ಸಾಗುವುದೆಂದು ಹೊಸ ಉದ್ಯಮ ಅಥವಾ ಶುಭ ಕೆಲಸಕ್ಕೆ ಮುಹೂರ್ತ ಮಾಡುವುದಿಲ್ಲ. ಶುಕ್ರವಾರ ಕುಲದೇವತೆ ಮಹಾಮಾಯಿಗೆ ದುರ್ಗಾಂಬಿಕೆಗೆ ಮಹತ್ವದ ದಿನ ಎಂದು ಸಾವಿನ ದಿನಾಚರಣೆ ನಡೆಸುವುದಿಲ್ಲ. ಶನಿವಾರ ಹೊಸ ಬಟ್ಟೆ ಉಡಬಾರದು ಎಂಬ ನಂಬಿಕೆಯು ಇದೆ.

ಕೊನೆ ಟಿಪ್ಪಣಿಗಳು

೧. Nisbert Robert, The Sociology of

೨. ಸರ್ವಚೇತನವಾದ: ಧರ್ಮದ ಉಗಮಕ್ಕೆ ಸಂಬಂಧಿತ ಸಿದ್ಧಾಂತ ಇ ಬಿ ಟೈಲರ್ ಈ ಸಿದ್ಧಾಂತದ ಪ್ರತಿಪಾದಕ ಇತನು ಪ್ರೀಮಿಟಿವ್ ಕಲ್ಚರ್ ಎಂಬ ಗ್ರಂಥದಲ್ಲಿ ಪ್ರಕಟಗೊಂಡಿರುವುದು. ಆತನ ಪ್ರಕಾರ ಸರ್ವಧರ್ಮಚೇತನವಾದವೆಂದರೆ? ಸತ್ತವರ ಆತ್ಮದಲ್ಲಿರುವ ನಂಬಿಕೆ ಯಾವುದೋ ಒಂದು ಚೇತನ ಎಲ್ಲಾ ಬಗೆಯ ವಸ್ತುಗಳಲ್ಲಿಯು ಇರುತ್ತದೆ ಎಂಬ ನಂಬಿಕೆ ಹೆಚ್ಚಿನ ವಿವರಕ್ಕೆ ಚ ನ ಶಂಕರರಾವ್ ಸಮಾಜಶಾಸ್ತ್ರದ ವಿಶ್ವಕೋಶ ಗಮನಿಸಿ.

೩. Totemism (ಕುಲದೇವಾತವಾದ) ಕುಲದೇವಾತವಾದವು ವಸ್ತುಪೂಜಾವಾದ ಈಜಣ್ಖುಟ ಮುಂದುವರೆದ ಭಾಗವೆಂದು ಪರಿಗಣಿಸುವು. ಕುಲದೇವತೆ ಎಂಬುದು ಪ್ರಾಣಿ ಅಥವಾ ಸಸ್ಯ ಜಾತಿ ಒಂದನ್ನು ಅಥವಾ ಸಮುಹ ಒಂದನ್ನು ಇತರೆ ಸಮೂಹಗಳಿಂದ ಭೇರ್ಪಡಿಸುವಂತಹ

ಲಕ್ಷಣವುಳ್ಳ ಭೌತಿಕ ವಸ್ತುವೊಂದನ್ನು ಅಥವಾ ಇವುಗಳಲ್ಲಿ ಯಾವುದೊಂದನ್ನು ಪ್ರತಿನಿಧಿಸುವ ಸಂಖೇತವನ್ನು ಪ್ರತಿನಿಧಿಸುವುದು. ಇಂತಹ ಸಂಖೇತಿಕ ಪ್ರತಿನಿಧಿಯನ್ನೆ ಸಮೂಹ ಕುಲದೇವತೆ ಎಂದು ಆರಾಧಿಸುವರು.

೪. ನಿಷೇಧಗಳು ಸಂಪೂರ್ಣವಾಗಿ ನಿಷೇಧಿಸಲ್ಪಟ್ಟ ವರ್ತನೆಗಳು

೫. ಮಾತ್ರಿಕ ವಿದ್ಯೆ ಎಂದರೆ ವಾಮಚಾರ ಮಾಟ ಮಂತ್ರ ಇತ್ಯಾದಿ

೬. ಮೊಜಂದಾರ್ ಡಿ.ಎನ್. ೧೯೬೮ Races and culture of India, P-೫೬

೭. Stephen Fuchs, 1973, The Aboriginal Tribes of India Macmillin, P-೨೬.

೮. ಉಡುಪಿ ಜಿಲ್ಲೆಯ ಮರಾಟಿ ನಾಯ್ಕ ಸಮುದಾಯದ ಗದ್ದುಗೆ ದೇವಸ್ತಾನದ ಪಟ್ಟಿ, ಆದಿಶಕ್ತಿ ಸ್ವರೂಪಿಣಿಯಾದ ದೇವಿಯ ವಿವಿದ ಹೆಸರುಗಳು

೯. ಕೆ.ಎಲ್. ಕುಂಡತ್ತಾಯ : 'ನಂಬಿಕೆ – ನಡವಳಿಕೆ' ೨೦೦೩, ಪುಟ ಸಂಖ್ಯೆ ೨೯

೧೦. ಡಾ. ಹಿ.ಚಿ. ಬೋರಲಿಂಗಯ್ಯ, ಸಂಪಾದಕೀಯ ಕರ್ನಾಟಕ ಜನಪದ ಕಲೆಗಳ ಕೋಶ ೧೯೯೬, ಪುಟ ಸಂಖ್ಯೆ ೩೭

೧೧. ಡಾ. ಲಕ್ಷ್ಮಿ ಪ್ರಸಾದ, ತುಳುನಾಡಿನ ನಾಗಬ್ರಹ್ಮ ಮತ್ತು ಕಂಬಳ, ೨೦೧೩, ಪು–೬–೧೩.

೧೨. ಪ್ರೊ. ಎ. ವಿ. ನಾವಡ, ತುಳು ಪೂಜೆ, ೨೦೧೩, ಪು–೧೫೯–೧೬೫.

೧೩. ಚಿನ್ನಪ್ಪ ಗೌಡ, ಭೂತಾರಾಧನೆ, ಜಾನಪದೀಯ ಅಧ್ಯಯನ, ಪು–೬೪

೧೪. ತಿಳುವಳಿಕೆದಾರರು, ಶ್ರೀಮತಿ ಲಲಿತಮ್ಮ ನಾಯಕ, ಮಾಹಿತಿದಾರರು, ಜಡ್ಡಿನಗದ್ದೆ, ಅಮವಾಸೆ ಬೈಲು ಕುಂದಾಪುರ ವಯಸ್ಸು, ೭೦.

೧೫. ಡಾ. ಅಮೃತ ಸೋಮೇಶ್ವರ, ತುಳುವ ಜನಾಪದ, ಕೆಲವು ನೋಟಗಳು, ಪು, ೧೯೬–೨೦೫.

೧೬. ಪ್ರೊ. ಎ. ವಿ. ನಾವಡ, ತುಳು ಪೂಜೆ, ೨೦೧೩, ಪು– ೧೪೬–೧೫೦.

೧೭. ತಿಳುವಳಿಕೆದಾರರು, ಶ್ರೀಮತಿ ಭಾಗಿ ಭಾಯಿ ಮತ್ತು ಜಲ್ಲಿ ನಾಯ್ಕ, ಜನಶಾಲೆ, ಸಿದ್ಧಾಪುರ ಕುಂದಾಪುರ ತಾಲೂಕು.

೧೮. ಡಾ. ವಾಮನ ನಂದಾವರ, (ಸಂ), ಕರಾವಳಿ ಆಚರಣೆಗಳು, ಭಾಗ–೧, ಕನ್ನಡ ಸಂಸ್ಕೃತಿ ಇಲಾಖೆ, ಬೆಂಗಳೂರು, ಪು–೩೬.

೧೯. ಅದೇ ಪು–೩೬–೪೬.

೨೦. ಯು. ಪಿ. ಉಪಾಧ್ಯಾಯ, ೨೦೦೩, ಸ್ಕಂದ ವೈಭವ, ಪುಟ : ೧೦೧–೧೦೬

೨೧. ತಿಳುವಳಿಕೆದಾರರು, ನಾಗೇಶ ನಾಯ್ಕ ವೈಜ್ಞಾನಿಕ ಜೋತ್ಯಿಷಿಗಳು ಗಣೇಶಪುರ.

೨೨. ಡಾ. ಅಮೃತ ಸೋಮೇಶ್ವರ, ತುಳುವ ಜನಾಪದ, ಕೆಲವು ನೋಟಗಳು, ಪು–೧೬.

೨೩. ಡಾ. ಅಮೃತ ಸೋಮೇಶ್ವರ, ತುಳುವ ಜನಾಪದ, ಕೆಲವು ನೋಟಗಳು ಹೊನ್ನಾರು ಮಾಲೆ, ಪ್ರಸಾರಾಂಗ, ಕ.ವಿ.ಹಂ. ಪು, ೧೭

೨೪. ಸರ್ಪಗಳ ಜಾತಿಗೆ ಸೇರಿದ ಒಂದು ಸರ್ಪದ ಹೆಸರು, ಉದಾ: ತಕ್ಷಕ ಎಂಬ ಹಾಗೆ ಆಲುಕ

೨೫. ಚಿತ್ತೇರಿ ಎಂದರೆ? ಕುಂದಾಪುರ ಪರಿಸರದ ಜನಪದರು ಸರ್ಪದ ವಾಸಸ್ತಾನಕ್ಕೆ ನಾಗನ ಹುತ್ತ, ನಾಗಬ್ರಹ್ಮಸ್ತಾನಕ್ಕೆ ಚಿತ್ತೇರಿ ಎಂದು ಕರೆಯುವರು

೨೬. ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಮಂಗಳೂರು ತಾಲೂಕಿನ ಮುಲ್ಕಿ ಹೋಬಳಿಯ ಕವತ್ತಾರು ಎಂಬಲ್ಲಿ 'ಸಿರಿ' ದೇವಾಲಯ ಇದೆ.

೨೭. ಲೆಕ್ಕಿಗಿಡ, ಇದು ಒಂದು ಸಸ್ಯದ ಹೆಸರು, ಈ ಸಸ್ಯವನ್ನು ದೈವದ ಆವೇಶದ ಸಂದರ್ಭದಲ್ಲಿ ಕೈಯಲ್ಲಿ ಹಿಡಿದುಕೊಳ್ಳುತ್ತಾರೆ.

೨೮. ಡಾ. ಲಕ್ಷ್ಮೀ ಪ್ರಸಾದ್, ತುಳುನಾಡಿ ನಾಗಬ್ರಹ್ಮ ಮತ್ತು ಕಂಬಳ, ೨೦೧೩ ಪುಟ, ೬-೧೮

೨೯. ತಿಳುವಳಿಕೆದಾರರು ಶ್ರೀ ವಿಠ್ಠಲ ಮೂರ್ತಿ

೩೦. ತಿಳುವಳಿಕೆದಾರರು ಶ್ರೀ ವಿಠ್ಠಲ ಮೂರ್ತಿ

೩೧. ತಿಳುವಳಿಕೆದಾರರು ಶ್ರೀ ಮುರುಗೇಂದ್ರ ಪಡಿಯಾಳ್ ಮುಡಬಿದ್ರೆ, ವ್ಯಾಪಾರಸ್ತರು ಕಾರ್ಕಳ

೩೨. ತಿಳುವಳಿಕೆದಾರರು, ಆಶ್ಲೇಷ ಬ್ರಹ್ಮಶ್ರೀ ಶಿವಪ್ರಸಾದ್ ತಂತ್ರಿಗಳು, ಉಡುಪಿ, ಸಂಸ್ಕೃತ ಕಾಲೇಜು

೩೩. ತಿಳುವಳಿಕೆದಾರರು, ಕೆ. ಕೆ. ನಾಯ್ಕ ಬಾರಕೂರು ಅಧ್ಯಕ್ಷರು ಉಡುಪಿ ಜಿಲ್ಲಾ ಮರಾಟಿ ಸಮಾಜಸೇವಾ ಸಂಘ, ಉಡುಪಿ

೩೪. ಅದೇ,

೩೫. ತಿಳುವಳಿಕೆದಾರರು, ಶ್ರೀ ಪುರುಷೋತ್ತಮ ಐಗಳ್ ಪ್ರಧಾನ ಅರ್ಚಕರು ಶ್ರೀವೀರಭದ್ರ ದುರ್ಗಪರಮೇಶ್ವರಿ ದೇವಸ್ಥಾನ ಸಿದ್ಧಕಟ್ಟೆ, ಬಂಟ್ವಾಳ

೩೬. ಕುಂದಾಪುರ ಪರಿಸರದ ಜನಪದರು ನಾಗನ ಆರಾಧನೆ ಮತ್ತು ವಾಸದ ಹುತ್ತವನ್ನು 'ಚಿತ್ತೇರಿ' ಎಂದು ಕರೆಯುವರು.

೩೭. ಕುಳಿಕ ಎಂದರೆ ನಾಗನ ಜಾತಿಯಲ್ಲಿ ಒಂದು ವಿಧ ಗುಳಿಗನಿಗೆ ಮತ್ತೊಂದು ಹೆಸರು ಕುಳಿಗ

೩೮. ಅಣ್ಣಪ್ಪ ನಾಯ್ಕ ಚಾಂತಾರು ಮತ್ತು ರಮೇಶ ನಾಯ್ಕ ಪೇತ್ರಿ ಬ್ರಹ್ಮಾವರ

೩೯. ಬಾಳೆಗೊನೆ ಕಡಿಯುವುದು: ಗೊಂದೋಳು ಪೂಜೆಯು ನಿಗದಿತ ದಿನದಂದು ಬಾಳೆಗೊನೆ ಕಡಿಯುತ್ತಾರೆ. ಚಿಕ್ಕದಾಗಿ ಅಂಗಾರೆ ಪೂಜೆ ಅಥವಾ ಶುಕ್ರವಾರ ಗೊಂದೋಳು ಪೂಜೆ ನಡೆಯುವ ಸಂದರ್ಭದಲ್ಲಿ ಬಾಳೆಗೊನೆ ಕಡಿಯುವ ಕ್ರಮ ಇಲ್ಲ. ಆದರೆ ದೊಡ್ಡ ಪ್ರಮಾಣದಲ್ಲಿ ಪೂಜೆ ನಡೆಸುವುದಿದ್ದರೆ ಊರ ಮತ್ತು ಪರವೂರ ಭಕ್ತರನ್ನು ಸೇರಿಸಿ ಗೊಂದೋಳು ಪೂಜೆ ನಡೆಸುವುದಾದರೆ ಬಾಳೆಗೊನೆ ಕಡಿಯುವ ಕ್ರಮವಿದೆ. ಇದನ್ನು ತುಳುವಿನಲ್ಲಿ 'ಕೈಲು ಕಡ್ಪಿನಿ' ಇದು ಪೂಜೆಯ ಆರಂಭಿಕ ಹಂತ ಈ ವಿಧಿಯನ್ನು ಏಳು ಅಥವಾ ಒಂಬತ್ತು ದಿನಗಳ ಮೊದಲು ಮಾಡುತ್ತಾರೆ. ಈ ದಿನದಂದು ಬಾಳೆಗೊನೆಯನ್ನು ತಂದು ಹಾಜರಿದ್ದವರೆಲ್ಲರೂ ಸೇರಿ ದೇವರೆದುರು ನಿಂತು ಪ್ರಾರ್ಥನೆ ಸಲ್ಲಿಸುತ್ತಾರೆ. ಹೀಗೆ ಗೊನೆ ಕಡಿದ ಮೇಲೆ ಪೂಜೆ ನಡೆಸುವ ಮನೆಯವರು ಕೆಲವೊಂದು ವಿಧಿ ನಿಷೇದವನ್ನು ಆಚರಿಸಬೇಕಾಗುತ್ತದೆ. ಗೊನೆ ಕಡಿದ ದಿನದಿಂದ ಪೂಜೆ ನೆರವೇರುವ ತನಕ ಮನೆಯಲ್ಲಿ ಯಾವುದೇ ಸಮಾರಂಭಗಳನ್ನು ಇಟ್ಟುಕೊಳ್ಳಬಾರದು.

೪೦. ಗುರುಮಾರಿಕೆ ಅಂದರೆ ಗುರು ಉಪದೇಶ ಪಡೆದಿರುವ ವ್ಯಕ್ತಿಗಳೇ ಗೊಂದೋಳು ಪೂಜೆಯಲ್ಲಿ "ಭುತೆ"ಯರಾಗಿ ಭಾಗವಹಿಸಬಹುದು.

೪೧. ಕುರ್ದಿ ನೀರು : ತುಳುವಿನಲ್ಲಿ ಕುರಿನೀರು ಎಂದು ಕರೆಯುವರು. ಭೂತಾರಾಧನೆ ಸಂದರ್ಭದಲ್ಲಿ ಉಪಯೋಗಿಸುತ್ತಾರೆ. ಒಂದು ಪಾತ್ರೆ / ತಂಬಿಗೆಯಲ್ಲಿ ನೀರು ಹಾಕಿ, ಆ ನೀರಿಗೆ ಹಳದಿ ಮತ್ತು ಸುಣ್ಣ ಹಾಕಿ ಕಲಕಿದಾಗ ಕುರ್ದಿನೀರು ತಯಾರಾಗುತ್ತದೆ.

೪೨. ಗೊಂದೋಳು ಪೂಜೆ ಬಲಿ ನೀಡುವ ಹಂದಿ ಮತ್ತು ಕೋಳಿಗಳಿಗೆ, ಬಲಿ ನೀಡುವುದರ ಮುಂಚೆ ದೇವರನ್ನು ಪ್ರಾರ್ಥಿಸಿ, ಅಕ್ಷತೆ ಹಾಕಿ, ಆಹಾರ ನೀಡುವ ವಿಧಿಗೆ ಪಾಯಿದ್ ಎಂದು ಕರೆಯುವರು.

೪೩. ಮೇಲ್ಕಾಪು: ಗೊಂದೋಳು ಪೂಜೆಗೆ ಸಂಬಂಧಿಸಿ ಅಮ್ನೂರು / ಮಹಾಮಯಿ ದೇವರ ಪೀಠ / ಮಂಟಪದಲ್ಲಿ ಮೇಲ್ಭಾಗದಲ್ಲಿ ಬಿಳಿ ವಸ್ತ್ರ ಕಟ್ಟುತ್ತಾರೆ. ಇದಕ್ಕೆ ಮೇಲ್ಕಾಪು ಒಂದು ವೇಳೆ ಭೂತಗಳಿಗೆಯಾದರೆ ಕೊಡಿಯಡಿ ಎಂದು ಕರೆಯುವರು.

೪೪. ತಿಳುವಳಿಕೆದಾರರು ಶ್ರೀ ಪುರುಷೋತ್ತಮ ಭಟ್ ಅಧ್ಯಕ್ಷರು, ಕರಾಡ್ ಬ್ರಾಹ್ಮಣ ಸಂಘ ಮಂಗಳೂರು ಮತ್ತು ಶ್ರೀ ಸುನೀಲ್ ಭಟ್ ಪ್ರಧಾನ ಅರ್ಚಕರು ಶ್ರೀ ಕ್ಷೇತ್ರ ಗಣೇಶಪುರ ಕಾಟಪಳ್ಳಿ

೪೫. ತಿಳುವಳಿಕೆದಾರರು ಶ್ರೀ ರಾಮಚಂದ್ರ ನಾಯ್ಕ ಅಡ್ಯಾರು, ಮಂಗಳೂರು.

೪೬. ತಿಳುವಳಿಕೆದಾರರು ಶ್ರೀ ಕೊರಗಪ್ಪ ನಿವೃತ್ತಾ ಪೊಲೀಸ್ ಅಧಿಕಾರಿ ಮಂಗಳೂರು.

೪೭ ತಿಳುವಳಿಕೆದಾರರು, ಶ್ರೀ ಸುಂದರ್ ಶೇಟ್ಟಿಗಾರ ಆಡಳಿತ ಮೋತ್ತೆಶ್ವರ ಶ್ರೀ ವೀರಭದ್ರ ದುರ್ಗಾಪರಮೇಶ್ವರಿ ದೇವಸ್ಥಾನ ಸೂರತ್ಕಲ್

೪೮. ತಿಳುವಳಿಕೆದಾರರು ಈ ಮೇಲಿನಂತೆ ಮಾಹಿತಿ ನೀಡಿರುತ್ತಾರೆ.

೪೯. ಕೈತಂಟೆ ನರಸಿಂಹ ಭಟ್, ಗೋಂದಳ ಪೂಜೆ, ಎ. ಕೃಷ್ಣ ಭಟ್ಟ (ಸಂ), ಸಂದರ್ಶನ ಅಭಿನಂದನಾ ಗ್ರಂಥ ೧೯೭೭, ವಿಜಯ ಕಾಲೇಜು ಮುಲ್ಕಿ, ೧೭

೫೦. ಡಾ. ಲಕ್ಷ್ಮೀ ಜಿ. ಪ್ರಸಾದ್, ೨೦೧೩ ಪುಟ, ೨೫೫

೫೧. ತಿಳುವಳಿಕೆದಾರರು, ರುಕ್ಮಯ ನಾಯ್ಕ (ಮಹಾಮಾಯಿ ದರ್ಶನ ಪಾತ್ರಿ) ಮತ್ತು ತೋಮನಾಯ್ಕ, ಎಡಪದವು – ಮಿಜಾಯ ಮಂಗಳೂರು ತಾಲೂಕು

೫೨. ಬಾಳೆಗೊನೆ ಮುಹರ್ತದ ಬಗ್ಗೆ ತಿಳುವಳಿಕೆದಾರರು ಮಾಹಿತಿಯನ್ನು ನೀಡಿರುತ್ತಾರೆ.

೫೩. ಡಾ. ಪುರುಷೋತ್ತಮ ಬಿಳಿಮಲೆ, ಕರಾವಳಿ ಜಾನಪದ – ೧೯೯೦ ಪು–೫೮

ಅಧ್ಯಾಯ : ಏಳು.....
ಸಮಾರೋಪ

ಅಧ್ಯಯನದ ಫಲಿತಗಳು

ಸಲಹೆಗಳು

ಪರಾಮರ್ಶನ ಗ್ರಂಥಗಳು

ಅಧ್ಯಾಯ : ಏಳು
ಸಮಾರೋಪ

ಆದಿ ಮಾನವನ ಸಾಂಸ್ಕೃತಿಕ ಇತಿಹಾಸ ತುಂಬಾ ಕುತೂಹಲಕಾರಿಯಾದುದಾಗಿದೆ. ಅವನ ಸಾಂಸ್ಕೃತಿಕ ಇತಿಹಾಸದಲ್ಲಿ ಮೂರು ಹಂತಗಳನ್ನು ಗುರುತಿಸಲಾಗುತ್ತದೆ. ಆಹಾರ ಸಂಗ್ರಹಣೆ, ಬೇಟೆ, ಪಶುಪಾಲನೆ ಮತ್ತು ಕೃಷಿ. ಇವೇ ಮರಾಟಿ ನಾಯ್ಕ ಮತ್ತ ಮರಾಟಿ ಸಮುದಾಯದವರು ಬೇಟೆ ಪಶುಪಾಲನೆ ಹಂತ ದಾಟಿ ಕೃಷಿ ಹಂತಕ್ಕೆ ಸೇರಿ, ಆ ಹಂತದಿಂದ ವೃತ್ತಿಪರಿವರ್ತನೆಯ ಹಂತದಲ್ಲಿ ಕಾಲಿಡುತ್ತಿರುವುದು ಅಧ್ಯಯನದಿಂದ ಕಂಡುಬಂದಿರುತ್ತದೆ. ಈ ಮರಾಟಿ ಸಮುದಾಯಗಳು ಮಹಾರಾಷ್ಟ್ರದ ರತ್ನಾಗಿರಿ, ಪೂನಾ, ಕರಾಡ, ಕೊಲ್ಹಾಪುರ ಮುಂತಾದ ಪ್ರದೇಶದಲ್ಲಿದ್ದವರು, ಇವರ ಪೂರ್ವಜರಲ್ಲಿ ಕೆಲವರು ಸೈನ್ಯದಲ್ಲಿ ಸೇವೆ ಸಲ್ಲಿಸುತ್ತಿದ್ದರು. ಮಹಾರಾಷ್ಟ್ರದಲ್ಲಿ ನಿರಂತರವಾಗಿ ಮುಸ್ಲಿಂರ ದಾಳಿಗಳು ನಡೆಯುತ್ತಿದ್ದವು ಮತ್ತು ಮಹಾರಾಷ್ಟ್ರ ಮೇಲಿಂದ ಮೇಲೆ ಬರಗಾಲಕ್ಕೆ ಒಳಗಾಗುತ್ತಿತ್ತು. ಮುಸ್ಲಿಂರ ದಾಳಿಗೆ ಮತ್ತು ಬರಗಾದ ಕಾರಣದಿಂದ ಗೋವಾಕೆ ವಲಸೆ ಬಂದರು. ಅಲ್ಲಿ ಪೋರ್ಚುಗೀಸರು ನಡೆಸುತ್ತಿದ್ದ ಮತಾಂತರಕ್ಕೆ ನಲುಗಿ ಕರ್ನಾಟಕ ಕರಾವಳಿ ಮತ್ತು ಕೇರಳದ ಕಾಸರಗೋಡಿನ ದಟ್ಟ ಅರಣ್ಯಗಳತ್ತ ವಲಸೆ ಬಂದರು. ಮರಾಟಿ ಸಮುದಾಯಗಳು ಮಹಾರಾಷ್ಟ್ರದ ಕರಾಡ ಪ್ರದೇಶದಲ್ಲಿ ವಾಸಿಸುತ್ತಿದ್ದ ಮತ್ತು ಮರಾಟಿಗರಿಗೆ ಪುರೋಹಿತರಾಗಿದ್ದ ಕರಾಡ ಬ್ರಾಹ್ಮಣರು ಕರಾವಳಿ ಕರ್ನಾಟಕ್ಕೆ ವಲಸೆ ಬಂದಿದ್ದಾರೆ. ಕಾಡಿನಲ್ಲಿ ಕುಮೇರಿ ಬೇಸಾಯ ಮಾಡುತ್ತ ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶಕ್ಕೆ ಕುಮೇರಿ ಕೃಷಿಗೆ ಅಲೆದಾಡುತ್ತಿದ್ದರು. ಹೀಗಾಗಿ ಇವರು ಅಲೆಮಾರಿಗಳಾಗಿ, ಅರೆ ಅಲೆಮಾರಿಗಳಾಗಿ ಮತ್ತು ನೆಲೆನಿಂತ ಕೃಷಿಕರಾಗಿ ಕಂಡು ಬರುತ್ತಾರೆ. ಅಲೆಮಾರಿ ಜೀವನದಿಂದ ನೆಲೆ ನಿಂತು, ಕೃಷಿ ವೃತ್ತಿ ಜೀವನದವರೆಗೆ ಇವರಲ್ಲಿ ಆದ ಬದಲಾವಣೆಗಳೇನು ಹಾಗೂ ವೃತ್ತಿಯನ್ನು ಬಿಟ್ಟು ಇತರೆ ವೃತ್ತಿಗಳನ್ನು ಅವಲಂಬಿಸಬೇಕಾದ ಬಂದ ಸಂದರ್ಭದಲ್ಲಿ ಉಂಟಾದ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ, ಧಾರ್ಮಿಕ, ಸಾಂಸ್ಕೃತಿಕ ಸಮಸ್ಯೆಗಳ ವಿಷಯಗಳನ್ನು ಈ ಪ್ರಬಂಧದಲ್ಲಿ ಚರ್ಚಿಸಲು ಪ್ರಯತ್ನಿಸಲಾಗಿದೆ.

ಸಮೂಹ ನಿಷ್ಠೆ ಸಮಾಜವು ವ್ಯಕ್ತಿನಿಷ್ಠೆ ಸಮಾಜದೆಡೆಗೆ ಚಲಿಸುತ್ತಿರುವ ಈ ಸಂದರ್ಭದಲ್ಲಿ ಕುಟುಂಬ, ವಿವಾಹ, ನ್ಯಾಯ ವ್ಯವಸ್ಥೆ, ಸ್ತ್ರೀಯರ ಸ್ಥಾನಮಾನ, ಗುರಿಕಾರ ಪದ್ಧತಿ, ವಿಧವಾ ವಿವಾಹ ಮುಂತಾದವುಗಳಲ್ಲಿ ಆಗುತ್ತಿರುವ ಬದಲಾವಣೆಗಳೇನು ಹಾಗೂ ಈ ಬದಲಾವಣೆಯ ಕಾರಣಕ್ಕಾಗಿ ಆಗುತ್ತಿರುವ ಸಮಸ್ಯೆಗಳೇನು ಎಂಬ ವಿಚಾರಗಳನ್ನು ಇಲ್ಲಿ ಚರ್ಚಿಸಲಾಗಿದೆ.

ಮೇಲ್ನೋಟಕ್ಕೆ ಮರಾಟಿ ನಾಯ್ಕರು ಆರ್ಥಿಕವಾಗಿ ಪ್ರಬಲರೆಂಬಂತೆ ಕಂಡು ಬಂದರೂ ವಾಸ್ತವವಾಗಿ ಇವರಲ್ಲಿ ಗ್ರಾಮಾಂತರ, ಅರಣ್ಯದಂಚಿನಲ್ಲಿರುವ ಹೆಚ್ಚಿನ ಕುಟುಂಬಗಳು ಇಂದಿಗೂ ಬಡತನದಲ್ಲಿಯೇ

ಜೀವನ ಸಾಗಿಸುತ್ತಿರುವುದು ಕಂಡು ಬರುತ್ತದೆ. ಇವರ ಸಾಮಾಜಿಕ, ಸಾಂಸ್ಕೃತಿಕ ಮತ್ತು ಧಾರ್ಮಿಕ ಆಚರಣೆಗಳು ವಿಶಿಷ್ಟವಾಗಿದ್ದರೂ, ಪ್ರಾದೇಶಿಕ, ಭೂಮಾಲಿಕರ ಮತ್ತು ಪ್ರಬಲ ಸಮುದಾಯಗಳಾದ ಬಂಟ, ಬಿಲ್ಲವ, ಬ್ರಾಹ್ಮಣ ಸಂಸ್ಕೃತಿಗಳು ಈ ಎರಡು ಸಮುದಾಯಗಳ ಮೇಲೆ ಪ್ರಭಾವ ಬೀರಿರುವುದು ಗೋಚರಿಸುತ್ತದೆ. ಪ್ರಾದೇಶಿಕ ಆರಾಧನೆಗಳಾದ ಭೂತಾರಾಧನೆ, ಕುಲೆ ಮದ್ಮೆ(ಮದುವೆ) ನಾಗಾರಾಧನೆ, ಯಕ್ಷಗಾನ, ಮಾತೃ ಆರಾಧನೆ, ಸಿರಿ ಆರಾಧನೆ ಹಾಗೂ ಹುಟ್ಟಿನಿಂದ ಸಾವಿನವರೆಗಿನ ಸಂಸ್ಕಾರಗಳು, ಹಬ್ಬ ಹರಿದಿನ ಮುಂತಾದವುಗಳಲ್ಲಿ ಪ್ರಾದೇಶಿಕ ಸಂಸ್ಕೃತಿ ಪ್ರಭಾವ ಬೀರಿ ಅದನ್ನು ಅನುಸರಿಸುತ್ತಿರುವುದನ್ನು ಕಾಣಬಹುದು. ಮರಾಟಿಗರು ಪೂರ್ಣ ಪ್ರಮಾಣದಲ್ಲಿ ಬದಲಾವಣೆಗೆ ಒಳಗಾಗಿ ಬ್ರಾಹ್ಮಣೀಕರಣಗೊಳ್ಳುವುದಕ್ಕಿಂತ ಮೊದಲು ಅವರ ಪಾರಂಪರಿಕ ಆಚಾರ, ವಿಚಾರ ಸಂಪ್ರದಾಯ ನಂಬಿಕೆ, ವೃತ್ತಿ, ಕಲೆ ಆರಾಧನೆ ಮುಂತಾದ ವಿಚಾರಗಳನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ.

ಮರಾಟಿಗರು ಮತ್ತು ಮರಾಟಿ ನಾಯ್ಕರು ಸೈನಿಕರಾಗಿ, ಸೈನಿಕ ವ್ಯವಸ್ಥೆಗೆ ಪೂರಕವಾದ ವೃತ್ತಿಗಳಲ್ಲಿ ಆರಂಭಿಕ ಹಂತದಲ್ಲಿದ್ದರೂ ಇಂದು ಅನೇಕರು ಕೃಷಿಕ ವೃತ್ತಿಯಲ್ಲಿ ತೊಡಗಿರುವುದು ಕಂಡು ಬರುತ್ತದೆ. ಉಳಿದಂತೆ ಸಣ್ಣ ವ್ಯಾಪಾರ, ಬೀಡಿ ಕಾರ್ಮಿಕ, ಕೂಲಿ ಕಾರ್ಮಿಕ ಕಾರ್ಖಾನೆ ಕಾರ್ಮಿಕ, ಚಾಲಕ ಮುಂತಾದ ವೃತ್ತಿಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಅಧ್ಯಯನಕ್ಕೆ ಒಳಪಡಿಸಿರುವ ಎರಡು ಮರಾಟಿ ಸಮುದಾಯಗಳು ವಿಭಕ್ತ ಕುಟುಂಬಗಳ ಬದಲಾಗಿ ಅವಿಭಕ್ತ ಕುಟುಂಬಗಳತ್ತ ಒಲವು ವ್ಯಕ್ತಪಡಿಸಿದ್ದಾರೆ. ಇದಕ್ಕೆ ಆಧುನಿಕತೆಯ ಪ್ರಭಾವವೇ ಕಾರಣವೆಂದು ಹೇಳಬಹುದು. ಮರಾಟಿಗರು ವಾಸಿಸುತ್ತಿರುವ ಮನೆಗಳ ಸ್ವರೂಪವನ್ನು ಗಮನಿಸಿದಾಗ ಅನೇಕರು ಹೆಂಚಿನ ಮನೆಗಳಲ್ಲಿ ವಾಸಿಸುತ್ತಿದ್ದಾರೆ. ಅಲ್ಲದೆ ಅವರ ಸಾಂಪ್ರದಾಯಿಕ ಮನೆಯ ರಚನೆಯಲ್ಲಿ ಬದಲಾವಣೆಯಾಗಿದ್ದು, ಇದು ಅವರ ಮನ್ನೋಟವನ್ನು ತೋರಿಸುತ್ತದೆ. ಇವರಲ್ಲಿ ಬಹುತೇಕ ಜನರು ಬಡತನದಲ್ಲಿ ಜೀವಿಸುತ್ತಿದ್ದು, ತಮ್ಮ ಸ್ವಂತ ದುಡಿಮೆಯ ಆದಾಯದಿಂದ ಕೆಲವರು ಕೃಷಿಗಾಗಿ ಜಮೀನು ಖರೀದಿಸಲು ಪರದಾಡುತ್ತಿರುವುದು ಕಂಡುಬರುತ್ತದೆ.

ಮರಾಟಿ ನಾಯ್ಕ ಮತ್ತು ಮರಾಟಿಗರ ಸಾಂಪ್ರದಾಯಿಕ ವಿವಾಹ ಪದ್ಧತಿಯು ಇಂದು ಬದಲಾವಣೆಯಾಗುತ್ತಿದ್ದು, ಪುರೋಹಿತರ ಮುಂದಾಳತ್ವದಲ್ಲಿ ಜಾತಕ, ವೈದಿಕ ಪದ್ಧತಿಯ ಮಂತ್ರ, ಹೋಮ, ಹವನ, ಸಪ್ತಪದಿ, ಮಾಂಗಲ್ಯಧಾರಣೆ ಮುಂತಾದವು ವೈದಿಕ ಸಂಪ್ರದಾಯಕ್ಕೆ ಅನುಗುಣವಾಗಿ ನಡೆಯುತ್ತಿವೆ. ಗುರಿಕಾರರ ನೇತೃತ್ವದಲ್ಲಿ ನಡೆಯುತ್ತಿದ್ದ ಇವರ ಶುಭ ಮತ್ತು ಅಶುಭ ಆಚರಣೆಗಳು ಇಂದು ಆಧುನೀಕರಣ ಹಾಗೂ ಅನ್ಯ ಸಮುದಾಯಗಳ ಪ್ರಭಾವ ಪ್ರೇರಣೆಗಳಿಂದಾಗಿ ಗುರಿಕಾರರ ಅಸ್ತಿತ್ವವೇ ಇಲ್ಲದ್ದಂತಾಗುತ್ತಿದೆ. 'ತೆರ ಪದ್ಧತಿ' ಸಂಪ್ರದಾಯ ಹೊಂದಿರುವ ಈ ಸಮುದಾಯದಲ್ಲಿ ಇಂದು ವರದಕ್ಷಿಣೆ ಪಡೆಯುವ ಮತ್ತು ಕೊಡುವ ಪರಂಪರೆ ಆರಂಭವಾಗುತ್ತಿದೆ. ಇವರಲ್ಲಿಯ ಕೆಲ ಶ್ರೀಮಂತರು ಹೆಚ್ಚಿನ ಪ್ರಮಾಣದಲ್ಲಿ ವರದಕ್ಷಿಣೆ ಕೊಡುವುದು ಮತ್ತು ಪಡೆದುಕೊಳ್ಳುವುದು ಗೌರವ, ಪ್ರತಿಷ್ಠೆ ಎಂದುಕೊಂಡಿದ್ದಾರೆ.

ಮರಾಟಿ ಮತ್ತು ಮರಾಟಿ ನಾಯ್ಕ ಸಮುದಾಯದವರ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ, ಧಾರ್ಮಿಕ, ಸಾಂಸ್ಕೃತಿಕ ಸ್ಥಿತಿಗಳಲ್ಲಿ ಕೆಲವು ಬದಲಾವಣೆಗಳಾಗುತ್ತಿದ್ದರೂ ಇನ್ನೂ ಪೂರ್ಣ ಪ್ರಮಾಣದಲ್ಲಿ ನಂಬಿಕೆ, ಆಚರಣೆ, ಸಾಂಪ್ರದಾಯಗಳಲ್ಲಿ ಬದಲಾವಣೆಗಳಾಗಿಲ್ಲ ಎಂಬುದು ಕಂಡು ಬರುತ್ತದೆ. ಈ ಎರಡು ಸಮುದಾಯಗಳಲ್ಲಿ ಪಾರಂಪರಿಕ ಆಚರಣೆ ಸಂಪ್ರದಾಯಗಳು ಉಳಿದುಕೊಂಡಿದ್ದರ ಪರಿಣಾಮವಾಗಿ ಅವರಲ್ಲಿ ಸಾಮರಸ್ಯ ಮತ್ತು ಐಕ್ಯತೆ ಉಳಿದುಕೊಂಡಿದೆ ಎಂದು ಹೇಳಬಹುದು.

ಅಧ್ಯಯನದ ಫಲಿತಗಳು

ಪ್ರಸ್ತುತ"ಮರಾಟಿ ಸಮುದಾಯಗಳ ತೌಲನಿಕ ಅಧ್ಯಯನ" ಎಂಬ ಈ ವಿಷಯದಲ್ಲಿ ಮರಾಟಿ ನಾಯ್ಕ ಮತ್ತು ಮರಾಟಿಗರಲ್ಲಿ ಬದಲಾಗುತ್ತಿರುವ ಆರ್ಥಿಕ, ಶೈಕ್ಷಣಿಕ, ಸಾಮಾಜಿಕ, ಧಾರ್ಮಿಕ ಹಾಗೂ ಸಾಂಸ್ಕೃತಿಕ ಸ್ಥಿತಿಗತಿಗಳ ಅಧ್ಯಯನದಿಂದ ವ್ಯಕ್ತವಾಗಿರುವ ಫಲಿತಗಳನ್ನು ಈ ರೀತಿಯಾಗಿ ಪಟ್ಟಿ ಮಾಡಲಾಗಿದೆ.

೧. ಕರ್ನಾಟಕದ ಕರಾವಳಿ ಜಿಲ್ಲೆಗಳಾದ ಉತ್ತರ ಕನ್ನಡ, ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಿಗೆ ಮಹಾರಾಷ್ಟ್ರದ ರತ್ನಾಗರಿ, ಸಾಂಗ್ಲಿ, ಕೊಲ್ಹಾಪೂರ, ಸೊಲ್ಹಾಪುರ, ಕರಾಡ, ಮರಾಟಾವಾಡ ಮುಂತಾದ ಪ್ರದೇಶಗಳಿಂದ ರಾಜಕೀಯ ಮತಾಂತರ, ನೈಸರ್ಗಿಕ ವಿಕೋಪಗಳಿಂದ ವಲಸೆ ಬಂದ ಮರಾಟಿ, ಮರಾಟಿ ನಾಯ್ಕ, ಕುಡುಬಿ, ಕುಣಬಿ, ಕುಂಬ್ರಿ ಮರಾಟಿ, ಕಚ್ಚೆಗೌಳಿಗ, ಕರಾಡ ಬ್ರಾಹ್ಮಣ ಮುಂತಾದ ಸಮುದಾಯಗಳು ಮರಾಟಿ ಮತ್ತು ಕೊಂಕಣಿ ಮಿಶ್ರಿತ ಮರಾಟಿ ಭಾಷೆ ಮಾತನಾಡುವ ಇವರುನ್ನು ಹಲವಾರು ಪಂಗಡಗಳನ್ನು ಒಳಗೊಂಡಿರುವ ಮರಾಟಿ ಸಮೂಹಗಳು ಎಂದು ಹೇಳಬಹುದು. ಇವರು ಕರ್ನಾಟಕದ ಕರಾವಳಿಯ ವಿವಿಧ ಪ್ರದೇಶಗಳಲ್ಲಿ ನೆಲೆ ಕಂಡುಕೊಂಡ ಮೇಲೆ ಸ್ಥಳೀಯರು ಇವರನ್ನು ಬೇರೆ ಹೆಸರುಗಳಿಂದ ಕರೆದಿರುವುದು ಕಂಡು ಬರುತ್ತದೆ.

೨. ಇಂದಿನ ಮಹಾರಾಷ್ಟ್ರದ ಬಹುಭಾಗಗಳು ಪ್ರಾಚೀನ ಕರ್ನಾಟಕದಲ್ಲಿತ್ತು ಎಂಬುದಕ್ಕೆ ಅನೇಕ ಕನ್ನಡ ಶಾಸನಗಳು ಮಾಹಿತಿ ನೀಡುತ್ತವೆ. ಪ್ರಾಚೀನ ಕನ್ನಡದ ಪ್ರದೇಶಗಳಾದ ಜತ್ತ, ರತ್ನಗಿರಿ, ಸಂಗ್ಲಿ, ಕೊಲ್ಹಾಪುರ, ಸೋಲ್ಹಾಪುರ, ಕರಾಡ ಮರಾಟವಾಡ ಮುಂತಾದ ಪ್ರದೇಶಗಳಿಂದ ಕರಾವಳಿ ಕರ್ನಾಟಕಕ್ಕೆ ವಲಸೆ ಬಂದಿರುವ ಮತ್ತು ಮರಾಟಿ ಭಾಷೆಯನ್ನು ಮಾತನಾಡುವ ಈ ಮರಾಟಿ ಸಮುದಾಯಗಳ ಸಮೂಹಗಳು ಒಂದು ಕಾಲದಲ್ಲಿದ್ದ ಪ್ರಾಚೀನ ಕನ್ನಡದ ಭೂ ಭಾಗಗಳ ಪ್ರದೇಶಗಳಿಂದಲೇ ಬಂದಿರಬೇಕು ಹೀಗಾಗಿ ಇವರನ್ನು ಪ್ರಾಚೀನ ಕರ್ನಾಟಕದ ಮೂಲದವರೆಂದು ಹೇಳಬಹುದಾಗಿದೆ.

೩. ಪ್ರಾಚೀನ ಕಾಲದಿಂದಲು ಮತ್ತು ಕರಾವಳಿ ಕರ್ನಾಟಕಕ್ಕೆ ವಲಸೆ ಬಂದಾಗಿನಿಂದಲು ಮರಾಟಿಗರು ಮತ್ತು ಮರಾಟಿ ನಾಯ್ಕರು ಅವಿಭಕ್ತ ಕುಟುಂಬದಲ್ಲಿ ಹೆಚ್ಚಾಗಿ ವಾಸಿಸುತ್ತಿದ್ದರು. ಇಂದು ಇವರು ವಿಭಕ್ತ ಕುಟುಂಬಗಳ ಬಗ್ಗೆ ಒಲವು ಮತ್ತು ಆಕರ್ಷಕರಾಗಿರುವುದು ಕಂಡುಬರುತ್ತವೆ. ಇದಕ್ಕೆ ಆಧುನಿಕತೆಯ ಪ್ರಭಾವವೇ ಕಾರಣ ಎಂದು ಹೇಳಬಹುದು.

೪. ಮರಾಟಿ ನಾಯ್ಕ ಮತ್ತು ಮರಾಟಿ ಸಮುದಾಯಗಳ ವಿವಾಹದ ಆಚರಣೆ ಸಂಪ್ರದಾಯಗಳಲ್ಲಿ ಪುರೋಹಿತಶಾಹಿ ಪದ್ಧತಿಯ ಪ್ರಭಾವಕ್ಕೆ ಒಳಗಾಗಿ, ತಮ್ಮ ಸಂಪ್ರದಾಯಿಕ ಪದ್ಧತಿಯನ್ನು ಹಂತ ಹಂತವಾಗಿ ಬಿಡುತಿರುವುದು ಕಂಡುಬರುತ್ತದೆ. ಮರಾಟಿ ಸಮುದಾಯಗಳು ಕೈಗೊಳ್ಳುವ ಪ್ರತಿಯೊಂದು ಕಾರ್ಯಕ್ಕೂ ಪುರೋಹಿತರನ್ನು ಆಶ್ರಯಿಸುತ್ತಿರುವುದನ್ನು ಗಮನಿಸಿದರೆ ಈ ಎರಡೂ ಸಮುದಾಯಗಳು 'ಸಂಸ್ಕೃತಾನುಕರಣಕ್ಕೆ ಒಳಗಾಗುತ್ತಿದ್ದಾರೆ ಎಂಬುದು ತಿಳಿದುಬರುತ್ತದೆ.

೫. ಮರಾಟಿ ಹಾಗೂ ಮರಾಟಿ ನಾಯ್ಕ ಸಮುದಾಯದಲ್ಲಿ ವಿವಾಹ ಸಂದರ್ಭದಲ್ಲಿ ತೆರ ನೀಡುವ ಕ್ರಮವಿತ್ತು. ಅದು ಇತ್ತೀಚೆಗೆ ಸಾಂಕೇತಿಕವಾಗಿದ್ದು ನಿಧಾನಗತಿಯಲ್ಲಿ ವರದಕ್ಷಿಣೆಯು ಅವರನ್ನು ಆಕರ್ಷಿಸುತ್ತಿರುವುದು ಕಂಡುಬರುತ್ತದೆ.

೬. ಮರಾಟಿ ಮತ್ತು ಮರಾಟಿ ನಾಯ್ಕ ಸಮುದಾಯಗಳು ತಮ್ಮ ಮಕ್ಕಳ ಶಿಕ್ಷಣಕ್ಕೆ ಗಮನ ಕೊಡುತ್ತಿದ್ದು, ಶಿಕ್ಷಣದ ಜೊತೆಗೆ ವೃತ್ತಿ ಶಿಕ್ಷಣಗಳ ಬಗ್ಗೆ ಹೆಚ್ಚಿನ ಆಸಕ್ತಿ ಹೊಂದಿರುವುದು ಕಂಡು ಬರುತ್ತದೆ.

